ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ಹುಚ್ಚರಾವ ಭೀಮರಾವ ಉಮಡಿ, ಎಂ. ಎ.

ಸಂಪುಟ ೮೨ | ಜನವರಿ-ಫೇಬ್ರುವರಿ-ಮಾರ್ಚ ೧೯೪೪ | ವರ್ಷ ೧೬ ಸಂ. ೧೦-೧೧-೧೨

ಟ್ರೈನಿಂಗ್ ಕಾಲೇಜಗಳ ಚಟುವಟಿಕೆಗಳು

೧. ಗಂಡುಮುಕ್ಕಳ ಟ್ರೇನಿಂಗ್ ಕಾಲೇಜ, ಧಾರವಾಡ

ಈ ತ್ರೈಮಾಸಿಕದ ಅವಧಿಯಲ್ಲಿ ನಮ್ಮ ಟ್ರೇನಿಂಗ್ ಕಾಲೇಜದಲ್ಲಿ ಶಿಕ್ಷಕ-ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ ಉಪನ್ಯಾಸಮಾಲೆಯಲ್ಲಿ ಮುಂದೆ ಹೇಳುವ ವಿಷಯಗಳನ್ನು ಕುರಿತು ತಜ್ಞರಾದ ಮಹನೀಯರು ಭಾಷಣಮಾಡಿದರು. ಎಲ್ಲರ ಭಾಷಣಗಳನ್ನೂ ಸವಿಸ್ತಾರವಾಗಿ ಮುದ್ರಿಸಲು ಅನುಕೂಲವಿಲ್ಲದುದರಿಂದ ಆ ಮಹತ್ವದ ವಿಷಯಗಳ ಮುಖ್ಯ ಮುದ್ದೆಯ ಮಾತುಗಳು ನಮ್ಮ ಶಿಕ್ಷಕವರ್ಗಕ್ಕೆ ಉಪಯುಕ್ತವೆನಿಸುವ ಮಟ್ಟಿಗೆ ಇಲ್ಲಿ ಕೊಟ್ಟಿರುವೆವು.

ಸಾಹಿತ್ಯದ ಮುನ್ನೋಟ— ಶ್ರೀ. ಉಮಡಿರಾಯರ ಹಿರಿಯತನದಲ್ಲಿ ಶ್ರೀ. ಆ. ನ. ಕೃಷ್ಣರಾಯರು ಮಾಡಿದ ಭಾಷಣದಲ್ಲಿ " ಸಾಹಿತ್ಯವು ಸುಖಕ್ಕಾಗಿ. ಅದರಲ್ಲಿ ಒಳಹೊಕ್ಕು ತಿಳಿದುಕೊಳ್ಳಬೇಕು. ರಸ, ಭಾವಗಳನ್ನು ಅನುಭವಿಸಬೇಕು. ಕವಿಯ ಮನಸ್ಸಿನ ಸೂಕ್ಷ್ಮ ಭಾವವನ್ನು ಅರಿಯಬೇಕು. ಜೈಮಿನಿಯೊಳಗಿನ 'ರಾಮನು ಕರುಣಾಳು' ಗದಾಯುದ್ಧದೊಳಗಿನ 'ನೀರೊಳಗಿರ್ದು ಬೆಮರ್ತನುರಗಪತಾಕಂ' ಗರಡಿಯ ಹಾಡುಗಳಲ್ಲಿಯ 'ಗಂಡ ಹೆಂಡಿರ ಜಗಳ ಗಂಧತೀಡಿದಂತೆ' ಮೊದಲಾದವುಗಳ ಒಳಗುಟ್ಟನ್ನು ಅರಿಯಬೇಕು. ದೊರೆಯ ಇಲ್ಲವೆ ದೇವರ ಬೆನ್ನುಹತ್ತಿದ ಸಾಹಿತ್ಯವೊಂದೇ ಈಗ ಬೇಕಾಗಿಲ್ಲ. ಸಾಕಾಗಿಲ್ಲ. ಅದರ ಮುನ್ನೋಟದಲ್ಲಿ, ಬಹುಜನರ ಬಹುಸುಖವು ಅಡಗಿರಬೇಕು. ಅದು ನಮ್ಮ ಜನಜೀವನವನ್ನು ಚಿತ್ರಿಸಬೇಕು." ಎಂದು ಮುಂತಾಗಿ ತಿಳಿಸಿದರು.

ದ್ರಾಕ್ಷೆಯ ವ್ಯವಸಾಯ— ಒಕ್ಕಲುತನದ ಖಾತೆಯ ಅಧಿಕಾರಿಗಳಾದ ಶ್ರೀ. ಡಿ. ಎಚ್. ಓಕ ಅವರು ಟ್ರೇ. ಕಾ. ದ ವಿದ್ಯಾರ್ಥಿಗಳನ್ನು ಕುರಿತು ಮಾಡಿದ ಉಪನ್ಯಾಸದಲ್ಲಿ ಈ ಮಾತುಗಳು ಮುಖ್ಯವಾಗಿವೆ :—

"ದ್ರಾಕ್ಷೆಯು ಬಹಳೇ ಉಪಯುಕ್ತವಾದ ವಸ್ತು. ಇದರಲ್ಲಿರುವ ರುಚಿ, ತಾಳಿಕೆ, ಸತ್ವಗಳು ಬೆಲೆಯನ್ನು ಹೆಚ್ಚಿಸಿವೆ. ಆರ್ಯರು ಈ ಬಳ್ಳಿಯನ್ನು ತಾರ್ತರಿಯಿಂದ ನಮ್ಮ ದೇಶಕ್ಕೆ ತಂದರು. ಅವರು ಇದರಿಂದ ಸೋಮರಸವನ್ನು ಕೂಡ ಮಾಡುತ್ತಿದ್ದರು. ಕಾಬೂಲ ನಾಸಿಕಗಳಂತೆ ಕನ್ನಡನಾಡಿನಲ್ಲಿ ಇದರ ಬೆಳೆಯು ಬರುವದಿಲ್ಲವೆಂದು ಕೆಲವರ ಭಾವನೆ.

ಆದರೆ ಇಲ್ಲಿಯೇ ಸಾಧನಕೆರೆಯಲ್ಲಿರುವ ಶ್ರೀ. ಕಮಲಾಪುರ ಅವರ ತೋಟದಲ್ಲಿಯೇ ದ್ರಾಕ್ಷೆಯನ್ನು ಸಾಕಷ್ಟು ಬೆಳಿಸಿದ್ದೇವೆ. ಬೇಕಾದವರು ನೋಡಿ ತಾವೂ ಹಚ್ಚಬಹುದು. ಈ ಬೆಳೆಗೆ ಕರಿದು, ಮತ್ತು ಕೆಂಪು ಕೂಡಿದ ಮಸಾರಿ ನೆಲವು ಬೇಕು. ಇಂಥ ನೆಲದಲ್ಲಿ ನೀರು ಬಸಿದುಹೋಗುವದು. ನೀರಿನ ಅನುಕೂಲತೆಯಾದರೆ ಸಾಕು. ಧಾರವಾಡ, ಬೆಳಗಾಂವಿ, ಕಾರವಾರ ಜಿಲ್ಲೆಗಳಲ್ಲಿ ಇದನ್ನು ವಿಪುಲವಾಗಿ ಬೆಳೆಯಬಹುದು. ಸರಗುಂದ ವಿಜಾಪುರಗಳ ಕಡೆಗೂ ಸ್ವಲ್ಪ ಪ್ರಮಾಣದಿಂದ ಬೆಳೆಯಬಹುದು. ಹಚ್ಚಿದ ಒಂದು ವರ್ಷದಲ್ಲಿಯೇ ಹಣ್ಣುಗಳಾಗಹತ್ತುತ್ತವೆ. ಬಳ್ಳಿಯು ಹತ್ತಿಪ್ಪತ್ತು ವರ್ಷ ಬಾಳುವದು. ಪ್ರತಿವರ್ಷ ಕುಡಿ ಕತ್ತರಿಸಿ, ಗೊಬ್ಬರಹಾಕಿ, ಆದ್ಯೆಕಮಾಡಿದರೆ ಸಾಕು; ಫಲಕೊಡುತ್ತದೆ. ದ್ರಾಕ್ಷೆಯ ತೋಟಕ್ಕೆ ಎಲೆಬಳ್ಳಿಯ ತೋಟಕ್ಕಿಂತಲೂ ಕಡಿಮೆ ವೆಚ್ಚವು ಸಾಕು. ಹಳ್ಳಿಹಳ್ಳಿಗಳಿಗೆ ಹೋಗುವ ಶಿಕ್ಷಕರು ತಮ್ಮ ಹಿತ್ತಲದಲ್ಲಿ ಈ ಬಳ್ಳಿಯನ್ನು ಹಚ್ಚಿ ಒಕ್ಕಲಿಗರಿಗೆ ತೋರಿಸಬೇಕೆಂದು ನನ್ನ ಆಶೆ."

ಮಾನವ ಧರ್ಮ — ಎಂಬ ವಿಷಯದಲ್ಲಿ ಶ್ರೀ ಮನ್ನಿರಂಜನ ಪ್ರಣವ ನವಿಲುಗುಂದ ಗವೀಮಠದ ಬಸವಲಿಂಗಸ್ವಾಮಿಗಳು ತಿಳಿಯಪಡಿಸಿದ ಮುಖ್ಯ ಮಾತುಗಳು ಹೀಗಿವೆ:—

"ಜಗನ್ನಿಯಂತ್ರಣೆಗೈಯುವ ಶಕ್ತಿಯೇ ದೇವರು. ಪ್ರಾಪ್ತಕರ್ಮಗಳನ್ನು ಸರಿಯಾಗಿ ಮಾಡುವದೇ ಮಾನವನ ಧರ್ಮ. ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಬಾರದು. ಎಲ್ಲರೂ ದೇವರ ಮಕ್ಕಳು. ವೈಷಮ್ಯವು ಒಳಿತಲ್ಲ. ಎಲ್ಲರೂ ಸಮಾಜ ಜೀವಿಗಳಾಗಿ ಸುಖಿಸಲಿ. ದಯೆಯೆ ಧರ್ಮದ ಮೂಲ. ಸದಾಚಾರವು ಮುಖ್ಯವಾಗಿ ಬೇಕು. ಈಗ ಹಲವರು 'ಧರ್ಮ ಕೆಟ್ಟಿತು! ಧರ್ಮ ಕೆಟ್ಟಿತು!' ಹೀಗೆ ಅನ್ನುವದುಂಟು. ಧರ್ಮವೆಲ್ಲಿ ಕೆಟ್ಟಿದ? ನಾನೇ ಕೆಟ್ಟಿದ್ದೇವೆ. ವೇಳೆಗೆ ಸರಿಯಾಗಿ ಹೋಗದೆ ತಡಮಾಡಿ ಹೋಗಿ ಮೋಟಾರ್ ತಪ್ಪಿತು! ಗಾಡಿ ತಪ್ಪಿತು! ಅಂದಂತೆಯೇ ಸರಿ. ಗುರು-ಹಿರಿಯರಿಗೆ, ಅಧಿಕಾರಿಗಳಿಗೆ ಮಾನ್ಯರಿಗೆ ಕೃತಜ್ಞರಾಗಿರಬೇಕು; ಕೃತಘ್ನರಾಗಿರಕೂಡದು. ತಮ್ಮಷ್ಟಕ್ಕೆ ತಾವು ಜ್ಞಾನಿಗಳಾದರೆ ತೀರದು. ಮಾನವ ಕುಲವನ್ನೆ ಉದ್ಧರಿಸಲು ಹವಣಿಸಬೇಕು. ಶಿಷ್ಯರ ವಿತ್ತೋಪಹಾರಿಗಳಾಗಬಾರದು. ನಿಜವಾಗಿಯೂ ಅವರ ಚಿತ್ತೋಪಹಾರಿಗಳಾಗಬೇಕು. ಅನ್ನವನು ಇಕ್ಕಿ ನನ್ನಿಯನು ನುಡಿದು, ತನ್ನಂತೆ ಪರರ ಬಗೆಯುವದು, ಇದೇ ಮಾನವಧರ್ಮದ ಸಾರದ ಸಾರ.

ಶಿಕ್ಷಣ ಕ್ಷೇತ್ರದಲ್ಲಿಯ ನನ್ನ ಅನುಭವಗಳು — ಎಂಬ ವಿಷಯವನ್ನು ಕುರಿತು ಶ್ರೀ. ಸಾಲಿ ರಾಮಚಂದ್ರರಾಯರು ತಮ್ಮ ಕಾವ್ಯಮಯವಾಣಿಯಲ್ಲಿ ಹೇಳಿದ ಮುಖ್ಯ ಮಾತುಗಳನ್ನು ಕೆಳಗೆ ಕೊಟ್ಟಿದೆ:—

"ಚಿಕ್ಕಮಕ್ಕಳ ಮೇಲೆ ನನಗೆ ತುಂಬ ಮಮತೆ. ಶಿಕ್ಷಕ ವೃತ್ತಿಯು ಘನವಾದದ್ದು. ಇದು ಮನುಷ್ಯರನ್ನು ರಾಕ್ಷಸರಾಗಗೊಡದೆ ನಿಜವಾದ ಮನುಷ್ಯರನ್ನಾಗಿ ಮಾಡಿ, ದೇವತ್ವವನ್ನು ಕೂಡ ಕೊಡುವಂಥದು. ಮಕ್ಕಳ ಜೀವನವನ್ನು ಸುಂದರವಾಗಿ ಮಾಡುವಂಥದು. ರಾಷ್ಟ್ರದ ಉದ್ಧಾರವು ಶಿಕ್ಷಕನ ಕೈಯಲ್ಲಿದೆ. ಅಕ್ಷರ ಕಲಸುವದು ಕಠಿಣವಲ್ಲ. ಮಕ್ಕಳ ಕಾರ್ಯಕ್ಷಮರೂ ಸುಶೀಲರೂ ತ್ಯಾಗಿಗಳೂ ಪರಹಿತದಕ್ಷರೂ ಉದಾರರೂ ಆಗಬೇಕಾದ ಶಿಕ್ಷಕರು ತಮ್ಮದು ಬರಿಯ ಉಪಜೀವನದ ಮಾರ್ಗವೆಂದು ತಿಳಿಯದೆ ತಪಶ್ಚರ್ಯೆಯೆಂದು ತಿಳಿಯಬೇಕು. ಮತ್ತು ಶೀಲಸಂಪನ್ನರಾಗಬೇಕು. ವಿದ್ಯಾರ್ಥಿ-ಪಾಲಕ-ಅಧಿಕಾರಿ-ಸದ್ಗೃಸ್ಥರ ಇವರೊಡನೆ ಸಂಬಂಧಪಡುವಾಗ ಅಲ್ಪಲಾಭಕ್ಕಾಗಿ ಶಿಕ್ಷಕರು ಸತ್ವಗೆಡಬಾರದು. ನಮ್ಮ ವೃತ್ತಿಗೆ ಮಕ್ಕಳೇ ಒರೆಗಲ್ಲು. ತಾಯಿಯ ಗರ್ಭವನ್ನು ಬಿಟ್ಟು ಬಂದ ಒಳ್ಳೆ ಮಕ್ಕಳಿಗೆ ಶಾಲೆಯೂ ಒಂದು ದೊಡ್ಡ ತಾಯಿ. ಶಿಕ್ಷಕರು ಸರಿಯಾದದ್ದನ್ನು ಕಲಿಸದಿದ್ದ

ಮಕ್ಕಳನ್ನು ಕೊಂದಂತೆ! ಅವರಿಗೆ ಭ್ರೂಣಹತ್ಯಾದೋಷವು ಒದುವದು. ಮಕ್ಕಳಿಂದ ದೂರಾಗುವದು ಕಷ್ಟಕರ. ಅವರ ಸಹವಾಸವು ಉತ್ಸಾಹಕರವಾದುದು. ಬಾಲ್ಯದಲ್ಲಿ ತಂದೆ-ತಾಯಿಗಳನ್ನು ಕಳೆದುಕೊಂಡು, ಹರೆಯದಲ್ಲಿ ಹೆಂಡತಿಯನ್ನು ಕಳೆದುಕೊಂಡು, ಮುಪ್ಪಿನಲ್ಲಿ ಮಕ್ಕಳನ್ನು ಕಳೆದುಕೊಂಡು ಶಿಕ್ಷಕ ವೃತ್ತಿಯಲ್ಲಿಯೇ ದೇಹವನ್ನು ಸವಿಸಿದ ನಾನು ತಿಳಿಸುವದೇನೆಂದರೆ ಶಿಕ್ಷಕ ವೃತ್ತಿಯು ಧನಾರ್ಜನೆಯ ಹೂರೆಯಲ್ಲ! ಆ ಆಶೆಯಿದ್ದವರು ಇದನ್ನು ಕೈಕೊಳ್ಳಲೇಬಾರದು. ರಾಷ್ಟ್ರೋದ್ಧಾರಕವಾದ ಈ ವೃತ್ತಿಯನ್ನು ಅಭಂಗಶೀಲ-ಸತ್ಯಜ್ಞಾನವುಳ್ಳರಾಗಿ, ಪರಹಿತಕ್ಕಾಗಿ, ಆತ್ಮೋದ್ಧಾರಕ್ಕಾಗಿ, ಕೈಕೊಂಡು ಅದರಲ್ಲಿಯೇ ಆನಂದಪಡೆಯಬೇಕು."

ಸಹಕಾರ— ಶ್ರೀಮಾನ್ ಶಿಂತ್ರಿ ಅವರ ಅಧ್ಯಕ್ಷತೆಯಲ್ಲಿ ಸಹಕಾರ ವಿಭಾಗದ ಅಧಿಕಾರಿಗಳಾದ ಶ್ರೀ. ಚಂದ್ರಗಿ ಇವರು 'ಸಹಕಾರ' ಈ ವಿಷಯದ ಮೇಲೆ ಮಾಡಿದ ಉಪನ್ಯಾಸದ ಸಾರಾಂಶವು ಹೀಗಿದೆ:—

"ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಈ ಚಳವಳಿಯು ಯುರೋಪದಲ್ಲಿ ಆರಂಭವಾಗಿ ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಭೂಭಾಗದ ಎಲ್ಲ ದೇಶಗಳಲ್ಲಿಯೂ ಪಸರಿಸಿದೆ. ಮುಂಬಯಿ ಪ್ರಾಂತದಲ್ಲಿ ಈಗ ನಾಲ್ಕು ಸಾವಿರ ಸಹಕಾರ ಸಂಘಗಳಿವೆ. ಧಾರವಾಡ ಜಿಲ್ಲೆಯೊಂದರಲ್ಲಿಯೇ ೬೧೪ ಸಂಘಗಳಿವೆ. ಎಲ್ಲ ಸಂಘಗಳಿಗೂ ಆರ್ಥಿಕ ಸುಸ್ಥಿತಿಯೇ ಸಾಮಾನ್ಯ ಉದ್ದೇಶವಾಗಿರುವದು. ಈ ಸಂಘಗಳನ್ನು ನಡೆಯಿಸುವದರಲ್ಲಿ ಸಮತೆ, ಪತ್ತು, ಪರೋಪಕಾರ ಮೊದಲಾದ ಉದಾತ್ತ ಧ್ಯೇಯಗಳಿರುವವು. 'ಎಲ್ಲರೂ ವ್ಯಕ್ತಿಗಾಗಿ, ವ್ಯಕ್ತಿಯು ಎಲ್ಲರಿಗಾಗಿ' ಎಂಬ ವಿಶ್ವಬಾಂಧವ್ಯದ ತತ್ವವು ಈ ಚಳವಳಿದಲ್ಲಿ ಅಡಕವಾಗಿದೆ. ಪ್ರಾಥಮಿಕ ಶಿಕ್ಷಕರು ಈ ಸಂಘಗಗಳ ಘಟನೆ, ಕಾರ್ಯ, ಲಾಭಗಳನ್ನು ಅರಿತು ಸರಿಯಾದ ದಾರಿಯಲ್ಲಿ ಮುಂದುವರಿಯಬೇಕು. ಒಡವರನ್ನೂ ಸಿರಿವಂತರನ್ನೂ ಒಂದುಗೂಡಿಸಿ ಎಲ್ಲರಿಗೂ ಹಿತವನ್ನುಂಟುಮಾಡುವಂಥ ಚಟುವಟಿಕೆಗಳಲ್ಲಿ ಸಹಕಾರಿ ಸಂಘಗಳಂಥ ಸಾಧನಗಳು ಬೇರಿಲ್ಲ."

ಲಕ್ಷ್ಮೀಶನ ಜೈಮಿನಿ ಭಾರತ— ನಮ್ಮಭಾಗದ ಅಸಿ. ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಸ್ಥಾನದಿಂದ ನಿವೃತ್ತರಾದ ಶ್ರೀಮಾನ್ ಥಿಟೆ ಭೀಮರಾಯರು ಪ್ರಿನ್ಸಿಪಾಲರಾದ ಶ್ರೀ. ಉಮಡಿ ರಾಯರ ಅಧ್ಯಕ್ಷತೆಯಲ್ಲಿ ಹೀಗೆ ತಿಳಿಯಪಡಿಸಿದರು:—

ನಾನು ಸುಮಾರು ೩೫ ವರ್ಷ ನೌಕರಿ ಮಾಡಿದರೂ ಕೂಡ ಸಾರ್ವಜನಿಕ ಸಭೆಯಲ್ಲಿ ಕನ್ನಡದಲ್ಲಿ ಮಾತನಾಡಿದ್ದು ಬಹುಶಃ ಇದೇ ಮೊದಲನೆಯದು. ನಾನು ಕನ್ನಡ ಕಲಿತು ನಾದರೂ ಪ್ರಾಥಮಿಕ ಶಾಲೆಯಲ್ಲಿಯ ನಾಲ್ಕು ವರ್ಗಗಳು ಮಾತ್ರ. ಸೇವಾನಿವೃತ್ತನಾದ ಳಿಕ ಏನಾದರೊಂದು ವ್ಯವಸಾಯವಿರಬೇಕು; ಅದರಿಂದ ಕೈಲಾದಮಟ್ಟಿಗಾದರೂ ಜನತೆಗೆ ಂತವಾಗಬೇಕು. ಎಂಬ ತಿಳಿವಳಿಕೆಯಿಂದ ನಾನು ಕನ್ನಡ ಜೈಮಿನಿ ಭಾರತವನ್ನು ಓದುತ್ತ ದ್ದೇನೆ. ಇದು ಒಂದು ಉದ್ಗ್ರಂಥ. ಪಂಡಿತರಿಗೂ ಪಾಮರರಿಗೂ ಕೂಡಿಯೇ ಪ್ರಿಯ ನಾಗಿದೆ. ನವರಸಗಳಿಂದ ತುಂಬಿದೆ. ಲಕ್ಷ್ಮೀಶನ ಮತ, ಸ್ಥಾನ, ಕಾಲಗಳ ನಿರ್ಣಯ ಗಳು ಇನ್ನು ಸರಿಯಾಗಿ ಆಗಿಲ್ಲ. ಈಗ ನಾನೂರು ವರ್ಷಗಳಿಂದಲೂ ಇವನ ಚಾಣ್ಮೆಗೆ ಎಲ್ಲರೂ ತಲೆದೂಗುತ್ತಲಿದ್ದಾರೆ. ಸಂಸ್ಕೃತದ ಜೈಮಿನಿಗಿಂತಲೂ ಕನ್ನಡ ಜೈಮಿನಿಯೇ ಶಿಷ್ಟನೆಂದು ಉಭಯ ಭಾಷಾ ವಿಶಾರದರು ಒಪ್ಪುತ್ತಾರೆ. ಇದರೊಳಗಿನ ಪ್ರತಿಯೊಂದು ದ್ಯವೂ ಮನೋಹರವಾಗಿದೆ. ಅಗ್ನಿಯನ್ನೆ ಸುಡುವೆನು, ಎಂದು ಹೇಳುವಾಗ ಕವಿಯ ರ್ವವನ್ನು ಕಾಣಬೇಕು. ನೆಗೆನೆಗೆದು, ಭುಗಿಭುಗಿಲ್, ಎಂದು ಹೇಳುವಾಗ ಅನುಕರಣ

ನನ್ನು ತಿಳಿಯಬೇಕು. ಚಂಡಿ, ಸುಧನ್ವ, ಚಂದ್ರಹಾಸರ ನಿರೂಪಣೆಮಾಡುವಾಗ ಕಥಾ ಕೌಶಲ್ಯವನ್ನು ಅವಲೋಕಿಸಬೇಕು, ಪ್ರಭಾವತಿಯನ್ನು ವರ್ಣಿಸುವಾಗ ಶೃಂಗಾರವನ್ನೂ ಸೀತಾವನವಾಸದಲ್ಲಿ ಕರುಣಾರಸವನ್ನೂ 'ಬೇಟೆ'ಯಲ್ಲಿ ಪ್ರಕೃತಿ ನಿರೀಕ್ಷಣೆಯನ್ನೂ 'ಜಯ ಜಯ ಜನಾರ್ದನ' ಅನ್ನುವಾಗ ಭಕ್ತಿಯನ್ನೂ ಇಡಿಯ ಪುಸ್ತಕದ ತುಂಬ ವೀರ, ಪರಿಹಾಸ ಗಳನ್ನೂ ನೋಡಬೇಕು. ಲಕ್ಷ್ಮೀಶನು ಎಷ್ಟು ವಿದ್ವಾಂಸನೋ ಎಷ್ಟು ದರ್ಪದವನೋ ಅಷ್ಟೇ ವಿನಯಶಾಲಿಯೂ ಆಗಿದ್ದಾನೆ. ಇವನು ನಾದಲೋಲ! ಉಪಮಾಲೋಲ!! ನಾನು ಅನೇಕ ಇಂಗ್ಲಿಷು ಪುಸ್ತಕಗಳನ್ನು ಓದಿದ್ದೇನೆ. ಕಲಿಸಿದ್ದೇನೆ; ಆದರೆ ಅವುಗಳಿಗಿಂತ ಈ ಜೈಮಿನಿಭಾರತವು ಭಾಷೆ-ಶೈಲಿ, ಅಲಂಕಾರ, ಆರ್ಥಿಕ ಸಾಮಾಜಿಕ ಸ್ಥಿತಿಗಳ ವರ್ಣನೆ, ಸನ್ಮಾರ್ಗ ದರ್ಶನಗಳಲ್ಲಿ ಮೇಲಾದದ್ದಿದೆ. ಇದರ ವಾಚನ-ಮನನಗಳು ಸರಿಯಾಗಿ ಸಾಗಿದರೆ, ಕನ್ನಡದ-ಕನ್ನಡಿಗರ-ಕರ್ನಾಟಕದ ಏಕೀಕರಣವಾಗುವದಕ್ಕೆ ಅನುಕೂಲವಾಗುವದು.

ನಮ್ಮ ಇಲಾಖೆಯ ಗವ್ಹರ್ನರ ಸಾಹೇಬರ ಅಡ್ವಾಯಿಜರರಾದ ಮಿ. ಆಯ್. ಎಸ್. ಟಾಂಟನ್‌ರವರು ಫೇಬ್ರುವರಿ ತಿಂಗಳ ೧೫ನೆಯ ತಾರೀಖಿನ ದಿನ ಮುಂಜಾನೆ ಟ್ರೇನಿಂಗ್ ಕಾಲೇಜವನ್ನು ಸಂದರ್ಶಿಸಿ ವಿದ್ಯಾರ್ಥಿ ಶಿಕ್ಷಕರು ತೋಟದಲ್ಲಿ ತಯಾರಿಸಿದ ಮಾದರಿ (ಮಾಡೆಲ್ಲು)ಗಳು ಮೊದಲಾದ ಶೈಕ್ಷಣಿಕ ಕಾರ್ಯಕಲಾಪಗಳನ್ನೆಲ್ಲ ಕಂಡು ಸಂತೋಷ-ಪ್ರದರ್ಶನ ಮಾಡಿದರು.

೨. ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜ, ಧಾರವಾಡ.

ಕಾರವಾರ ಜಿಲ್ಲೆಯಲ್ಲಿ ಪ್ರವಾಸ— ಕಳೆದ ದಿಶಂಬರ ತಿಂಗಳಲ್ಲಿ ಸುಮಾರು ೩೦ ವಿದ್ಯಾರ್ಥಿ-ಶಿಕ್ಷಕಿಯರು ಗೋಕರ್ಣ ಮತ್ತು ಕಾರವಾರಗಳ ಪ್ರವಾಸ ಮಾಡಿಬಂದರು. ಸಂಗಡ ಕಾಲೇಜದ ಶಿಕ್ಷಕ-ಶಿಕ್ಷಕಿಯರೂ ಮೆ|| ಲೇಡೀ ಸಾಹೇಬರೂ ಇದ್ದರು. ಇಡಿಯ ಪ್ರವಾಸವು ಸೊಗಸಿನದಾಯಿತು. ಗೋಕರ್ಣದಲ್ಲಿಯ ಸಮುದ್ರಸ್ನಾನ, ತೀರ್ಥಗಳ ದರ್ಶನ, ಕಾರವಾರದಲ್ಲಿಯ ಪೇಟೆ, ವ್ಯಾಯಾಮದ ವರ್ಗ, ಸದಾಶಿವಗಡದ ಜಲವಿಹಾರ, ಅಂಬಿಗರ ಹಾಡು, ದಾರಿಯಲ್ಲಿಯ ಸೃಷ್ಟಿ ಸೌಂದರ್ಯನಿರೀಕ್ಷಣೆ, ಸೊಗಸಾದ ಗಾಳಿ, ಕಲ್ಪವೃಕ್ಷ ದಂತಿರುವ ತೆಂಗಿನಬನ, ಹಸಿರು ಮುರಿಯುವ ಬತ್ತದ ಗದ್ದೆಗಳು, ಉಪ್ಪಿನ ಮೂಳಗಳು, ಸುತ್ತುವರಿಯುವ ಗಟ್ಟದ ದಾರಿಗಳು; ಇವೆಲ್ಲವು ಮನೋಹರವಾಗಿದ್ದವು. ತುಸ ವೆಚ್ಚ-ದಲ್ಲಿಯೇ ಈ ಪ್ರವಾಸವು ಎಲ್ಲರಿಗೂ ಹಿತಕರವಾಯಿತು; ಆನಂದದಾಯಕವಾಯಿತು.

ವರ್ಧಂತ್ಯುತ್ಸವ— ಈ ಶಿಕ್ಷಣಾಲಯದ ಸ್ಥಾಪನೆಯ ಹುಟ್ಟುಹಬ್ಬವನ್ನು ಕಳೆದ ಫೆಬ್ರುವರಿ ತಿಂಗಳ ಮೊದಲನೆಯ ದಿವಸ ಧಾರವಾಡ ಜಿಲ್ಲೆಯ ಕಲೆಕ್ಟರ ಸಾ| ರ ಧರ್ಮಪತ್ನಿಯವರಾದ ಮಿಸೆಸ್ ಬೇಗಮ್ ಅಮೀನುದ್ದೀನ ಅವರ ಹಿರಿಯತನದಲ್ಲಿ ಸಡಗರದಿಂದ ಜರುಗಿತು. ಆಟ-ಮೇಲಾಟ ವಿನೋದಗಳಲ್ಲಿ ವಿದ್ಯಾರ್ಥಿನಿಯರೂ ವಿದ್ಯಾರ್ಥಿ ಶಿಕ್ಷಕಿಯರೂ ಅಧ್ಯಾಪಕ-ಅಧ್ಯಾಪಿಕೆಯರೂ ಭಾಗವಹಿಸಿದ್ದರು. ಶ್ರೀ. ಅಮ್ಮಿನಭಾವಿ ತಮ್ಮಣ್ಣರಾಯರು ಶಿಕ್ಷಣಾಲಯದ ಬೆಳೆವಣಿಗೆ ಹಾಗು ಸ್ತ್ರೀಯರ ಉನ್ನತಿಯ ಬಗೆಗೆ ಕಳಕಳಿಯ ಮಾತುಗಳನ್ನು ಆಡಿದರು. ಬಾಲಿಕೆಯರಿಗೆ ಮೆಚ್ಚುಗೆಗಳನ್ನೂ ಬತ್ತಾಸುಗಳನ್ನೂ ಕೊಡಲಾಯಿತು.

ರೆಡ್‌ಕ್ರಾಸ್ ನಿಧಿ— ರಾವಸಾಹೇಬ ಸಬನೀಸ ಅವರು ಪ್ರೇಮದಿಂದ ಬಂದು ಗಾಯಾಳು ಗಳಿಗಾಗಿ ಸಹಾಯಮಾಡುವದರ ಮಹತ್ವವನ್ನು ತಿಳಿಸಿಹೇಳಿದರು. ಶಿಕ್ಷಣಾಲಯದ ವಿದ್ಯಾರ್ಥಿ ಶಿಕ್ಷಕಿಯರು ಕೂಡಿ ಸುಮಾರು ೫೫ ರೂ. ಗಳನ್ನು ನಿಧಿಗೆ ಅರ್ಪಿಸಿದರು.

ಇಪ್ಪತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಲನ

ಕಳೆದ ಡಿಶಿಂಬರ ತಿಂಗಳದ ಕೊನೆಗೆ ಶಿವಮೊಗ್ಗೆಯಲ್ಲಿ ೨೭ನೆಯ ಕನ್ನಡ ಸಾಹಿತ್ಯ ಸಮ್ಮೇಲನವು ಬಲು ಉತ್ಸಾಹದಿಂದ ನಡೆಯಿತು. ೨೫ನೆಯ ತಾ.ನ ಸಂಜೆಗೆ ಅಭೂತಪೂರ್ವ ಸ್ವಾಗತದೊಂದಿಗೆ ಊರಲ್ಲೆಲ್ಲ ಅಧ್ಯಕ್ಷರ ಮೆರವಣಿಗೆಯಾಯಿತು. ಅಧ್ಯಕ್ಷರಾದ ಕವಿವರ್ಯ ಬೀಂದ್ರೆಯವರ ಜೊತೆಗೆ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ. ಮಾಸ್ತಿಯವರೂ ವಿರಾಜಮಾನರಾಗಿದ್ದರು.

೨೬ನೆಯ ಬೆಳಗು, ಕಾರ್ಯಕ್ರಮ ಆರಂಭವಾಯಿತು. ಕಲಾಪ್ರೇಮಿಗಳ ಮನಸ್ಸನ್ನು ತುಂಬ ಸೆಳೆಯುವಂತಿದ್ದ ಕಲಾಪ್ರದರ್ಶನದ ಉದ್ಘಾಟನ ಸಮಾರಂಭವು ಅಧ್ಯಕ್ಷರ ಹಸ್ತದಿಂದ ನೆರವೇರಿ ಎಲ್ಲರೂ ಸಮ್ಮೇಲನಕ್ಕಾಗಿ ಸಿದ್ಧಪಡಿಸಿದ ಸುಸಜ್ಜಿತವಾದ ಸಾಲಂಕೃತವಾದ ಭವ್ಯ ಮಂಟಪಕ್ಕೆ ಬಂದೊಡನೆ, ಸ್ವಾಗತಾಧ್ಯಕ್ಷರಾದ ಶ್ರೀ. ಹಸೂಡಿ ವೆಂಕಟಶಾಸ್ತ್ರಿಗಳು ಶಿವಮಗ್ಗೆಯ ಸೃಷ್ಟಿಸೌಂದರ್ಯವನ್ನೂ ಔದ್ಯೋಗಿಕ ಪ್ರಗತಿಯನ್ನೂ ಬಣ್ಣಿಸಿ, ಈ ಸಾಹಿತ್ಯ ಸಮ್ಮೇಲನದಿಂದ ಕನ್ನಡದ ಮುನ್ನಡೆಯು ಸುಗಮವಾಗಲೆಂದು ಹಾರೈಸಿ, ಎಲ್ಲರಿಗೂ ಸ್ವಾಗತ ಬಯಸಿದರು. ಆ ಮೇಲೆ ಶ್ರೀ. ಮಾಸ್ತಿಯವರೆದ್ದು, "ವಿಶ್ವಸಾಹಿತ್ಯಕ್ಕುಚಿತವಾದ ಚಿನ್ನದಗೆರೆ ಬೀಂದ್ರೆಯವರ ಕಾವ್ಯದಲ್ಲಿದೆ" ಯೆಂದೂ, "ನಾದಮಾಧುರ್ಯದ ಸಂಮೋಹನಾಸ್ತ್ರವುಳ್ಳವರಾಗಿ ಬೀಂದ್ರೆಯವರು ಗಾರುಡಿಗನಂತಿದ್ದಾರೆ" ಎಂದೂ ಅವರ ಕಾವ್ಯಶಕ್ತಿಯನ್ನು ಹೊಗಳಿ, ತಮ್ಮ ಅವರ ನಡುವೆ ಬಳೆದು ಬಂದ ಬಾಂಧವ್ಯದ ಬಗೆಯನ್ನು ಬಣ್ಣಿಸಿ, ಅವರ ಪರಿಚಯಮಾಡಿಕೊಟ್ಟರು. ತದನಂತರ ಅಧ್ಯಕ್ಷರ ಅಮೋಘ ಭಾಷಣವಾಯಿತು.

"ಹೃದಯವು ಸಾಹಿತ್ಯದ ಗರ್ಭಗುಡಿ; ಸಾಹಿತ್ಯವು ಜನಾಂಗಹೃದಯದ ಮಹಾದ್ವಾರ. ಕನ್ನಡ ಸಾಹಿತ್ಯವು ರಸವಿದ್ಯೆಯ ತೌರಾಗಿದೆ. ಸಹೃದಯರು ಸಾಹಿತ್ಯರಸದಲ್ಲಿ ನಾಂದು ಸಾಮರಸ್ಯ ಕಂಡುಕೊಳ್ಳಬೇಕಾದರೆ, ಜೀವನಕ್ಕೆ ಸಾಹಿತ್ಯವು ಶ್ರೀಕೃಷ್ಣನಂತೆ ಸಾರಥಿಯಾಗಬೇಕು. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ. ಕನ್ನಡದ ಮನೆಯಲ್ಲಿ ಕನ್ನಡತಿಯಜಮಾನಿ; ಎಲ್ಲಿಕ್ಕ ಹೆಂಗುಸರೆಲ್ಲ ಒಕ್ಕಲಷ್ಟೆ. ಜಾತಿಭೇದ, ಮತಭೇದ, ಮಾತಿನಭೇದ, ಸ್ಥಿತಿ-ಪರಿಸ್ಥಿತಿಗಳ ಭೇದಗಳಳಿದು, ಕನ್ನಡದ, ಕನ್ನಡಿಗರ, ಕರ್ನಾಟಕದ ಏಕೀಕರಣವಾಗಬೇಕು" ಎಂಬುದೇ ಅವರ ಭಾಷಣದ ತಿರುಳಾಗಿದ್ದಿತು. "ಗಾಯತ್ರಿ"ಯಿಂದ "ಗಂಗಾವತರಣ"ದ ವರೆಗೆ ನೆರೆದ ಜನವೆಲ್ಲ ಬೀಂದ್ರೆಯವರ ಮಾತಿನ ಮಾಯಾಜಾಲದಲ್ಲಿ ಸಿಲುಕಿತ್ತು. ಅಂದು ಮಧ್ಯಾಹ್ನ ಮಹಿಳಾಗೋಷ್ಠಿ ನಡೆದು, ರಾತ್ರಿ ಶ್ರೀ. ದೇವೇಂದ್ರಪ್ಪನವರ "ಸಂಗೀತ ಕಛೇರಿ" ಸಾಂಗವಾಯಿತು.

೨೭ನೆಯ ಮುಂಜಾನೆ ಮಂಟಪದಲ್ಲಿ ಯುವಕ-ಸಾಹಿತಿಗಳ ಗೋಷ್ಠಿಯಲ್ಲಿ ಗದ್ಯಪದ್ಯ ವಾಚನಗಳಾದುವು. ಅದೇ ಸಮಯಕ್ಕೆ ಆದಕ್ಕೆ ಹೊಂದಿದ್ದ ಕರ್ನಾಟಕ ಸಂಘದ ಕಟ್ಟಡದಲ್ಲಿ ನಡೆದ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಭೆಯಲ್ಲಿ "ಪರಿಷತ್ತು ಅಖಿಲ ಕರ್ನಾಟಕದ ಸಂಸ್ಥೆಯಲ್ಲ"ವೆಂದು ಯಾರೋ ಆಕ್ಷೇಪವೆತ್ತಿದ್ದರಿಂದ, ತೀವ್ರ ತಿಕ್ಕಾಟವಾಯಿತು. ಅಂದು ಮಧ್ಯಾಹ್ನ ಜನಪದಗೋಷ್ಠಿ ಮುಗಿದಮೇಲೆ, "ಕರ್ನಾಟಕ ವಿಶ್ವವಿದ್ಯಾಲಯ" ಎಂಬ ವಿಷಯವನ್ನು ಕುರಿತು, ಮನನೀಯ ಭಾಷಣಗಳಾದುವು. ರಾತ್ರಿ ನಡೆದ ಆಶುನಾಟಕದ ಸ್ಪರ್ಧೆಯಲ್ಲಿ ಶಿವಮಗ್ಗೆಯ ಕರ್ನಾಟಕ ಸಂಘದವರಿಗೆ ಮೊದಲನೆಯ ಬಹುಮಾನವೂ, ವಿಜಾಪುರದ ರುಕ್ಮಾಂಗದ ನಾಟ್ಯ-ಸಮಿತಿಯವರಿಗೆ ಎರಡನೆಯ ಬಹುಮಾನವೂ ದೊರೆತವು.

ಮರುದಿನ ಮುಂಜಾನೆ ಪ್ರಮುಖ ಸಾಹಿತಿಗಳ ಗದ್ಯ-ಪದ್ಯ-ವಾಚನವೂ, ಚಿಕ್ಕ ಭಾಷಣಗಳೂ ಆದುವು. ಸಂಜೆಗೆ ತಮ್ಮ ಸಮಾರೋಪ-ಭಾಷಣದ ಕೊನೆಗೆ ಅಧ್ಯಕ್ಷರು ಹಾಡಿದ "ತುಂಬಿ" ಎಂಬ ಪದ್ಯವು ಅಲ್ಲಿ ಕೂಡಿದ ಕಾವ್ಯರಸದುಂಬಿಗಳನ್ನು ಮುಗ್ಧರನ್ನಾಗಿ ಮಾಡಿತು. ರಾತ್ರಿ, ಶ್ರೀನಿವಾಸ ರಾಗು ಅವರ ಸಂಗಡಿಗರ ಮನೋಹರ ನೃತ್ಯವು ಕನ್ನಡಿಗರನ್ನು ಎತ್ತರದ ಮಟ್ಟಕ್ಕೇರಿಸಿತು. ಒಟ್ಟಿನಲ್ಲಿ ಈ ಸಲದ ಸಾಹಿತ್ಯ ಸಮ್ಮೇಲನವು ಸುಗ್ಗಿಯಾಗಿಯೇ ಸಾಗಿ, ಜನರು ಹಿಗ್ಗಿನಿಂದ ಹಿಂತಿರುಗಿದರು.

—ನಾನೀ ಶಾನು.

ಭಾರತೀಯ ಸಂಪಾದಕ ಧುರೀಣ
ರಾಮಾನಂದ ಚಟರ್ಜಿಯವರು

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಶ್ರೀ. ರಾಮಾನಂದ ಚಟರ್ಜಿಯವರೇ ನಡೆಯಿಸುತ್ತಿದ್ದ ಇನ್ನೊಂದು ಮಾಸಿಕವಾದ 'ಪ್ರಬಾಸಿ'ಯು ಬಂಗಾಲಾ ಭಾಷೆಯಲ್ಲಿ ಹೊರಡುತ್ತಿದೆ. ಅರಿಯದವನು ಇದು ಮಾಡರ್ನ ರಿವ್ಯೂ ಪತ್ರಿಕೆಯ ಭಾಷಾಂತರವೇ ಸರಿಯೊ ಏನೋ ಎನ್ನುವಷ್ಟು ರೂಪಸಾಮ್ಯ ವಿಷಯ ಸಾದೃಶ್ಯಗಳು ಈ ಎರಡೂ ಪತ್ರಿಕೆಗಳಲ್ಲಿರುತ್ತಿದ್ದುವು. ಪ್ರವಾಸಿಯೇ ಆಗಲಿ ಮಾಡರ್ನ ರಿವ್ಯೂ ಪತ್ರಿಕೆಯೇ ಆಗಲಿ ಬಂಗಾಲಾ ಪ್ರಾಂತದಲ್ಲಿ– ಕಲಕತ್ತೆಯಲ್ಲಿ– ಹೊರಡುತ್ತಿದ್ದರೂ ಅದಕ್ಕೆ ಪ್ರಾಂತಿಕ ಪ್ರಾತಿನಿಧ್ಯದ ಸಂಕುಚಿತ ಸ್ವರೂಪವು ಎಂದೂ ಇರಲಿಲ್ಲ. ಅಖಂಡ ಭರತಖಂಡವು ಒಂದೆಂಬ ಇಡಿಯ ದೇಶದ ಹಿತದ ವಿಶಾಲದೃಷ್ಟಿಯಿಂದಲೇ ಈ ಪತ್ರಿಕೆಗಳು ನಡೆದಿವೆ. ಬಂಗಾಲದ ಪ್ರಾಂತಿಕ ಪ್ರಶ್ನೆಗೆ ಎರಡನೆಯ ಸ್ಥಾನವಿದ್ದರೆ ಬಂಗಾಲವನ್ನುಳಿದ ಇತರ ಪ್ರಾಂತಗಳ ಪ್ರಶ್ನೆಗೆ ಪ್ರಥಮಸ್ಥಾನವನ್ನು ಕಾಯ್ದಿಡುವದು ಚಟರ್ಜಿಯವರ ಧ್ಯೇಯವಾಗಿದ್ದಿತು. ಮಾಡರ್ನ ರಿವ್ಯೂ ಪತ್ರಿಕೆಯಲ್ಲಿ ಕಳೆದ ೩೭-೩೮ ವರ್ಷಗಳಲ್ಲಿ ಪ್ರಕಟವಾದ ಲೇಖನಗಳನ್ನು ಹೊಂದಿಸಿ ಅವುಗಳ ಲೇಖಕರ ಹೆಸರು ಬರೆದರೆ ಅದರಿಂದ ನಮ್ಮ ಭರತ ಖಂಡದ ಎಲ್ಲ ಪ್ರಮುಖ ಲೇಖಕರ ಯಾದಿಯೊಂದು ತಾನೇ ಸಿದ್ಧವಾಗುವಂತಿದೆ. ಯುರೋಪ ಅಮೇರಿಕಾಗಳ ಪ್ರಸಿದ್ಧ ಲೇಖಕರ ಲೇಖನಗಳೂ ಇದರಲ್ಲಿ ಆಗಾಗ ಪ್ರಕಟವಾಗುತ್ತಿದ್ದವು. 'ಸಿಸ್ಟರ ನಿವೇದಿತಾ' ದೇವಿಯವರ ಲೇಖನಗಳನ್ನು ಈ ಪತ್ರಿಕೆಯಲ್ಲಿ ಓದಿ ಆನಂದಪಡದ ವಾಚಕರಿಲ್ಲ, ಎನ್ನುವ ಮಾತೊಂದು ಆ ಕಾಲದಲ್ಲಿ (೧೯೧೧ರ ವರೆಗೆ) ಜನಜನಿತವಾಗಿದ್ದಿತು.

ಪತ್ರಿಕೆಗಳಲ್ಲಿ ಬಣ್ಣದ ಚಿತ್ರಗಳನ್ನು ಮುದ್ರಿಸಿ ಪ್ರಕಟಿಸುವ ಪರಿಪಾಠವನ್ನು ಮೊದಲು ಪ್ರಾರಂಭಿಸಿದ ಶ್ರೇಯಸ್ಸು ಚಟರ್ಜಿಯವರದು. ಭಾರತೀಯ ಕಲಾಪ್ರದರ್ಶನದ ದೃಷ್ಟಿಯಿಂದ ಈ ಪತ್ರಿಕೆಗಳು ಅತಿ ಮಹತ್ವದ ಕಾರ್ಯವಾಡಿವೆಯೆನ್ನುವದರಲ್ಲಿ ಸಂದೇಹವಿಲ್ಲ.

ಕವಿವರ ರವೀಂದ್ರನಾಥ ಠಾಕೂರರವರ ಲೇಖನಗಳು ಪ್ರಕಟವಾಗದ ಅಂಕಗಳೇ ಇಲ್ಲವೋ ಎನ್ನುವಷ್ಟು ದೊಡ್ಡ ಪ್ರಮಾಣದಿಂದ ಅವರ ಬಂಗಾಲಾ ಲೇಖನಗಳು ಪ್ರವಾಸಿಯಲ್ಲಿ ಪ್ರಕಟವಾಗುತ್ತಿದ್ದವು. ಮಾಡರ್ನ ರಿವ್ಯೂ ಪತ್ರಿಕೆಯಲ್ಲಿ ಮಾತ್ರ ಈ ಕವಿವರರು ತಾವೇ ಬರೆದ ಲೇಖನಗಳು ಕಡಿಮೆ. ಅವರ ಕಾವ್ಯ ಕಥೆ ಕಾದಂಬರಿ ಮೊದಲಾದವುಗಳನ್ನು ಅನ್ಯರು ಭಾಷಾಂತರಿಸಿ ಪ್ರಕಟಿಸಿದವುಗಳೇ ಹೆಚ್ಚು. ರಾಮಾನಂದ ಬಾಬುಗಳು ಕವಿವರರನ್ನು ತಮ್ಮ ಸಹೋದರ ಸಮಾನರೆಂದಿದ್ದಾರೆ. ಅವರವರ ಬಾಂಧವ್ಯವು ಅಷ್ಟು ದೃಢವಾಗಿದ್ದಿತು.

೧೯೦೧ರ ಸುಮಾರಕ್ಕೆ ಎಂದರೆ ತಮ್ಮ ಪತ್ರಿಕೆಗಳು ಪ್ರಕಟವಾಗತೊಡಗಿದ ಬಳಿಕ ಸುಮಾರು ಒಂದು ವರ್ಷದ ತರುವಾಯ ಚಟರ್ಜಿಯವರು ತಮ್ಮ ಪತ್ರಿಕೆಗಳೊಡನೆ ಕಲಕತ್ತೆಗೆ ಬಂದು ಕಾರ್ನವಾಲೀಸ ಸ್ಟ್ರೀಟದೊಳಗಿನ ಒಂದು ಚಿಕ್ಕ ಓಣಿಯಲ್ಲಿ ಒಂದು ಸಾಧಾರಣ ತರಗತಿಯ ಮನೆಯಲ್ಲಿ ವಾಸಿಸತೊಡಗಿದರು. ಅದೇ ಪ್ರವಾಸಿ ಪತ್ರಿಕೆಯ ಕಚೇರಿಯೂ ಆಗಿತ್ತು. ಆದರೆ ಆ ಚಿಕ್ಕ ಓಣಿಯೊಳಗಿನ ಮನೆಗೆ ಬಂದು ಹೋಗದ ಪ್ರಸಿದ್ಧ ಕವಿಗಳು ಲೇಖಕರು ಕಲಾವಿದರು ರಾಜಕೀಯ ಮುಂದಾಳುಗಳು ಮುಂ. ಪ್ರಮುಖ ಗೃಹಸ್ಥರು ಇನ್ನು ಉಳಿದಿಲ್ಲವೆನ್ನುವ ಹಾಗಿತ್ತು. ಭಾರತೀಯ ಸಂಪಾದಕ ಧುರೀಣ ಚಟರ್ಜಿಯವರದು ಈ ಎಲ್ಲ ವಿಷಯಗಳಲ್ಲಿ ಅಷ್ಟೇ ಆಸಕ್ತಿ; ಅಷ್ಟೇ ಕುಶಲತೆ; ಅಷ್ಟೇ ದಕ್ಷತೆ. ಮಾಡರ್ನ-ರಿವ್ಯೂ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಟಿಪ್ಪಣಿಗಳೆಲ್ಲ ಬಹುಶಃ ಚಟರ್ಜಿಯವರವು. ಅವುಗಳನ್ನು ಯಾರೂ ಅಂಕೆ-ಸಂಖ್ಯೆಗಳಿಂದಾಗಲಿ ವಿಚಾರಕ್ರಮದಿಂದಾಗಲಿ ಖಂಡಿಸುವಂತಿರಲಿಲ್ಲ. ಅಷ್ಟೇಕೆ? ಇದು ಹೀಗೆ ಇರಬಹುದೇ? ಎನ್ನುವ ಸಂಶಯವನ್ನು ಕೂಡ ಎತ್ತುವಂತಿರಲಿಲ್ಲ; ಅಷ್ಟು ಖಂಡ-ತುಂಡಾದ ಸಾಧಾರವಾದ ಬರೆಹ ಕ್ರಮವವರದು. ಅಯಾ ವಿಷಯಗಳ ಅಭ್ಯಾಸವನ್ನು ಅಷ್ಟು ಏಕನಿಷ್ಠೆಯಿಂದ ಮಾಡಿಕೊಂಡೇ ಲೇಖನಿಯನ್ನೆತ್ತುವ ಪರಿಪಾಠವವರದು. ಆದುದರಿಂದಲೇ ದೇಶವಿದೇಶಗಳ ಮುಂದಾಳುಗಳೂ ಲೇಖಕ-ಕವಿ-ಕಲಾಕೋವಿದರೂ ಅವರ ಈ ಸಂದಿ-ಗೊಂದಿಯೊಳಗಿನ ಮನೆಗೆ ಗುಡಿಗೆ ಹೋಗುವ ದೇವ-ಭಕ್ತರಂತೆ ಹೋಗಿಬರುವ ಪ್ರಚಾರವುಂಟಾಗಿದ್ದಿತು. ನಾಮುದಾರ ಗೋಪಾಳ ಕೃಷ್ಣ ಗೋಖಲೆ, ಇಂಗ್ಲಂಡದ ಪ್ರಾಯಿಮ್ ಮಿನಿಸ್ಟರ ರಾಮಸೆ ಮೇಕ್‌ಡೋನಾಲ್ಡ, ಶಿಕ್ಷಣಮಂತ್ರಿ ಹರ್ಬರ್ಟ ಫಿಶರ್ ಮೊದಲಾದ ಲೋಕವಿಖ್ಯಾತ ವ್ಯಕ್ತಿಗಳೂ ಕೂಡ ಇಂಥ ಆ ಅಡಿ ಅಗಲದ ಅಂಕಡೊಂಕಾದ ಓಣಿಯಲ್ಲಿ ಹಾದುಬರುವದನ್ನು ನೋಡಿದ ಮಹನೀಯರು ರಾಮಾನಂದ ಬಾಬುಗಳ ಮಹತಿಯನ್ನು ಮನವಾರೆ ಕೊಂಡಾಡಿದ್ದಾರೆ.

ಚಟರ್ಜಿಯವರ ಬರೆಹದ ಶೈಲಿ ತೀರ ಸಾದಾ. ಅದರಲ್ಲಿ ಶಬ್ದಾಡಂಬರವನ್ನಾಗಲಿ, ಅನವಶ್ಯಕ ಅಲಂಕಾರಿಕ ಭಾಷೆಯನ್ನಾಗಲಿ ಎಲ್ಲಿಯೂ ಕಾಣುವಂತಿರಲಿಲ್ಲ. ಇಂಗ್ಲಿಷು ಭಾಷಾಪಂಡಿತರಾದ ನೀವು ಇಷ್ಟು ಸುಲಭವಾಗಿ ಬಾಲಭಾಷೆಯೋ ಎನ್ನುವಷ್ಟು ಸರಳವಾಗಿ ಏಕೆ ಬರೆಯುವಿರಿ? ಎಂದು ಒಬ್ಬರು ಕೇಳಿದರಂತೆ. " ಅಯ್ಯಾ, ನನ್ನ ಪತ್ರಿಕೆಯು ಕೇವಲ ಆಂಗ್ಲಭಾಷಾ ಪಂಡಿತರಿಗಾಗಿ ಹೊರಡುವದಿಲ್ಲ. ನಾನು ಅದನ್ನು ಯಾರು ಓದುವರೋ ಅವರಿಗೆ ತಿಳಿಯುವ ಭಾಷೆಯಲ್ಲಿ ಬರೆದರಷ್ಟೇ ಅಲ್ಲವೆ, ಆ ಬರೆಹದ ಪ್ರಯೋಜನವಾಗುವದು? ವಿಷಯ ವಿವೇಚನೆಗೆ ಪ್ರಾಧಾನ್ಯವೇ ಹೊರತು ಭಾಷಾ ಸೌಂದರ್ಯಕ್ಕೆ ಅಷ್ಟು ಪ್ರಾಮುಖ್ಯತೆಯೇಕೆ ಬೇಕು? ಎಂದರಂತೆ. ಎಂದೂ ಕದಲದ ನಿರ್ಭಯತೆ, ಶುದ್ಧವಾದ ನಿಷ್ಪಕ್ಷಪಾತ-ಬುದ್ಧಿ, ಸಯುಕ್ತಿಕವಾದ ಕಾರ್ಯಕಾರಣ ವಿವೇಚನೆ, ಸರಳವಾದ ಉದಾರ ಧೋರಣೆ, ಸ್ವಚ್ಛ ಸಹೃದಯತೆ, ಎಲ್ಲಕ್ಕೂ ಹೆಚ್ಚಿನದಾಗಿ ಅಚ್ಚೆ ಕೆಚ್ಚಿನ ಸತ್ಯ, ಇವುಗಳಿಂದ ಅವರ ಟಿಪ್ಪಣಿಗಳು ಜನಪ್ರಿಯವಾಗಿ, ಮಾರ್ಗದರ್ಶಿಯಾಗಿ, ಪತ್ರಿಕೆಯು ಎಲ್ಲರ ಪ್ರೀತಿಗೆ ಕಾರಣವಾಯಿತು. ಕಾಲನಿಯಮವನ್ನು ಅಪವಾದಕ್ಕೆಂದಾದರೂ ಮೀರಿ ನಡೆಯದಿರುವದು ಮಾಡರ್ನ ರಿವ್ಯೂ ಪತ್ರಿಕೆಯ ಅನೇಕ ಒಳ್ಳೆಯ ಲಕ್ಷಣಗಳಲ್ಲಿ ಒಂದಾಗಿದ್ದಿತು. ಈ ಹೊತ್ತು ಪತ್ರಿಕೆ ಬಂದಿತೆಂದ ಕೂಡಲೆ ಅಂದು ಎಷ್ಟನೆಯ ತಾರೀಖೆಂಬದನ್ನು ಕ್ಯಾಲೆಂಡರ ನೋಡದೆ ಹೇಳಬಹುದಾಗಿತ್ತು. ಸರಳತೆ, ದೃಢತೆ, ಧೈರ್ಯ, ಸ್ವಾರ್ಥರಹಿತತೆ, ಮುಂತಾದ ಅಲೌಕಿಕ ಗುಣಗಳಿಂದ ಅವರು ಈ ಲೋಕದಿಂದ ಆ ಲೋಕಕ್ಕೆ ಹೋದರೂ ಅವರ ಮೂರ್ತಿಯು ನಮ್ಮ ಕಣ್ಣೆದುರು ಕಟ್ಟಿದಂತಿದೆ. ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಆದರ್ಶರಮಣಿ ಭಾರತೀಯ ವನಿತೆಯರ ಮುಕುಟಮಣಿ

ಸೌ. ಕಸ್ತೂರಿಬಾಯಿ ಗಾಂಧಿಯವರು

ಕಳೆದ ತಿಂಗಳ ೨೨ನೆಯ ತಾರೀಖಿನ ದಿನ ಜಗತ್ತಿನಲ್ಲೆಲ್ಲ ಆದರ್ಶರಮಣಿಯನಿಸಿ ಕೊಂಡು ಭಾರತೀಯ ವನಿತೆಯರ ಮುಕುಟಮಣಿಯಾಗಿದ್ದ ಸೌ. ಕಸ್ತೂರಿಬಾಯಿ ಗಾಂಧಿಯವರು ಪುಣೆಯ ಆಗಾಖಾನರ ಅರಮನೆಯಲ್ಲಿ ಇಹಲೋಕಯಾತ್ರೆಯನ್ನು ಮುಗಿಸಿದರು. ಅಂದು ಅಖಂಡ ಭರತಖಂಡವಷ್ಟೇ ಏಕೆ? ಯುರೋಪ, ಅಮೇರಿಕಾ ಮೊದಲಾದ ಅಖಿಲ ಜಗತ್ತಿನ ಸುಜ್ಞಾನಿಜನರೆಲ್ಲ ದುಃಖದ ಮಡುವಿನಲ್ಲಿ ಮುಳುಗಿ ಎದ್ದರು. ದೇಶವಿದೇಶಗಳ ಪ್ರಮುಖ ಸಂಘ ಸಂಸ್ಥೆಗಳೂ ಪ್ರಸಿದ್ಧ ವ್ಯಕ್ತಿಗಳೂ ಸಂತಾಪ ಅನುತಾಪಗಳನ್ನು ಸೂಚಿಸಿದರು. ಮಾಂಚೆಸ್ಟರ ಗಾರ್ಡಿಯನ್ ಪತ್ರಿಕೆಯು— "ಶ್ರೀಮತಿ ಕಸ್ತೂರಬಾಯಿ ಗಾಂಧಿಯವರು ಸ್ವತಂತ್ರವಾಗಿ ಆದರ್ಶರಮಣಿ. ತನ್ನ ಪತಿಯು ನಿರ್ದಿಷ್ಟ ಗುರಿಯನ್ನು ಪೋಷಿಸುವ ತತ್ತ್ವಪಾಲನೆಯ ಸಲುವಾಗಿ ೬೨ ವರ್ಷಗಳ ಕಾಲ ತಪಶ್ಚರಣೆಮಾಡಿದ ಸರ್ವಸ್ವವನ್ನೂ ತ್ಯಾಗಮಾಡಿದ ಅಸಾಧಾರಣ ಹುತಾತ್ಮರು." ಎಂದು ಸಾರಿತು. ಲಂಡನ್ ಟಾಯಿಮ್ಸ್ ಪತ್ರಿಕೆಯಲ್ಲಿಯೂ ಅವರು "ಆದರ್ಶಮಾತೆಯರೂ, ಸಾಧ್ವಿಮಣಿಯೂ ಆಗಿದ್ದರೆ"ಂದು ಪ್ರಕಟವಾಗಿದೆ. "ಇವರ ನಿಧನದಿಂದ ಹಿಂದೀ ಮಹಿಳಾ ಸಮಾಜಕ್ಕೆ ಅತಿ ದೊಡ್ಡ ನಷ್ಟವಾಯಿತು." "ನೀತಿ ನೈರ್ಮಲ್ಯಕ್ಕೆ ಹಿಂದುಸ್ತಾನವು ಹೆಪರಾದುದು. ಕಸ್ತೂರಬಾರವರು ಅಂತಹ ಅಲೌಕಿಕ ಗುಣದ ರಮಣಿ" "ಇದು ಹಿಂದುಸ್ತಾನಕ್ಕೊದಗಿದ ಅತಿ ದೊಡ್ಡ ಹಾನಿ. ಇಂದಿನ ಈ ಬಿಕ್ಕಟ್ಟಿನ ಕಾಲದಲ್ಲಿ ಇವರಿಂದ ಗಾಯದ ಮೇಲೆ ಬರೆಯೆಳೆದಂತಾಯಿತು" ಎಂದು ಮುಂತಾಗಿ ಜೀರೆ ಜೀರೆ ಅಮೇರಿಕನ್ ಪತ್ರಿಕೆಗಳು ಪ್ರಕಟಿಸಿವೆ. ಆ ಸೇತು ಹಿಮಾಚಲ ವ್ಯಾಪಿಯಾದ ಭರತಖಂಡವಂತೂ ತಾಯಿಯನ್ನು ಕಳೆದುಕೊಂಡ ಮಗುವಿನಂತೆ ಗೋಳಿಟ್ಟು ಅತ್ತು ಕಣ್ಣೀರು ಕರೆಯಿತು.

ಶ್ರೀ. ಕಸ್ತೂರಿಬಾಯಿಯವರು ಮಹಾತ್ಮಾ ಗಾಂಧಿಯವರ ಅಕ್ಕರೆಯ ಮಡದಿಯಾಗಿ ಅವರಿಗೆ ಅಹಿಂಸಾ ವ್ರತದ ದಾರಿಯಲ್ಲಿ ಸಂತತ ಸಹಾಯಕರಾಗಿ ಶಾಂತತೆಯೆ ಮೈವೆತ್ತು ಬಂದ ದೇವತೆಯಂತಿದ್ದರೆಂದು ಹೇಳುವದುಂಟು. ಮಹಾತ್ಮಾ ಗಾಂಧಿಯವರು ಆಫ್ರಿಕೆಯಲ್ಲಿರುವಾಗಲೂ ಭಾರತ ದೇಶಕ್ಕೆ ಹಿಂದಿರುಗಿದ ಮೇಲೆಯೂ ಅವರು ತಮ್ಮ ಪತಿಯನ್ನು ನೆಳಲಿನಂತೆ ಅನುಸರಿಸಿದ್ದರು. ಸರಳವಾದ ಆಡಂಬರವಿಲ್ಲದ ಜೀವನಕ್ರಮದಿಂದ ಅವರು ಆದರ್ಶ ರಮಣಿಗಳಾಗಿದ್ದರು. ಎದುರಿಗೆ ಬಂದ ಕಷ್ಟನಷ್ಟಗಳನ್ನು ಶಾಂತತೆಯಿಂದಲೂ, ಆನಂದದಿಂದಲೂ ಸ್ವಾಗತಿಸಿ, ಧರ್ಮವೀರ ಕರ್ಮಾಚಾರ್ಯ ಪತಿಯ ಬಲಗೈಯಾಗಿ ನಡೆದು ಭರತಖಂಡದ ನಾರೀಮಣಿಗಳ ಮುಕುಟಮಣಿಯಾಗಿ ಇಂದು ನಮ್ಮಿಂದ ಕಣ್ಮರೆಯಾಗಿ ನಡೆದರು. ಇಂತಹ ಹುತಾತ್ಮರ ಆತ್ಮಕ್ಕೆ ಶಾಂತಿಯನ್ನು ಕೋರುವದಕ್ಕೆ ನಾವಾರು?

ಅವರು ಈ ಕರ್ಮಭೂಮಿಯಲ್ಲಿ ನಡೆದುಹೋದ ಹೆಜ್ಜೆಯ ಗುರುತುಗಳು ನಮ್ಮವರಿಗೆ ಮಾರ್ಗದರ್ಶಕವಾಗಲಿ, ನಮ್ಮ ರಮಣೀಕುಲದ ಉದ್ಧಾರ ಕಾಲವು ಸಮೀಪಿಸಲಿ ಎಂದಿಷ್ಟೇ ಹೇಳುವೆವು.

ಕಾವ್ಯಧರ್ಮಗಳು *

ಕಾವ್ಯವೆಂದರೇನೆಂಬದನ್ನು ಈಗ ಹೇಳಬೇಕಾಗಿಲ್ಲ; ನೀವು ಬಲ್ಲಿರಿ. ಪಂಪಭಾರತ ಪಂಪ-ರಾಮಾಯಣ ಮೊದಲಾದ ಪುರಾಣ-ಕಾವ್ಯಗಳು, ಶಾಕುಂತಲ ಮೊದಲಾದ ನಾಟಕಗಳು, ಗದ್ಯ-ಪದ್ಯ-ಚಂಪೂ ರೂಪವಾದ ಕಥಾತ್ಮಕ ವರ್ಣನಾತ್ಮಕ ಕಾವ್ಯಗಳು ಈ ಎಲ್ಲವನ್ನು ನಾವು ಕಾವ್ಯಗಳೆಂದು ಗ್ರಹಿಸಿರುವೆವು. ಇಲ್ಲಿ ಈಗ ಕಾವ್ಯದ ಬೆಲೆಯನ್ನು ನಿರ್ಣಯಿಸುವ ಒರೆಗಲ್ಲು ಎಂದರೆ ಇದು ಉತ್ತಮ ಕಾವ್ಯ, ಇದು ಮಧ್ಯಮ ಕಾವ್ಯ, ಇದು ಅಧಮ ಕಾವ್ಯ ಎಂಬುದನ್ನು ಗೊತ್ತುಮಾಡುವುದಕ್ಕೆ ಸಾಧಕಗಳಾದ ಕಾವ್ಯಧರ್ಮಗಳು ಯಾವವು ಎಂಬುದನ್ನು ನಿರ್ಣಯಿಸುವ; ಒಬ್ಬ ಮನುಷ್ಯನು ಆತನ ಗುಣಗಳಿಂದ ಯಾವ ತರಗತಿಗೆ ಸೇರುವನೆಂಬದನ್ನು ನಿರ್ಣಯಿಸುವಂತೆ ಕಾವ್ಯದಲ್ಲಿರುವ ಯಾವ ಧರ್ಮಗಳಿಂದ ಅದರ ಉತ್ತಮ ಮಧ್ಯಮಾಧಮತೆ-ಯನ್ನು ನಿರ್ಣಯಿಸಬೇಕೆಂಬದನ್ನು ನೋಡುವ. ಕಾವ್ಯದ ತರಗತಿ, ಅದರಲ್ಲಿ ಪ್ರತಿಪಾದ್ಯವಾದ ವಿಷಯದಿಂದ ಅಲ್ಲ; ಅದರಲ್ಲಿರುವ ಆನಂದೋತ್ಪಾದಕ ಸಂಗತಿಗಳಿಂದ; ಅಂಥ ಆನಂದೋ-ತ್ಪಾದಕ ವಿಷಯಗಳೇ ಕಾವ್ಯಧರ್ಮಗಳು.

ಕಾವ್ಯಧರ್ಮಗಳನ್ನು ನೀವು ಕೇಳಿಕೊಳ್ಳುವ ಮೊದಲು ಕಾವ್ಯಧರ್ಮ ಜ್ಞಾನಕ್ಕೆ ಬೇಕಾಗುವ ಅರ್ಥಗಳೆಂದರೇನೆಂಬದನ್ನು ಕೇಳಿಕೊಳ್ಳಬೇಕು. ಶಬ್ದಗಳು ನಮ್ಮ ಕಿವಿಯ ಇಲ್ಲವೆ ಕಣ್ಣಿನ ಮುಖಾಂತರ ಅರ್ಥವನ್ನು ಹೇಳುವವೆಂಬದನ್ನು ನೀವು ಬಲ್ಲಿರಿ; ಕೊಡ ಎಂಬ ಶಬ್ದದಿಂದ ಒಂದು ತರದ ಪಾತ್ರೆ, ನಾಯಿ ಎಂಬ ಶಬ್ದದಿಂದ ಒಂದು ತರದ ಪ್ರಾಣಿ ಇವು ನಮ್ಮ ಮನಸ್ಸಿನೆದುರಿಗೆ ಬಂದು ನಿಲ್ಲುವವಲ್ಲವೇ; ಇವೇ ಆ ಶಬ್ದಗಳ ಅರ್ಥಗಳು. ಶಬ್ದಗಳು ಕಿವಿಗೋ ಕಣ್ಣಿಗೋ ಗೋಚರವಾಗಿ ಅವುಗಳ ದ್ವಾರದಿಂದ ಮನಸ್ಸಿಗೆ ಮುಟ್ಟಿ ಒಂದೊಂದು ಚಿತ್ರವನ್ನು ನಮ್ಮ ಇದಿರಿಗೆ ನಿಲ್ಲಿಸುವವು. ಈ ಶಬ್ದ ವ್ಯಾಪಾರಕ್ಕೆ ವೃತ್ತಿ ಎಂದು ಹೆಸರು. ಈ ವೃತ್ತಿಗಳು ಅಭಿಧಾವೃತ್ತಿ, ಲಕ್ಷಣಾ-ವೃತ್ತಿ, ವ್ಯಂಜನಾವೃತ್ತಿ ಎಂದು ಮೂರು ತರನಾಗಿವೆ. 'ನಾಯಿ' ಎಂಬ ಶಬ್ದವು ಒಂದುತರದ ಪ್ರಾಣಿಯನ್ನು ಹೇಳುವಲ್ಲಿ ನಡೆ-ಯುವ ವ್ಯಾಪಾರವು ಅಭಿಧಾವೃತ್ತಿಯೆನಿಸುವದು; ಇದನ್ನೇ 'ಶಕ್ತಿ' ("ಅಸ್ಮಾತ್ಪದಾ-ದಯಮರ್ಥೋ ಬೋದ್ಧವ್ಯಃ ಇತಿ ಈಶ್ವರ ಸಂಕೇತಃ ಶಕ್ತಿಃ") ಎಂದು ಹೇಳುವರು. ಶಕ್ತಿಯಿಂದ ಅರ್ಥವನ್ನು ಹೇಳುವ ಶಬ್ದವನ್ನು 'ವಾಚಕ' ಎಂದೂ ಆ ಅರ್ಥವನ್ನು ವಾಚ್ಯಾರ್ಥ ಎಂದೂ ಹೇಳುವರು.

ಲಕ್ಷಣಾವೃತ್ತಿ:—'ಡಂಬಳ' ಊರು ಕೆರೆಯ ಮೇಲೆ ಇದೆ; ಶ್ರೀರಂಗ ಪಟ್ಟಣವು ಕಾವೇರಿಯ ಮೇಲೆ ಇದೆ ಎಂದು ನಾವು ಮಾತಾಡುತ್ತೇವಷ್ಟೇ? ಇಲ್ಲಿ ಕೆರೆಯ—ಎಂದರೆ ನೀರಿನ ರಾಶಿಯ-ಮೇಲೆ, ಕಾವೇರಿಯ—ಎಂದರೆ ಒಂದು ನೀರಿನ ಪ್ರವಾಹದ—ಮೇಲೆ ಊರು ಇರುವುದು (ಚೀನದಲ್ಲಿ ನೀರ ಮೇಲೆ ಪಟ್ಟಣವಿದ್ದರೂ ನಮ್ಮ ದೇಶದಲ್ಲಿ) ಸಂಭವ-ವಾಗಿ ಇಲ್ಲವಷ್ಟೇ? ಇಲ್ಲಿ ಕೆರೆಯ ಮೇಲೆ ಎಂದರೆ ಕೆರೆಯ ತೀರ ಸಮೀಪದಲ್ಲಿ, ಕಾವೇರಿಯ

* ತಾ. ೨೨-೧-೧೯೪೪ ನೆಯ ದಿನ ಧಾರವಾಡ ಗವ್ಹ. ಟ್ರೇ. ಕಾ. ನೆಲ್ಲಿ ಆ ಟ್ರೇ. ಕಾಲೇಜಿನ ಮತ್ತು ಇ. ಬೋರ್ಡಿನ ಟ್ರೇ. ಕಾಲೇಜಿನ ವಿದ್ಯಾರ್ಥಿ-ಶಿಕ್ಷಕರಿಗಾಗಿ ಶ್ರೀ. ಮು. ಪ್ರ. ಪೂಜಾರ ಇವರು ಮಾಡಿದ ಉಪನ್ಯಾಸದ ಮುಖ್ಯಭಾಗವಿದು.

೫-6582-44-1365

ಮೇಲೆ ಎಂದರೆ ಕಾವೇರಿಯ ತೀರ ಸಮೀಪದಲ್ಲಿ ಎಂದು ಅರ್ಥವನ್ನು ಗ್ರಹಿಸುವೆವು. 'ಕಾವೇರಿಯ ದಂಡೆಯ ಮೇಲೆ' ಶ್ರೀರಂಗ ಪಟ್ಟಣವಿದೆ ಎಂದು ಹೇಳುವಲ್ಲಿ 'ಕಾವೇರಿಯ ಮೇಲೆ' ಎಂದು ಹೇಳಿ ನಾವು ಒಂದು ಪ್ರಯೋಜನವನ್ನು ಸಾಧಿಸುವೆವು. ಕಾವೇರಿಯ ಶೈತ್ಯ, ಪಾವನತೆ ಇವು ಶ್ರೀರಂಗ ಪಟ್ಟಣಕ್ಕೆ ಲಭಿಸಿವೆ ಎಂದು, ಕೆರೆಯ ತಂಪಿನ ಜಳಿ, ಶೀತ ಜ್ವರ (ಮಲೇರಿಯಾ) ಡಂಬಳಕ್ಕೆ ಲಭಿಸಿವೆ ಎಂದು ಮಾತಾಡುವವನು ಉದ್ದೇಶ-ಪಟ್ಟಿರುವನು. ಕೆಲವೆಡೆಯಲ್ಲಿ ಪ್ರಯೋಜನವಿಲ್ಲದೆ ರೂಢಿಯಿಂದಲೂ ಇಂತಹ ಮಾತು-ಗಳನ್ನಾಡುವೆವು. ಉದಾ:— ನಿಮ್ಮ ಊರಲ್ಲಿ ಸಾಲೆ ಕಲಿತವರು ಕಡಿಮೆ; (ಸಾಲೆ-ಎಂದರೆ ಕಟ್ಟಡವಲ್ಲ, ಸಾಲೆಯಲ್ಲಿ ಕಲಿಸುವ ವಿದ್ಯೆ.) ಈ ದಿನ ನೂರು ಪಟ್‌ಪಟಿ (ಮೋಟರ್-ಸಾಯ್ಕಲ್) ಹೋದವು. (ಪಟ್‌ಪಟಿಯ ಮೇಲೆ ಕುಳಿತವರು) ಆ ಕಛೇರಿಯಲ್ಲಿ ಬರಿಯ ಜನಿವಾರಗಳೇ ಕೂಡಿದವು. (— ಜನಿವಾರ ಧರಿಸಿದವರು) ಬೆಣ್ಣೇ, ಬಾ (— ಬೆಣ್ಣೆಯನ್ನು ತಂದವನೇ ಬಾ). ಮುಂ. ಗ್ರಂಥಗಳಲ್ಲಿಯೂ ಇಂತಹ ಉದಾಹರಣಗಳು ಬೇಕಾದಷ್ಟು ಬರುವವು. ಉದಾ:— ನಿನ್ನೆ ಬೆನ್ನೊಳೆ ಬಂದಪೆಂ (— ಬೆನ್ನ ಸಮೀಪದೊಳ್). ಇಲ್ಲಿ ಕೆರೆಯ ಮೇಲೆ (ಡಂಬಳ) ಎಂಬ ಶಬ್ದವನ್ನು ಕೇಳಿದಾಗ ಕೆರೆಯ ಮೇಲೆ ಊರು ಇರುವದು ಅಸಂಭವ-ವಾದದರಿಂದ ಕೆರೆಯ ಮೇಲೆ ಎಂದರೆ ಕೆರೆಯ ತೀರ ಸಮೀಪದಲ್ಲಿ ಎಂದು ಆ ಶಬ್ದವು ತಿಳಿಸುವ ದಷ್ಟೇ. ಇಲ್ಲಿ ನಡೆಯುವ ಶಬ್ದ ವ್ಯಾಪಾರವು ಲಕ್ಷಣಾವೃತ್ತಿ ಎನಿಸುವದು. ಕೆರೆಯ ತೀರ ಸಮೀಪದಲ್ಲಿ ಎಂಬ ಅರ್ಥವು ಲಕ್ಷ್ಯಾರ್ಥವು, ಕೆರೆಯ ಮೇಲೆ ಎಂಬ ಶಬ್ದವು 'ಲಕ್ಷಕ' ಎನಿಸುವದು. ಲಕ್ಷ್ಯಾರ್ಥವು ಶಕ್ಯಾರ್ಥಕ್ಕೆ ಸಂಬಂಧಿಸಿದ್ದು ಇರುವದು.

ವ್ಯಂಜನಾವೃತ್ತಿ :— 'ಸೂರ್ಯಾಸ್ತವಾಯಿತು' ಎಂಬ ಮಾತನ್ನು ಒಂದು ಜನ-ಗುಂಪಿನಲ್ಲಿ ನಾವು ಹೇಳಿದರೆ ಹಲವರಿಗೆ ಹಲವು ತರದ ಸೂಚನೆ ಸಿಕ್ಕುವದು. ಬ್ರಹ್ಮಚಾರಿ-ಗಳಿಗೆ ಸಂಧ್ಯಾವಂದನೆಯ ಸಮಯವಾಯಿತು, ನಾರಿಯರಿಗೆ ದೀಪ ಹತ್ತಿಸಲು ಹೋಗಬೇಕು, ಮುಂತಾಗಿ ಬೇರೆ ಬೇರೆ ಸೂಚನೆಗಳು ಅವರವರಿಗೆ ಹೊಳೆಯುವವು. "ರಾಯರೇ, ಮುಂಗ-ನಿಂದ ಮನುಷ್ಯನಾದನು ಎಂದು ಡಾರ್ವಿನ್ ಸಾಹೇಬರು ಹೇಳಿದ್ದು ನಿಮ್ಮನ್ನು ಕಂಡಾಗ ನಿಜವೆನಿಸುತ್ತದೆ" ಎಂದು ಒಬ್ಬನು ಮತ್ತೊಬ್ಬನನ್ನು ಕುರಿತು ಮಾತಾಡಿದಾಗ— ನೀನು ಮುಂಗನ ಮೋತಿಯವರು, ನಿಮ್ಮಲ್ಲಿ ಕಪಿಚೇಷ್ಟೆ ತುಂಬ ಇದೆ, ನೀವು ಶುದ್ಧ ಕಪಿಗಳು ಎಂಬ ಅರ್ಥವು ಹೊಳೆಯುವದು. "ಗಂಡ— ಅಯ್ಯೋ ನಾನು ಒಹಳ ವಿಚಾರಕ್ಕೆ ತೊಡಗಿ-ದ್ದೇನೆ; ನನ್ನ ತಲೆ ಕಾಯ್ದು ಹೋಗಿದೆ, ಏನು ಹಾಳುಮಾತು ಹರಟುತ್ತೀಯೆ? ಹೆಂಡತಿ— ಅಯ್ಯಽಽ ಅದಕ್ಕೇ ಮನೆತುಂಬ ಬಟಾಟಿ ಸುಟ್ಟವಾಸನೆ ಇಡುಗಿದೆ" ಈ ಗಂಡ ಹೆಂಡತಿ ಸಂಭಾಷಣದಲ್ಲಿ ಹೆಂಡತಿಯು ಗಂಡನಿಗೆ ಏನು ನಿನ್ನ ಹಾಳುವಿಚಾರ ಸುಟ್ಟಿತು, ಒಂದು ಸೀರೆಯ ವಿಚಾರವೇ ಒಂದು ವಸ್ತ್ರ ಒಡವೆಗಳ ವಿಚಾರವೇ ಹಗಲೆಲ್ಲ ವಿಚಾರ, ಪುಸ್ತಕ ಮುಂತಾದದ್ದನ್ನೆ ಹಿಡಿದಿರುವ ನಿನ್ನ ತಲೆಯಲ್ಲಿ ಮಿದುಳು ಇರಲಾರದು, ಬಟಾಟಿ ತುಂಬಿರ-ಬೇಕು; ನಿನ್ನ ತಲೆ ಮಿದುಳಿಲ್ಲದ ತಲೆ ಎಂದು ಜುಗುಪ್ಸೆ ಪಟ್ಟಿರಬೇಕೆಂಬ ಅರ್ಥವು ಹೊಳೆ-ಯುವದು. ಮಹಾಭಾರತದಲ್ಲಿ ಗೃಧ್ರಗೋಮಾಯು ಸಂವಾದ ಎಂಬ ಒಂದು ಭಾಗವಿದೆ. ಒಂದು ಮೃತಶಿಶುವನ್ನು ಅದರ ಬಳಗದವರು ಸಂಜೆಯ ಹೊತ್ತಿಗೆ ಸ್ಮಶಾನಕ್ಕೆ ತಂದು ಶೋಕಮಾಡುತ್ತ ಕುಳಿತಿರಲು ನೆರೆಯ ಮರದ ಮೇಲೆ ಕುಳಿತ ಗೃಧ್ರವು (ಹದ್ದು) ಅವರನ್ನು ಕುರಿತು— ಏಕೆ ಶೋಕಮಾಡುವಿರಿ; ಮೃತರಾದವರು ಮರಳಿ ಬದುಕುವರೇ? ಮೋಹ-ವನ್ನು ತೊರೆದು ಶವವನ್ನು ಬಿಟ್ಟು ಬೇಗನೆ ಮನೆಗೆ ಹೋಗುವದು ಒಳಿತು ಎಂದು ಹೇಳು-ವದು; ಅಲ್ಲಿಯೇ ಸುಳಿದಾಡುತ್ತ ಇದ್ದ ಗೋಮಾಯು (ನರಿ) ಮುಂದೆ ಬಂದು—

ಅಯ್ಯೋ! ಬಂಗಾರದಂಥ ವೇಳೆ ಇದು! ಸತ್ತವರು ಕೂಡ ಈಗ ಬದುಕುವದುಂಟು, ಮಹಾತ್ಮರು ಯಾರಾದರೂ ಬಂದು ಬದುಕಿಸುವದೂ ಉಂಟು, ಇನ್ನೂ ಕೆಲಹೊತ್ತು ಕಾದುಕೊಂಡು ಕುಳಿತಿರಿ. ಗೃಧ್ರದ ಮಾತಿನಿಂದ ಹಡೆದ ಕರುಳನ್ನು ಅಲಕ್ಷಿಸುವದುಂಟೇ ಎಂದು ಹೇಳುವದು. ಈ ಸಂವಾದದಲ್ಲಿ ಬೆಳಕಿರುವಾಗಲೇ ಶವವನ್ನು ತಿನಬಲ್ಲ ಗೃಧ್ರವು ಜೀಗ ಹೋಗಿರೆಂದೂ, ರಾತ್ರಿಯಲ್ಲಿಯೂ ಶವವನ್ನು ತಿನ್ನಬಲ್ಲ ಗೋಮಾಯುವು ತನಗೊಬ್ಬನಿಗೇ ಶವವು ದೊರೆಯಲಿ ಎಂದು ಅವರಿಗೆ ಇನ್ನೂ ತಡೆಯಿರಿ ಎಂದೂ ಹೇಳುವವೆಂಬ ಅರ್ಥವು ಹೊಳೆಯುವದು. ಒಬ್ಬ ಶುಕ್ಲವೃತ್ತಿಯ ಬ್ರಾಹ್ಮಣನು ಒಂದು ನದಿಗೆ ಬಂದು ಮಧ್ಯಾಹ್ನವೆಲ್ಲ ಅಲ್ಲಿ ಒಗೆಯುವದು ಸ್ನಾನ ಮೊದಲಾದ ಕೆಲಸಗಳಲ್ಲಿ ಇರುತ್ತ ಇದ್ದನು. ಇದು ಅಲ್ಲಿ ದಂಡೆಯ ಎಲೆವನೆಯಲ್ಲಿ ತನ್ನ ಕಾಮುಕನೊಡನೆ ಕ್ರೀಡೆಯಾಡುವ ಒಬ್ಬ ಜಾರೆಗೆ ಬಾಧಕವಾಗಿತ್ತು. ಒಂದುದಿನ ಆ ಶುಕ್ಲವೃತ್ತಿಯವನು ತನ್ನ ಮನೆಗೆ ಭಿಕ್ಷೆಗೆ ಬಂದಾಗ ಆಜಾರೆ—ಎಲೈ ಬ್ರಾಹ್ಮಣನೇ, ಇನ್ನು ನಮ್ಮ ಮನೆಗೆ ಅಂಜಿಕೆಯಿಲ್ಲದೆ ಭಿಕ್ಷೆಗೆ ಬರುತ್ತಿರು, ಏಕೆಂದರೆ, ನಿನಗೆ ದಿನಾಲು ತೊಂದರೆ ಕೊಡುತ್ತಿದ್ದ ನಮ್ಮ ನಾಯಿಯನ್ನು ನದಿಯ ದಂಡೆಯ ಕಾಡಿನಲ್ಲಿದ್ದ ಸಿಂಹವು ಹಿಡಿದು ಕೊಂದಿತು. ಎಂದು ಹೇಳಿದಳು. ದಿನಾಲು ನದಿಯ ದಂಡೆಗೆ—ಸಿಂಹನಿದ್ದ ದಂಡೆಗೆ–ತಾನು ಹೋಗುತ್ತಿದ್ದದ್ದು ಎಂಥ ಪ್ರಮಾದ! ಅಯ್ಯೋ ಬದುಕಿದೆ; ಇನ್ನು ಎಂದಿಗಾದರೂ ಆ ಹಾಳು ಹೊಳೆ ದಂಡೆಗೆ ಹೋದೇನೇ ಎಂಬ ಅರ್ಥವು ಅತನಿಗೆ ಜಾರೆಯ ಮಾತಿನಿಂದ ಹೊಳೆಯಿತು; ಇದು ವರೆಗೆ ಹೋಗಿ ಬದುಕಿ ಬಂದದ್ದಕ್ಕೆ-ಅಲ್ಲಿಯ ಮರಣ ಭಯಕ್ಕೆ–ಆತನಿಗೆ ಉಟ್ಟ ಧೋತರವನ್ನು ಬದಲಿಸುವಷ್ಟು ತೊಂದರೆಯಾಗಿ ಕೈಕಾಲೇ ಹೋದವು; ಈ ಅರ್ಥವು ಹೊಳೆದದ್ದೂ ಈ ವಿಕಾರವು ಉಂಟಾದದ್ದೂ ಜಾರೆಯ ಮಾತಿನ ವಾಚ್ಯಾರ್ಥದಿಂದಲ್ಲ; ಲಕ್ಷ್ಯಾರ್ಥವೂ ಅಲ್ಲಿ ಇಲ್ಲ. ಮೇಲಿನ ಉದಾಹರಣೆಗಳಲ್ಲಿ "ಹೊಳೆಯುವ ಅರ್ಥ" ವೆಂದು ಹೇಳಿದ್ದನ್ನೆಲ್ಲ ವ್ಯಂಗ್ಯಾರ್ಥವೆಂದು ಹೇಳುವರು; ಅಲ್ಲಿ ನಡೆಯುವ ಶಬ್ದ ವ್ಯಾಪಾರವು 'ವ್ಯಂಜನಾವೃತ್ತಿ' ಎನಿಸುವದು; ಆ ಶಬ್ದಗಳು 'ವ್ಯಂಜಕ' ಎಂದೆನಿಸುವವು.

ವ್ಯಂಗ್ಯಾರ್ಥದ ಗ್ರಂಥೋದಾಹರಣಗಳು—(ಇಲ್ಲಿ ಶ್ರೋತಾರರ ಅನುಕೂಲತೆಗಾಗಿ ಅವರು ಓದುತ್ತಿರುವ ಗ್ರಂಥದ— ಪಂಪರಾಮಾಯಣ ಸಂಗ್ರಹದ ಉದಾಹರಣಗಳನ್ನೇ ಹೆಚ್ಚಾಗಿ ತೆಗೆದುಕೊಂಡಿದ್ದೇವೆ.)

ಪಲರುಂ ವಿದ್ಯಾಧರ ಸ್ತ್ರೀಯರುಮಮರಿಯರುಂ ಮಾನವ ಸ್ತ್ರೀಯರುಂ ಶ।
ನ್ಮೊಲವಿಂ ಮೇಲ್ವಾಯ್ದೊಡಂ ಮುನ್ ಬಗೆಯದ ಬಗೆಯೇನಾದುದೆಂದುದ್ಧತಂವೂ।
ದಲಿಸುತ್ತುಂ ರೂಪಿನೊಳ್ ಮುಚ್ಚರಿಸುವನೆನಗೆಂದಂಬನಂಬಟ್ಟುವನ್ನಂ।
ಪಲಕಾಲಕ್ಕೇಸುನೆತ್ತಂ ದಶಮುಖನೆನಿಸುತುಂ ಮುನ್ಮಥಂ ಮಾಣದೆಚ್ಚಂ॥

(ಪಂ. ರಾ. ಸಂ. ೪. ೪೬)

—ಇಲ್ಲಿ ರಾವಣನು ಸೌಂದರ್ಯದಲ್ಲಿ ಕಾಮನೊಡನೆ ಮೇಲಾಟವಾಡುವನು ಎಂಬ ವಾಕ್ಯವಿದೆ; ಈ ಮಾತಿನಿಂದ ರಾವಣನು (ಜೈನರ ರಾವಣನು) ಕಾಮನಷ್ಟು ಇಲ್ಲವೆ ಕಾಮನಿಗಿಂತ ಹೆಚ್ಚಾಗಿ ಸೌಂದರ್ಯಶಾಲಿ ಎಂಬ ಅರ್ಥವು ಹೊಳೆಯುವದು.

ಮದನಯಶಃ ಪಟಹಧ್ವನಿ। ಪುದಿಯೆನಿಯಚ್ಚರನ ಕರ್ಣಮಂ ಹೃದಯಮಕ್ಕೆ॥
ಯ್ದಿದುದಿಲ್ಲ ದಿವ್ಯವಚನಂ। ಬಿದಿಯಂ ನಿರುಗುನೆ ಪೆರರ ಪೇಳ್ದುಪದೇಶಂ?॥

(ಪಂ. ರಾ. ಸಂ. ೪. ೫೫)

—ಇಲ್ಲಿ **ಕಾಮನ** ಜಯಭೇರಿಯ ಶಬ್ದವು ರಾವಣನ ಕರ್ಣವನ್ನು ತುಂಬಿದ್ದರಿಂದ ವಿದ್ಯಾ

ದೇವತೆಯ ಉಪದೇಶವಾಕ್ಯವು ಅವನ ಹೃದಯದ ವರೆಗೆ ಹೋಗಲಿಲ್ಲ ಎಂದು ಹೇಳಿದೆ. ಕಾಮನೇ ಕಲ್ಪಿತ ದೇವತೆ, ಆತನ ಜಯಭೇರಿ ಎಲ್ಲಿ ಅದರ ಶಬ್ದವೆಲ್ಲಿ ? ಎಂದರೆ ಕಾಮನು ಜಯಶಾಲಿಯಾಗಿ ಜಯಭೇರಿಯನ್ನು ಹೊಡೆಯಿಸಿದನು ಎಂದರೆ ರಾವಣ ಪೂರ್ಣವಾಗಿ ಸೋತ, ಎಂದರೆ ಆತನಿಗೆ ಕಾಮವಿಕಾರವು ವಿದ್ಯಾದೇವತೆಯ ಉಪದೇಶವನ್ನು ಮನಗೊಳ್ಳ ದಷ್ಟು ಹೆಚ್ಚಾಗಿ ಆಯಿತು ಎಂಬ ಅರ್ಥವು ಹೊಳೆಯುವದು.

ವ್ಯಂಗ್ಯಾರ್ಥವು ಬಹಳ ಮನೋಹರವು; ವಾಚ್ಯಾರ್ಥ ಲಕ್ಷ್ಯಾರ್ಥಗಳಲ್ಲಿ ಈ ಸೊಗಸು (ಮೋಜು) ಇಲ್ಲ. ಅದಕ್ಕಾಗಿಯೇ ಇಲ್ಲಿ ಅದರ ಹಲವು ಉದಾಹರಣಗಳನ್ನು ಹೇಳ ಲಾಯಿತು. ಈ ವ್ಯಂಗ್ಯಾರ್ಥವನ್ನೇ ಧ್ವನಿ ಎಂದೂ ಹೇಳುವರು. ಧ್ವನಿ ಕಾವ್ಯವೇ— ವ್ಯಂಗ್ಯಾರ್ಥಯುಕ್ತ ಕಾವ್ಯವೇ— ಉತ್ತಮ ತರಗತಿಯದು. ಮಾತಿನಲ್ಲಿ ಕೂಡ ವ್ಯಂಗ್ಯಾರ್ಥ ಯುಕ್ತವಾಗಿ ಮಾತಾಡುವವರನ್ನೇ ಮಾತುಗಾರ, ರಸಿಕ ಎಂದು ಹೊಗಳುವದುಂಟು.

ರಸಗಳೂ ವ್ಯಂಗ್ಯಾರ್ಥದಲ್ಲಿ ಸೇರುವವು. ಶೃಂಗಾರ, ವೀರ ಮೊದಲಾದ ರಸಗಳು ವ್ಯಂಜನಾವೃತ್ತಿಯಿಂದ ತೋರಿ ಆನಂದವನ್ನುಂಟುಮಾಡುವವು. ರಸ ಎಂದರೇನೆಂಬದನ್ನು ಇಲ್ಲಿ "ಮುಜ್ಜಿಗೆ ರಾಮಾಯಣ" ಎಂಬ (ಮರಾಠಿ— ತಾಕಾಪೂರ್ತೇ ರಾಮಾಯಣ) ಮಾತಿನಂತೆ ಸಂಕ್ಷೇಪವಾಗಿ ತಿಳುಹಲು ಪ್ರಯತ್ನಿಸುವೆನು.

೧. **ರಸ**:— ಮನುಷ್ಯ ಮಾತ್ರರಲ್ಲಿ ೧. ರತಿ (ಅನುರಾಗ, ಪ್ರೇಮ) ೨. ಹಾಸ (ನಗುವ ಮನೋವೃತ್ತಿ) ೩. ಶೋಕ, ೪. ಕ್ರೋಧ ೫. ಉತ್ಸಾಹ (ಹುರುಪು), ೬. ಭಯ ೭. ಜಗುಪ್ಸೆ (ಹೇಸುವದು) ೮. ವಿಸ್ಮಯ, ೯. ಶಮ (ಶಾಂತಿ) ಎಂಬ ಒಂಬತ್ತು ಮನೋವೃತ್ತಿಗಳು ಇದ್ದೇ ಇರುವವು. ಇವು ಇಲ್ಲದೆ ಮನುಷ್ಯನಿಲ್ಲ; ಇವು ಹುಟ್ಟು ಮನೋವೃತ್ತಿಗಳು. ಮನುಷ್ಯನೆಂದರೆ ರತಿಯು ಅವನಲ್ಲಿ ಇದ್ದೇ ಇರುವದು. ಪತಂಜಲಿ ಋಷಿಯು— "ನ ಹಿ ಜೈತ್ರ ಏಕಸ್ಯಾಂ ಸ್ತ್ರೀಯಾಂ ವಿರಕ್ತ ಇತ್ಯನ್ಯಾಸು ವಿರಕ್ತಃ" ಎಂದು ಹೇಳಿರುವನು. (ಒಬ್ಬ ಮನುಷ್ಯನು ಒಬ್ಬ ಸ್ತ್ರೀಯಲ್ಲಿ ವಿರಕ್ತನಾಗಿದ್ದರೂ ಬೇರೆ ಸ್ತ್ರೀಯರಲ್ಲಿ ವಿರಕ್ತನಾಗಿರುವ ದಿಲ್ಲ. ಇನ್ನಾವಳಲ್ಲೊ ಅನುರಕ್ತನಾಗಿರುವನು; ಎಂದರೆ ಅವನಲ್ಲಿ 'ರತಿ' ಮನೋವೃತ್ತಿಯು ಇದ್ದೇ ಇರುವದು.) ರಾಮನು ಹುರುವು ಉಳ್ಳವ, ರಾಮನು ಸ್ತ್ರೀಯಲ್ಲಿ ಅನುರಕ್ತನು ಎಂದು ಹೇಳಿದಾಗ ಏಕೆ ಎಂಬ ಪ್ರಶ್ನೆಯು ಹುಟ್ಟುವದಿಲ್ಲ; ಆದರೆ ರಾಮನು ಚಿಂತಿಸುವನು, ರಾಮನು ಬಳಲಿದನು ಎಂದು ಹೇಳಿದಾಗ ಏಕೆ ಚಿಂತಿಸುವನು ಎಂಬ ಪ್ರಶ್ನೆ ಹುಟ್ಟುವದು; ಆದದರಿಂದಲೇ ಉತ್ಸಾಹ, ರತಿ ಈ ಭಾವಗಳು ಸಹಜಗಳು, ಎಂದರೆ ಸ್ಥಾಯಿಗಳು.

ರತ್ಯಾದಿಗಳು ಪ್ರಕಟವಾಗುವದಕ್ಕೆ ಕಾರಣವಾದ ವ್ಯಕ್ತಿ, ವಸ್ತು ಮುಂತಾದವು 'ವಿಭಾವ' ಎನಿಸುವವು. ರಾಮಚಂದ್ರನ ರತಿಯು ಪ್ರಕಟವಾಗುವದಕ್ಕೆ ಕಾರಣಭೂತಳಾದ 'ಸೀತೆ' ರತಿಯ ವಿಭಾವವು; ಹಾಸ್ಯವು ಉಂಟಾಗುವದಕ್ಕೆ ಕಾರಣವಾದ ವಿದೂಷಕನ ವಿಕೃತವೇಷ ಮುಂತಾದದ್ದು ಹಾಸದ ವಿಭಾವವು; ವಿಭಾವವು ಎರಡುತೆರ; ೧ ಆಲಂಬನ ವಿಭಾವ; ೨ ಉದ್ದೀಪನ ವಿಭಾವ; ರತಿ ಮೊದಲಾದವು ಯಾವದನ್ನು ಅವಲಂಬಿಸಿ ಪ್ರಕಟ-ವಾಗುವವೋ ಅದು ಆಲಂಬನ ವಿಭಾವ; ಪ್ರಕಟವಾದ ರತಿ ಮೊದಲಾದವನ್ನು ಉದ್ದೀಪನ ಗೊಳಿಸುವದು ಎಂದರೆ ಹೆಚ್ಚಿಸುವದು ಉದ್ದೀಪನ ವಿಭಾವವು. ರತಿಯನ್ನು ಹೆಚ್ಚಿಸುವ ವಸಂತ, ಕೋಕಿಲಧ್ವನಿ ಮುಂತಾದವು ಉದ್ದೀಪನ ವಿಭಾವಗಳು.

ರತಿ ಹಾಸ ಭಯ ಮೊದಲಾದ ಸ್ಥಾಯಿಭಾವಗಳು ಪ್ರಕಟವಾದಾಗ ನಡುನಡುವೆ ಧೃತಿ, ಚಿಂತೆ, ವಿಷಾದ, ಔತ್ಸುಕ್ಯ ಮುಂತಾದ ಕೆಲಕೆಲವು ಭಾವಗಳು ಉದಯಹೊಂದಿ ಅಡಗುವವು.

ಇವು ವ್ಯಭಿಚಾರಿಭಾವಗಳು, ಇಲ್ಲವೆ ಸಂಚಾರಿಭಾವಗಳು. ಇವು ೩೩ ಎಂದು ಎಣಿಸಲ್ಪಟ್ಟಿವೆ. ಭಾವಗಳು ಉಂಟಾದಾಗ ಶರೀರದ ಮೇಲೆ ಆಗುವ ರೋಮಾಂಚ, ಸ್ವೇದ, ಸ್ತಂಭನ ಮುಂತಾದವು ಅನುಭಾವ ಎಂದೆನಿಸುವವು.

ವಿಭಾವ (ಆಲಂಬನ, ಉದ್ದೀಪನ) ಅನುಭಾವ ವ್ಯಭಿಚಾರಿಭಾವ ಇವುಗಳಿಂದ ತೋರಿ ಬರುವ ಸ್ಥಾಯಿಭಾವವು ರಸ (ಆನಂದ) ರೂಪವನ್ನು ಹೊಂದುವದು.

ಶಕುಂತಲೆ ಎಂಬ ಆಲಂಬನ ವಿಭಾವವನ್ನು ಹೊಂದಿ, ಆಕೆಯ ಮನೋವಿಕಾರ, ಆಕೆಯ ಸಖಿಯರ ಅನುಕೂಲತೆ, ವಸಂತಾದಿ ಋತು ಮುಂತಾದ ಉದ್ದೀಪನ ವಿಭಾವ ಗಳಿಂದ ಉದ್ದೀಪ್ತವಾಗಿ, ಶಕುಂತಲೆ ದೊರೆಯುವಳೇ ಎಂಬ ಚಿಂತೆ, ತನ್ನವರು ತನ್ನ ವಿಕಾರ ವನ್ನು ನೋಡುವರೆಂಬ ಲಜ್ಜೆ ಮೊದಲಾದ ಸಂಚಾರಿಭಾವಗಳಿಂದ, ರೋಮಾಂಚಾದಿ ಅನುಭಾವಗಳಿಂದ ಪ್ರಕಟಿತವಾಗುವ ದುಷ್ಯಂತನಿಷ್ಠ ರತಿಭಾವವು ಕಾವ್ಯನಾಟಕಗಳಲ್ಲಿ ಗ್ರಥಿತವಾದಾಗ ಶೃಂಗಾರ ರಸರೂಪವನ್ನು ಹೊಂದುವದು.

ರಸ ಎಂದರೆ ಆನಂದ; ಒಂಬತ್ತು ಸ್ಥಾಯಿಭಾವಗಳಿಂದ ಒಂಬತ್ತು ರಸಗಳುಂಟಾಗು ವವು. ೧. ಶೃಂಗಾರ ೨. ಹಾಸ್ಯ ೩. ಕರುಣ ೪. ರೌದ್ರ ೫. ವೀರ ೬. ಭಯಾನಕ ೭. ಬೀಭತ್ಸ ೮. ಅದ್ಭುತ ೯. ಶಾಂತ.

ಶೋಕವೆಂಬ ಭಾವವು ದುಃಖಕಾರಣವಾದರೂ ಕಾವ್ಯನಾಟಕಗಳಲ್ಲಿ ಗ್ರಥಿತವಾದಾಗ —ಕರುಣ ರಸರೂಪವಾದಾಗ—ಆನಂದ ರೂಪವೇ ಆಗುವದು. ರಾಮನು ಸೀತಾವಿಯೋಗ ಕಾಲದಲ್ಲಿ ಅತ್ತಿರಬಹುದು; ಲಕ್ಷ್ಮಣನೂ ಅತ್ತಿರಬಹುದು. ಆದರೆ ರಾಮಾಯಣದಲ್ಲಿ ರಾಮನ ಸೀತಾವಿಯೋಗ ಪ್ರಸಂಗವನ್ನು ಓದುವ ನಮಗೆಲ್ಲ ಅದು ಆನಂದರೂಪವೇ ಆಗುವದು. ರಾಮನ ಸೀತಾವಿಯೋಗಕ್ಕೆ ನಾವು ಆನಂದಿಸುತ್ತೇವೆಂದು ಅಲ್ಲ; ಕವಿಯು ರಚಿಸಿದ ಆ ವರ್ಣನೆಯನ್ನು ಓದುವಾಗ ನಮಗೆ ಆನಂದವಾಗುವದು. ಒಮ್ಮೊಮ್ಮೆ ಸೀತಾವಿಯೋಗ ದಿಂದ ಶೋಕಿಸುವ ರಾಮನ ವರ್ಣನೆಯನ್ನು ಓದುವಾಗ ನಮ್ಮ ಕಣ್ಣಲ್ಲಿ ನೀರು ಬರುವವು. ಆದರೆ ಅದಕ್ಕೆ ದುಃಖವು ಕಾರಣವಲ್ಲ; ನಮ್ಮ ನರಗಳ ದೌರ್ಬಲ್ಯವೇ ಕಾರಣವು. ಶೋಕ-ರಸದ ಕಾವ್ಯದಿಂದ ನಮಗೆ ದುಃಖವಾಗುತ್ತಿದ್ದರೆ ರಾಮಾಯಣ ಪಾರಾಯಣವನ್ನು ದಿನಾಲು ಮಾಡುವ ಭಕ್ತರು ದುಃಖದಿಂದ ಬೇಗ ಮಡಿದುಹೋಗಬೇಕಾಗಿತ್ತು, ಆದರೆ ತಿರುಗಿ ಕೇಳಿದರೆ ಅವರು ಆ ವರ್ಣನೆಯ ಪ್ರಸಂಗವನ್ನು ಓದಿ ಆನಂದದಿಂದ ಪುಷ್ಟಿ ಹೊಂದುತ್ತಾರೆ.

ನೀವು ಓದುತ್ತಿರುವ ಪಂಪರಾಮಾಯಣ ಸಂಗ್ರಹದಲ್ಲಿ ಸೀತಾವಿಯೋಗದಿಂದ ಅಳಲುತ್ತಿರುವ ರಾಮನ ವರ್ಣನೆಯನ್ನು ನೆನಪಿಗೆ ತಂದುಕೊಳ್ಳಿರಿ—

ಶ್ರೀರಾಮನು ಸೀತಾವಿಯೋಗದಿಂದ ಅತ್ಯಂತ ಖಿನ್ನನಾಗಿ—

ಹಾ ಹಾ ಜನಕಸುತೇ ನೈ | ದೇಹೀ ನೈದೇಹಿಯೆಂದು ಪುದಿದಿರೆ ಮನಮಂ ॥
ಮೋಹತಮಂ ದೀಪಂ ವಾ | ತಾಹತಿಯಿಂ ನಂದುವಂತೆ ಮೂರ್ಚ್ಛೆಗೆ ಸಂದಂ ॥

(ಪಂ. ರಾ. ಸಂ. ೪:೭೨)

ಇಂತು ರಾಮನು ಮೂರ್ಚ್ಛೆಹೊಂದಿ ಹೇಗೋ ಎಚ್ಚೆತ್ತು ವನಾಂತರದೊಳೆಲ್ಲಿಯುಂ ಸೀತೆಯುಂ ಕಾಣದೆ—

---

* ಸಾಹಿತ್ಯದರ್ಪಣ ತೃತೀಯ ಪರಿಚ್ಛೇದದಲ್ಲಿ ಈ ೩೩ ಭಾವಗಳನ್ನು ನೋಡಿರಿ.

ಕಳಹಂಸಾಲಸ ಯಾನೆಯಂ ಮೃಗಮದಾನೋದಾಸ್ಯನಿಶ್ವಾಸೆಯಂ |
ತಳರೇ ತಾವರೆಯೇ ಮದಾಳಿಕುಲಮೇ ಕರ್ನೆಯ್ದಿಲೇ ಮತ್ತ ಕೋ ||
ಕಿಳಮೇ ಕಂಡಿರೆ ಪಲ್ಲವಾಧರೆಯ ನಂಭೋಜಾಸ್ಯೆಯಂ ಭೃಂಗಕುಂ
ತಳಿಯಂ ಕೈರವನೇತ್ರೆಯಂ ಪಿಕರವಪ್ರಖ್ಯಾತೆಯಂ ಸೀತೆಯಂ ||

(ಪಂ. ರಾ. ೪. ೭೪.)

ಹೀಗೆ ಚೇತನಾಚೇತನ ವಸ್ತು ವಿವೇಕವಿಲ್ಲದೆ ತಳಿರು ತಾವರೆ ಮೊದಲಾದವನ್ನೆಲ್ಲ ಸೀತೆಯನ್ನು ಕಂಡಿರಾ ಎಂದು ಬಡಬಡಿಸುತ್ತ ಮತ್ತೆ—

ಕಳಿರುತಿ ಮತ್ತ ಕೋಕಿಳಮನೀಕ್ಷಣ ನುತ್ಪಲಮುಂ ವಿನೀಲಕುಂ
ತಳಮಳಿಮಾಲೆಯಂ ಕಚಭರಂ ನವಿಲಂ ನಡೆ ಹಂಸಿಯಂ ತಳಂ
ತಳಿರ್ಗಳನಾನನಂ ಕಮಲಮುಂ ನಳಿತೋಳ್ ಲತೆಯಂ ಲತಾಂತ ಕೋ
ಮಳಿ ಮರೆಗೊಂಡು ಮೆಯ್ಗರೆದು ಕಾಡುವ ಕಾರಣಮೇನೊ ಜಾನಕೀ ||

(ಪಂ. ರಾ. ಸಂ. ೪. ೭೫.)

ಈ ರೀತಿಯಾಗಿ ಪ್ರಿಯಳೇ, ಒಂದೊಂದು ಅಂಗವನ್ನು ಒಂದೊಂದರ ಮರೆಮಾಡಿ ಇಂತು ನಿರ್ದಯಳಾಗಿ ನನ್ನನ್ನು ಕಾಡುವ ಕಾರಣವೇನು ಎಂದು ಹಂಬಲಿಸುತ್ತ, ಇನ್ನೇನು ಸೀತೆಯ ಬೇರೆ ಬೇರೆ ಅವಯವಗಳು ಬೇರೆ ಬೇರೆ ಸ್ಥಳಗಳನ್ನು ಹೊಂದಿ ಆಕೆ ಕೊನೆಗೂ ಮಾಯವಾಗಿ ಹೋದಳೇ ಎಂದು ರಾಮನು ನಿರಾಶಭಾವವನ್ನು ಹೊಂದುತ್ತಾನೆ. ರಾಮನ ಈ ದುಃಖಪ್ರಸಂಗದ ವರ್ಣನೆ ಬಹು ಮನೋಹರವಾಗಿ ಕರುಣರಸರೂಪವಾಗಿದೆ. ಇದೇ ಮೇರೆಗೆ ಉಳಿದ ಹಾಸ್ಯ, ಭಯಾನಕ, ವೀರ ಮೊದಲಾದ ರಸಗಳ ಉದಾಹರಣಗಳನ್ನು ನೀವು ಓದಿದ, ಓದುವ ಕಾವ್ಯಗಳಲ್ಲಿ ಲಕ್ಷಿಸಿರಿ. ಕೆಲವು ಜನ ಸಾಹಿತ್ಯಕಾರರು "ಕಾವ್ಯಂ ರಸಾತ್ಮಕಂ ವಾಕ್ಯಂ" ಎಂದು ಕಾವ್ಯ ಲಕ್ಷಣವನ್ನು ಹೇಳಿದ್ದಾರೆ. ಅವರ ಮತದಲ್ಲಿ ರಸ, ಭಾವ ಇದ್ದ ವಾಕ್ಯಗಳು ಮಾತ್ರ ಕಾವ್ಯಗಳು.

೨. ಭಾವಗಳು— ಭಾವಗಳು ಎರಡು ತೆರ; ಸಾಮಾನ್ಯ ಭಾವಗಳು; ೨. ರಸಕ್ಕೆ ಅಂಗವಾದ ಭಾವಗಳು. ರಸಾಂಗಭೂತ ಭಾವಗಳೇ ಶ್ರೇಷ್ಠವಾದಂಥವು. ರಸಕ್ಕೆ ಅಂಗವಾಗಿ ಮೂಡದೆ ಅವನ್ನೇ ಸ್ವತಂತ್ರವಾಗಿ— ಪ್ರಮುಖವಾಗಿ ಹೇಳುವದೂ ಉಂಟು. ರಸಾಂಗಭೂತ ಭಾವವೊಂದರ ಉದಾಹರಣ—

ಏತರ ಸೋಂಕುವಾವುದರ ಗಾಡಿಯುಮೊಂದರ ಕಂಪುಮೆನ್ನರೊ
ಳ್ಪಾತುಮುದೆಂತುಟಪ್ಪರಸಮುಂ ತನಗೆಂತುಮಸಹ್ಯಮಾಗೆ ಹೃ
ಜ್ಜಾತನ ಮಾಯೆ ಮೋಹಿಸುವುದುಂ ಬಗೆಯಂ ವಿಗತಾನ್ಯಚಿಂತನಾ
ಸೀತೆಯ ಚಿಂತೆಯಿಂ ದಶಮುಖಂ ಮರವಾನಸನಂತೆ ತೋರಿದಂ ||

(ಪಂ. ರಾ. ಸಂ. ೪. ೮೬.)

[—ತನಗೆ (ರಾವಣನಿಗೆ) ಯಾವದರ ಸ್ಪರ್ಶವೂ ಯಾವದರ ಶೋಭೆಯೂ ಯಾವದೊಂದರ ಸುವಾಸನೆಯೂ ಎಂಥವರ ಒಳ್ಳೆಯ ಮಾತುಗಳೂ ಎಂತಹ ರಸವೂ ಎಲ್ಲ ಬಗೆಯಿಂದ ಅಸಹ್ಯವಾಗುವಷ್ಟು ಮಟ್ಟಿಗೆ ಕಾಮನ ಮಾಯೆ ಮನವನ್ನು ಮೋಹಿಸಲು ಆತನು ಎಲ್ಲ ವಿಚಾರಗಳನ್ನು ಬಿಟ್ಟು ಸೀತೆಯೊಬ್ಬಳ ವಿಚಾರದಲ್ಲಿ ಮುಳುಗಿ ಕಟ್ಟಿಗೆಯ ಗೊಂಬೆಯಂತೆ (ತೀರ ಸ್ತಬ್ಧನಾಗಿ) ಕಾಣಿಸಿದನು.]

ಇಲ್ಲಿ ಸೀತಾನುರಾಗ ಮಗ್ನನಾದ ರಾವಣನ 'ಜಾಡ್ಯ' ಎಂಬ ಭಾವವು ವರ್ಣಿತವಾಗಿದೆ. ರಾವಣನ ಸೀತಾಲಂಬನಕ ರತಿಯು ಇಲ್ಲಿ ಶೃಂಗಾರರಸರೂಪವಾಗಿದೆ. (ಅನುಚಿತವಾದ—ಪರಸ್ತ್ರೀವಿಷಯಕವಾದ— ರತಿ ಆದದರಿಂದ ಇದು 'ಶೃಂಗಾರಾಭಾಸ' ರಸವು. ಆದರೂ ತನೆಯ ತರಗತಿಯ ರಸದಲ್ಲಿ ಸಮಾವೇಶಮಾಡಲ್ಪಡುವದು.) ಶೃಂಗಾರಕ್ಕೆ ಜಾಡ್ಯಭಾವವು ಅಂಗವಾಗಿದೆ.

ಸಾಮಾನ್ಯ ಭಾವಕ್ಕೆ ಉದಾ :— (ಜಿಂಕೆ)

ನಸುಗೆಂಪು ಮೂಡಲಿನ ಕೊನೆಯಂಚ ನಿಲುಕದಿರೆ। ಬನದಿ ತಂಬೆಲರಾಡೆ ಜಿಂಕೆ ನಡುಗಿ।
ಬಿರಿವ ಕೆಂದಾವರೆಯ ಮೊಗ್ಗಿನಂದದ ಕಣ್ಣ ನಸುದೆರೆದು ನಲ್ಮೆಯಲಿ ಹರಿಣಿಯನು ನೋಡಿ
'ಏಳು ಚೆಲ್ವಿನ ಚದುರೆ, ತಂಗಾಳಿ ಬೀಸುತಿದೆ' ಎಂದರುಹಿ ಮೇಲೆದ್ದು ಜತೆಗೂಡಿ ನಡೆದು
ನಡೆ ಬೆಡಗ ಚಲ್ಲುತಿರೆ ನೋಟ ಮಿಂಚನು ಬೀರೆ ಬನದೊಂದು ಚೆಂದವನು ಮುಂದಾಗಿ ತೋರಿ
ಗಿರಿಯು ಬಳಿ ನಿಂತು ನಿರ್ಝರಿಯು ನೋಡಿ ಹರಿಣಿಯೆಡೆಗಿನ್ನೊಮ್ಮೆ ತಿರುಗುತಿರಲು:—
ಹಮ್ಮೈಸಿ ನೆಲಕುರುಳಿ ಚೀರಿತಹಹಾ! ಕಣೆ ನಾಟಿ ಚಿಮ್ಮುತಿದೆ ಬಿಸಿನೆತ್ತರು ॥

(— ಎ. ಕೆ. ಪುಟ್ಟರಾಮು.)

[ನಿರ್ಝರಿ=ತೊರೆ; ಹಮ್ಮೈಸು=ಮೂರ್ಛೆಹೊಂದು; ಕಣೆ=ಬಾಣ;] ಉಲ್ಲಾಸಕರವಾದ ಸನ್ನಿವೇಶದಲ್ಲಿ ಹರಿಣವು ಹರಿಣಿಯೊಡನೆ ಪ್ರೇಮಾನಂದದ ವಿಲಾಸದಲ್ಲಿ ಮುಳುಗಿರುವಾಗ ಮಾನವನ (ಬೇಡನ) ಕಣೆ ತಾಗಿ ರಕ್ತವು ಚಿಮ್ಮುತಿರಲು ನೆಲಕ್ಕುರುಳಿತು.]

ಈ ಕವಿತೆಯಲ್ಲಿ ಮಾನವನ ಕ್ಷುಧೆಯ ಕ್ರೂರತೆ ಎಷ್ಟು ಕೊನೆಯಂಚಿಗೆ ಮುಟ್ಟಿದೆ ಎಂಬದು ತೋರಿಸಲ್ಪಟ್ಟಿದೆ. ಪ್ರೇಮವಿಲಾಸದಲ್ಲಿ ಮುಳುಗಿರುವ ಹರಿಣ ದಂಪತಿಗಳನ್ನು ನೋಡಿ ನಲಿಯಬೇಕಾದ ಸಂದರ್ಭದಲ್ಲಿ ಬಾಣ ಹೊಡೆದು ಕೊಲ್ಲುತ್ತಾನೆ! ಕ್ರೂರ ಮಾನವಾ ನಿನ್ನ ಈ ಕ್ರೂರ ಕ್ಷುಧೆ ಹಾಳಾಗಿ ಹೋಗಲಿ!

೩. ಗುಣಗಳು— ಕಾವ್ಯಗಳಲ್ಲಿ ರಸಕ್ಕೆ ಅಂಗಭೂತವಾದ ಗುಣಗಳು ಮೂರು ಹೇಳಲ್ಪಟ್ಟಿವೆ. ೧. ಮಾಧುರ್ಯ ೨. ಓಜಸ್ಸು ೩. ಪ್ರಸಾದ. ಮಾಧುರ್ಯವೆಂದರೆ ಚಿತ್ತದ ದ್ರವೀಭಾವವು—ಮನವು ಕರಗಿದಂತಾಗಿ ಆನಂದಾಭಿಮುಖವಾಗುವದು—,

ಉದಾ : ಹಾರಮುರೀಚಿಮಂಜರಿ ಸುಧಾರಸ ಧಾರೆ ಸುಧಾಂಶುಲೇಖೆ ಕ।
ಪ್ಪೂರಶಿಲಾಳಿ ನೇತ್ರಸುಖದಾಯಕವಿನಾಡೊರೆಕಲ್ಲಮಾಕೆಳ್ಕಂ
ಗಾರ ಸಮುದ್ರಮಂ ಕಡೆಯೆ ಹೃದ್ಭವನುದ್ಭವೆಯಾದಳೆಂದು ಕ।
ಣ್ಣಾರೆ ದಶಾಸ್ಯನೀಕ್ಷಿಸಿದನೀಕ್ಷಿಸಿ ಕಣ್ಣರಿದಾರೆ ಮನ್ಮಥಂ

(ಸಂ. ರಾ. ಸರ. ೧-೪೫)

[— ಸೀತೆಯನ್ನು ಎಲ್ಲಕ್ಕೂ ಮೊದಲು ಕಂಡಾಗ ರಾವಣನು—ಮುತ್ತಿನ ಸರದ ಕಾಂತಿಯುಗೊಂಚಲು, ಅಮೃತಧಾರೆ, ಚಂದ್ರಲೇಖೆ, ಕರ್ಪೂರದ ಕಡ್ಡಿ ಇವೆಲ್ಲ ಇಷ್ಟು

---

* ಈ ಕವಿತೆ ಓದುವಾಗ ವಾಲ್ಮೀಕಿ ಮುನಿ ಸ್ನಾನಕ್ಕೆ ಹೊರಟಾಗ ಕ್ರೌಂಚಪಕ್ಷಿ ದಂಪತಿಗಳಲ್ಲಿ ಕಾಮಮೋಹಿತವಾದ ಗಂಡನ್ನು ಬಾಣದಿಂದ ಹೊಡೆದ ಬೇಡನನ್ನು ಆ ಮುನಿ ಕೋಪದಿಂದ—

ಮಾನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ।
ಯತ್ಕ್ರೌಂಚ ಮಿಥುನಾದೇಕಮವಧೀಃ ಕಾಮಮೋಹಿತಂ ॥

ಎಂದು ಶಪಿಸಿದ ಶ್ಲೋಕವು ನೆನಪಾಗುತ್ತದೆ. ಈ ಶ್ಲೋಕವೇ ಅರ್ಥಾಂತರದಿಂದ ರಾಮಾಯಣದ ಮುಂಗಲ ಶ್ಲೋಕವಾಗಿದೆ.

(ಸೀತೆಯಷ್ಟು) ನೇತ್ರಾನಂದವನ್ನು ಕೊಡುವಂಥವಲ್ಲ; ಈಕೆ ಕಾಮನು ಶೃಂಗಾರ ಸಮುದ್ರವನ್ನು ಕಡೆಯಲು ಹುಟ್ಟಿದವಳು. (ಸಾಮಾನ್ಯ ಸಮುದ್ರವನ್ನು ದೇವದಾನವರು ಕಡೆಯಲು ಹುಟ್ಟಿದ ಲಕ್ಷ್ಮೀದೇವಿಗಿಂತ ಹೆಚ್ಚಿನವಳು.) ಎಂದು (ಬೆರಗು ಬಡುತ್ತ) ಕಣ್ಣು ತಣಿಯುವಷ್ಟು ನೋಡುತ್ತಿರಲು ಈತನ ಕಣ್ಣಿನ ಭಾವವನ್ನು ತಿಳಿದು ಮನ್ಮಥನು (ತನಗೆ ಗೆಲುವಾಗುವದೆಂಬ ಭಾವದಿಂದ) ಕೂಗುತ್ತಿದ್ದನು.]

ಇಲ್ಲಿ ವರ್ಣಿಸಿದ ಸೀತೆಯ ಸೌಂದರ್ಯಾತಿಶಯ, ಉಪಮೆಗಾಗಿ ತೆಗೆದುಕೊಂಡ ವಸ್ತುಗಳು, ಸೀತೆಯ ಉತ್ಪತ್ತಿಯನ್ನು ಕುರಿತ ಊಹೆ, ಸೀತೆಯ ಸೌಂದರ್ಯಕ್ಕೆ ರಾವಣನಂತಹ ಸತ್ವಶೀಲನ ಸೋಲು ಮುಂತಾದವನ್ನು ಮನದಲ್ಲಿ ಬಗೆಯುತ್ತಿರುವಾಗ ಮನವು ಕರಗುವದು, ಆನಂದಾಭಿಮುಖವಾಗುವದು.

೨. **ಓಜಸ್ಸು** :— ಚಿತ್ತವು ದೀಪ್ತಿಗೊಳ್ಳುವದು, ವಿಕಸಿತವಾಗುವದು, ಆವೇಶಗೊಂಡಂತಾಗುವದು ಓಜಸ್ಸು ಎನಿಸುವದು.

ಉದಾ : ಚರಣಾಕ್ರಾಂತಂ ಮಹೀಮಂಡಲವುದಿರೆ ಭುಜಕ್ರಾಂತವಾಶಾಗಜೇಂದ್ರೋ-
ತ್ಕರವಾಶಾಭಿತ್ತಿಯಿಂ ಹೆರಪಡೆಯೆ ಗದಾಕ್ರಾಂತವುದ್ಭ್ರಾಂತವಿದ್ಯಾ-
ಧರ ಚಕ್ರಂ ಗೆಂಟುಗೆಂಟಾಗಿರಿಸೆ ನಿಜವಿಮಾನಂಗಳಂ ಭೈರವಾಡಂ
ಬರವಾಳಲ್ಪಾಂತಕಾಲಂ ನೆಗಳ್ದುದು ಸಮರಂ ಭೀಮದುರ್ಯೋಧನೀಯಂ ॥

ಇದುಲಾಕ್ಷಾಗೇಹದಾಹಕ್ಕಿದು ವಿಷವುವಿಷಾನ್ನಕ್ಕಿದಾನಾಡಜೂದಿಂ
ಗಿದು ಪಾಂಚಾಲೀ ಪ್ರಪಂಚಕ್ಕಿದು ಕೃತಕ ಸಭಾಲೋಕನ ಭ್ರಾಂತಿಗೆಂದೋ
ವದೆ ಪೊಯ್ದುಂ ಕಾಲ್ಗಳಂ ತೋಳ್ಗಳಿನಗಲ್ದುರವುಂ ಕೆನ್ನೆಯುಂ ನೆತ್ತಿಯುಂ ಕೋ-
ಪದಿನೈದುಂ ದುರ್ಜಯಕ್ಕೈದೆಡೆಯನುರುಗದಾದಂಡದಿಂ ಭೀಮಸೇನಂ ॥

(ರನ್ನನ ಗದಾಯುದ್ಧ)

[ಭೀಮ ದುರ್ಯೋಧನರ ಗದಾಯುದ್ಧದ ವರ್ಣನೆ— ಅವರು ಕಾಲಿಂದ ಮೆಟ್ಟಿದಾಗ ನೆಲವು ಅದುರುತ್ತಿರಲು, ತೋಳುಗಳನ್ನು ಬೀಸಿದಾಗ ದಿಗ್ಗಜಗಳು ದಿಕ್ಕುಗಳಿಂದ ಆಚೆಗೆ ಹೋಗುತ್ತಿರಲು, ಮೇಲ್ಗಡೆಗೆ ಗದೆಗಳನ್ನು ಎತ್ತಿದಾಗ ಆಕಾಶದಲ್ಲಿ ನೆರೆದ ವಿದ್ಯಾಧರರು ತಮ್ಮ ವಿಮಾನಗಳನ್ನು (ಗದೆ ತಾಕೀತೆಂದು) ದೂರಕ್ಕೆ ಒಯ್ಯುತ್ತಿರಲು ಪ್ರಳಯ ಭೈರವನ ಆಡಂಬರದಿಂದ ಭೀಮ ದುರ್ಯೋಧನರ ಗದಾಯುದ್ಧವು ಬಹುಕಾಲ ನಡೆಯಿತು.

ಭೀಮಸೇನನು, (ಒಂದೊಂದು ಏಟನ್ನು ಹಾಕುತ್ತಿರುವಾಗ) ದುರ್ಯೋಧನನಿಗೆ— ಇದು ಅರಗಿನ ಮನೆಯಲ್ಲಿ ನಮ್ಮನ್ನು ಸುಡಲು ಯತ್ನಿಸಿದ್ದಕ್ಕೆ, ಇದು ನನಗೆ ವಿಷಮಿಶ್ರಿತ ಅನ್ನವನ್ನು ಹಾಕಿದ್ದಕ್ಕೆ, ಇದು ರಾಜ್ಯಾಪಹಾರಕ್ಕಾಗಿ ಹೂಡಿದ ಜೂಜಿಗೆ, ಇದು ದ್ರೌಪದೀ ದೇವಿಯನ್ನು ಅಪಮಾನಗೊಳಿಸಿದ್ದಕ್ಕೆ, ಇದು ಸಭಾಡಂಬರವನ್ನು (ನಮ್ಮ ಅಪಮಾನಕ್ಕಾಗಿ) ತೋರಿಸಿದ್ದಕ್ಕೆ ಈ ನಿನ್ನ ಅಯ್ದು ಅಪರಾಧಗಳಿಗಾಗಿ ನಿನ್ನ ಅಯ್ದು ಅಂಗಗಳನ್ನು ಹೊಡೆಯುವೆನೆಂದು ಕಾಲು, ಕೈ, ಎದೆ, ಕೆನ್ನೆ, ನೆತ್ತಿಗಳನ್ನು ತನ್ನ ಗದಾದಂಡದಿಂದ ಹೊಯ್ದನು.]

ಇಲ್ಲಿ ರೌದ್ರರಸಕ್ಕೆ ಅನುಕೂಲವಾಗಿ ಸವಾಸಬಾಹುಲ್ಯ, ಕರ್ಕಶ ವರ್ಣಯುಕ್ತ ಶಬ್ದ ಉದ್ಧತ ರಚನೆ ಇವೆಲ್ಲವುಗಳಿಂದ ಓಜೋಗುಣವು ವ್ಯಕ್ತವಾಗಿರುವದು.

ಅಂಭಃ ಕುಂಭೀನ ಕುಂಭೀನಸಮುಕರ ಮಹಾಕೂರ್ಮ ಕೀರ್ಣೋರ್ಮಿ ಮಾಲಾ ।
ಜೃಂಭದ್ಭಂಭೋಳಿ ಹಸ್ತಾಹತ ಚಕಿತಗತಕ್ಷ್ವಾಧ್ರ ವಿಸ್ಫಾರನಿದ್ಯು-
ತ್ಸಂಭಿನ್ನಾಂಭೋಭೃದುದ್ಯತ್ತಟ ಚಪಲಚಲನ್ಮೀನ ಫೇನಪ್ರತಾನಂ
ಶುಂಭದ್ಗಂಭೀರಿಮಂ ರಂಜಿಸಿದುದಮಮ ದತ್ತೇಂದ್ರ ಭದ್ರಂ ಸಮುದ್ರಂ ॥

(ರಾಜಶೇಖರವಿಲಾಸ)

ಇಲ್ಲಿ ಸಮುದ್ರ ವರ್ಣನೆಯಲ್ಲಿ ಕಠೋರ ವರ್ಣಯುಕ್ತ ಶಬ್ದರಚನೆ ಓಜೋವ್ಯಂಜಕವಾಗಿದೆ.

ಪ್ರಸಾದ:— ಓದಿದೊಡನೆ ಸಹಜವಾಗಿ ಅರ್ಥವಾಗುವಂತಹ ರಚನೆಯಲ್ಲಿ ಪ್ರಸಾದ ಗುಣವನ್ನು ಹೇಳುವರು.

ಉದಾ: ತಳಿರ್ಗಳಿನೊರ್ಮೆ ಪೊಗುಡಿಯಿನೊರ್ಮೆ ಪಸುರ್ಮಿಡಿಯಿಂದಮೊರ್ಮೆಕಾ।
ಯ್ದಳಿನಿರದೊರ್ಮೆ ಪಣ್ಗಳಿನದೊರ್ಮೆ ಜಗಕ್ಕೆ ಮನಃಪ್ರಮೋದಮಂ ॥
ಬಳೆಯಿಸಿ ಮಾಣ್ದುದಲ್ತು ಸನಿಯಂ ಕವಿಗೋಲಗಿಸಿತ್ತು ಮತ್ತೆ ಕೋ- ।
ಕಿಳರವದೊರ್ಮೆ ಭೃಂಗರುತದೊರ್ಮೆ ಪಿಕಸ್ವರದೊರ್ಮೆ ಮಾಮರಂ ॥

ಈ ಮಾವಿನ ಮರದ ವರ್ಣನೆ ಸಹಜವಾಗಿ ಅರ್ಥವಾಗುವದರಿಂದ ಇಲ್ಲಿ ಪ್ರಸಾದ ಗುಣವಿದೆ.

ಈ ವೆರೆಗೆ ಹೇಳಿದೆ ರಸ, ರಸಾಭಾಸ, ಭಾವ, ಭಾವಾಭಾಸ, (ರಸಾನುಕೂಲ) ಗುಣ ಇವುಗಳಿಂದ ಕೂಡಿರುವ ಕಾವ್ಯವು ಉತ್ತಮ ತರಗತಿಯ ಕಾವ್ಯವು. ರಸಭಾವಗಳಿಲ್ಲದ ಅಲಂಕಾರ ಪ್ರಧಾನಕಾವ್ಯವು ಮಧ್ಯಮ ತರಗತಿಯದು. ಇಲ್ಲಿ ಕೆಲವು ಅಲಂಕಾರಯುಕ್ತ ಕವಿತೆಗಳನ್ನು ಉದಾಹರಿಸುವೆವು:

ಉತ್ಪ್ರೇಕ್ಷೆ: ಒದವಿದ ಕೋಪವಹ್ನಿಯುರಿಯುಂ ಪೊಗೆಯುಂ ನೆಗೆವಂತೆ ಪದ್ಮರಾ। ಗದ ಹರಿನೀಲ-
ದುನ್ಮಯೂಖವಿಭೂಷಣರಶ್ಮಿ ಪಗಂಡುಗೊಳ್ವಿನಂ॥ಕದನಮುದೋದ್ಧತಂ ಖಚರನಾಯಕರಂ
ಬರವೇಳ್ದು ಸಿಂಹಪೀ। ಠದಿನಿರದೆದ್ದನಪ್ತನಿತ ಪುಣ್ಯದಶಾನನನಾದಶಾನನಂ ॥

(ಪ. ರಾ. ಸಂ. ೯. ೪೦)

ಕೋಪಾವೇಶದಲ್ಲಿ ಸಿಂಹಾಸನದಿಂದ ರಾವಣನು ಎದ್ದು ನಿಲ್ಲಲು ಆತನು ಧರಿಸಿದೆ ಪದ್ಮರಾಗ ರತ್ನಾಭರಣ ಕಾಂತಿಯು ಆತನ ಕೋಪಾಗ್ನಿಜ್ವಾಲೆಯೋ ಎಂಬಂತೆ, ಇಂದ್ರನೀಲ ರತ್ನಾಭರಣಕಾಂತಿಯು ಕೋಪಾಗ್ನಿಯ ಹೊಗೆಯೋ ಎಂಬಂತೆ ಕಾಣಿಸಿದ-ನೆಂದು ಉತ್ಪ್ರೇಕ್ಷೆಯಿದೆ.

ಇನ್ನೊಂದು ಉ:— ಇನನುಳಿದಂ ವಸಂತನನುಮುರ್ಚಿದನಿತ್ತಲುವುಗ್ಗಿಯಿತ್ತ ಸ ।
ಮ್ಮನಿಸಿದ ರಕ್ಕಸಂ ಬಳಿಕಮಾಂ ನಡುವೆಂಬವೊಲಾದುವಾನೆ ಭಾ ।
ಜನವೆನಿಸಿರ್ದನಂತಕನಡುರ್ಕೆಗೆ ಪೋಪೆರತಾವುದೆಂಬದು-
ರ್ಮನದೊಳಿದಕ್ಷಿಣಾಶೆ ನಿಡುಸುಯ್ದುವೊಲಾದುದು ದಕ್ಷಿಣಾನಿಲಂ ॥

(ಚಂದ್ರಪ್ರಭ ಪು.)

[—ಇನ, ಪತಿ, ಸೂರ್ಯ; ವಸಂತ=ವಿಟ, ವಸಂತರ್ತು; ಅಡುರ್ಕೆ=ಆಕ್ರಮಣ.

ಉತ್ತರಾಯಣದ ಆರಂಭದಲ್ಲಿ— ವಸಂತಾಗಮನದಲ್ಲಿ— ದಕ್ಷಿಣಾನಿಲ ಇಲ್ಲವೆ, ಮಲಯಾನಿಲವು ನಮ್ಮ ದೇಶದಲ್ಲಿ ಬೀಸುವದಷ್ಟೆ. ಅದನ್ನು ಕವಿ ದಕ್ಷಿಣದಿಗಂಗನೆಯ

(ಸೀತೆಯಷ್ಟು) ನೇತ್ರಾನಂದವನ್ನು ಕೊಡುವಂಥವಲ್ಲ; ಈಕೆ ಕಾಮನು ಶೃಂಗಾರ ಸಮುದ್ರವನ್ನು ಕಡೆಯಲು ಹುಟ್ಟಿದವಳು. (ಸಾಮಾನ್ಯ ಸಮುದ್ರವನ್ನು ದೇವದಾನವರು ಕಡೆಯಲು ಹುಟ್ಟಿದ ಲಕ್ಷ್ಮೀದೇವಿಗಿಂತ ಹೆಚ್ಚಿನವಳು.) ಎಂದು (ಬೆರಗು ಬಡುತ್ತ) ಕಣ್ಣು ತಣಿಯುವಷ್ಟು ನೋಡುತ್ತಿರಲು ಈತನ ಕಣ್ಣಿನ ಭಾವವನ್ನು ತಿಳಿದು ಮನ್ಮಥನು (ತನಗೆ ಗೆಲುವಾಗುವದೆಂಬ ಭಾವದಿಂದ) ಕೂಗುತ್ತಿದ್ದನು.]

ಇಲ್ಲಿ ವರ್ಣಿಸಿದ ಸೀತೆಯ ಸೌಂದರ್ಯಾತಿಶಯ, ಉಪಮೆಗಾಗಿ ತೆಗೆದುಕೊಂಡ ವಸ್ತುಗಳು, ಸೀತೆಯ ಉತ್ಪತ್ತಿಯನ್ನು ಕುರಿತ ಊಹೆ, ಸೀತೆಯ ಸೌಂದರ್ಯಕ್ಕೆ ರಾವಣನಂತಹ ಸತ್ವಶೀಲನ ಸೋಲು ಮುಂತಾದವನ್ನು ಮನದಲ್ಲಿ ಬಗೆಯುತ್ತಿರುವಾಗ ಮನಸ್ಸು ಕರಗುವದು, ಆನಂದಾಭಿಮುಖವಾಗುವದು.

೨. **ಓಜಸ್ಸು** :— ಚಿತ್ತವು ದೀಪ್ತಿಗೊಳ್ಳುವದು, ವಿಕಸಿತವಾಗುವದು, ಆವೇಶಗೊಂಡಂತಾಗುವದು ಓಜಸ್ಸು ಎನಿಸುವದು.

ಉದಾ : ಚರಣಾಕ್ರಾಂತಂ ಮಹೀಮಂಡಲವಾದಿರೆ ಭುಜಕ್ರಾಂತವಾಶಾಗಜೇಂದ್ರೋ-
ತ್ಕರವಾಶಾಭಿತ್ತಿಯಿಂ ಪೆರದೆಗೆಯೆ ಗದಾಕ್ರಾಂತಮುದ್ಯಾ್ರಂತವಿದ್ಯಾ-
ಧರ ಚಕ್ರಂ ಗೆಂಟುಗೆಂಟಾಗಿರಿಸೆ ನಿಜವಿಮಾನಂಗಳಂ ಭೈರವಾಡಂ
ಬರಮಾಕಲ್ಪಾಂತಕಾಲಂ ನೆಗಳ್ದುದು ಸಮರಂ ಭೀಮದುರ್ಯೋಧನೀಯಂ ||

ಇದುಲಾಕ್ಷಾಗೇಹದಾಹಕ್ಕಿದು ವಿಷಮವಿಷಾನ್ನಕ್ಕಿದಾನಾಡಜೂದಿಂ
ಗಿದು ಪಾಂಚಾಲೀ ಪ್ರಪಂಚಕ್ಕಿದು ಕೃತಕ ಸಭಾಲೋಕನ ಭ್ರಾಂತಿಗೆಂದೋ
ವದೆ ಪೊಯ್ದುಂ ಕಾಲ್ಗಳಂ ತೋಳ್ಗಳನಗಲ್ದುರಮಂ ಕೆನ್ನೆಯುಂ ನೆತ್ತಿಯುಂ ಕೋ-
ಪದಿನೈದುಂ ದುರ್ಣಯಕ್ಕೈದೆಡೆಯನುರುಗದಾದಂಡದಿಂ ಭೀಮಸೇನಂ ||

(ರನ್ನನ ಗದಾಯುದ್ಧ)

[ಭೀಮ ದುರ್ಯೋಧನರ ಗದಾಯುದ್ಧದ ವರ್ಣನೆ— ಅವರು ಕಾಲಿಂದ ಮೆಟ್ಟಿದಾಗ ನೆಲವು ಅದುರುತ್ತಿರಲು, ತೋಳುಗಳನ್ನು ಬೀಸಿದಾಗ ದಿಗ್ಗಜಗಳು ದಿಕ್ಕುಗಳಿಂದ ಆಚೆಗೆ ಹೋಗುತ್ತಿರಲು, ಮೇಲ್ಗಡೆಗೆ ಗದೆಗಳನ್ನು ಎತ್ತಿದಾಗ ಆಕಾಶದಲ್ಲಿ ನೆರೆದ ವಿದ್ಯಾಧರರು ತಮ್ಮ ವಿಮಾನಗಳನ್ನು (ಗದೆ ತಾಕೀತೆಂದು) ದೂರಕ್ಕೆ ಒಯ್ಯುತ್ತಿರಲು ಪ್ರಳಯ ಭೈರವನ ಆಡಂಬರದಿಂದ ಭೀಮ ದುರ್ಯೋಧನರ ಗದಾಯುದ್ಧವು ಬಹುಕಾಲ ನಡೆಯಿತು.

ಭೀಮಸೇನನು, (ಒಂದೊಂದು ಏಟನ್ನು ಹಾಕುತ್ತಿರುವಾಗ) ದುರ್ಯೋಧನನಿಗೆ— ಇದು ಅರಗಿನ ಮನೆಯಲ್ಲಿ ನಮ್ಮನ್ನು ಸುಡಲು ಯತ್ನಿಸಿದ್ದಕ್ಕೆ, ಇದು ನನಗೆ ವಿಷಮಿಶ್ರಿತ ಅನ್ನವನ್ನು ಹಾಕಿದ್ದಕ್ಕೆ, ಇದು ರಾಜ್ಯಾಪಹಾರಕ್ಕಾಗಿ ಹೂಡಿದ ಜೂಜಿಗೆ, ಇದು ದ್ರೌಪದೀದೇವಿಯನ್ನು ಅಪಮಾನಗೊಳಿಸಿದ್ದಕ್ಕೆ, ಇದು ಸಭಾಡಂಬರವನ್ನು (ನಮ್ಮ ಅಪಮಾನಕ್ಕಾಗಿ) ತೋರಿಸಿದ್ದಕ್ಕೆ ಈ ನಿನ್ನ ಅಯ್ದು ಅಪರಾಧಗಳಿಗಾಗಿ ನಿನ್ನ ಅಯ್ದು ಅಂಗಗಳನ್ನು ಹೊಡೆಯುವೆನೆಂದು ಕಾಲು, ಕೈ, ಎದೆ, ಕೆನ್ನೆ, ನೆತ್ತಿಗಳನ್ನು ತನ್ನ ಗದಾದಂಡದಿಂದ ಹೊಯ್ದನು.]

ಇಲ್ಲಿ ರೌದ್ರರಸಕ್ಕೆ ಅನುಕೂಲವಾಗಿ ಸಮಾಸಬಾಹುಲ್ಯ, ಕರ್ಕಶ ವರ್ಣಯುಕ್ತ ಶಬ್ದ ಉದ್ಧತ ರಚನೆ ಇವೆಲ್ಲವುಗಳಿಂದ ಓಜೋಗುಣವು ವ್ಯಕ್ತವಾಗಿರುವದು.

ಅಂಭಃ ಕುಂಭೀನ ಕುಂಭೀನಸಮುಕರ ಮಹಾಕೂರ್ಮ ಕೀರ್ಣೋರ್ಮಿಮಾಲಾ ।
ಜೃಂಭದ್ಭಂಭೋಳಿ ಹಸ್ತಾಹತ ಚಕಿತಗತಕ್ಷ್ಮಾಧ್ರ ವಿಸ್ಫಾರನಿದ್ಯು-
ತ್ಸಂಭಿನ್ನಾಂಭೋಭೃದುದ್ಯತ್ತಟ ಚಪಲಚಲನ್ಮೀನ ಫೇನಪ್ರತಾನಂ
ಶುಂಭದ್ಗಂಭೀರಿಮಂ ರಂಜಿಸಿದುದಮುದತ್ತೇಂದ್ರ ಭದ್ರಂ ಸಮುದ್ರಂ ॥

(ರಾಜಶೇಖರವಿಲಾಸ)

ಇಲ್ಲಿ ಸಮುದ್ರ ವರ್ಣನೆಯಲ್ಲಿ ಕಠೋರ ವರ್ಣಯುಕ್ತ ಶಬ್ದರಚನೆ ಓಜೋವ್ಯಂಜಕವಾಗಿದೆ.

ಪ್ರಸಾದ:— ಓದಿದೊಡನೆ ಸಹಜವಾಗಿ ಅರ್ಥವಾಗುವಂತಹ ರಚನೆಯಲ್ಲಿ ಪ್ರಸಾದ ಗುಣವನ್ನು ಹೇಳುವರು.

ಉದಾ: ತಳಿರ್ಗಳಿನೊರ್ವೆ ಪೂಗುಡಿಯಿನೊರ್ವೆ ಪಸುರ್ಮಿಡಿಯಿಂದಮೊರ್ವೆಕಾ।
ಯ್ದಳಿನಿರದೊರ್ವೆ ಪಣ್ಗಳಿನದೊರ್ವೆ ಜಗಕ್ಕೆ ಮನಃಪ್ರಮೋದಮಂ ॥
ಬಳೆಯಿಸಿ ಮಾಣ್ದುದಲ್ತು ಸವಿಯಂ ಕವಿಗೋಲಗಿಸಿತ್ತು ಮತ್ತೆ ಕೋ- ।
ಕಿಳರವದೊರ್ವೆ ಭೃಂಗರುತದೊರ್ವೆ ಪಿಕಸ್ವರದೊರ್ವೆ ಮಾಮರಂ ॥

ಈ ಮಾವಿನ ಮರದ ವರ್ಣನೆ ಸಹಜವಾಗಿ ಅರ್ಥವಾಗುವದರಿಂದ ಇಲ್ಲಿ ಪ್ರಸಾದ ಗುಣವಿದೆ.

ಈ ವೆರೆಗೆ ಹೇಳಿದ ರಸ, ರಸಾಭಾಸ, ಭಾವ, ಭಾವಾಭಾಸ, (ರಸಾನುಕೂಲ) ಗುಣ ಇವುಗಳಿಂದ ಕೂಡಿರುವ ಕಾವ್ಯವು ಉತ್ತಮ ತರಗತಿಯ ಕಾವ್ಯವು. ರಸಭಾವಗಳಿಲ್ಲದ ಅಲಂಕಾರ ಪ್ರಧಾನಕಾವ್ಯವು ಮಧ್ಯಮ ತರಗತಿಯದು. ಇಲ್ಲಿ ಕೆಲವು ಅಲಂಕಾರಯುಕ್ತ ಕವಿತೆಗಳನ್ನು ಉದಾಹರಿಸುವೆವು:

ಉತ್ಪ್ರೇಕ್ಷೆ: ಒದನಿದ ಕೋಪವಹ್ನಿಯುರಿಯುಂ ಪೊಗೆಯುಂ ನೆಗೆಪಂತೆ ಪದ್ಮರಾ। ಗದ ಹರಿನೀಲ-
ದುನ್ಮಯಿಭೂಷಣರಶ್ಮಿ ಪಗಂಡುಗೊಳ್ವಿನಂ॥ಕದನಮುದೋದ್ಧತಂ ಖಚರನಾಯಕರಂ
ಬಕವೇಳ್ವ ಸಿಂಹಸೀ। ತದಿನಿರದೆಳ್ದನಸ್ತಮಿತ ಪುಣ್ಯದಶಾನನನಾದಶಾಸನಂ ॥

(ಪ. ರಾ. ಸಂ. ೯. ೪೦)

ಕೋಪಾವೇಶದಲ್ಲಿ ಸಿಂಹಾಸನದಿಂದ ರಾವಣನು ಎದ್ದು ನಿಲ್ಲಲು ಅತನು ಧರಿಸಿದ ಪದ್ಮರಾಗ ರತ್ನಾಭರಣ ಕಾಂತಿಯು ಅತನ ಕೋಪಾಗ್ನಿ ಜ್ವಾಲೆಯೋ ಎಂಬಂತೆ, ಇಂದ್ರನೀಲ ರತ್ನಾಭರಣಕಾಂತಿಯು ಕೋಪಾಗ್ನಿಯ ಹೊಗೆಯೋ ಎಂಬಂತೆ ಕಾಣಿಸಿದ-ವೆಂದು ಉತ್ಪ್ರೇಕ್ಷೆಯಿದೆ.

ಇನ್ನೊಂದು ಉ:— ಇನನುಳಿದಂ ವಸಂತನುಮುರ್ಬಿದನಿತ್ತಲುವಗ್ನಿಯಿತ್ತ ಪ ।
ಮ್ಮನಿಸಿದ ರಕ್ಕಪಂ ಬಳಿಕವಾಂ ನಡುವೆಂಬವೊಲಾದುದಾನೆ ಭಾ ।
ಜನವೆನಿಸಿರ್ದನಂತಕನಡುರ್ಕಿಗೆ ಪೋಪೆರತಾವುದೆಂಬದು-
ರ್ಮನದೊಳಿದಕ್ಷಿಣಾಶೆ ನಿಡುಸುಯ್ದು ಪೊಲಾವುದು ದಕ್ಷಿಣಾನಿಲಂ ॥

(ಚಂದ್ರಪ್ರಭ ಪು.)

[—ಇನ, ಪತಿ, ಸೂರ್ಯ; ವಸಂತ=ವಿಟ, ವಸಂತರ್ತು; ಅಡುರ್ಕೆ=ಆಕ್ರಮಣ.

ಉತ್ತರಾಯಣದ ಆರಂಭದಲ್ಲಿ— ವಸಂತಾಗಮನದಲ್ಲಿ— ದಕ್ಷಿಣಾನಿಲ ಇಲ್ಲವೆ, ಮಲಯಾನಿಲವು ನಮ್ಮ ದೇಶದಲ್ಲಿ ಬೀಸುವದಷ್ಟೆ. ಆದನ್ನು ಕವಿ ದಕ್ಷಿಣದಿಗಂಗನೆಯ

ನಿಟ್ಟುಸಿರೋ ಎಂದು ಉತ್ಪ್ರೇಕ್ಷಿಸಿದ್ದಾನೆ. ದಕ್ಷಿಣದಿಗಂಗನೆಗೆ ನಿಟ್ಟುಸಿರುಬಿಡುವಂತಹ ಆಪತ್ತು ಏನು ಎಂದರೆ ಹೇಳುತ್ತಾನೆ: ಇನನು (ಸೂರ್ಯ; ಗಂಡ) ತೊರೆದನು; (ಉತ್ತರಾಯಣಾರಂಭದಲ್ಲಿ ಸೂರ್ಯನು ದಕ್ಷಿಣದಿಕ್ಕನ್ನು ಬಿಟ್ಟು ಉತ್ತರಕ್ಕೆ ಅಡಿಯಿಡುತ್ತಾನೆ.) ವಸಂತನು (ಏಟನು; ವಸಂತಋತು) ಅಮರಿಕೊಂಡನು; (ಆಗ ದಕ್ಷಿಣದಲ್ಲಿ ವಸಂತಋತು ತಲೆದೋರುತ್ತದೆ.) ನೆರೆಹೊರೆಯೋ? ಕೇಳುವದೇ ಬೇಡ; ಇತ್ತ ಅಗ್ನಿ (ದಕ್ಷಿಣದಿಕ್ಕಿನ ಒಂದು ಬದಿಗೆ ಆಗ್ನೇಯದಿಕ್ಕು; ಅದರ ದಿಕ್ಪಾಲ ಅಗ್ನಿ) ಇತ್ತ ರಕ್ಕಸನ (ಇನ್ನೊಂದು ಬದಿಗೆ ನೈಋತ್ಯ ದಿಕ್ಕು; ಅದರ ದಿಕ್ಪಾಲ ನಿರ್ಋತಿ) (ಅವನು ರಾಕ್ಷಸ) ನಾನು (ದಕ್ಷಿಣದಿಕ್ಕು) ಇವರಿಬ್ಬರನಡುವೆ; ಇದಲ್ಲದೆ ನಾನೇ ಯಮನ ಆಕ್ರಮಣವನ್ನು ಹೊಂದಿರುವೆ; (ದಕ್ಷಿಣದಿಕ್ಪಾಲನು ಯಮನು.) ಇದಕ್ಕೂ ಹೆಚ್ಚಿನ ದುಃಸ್ಥಿತಿ ಏನಿದೆ ಎಂಬ ದುರ್ಮಾನದಿಂದ ಆ ದಕ್ಷಿಣದಿಗಂಗನೆ ನಿಡುಸುಯ್ದಿರಬೇಕು.]

ಸಮಾಸೋಕ್ತಿ—

ತೇಜವಡಗಿಸು ಲೋಕಬಾಹಿರ | ರೋಜೆಯತಾಯಿತು ಗತಿಯ ಕಾಣೆ ಸ
ರೋಜಿನಿಯನಿಂದಗಲ್ದೆನಂಬರ ಮೊದಲೆ ಬಯಲಾಯ್ತು ॥
ಈ ಜಗವ ತಿರುತಿರುಗಿ ನೊಂದೆನು ಮಾಜಲೇನಸು ದೊರೆವೆನೆಂದಂ-
ಭೋಜ ಸಮನಪರಾದ್ರಿಯಡರ್ದನು ಬಿದ್ದನಬ್ಧಿಯಲಿ ॥

(ಸನತ್ಕುಮಾರ ಷಟ್ಪದಿ.)

ಇದೇ ತರದ ಭಾವವುಳ್ಳ ಇನ್ನೊಂದು ಪದ್ಯ:—

ಭವಬದ್ಧ ಕ್ರೋಧದಿಂ ಸಂಧಿಸೆ ಪೆರಗೆ ತನುಂ, ಸ್ಥಾನಮುಂ ಬಿಟ್ಟು, ತೇಜಂ-
ತವೆ, ಶೋಕಂ ಚಕ್ರವಾಕಕ್ಕೊಡರಿಸೆ, ದಿನಸಶ್ರೀಯನೀಡಾಡಿ, ಕೈಕೊಂ-
ಡವರೋಧ ಸ್ತ್ರೀಯರಂ ಪದ್ಮಿನಿಯರನಿನಿಸುಂ ನೋಡದುತ್ತಾನಪಾದಂ-
ದಿವಸೇಂದ್ರಂ ಭೀತಿಯಿಂದಂಬರಮನುಳಿದು ವಾರಾಶಿಯಂ ಪೋಗಿ ಪೊಕ್ಕಂ ॥

ಸ್ವಭಾವೋಕ್ತ್ಯಲಂಕಾರ:—

(ಸೀತಾವಿಯೋಗ ದುಃಖದಿಂದ ಮೂರ್ಛೆಹೊಂದಿ ಎಚ್ಚರುತ್ತಿದ್ದ ರಾಮನ ವರ್ಣನೆ.)

ಸಸುಬಿಸುಸೇರೆ ಜೊಯ್ ಮುಗುಳೆ ಕೆತ್ತುವ ತಾಣವೆ ಕೆತ್ತೆವುಂದ ವಾ-
ಡುಸಿಗಳ ನಾಸಿಕಾಪುಟಕುಲದಿಂದಿನಿಸುಂ ಪೊರಪೊಣ್ಮೆತಳ್ತು ಸಂ-
ಧಿಸಿದೆವೆ ಬಿರ್ಚಿ ಕಣ್ಮಲರ್ಗಳುಳ್ಳಲಡುತ್ತಿರೆ ಜಾನಕೀಯೆನುತ್ತ.
ತ್ತಸಿಬುಸಿದರ್ದನಾ ರಘುಕುಲಾಂಬರ ಚಂಡಮರೀಚಿ ಮೂರ್ಛೆಯಿಂ ॥

[— ತಣ್ಣಗಾದ ಮೈ ಸ್ವಲ್ಪ ಬೆಚ್ಚಗಾಗುತ್ತಿರಲು, ಹಾರಬೇಕಾದ ಅಂಗಗಳೆಲ್ಲ ಮತ್ತೆ ಹಾರುತ್ತಿರಲು, ಮೂಗಿನಿಂದ ಮಂದವಾದ ಉಸಿರು ಹೊರಹೊರಡುತ್ತಿರಲು, ಗಟ್ಟಿಯಾಗಿ ಅಂಟಿಕೊಂಡ ಎವೆಗಳು ಸ್ವಲ್ಪ ಬಿಚ್ಚುತ್ತಿರಲು, ಕಣ್ಣುಗಳು ಅರೆಬೆರೆಯಾಗುತ್ತಿರಲು 'ಜಾನಕೀ' ಎಂದು ಕೂಗುತ್ತ ಆ ರಾಮನು ಎಚ್ಚೆತ್ತನು.]

ಕಣ್ವಾಶ್ರಮವನ್ನು ಪ್ರವೇಶಿಸುತ್ತಿರುವ, ದುಷ್ಯಂತ ಮಹಾರಾಜನು ಆಶ್ರಮ ಹರಿಣವನ್ನು ಧನುಷ್ಪಾಣಿಯಾಗಿ ಬೆನ್ನಟ್ಟಿರಲು ಅಂಜಿದ ಆ ಹರಿಣವು ಓಡುತ್ತಿರುವ ವರ್ಣನೆ:—

ಕೊರಲಂ ತಾಂ ಕೊಂಕುಗೆಯ್ಯುತ್ತಡಿಗಡಿಗೊಡನೈತರ್ಪ ತೇರಲ್ಲಣಂ ನ-
ಟ್ಟಿರೆ ನೋಟಂ ಬಾಣಪಾತಕ್ಕಗಿಡಿರುಕಿಸುತುಂ ಪೃಷ್ಠಮುಂ ಮಾರ್ಗದೊಳ್ತೀ-

ಏರೆ ನೀಡುಂ ಬಿಟ್ಟಬಾಯಿಂ ಶ್ರಮದುದಿವರ್ಕರಿ ಮೆಲ್ದಿರ್ದ ದರ್ಭಾಂಕುರಂಗಳ್
ಧರೆಯಲ್ಲೋರೋಮೆರ್ದ ಕಾಲಿಟ್ಟಹಹ! ನಿರುಕಿಸೈ ಬಾನೊಳೇ ಪಾರಿಪೋಕುಂ ||

(ಬಸವಪ್ಪ ಶಾಸ್ತ್ರಿ-ಶಾಕುಂತಲ ೧-೭)

[— ಹಿಂದೆ ತನ್ನನ್ನು ಬಿನ್ನಟ್ಟಿದ ರಥವನ್ನೇ ಕೊರಲು ಕೊಂಕುಮಾಡಿ ನೋಡುತ್ತ, ಬಾಣವು ತಾಕೀತೆಂಬ ಅಂಜಿಕೆಯಿಂದ ಶರೀರದ ಹಿಂಭಾಗವನ್ನು ಮುಂಭಾಗದಲ್ಲಿ ಸೇರಿಸುತ್ತ, ತೇಗುಹತ್ತಿದ್ದರಿಂದ ಬಾಯಿ ತೆರೆದಿರಲು ಆ ಬಾಯಿಂದ ಅರ್ಧತಿಂದ ಹುಲ್ಲು ಅಲ್ಲಲ್ಲಿ ಬೀಳುತ್ತಿರಲು ನೆಲದ ಮೇಲೆ ಯಾವಾಗಲೋ ಒಮ್ಮೆ ಕಾಲಿಟ್ಟು ಹಾರಿ ಹೆಚ್ಚಾಗಿ ಆಕಾಶದಲ್ಲಿಯೇ ಹೋಗುತ್ತಿರುವ ಈ ಜಿಗರೆಯನ್ನು ನೋಡು. (ಸಾರಥಿಯು ರಥದಲ್ಲಿ ಕುಳಿತ ದುಷ್ಯಂತನಿಗೆ ತೋರಿಸುತ್ತಾನೆ.)]

ಉತ್ತಮ ಮಧ್ಯಮ ಕಾವ್ಯಗಳನ್ನು ಕೆಲಮಟ್ಟಿಗೆ ತೋರಿಸಿದೆವು.

ಯಾವದೊಂದು ವರ್ಣನೀಯ ವಿಷಯವನ್ನು ಸ್ವಾರಸ್ಯವಾಗಿ ವರ್ಣಿಸಿದರೂ ಕಾವ್ಯವು ಕೆಲಮಟ್ಟಿಗೆ ಗ್ರಾಹ್ಯವಾಗಿ ಅದು ಮೂರನೆಯ ತರಗತಿಯದೆಂದು ಎಣಿಸಲ್ಪಡುವದು.

ಬುತ್ತಿಯ ವರ್ಣನೆ:—

ಬಗಿವಗುಳಿಂದದಂತೆ ತೆಗೆದಾರಿಸಿದೋಗರದೊಳ್ ಪೊದಳ್ದುಕ-
ಮ್ಮಗೆ ಕೆನೆಗೊಂಡ ಗೆಡ್ಡೆ ಮೊಸರಂ ಸುರಿಪೇಲೆಯು ಚೂರ್ಣವಿಕ್ಕಿ ಪೊ-
ಯ್ದೊಗುವಿಗೆ ಬೀಳಿಗೆಯ್ದು ಮೆಳಸಂ ಕಳಿದಲ್ಲದ ಚೆಲ್ಲಿಯುಂ ಹವ-
ಣ್ಬುಗೆ ಕಲಸಿರ್ದ ತಣ್ಗಲಸುಗೂಳನಿಳಾಪತಿಗಿತ್ತನಲ್ತಯಿಂ ||

[ಬಗಿ=ಕೆದರು, ಓಗರ=ಅನ್ನ, ಏಲೆ=ಯಾಲಕ್ಕಿ, ಮೆಳಸು=ಮೆಣಸು, ಅಲ್ಲ=ಹಸಿಶುಂಠಿ ಚೆಲ್ಲಿ=ಹೆರಕಲು, ಸಣ್ಣ ಚೂರು; ಪವಣ್ಬುಗೆ=ಹವಣಿಯಾಗುವಂತೆ, ತಣ್ಗಲಸುಗೂಳ್=ಬುತ್ತಿ.]

ಬದನೆಕಾಯಿ ಬಜ್ಜಿ:—

ತಿಲದವಾಷಾದ್ಯಖಿಲ ಚೂರ್ಣಂ | ಗಳನು ತೆಂಗಿನಕಾಯು ತುರಿಯುನು |
ಲಲನೆಯರು ಕರಿಬೇವಿನೆಲೆಯೇಲಕ್ಕಿಗಳ ಬೆರಸಿ ||

ಹಿಳಿದು ಜಂಬೀರೋದಕವ ಹದ | ಗೊಳಿಸಿ ಲವದಿಂ ಕಪ್ಪುರದಿ ಪರಿ-|
ಮಳಿಪ ಬದನೆಯಕಾಯ ಬಜ್ಜಿಯು ತಂದು ಬಡಿಸಿದರು ||

ಹೀಗೆ ನದಿ, ಪರ್ವತ, ಉಪವನ, ಸೂರ್ಯಾಸ್ತ ಮುಂತಾದ 'ಅಷ್ಟಾದಶ' ವರ್ಣನೆಗಳೂ ಮನೋಹರವಾಗುವವು.

ಬ್ರಾಹ್ಮಣ ಭೋಜನದ ಒಂದು ವಿನೋದ:—

ದೊನ್ನೆಗಳ ಹರಹಿ ಬಾಳೆಲೆಹಾಳೆಯಂ ಹಾಕಿ (ಸಿ)| ಬಿನ್ನಣದಿ ಮಾಡಿದಾಜವುಕದೆಡೆಗಳಿ ಮುಂದೆ
ಜನ್ನಿವಾರಮಂ ಮೇಲೆತ್ತಿ ತಲೆಪುತ್ತುಮಂ ತೆಗೆದು ಸಡಿಲಿಸಿದೋತ್ರಮಂ ||

ಚೆನ್ನಾಗಿಯಾಪೋಷಣಮನೆತ್ತಿ ಕುಳ್ಳಿರ್ದು | ಭಿನ್ನರುಚಿಮಾಡಿ ಹರುಷದೆ ಗಡ್ಡನಿಸೆಗಳು
ಮನ್ನೀವಿಕೊಳುತ ಕಡ್ಡೋಜನನನಿಂತು ಮಾಡುತಿರ್ದರಾಪಾರ್ವರು ||

ಸಣ್ಣಕ್ಕಿಯೋಗರಂ ಹೆಸರತೊವೆ ಹೊಚ್ಚಹೊಸ | ಬೆಣ್ಣೆಕಾಸಿದ ತುಪ್ಪಹಪ್ಪಳಂ ನಸುನಿಂಬೆ
ಹಣ್ಣನಿಕ್ಕಿದ ಹಲವುಪರಿಯ ಹೋರಣಂ ಶಾಕಬಾಳುಕಾವಳೆಯ ಪಳಿದ್ಯ ||

ಪಡೆಯೊಟ್ಟಲುಂಡಲಿಗೆಗಳ ರಾಶಿ ಹೂರಿಗೆಗ | ಳಿಡುಗುಡ್ಡೆ ಸಣ್ಣ ಸೇವಗೆಯು ಮೆಡೆಯುರೆಯುಪ್ಪ-
ದಡಕಿಲಿಡ್ಡಲಿಗೆಗಳ ಬೋನ ಜೋಸೆಯು ಲಗ್ಗೆ ಬಿಲ್ಲಗಾರಿಗೆಯು ಬಣಬೆ ||

ಕಡಕಡೆಯು ಪಾಯುಸದ ಕಟ್ಟೆಯನೊಡೆವ ತುಪ್ಪ-
ವೆಡೆಮೂಡಿಡೆಡೆಯು ಮುಂದೊಪ್ಪದಿಂ ಕುಳ್ಳಿರ್ದು
ಸಡಗರಂಗೊಂಡು ಗಂಟಲ್ಮುಟ್ಟುವಲ್ಲಿ ಪರಿಯುದತವುಣುತಿರ್ಪರಾಪಾವರ್ಯರು ||

ಓಗರನತಾ ತೊವೆಯನಿಕ್ಕು ಹಸನಾಯ್ತು ಮೇಲೋಗರವಬಡಿಸು ದೊನ್ನೆಗಳು ಹಿಡಿವಂತೆ ವುಂ-
ಟಾಗಿ ಹೆರೆದುಪ್ಪವೆರೆಯಾ ಪಳಿದ್ಯಮನಟ್ಟು ಕಲಸುವೋಗರವ ತೋರು ||

ಬೇಗದಿಂದೆಡೆವಾಡಿದಿಡ್ಡಲಿಗೆ ದೋಸೆಗಳ ಮೇಗೆ ಸಕ್ಕರೆ ಬಟ್ಟವಾಲ ಹೊಯ್ಕೊನುತ ಮಾ-
ರೋಗಣಿಯನಾ ಹೊಟ್ಟೆಯೊಡೆವ ಮಯರ್ಯಾದೆಯೊಳಗುಂಡು ತೇಳುತ್ತಿರ್ದರು ||

ಪಾಯುಸದ ಪರಿಮಳಂ ನೋಡಿ ಪಂಡಿತರೆ ಸವಿಯಾಯಿತೇ ಅಯ್ತು ಪಾಥ್ಯಾಯರೇ ಕರಜಿಗೆಯು
ಕಾಯಿ ದೋಸೆಗಳ ಹಸನಂ ಪುರೋಹಿತರೆ ಚೆನ್ನಾಗಿ ಸವಿದು ನೋಡಿ ||

ಈಯೆಣ್ಣೆ ಹೂರಿಗೆಯ ಮೃದುತರಕೆ ಸರಿಯುಂಟೆ ? ಜೋಯಿಸರೆ ಕೇಳಿ ಸಕ್ಕರೆ ಬುರುಡೆಗಳ್ಳಮ್ಮ
ಬಾಯ ಬರನಂ ಬಿಡಿಸುತಿವೆ ದೀಕ್ಷಿತರೆ ಎಂದು ಕೊಂಡಾಡಿ ಉಣುತಿರ್ದರು.

ಈ ವರೆಗೆ ರಸ, ರಸಾಭಾಸ, ಭಾವ, ಭಾವಾಭಾಸ, (ರಸೇತರ) ಕೇವಲ ಧ್ವನಿ, ಗುಣ, ಅಲಂಕಾರ ಈ ಕಾವ್ಯ ಧರ್ಮಗಳನ್ನು ಹೇಳಿದೆನು. ಈ ಧರ್ಮಗಳಿಂದ ಕಾವ್ಯದಲ್ಲಿ ಉತ್ತಮ ಮಧ್ಯಮಾಧಮ ಭೇದಗಳುಂಟಾಗುವದನ್ನೂ ತೋರಿಸಿದೆನು. ಕೆಳಗಿನ ಕೆಲವು ಕವಿತೆಗಳನ್ನು ಲಕ್ಷಿಸಿರಿ:—

ಬೆಳಗಿನೊಳು ಬೇಗೆದ್ದು ಮುಖವನು | ತೊಳೆದುಕೊಳ್ಳಿ ನೀನು ಪ್ರತಿದಿನ
ಜಳಕವಾಡುತ್ತುಟ್ಟುಕೊಳ್ಳಿಲೆ ಮಡಿಯ ಬಟ್ಟೆಗಳ ||

ಅಳತೆಗೆಟ್ಟುಣಬೇಡ ಚಳಿಮಳೆ | ಯೊಳಗೆ ಬರಿಮೈಯಿಂದ ತಿರುಗುವು
ದೆಳಮಗುವೆ ತರವಲ್ಲ ಬೇನೆಯು ಬಂದು ಸೇರುವದು ॥ ೧ ॥

ಇಲ್ಲಿ ಉದ್ದೇಶಪಟ್ಟ ಬಾಲಕನು ಯಾವ ಸ್ಥಿತಿಯಲ್ಲಿರುವನೆಂಬದನ್ನು ಲಕ್ಷಿಸಿದರೆ ವಿಷಯವು ಅಸಹ್ಯವಾಗುವದು.

ಒಂದುದಿನ ತಪ್ರತ್ನವನು ಗೋ | ವಿಂದನಾ ಸತ್ರಾಜಿತನ ಕರೆ
ದೆಂದನೀವುದು ಯದುನೃಪಾಲಂಗೆಂದೊಡೆಯು ಕೊಡದೆ ||

ಮಂದಮತಿ ಧನಲೋಭದಲಿ ನಿಜ | ಮಂದಿರದೊಳೇ ಪೂಜಿಸುತ್ತ ಮು |
ಕುಂದನಾಜ್ಞೆಯ ವಿಾರಿ ಲೆಕ್ಕಿಸದಿರ್ದನುಬ್ಬಿನಲಿ ॥ ೨ ॥

ಇಲ್ಲಿ ಕೇವಲ ನಡೆದ ಕಥೆ ಹೇಳಿದೆ.

ಸುಳ್ಳನಾಡಲು ಬೇಡ ಜನರೊಳು | ಕಳ್ಳನೆನಿಸಲು ಬೇಡ ನೀನೆ
ಗಳ್ಳನಾಗಲು ಬೇಡ ಗುರುತಾಯ್ತುಂದೆಗಳ ನುಡಿಗೆ ||
ಒಳ್ಳೆತನ ಬಿಡಬೇಡ ಪ್ರಾಣಿಗಳಲ್ಲಿ ನಿರ್ದಯನಾಗಬೇಡ್ಯ
ಕ್ಷುಲ್ಲಕರ ಸಂಗಡಲಿ ಮುಳುಗಲು ಬೇಡ ಕೆಡಬೇಡ ॥ ೩ ॥

ಕೋಳಿ ಕೂಗಹ ಮುನ್ನ ಏಳುವದು ನಿತ್ಯ ದ
ಯಾಳು ದೇವಕನು ಭಕ್ತಿಯಿಂ ನೆನೆದರೆ ಅಳಿನಾಳಯ್ಯ ಸರ್ವಜ್ಞ ॥ ೪ ॥

ಇಚ್ಛೆಯುರಿದಿತ್ತಂಥನುಚ್ಛ್ವಾಂದು ಮಾಣಿಕವು
ಇಚ್ಛೆಯು ತೀರ್ದಬಳಿಕಿತ್ತ ಮಾಣಿಕವು ನುಚ್ಚಿಗೂ ಕಷ್ಟ ಸರ್ವಜ್ಞ ॥ ೫ ॥
ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಸುಜ್ಞಾನದಿಂ ನೋಡುತ.... ॥ ೬ ॥
ಪತಿಯ ನಿಂದಿಸುತಿರ್ಪ ಪತಿಯಿರ್ದು ಫಲವೇನು | ಅತಿಮಂದ... ॥ ೭ ॥

ಇವುಗಳಲ್ಲಿ ಕೇವಲ ನೀತಿ ಹೇಳಿದೆ.

ಇನ್ನು ಕೆಲವು ಕವಿತೆಗಳು ಶಾಸ್ತ್ರವಿಷಯಗಳನ್ನೊಳಗೊಂಡಿರುವವು. ಆದುದರಿಂದ ಕೇವಲ ಛಂದೋಬದ್ಧವೆಂದು ಅದು ಕವಿತೆಯೆಂದು ಸಾಹಿತ್ಯಶಾಸ್ತ್ರಕಾರರು ಹೇಳಲಾರರು. ಹಿಂದೆ ಹೇಳಿದಂತಹ ಕಾವ್ಯಧರ್ಮಗಳಿಂದಲೇ ಕಾವ್ಯವೆನಿಸುವದು. ಕಥೆಯು ಕೆಲವೆಡೆ ರಸ ಪ್ರಸಂಗವನ್ನು ಇದಿರಿಗಿಡುವದಕ್ಕೆ ಹಿನ್ನೆಲೆಯಾಗಿ ರಸೋಪಕಾರಿಯಾಗುವದು. ಆದರೆ ಈಗ ತೋರಿಸಿದಂತಹ ನೀರಸ, ನಿರ್ಭಾವ, ನಿರಲಂಕಾರ ಛಂದೋಬದ್ಧ ವಾಕ್ಯಗಳನ್ನು ಯಾವ ತರಗತಿಯಲ್ಲಿ ಸೇರಿಸಬೇಕು? ರೇಲ್ವೆಯವರು ಪ್ರವಾಸಿಕರ ಮೂರು ತರಗತಿಗಳನ್ನು ಮಾಡಿರುವರು. ಜಾತ್ರೆ ಮೊದಲಾದ ಪ್ರಸಂಗಗಳಲ್ಲಿ ವಾಗೇನುಗಳಲ್ಲಿಯೂ ಪ್ರವಾಸ ಮಾಡುವ ಪ್ರವಾಸಿಕರನ್ನು ನಾಲ್ಕನೆಯ ತರಗತಿಗೆ ಸೇರಿಸುವಂತೆ ಇಂತಹ ಕವಿತೆಗಳನ್ನು ನಾಲ್ಕನೆಯ ತರಗತಿಯ ಕವಿತೆಗಳೆಂದು ಹೇಳಬೇಕಾಗುವದು.

ನಮ್ಮ ಹಳೆಯ ಕಾವ್ಯ ವಾಙ್ಮಯದಲ್ಲಿ—ಸಂಸ್ಕೃತ ವಾಙ್ಮಯದಲ್ಲಿ ಕೂಡ— ಇಂತಹ ನಾಲ್ಕನೆಯ ತರಗತಿಯ ಕವಿತೆ ತುಂಬಿವೆ. ಸಾಧಾರಣವಾಗಿ ಒಳ್ಳೆಯ ಒಂದು ವಿಚಾರವು— ಅದು ನೀತಿಯಿರಲಿ, ಅನುಭವದ ಮಾತಿರಲಿ, ಕಥೆಯಿರಲಿ, ಚಮತ್ಕಾರದ ಸಂಗತಿಯಿರಲಿ— ಕಾವ್ಯವೆಂದು ಹೇಳುವದು ವಾಡಿಕೆಯಾಗಿದೆ.

ಆಧುನಿಕ ಕವಿತೆಗಳು ಈ ಅಸಾರತೆಯನ್ನು ಹೋಗಲಾಡಿಸಿ ರಸವತ್ತಾಗಿ, ರಸಾಭಿಮುಖವಾಗಿ ಇರಲು ಪ್ರಯತ್ನಿಸುತ್ತಿವೆ. ರಸವಿರುವ ಕವಿತೆಗಳು ಕೆಲವಾದರೂ ಭಾವವಿರುವ ಕವಿತೆಗಳು ಹಲವು ಮುಂದೆ ಬಂದಿವೆ.

ಕಾವ್ಯಗಳಲ್ಲಿ ಸ್ವಾರಸ್ಯ ಗ್ರಹಣಕ್ಕೆ ಬೇಕಾದ ರಸ, ಭಾವ, ಅಲಂಕಾರ ಮುಂತಾದ ಮುಖ್ಯ ಸಂಗತಿಗಳಲ್ಲಿ ಕೆಲವನ್ನು ಹಿಂದಿನವರ ಮತವನ್ನು ಹಿಡಿದು ಹೇಳಿದೆವು. ಇವಲ್ಲದೆ ಕಾವ್ಯಗಳಲ್ಲಿ ರೀತಿ, ವೃತ್ತಿ, ಶಯ್ಯೆ, ಪಾಕ, ಪ್ರಾಸ ಯಮಕ ಮುಂತಾದ ಶಬ್ದಾಲಂಕಾರ ಇವೂ ಕಾವ್ಯಧರ್ಮಗಳಾಗಿ ಪರಿಗಣಿತವಾಗಿವೆ. ಅವುಗಳಲ್ಲಿ ಕೆಲವು ಅಮುಖ್ಯವಾಗಿ, ಕೆಲವು ಇಲ್ಲಿ ಹೇಳಿದವುಗಳಲ್ಲಿ ಅಂತರ್ಗತವಾಗಿ ಇವೆ. ಅವನ್ನೂ ಆಧುನಿಕರು ಸ್ವಾರಸ್ಯ ಗ್ರಹಣಕ್ಕೆ ಹೇಳುವ ವಿಚಾರಗಳನ್ನೂ ನೀವು ತಿಳಿದುಕೊಂಡು ಕವಿತೆಗಳು ಆನಂದೋತ್ಪಾದಕಗಳು, ಅವು ಬಾಲಕರ ಮನೋರಂಜನೆಗಾಗಿ ಎಂಬುದನ್ನು ಚೆನ್ನಾಗಿ ಲಕ್ಷದಲ್ಲಿಟ್ಟುಕೊಂಡು ಭಾಷಾಶಿಕ್ಷಣಪ್ರಧಾನವಾಗಿ ಕವಿತೆಗಳನ್ನು ಕಲಿಸದೆ ರಸ ಭಾವಾನುಭವ ಪ್ರಧಾನವಾಗಿ ಕಲಿಸಿ ಕವಿತಾಶಿಕ್ಷಣದ ಸಾರ್ಥಕತೆಯನ್ನು ಸಾಧಿಸುವಿರೆಂದು ನಂಬಿ ನನ್ನ ಈ ಭಾಷಣವನ್ನು ಮುಗಿಸುತ್ತೇನೆ.

—ಮು. ಪ್ರ. ಪೂಜಾರ.

ಇ ಟ್ಲಿ ಲಿ

ಲೇ— ಶ್ರೀ. ಮೈಸಾಬಾಯಿ ಜೋಶಿ, ಅಧ್ಯಾಪಿಕೆಯರು ಟ್ರೇ. ಕಾ. ಫಾರ್ ವಿಮೆನ್, ಧಾರವಾಡ

ಅಚ್ಚು ರಾಷ್ಟ್ರಗಳಲ್ಲಿ ಇಟಾಲಿಯಷ್ಟು ಘೋರ ವಿಪತ್ತಿಗೊಳಗಾದ ದೇಶವು ಇನ್ನೊಂದಿಲ್ಲ. ಅರಸರು ದೇಶಾಂತರವಾಸಿಗಳಾದರು. ಇಪ್ಪತ್ತು ವರ್ಷಗಳವರೆಗೆ ಸರ್ವಾಧಿಕಾರಿಯಾಗಿದ್ದ ಮುಸಲೋನಿಯು ಪದಭ್ರಷ್ಟನಾಗಿ ಕಾರಾಗೃಹದಲ್ಲಿದ್ದು ಹೇಗೋ ಪಾರಾಗಿ, ಪುನಃ ಜರ್ಮನರನ್ನು ಕೂಡಿದ್ದಾನೆ. ಹಿಂದಿನ ರೋಮು ಸಾಮ್ರಾಜ್ಯವನ್ನು ನೆನೆಸುತ್ತ "ಇಂದಿನ ನಮ್ಮ ವಿಮಾನಗಳು ಸೂರ್ಯನನ್ನೇ ಮರೆಮಾಡುವವು." ಎಂಬ ಗರ್ವೋಕ್ತಿಗಳನ್ನಾಡುವ ಮುಸಲೋನಿಯು ಇಂದು ಅನ್ನ-ವಸ್ತ್ರ-ಸಂರಕ್ಷಣೆಗಳಿಗಾಗಿ ಪರರ ಯಾಚನೆ ಮಾಡುತ್ತಲಿದ್ದಾನೆ. ಇಡಿಯ ಆಫ್ರಿಕವನ್ನು ಗೆಲ್ಲಲಿಕ್ಕೆ ಹೋದ ಇವನು ಅಬಿಸೀನಿಯಾ, ಅಲ್ಬೇನಿಯಾ, ತ್ರಿಪೋಲಿ, ಸೋಮಾಲಿಲ್ಯಾಂಡಗಳನ್ನು ಕಳೆದುಕೊಳ್ಳುವದಲ್ಲದೆ ಸಿಸಲಿಯ ಭಾಗವನ್ನೂ ದಕ್ಷಿಣ ಇಟಾಲಿಯನ್ನೂ ಕೂಡ ಕಳೆದುಕೊಂಡನು. ಉತ್ತರ ಮಧ್ಯ ಇಟಾಲಿಗಳನ್ನು ಸಹ ಜರ್ಮನರು ಆಕ್ರಮಿಸಿರುವರು. ಇಷ್ಟೊಂದು ದುರವಸ್ಥೆ ಪ್ರಾಪ್ತವಾಗಿದ್ದರೂ ರಾಜ-ಪ್ರಜ ಅಧಿಕಾರಿಗಳಲ್ಲಿ ಹೊಂದಿಕೆಯಿಲ್ಲ. ದೇಶವೆಲ್ಲವೂ ಕಾಳಗದ ಕಣವಾಗಿದೆ. ಈ ಈ ದುರ್ಗತಿಗೆ ಹಲವು ರಾಜಕೀಯ ಕಾರಣಗಳಿರುವವು. ಇವುಗಳನ್ನುಳಿದು ಕೇವಲ ಭೌಗೋಲಿಕ ಕಾರಣಗಳನ್ನು ನೋಡುವಾ.

ಈ ದೇಶದ ಉತ್ತರಕ್ಕೆ ಆಲ್ಪ್ಸ್ ಪರ್ವತವಿದ್ದು ಉಳಿದ ಮೂರು ಬದಿಗಳಿಗೆ ಸಮುದ್ರವಿದೆ. ದಕ್ಷಿಣ ಇಟಾಲಿಯು ಪರ್ವತಗಳಿಂದ ತುಂಬಿದೆ. ಮಧ್ಯ ಇಟಾಲಿಯ ಪಶ್ಚಿಮ ಭಾಗವು ಸೌಂದರ್ಯವುಳ್ಳದ್ದಿದೆ. ಉತ್ತರ ಇಟಾಲಿಯ ಪೋ ನದಿಯ ಕೊಳ್ಳವು ಗಂಗೆಯ ಬಯಲಿನಂತೆ ಸಮೃದ್ಧವೂ ಪವಿತ್ರವೂ ದಟ್ಟ ಜನವತಿಯುಳ್ಳದ್ದೂ ಆಗಿರುವದು. ಇತಿಹಾಸ ಪ್ರಸಿದ್ಧ ನಗರಗಳೂ ಸರೋವರಗಳೂ ಈ ಭಾಗದಲ್ಲಿಯೇ ಇವೆ. ಕ್ಷೇತ್ರಫಲಮಾನದಿಂದ ಇಡಿಯ ಇಟಾಲಿಯು ನಮ್ಮ ಈಗಿನ ಮುಂಬಯಿ ಇಲಾಖೆಯ ಒಂದೂವರೆ ಮಡಿ ಇದ್ದು ಜನಸಂಖ್ಯೆಯ ಮಾನದಿಂದ ಎರಡೂವರೆ ಮಡಿ (೫ ಕೋಟಿ) ಯಾಗಿದೆ. ಯುರೋಪದ ಉಳಿದ ದೇಶಗಳ ಮಾನದಿಂದ ಈ ದೇಶದ ಹವೆಯು ಉಷ್ಣವಾಗಿದ್ದರೂ ಸಮುದ್ರ ಸಾಮೀಪ್ಯದಿಂದ ತುಸಮಟ್ಟಿಗೆ ಸೌಮ್ಯವಾಗಿದೆ. ಗೋದಿ, ಹತ್ತಿ, ಬತ್ತ, ಕಬ್ಬು, ತಂಬಾಕ, ಲಿಂಬೆ, ದ್ರಾಕ್ಷೆ, ಆಲಿವ್ಹಗಳು ಬೆಳೆಯುವವು. ಕುರಿ, ಕುದುರೆ, ಎತ್ತು, ಆಕಳುಗಳನ್ನು ಇಲ್ಲಿಯ ಜನರು ಸಾಕುವರು. ಹವಾಮಾನ, ಆಹಾರಗಳ ಪರಿಣಾಮದಿಂದ; ಇಂಗ್ಲಿಷ, ಜರ್ಮನರಷ್ಟು ಚಟುವಟಿಕೆಯುಳ್ಳವರಲ್ಲ. ಗಿಡ್ಡರೂ ಕಣ್ಣು ಕೂದಲು ಕರ್ರಗೆ ಉಳ್ಳವರೂ ಮೋಹಕರೂ ಚಿತ್ರಶಿಲ್ಪ ಸಂಗೀತ ಕಲೆಗಳಲ್ಲಿ ನಿಪುಣರೂ ಆಗಿದ್ದಾರೆ. ಯುರೋಪದ ಉಳಿದ ದೇಶಗಳ ಜನರು ಕಾಡುಸ್ಥಿತಿಯಲ್ಲಿದ್ದಾಗ ಸಾಮ್ರಾಜ್ಯಕಟ್ಟಿದ ಇವರಲ್ಲಿ ಈಗಲೂ ಆ ನೆನಸು ಇದೆ. ಜನಸಂಖ್ಯೆಯು ಹೆಚ್ಚಾಗಿರುವುದರಿಂದ ಈ ದೇಶವು ಆಹಾರ ಪದಾರ್ಥಗಳ ದೃಷ್ಟಿಯಿಂದ ಸ್ವಯಂಪೂರ್ಣವಿಲ್ಲ. ಖನಿಜಗಳ ದೃಷ್ಟಿಯಿಂದ ನೋಡಿದರೆ, ಸಿಸಿಲಿಯನ್ನು ಕಳೆದುಕೊಂಡದ್ದರಿಂದ ಗಂಧಕಕ್ಕೂ ಎರವಾಯಿತು. ಕಲ್ಲಿದ್ದಲಿ, ಕಬ್ಬಿಣ, ಕಲ್ಲೆಣ್ಣೆಗಳಂತೂ ಈ ದೇಶದಲ್ಲಿಲ್ಲ. ವಿದ್ಯುತ್ ಉತ್ಪಾದನೆಗೆ ಆವಶ್ಯಕವಾದ ಅನುಕೂಲತೆಗಳುಳ್ಳ ನದಿಗಳೂ ಸಾಕಷ್ಟು ಇಲ್ಲ. ಹೀಗಾಗಿ ಆಧುನಿಕ ಶಕ್ತಿಸಂಪನ್ನತೆಯ ದೃಷ್ಟಿಯಿಂದ ಇಂದಿನ ಇಟಲಿಯು ಸಮರ್ಥವಿಲ್ಲ.

ಲೇಖಗಳ ಮುಖ್ಯಾಂಶಗಳು

೧. **ಕಲ್ಪನಾ ವಿಕಾಸ**— (ಲೇ— ಶ್ರೀ. ಮಿರ್ಜಿ ಅಣ್ಣಾರಾಯರು, ಶಿಕ್ಷಕರು, ಉಗಾರ ಜಿ. ಬೆಳಗಾವಿ) ಇಂದ್ರಿಯಗಳಿಂದ ಆಗುವ ಜ್ಞಾನವು ಸಂಪೂರ್ಣವೆನಿಸುವದಿಲ್ಲ. ಕೆಲವೊಂದು ವಿಷಯಗಳ ಜ್ಞಾನವು ಇಂದ್ರಿಯಗಳಿಗೆ ನಿಲುಕದ್ದರಿಂದ ವಿಚಾರಶಕ್ತಿ, ಅನುಮಾನಗಳಿಂದ ದೊರಕಿಸಬೇಕಾಗುತ್ತದೆ. ಕಲ್ಪನಾಶಕ್ತಿಯು ಬಾಲಕರಲ್ಲಿ ಇದ್ದೇ ಇರುವದು ತಮ್ಮ ಸುತ್ತಲಿನ ಪರಿಸ್ಥಿತಿಯಿಂದ, ಪ್ರತ್ಯಕ್ಷ ನೋಡಲಾಗದ ಹಲವು ಸಂಗತಿಗಳನ್ನು ಕಲ್ಪಿಸಿ ಜ್ಞಾನ ಸಂಪಾದಿಸುವರು. ಚಿತ್ರ, ಕತೆ, ಆಟ, ಸೃಷ್ಟಿನಿರೀಕ್ಷಣೆ, ಇತಿಹಾಸ, ಭೂಗೋಲ ಮೊದಲಾದ ವಿಷಯಗಳನ್ನು ಕಲಿಯುವದರಿಂದ ಈ ಶಕ್ತಿಯ ಬೆಳೆವಣಿಗೆ ಆಗುವದು. ಇದರೊಂದಿಗೆ ವಿಚಾರ ಶಕ್ತಿಯ ಬೆಳೆವಣಿಗೆಯೂ ಆಗಬೇಕು. ಇದರ ಜೋಡಿಲ್ಲದೆ ಹೋದರೆ ಅಲ್ಲದ-ಸಲ್ಲದ ಕಲ್ಪನೆಗಳು ಬೆಳೆಯುವವು. ಕಲ್ಪನಾಶಕ್ತಿಯು ಕಲ್ಪವೃಕ್ಷದಂತಿದೆ. ಪರೋಪಕಾರ, ಸಹಾನುಭೂತಿ, ವಿಶ್ವಪ್ರೇಮ ಮೊದಲಾದವು ಇದರ ಫಲಗಳಾಗಿರುವವು. ಈ ಶಕ್ತಿಯ ಬಲದಿಂದ ಶಿಕ್ಷಣದ ಮುಖ್ಯ ಧ್ಯೇಯವನ್ನು ಸಾಧಿಸಲು ಬರುವದು.

೨. **ಪಠ್ಯಪುಸ್ತಕಗಳು**:— (ಶ್ರೀ. ಕುಲಕರ್ಣಿ ಕೇಶವರಾಯರು ಗದಗ) ಶಿಕ್ಷಣ ನೌಕೆ-ಯಲ್ಲಿ ವಿದ್ಯಾರ್ಥಿಗಳು ಪ್ರಯಾಣಿಕರು. ಪಠ್ಯಪುಸ್ತಕಗಳು ಜುಕ್ಕಾಣಿಯಂತಿವೆ. ಜುಕ್ಕಾ-ಣಿಯ ಸಹಾಯದಿಂದ ನೂತನ ಶಿಕ್ಷಕರು ಸಹ ಆ ನೌಕೆಯನ್ನು ಸರಿಯಾಗಿ ಸಾಗಿಸಬಹುದು. ವಿದ್ಯಾರ್ಥಿಗಳಿಗಾದರೂ ತಮ್ಮ ಬಳಿಯಲ್ಲಿ ಯಾವಾಗಲೂ ಶಿಕ್ಷಕನಿದ್ದಷ್ಟು ಆತ್ಮವಿಶ್ವಾಸ ಬೆಳೆಯುವದು. ಪಠ್ಯಪುಸ್ತಕಗಳು ಅತ್ಯವಶ್ಯ. ಪ್ರಾಚೀನ ಕಾಲದಲ್ಲಿಯೂ ಇದ್ದವು. ಈಗಲೂ ಅನೇಕ ಮಾಲೆ ಮಾಲೆಯಾಗಿವೆ. ಶಿಕ್ಷಕರು ಈ ಪಠ್ಯಪುಸ್ತಕಗಳೇ ಸಾರಸರ್ವಸ್ವವೆಂದೂ, ಪರಿಪೂರ್ಣವೆಂದೂ ತಿಳಿಯದೆ ಮಾಲೆಗಾರನಂತೆ ಯೋಗ್ಯವಿದ್ದ ಪಾಠ ಕುಸುಮಗಳನ್ನು ಆರಿಸಿ ಕೆಲಸ ಸಾಗಿಸಬೇಕು. ಮೇಲಿನ ವರ್ಗಗಳಲ್ಲಿ ಮಾತ್ರ ಪಠ್ಯಪುಸ್ತಕಗಳ ಪ್ರಾಬಲ್ಯವಿರಲಿ, ಅವು ಸಾಧನಗಳೇ ಹೊರತು ಸಾಧ್ಯಗಳಲ್ಲ. ಪಠ್ಯಪುಸ್ತಕಗಳ ಆಧಾರವನ್ನು ತಕ್ಕೊಂಡರೂ ಕೂಡ ಶಿಕ್ಷಕನು ತನ್ನ ಸ್ವಾಧೀನತೆ ಹಾಗೂ ಸ್ವಾತಂತ್ರ್ಯಗಳನ್ನು ಎಂದೂ ಕಳಕೊಳ್ಳಬಾರದು. ೧೯೩೯ ರಿಂದ ಇತ್ತೀಚೆಗೆ ಗದ್ಯಪದ್ಯಗಳ ಹಲವು ಮಾಲೆಗಳು ಪಠ್ಯಪುಸ್ತಕಗಳಾಗಿವೆ. ಅವು-ಗಳಲ್ಲಿ ಹೊಸ ಮೆರುಗು ಇದೆ. ಕನ್ನಡ ಶಾಲೆಯ ಶಿಕ್ಷಕರು ಸರ್ವಜ್ಞರಾಗಿರದಿದ್ದರೂ ಎಲ್ಲ ವಿಷಯಗಳನ್ನು ಕಲಿಸಬೇಕಾಗುತ್ತದೆ. ಅವರಿಗೆ ಸರಿಯಾದ ಪಠ್ಯಪುಸ್ತಕಗಳ ನೆರವು ಅಗತ್ಯವಾಗಿ ಬೇಕು.

೩. **ಸ್ಕಾಲರಶಿಪ್ ಪರೀಕ್ಷೆಯ ಪ್ರಶ್ನೆಗಳು**:— (ಶ್ರೀ. ಬಾದಾಮಿ ಹಾ. ಸ. ಉಪಶಿಕ್ಷಕರು ತಾಲೂಕ ಶಾಲೆ ಬಾಗಲಕೋಟೆ) ಯಾವುದೊಂದು ಪರೀಕ್ಷೆಯು ಮುಗಿದೊಡನೆ ಆ ಪರೀಕ್ಷೆಯ ಪ್ರಶ್ನೆಗಳು ಶಿಕ್ಷಕರ ಮತ್ತು ಸಾರ್ವಜನಿಕರ ಕಣ್ಣಿಗೆ ಬಿದ್ದರೆ ಅವುಗಳಲ್ಲಿಯ ಗುಣವಿಶೇಷಗಳ ಚರ್ಚೆಯು ನಡೆದು, ಕಲಿಸುವವರಿಗೆ ತುಂಬ ಅನುಕೂಲವಾಗುವದು; ವಿದ್ಯಾರ್ಥಿಗಳ ಬೌಧಿಗೂ ಹೆಚ್ಚು ಅನುಕೂಲ. ಆದರೆ ಇತ್ತೀಚಿಗಿನ ಕೆಲವು ವರ್ಷಗಳಿಂದ ಹಾಯಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ಪ್ರಶ್ನೆಕಾಗದಗಳು ನೋಡಲಿಕ್ಕೆ ದೊರೆಯುವದಿಲ್ಲ. ಬಹು ದಿನಗಳನಂತರ ಅಲ್ಲಲ್ಲಿ ದೊರೆತರೂ ಅಸಮಾಧಾನವು ಹೋಗುವದಿಲ್ಲ.

೪. **ಯುರೋಪವು ಎತ್ತ ಸಾಗಿದೆ?** (ಶ್ರೀ. ವೀ. ಬ. ಸಾಟೀಲ, ಮಾಸ್ತರರು, ಹುನಗುಂದ) ಮಾನವರ ಸುಖ-ಸಂರಕ್ಷಣೆಗಳಿಗಾಗಿ ಯುರೋಪವು ಹಲವು ಸುಧಾರಣೆಗಳನ್ನೂ ತತ್ವ-ಗಳನ್ನೂ ಸಾಧನಗಳನ್ನೂ ಒದಗಿಸಿಕೊಟ್ಟಿತೆಂಬುದರ ಬಗೆಗೆ ಯಾರ ಆಕ್ಷೇಪವೂ ಇಲ್ಲ. ಯುದ್ಧ ಪೂರ್ವದಲ್ಲಿ ಅಲ್ಲಿಯ ನಾಗರಿಕತೆಯು ಸುಧಾರಣೆಯ ಸುಗ್ಗಿಯನ್ನು ತೋರಿಸುತ್ತಿತ್ತು. ಆದರೆ ಈಗ 'ಓದಿ ಕೆಟ್ಟನು ಒಡಕ ಭಟ್ಟ' ಎಂಬಂತಾಗಿದೆ. ಅಹಿಂಸೆಯನ್ನು ಆಚರಿಸದ ಸ್ವಾರ್ಥಕ್ಕಾಗಿ ಸಾಧು ಪ್ರಾಣಿಗಳ ವಧೆ ಮಾಡಿದ ಬಳಿಕ ಯಾರ ಉದ್ಧಾರವಾಗುವದೋ ತಿಳಿಯದು. ನವನಾಗರಿಕತೆಯಿಂದ ಮಾನವರು ದೇವರಾಗಬೇಕು, ದಾನವರಾಗಬಾರದು.

೫. **ಪಿಗ್ಮಿ ಜನರ ಜೀವನ ಕ್ರಮ:—** (ಶ್ರೀ. ದಾ. ಸು. ಕಾಂಬಳಿ ಮಾಸ್ತರರು, ಹತ್ತನೆಯ ನಂಬರ ಶಾಲೆ ಬೆಡಕಿಹಾಳ.) ಆಫ್ರಿಕದ ಕಾಂಗೋ ಯುಗಾಂಡಾಗಳ ದಟ್ಟವಾದ ಅರಣ್ಯದಲ್ಲಿ ಪಿಗ್ಮಿ ಎಂಬ ಜನಾಂಗವಿದೆ. ಇವರು ಗಿಡ್ಡರು, ಬಹಳ ಎತ್ತರವೆಂದರೂ ನಾಲ್ಕೇ ಮೂರು! ಮೈಬಣ್ಣ ಕಪ್ಪು, ಕುರೂಪಿಗಳು, ಗಟ್ಟಿಗರು ಆನೆಯ ಬೇಟೆಯನ್ನು ಆಡುವರು; ಬಾಣದ ತುದಿಗಳಿಗೆ ವಿಷವನ್ನು ಹಚ್ಚುವರು. ಜೇನುತುಪ್ಪದ ಮೇಲೆ ಬಲು ಪ್ರೇಮ. ಮೈಮುಚ್ಚಿ-ಕೊಳ್ಳುವ ರೂಢಿ ಇಲ್ಲ. ಜಳಕ ಮಾಡುವದಿಲ್ಲ. ನಿತ್ಯ ಸಂಚಾರಿಗಳು. ಇವರಲ್ಲಿಯೂ ಧರ್ಮ-ಭಾಷೆಗಳು ಉಂಟು, ಕಾಮನ ಬಿಲ್ಲಿಗೆ ಹೆದರುವರು. ಗಂಡನನ್ನು ಕಚ್ಚುವ ಜಗಳಗಂಟ ಹೆಂಡಿರೂ ಉಂಟು. ಅಳಿಯನು ಸಾಯುವವರೆಗೂ ಅತ್ತೆಯಗೂಡ ಮಾತಾಡ-ಬಾರದಂತೆ! ಭಯಂಕರವಾದ ಅರಣ್ಯದಲ್ಲಿ ಹುಲಿ, ಸಿಂಹ, ಗೋರಿಲ್ಲಾ, ಹೆಬ್ಬಾವುಗಳು ತುಂಬಿದ್ದರೂ ನಿರ್ಭಯದಿಂದ ವಾಸಿಸುವರು. ಇವರು ಪ್ರಾಚೀನ ಕಾಲದಲ್ಲಿ ನಮ್ಮಂತೆಯೇ ಇದ್ದರೆಂದು ತಜ್ಞರು ಹೇಳುತ್ತಾರೆ. ಸ್ಥಾನ ಮಹಾತ್ಮ್ಯದಿಂದ ಈ ಗತಿ ಬಂದಿದ್ದರೂ; ಅವರಲ್ಲಿ ಕ್ರೈಸ್ತ ಧರ್ಮ ಪ್ರಸಾರ ಮಾಡಬೇಕೆಂದು ಮಿಶನರಿಗಳು ಪ್ರಯತ್ನಿಸುತ್ತಿದ್ದಾರೆ.

ಮುಳಿಗಾಲ:—(ಶ್ರೀ. ಇ. ರಾ. ಪತ್ತಾರ, ೨. ವ. ವಿ. ಅಳುಕವಿತಾ ಸ್ಪರ್ಧೆಯಲ್ಲಿ ೧ನೆಯ ನಂ. ಪಡೆದದ್ದು.)

ಪರುಷ ಕೊಮ್ಮೆಯೆ ಹರುಷ ಕೊಡುವದು ಚರಿಸುತಲಿ ಮುಳಿಗಾಲವು |
ವರುಷವೆಲ್ಲವೂ ಸರಸವಾಡುತ ಸೊಗಸಿನಿಂ ದಿನ ಕಳೆವೆವು ॥ ೧ ॥

ಸುರಿಯೆ ರಪರಪ ಹರಿಯೆ ಧಡಧಡ ನೊರೆಯಲಬ್ಧಿಯು ಧರೆಯನು |
ಕೊರೆದು ಹರಿಯುತ ತುಂಬಿ ತುಳುಕುತ ಸಿರಿಯಬೆಡಗನು ತೋರ್ಪುದು ॥ ೨ ॥

ಚಿನ್ನಗಾಲವು ರನ್ನಗಾಲವು ಹೊನ್ನು ಹರಿಯುವ ಕಾಲವು |
ಸನ್ನೆಯುಲಿ ಜಗದೀಶ ನೊಲಿಯುವ ಮುಳಿಯೆ ಜಗ ಜೀವಾಳವು ॥ ೩ ॥

ಕಣ್ಮರೆಯಾದ ಅಥಣಿಯವರಿಗೆ:—(ಶ್ರೀ. ಸಿ. ಚ. ಬಬಲೇಶ್ವರ, ಮೂಲ ಶಿಕ್ಷಣ ಕೇಂದ್ರ ಧಾರವಾಡ)

ಹಕ್ಕಿ ಹಾರಿತು! ತಿರುಗಿ ಬಾರದಾಯಿತು!! ಬಣ್ಣ ಬಣ್ಣ ಪಕ್ಕ ಬಿಚ್ಚಿ!
ಬಾನತುಂಬ ಸುಳಿದು ಸುತ್ತಿ ಬೆಡಗ ಬೀರಿ ತೋರಿ ಕೊನೆಗೆ ಕಾಣದಾಯಿತು! ಹಕ್ಕಿ ಹಾರಿತು ॥೧॥

ಅದರ ಗಾನ ಏನು ತಾನ! ಕವಿಗೆ ಅದುವೆ ಅಮೃತಪಾನ! ಹಾಡು ಹಾಡಿ ನಾದ ಗಾನ
ಕೇಳದಾಯಿತು ॥ ೨ ॥

ಜಾಣಹಕ್ಕಿ ಹಿರಿಯಹಕ್ಕಿ ಜ್ಞಾನದಪ್ಪುತ ಸುರಿವ ಹಕ್ಕಿ ಚಿಕ್ಕೆಯಲ್ಲಿ ನುಳುಗಿ ಹೋಯಿತು ॥೩॥
ಹಿಗ್ಗಿ ಹಿಗ್ಗಿ ಹಾರ್ವ ಹಕ್ಕಿ ಭುವಿಗೆ ಬಿತ್ತು ಗಿಡಗಕುಕ್ಕಿ ಬಿಕ್ಕಿ ಬಿಕ್ಕಿ ಹರಣ ಹಕ್ಕಿ ಹಾರಿ
ಹೋಯಿತು ॥ ೪ ॥

ಬಂಜೆ :— (ಶ್ರೀ. ವೀ. ಬ. ಪಾಟೀಲ ಮಾಸ್ತರರು ಹುನಗುಂದ)

ಬಂಜೆಯ ಬಯಕೆಯು, ಹಗಲಿನ ಕನಸಿನ ತೆರದಲಿ, ಬಯಲಿಗೆ ಬಯಲಾಗಿ |
ಕುಮುದಗಳಿಲ್ಲದ ಸರಸಿಯ ನೋಟವು ಜೊರೆವುದೆ ಹೇಳಿರಿ ನಿಜವಾಗಿ ॥ ೧ ॥

ಮನವಿಲ್ಲದ ಮನೆ, ಮಗುವಿಲ್ಲದ ಕನು, ಮಸಣವೆ ತಾನಾಗಿರುತಿಹುದು ||
ನಿನಿದು ಬಾಳುವೆ ಕಾನನದೊಳಗಿನ ಬೆಳದಿಂಗಳ ಪರಿ ಹಾಳಹುದು ॥ ೨ ॥

ಕಸವೇನಿಲ್ಲದ ಹೊಲಸೇನಿಲ್ಲದ ಅಂಗಳ ತಾನೇ ತಾನಾಗಿ |
ಚೆಲುವೇನಿಲ್ಲದ ನಿಶ್ಚಲವಾಗಿಹ ಅಡುಗೆಯ ಮನೆಯದು ಕಟ್ಟಡವಿ ॥ ೩ ॥

ಓದುವ ಮಕ್ಕಳ ಮನವಿಂತಿರಲಿ :— (ಶ್ರೀ. ಕುಲಕರ್ಣಿ ಕೇಶವರಾಯರು ಗದಗ)

ಸೋದರ ಭಾವವು ಸಂತತ ವಿರಲಿ ! ಭೇದದ ಗಾಳಿಯು ಸೋಂಕದೆ ಇರಲಿ |
ಆಟಗಳೆಲ್ಲವು ನೀಟಾಗಿರಲಿ ! ಪಾಠಗಳೆಲ್ಲವು ಆಟಾಗಿರಲಿ !
ಆಟ ಪಾಟಗಳು ಮೇಲ್ಮೆಯ ತರಲಿ ! ನೋಟದ ಸವಿಸುಖ ನಿಜವಾಗಿರಲಿ !

ಓದುವದಿನ್ನೇನು :— (ಶ್ರೀ. ಕುಲಕರ್ಣಿ ಕೇಶವರಾಯರು ಗದಗ)

ಓದುವ ಕನಿತೆಯ ಗತಿಯೇ ಬೇರೆ ! ಬೆದರಿದ ಭಾವಕೆ ತುದಿ ಮೊದಲಿಲ್ಲ !
ಉದರದ ಹಸಿವದು ಹಿಂಗುವದಿಲ್ಲ ! ಸದನದ ಸವಿಸುಖ ಜನಕೇನಿಲ್ಲ ! ॥ ೧ ॥

ಕಾಳಗದಬ್ಬರ ಬಾಳನು ಕೆಡಿಸಿದೆ ! ಬಾಳುವ ಜನವಿದು ಕೂಳದು ಸಿಗದೆ !
ತಾಳುವ ತಂತುವು ಬಿಗಿಬಿಗಿ ಬಿಗಿದಿದೆ ! ಬಾಳುವ ಬಗೆಯದು ತೋರದು ಜನಕೆ ॥ ೨ ॥

—— o ——

ಟಿಪ್ಪಣಿ:—ಶ್ರೀ. ವ್ಹಿ. ಕೆ. ಜವಳಿ ಅವರ 'ಅಂಗಸಾಧನೆಗಳನ್ನು ಕಲಿಸುವ ಪದ್ಧತಿ' ಎಂಬ ಲೇಖನವೊಂದು ನಮ್ಮ ಕಡೆಗೆ ಪ್ರಕಟನೆಗೆ ಒಂದಿದೆ. ಸ್ಥಳಾಭಾವದ ಮೂಲಕ ಈ ಸಲ ಅದನ್ನು ಪ್ರಕಟಿಸಲಾಗಲಿಲ್ಲ.

ಟ್ರೇನಿಂಗ್ ಕಾಲೇಜ ಸರ್ಟಿಫಿಕೇಟ ಪರೀಕ್ಷೆಯ ಕಾರ್ಯಕ್ರಮ

ಎಪ್ರಿಲ್ ೧೯೪೪

ತಾ. ೧೭ ಸೋ. ಬ·೩೦ ರಿಂದ ೧೧ ಶಿಕ್ಷಣ (೧)	೪ ರಿಂದ ೬·೩೦ ಭೂಗೋಲ
ತಾ. ೧೮ ಮಂ. ಬ·೩೦ ರಿಂದ ೧೧ ಅಂಕಗಣಿತ	೪ ರಿಂದ ೬·೩೦ ಇತಿಹಾಸ
ತಾ. ೧೯ ಬು. ಬ·೩೦ ರಿಂದ ೧೧ ಭೂಮಿತಿ-ಜಮಾಖರ್ಚು	೪ ರಿಂದ ೬·೩೦ ಭಾಷೆ (೨)
ತಾ. ೨೦ ಗು. ಬ·೩೦ ರಿಂದ ೧೧ ಭಾಷೆ (೧)	೪ ರಿಂದ ೬·೩೦ ಶಾ. ವಿಷಯ
ತಾ. ೨೧ ಶು. ಬ ೩೦ ರಿಂದ ೧೧ ಶಿಕ್ಷಣ (೨)	೪ ರಿಂದ ೬ ಹಿಂದುಸ್ತಾನಿ

ಪ್ರಕಟನೆ— ನಮ್ಮ ಶಾಲೆಗೆ ಹೊಸದಾಗಿ ಬರಲಿಚ್ಚಿಸುವ ವಿದ್ಯಾರ್ಥಿಗಳ ಪಾಲಕರು ಬರುವ ಎಪ್ರಿಲ್ ೩೦ ರಿಂದ ಜೂನ ೧೫ ರೊಳಗಾಗಿ ಬಂದು ಬೆಟ್ಟಿಯಾಗಿ ಹೆಸರು ಹಚ್ಚಿಸಬೇಕು. ಗೊತ್ತುಪಡಿಸಿದ ಸಂಖ್ಯೆಯಷ್ಟೇ ವಿದ್ಯಾರ್ಥಿಗಳನ್ನು ತಕ್ಕೊಳ್ಳಲಾಗುವದು. ಎಲ್ಲರಿಗೂ ಪ್ರವೇಶ ದೊರೆಯುವ ಸಂಭವವಿಲ್ಲ.

ಹೆಡ್ ಮಾಸ್ತರ ಗ. ಪ್ರಾ. ಸ್ಕೂ. ಟ್ರೇ. ಕಾ. ಧಾರವಾಡ

೧೯೪೪ನೆಯ ಇಸ್ವಿಯ ಕನ್ನಡ ಮತ್ತು ಮರಾಠಿ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆಯು

ವಾರ ಮತ್ತು ತಾರೀಖು	ವೇಳೆ		ವಿಷಯಗಳು	ಗುಣಗಳು	ಶರಾ.
	ಇಂದ	ವರೆಗೆ			
ಸೋಮವಾರ ೩-೪-೧೯೪೪	೧೨	೧	ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದುವಾರರ ಹಾಜರಿ ತೆಗೆದುಕೊಳ್ಳುವದು.		
ಸದರ	೧	೩	ಎರಡನೆಯ ಸದರು— ನಿಬಂಧ ಅಥವಾ ರಿಪೋರ್ಟು ಪತ್ರಬರೆಹ ಮುಂತಾದವು.	೧೦೦	
ಸದರ	೪	೬	ಐದನೆಯ ಸದರು— ಆರೋಗ್ಯವಿಜ್ಞಾನ ಅಥವಾ ಶಾರೀರ ಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಮತ್ತು ಏಳನೆಯ ಪುಸ್ತಕದಲ್ಲಿದ್ದಂತೆ ಶಾಸ್ತ್ರೀಯ ವಿಷಯದ ಮೂಲ ತತ್ತ್ವಗಳು.	೧೦೦	
ಮಂಗಳವಾರ ೪-೪-೧೯೪೪	೧೨	೩	ಮೂರನೆಯ ಸದರು— (ಅ) ಅಂಕಗಣಿತ.	೧೦೦	
ಸದರ	೪	೬	ನಾಲ್ಕನೆಯ ಸದರು— (ಅ) ಮತ್ತು (ಬ) ಇತಿಹಾಸ ಮತ್ತು ಭೂಗೋಲ.	(ಅ) ೫೦ (ಬ) ೫೦	
ಬುಧವಾರ ೫-೪-೧೯೪೪	೧೨	೩	ಮೂರನೆಯ ಸದರು— (ಬ) ಮತ್ತು (ಕ) ಭೂಮಿತಿ ಮತ್ತು ಹಿಂದೀ ಜಮಾಖರ್ಚು.	(ಬ) ೫೦ (ಕ) ೫೦	
ಸದರ	೪	೬	ಮೊದಲನೆಯ ಸದರು— (ಅ) ಮತ್ತು (ಬ) ಪ್ರಾದೇಶಿಕ ಭಾಷಾವಿಷಯಗಳು.	(ಅ) ೭೫ (ಬ) ೭೫	

ವಿ. ಸೂ— ಪರೀಕ್ಷೆಯ ಮೊದಲನೆಯ ದಿನ ಉಮೇದುವಾರರು ಪರೀಕ್ಷೆಯ ವೇಳೆಗಿಂತಲೂ ೧ ತಾಸು ಮುಂಚಿತವಾಗಿ ಪರೀಕ್ಷೆಯ ಸ್ಥಳದಲ್ಲಿ ತಪ್ಪದೆ ಹಾಜರ ಇರಲೇಬೇಕು.

೧೯೪೪ ನಯು ಇಸವಿಯಲ್ಲಿ ನಡೆಯುವ ಅಗ್ರಿಕಲ್ಚರಲ್ ಬಾಯಿಸ್ ಕೋರ್ಸನ್ನು ಆರಿಸಿಕೊಂಡ ಗಂಡುಮಕ್ಕಳ ಪ್ರಾಥಮಿಕ ಶಾಲಾ
ಪ್ರಮಾಣಪತ್ರ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆಯು

ವಾರ ಮತ್ತು ತಾರೀಖು	ಪೇಳೆ		ವಿಷಯಗಳು	ಗುಣಗಳು	ಶರಾ
	ಇಂದ	ವರೆಗೆ			
ಸೋಮವಾರ					
೩–೪–೧೯೪೪	೧೨	೧	ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದುವಾರರ ಹಾಜರಿ ತೆಗೆದುಕೊಳ್ಳುವದು.		
ಸದರ	೧	೩	ಎರಡನೆಯ ಸದರು– ನಿಬಂಧ ಅಥವಾ ರಿಪೋರ್ಟ, ಪತ್ರಬರೆಹ ಮುಂತಾದವು.	೧೦೦	
ಸದರ	೪	೬	ಐದನೆಯ ಸದರು (ಅ) ಶಾಸ್ತ್ರಿಯ ವಿಷಯದ ಆರಂಭದ ಪಾಠಗಳು. ಮತ್ತು (ಬ) ಆರೋಗ್ಯಶಾಸ್ತ್ರ.	(ಅ) ೨೫ (ಬ) ೨೫	
ಮಂಗಳವಾರ					
೪–೪–೧೯೪೪	೧೨	೩	ಮೂರನೆಯ ಸದರು– (ಅ) ಅಂಕಗಣಿತ (ಬ) ಮಹತ್ವನೂಪನ ಮತ್ತು (ಕ) ಹಿಂದೀ ಜಮಾಖರ್ಚು.	(ಅ) ೫೦ (ಬ) ೨೫ (ಕ) ೨೫	
ಸದರ	೪	೬	ನಾಲ್ಕನೆಯ ಸದರು– (ಅ) ರಾಜ್ಯಕಾರ್ಯಭಾರ (ಬ) ಸಹಕಾರ ಮತ್ತು (ಕ) ಭೂಗೋಲ.	(ಅ) ೨೫ (ಬ) ೨೫ (ಕ) ೫೦	
ಬುಧವಾರ					
೫–೪–೧೯೪೪	೧೨	೩	ಆರನೆಯ ಸದರು– (ಅ) ಒಕ್ಕಲುತನ ಮತ್ತು (ಬ) ಪ್ರಕೃತಿವಿಮರ್ಶೆ.	(ಅ) ೩೫ (ಬ) ೩೦	
ಸದರ	೪	೬	ಮೊದಲನೆಯ ಸದರು– (ಅ) ಮತ್ತು (ಬ) ಪ್ರಾಂತಿಕ ಭಾಷೆ.	(ಅ) ೨೫ (ಬ) ೨೫	
ಗುರುವಾರ					
೬–೪–೧೯೪೪	*	*	ಏಳನೆಯ ಸದರಿನಲ್ಲಿ ಪ್ರಾಯೋಗಿಕ ಪರೀಕ್ಷೆ.	೫೦	
ಸದರ	*	*	ಆರನೆಯ ಸದರಿನಲ್ಲಿ ಪ್ರಾಯೋಗಿಕ ಪರೀಕ್ಷೆ.	೩೫	

* ವೇಳೆಯನ್ನು ಸ್ಥಾನಿಕ ಕಮಿಟಿಯ ಪ್ರೆಸಿಡೆಂಟರು ತಮ್ಮ ಜಿಲ್ಲೆಯ ಅಗ್ರಿಕಲ್ಚರಲ್ ಒಫ್ಸರಸಾಹೇಬರೊಡನೆ ವಿಚಾರವನಿನಮಯಮಾಡಿಕೊಂಡು ಗೊತ್ತು ಪಡಿಸುವರು. **ಮೊದಲ** ಪೆಯ ದಿನ ಉಮೇದುವಾರರು ಪ್ರತ್ಯಕ್ಷ ಪರೀಕ್ಷೆಯು ಪ್ರಾರಂಭವಾಗುವದಕ್ಕಿಂತ ೧ ತಾಸು ಮೊದಲು ಪರೀಕ್ಷೆಯ ಸ್ಥಳದಲ್ಲಿ ಹಾಜರ ಇರಲೇಬೇಕು.

೧೯೪೪ ನೆಯ ಇಸ್ವಿಯಲ್ಲಿ ನಡೆಯುವ ಗಂಡುಮಕ್ಕಳ ಉರ್ದು ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆಯು

ವಾರ ಮತ್ತು ತಾರೀಖು	ವೇಳೆ		ವಿಷಯಗಳು	ಗುಣಗಳು	ಶರಾ
	ಇಂದ	ವರೆಗೆ			
ಸೋಮವಾರ	೧೨	೧	ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದುವಾರರ ಹಾಜರಿ ತೆಗೆದುಕೊಳ್ಳುವದು.		
೩–೪–೧೯೪೪	೧	೪	ಎರಡನೆಯ ಪತ್ರ:— ನಿಬಂಧ ಅಥವಾ ರಿಪೋರ್ಟು ಪತ್ರಬರೆಹ ಮುಂತಾದವು. ಕನ್ನಡ-ಉರ್ದು ಅಥವಾ ಮರಾಠಿ ಉರ್ದು ಉಮೇದುವಾರರಿಗೆ ಕನ್ನಡದಲ್ಲಿ; ಅಥವಾ ಮರಾಠಿಯಲ್ಲಿ. ಉರ್ದು ಕನ್ನಡ ಅಥವಾ ಉರ್ದು-ಮರಾಠಿ ಉಮೇದುವಾರರಿಗೆ ಉರ್ದುವಿನಲ್ಲಿ.	೧೦೦	
ಪದರ	೪	೭	ಐದನೆಯ ಪತ್ರ:—ಆರೋಗ್ಯವಿಜ್ಞಾನ ಅಥವಾ ಶರೀರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಮತ್ತು ಮತ್ತು ಶಾಸ್ತ್ರೀಯ ವಿಷಯದ ಆರಂಭದ ಪಾಠಗಳು.	೧೦೦	
ಮಂಗಳವಾರ	೧೨	೩	ಮೂರನೆಯ ಪತ್ರ:— (ಅ) ಅಂಕಗಣಿತ	(ಅ) ೧೦೦	
೪–೪–೧೯೪೪					
ಪದರ	೪	೭	ನಾಲ್ಕನೆಯ ಪತ್ರ:— (ಅ) ಮತ್ತು (ಬ) ಇತಿಹಾಸ ಮತ್ತು ಭೂಗೋಲ	(ಅ) ೫೦ (ಬ) ೫೦	
ಬುಧವಾರ	೧೨	೩	ಮೂರನೆಯ ,, (ಬ) ಮತ್ತು (ಕ) ಭೂಮಿತಿ ಮತ್ತು ಹಿಂದೀ ಜಮಾಖರ್ಚು	(ಬ) ೫೦ (ಕ) ೫೦	
೫–೪–೧೯೪೪					
ಪದರ	೪	೭	ಮೊದಲನೆಯ ಪತ್ರ:— (ಅ) ಮತ್ತು (ಬ) ಪ್ರಾಂತಿಕ ಭಾಷೆ, ಕನ್ನಡ, ಮರಾಠಿ ಅಥವಾ ಉರ್ದು	(ಅ) ೭೫ (ಬ) ೭೫	
ಗುರುವಾರ	೧೨	೨	ಆರನೆಯ ಪತ್ರ:— (ಅ) ಪ್ರಾಂತಿಕ ಭಾಷೆ ಉರ್ದು ಅಥವಾ ಕನ್ನಡ ಅಥವಾ ಮರಾಠಿ	(ಅ) ೫೦	
೬–೪–೧೯೪೪					
ಪದರ	೩	೫	ಆರನೆಯ ಪತ್ರ:— (ಬ) ಪತ್ರ ಅಥವಾ ರಿಪೋರ್ಟು ಬರೆಹ ಪತ್ರಬರೆಹ ಮುಂ. (* ಕನ್ನಡ ಉರ್ದು ಅಥವಾ ಮರಾಠಿ ಉರ್ದು ಉಮೇದುವಾರರಿಗೆ ಉರ್ದುವಿನಲ್ಲಿ ಉರ್ದು-ಕನ್ನಡ ಅಥವಾ ಉರ್ದು ಮರಾಠಿ ಉಮೇದುವಾರರಿಗೆ ಕನ್ನಡದಲ್ಲಿ ಅಥವಾ ಮರಾಠಿಯಲ್ಲಿ)	(ಬ) ೫೦	

ವಿ. ಸೂ.— ಮೊದಲನೆಯ ದಿನ ಉಮೇದುವಾರರು ಪ್ರತ್ಯಕ್ಷ ಪರೀಕ್ಷೆಯು ಪ್ರಾರಂಭವಾಗುವದಕ್ಕಿಂತ ೧ ತಾಸು ಮೊದಲು ಪರೀಕ್ಷೆಯ ಸ್ಥಳದಲ್ಲಿ ತಪ್ಪದೆ ಹಾಜರ ಇರಲೇಬೇಕು.

ನೆಲ್ಲಿ (ಆಮಲಕ)

ನೆಲ್ಲಿಯ ಗಿಡಗಳು ಉಷ್ಣಕಟಿಬಂಧದಲ್ಲಿ ಚೆನ್ನಾಗಿ ಬೆಳೆಯುವ ಮಧ್ಯಮ ನಿಲುವಿಕೆಯ ಗಿಡಗಳು. ನಮ್ಮ ದೇಶದ ಬಹುಶಃ ಎಲ್ಲ ಭಾಗಗಳಲ್ಲಿಯೂ ಸಿಂಹಲ ದ್ವೀಪ, ಬ್ರಹ್ಮದೇಶ, ಮಲಾಯಾ, ಜಾವಾ, ಚೀನ ದೇಶಗಳಲ್ಲಿಯೂ ಬೆಳೆಯುವವು. ಸಮುದ್ರ ಸಪಾಟಿಯಿಂದ ೪ ಸಾವಿರ ಫೂಟಿಗಿಂತ ಹೆಚ್ಚು ಎತ್ತರದ ಪ್ರದೇಶದಲ್ಲಿ ಅಷ್ಟು ಹುಲುಸಾಗಿ ಬೆಳೆಯಲಾರವು. ಅಡವಿಗಳಲ್ಲಿ ಬೆಳೆಯುವದು ಹೆಚ್ಚು. ತುಲಸಿಯ ಗಿಡ, ಅಶ್ವತ್ಥ ಬಿಲ್ವ ವೃಕ್ಷಗಳು ಮುಂತಾದವುಗಳಂತೆ ನೆಲ್ಲಿಯ ಗಿಡವೂ ಹಿಂದೂಗಳಿಗೆ ಪವಿತ್ರವಾಗಿರುವದರಿಂದಲೂ ಮನೆಮದ್ದಿನ ಗಿಡವೆಂಬ ಭಾವನೆಯಿಂದಲೂ ಜನರು ಹಚ್ಚಿ ಬೆಳೆಯಿಸುವದುಂಟು. ನೆಲ್ಲಿಯ ಗಿಡಗಳನ್ನು ಬೆಳೆಯಿಸಿ ಅದರದೇ ಬನವನ್ನು ಮಾಡುವದೂ ಉಂಟು. ಕಾರ್ತೀಕ ಮಾಹಾತ್ಮೆಯಲ್ಲಿಯೂ ವಿರಾಟ ಕೌಮುದಿಯಲ್ಲಿಯೂ ನೆಲ್ಲಿಯ ಗಿಡದ ಪೂಜೆ, ನೆಲ್ಲಿಯ ಕಾಯಿಯ ದಾನ, ಬಡಬಗ್ಗರಿಗೆ ನೆಲ್ಲಿಯ ಕಾಯಿಗಳನ್ನು ಹಂಚುವದು ಇವೇ ಮೊದಲಾದ ಧಾರ್ಮಿಕ ವಿಧಿಗಳು ಉಕ್ತವಾಗಿವೆ.

ನೆಲ್ಲಿಯ ಕಾಯಿಯಲ್ಲಿಯೂ ಎಲೆಯ ರಸದಲ್ಲಿಯೂ ಬಣ್ಣದ ದ್ರವ್ಯಗಳಿರುವದರಿಂದ ಇವನ್ನು ಬಣ್ಣಕ್ಕೆ ಉಪಯೋಗಿಸುವರು. ನೆಲ್ಲಿಯ ಕಾಯಿಯ ಅಥವಾ ಎಲೆಯ ರಸವನ್ನು ಒಣಗಿಸಿ ಹಣಿಗೆ ಹಚ್ಚುವ ಸಾದು (ಸಾಜು) ಮಾಡುವರು. ಇವುಗಳಲ್ಲಿ ಟಾನಿನವಿರುವದು.

ನೆಲ್ಲಿಯ ಗಿಡದ ಚಕ್ಕೆ, ಕಟ್ಟಿಗೆ, ಚಿಕ್ಕ ಟೊಂಗೆಗಳು ಇವುಗಳನ್ನು ರಾಡಿ ನೀರನ್ನು ತಿಳಮಾಡುವದಕ್ಕೆ ಉಪಯೋಗಿಸುವರು. ಇವನ್ನು ರಾಡಿ ನೀರಿನಲ್ಲಿ ಜೆಲ್ಲುವದರಿಂದ ತುಸುಹೊತ್ತಿನಲ್ಲಿ ಅದು ತಿಳಿಯಾಗುವದಂತೆ. ನೆಲ್ಲಿಯ ಕಟ್ಟಿಗೆಯು ನೀರಲ್ಲಿ ಕೊಳೆಯುವದಿಲ್ಲ. ಇದಕ್ಕಾಗಿಯೂ ಕಲಕು ನೀರನ್ನು ತಿಳಿಮಾಡುವದೆಂಬ ವಿಚಾರದಿಂದಲೂ ಬಾವಿಯ ಕೆಳಗಿನ ಚೌಕವನ್ನು ಅಥವಾ ವರ್ತುಳವನ್ನು ತಯಾರಿಸುವದಕ್ಕೆ ನೆಲ್ಲಿಯ ಕಟ್ಟಿಗೆಯನ್ನು ಉಪಯೋಗಿಸುವರು. ಚೆನ್ನಾಗಿ ಬಲಿತ ನೆಲ್ಲಿಯ ಕಟ್ಟಿಗೆಯನ್ನು ಒಕ್ಕಲುತನದ ಆಯುಧಗಳನ್ನು ಮಾಡುವದಕ್ಕೆ ಉಪಯೋಗಿಸುವರು.

ನಮ್ಮ ಭಾರತೀಯ ಆಯುರ್ವೇದದಲ್ಲಿ ತ್ರಿಫಳಕ್ಕೆ ಒಂದು ವಿಶಿಷ್ಟ ಸ್ಥಾನವಿದೆಯೆಂಬುದು ಬಹುಜನರು ಬಲ್ಲ ಮಾತು. ನೆಲ್ಲಿಯಕಾಯಿ, ತಾರೀಕಾಯಿ, ಅಳಲೆಕಾಯಿ, ಇವೇ ಆ ತ್ರಿಫಳಗಳು. ಜರಕಾಚಾರ್ಯನ ಭಾವಪ್ರಕಾಶ ಗ್ರಂಥದಲ್ಲಿ ಅನೇಕ ಮಹತ್ವದ ಔಷಧಗಳನ್ನು ತಯಾರಿಸುವದಕ್ಕೆ ನೆಲ್ಲಿಯಕಾಯಿಯು ಒಂದು ಮಹತ್ವದ ಘಟಕವೆಂದು ವರ್ಣಿತವಾಗಿದೆ. 'ಕಾಯಕಲ್ಪ' ವಿಧಾನದಲ್ಲಿಯೂ ಚವನಪ್ರಾಶ್ಯದಲ್ಲಿಯೂ ನೆಲ್ಲಿಯಕಾಯಿಯು ಮುಖ್ಯವಾಗಿ ಉಪಯೋಗಿಸಲ್ಪಡುವದು. ನೆಲ್ಲಿಯಕಾಯಿಯನ್ನು ಚೆನ್ನಾಗಿ ಒಣಗಿಸಿ ಪುಡಿಮಾಡಿಟ್ಟುಕೊಂಡು ಜೇನುತುಪ್ಪದೊಡನೆ ಬೆರಿಸಿ ಸೇವಿಸುವದರಿಂದ ಮುದುಕರು ತರುಣರಂತಾಗುವದೆಂದು 'ವೈದ್ಯ ಮನೋರಮಾ' ಎಂಬ ಗ್ರಂಥದಲ್ಲಿ ಹೇಳಿದೆ. ಡೈಮೋಕನೆಂಬವನು ಮಹಮ್ಮದೀಯ 'ಯುನಾನಿ' ಶಾಸ್ತ್ರದಲ್ಲಿಯೂ ನೆಲ್ಲಿಕಾಯಿಗೆ ಒಂದು ಮಹತ್ವದ ಸ್ಥಾನವಿದೆಯೆಂದೂ ಇದರಲ್ಲಿ ಸ್ತಂಭಕ ವೀರ್ಯವರ್ಧಕ ಮೊದಲಾದ ಗುಣಗಳಿರುವವೆಂದೂ ಮನುಷ್ಯನ

ಶರೀರದೊಳಗಿನ ರಸಧಾತುಗಳನ್ನು ಶುದ್ಧಗೊಳಿಸುವ ಉತ್ತಮ ಔಷಧಿಯೆಂದೂ ಹೇಳಿರುವನು. ತುರ್ಕಸ್ಥಾನದಲ್ಲಿ ತಾಜಾಕಾಯಿಯ ರಸವನ್ನು ಪುಪ್ಪುಸಗಳ ಬಾವಿನ ರೋಗಕ್ಕೆ ಕೊಡುವರು. ತಾಜಾಕಾಯಿಯ ರಸದ ಶರಬತ್ತು ತಯಾರಿಸಿ ಜೇನುತುಪ್ಪ ದೀಪದ್ರಾಕ್ಷೆಗಳೊಡನೆ ಸೇವಿಸುವದರಿಂದ ಮೂತ್ರರೋಗನಿವಾರಣೆಗೆ ಸಹಾಯವಾಗುವದೆಂದೂ ಶರೀರದಲ್ಲಿ ತಂಪು ಹುಟ್ಟಿಸಿ ಉರಿಮೂತ್ರ ಮುಂತಾದ ವಿಕಾರಗಳನ್ನು ಪರಿಹರಿಸುವದೆಂದೂ ಹೇಳುವರು.

ಮಿದುಳಿನಲ್ಲಿ ರಕ್ತ ಪರಿಚಲನವು ಸರಿಯಾಗಿ ನಡೆಯದಿರುವದರಿಂದ ಉಂಟಾಗುವ ನೆತ್ತಿ ಉರಿಯುವದು, ತಲೆಶೂಲೆ, ಕೂದಲು ಉದುರುವದು, ಸರಿಯಾದ ವಿಚಾರ ಸೂಚಿಸದಿರುವದು, ಮಿದುಳಿನ ವಿಕಾರವಾಗುವದು ಇವೇ ಮೊದಲಾದ ಲಕ್ಷಣಗಳಿರುವ ಮೇದೋವಿಕಾರದಲ್ಲಿ ಸಾಸಿವೆಯ ಎಣ್ಣೆಯಲ್ಲಿ ನೆಲ್ಲಿಯಕಾಯಿಯನ್ನು ನೆನೆಯಿಟ್ಟು ತಯಾರಿಸಿದ ಎಣ್ಣೆಯನ್ನು ತಲೆಗೆ ಹಾಕುವದರಿಂದ ಆ ಎಲ್ಲ ರೋಗಲಕ್ಷಣಗಳು ಕಡಿಮೆಯಾಗಿ ತಲೆಯ ಕೂದಲು ಚೆನ್ನಾಗಿ ಬೆಳೆದುಬರುವದೆಂದು ಸಿವಿಲ್‌ಸರ್ಜನ್ ಡಿ. ಬಸುರವರು ತಮ್ಮ ಅನುಭವವನ್ನು ಪ್ರಕಟಿಸಿದ್ದಾರೆ. ಆಮಲಕ ತೈಲ ಅಥವಾ ಭೃಂಗಾಮಲಕತೈಲವು ತಲೆಯ ಕೂದಲಿನ ಬೆಳೆವಣಿಗೆಗೆ ತುಂಬಾ ಸಹಾಯಕವಾಗುವದೆಂಬದು ನಮ್ಮೆಲ್ಲರ ಅನುಭವದ ಮಾತು. ಈ ತೈಲದಲ್ಲಿ ನೆಲ್ಲಿಯಕಾಯಿ (ಆಮಲಕ) ಯು ಮುಖ್ಯ ಘಟಕವಾಗಿರುವದು. ರಕ್ತಸ್ರಾವ, ಆಮಾಂಶ, ಹೊಟ್ಟೆ ಜಾಡಿಸುವದು, ಈ ವಿಕಾರಗಳಲ್ಲಿ ನೆಲ್ಲಿಯಕಾಯಿಯನ್ನು ಒಣಗಿಸಿ ಕುಟ್ಟಿದ ಪುಡಿಯನ್ನು ಕೊಡುವರು. ಪರ್ಶಿಯಾ (ಇರಾಣ) ದೇಶದಲ್ಲಿ ಜಂತುವಿಕಾರಗಳಲ್ಲಿ ೨-೩ ಚಮಚೆಯಷ್ಟು ನೆಲ್ಲಿಯಕಾಯಿಯ ರಸವನ್ನು ಕೊಡುವರು. ಅಡಪು, ಹುರುಕು, ಕಜ್ಜಿ ಮುಂತಾದ ಚರ್ಮರೋಗಗಳಿಗೆ ನೆಲ್ಲಿಯ ಬೀಜವನ್ನು ಹುರಿದು ಅಥವಾ ಸುಟ್ಟು ಪುಡಿಮಾಡಿ ಎಣ್ಣೆಯಲ್ಲಿ ಕಲಿಸಿ ಹಚ್ಚುವರು. ನೆಲ್ಲಿಯಕಾಯಿಯ ತಾಜಾರಸವನ್ನು ತುಪ್ಪದೊಡನೆ ಬೆರಿಸಿ ಸೇವಿಸುವದರಿಂದ ಶಕ್ತಿವರ್ಧನೆಯಾಗಿ ಉತ್ಸಾಹವುಂಟಾಗುವದು. ಶಾರೀರಿಕ ಚಟುವಟಿಕೆಗಳಿಗೆ ಮನಸ್ಸು ಹುಮ್ಮನಗೊಳ್ಳುವದು. ನೆಲ್ಲಿಯ ಸೊಪ್ಪಿನ ರಸದಲ್ಲಿ ಮೆಂತೆಯನ್ನು ಅರೆದು ಕೊಡುವದರಿಂದ ಹಳೆಯ ಆಮಾಂಶವು ಗುಣವಾಗುವದು. ಮತ್ತು ಶಕ್ತಿವೃದ್ಧಿಯಾಗುವದು. ನೆಲ್ಲಿಯ ಸೊಪ್ಪನ್ನು ನೆನೆಯಿಟ್ಟು ಬಟ್ಟಿಗೆ ಹಾಕಿ ತೆಗೆದ ಎಣ್ಣೆಯನ್ನು ಸುಗಂಧದ ಎಣ್ಣೆಯನ್ನು ತಯಾರಿಸುವದಕ್ಕೆ ಉಪಯೋಗಿಸುವರು. ನೆಲ್ಲಿಯ ಹಳದಿಯ ಹೂವುಗಳಿಗೆ ಒಂದು ಬಗೆಯ ಸುವಾಸನೆಯಿದ್ದು ಅದನ್ನು ಉಷ್ಣತಾಶಾಮಕ ಔಷಧದಂತೆ ಉಪಯೋಗಿಸುವರು.

ನೆಲ್ಲಿಯಕಾಯಿಗಳನ್ನು ನಮ್ಮ ದಿನದ ಆಹಾರದಲ್ಲಿಯೂ ಉಪಯೋಗಿಸುವರು. ತಾಜಾ ಕಾಯಿಗಳು ಹೆಚ್ಚು ರುಚಿಕರವಾಗಿರುವವು. ಅವು ಸಿಗದ ಕಾಲದಲ್ಲಿ ಉಪಯೋಗಿಸುವದಕ್ಕಾಗಿ ಒಣಗಿಸಿ ಇಟ್ಟುಕೊಳ್ಳುವರು. ಅದಕ್ಕೆ ನೆಲ್ಲಿಚಿಟ್ಟು ಎನ್ನುವರು. ನೆಲ್ಲಿಯಕಾಯಿಯಿಂದ ಗುಳಂಬಾ, ಪಚಡಿ, ಚಟ್ನಿ ಉಪ್ಪಿನಕಾಯಿಗಳನ್ನು ಮಾಡುವರು. ಏಕಾದಶಿಯ ಉಪವಾಸದ ಮರುದಿನ ದ್ವಾದಶಿಯ ಊಟಕ್ಕೆ ನೆಲ್ಲಿಯಕಾಯಿಯ ಚಟ್ನಿಯು ತುಂಬ ಹಿತಕರವಾದ ಆಹಾರವೆಂಬ ಭಾವನೆಯಿಂದಲೋ ಏನೋ ಆಹೊತ್ತು ಒಂದಿಲ್ಲೊಂದು ಬಗೆಯಿಂದ ನೆಲ್ಲಿಯಕಾಯಿಯನ್ನು ಸೇವಿಸಲೇಬೇಕೆಂಬದು ಪೂರ್ವಕಾಲದಿಂದಲೂ ನಮ್ಮಲ್ಲಿ ನಡೆದು ಬಂದ ರೂಢಿಯಾಗಿದೆ. ನೆಲ್ಲಿಯಕಾಯಿಯಲ್ಲಿ ಟಾನಿನವಿರುವದರಿಂದ ನಾಲಗೆಗೆ ಒಗರು ಹತ್ತುವದು; ಮತ್ತು ಹೊಟ್ಟೆಯೊಳಗೆ ಹೋದಾಗ ಉತ್ತೇಜಕವೆನಿಸುವದು. ಆದ್ದರಿಂದ ಅದನ್ನು ಬೆಲ್ಲದೊಡನೆ ಕೂಡಿಸಿ ಉಪಯೋಗಿಸುವರು. ಬೆಲ್ಲವು ಇಲ್ಲದಿದ್ದಲ್ಲಿ ಬೇರೆ ಯಾವದಾದರೂ ಸೌಮ್ಯ ಆಹಾರದ ಪದಾರ್ಥದೊಡನೆ ಬೆರಿಸಿ ಬಳಸುವರು.

ನೆಲ್ಲಿಯಕಾಯಿಯಲ್ಲಿ 'ಸಿ' ವಿಟಾಮಿನ್ನವು ಹೆಚ್ಚು ಪ್ರಮಾಣದಿಂದ ಇರುವದು. ಮತ್ತು ಈ ಕಾಯಿಯಲ್ಲಿಯೇ 'ಸಿ' ವಿಟಾಮಿನ್ನವು ಇಷ್ಟು ದೊಡ್ಡ ಪ್ರಮಾಣದಲ್ಲಿರುವದಲ್ಲದೆ ಇನ್ನಾವ ಕಾಯಿಪಲ್ಲೆಯಲ್ಲಿಯೂ ಇಷ್ಟು ಜಾಸ್ತಿಗಿಲ್ಲವೆಂದು ಹೇಳುವದುಂಟು. ನೆಲ್ಲಿಯ ಕಾಯಿಯ ರಸದಲ್ಲಿ ಕಿತ್ತಳೆಹಣ್ಣಿನ ರಸದ ೨೦ ಪಟ್ಟು ವಿಟಾಮಿನ್ನವಿರುವದೆಂದು ಕಂಡು ಬಂದಿರುವದು. ಒಂದೇ ನೆಲ್ಲಿಯಕಾಯಿಯಲ್ಲಿ ಎರಡು ಮೂರು ಕಿತ್ತಳೆ ಹಣ್ಣಿನಲ್ಲಿರುವಷ್ಟು 'ಸಿ' ವಿಟಾಮಿನ್ನವು ಇರುವದುಂಟು.

ಒಣಗಿಸುವದರಿಂದ ಇಲ್ಲವೆ ಹುರಿಯುವದರಿಂದ ಸಾಮಾನ್ಯವಾಗಿ ಫಲಗಳಲ್ಲಿರುವ ವಿಟಾಮಿನ್ನವು ಕೆಟ್ಟು ಹೋಗುವದು. 'ಸಿ' ವಿಟಾಮಿನ್ನವಂತೂ ಇದರಿಂದ ಸಂಪೂರ್ಣ ನಿರುಪಯುಕ್ತಸ್ಥಿತಿಗೆ ಬಂದುಬಿಡುವದು. ಆದರೆ ನೆಲ್ಲಿಯಕಾಯಿಯು ಈ ಮಾತಿಗೆ ಅಪವಾದರೂಪವಾಗಿದೆ. ಇದರಲ್ಲಿರುವ ಹುಳಿಯ ಅಂಶಕ್ಕೆ 'ಸಿ' ವಿಟಾಮಿನ್ನವನ್ನು ಕಾದುಕೊಳ್ಳುವ ಶಕ್ತಿಯಿರುವದು. ಆದ್ದರಿಂದ ನೆಲ್ಲಿಯ ಕಾಯಿಯು ಒಣಗಿಸಿದ ಪುಡಿಯಲ್ಲಿಯೂ ತಕ್ಕಷ್ಟು 'ಸಿ' ವಿಟಾಮಿನ್ನವು ಹಾಗೆಯೇ ಉಳಿದಿರುವದು. ನೆಲ್ಲಿಯ ಕಾಯಿಯನ್ನು ಹಚ್ಚಿ ಒಣಗಿಸಿ ಪುಡಿ ಮಾಡಿಟ್ಟುಕೊಂಡು ಅದು ಸಿಗದೆ ಇದ್ದ ಕಾಲದಲ್ಲಿ ಉಪಯೋಗಿಸುವರು. ನೆಲ್ಲಿಯ ಕಾಯಿಗಳು ಸಾಮಾನ್ಯವಾಗಿ ಚೀಸಗೆ ಕಾಲದಲ್ಲಿ ಪಕ್ವವಾಗುವವು. ನೆಲ್ಲಿಯ ಚಟ್ಟಿನ ಪುಡಿಯನ್ನು ಜೆನ್ನಾಗಿ ಒಣಗಿಸಿ ಹೊರಗಿನ ತಂಪು ತಗಲದಂತೆ ಬಾಯಿ ಮುಚ್ಚಿದ ಪಾತ್ರೆಯಲ್ಲಿ ಪಾಕಿ ತಂಪುಳ್ಳ ಸ್ಥಳದಲ್ಲಿ ಇಟ್ಟಿರಬೇಕು.

ನಮ್ಮ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ನೆಲ್ಲಿಯ ಗಿಡಗಳು ಬೆಳೆಯುವವು. ಮಲೆನಾಡಿನ ಅಡವಿಗಳಲ್ಲಂತೂ ಇವು ಹುಲುಸಾಗಿ ಬೆಳೆದು ಚಿಕ್ಕಚಿಕ್ಕ ಟೊಂಗೆಗಳಿಗೆ ದಂಡೆದಂಡೆಯಾಗಿ ಕಾಯಿಗಳಾಗಿರುವವು. ಆದರೆ ನಮ್ಮ ಜನರು ಇದನ್ನು ಹೆಚ್ಚು ತಿಳುವಳಿಕೆಯಿಂದ ಉಪಯೋಗಿಸಿಕೊಂಡರೆ ಒಳಿತಾಗುವದು.

ಪತ್ರಗಳ ಮುಖ್ಯಾಂಶಗಳು

ಹಂದಿಗುಂದ (ಬೆಳಗಾವಿ ಜಿಲ್ಲೆ) ಇಲ್ಲಿಯ ಹೆಡ್‌ಮಾಸ್ತರರಾದ ಶ್ರೀ. ಶಿ. ಚ. ಹಿರೇಮಠ ಇವರ ಹಿರಿಯತನದಲ್ಲಿ ಸಭೆ ನೆರೆದು ಶ್ರೀ. ಮಲ್ಲಿಕಾರ್ಜುನ ವಾಚನಾಲಯವನ್ನು ಸ್ಥಾಪಿಸುವದು ಗೊತ್ತಾಯಿತು. ಊರ ಹಿರಿಯರು ಈ ಕೆಲಸಕ್ಕಾಗಿ ೪೫ ರೂ. ಕೂಡಿಸಿ ಕೊಟ್ಟರು.

—ಶ್ರೀ. ವೀ. ಫ. ಕೋರಿ ಅ. ಮಾಸ್ತರ

ಕಟಿಗೇರಿ (ವಿಜಾಪುರ ಜಿಲ್ಲೆ) ತಾ. ೨೩-೧-೧೯೪೪ ನೆಯ ದಿವಸ ಈ ಭಾಗದ ಶಿ. ಶಿ. ಸಮ್ಮೇಲನವು ಮೆ. ೧೧ ನೆ. ಅ. ಡೆ. ಎ. ಇ. ಆವರ ಹಿರಿಯತನದಲ್ಲಿ ನೆರವೇರಿತು. ಶಾರೀರಿಕ ಚಟುವಟಿಕೆಗಳು, ಮಾದರಿಯ ಪಾಠಗಳು ಆದನಂತರ ಉದ್ಯೋಗ ಶಿಕ್ಷಣ ವಾಚನಾಲಯಗಳ ಬಗೆಗೆ ಚರ್ಚೆಯಾಯಿತು. ಗ್ರಾಮಪಂಚಾಯತಿಯವರು ಬಾಲಕರ ಉತ್ತೇಜನಕ್ಕಾಗಿ ೧೫ ರೂ. ಕೊಟ್ಟರು ರಾತ್ರಿಯಲ್ಲಿ "ಕಿವಿಮಾತು" ಎಂಬ ಏಕಾಂಕ ನಾಟಕವಾಯಿತು.

—ಶ್ರೀ. ರಾ. ನಾ ಕುಲಕರ್ಣಿ ಹೆ. ಮಾಸ್ತರ

ಗುಳೇದಗುಡ್ಡ (ವಿಜಾಪುರ ಜಿಲ್ಲೆ) ಇಲ್ಲಿಯ ಕನ್ನಡ ಹೆಣ್ಣುಮಕ್ಕಳ ಎರಡನೆಯ ನಂಬರ ಶಾಲೆಗೆ ಈ ಊರಲ್ಲಿಯ ಶ್ರೀ. ರಾಜನಾಳ ಮುರಿಗೆಪ್ಪನವರು, ಶ್ರೀ. ಸೋಮು. ಲಿಂಗಪ್ಪನವರು ಶ್ರೀ. ಶಂಕರಲಾಲರು ಶ್ರೀ. ಪರ್ವತೀಕರ ರಂಗರಾಯರು ಮೊದಲಾದವರು ಕೂಡಿ ಒಂದು ಗಡಿಯಾರ, ಒಂದು ಗಂಟೆ, ೨೧ ಪಾಟಿಗಳು, ೧೨ ಕ್ರಮಿಕ ಪುಸ್ತಕಗಳು ಮೊದಲಾದ ಸಾಹಿತ್ಯಗಳನ್ನು ಕೊಟ್ಟಿರುವರು. —ಶ್ರೀ. ಬ. ಓ. ಹಿರೇಮಠ ಹೆಡ್‌ಮಾಸ್ತರ

ಕಾರವಾರ— ಕಳೆದ ಡಿಶಂಬರ-ಜನವರಿ ತಿಂಗಳುಗಳಲ್ಲಿ ಶಾರೀರಿಕ ಶಿಕ್ಷಣ ವರ್ಗವು ನಡೆದು ಮೆ. ಎ. ಇ. ಅವರಾದ ಖಾನಸಾಹೇಬರ ಹಿರಿಯತನದಲ್ಲಿ ಮುಗಿಯಿತು. ಇದರಲ್ಲಿ ೬೬ ಶಿಕ್ಷಕ ಶಿಕ್ಷಕಿಯರು ಭಾಗ ವಹಿಸಿದ್ದರು. ವರ್ಗದ ಚಾಲಕರಾದ ಶ್ರೀ. ದೇಸಾಯಿ ಅವರು, ಮೆ. ಡಿ. ಎ. ಇ. ಸಾಹೇಬರು, ಸ್ಕೂ. ಬೋ. ಚೇಅರಮನ್ನರು ಶಾರೀರಿಕ ಶಿಕ್ಷಣದ ಮಹತ್ವ. ವನ್ನು ತಿಳಿಸಿ ಹೇಳಿದರು. —ಶ್ರೀ. ಪಾಂಡುರಂಗ ಕುಡುತಕರ

ಬಾಗಲಕೋಟೆ— ಇಲ್ಲಿಯ ಬಸವೇಶ್ವರ ಪ್ರಾಥಮಿಕ ಶಾಲೆಯ ಅ. ಮಾಸ್ತರರಾದ ಶ್ರೀ. ಎಮ್. ಜಿ. ವಸ್ತ್ರದ ಶ್ರೀ. ವ್ಹಿ. ಜಿ. ಪಾಟೀಲ ಇವರಿಗೆ ವಿಜಾಪುರ ಬೋರ್ಡಿನಲ್ಲಿ ನೇಮಕವಾದುದರಿಂದ ಬೀಳ್ಕೊಡುವ ಸಮಾರಂಭವನ್ನು ಪ್ರಿನ್ಸಿಪಾಲರಾದ ವ್ಹಿ. ಸಿ. ಬ್ಯಾಹಟ್ಟಿ ಅವರ ಹಿರಿಯತನದಲ್ಲಿ ನೆರವೇರಿಸಲಾಯಿತು. ಅಧ್ಯಕ್ಷರು ಇವರ ಸತ್ಯತೆ ಕಾರ್ಯತತ್ಪರತೆ. ಗಳನ್ನು ಹೊಗಳಿದರು. —ಶ್ರೀ. ಎಸ್. ಬಿ. ಚಿತ್ತವಾಡಗಿ

ಹುಬ್ಬಳ್ಳಿ—ಕಳೆದ ವರ್ಷ ಇಲ್ಲಿಯ ಪ್ರಾ. ಶಾಲೆಗಳಿಂದ ಪ್ರಾ. ಶಾ. ಪ್ರ. ಪತ್ರ ಪರೀಕ್ಷೆಗೆ ಕುಳಿತು ಪಾಸಾದ ಗಂಡು ಹಾಗು ಹೆಣ್ಣುಮಕ್ಕಳಿಗೆ ಪ್ರಮಾಣ ಪತ್ರಗಳನ್ನೂ ಇನಾಮು. ಗಳನ್ನೂ ಹಂಚುವ ಸಮಾರಂಭವು ತಾ. ೨೦-೧೨-೧೯೪೩ನೆಯ ದಿನ ಮೆ. ಡಿ. ಸಿ. ಪಾವಟೆ ಅಸಿ. ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಪುಣೆ, ಅವರ ಹಿರಿಯತನದಲ್ಲಿ ಜರುಗಿತು. ಕನ್ನಡ ಮರಾಠಿ ಉರ್ದು ಭಾಷೆಗಳ ಗಂಡು ಹಾಗು ಹೆಣ್ಣುಮಕ್ಕಳಲ್ಲಿ ಮೊದಲಿನ ಮೂರು ನಂಬರುಗಳಲ್ಲಿ ಪಾಸಾದವರಿಗೆ ಮ್ಯುನಸಿಪಾಲಟಿಯಿಂದ ೬೦ ರೂಪಾಯಿಗಳನ್ನು ಮೆಚ್ಚುಗೆಯಾಗಿ ಹಂಚಲಾಯಿತು. ಇದೇ ಸಮಯದಲ್ಲಿ ಇಲ್ಲಿಯ ಸ್ಕೂ. ಬೋ. ಚೇಅರ. ಮನ್ನರಾದ ಮೆ. ಟಿ. ಎನ್. ಹಬೀಬ ಅವರು ಮ್ಯು. ಶಾಲೆಗಳಿಂದ ಕುಳಿತು ಎಲ್ಲಕ್ಕೂ ಹೆಚ್ಚು ಗುಣಗಳನ್ನು ಪಡೆದ ಪಾಸಾದ ಹುಡುಗನಿಗೆ ಹಾಗು ಒಬ್ಬ ಹೆಣ್ಣುಮಗಳಿಗೆ (ಭಾಷಾ. ಭೇದವಿಲ್ಲದೆ) ಐದೈದು ರೂಪಾಯಿ ಮೆಚ್ಚುಗೆ ಕೊಟ್ಟರಲ್ಲದೆ ಇನ್ನುಮುಂದೆ ಪ್ರತಿವರ್ಷ ಇದೇ ಪ್ರಕಾರ ತಮ್ಮ ಜೀವಮಾನದ ವರೆಗೆ ಮೆಚ್ಚುಗೆ ಕೊಡುವದಾಗಿ ವಚನವಿತ್ತರು. ಉದಾರ ಶ್ರೀಮಂತರ ಈ ಕೃತಿಯು ಅನುಕರಣೀಯವಾಗಿದೆ.

—ಶ್ರೀ. ಫ. ಹ. ಸಂಶೀಮಠ ಮಾಸ್ತರರು ೨ನೇ ನ. ಶಾಲೆ ಹುಬ್ಬಳ್ಳಿ

ಕೆರೂರು— (ವಿಜಾಪುರ ಜಿಲ್ಲೆ) ಇಲ್ಲಿಯ ವಿದ್ಯಾರ್ಥಿ ವಾಚನಾಲಯಕ್ಕೆ ಶ್ರೀಮತಿ ಬಕುಲಾಬಾಯಿ ಜೋಶಿ ಶ್ರೀ. ಡಾ. ನರಗುಂದಕರ ಮೊದಲಾದವರು ಭೆಟ್ಟಿಯನ್ನು ಕೊಟ್ಟು ಸಂತೋಷದಿಂದ ೨೧ ರೂ. ಕಾಣಿಕೆ ಕೊಟ್ಟರು. ಹೆಡ್‌ಮಾಸ್ತರರು ಶಾಲೆಯ ೨೫ ವಿದ್ಯಾರ್ಥಿ. ಗಳನ್ನು ಕರೆದುಕೊಂಡು ನೀಲಗುಂದದ ಪ್ರವಾಸ ಮಾಡಿ ಬಂದರು.

—ಶ್ರೀ. ಹೆಡ್‌ಮಾಸ್ತರರು ಕ. ಗ. ಮ. ಶಾಲೆ ಕೆರೂರು

ಉಮ್ಮಜ್ಜಿ— (ವಿಜಾಪುರ ಜಿಲ್ಲೆ) ಈ ಭಾಗದ ಶಿಕ್ಷಕ ಶಿಕ್ಷಕಿಯರ ಸಮ್ಮೇಲವು ಕಳೆದ ಡಿಶಂಬರ ತಿಂಗಳಲ್ಲಿ ಜರುಗಿತು. ಅಧಿಕಾರಿಗಳೂ ಸದ್ಗೃಹಸ್ಥರೂ ಆಗಮಿಸಿದ್ದರು. ಜಾತ್ರೆ ತೋರಿಸಿದ ಬಾಲಕರಿಗೆ ಪಾಟಿ, ಪುಸ್ತಕ, ಟೊಪ್ಪಿಗೆಗಳ ಮೆಚ್ಚುಗೆಯನ್ನು ಕೊಡಲಾಯಿತು.

ರಾತ್ರಿಯಲ್ಲಿ, 'ವೀರ ವಿಕ್ರಮಾದಿತ್ಯ' ಎಂಬ ಕನ್ನಡಿಗರ ಗತಕಾಲದ ಶೌರ್ಯ ಸಾಹಸದ ಸಂಗೀತ ಏಕಾಂಕ ನಾಟಕವಾಯಿತು. —ಹೆಡ್‌ಮಾಸ್ತರರು

ಬಾಗಲಕೋಟೆ ಕನ್ನಡ ಹೆಣ್ಣುಮಕ್ಕಳ ಎರಡನೆಯ ನಂಬರ ಶಾಲೆ— ಇಲ್ಲಿ ವಿದ್ಯಾರ್ಥಿನಿಯರಿಗೆ ಹಾಗು ಪ್ರೌಢ ಸ್ತ್ರೀಯರಿಗೆ ವಾಚನಾಲಯವು ಆರಂಭವಾಗಿದೆ. ಮೆ. ಎ. ಇ. ಸಾಹೇಬರು ಭೆಟ್ಟಿ ಕೊಟ್ಟು ಆನಂದವನ್ನು ವ್ಯಕ್ತಮಾಡಿದರು ಈ ಕಾರ್ಯದಲ್ಲಿ ಮೆ. ಅ. ಡೆ. ಎ. ಇ. ಅವರಾದ ಶ್ರೀ. ಕವಾಲ ಅವರು ತುಂಬ ಸಹಾಯ ಸಲಹೆಗಳನ್ನು ಕೊಟ್ಟಿದ್ದಾರೆ.

—ಶ್ರೀ. ಬ. ಮು. ವಸ್ತ್ರದ ಹೆ. ಮಿ

ಬನವಾಸಿ— (ಕಾರವಾರ ಜಿಲ್ಲೆ) ಈ ಭಾಗದ ಶಿಕ್ಷಕ ಸಮ್ಮೇಲನವು ಕಳೆದ ಡಿಶಂಬರ ತಿಂಗಳಲ್ಲಿ ಅ. ಡೆ. ಎ. ಇ ಅವರಾದ ಶ್ರೀ. ಹಗಡೆ ರಾಯರ ಹಿರಿಯತನದಲ್ಲಿ ಸಾಗಿತು. ಮೂದರಿಯ ಪಾಠಗಳಾದ ನಂತರ ಔದ್ಯೋಗಿಕ ಶಿಕ್ಷಣ, ಪ್ರೌಢರ ಶಿಕ್ಷಣ, ಬನವಾಸಿಯ ಐತಿಹಾಸಿಕ ಮಹತ್ವಗಳನ್ನು ಕುರಿತು ಉದ್ಬೋಧಕ ಭಾಷಣಗಳಾದವು. ಹಿಂದುಳಿದ ಹುಡುಗರ ವಸತಿಗೃಹದ ಬಗೆಗೆ ಹೆ. ಮಾ. ರಾದ ಶ್ರೀ. ಥೊಂಗಡೇಕರರು ಸಹಕರಿಸಲು ಕೇಳಿಕೊಂಡರು.

—ಹೆ. ಮಾ ಮಧುರವಳ್ಳಿ

ಕರಜಗಿ—(ಧಾರವಾಡ ಜಿಲ್ಲೆ) ಈ ತಾಲೂಕಿನ ಎರಡನೆಯ ವರ್ಷದ ಶಾರೀರಿಕ ಪಂದ್ಯಾಟಗಳು ಕಳೆದ ಫೇಬ್ರುವರಿ ೫ ಮತ್ತು ೬ ನೆಯ ದಿವಸಗಳಲ್ಲಿ ಡಿ. ಎಲ್. ಬಿ. ಪ್ರೆಸಿಡೆಂಟರಾದ ಶ್ರೀ. ತಂಬದ ಅವರ ಹಿರಿಯತನದಲ್ಲಿ ಜರುಗಿತು. ಅನೇಕ ಮಹನೀಯರು ಕೊಟ್ಟ ಬೆಳ್ಳಿಯ ಕಪ್ಪುಗಳನ್ನೂ ಪ್ರಮಾಣ ಪತ್ರಗಳನ್ನೂ ಜಯಶೀಲರಾದವರಿಗೆ ಅಧ್ಯಕ್ಷರ ಹಸ್ತದಿಂದ ಕೊಡಿಸಲಾಯಿತು. ವಿವಿಧ ವಿನೋದಗಳೂ ಏಕಾಂಕ ನಾಟಕಗಳೂ ನಡೆದವು.

—ಶ್ರೀ. ಚ. ಸ. ಹೂಗಾರ ತಾ. ಕಾ. ಮಾಸ್ತರ

ಬೀಳಗಿ— (ಕಾರವಾರ ಜಿಲ್ಲೆ) ಈ ಭಾಗದ ಶಿ. ಶಿ. ಸಮ್ಮೇಲನವು ೬-೨-೪೪ ನೆಯ ದಿವಸ ಸಿದ್ದಾಪುರ ಮಾಮಲೇದಾರ ಅಧ್ಯಕ್ಷತೆಯಲ್ಲಿ ನೆರೆಯಿತು. ವಿದ್ಯಾರ್ಥಿಗಳು 'ಹರಿಶ್ಚಂದ್ರ' ಎಂಬ ಸಂಗೀತ ನಾಟಕವನ್ನು ಅಭಿನಯಿಸಿದರು. ಜಾಣ ವಿದ್ಯಾರ್ಥಿಗಳಿಗೆ ಮೆಚ್ಚುಗೆಯನ್ನು ಕೊಡಿಸಲಾಯಿತು. —ಶ್ರೀ. ಗೋ. ಕೃ. ಮಂಜ್ಯೆಯನ್

ನಾಗಾವಿ— (ಗದಗ ತಾಲೂಕು) ಕಳೆದ ಫೇಬ್ರುವರಿ ತಿಂಗಳಲ್ಲಿ ಅಣ್ಣಿಗೇರಿಯಲ್ಲಿ ಜರುಗಿದ ಪಂದ್ಯಾಟಗಳಲ್ಲಿ ಈ ಶಾಲೆಯ ಬಾಲಕರು ಜಾಣ್ಮೆಯನ್ನು ತೋರಿಸಿ ಒಂದು ರೂಪಾಯಿಯನ್ನೂ ಮೂರು ಪದಕಗಳನ್ನೂ ಮೆಚ್ಚುಗೆಯಾಗಿ ಪಡೆದರು.

—ಶ್ರೀ. ಚ. ಭೀ. ಕಾಮರಡ್ಡಿ ಹೆ. ಮಾ.

ಕುರುಬಗೊಂಡ—(ಹಾವೇರಿ ತಾಲೂಕು) ೫-೨-೪೪ ನೆಯ ದಿವಸ ಕರ್ಜಗಿಯಲ್ಲಿ ನಡೆದ ಪಂದ್ಯಾಟದಲ್ಲಿ ಈ ಶಾಲೆಯ ವಿದ್ಯಾರ್ಥಿ ಶಿವಶೆಟ್ಟೆಪ್ಪ ಜನಬಸಪ್ಪ ಬಶೆಟ್ಟಿಯವರ ಈತನು ಉದ್ದ-ಎತ್ತರ-ಜಿಗಿತ, ಓಟಗಳಲ್ಲಿ ಪ್ರಥಮಸ್ಥಾನವನ್ನು ಪಡೆದು ಪಂದ್ಯಾಟಗಳ ವೀರನಾದನು. ಇವನಿಗೆ ಕರ್ಜಗಿಯ ಸನ್ಮಾನ್ಯಗೃಹಸ್ಥರಾದ ಶ್ರೀ. ತಮ್ಮಣ್ಣನವರು ಐವತ್ತು ರೂಪಾಯಿ ಬೆಲೆ ಬಾಳುವ ಬೆಳ್ಳಿಯ ಪದಕವನ್ನು ಕೊಟ್ಟಿದ್ದಾರೆ.

—ಶ್ರೀ. ಎಚ್. ಎಚ್. ಪಾಟೀಲ ಹೆ ಮಾ.

ಶಿವಮೊಗ್ಗೆಯಲ್ಲಿ ಆದ ೩೭ ನೆಯ ಸಾಹಿತ್ಯ ಸಮ್ಮೇಲನದ ಕಲಾಪ್ರದರ್ಶನದಲ್ಲಿ ಶ್ರೀ. ಕಾಥವಟೆ, ಶ್ರೀ. ಅನೂರೆ, ಶ್ರೀ. ಕುಂಬಾರ ಶ್ರೀ. ವಿ. ಗು. ಬಿರಾದರ ದೇಸಾಯಿ ಎಂಬ **ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜಿದ** ಶಿಕ್ಷಕ ವಿದ್ಯಾರ್ಥಿಗಳು ಕೈಕೆಲಸದ ಪ್ರಶಸ್ತಿ ಪತ್ರಿಕೆಗಳನ್ನು ಪಡೆದಿದ್ದಾರೆ. —ಶ್ರೀ. ಎಸ್. ಆರ್. ಕೋಹಿಡೆಕರ ಅಧ್ಯಾಪಕರು

ಎಡಗೈಯಿಂದ ನೀಡಿಕೊಂಡು ಬಲಗೈಯಿಂದ ಉಣ್ಣಬೇಕು.

(ಸಾಕ್ಷರಿಗಳಾದ ಪ್ರಬುದ್ಧರಿಗಾಗಿ)

ಬೀರನು ತೀರ ಬಡವ; ಜಾತಿಯಿಂದ ಹೊಲೆಯ; ಕೂಲಿ ಕುಂಬಳಿ ಮಾಡಿ ಹೊಟ್ಟೆ ತುಂಬಿಕೊಳ್ಳುವನು. ಈ ಕಾಲದಲ್ಲಿ ಹೊಟ್ಟೆ ತುಂಬುವದೆಂದರೇನು? ಸುಭಿಕ್ಷದ ಕಾಲವಾಗಿ ರೂಪಾಯಿಗೆ ನಾಲ್ಕು ಚಿಟ್ಟಿ ಜೋಳ ವಿದ್ದಾಗಲೇ ನಮ್ಮ ನಾಡಿನ ದುಡಿದು ಉಣ್ಣುವ ಇಂಥವರಿಗೆ ಅರೆಹೊಟ್ಟೆಯೆಂಬದು ಜನಜನಿತವಾಗಿರುವಾಗ ಪಡಿಕಾಳಿಗೆ ಹಿಡಿತುಂಬ ರೊಕ್ಕವೆನ್ನುವ ಈ ಕಾಲದಲ್ಲಿ ಅವರ ಪಾಡು ಕೇಳುವವರಾರು? ಮೂವರು ಚಿಕ್ಕ ಮಕ್ಕಳು; ಬೇನೆಬಿದ್ದು ದುಡಿಯಲಾರದ ಹೆಂಡತಿ. ಹೀಗಾದ ಮೇಲೆ ಬೀರನ ಬಡತನದ ಬಾಳನ್ನು ಯಾವ ಮಸಿಲೆಕ್ಕಣಿಕೆಗಳಿಂದ ಬರೆದು ಬಣ್ಣಿಸಬೇಕು?

ಊರಹೊರಗೆ ಬೀರನ ಚಿಕ್ಕ ಗುಡಿಸಲು; ಮೆದಿಹುಲ್ಲಿನ ಹೊದಿಕೆ ಅರ್ಧ ಮರ್ಧ ಹಾರಿಹೋಗಿ ಗಾಳಿ ಬಿಸಿಲುಗಳೆಲ್ಲ ಒಳಗೇ. ಒಂದೆರಡು ಮಡಿಕೆ, ಮಣ್ಣಿನ ಚಿಕ್ಕ ಬಿಂದಿಗೆ, ಒಂದು ರೆಂಪಿಗೆ, ಒಂದು ನಾಲಿಗೆ, ಚಿಕ್ಕದೊಂದು ಬಡಿಯುವ ಹಾರೆ, ಇಷ್ಟೇ ಅವನ ಜೀವನ ಸಾಧನಗಳು. ಹೊಸ ಕಾಲಮರೆ ಮಾಡಲು ತೊಗಲಿಲ್ಲ. ಹಳೆಯುದರ ರಿಪೇರಿಗೆ ಮೊಳೆಗಳಿಲ್ಲ; ನಾಲಿಲ್ಲ; ಹೀಗಾಗಿ ಬೀರನು ತನ್ನ ಕುಲಕಸಬು ಬಿಟ್ಟು ಕೂಲಿಮಾಡಿ ಜೀವಿಸಲು ಆರಂಭಿಸಿದ್ದನು.

ಹಳ್ಳೂರಿನ ಗೌಡ ಈರಪ್ಪನಾಯಿಕನು ತನ್ನ ಹೊಲಕ್ಕೆ ಹೋಗುವ ದಾರಿಯ ಮಗ್ಗುಲಿಗೆ ಬೀರನ ಗುಡಿಸಲು. ಮೊದಲಿನ ಸುಖದ ದಿನಗಳಲ್ಲಿಯೂ ಗೌಡನು ಹಾದು ಹೋಗುವಾಗ ಬೀರನು ದೂರದಲ್ಲಿದ್ದು ಮುಜರೆ ಮಾಡುವನು. ಗೌಡನ ಕಾಲಮರೆಯ ದನಿಕೇಳಿ ಹುಡುಗರು ಮನೆಯ ಹೊರಗೆ ಬರುವರು. ಬೀರನ ಹೆಂಡತಿ ದ್ಯಾಮವ್ವನು ಕೆಲಸದಲ್ಲಿದ್ದರೂ ಒಮ್ಮೆ ಗೌಡನನ್ನು ಕೃತಜ್ಞತೆಯ ಕಣ್ಣಿನಿಂದ ನೋಡುವಳು. ಯಾಕೆಂದರೆ, ಅವರ ಗುಡಿಸಲು ಇರುವ ಹಕ್ಕಲು ಗೌಡರದು. ಅದನ್ನವರು ಬೀರನಿಗೆ ಪುಕ್ಕಟೆ ಕೊಟ್ಟಿದ್ದರು. ಗೌಡಿತಿ ರಾಮಕ್ಕನು ಬಲು ಅಕ್ಕರೆಯ ಕರುಳಿನ ಹೆಣ್ಣುಮಗಳು. ಅವಳು ದ್ಯಾಮವ್ವನಿಗೆ ತನ್ನ ಹಳೆಯ ಸೀರೆ ಕುಪ್ಪಸಗಳನ್ನು ಕೊಡುವಳು. ಮಕ್ಕಳಿಗೆ ತಂಗಳ ರೊಟ್ಟಿ ಚಟ್ಟಿಗಳನ್ನು ನೀಡುವಳು. ಹಬ್ಬ ಹುಣ್ಣಿವೆಗಳ ದಿನ ಅವಳು ಬೀರನ ಮಕ್ಕಳಿಗಾಗಿ ಒಂದೆರಡು ಹೋಳಿಗ ಕಡಬುಗಳನ್ನಾದರೂ ತೆಗಿದಿಟ್ಟಿರುವಳು.

ಹಳ್ಳೂರು ಮಲೆನಾಡಿನ ಸೆರಗಿನಲ್ಲಿದೆ. ಬತ್ತದ ಸುಗ್ಗಿ ಮುಗಿಯುತ್ತ ಬಂದಿತ್ತು. ಡಿಸೆಂಬರ ತಿಂಗಳು. ಈ ವರ್ಷ ಮಳೆಯಂತೆಯೇ ಚಳಿಯೂ ಹೆಚ್ಚು. 'ಮಳೆ ಆದರೆ ಕೇಡಿಲ್ಲ, ಮಗ ಉಂಡರೆ ಕಾಡಲ್ಲ' ಎಂಬ ಗಾದೆ ವಿಪರೀತವೆನಿಸುವಂತಾಗಿತ್ತು. ಹೆಚ್ಚು ಮಳೆಯಾಗಿ ಜೋಳದ ತೆನೆಗೆ ಕರಿಬಿದ್ದು ಹೋಗಿತ್ತು; ಕೈಗೆ ಬಂದುದು ಬಾಯಿಗೆ ಬರಲಿಲ್ಲ. ಕೊಯ್ದು ಹಾಕಿದ ಬತ್ತದ ಮೆದೆಗಳೆಲ್ಲ ನೀರಲ್ಲಿ ತೇಲಾಡಿ ಮುಗ್ಗಿದ ಬತ್ತ ಅಕ್ಕಿಗಳಿಂದ ಮನೆಯಲ್ಲ ನಾರುವಂತಾಗಿತ್ತು.

ಹೊಟ್ಟೆ ತುಂಬ ಕೂಳಿಲ್ಲ; ಹೊತ್ತು ಕೊಳ್ಳುವದಕ್ಕೆ ಬಟ್ಟೆಯಿಲ್ಲ; ಮೇಲೆ ಇಂಥ ವಿಪರೀತ ಚಳಿಮಳೆಗಳು; ಸಾಲದುದಕ್ಕೆ ಮಲೆಜ್ವರದ ಪಿಡಗು. ಬೀರನ ಹೆಂಡತಿಗೆ ಮೂರರ ಬಾರಿ ಜ್ವರ. ಮೂವರೂ ಮಕ್ಕಳು ಹಾಸುಗೆ ಹಿಡಿದಿದ್ದವು. ಬೀರನಿಗೂ ಜ್ವರ ಬಡಿದು ಹೊಟ್ಟೆಯೊಳಗಿನ ನೀರಗಂಟು ಉಬ್ಬಿ ಹೊಟ್ಟೆ ಬಾತಿತ್ತು. ಕೈಕಾಲು ಸೊರಗಿ ಸಣ್ಣಾಗಿದ್ದವು.

ಒಂದು ದಿನ ಮುಂಜಾನೆ ಗೌಡಿತಿ ರಾಮಕ್ಕನು "ಯಾಕೋ ಈಗ ೧೦–೧೫ ದಿನಗಳಿಂದಲೂ ದ್ಯಾಮವ್ವನು ಇತ್ತಕಡೆಗೆ ಬರಲೇ ಇಲ್ಲ; ಬೀರನೂ ಇತ್ತ ಹಾದಿಲ್ಲ...." ಎಂದಳು. ಈರಪ್ಪನಾಯಿಕನು ನಾನು ಎರಡು ವಾರಗಳಿಂದಲೂ ಹೊಲದತ್ತ ಹೋಗಲೇ ಇಲ್ಲ; ತಹಸೀಲ್ದಾರರ ಕಾಟ. ಕಾಳು, ಕಾಳು, ಕಾಳು. ಅವರಿಗೆ ಕಾಳಿನದೇ ಕನಸು. ಹಳ್ಳಿಯ ರೈತರೂ ಕೂಲಿಕಾರರೂ ಕೂಳಿಲ್ಲವೆ ಸಾಯುತ್ತಿರುವರೆಂದರೂ ಅವರಿಗೆ ಕೇಳುವದೇ ಇಲ್ಲ. ತಮಗೆ ಕೊಡುವ ಕಾಳು ಮೊದಲು ಬರಲಿ ಎನ್ನುವರು.' ಎಂದು ತನ್ನ ಕೆಲಸದ ಅವಸರವನ್ನು ವರ್ಣಿಸಿದನು.

ಅಂದು ಸಂಜೆಯ ಹೊತ್ತಿಗೆ ರಾಮಕ್ಕನು ತಾನೇ ಆ ಕಡೆ ಹೋದಳು. ಬೀರನು ಒಂದು ಮೂಲೆಯಲ್ಲಿ, ದ್ಯಾಮವ್ವನು ಇನ್ನೊಂದು ಮೂಲೆಯಲ್ಲಿ, ಬಿದ್ದಿದ್ದಾರೆ. ಚಿಕ್ಕಮಗುವೊಂದು ಅವ್ವನ ಎದೆಯ ಮೇಲೆ ಒರಗಿ ಅಳುತ್ತಿದೆ. ಇನ್ನಿಬ್ಬರು ಮಕ್ಕಳು ಉಸಿರು ಎಣಿಸುತ್ತ ಈಗಲೊ ಇನ್ನೊಂದು ಗಳಿಗೆಗೋ ಎನ್ನುವಂತಾಗಿದ್ದಾರೆ. ರಾಮಕ್ಕನು ದೂರದಿಂದಲೇ ಎಲ್ಲವನ್ನೂ ನೋಡಿದಳು. 'ಬೀರಾ' ಎಂದಳು. ಉತ್ತರ ಬರಲಿಲ್ಲ. 'ದ್ಯಾಮವ್ವಾ' ಎಂದಳು. ನರಳುವ ದನಿ ಕೇಳಿಸಿತು. ಆದರೆ ಮರುಮಾತಿಲ್ಲ. ರಾಮಕ್ಕನ ಕರುಳು ಕರಗಿತು. ಇನ್ನೂ ದೂರ ನಿಲ್ಲುವದು ಅವಳಿಂದಾಗಲಿಲ್ಲ. ಮಡಿ ಮೈಲಿಗೆಗಳನ್ನೆಲ್ಲ ಪುರೆತಳು. ಒಳಗೆ ಹೋಗಿ,

ಅಳುವ ಕೂಸನ್ನು ಎತ್ತಿಕೊಂಡಳು. ಕೂಸು ತನ್ನ ಪಾಲಿನ ದೇವತೆಯೇ ಬಂದಳೊ ಎಂಬಷ್ಟು ಆನಂದದಿಂದ-ದೀನಮುದ್ರೆಯಿಂದ-ರಾಮಕ್ಕನನ್ನು ನೋಡಿತು. ರಾಮಕ್ಕನು ಕೂಸನ್ನು ಎತ್ತಿಕೊಂಡು ಮನೆಗೆ ನಡೆದಳು. ಕೂಡಲೆ ಮನೆಯೊಳಗಿನ ಓಲೆಕಾರ ಬೀಮಣ್ಣನನ್ನು ಕರೆದು ತುಸು ಅನ್ನ ಎರಡು ಮೂರು ರೊಟ್ಟಿ ಆಮ್ರ ಇವನ್ನು ತಕ್ಕೊಂಡು ಬೀರನ ಗುಡಿಸಲಿಗೆ ಬಂದಳು. ಕುಡಿಯುದಕ್ಕೆ ನೀರನ್ನೂ ತಾನೇ ಸಂಗಡ ತಂದಳು. ಮೊದಲು ಬೀಮಣ್ಣನು ಹೊಲೆಯನ ಗುಡಿಸಲನೊಳಗೆ ಹೋಗಲು ಅನುಮಾನಿಸಿದನು. ಅವನು ಜಾತಿಯಿಂದ ಮಾದನು. ಆದರೆ ಒಡತಿಯನ್ನು ನೋಡಿ ಮರುಮಾತಾಡಲಾರದೆ ಅವಳು ಹೇಳಿದ್ದನ್ನೆಲ್ಲ ಮಾಡಲೇಬೇಕಾಯಿತು.

ಅಂದು ಪೇಟೆಗೆ ಕಾಳು ಒಯ್ದ ಗೌಡನು ಸಂಜೆಗೆ ಮನೆಗೆ ಬರಲಿಲ್ಲ. ಮರುದಿನವೂ ಇಲ್ಲ: ಮೂರನೆಯ ದಿನ ಪೇಟೆಯಿಂದ ಊರಿಗೆ ಬರುವಾಗ ಕಳ್ಳರ ಕೈಗೆ ಸಿಕ್ಕರೂ ದೇವರ ದಯೆಯಿಂದಲೂ ಬೀರನ ಬೀಗ ಚಿಕ್ಕಣ್ಣನ ಸಹಾಯದಿಂದಲೂ ಅಕ್ಕು-ಮುಕ್ಕಾಗದೆ ಗಂಟು ಸಹಿತ ಪಾರಾಗಿ ಮನೆಗೆ ಬಂದನು. ತಲೆಬಾಗಿಲಲ್ಲಿಯೇ ಹೊಲೆಯ ಬೀರನ ಮಗು ಆಡುತ್ತಿದ್ದಿತು. ಒಳಗೆ ಬಂದು ತಾನು ದಾರಿಯಲ್ಲಿ ಅನುಭವಿಸಿದ ಕಳ್ಳರ ಕಾಟದ ಸುದ್ದಿಯನ್ನೆಲ್ಲ ವಿವರಿಸಿ ಬೀರನ ಬೀಗ ಚಿಕ್ಕಣ್ಣನ ಸಹಾಯದಿಂದ ತಾನು ಸಾವಿರಾರು ರೂಪಾಯಿಗಳ ಗಂಟು ಸಹಿತ ಹೇಗೆ ಸುರಕ್ಷಿತವಾಗಿ ಬಂದೆನೆಂಬದನ್ನು ಹೇಳಿದನು. ಈಗಣ ಕಷ್ಟಕಾಲದಲ್ಲಿ ಹೊಟ್ಟೆಯ ಉರಿಯನ್ನು ತಾಳಲಾರದ ಸಂಕಟಕ್ಕೆ ತನ್ನಂಥ ಸಾಧು ವೃತ್ತಿಯವರೂ ಕೂಡ ಕೊಲೆಸುಲಿಗೆಗಳಿಗೆ ಬಂದಿರುವೆವೆಂದು ಹೇಳಿದ ಚಿಕ್ಕಣ್ಣನ ಮಾತು ಅವನ ಕಿವಿಯಲ್ಲಿ ಆಗಲೂ ದನಿಗೊಡುತ್ತಿದ್ದಿತು. ರಾಮಕ್ಕನು ತಾನು ಕಂಡ ಬೀರನ ಬಡತನದ ಬಾಳು ಬಣ್ಣಿಸಿ ಆ ಮೂರು ದಿನಗಳಲ್ಲಿ ನಡೆದುದನ್ನೆಲ್ಲ ವಿವರಿಸಿದಳು. ಮರಣದ ದವಡೆಯಲ್ಲಿ ಸಿಕ್ಕ ಬೀರನ ಕುಟುಂಬವನ್ನು ಹೇಗೆ ಉಳಿಸಿದೆನೆಂಬದನ್ನು ಹೇಳಿ ತಾನು ಮಾಡಿದ ಈ ಪುಣ್ಯಕಾರ್ಯವೇ ತನಗೆ ಅಂದೇ ಇನ್ನೊಂದೆಡೆಯಲ್ಲಿ ಒದಗಿ ಬಂದಿತೆಂದು ನುಡಿದು ಕರುಣಾಳುವಾದ ಭಗವಂತನನ್ನು ಪುನಃ ಪುನಃ ವಂದಿಸಿದಳು. 'ಕಲಿಕಾಲದಲ್ಲಿ ಎಡಗೈಯಿಂದ ನೀಡಿಕೊಂಡು ಬಲಗೈಯಿಂದ ಉಣ್ಣಬೇಕೆಂದು ಹಿರಿಯರು ಹೇಳುವ ಮಾತು ಸುಳ್ಳಲ್ಲ' ಎಂದು ಗೌಡರೂ ಗೌಡಿತಿಯೂ ಮಾತಾಡಿಕೊಂಡರು.

ಗಣಿತ ಶಿಕ್ಷಕ

★

೧೧೨ ಪುಟಗಳು ಬೆಲೆ ೧ ರೂ. ೫-೬-೬ನೆಯ ಇ. ಗಳಿಗಾಗಿ

೬-೩ ಕ್ಲಾಸುಗಳು ಒಬ್ಬ ಮಾಸ್ತರನ ಕಡೆಗೆ ಇರುವಂಥ ಶಾಲೆಗಳಲ್ಲಿ ಗಣಿತ ಶಿಕ್ಷಕವು ನಿಜವಾಗಿಯೇ ಗಣಿತ. ಶಿಕ್ಷಕನಾಗಿ ಸಹಾಯಕವಾಗಿಲ್ಲವೇ? ೧೦ವರ್ಷ ಅನುಭವ ತಕ್ಕೊಂಡವರಿಗೆ ಇದರ ಬಗ್ಗೆ ಹೆಚ್ಚಿಗೆ ವರ್ಣಿಸುವದು ಬೇಡ. ಇಷ್ಟರಲ್ಲಿಯೇ ಎಲ್ಲರ ಪ್ರೀತಿಗೆ ಪಾತ್ರವಾಗಿ ಅನೇಕಸಾರೆ ಮುದ್ರಣ ಹೊಂದಿದೆ. ಈಗಿನ ತುಟ್ಟಾಗ್ರತೆಯ ಕಾಲದಲ್ಲಿ ವೆಚ್ಚಮಾಡಿದ ಹಣದಿಂದ ಬಹಳ ಲಾಭವಾಗಬೇಡವೇ?

ಕೊರತೆ ಇಲ್ಲ ಬೆಲೆ ಕಡಿಮೆ ವೆಚ್ಚವಿಲ್ಲದೆ ಪೂರೈಕೆ

ಪುಸ್ತಕಗಳು ಕರ್ನಾಟಕದ ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ದೊರೆಯುತ್ತವೆ. ದೊರೆಯುವದಿಲ್ಲೆಂದು ಅನಿಸಿದರೆ, ನಿಮಗೆ ಬೇಕಾಗುವಷ್ಟು ಪ್ರತಿಗಳ ಮೂಲಬೆಲೆಯನ್ನು ಮನಿಯಾರ್ಡರದಿಂದ ಕಳಿಸಿ ಪಾವತಿಗಳನ್ನು ಕಾಯ್ದಿಡಿರಿ. ಅವನ್ನು ತೆಗೆದುಕೊಂಡು ಯಾವ ವೆಚ್ಚವೂ ಇಲ್ಲದೆ ಪುಸ್ತಕ ಕೊಡುವಂತೆ ನಿಮ್ಮ ಸಮೀಪದ ಪುಸ್ತಕವ್ಯಾಪಾರಿಗಳಲ್ಲಿ ಇಲ್ಲವೆ ದೊಡ್ಡ ಶಾಲೆಗಳಲ್ಲಿ ವ್ಯವಸ್ಥೆಮಾಡಲಾಗುವದು. ಶಕ್ಯವಾದರೆ ನಿಮ್ಮ ಊರಿಗೇ ತಂದುಕೊಡಬಹುದು. ಹೆಚ್ಚಿನ ವಿವರಕ್ಕೆ ಬರೆಯಿರಿ.

ವಿಳಾಸ :— ಬ. ದು. ಹಿರೇಮಠ, ಮಾಸ್ತರ ವಿಜಾಪುರ.

ಹೊಸ ಪುಸ್ತಕ! ಸರಕಾರದಿಂದ ಮಂಜೂರ! ಲಾಭ ಪಡೆಯಿರಿ!

ಹೊಸ ಪದ್ಧತಿಯ ಹಿಂದೀ ಜಮಾಖರ್ಚು ಭಾಗ ೧

(ಮನೆಯ ಜಮಾಖರ್ಚು)

ಸರಕಾರದವರು ಈ ಪುಸ್ತಕವನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಟೆಕ್ಸ್ಟ ಬುಕ್ ಎಂದು ಮಂಜೂರ ಮಾಡಿರುವರು. ಇದರಲ್ಲಿ ಮನೆಯ ಜಮಾಖರ್ಚಿನ ವಿಷಯಗಳು ಸಂಪೂರ್ಣವಿರುವವಲ್ಲದೆ ಪ್ರಾ. ನೋಟು, ಹುಂಡಿ, ಚೆಕ್ಕು, ಮನಿಯಾರ್ಡರು ಮುಂತಾದ ವ್ಯವಹಾರುಪಯುಕ್ತವಾದ ಮಾಹಿತಿಗಳೂ ಇವೆ ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಪ್ರಾ. ಶಾ. ಪ್ರ. ಪ. ಪರೀಕ್ಷೆಯ ಉಮೇದವಾರರಿಗೆ ಬಹು ಉಪಯುಕ್ತವಿದೆ.

ಬೆಲೆ: ೮ ಆಣೆ.

ಹೊಸ ಪದ್ಧತಿಯ ಆರಂಭದ ಜಮಾಖರ್ಚು

(ಕನ್ನಡ ೪ನೆಯ ಇಯತ್ತೆಯವರಿಗಾಗಿ)

ಸರಕಾರದವರು ಈ ಪುಸ್ತಕವನ್ನು ಮಂಜೂರ ಮಾಡಿದ್ದಾರೆ. ಮಂಜೂರಿ ನಂ. ೯೯೪೪೪ ಇರುತ್ತದೆ. ಈ ಪುಸ್ತಕದಲ್ಲಿ ದಿನದ ವ್ಯವಹಾರಗಳ ಲೆಖ್ಖವನ್ನಿಡುವದು, ಶಾಲೆಯ ಸ್ಟೇಶನರಿ ಸಾಮಾನುಗಳ, ಸಹಕಾರಿ ಸಂಘದ ಅಂಗಡಿಯ ಲೆಖ್ಖ ಇಡುವದು, ವ್ಯವಹಾರುಪಯುಕ್ತವಾದ ಮಾಹಿತಿಗಳೂ ಪ್ರಶ್ನೆಗಳೂ ಅವುಗಳ ಉತ್ತರಗಳೂ ಇರುವವು. ಇದು ಸ್ಕಾಲರಶಿಪ್ ಪರೀಕ್ಷೆಯ ಉಮೇದುವಾರರಿಗೆ ಬಹು ಉಪಯುಕ್ತವಿರುತ್ತದೆ.

ಬೆಲೆ: ೩ ಆಣೆ

ವಿಳಾಸ :— ರಾ. ಸಿ. ಸಜ್ಜನ, ಮಾಸ್ತರ ಜೋರಾಪುರ ಪೇಟೆ, ವಿಜಾಪುರ.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದು ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು **ಪಾಠಪುಸ್ತಕವೆಂದು** ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕಮಿಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ **ಅಭಿಪ್ರಾಯವಿದೆ.**

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೪–೬–೭ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯುಮಿಸಿವೆ. ಪ್ರತಿ ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡುಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೧ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹುಚ್ಚರಾಪ ಭೀಮರಾಪ ಉಮಡಿ, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ
೧.	ಕವೀಂದ್ರ ರವೀಂದ್ರರ ಕೆಲವು ಕವಿತೆಗಳು	೧
೨.	ನಿವೇದನೆ	೨
೩.	ಕೆಲವು ಶೈಕ್ಷಣಿಕ ವಿಚಾರಗಳು	೩
೪.	ನಮ್ಮ ವಿದ್ಯಾಧಿಕಾರಿಗಳು	೫
೫.	ಪನಾಮಾ ಕಾಲುವೆ	೯
೬.	ಭಾರತೀಯ ವಿಜ್ಞಾನಿಗಳ ಪಿತಾಮಹ ಸರ್ ಪ್ರಫುಲ್ಲಚಂದ್ರರಾಯರು	೧೩
೭.	ಲೇಖನಗಳ ಮುಖ್ಯಾಂಶಗಳು	೧೫
೮.	ಕನ್ನಡ ವರ್ಧಪ್ಯಾಯಿಜ ಪರೀಕ್ಷೆ	೧೮
೯.	ಟ್ರೇ. ಕಾಲೇಜಗಳ ಪರೀಕ್ಷೆಯ ಪರಿಣಾಮಗಳು	೧೯
೧೦.	ಪತ್ರಗಳ ಮುಖ್ಯಾಂಶಗಳು	೨೪
೧೧.	ಬಯಕೆಯೇ ಬಡತನ; ತೃಪ್ತಿಯೇ ಸಂಪತ್ತು .. .. (ಸಾಕ್ಷರಿಗಳಾದ ಪ್ರಬುದ್ಧರಿಗಾಗಿ) ..	೨೬

Printed by V. Y. Jathar at the Karnatak Printing Works, Dharwar and Published by H. B. Umadi, Esq. M. A., Principal Training College For-Men Dharwar, at his Office. 6866-44-1400.

ನಾಪತೆಗೆ ಹಣ ಇರದು ರೂಪಾಯಿಗಳು ನೂತ್ಯ.

ಸುಂದರ ಮುದ್ರಣ! ಸುಲಭ ಬೆಲೆ!! ಸ್ವಲ್ಪೇ ಪ್ರತಿಗಳಿವೆ!!! ತ್ವರೆಮಾಡಿರಿ!!!!

ಹೊಸ ಅಭ್ಯಾಸಪತ್ರಿಕೆಯನ್ನನುಸರಿಸಿ ಕನ್ನಡ ಹೆಣ್ಣುಮಕ್ಕಳ ೫-೬-೭ನೇ ಇಯತ್ತೆಗಳಿಗಾಗಿ ಬರೆಯಲ್ಪಟ್ಟಿದೆ.

ಶ್ರೀಬಸವಕುಮಾರ ಕೃತ **ಗೃಹವಿಜ್ಞಾನಶಾಸ್ತ್ರ** ಅಥವಾ **ಗೃಹಶಿಕ್ಷಣದ ಕೈಗನ್ನಡಿ**

ಮುಂಬಯಿ ವಿದ್ಯಾಖಾತೆಯ ಪಠ್ಯಪುಸ್ತಕಮಂಡಲಿಯವರಿಂದ ಮಂಜೂರಾಗಿದೆ. ಗೃಹಿಣಿಯರಿಗೆ ಇದು ಕೈಗನ್ನಡಿಯಂತಿದೆ ಎಂದು ಅನೇಕ ಮಹಿಳೆಯರಿಂದಲೂ, ವಿದ್ವಾಂಸ ಮುನೀಯರಿಂದಲೂ ಮನ್ನಣೆಹೊಂದಿದೆ. ಕೇವಲ ಹೆಣ್ಣುಮಕ್ಕಳ ಸಲುವಾಗಿ ಈ ಪುಸ್ತಕ ಬರೆಯಲ್ಪಟ್ಟಿದೆ. ವಿದ್ಯಾರ್ಥಿನಿಯರು ಇದರ ಸಹಾಯದಿಂದ ಪಾಕಶಾಸ್ತ್ರವಲ್ಲದೆ, ಆರೋಗ್ಯಶಾಸ್ತ್ರ ಮುಂತಾದವುಗಳ ವಿಜ್ಞಾನವನ್ನು ತಿಳಿಕೊಳ್ಳಲು ಸುಲಭವಾಗಿದೆ. ಭಾವೀ ಗೃಹಿಣಿಯರಾಗಲಿರುವ ವಿದ್ಯಾರ್ಥಿನಿಯರ ಜೀವನವು ಸುಖಮಯವಾಗಬೇಕಾದರೆ ಗೃಹಶಿಕ್ಷಣವು ಬೇಕಲ್ಲವೇ? ಹಾಗಾದರೆ ಅಂಥಹವೆಲ್ಲ ಈ ಗೃಹವಿಜ್ಞಾನ ಶಾಸ್ತ್ರದಲ್ಲಿದೆ. ಬೇಕಾದವರು ಇಂದೇ ಕೆಳಗಿನ ವಿಳಾಸದಿಂದ ತರಿಸಿಕೊಂಡು ಅದರಲ್ಲಿರುವ ಏಳು ಶಾಸ್ತ್ರಗಳ ಮಹತ್ವವನ್ನು ತಿಳಿದುಕೊಳ್ಳಿರಿ.

ಒಂದು ಪ್ರತಿಗೆ ಬೆಲೆ ೮ ಆಣೆಗಳು (ವ್ಹಿ. ಪಿ. ವೆಚ್ಚ ಬೇರೆ)

ಪ್ರಕಾಶಕರು:—

ಪಶುಪತಯ್ಯ ಚಿನ್ನಯ್ಯ ಶಾಬಾದಿಮಠ, ಬುಕ್‌ಡಿಪೊ **ಗದಗ ಸಿಟಿ**

ವಿನಂತಿ

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವದಕ್ಕಾಗಿ ಕಳುಹಿಸುವ ಲೇಖನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು.

೨. ಈ ತ್ರೈಮಾಸಪತ್ರಿಕೆಯು ಪ್ರತಿ ಮೂರು ತಿಂಗಳ ಕೊನೆಯ ವಾರದಲ್ಲಿ ಪ್ರಸಿದ್ಧವಾಗುವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ ತಿಳಿಸಬೇಕು.

೩. ಲೇಖಕರು ಹಾಗು ಪ್ರಕಾಶಕರು, ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರಿಗೆ ಉಪಯುಕ್ತವಾದ ಪುಸ್ತಕ-ನಕಾಶ-ಚಿತ್ರ-ಉಪಕರಣಗಳನ್ನು ವಿಮರ್ಶೆಗಾಗಿ ಕಳುಹಿಸಬಹುದು.

೪. ತಾವು ಪ್ರಕಟನೆಗಾಗಿ ಕಳುಹಿಸಿರುವ ಲೇಖನಗಳನ್ನು ತಿರುಗಿ ಪಡೆಯಲು ಆಪೇಕ್ಷಿಸುವವರೂ ಅದರ ಪರಿಣಾಮವನ್ನು ಕೂಡಲೆ ತಿಳಿದುಕೊಳ್ಳಲಿಚ್ಛಿಸುವವರೂ ಅದಕ್ಕಾಗಿ ತಗಲುವ **ಅಂಚೆಯ** ಚೀಟಿಗಳನ್ನು ತಮ್ಮ ಲೇಖನದ ಸಂಗಡ ಕಳುಹಿಸಿಕೊಡಬೇಕು.

ಜಾಹಿರಾತಿನ ದರಗಳು

ಪುಟ	೧೨ ತಿಂಗಳುಗಳಲ್ಲಿ ನಾಲ್ಕು ಸಾರೆ	೬ ತಿಂಗಳುಗಳಲ್ಲಿ ೨ ಸಾಡೆ	೩ ತಿಂಗಳುಗಳಲ್ಲಿ ಒಮ್ಮೆ
೧	೧೨ ರೂ.	೭½ ರೂ.	೪ ರೂ.
½	೭½ ರೂ.	೪ ರೂ.	೨½ ರೂ.
¼	೪ ರೂ.	೨½ ರೂ.	೧½ ರೂ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹುಚ್ಚರಾವ ಭೀಮರಾವ ಉಮಡಿ, ಎಂ. ಎ.

ಸಂಪುಟ ೮೨	ಏಪ್ರಿಲ್-ಮೇ-ಜೂನ್ ೧೯೪೪	ವರ್ಷ ೧೬ ಸಂ. ೧-೨-೩

ಕವೀಂದ್ರ ರವೀಂದ್ರರ ಕೆಲವು ಕವಿತೆಗಳು

೧, ಆಟಿಗೆಗಳು

‖ ಹುಡಿಯೊಳಗಾಡುವ ಹುಡುಗನೇ, ನೀನೆಷ್ಟು ಸುಖಿಯಾಗಿರುವೆ? ಕಡಿದೊಗೆದ ಮೂಂದಳಿರನೊಂದನು ಹುಡಿಯಲ್ಲಿ ಹೂಳಿ ಬೆಳೆ-ಬೆಳೆ-ಎಂದೂ ಫಲವ ಕೊಡು-ಕೊಡು ಎಂದೂ ಮುಂಜಾವಿನಿಂದಲೂ ಆಡುತ್ತಿರುವೆಯಲ್ಲ!

‖ ನಿನ್ನೀ ಆಟವ ನೋಡಿ, ಮುರಿದೊಗೆದ ಟೊಂಗೆಯ ಹುಡಿಯೊಳು ನೆಡುವ, ಅದನೇ ಬಳೆಯಿಸಲು ಬಯಸುವ, ನಿನ್ನ ಮನದೊಲಪನರಿತ ನನಗೆ ಹಿಡಿಸಲಾರದಷ್ಟು ನಗೆ ಬರುವದಲ್ಲಾ!

‖ ನನಗೆ ಇಂತಹ ಆಟ ತಿಳಿಯದು. ನಾನಾದರೊ ನನ್ನ ಲೆಕ್ಕದ ಪುಸ್ತಕದ ಪುಟಗಳನ್ನು ತಿರುತಿರುವಿ ಬೆರಳು ಮಣಿಸಿ ಎಣಿಸಿ ಗುಣಿಸಿ ಹತ್ತು ಹತ್ತು, ನೂರು ನೂರು, ಸಾವಿರ ಸಾವಿರ ಎಂದು ಲೆಕ್ಕಮಾಡುವದರಲ್ಲೇ ಕಾಲವನ್ನೆಲ್ಲ ಕಳೆವೆನು.

‖ ಅಣ್ಣಾ, ನೀನು ನನ್ನೀ ಹಾಳು ಗಣಿತದ ಗುಣಿಸುವಿಕೆಯನ್ನು ಕಂಡು ನಗುವೆಯಾ? ಇದೆಂತಹ ಹುಚ್ಚು ಗಣಿತ? ಮುಂಜಾವಿನಂಥ ಒಳ್ಳೆಯ ಸನುಯವನ್ನು ಈ ಹುರುಳಿಲ್ಲದ ಹುಚ್ಚು ಎಣಿಕೆಯಲ್ಲಿ ಕಳೆಯುತ್ತಿರುವ ಇವನೆಂಥ ಮೂಢನೆನ್ನುವಿಯಾ?

‖ ಮಗೂ, ನಾನಾ ಹಿಂದಿನ ದಿನವನ್ನು-ಮುರುಕು ಟೊಂಗೆಯನ್ನು ಹುಡಿಯಲ್ಲಿ ಹೂಳಿ ಆಡಿ ಆನಂದಪಡುವ ಕಾಲವನ್ನು-ಮರೆತುಬಿಟ್ಟಿದ್ದೇನೆ. ನಾನೀಗ ಅಮೌಲ್ಯ ಆಟಿಗೆಗಳನ್ನು ಹುಡುಕತೊಡಗಿದ್ದೇನೆ. ಬೆಳ್ಳಿ ಬಂಗಾರದಳ ಗಟ್ಟಿಗಳನ್ನು ಸಂಗ್ರಹಿಸತೊಡಗಿದ್ದೇನೆ.

‖ ಚಿಣ್ಣಾ! ನೀನು ನಿನಗೆ ಅಲ್ಲಿ ಇಲ್ಲಿ ದೊರೆತ ಅಂಥ ಇಂಥ ಕಲ್ಲು ಹರಳು ಹಂಚು ಹಲಪೆಗಳಿಂದಲೇ ಆಟವನಾಡಿ ಮನವನಾನಂದಗೊಳಿಸಿಕೊಳ್ಳಲು ಬಲ್ಲೆ! ನಾನಾದರೊ ನನಗೆ ದುರ್ಲಭವಾದ ಒಡವೆಗಳನ್ನು- ಹರಳು ಕಲ್ಲು ಮುತ್ತು ರತ್ನಗಳನ್ನು-ದೊರಕಿಸುವ ವ್ಯರ್ಥ ಪ್ರಯತ್ನದಲ್ಲಿ ನನ್ನ ಆಯುಷ್ಯವನ್ನೂ ಪರಿಶ್ರಮ ಪರಾಕ್ರಮಗಳನ್ನೂ ಕಳೆಯತೊಡಗಿದ್ದೇನೆ. ನಿನ್ನದು ಹುಡುಗಾಟ! ನನ್ನದು! ನಾನು ನಿನ್ನಂತೆ ಸಹಜವಾದ ಆನಂದದಿಂದ ಇರಲು ಒಲ್ಲೆನಲ್ಲಾ!

‖ ನಾನೂ ನಿನ್ನಂತೆಯೇ ಹುಡುಗಾಟದಲ್ಲಿ- ಪ್ರಪಂಚದಲ್ಲಿ ಲಭ್ಯವಾದಷ್ಟೆ ಆಟಿಗೆಗಳನ್ನು ಹಾಗೆ ಹೀಗೆ ಹೂಡಿ ಆಡುವದರಲ್ಲಿಯೇ ಜೀವನವನ್ನು ಕಳೆಯುತ್ತಿದ್ದೇನೆಂಬುದನ್ನು ಮರೆತಿದ್ದೇನೆ.

‖ ನನ್ನದು ಚುಕ್ಕಾಣಿ ಮುರಿದ ಪಟಹರಿದ ತಳವಳಿದುಹೋದ ಒಡಕು ಹೋಡಿ! ಅದರಲ್ಲಿ ಕುಳಿತು ಹುಟ್ಟುಗುಟ್ಟಗಳಿಲ್ಲದೆ ಸಾಗರವ ದಾಂಟಲು ಹೊರಟಿರುವ ನಾನು ಹೇಡಿ!

ನಿವೇದನೆ

ಹಳೆಯ ವರ್ಷವು ಹಿಂದೆ ಕಳೆಯುವದೂ ಹೊಸವರ್ಷವು ಮುಂದೆ ಬರುವುದೂ ಪ್ರಪಂಚ ಧರ್ಮದಂತೆ ಕ್ರಮ ಪ್ರಾಪ್ತವಾದ ವಿಷಯ. ನಮ್ಮ ಪ್ರಾಥಮಿಕ ಶಿಕ್ಷಣಕ್ಕೂ ಇಂದು ಹೊಸ ವರ್ಷವು ಆರಂಭವಾಗಿದೆ. ೮೨ ವರ್ಷಗಳು ಹಿಂದೆ ಕಳೆದು ಹೋಗಿ ೮೩ನೆಯ ವರ್ಷವು ಪ್ರಾರಂಭವಾಗಿದೆ. ಈ ಸಮಯದಲ್ಲಿ ಹೊಸ ವರ್ಷದ ಹೇಳಿಕೆಯನ್ನು ಹೇಳುವ ಪರಿಪಾಠದಂತೆ ನಾವೂ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ.

ಪ್ರಪಂಚದಲ್ಲಿರುವ ಹಳೆಯದನ್ನೆಲ್ಲ ಬಿಟ್ಟುಬಿಟ್ಟರೆ ಹೊಸದೆಂಬದು ಇಲ್ಲವೇ ಇಲ್ಲವೆನ್ನುವರೂ ಇದ್ದಾರೆ. ಹೊಸಬರು ಹಳೆಯದನ್ನೇ ಹೊಸ ದೃಷ್ಟಿಯಿಂದ ನೋಡಿ ಇದು ಹೊಸದೆಂದು ಹೇಳಿಕೊಳ್ಳುವರೆಂಬದೇ ಅವರ ಹೇಳಿಕೆ. ಹಳೆಯದಕ್ಕೆ ಸೃಷ್ಟಿಯು ಕಾಲ ಕಾಲಕ್ಕೆ ಹೊಸ ರೂಪವನ್ನು ಕೊಡುವದೆಂದು ಮತ್ತೆ ಕೆಲವರ ಅಭಿಪ್ರಾಯ. ನಾವು ಎರಡರ ಅರ್ಥವು ಒಂದೇ ಎಂದು ಭಾವಿಸೋಣ. ಎಂದ ಬಳಿಕ ಹಳೆಯ ವರ್ಷದ ಧೋರಣೆ ಹೊಸವರ್ಷದ ನಿರ್ಣಯ ಇವುಗಳಲ್ಲಿ ಭೇದವೇನುಳಿಯಿತು ?

ಸರಿ. ಪ್ರಾಥಮಿಕ ಶಿಕ್ಷಣ ಪತ್ರಿಕೆಗೂ ಇದೇ ಮಾತು ಅನ್ವಯಿಸುವುದು. ಹಿಂದೆಂದೂ ಇಲ್ಲದ ಹೊಸ ವಿಚಾರಗಳನ್ನು ಹುಟ್ಟಿಸಿ ಹೊಸ ವರ್ಷದಲ್ಲಿ ಹೇಳುವದು ಯಾರಿಗೆ ತಾನೇ ಸಾಧ್ಯ? ಆದುದರಿಂದ ಹಿಂದಿನಂತೆಯೇ ಈ ವರ್ಷವೂ ಶಿಕ್ಷಕರಿಗೂ ಶಿಕ್ಷಣ ಪ್ರಪಂಚಕ್ಕೂ ಸಂಬಂಧಿಸುವ ವಿಷಯಗಳನ್ನೇ ಶೈಕ್ಷಣಿಕ ದೃಷ್ಟಿಯಿಂದ ಪರಿಶೀಲಿಸಿ ಬರೆಯಿಸಿ ಪ್ರಕಟಿಸಬೇಕೆಂಬದು ನಮ್ಮ ನಿರ್ಧಾರದ ಮಾತು. ವಿದ್ಯಾರ್ಥಿಗಳ ಪಾಠ ಪ್ರಗತಿಗಳಿಗೆ ಸಂಬಂಧಿಸುವ ವಿಷಯಗಳಿಗೂ ನಾವು ಎಡೆಗೊಡುವೆವು. ಕವಿಗಳ ಕವನ ಕಾವ್ಯ ವಿಚಾರಗಳಿಗೂ ವಿಮರ್ಶೆ ವಿವೇಚನೆಗಳಿಗೂ ಯಥಾವಕಾಶ ಸ್ಥಳವನ್ನು ಕಲ್ಪಿಸಿ ಕೊಡುವೆವು. ಲೇಖಕರಿಗೆ ಹಿಂದಿನಂತೆಯೇ ಈ ವರ್ಷವೂ ಅಲ್ಪಸ್ವಲ್ಪ ಪುರಸ್ಕಾರವನ್ನು ಕೊಡಲು ಅನುವು ದೊರೆಯಬಹುದೆಂಬ ಆಶೆಯಿದೆ.

ಕಾಗದದ ಅಭಾವ, ಮುದ್ರಣದ ಅಸೌಕರ್ಯ, ಇವಂತೂ ಹೋದವರ್ಷಕ್ಕಿಂತ ಈ ವರ್ಷ ಹೆಚ್ಚಾಗುವ ಲಕ್ಷಣಗಳೇ ಹೆಚ್ಚು. ಆದರೂ ಪುಣೆಯ ಡೆಕ್ಕನ್ ಪೇಪರ್ ಮಿಲ್ಸ್‌ದವರೂ ನಮಗೆ ಹಿಂದಿನಿಂದಲೂ ನೆರವಾಗುತ್ತ ಬಂದಿರುವ ಧಾರವಾಡದ ಕರ್ನಾಟಕ ಪ್ರಿಂಟಿಗ್ ವರ್ಕ್ಸ್‌ದ ಒಡೆಯರಾದ ಶ್ರೀ. ಜಠಾರ ವಿಠ್ಠಲರಾಯರೂ ನನಗೆ ಕೈಗೊಟ್ಟು ಮುಂದೆ ಸಾಗಿಸುತ್ತಿದ್ದಾರೆ. ನಮಗೆ ಅವಶ್ಯಕವಿರುವ ಕಾಗದವನ್ನು ದೊರಕಿಸಲು ನೆರವಾದ ಮೆ. ಕೊಯಿಮತ್ತೂರ ವೆಂಕಟರಾಯರಿಗೂ ಹಿಂದಿನ ವರ್ಷದಲ್ಲಿ ಹಲವು ಲೇಖನಗಳನ್ನು ಒದಗಿಸಿ ಕೊಟ್ಟ ಮಹನೀಯರಿಗೂ ಸಕಾಲದಲ್ಲಿ ಸರಿಯಾಗಿ ಮುದ್ರಿಸಿಕೊಟ್ಟ ಕ. ಪ್ರಿ. ವರ್ಕ್ಸ್‌ದ ಒಡೆಯರಿಗೂ ನಮ್ಮ ಉಪಕಾರ ಸ್ಮರಣೆಯು ಸಲ್ಲಬೇಕಾಗಿದೆ. ನಿಂತುಹೋದ ಪ್ರಾ. ಶಿಕ್ಷಣಕ್ಕೆ ಪುನರ್ಜೀವನವನ್ನು ಒದಗಿಸಿ ಕೊಟ್ಟ ನಮ್ಮ ಪ್ರಾಂತಿಕ ವಿದ್ಯಾಧಿಕಾರಿಗಳಿಗೂ ಕಾಲಕಾಲಕ್ಕೆ ತಕ್ಕ ಸಹಾಯ ಸಲಹೆಗಳನ್ನು ನೀಡುತ್ತ ಬಂದಿರುವ ನಮ್ಮ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಿಗೂ ನಾವು ತುಂಬಾ ಆಭಾರಿಯಾಗಿರುವೆವು. ಕಳೆದ ವರ್ಷದಂತೆ ನಡೆಯುವ ವರ್ಷದಲ್ಲಿಯೂ ಅವರೆಲ್ಲರೂ ನಮಗೆ ತಕ್ಕ ನೆರವು ನೀಡಿ ಪತ್ರಿಕೆಯು ತನ್ನ ಹೆಸರಿಗೆ ತಕ್ಕಂತೆ ಕನ್ನಡ ನಾಡು ನುಡಿಗಳ ಉತ್ಕರ್ಷಕ್ಕೆ ನೆರವಾಗಿ ಕನ್ನಡ ಶಿಕ್ಷಕವರ್ಗ ವಿದ್ಯಾರ್ಥಿವೃಂದಗಳಿಗೆ ಮಾರ್ಗದರ್ಶಿಯಾಗಿ ಸಾಗಿ ಅವರೆಲ್ಲರ ಪ್ರೀತಿಗೆ ಪಾತ್ರವಾಗುವಂತೆ ನಡೆಯಲೆಂದೂ ಅದಕ್ಕೆ ತಕ್ಕ ಶಕ್ತಿ ಸೌಕರ್ಯಗಳನ್ನು ಭಗವಂತನು ಕರುಣಿಸಲೆಂದೂ ಪ್ರಾರ್ಥಿಸುವೆವು.

—ಸಂಪಾದಕರು

ಕೆಲವು ಶೈಕ್ಷಣಿಕ ವಿಚಾರಗಳು

(೧) ಶಿಕ್ಷಣದ ಉಚ್ಚ ಧ್ಯೇಯವೇನು?

ಕೆಲವು ದಿನಗಳ ಹಿಂದೆ 'ಟಾಯಿಮ್ಸ್ ಆಫ್ ಇಂಡಿಯಾ' ಪತ್ರದಲ್ಲಿ ಈ ವಿಷಯವನ್ನು ಕುರಿತು ಪ್ರಕಟವಾದ ಚಿಕ್ಕದೊಂದು ಲೇಖನದ ಅನುವಾದವು ಈ ರೀತಿಯಾಗಿದೆ:–

"ಇಂದಿನ ಪರಿಸ್ಥಿತಿಯನ್ನು ಪರ್ಯಾಲೋಚಿಸಿ ನೋಡಿದರೆ ಜಗತ್ತಿನ ಅದರಲ್ಲಿಯೂ ವಿಶೇಷವಾಗಿ ವಿದ್ಯಾವೈಭವಗಳ ಕೇಂದ್ರಗಳೆನಿಸುವ ಹಲಕೆಲವು ರಾಷ್ಟ್ರಗಳ ಶೈಕ್ಷಣಿಕ ಧೋರಣೆ ಗೊತ್ತು ಗುರಿಗಳಲ್ಲಿಯೇ ಅತಿ ಮಹತ್ವದ ತಪ್ಪಾಗಿರುವಂತೆ ಕಂಡುಬರುವದು. ಯುರೋಪ ದೊಳಗಿನ ಕೆಲಕೆಲವು ರಾಷ್ಟ್ರಗಳ ತರುಣ ಪೀಳಿಗೆಯಲ್ಲಿ ಮೈಯುಂಡು ಬಂದಿರುವ ತಪ್ಪು ಧ್ಯೇಯಗಳೇ ಸದ್ಯದ ಜಾಗತಿಕ ಮಹಾಯುದ್ಧಕ್ಕೆ ಕಾರಣೀಭೂತವಾದುವೆಂಬುದನ್ನು ಒಲ್ಲವರು ಕಂಡುಹಿಡಿದಿದ್ದಾರೆ. ತಪ್ಪು ರಾಷ್ಟ್ರೀಯ ಹಮ್ಮು ಅಹಂಕಾರಗಳು, ದುಷ್ಟ ರಾಷ್ಟ್ರೀಯ ಸ್ವಾರ್ಥ, ದಯಾ ದಾಕ್ಷಿಣ್ಯವಾದಿ ಸದ್ಗುಣಗಳ ಕೊಲೆಮಾಡುವ ಕ್ರೌರ್ಯ ಭೌತಿಕ ಶಕ್ತಿ ಮೊದಲಾದವುಗಳನ್ನು ಪೋಷಿಸುವದು, ಇವೇ ಆ ರಾಷ್ಟ್ರಗಳಲ್ಲಿ ಶಿಕ್ಷಣದ ಮೂಲಕ ತರುಣ ಪೀಳಿಗೆಯಲ್ಲಿ ಮೈಯುಂಡು ಬಂದಿರುವವು. ಅಹಂಕಾರ, ದರ್ಪ, ಅಧಿಕಾರ ಪ್ರಿಯತೆ, ಸಾಮಾಜಿಕ ಶ್ರೇಷ್ಠತೆ ಅಥವಾ ಭೌತಿಕ ಸಂಪತ್ತು ಇವುಗಳಲ್ಲಿ ಯಾವದೊಂದೂ ರಾಷ್ಟ್ರದ ಉದ್ಧಾರಕ್ಕಾಗಲಿ ಅದನ್ನು ಭದ್ರವಾದ ತಳಹದಿಯ ಮೇಲೆ ನಿಲ್ಲಿಸುವದಕ್ಕಾಗಲಿ ಸುಖಕರವಾದ ಪ್ರಪಂಚವನ್ನು ಸೃಷ್ಟಿಸುವದಕ್ಕಾಗಲಿ ಎಂದೂ ಸಹಾಯವಾಗಲಾರದು. ಕೇವಲ ಪ್ರಾಪಂಚಿಕ ಶಿಕ್ಷಣವನ್ನು ಬೇಕಾದಷ್ಟು ಪಡೆದಿದ್ದರೂ ಅದು ಪಾರಮಾರ್ಥಿಕ ಶಿಕ್ಷಣದ ಮೂಲಭೂತ ಭಾವನೆಗಳನ್ನು ಒಳಗೊಂಡಿರದಿದ್ದರೆ ಅದರಿಂದ ಏನೂ ಪ್ರಯೋಜನವಾಗ ಲಾರದು. ನೈತಿಕ ಶಿಕ್ಷಣದಿಂದ ಸುಸಂಸ್ಕೃತನಾದ ಮನುಷ್ಯನು ಯಾವುದಕ್ಕೆ ಎಷ್ಟು ಮಹತ್ವ ಕೊಡಬೇಕೆಂಬುದನ್ನು ಅರಿತುಕೊಂಡು ಜೀವನದ ಗೊತ್ತುಗುರಿಗಳನ್ನೂ ಶ್ರೇಷ್ಠತೆ ಯನ್ನೂ ಕಂಡುಹಿಡಿದು ನಡೆಯಲು ಸಮರ್ಥನಾಗುವನು.

ಶಾಲೆ–ಕಾಲೇಜಗಳಲ್ಲಿ ವಿದ್ಯಾರ್ಥಿಗಳಿಗೆ ಹಲಕೆಲವು ವಿಷಯಗಳನ್ನು ಕಲಿತು ಪರೀಕ್ಷೆ ಗಳಲ್ಲಿ ಉಚ್ಚ ತರಗತಿಗಳಲ್ಲಿ ಪಾಸಾಗಲಿಕ್ಕೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಡಲಾಗು ವದು. ಆದರೆ ನಿಸ್ವಾರ್ಥತೆ, ಪ್ರಾಮಾಣಿಕತೆ, ಸತ್ಯತೆ ಮುಂತಾದ ಆಂತರಿಕ ಸಂಸ್ಕಾರಕ್ಕೆ ಕಾರಣವಾಗುವ ಗುಣಗಳ ಬೆಳೆವಣಿಗೆ ವಿಕಾಸಗಳಿಗೆ ಅಲ್ಲಿ ಅವಕಾಶವಿಲ್ಲ. ಇಂಥ ಗುಣಗಳು ವಿಕಾಸವಾಗದಿರುವ ಜನರು ಎಷ್ಟು ವಿದ್ಯಾವಂತರಾಗಿದ್ದರೂ ಒಳ್ಳೆಯ ನಾಗರಿಕರೆನ್ನಿಸುವ ಸಂಭವವಿಲ್ಲ. ಒಳ್ಳೆಯ ನಾಗರಿಕನಾದವನಿಗೆ ನಿರ್ವಿಕಾರ ದೃಷ್ಟಿಯಿಂದ ನೋಡುವದಕ್ಕೂ, ನೀತಿ ನಿರ್ಮಲವಾಗಿ ಜೀವಿಸುವದಕ್ಕೂ, ನಿಷ್ಕಾಮ ಬುದ್ಧಿಯಿಂದ ಪ್ರೀತಿಸುವದಕ್ಕೂ, ನಿಶ್ಚಿಂತೆಯಿಂದ ದಾನಮಾಡುವದಕ್ಕೂ, ಶಿಕ್ಷೆಯ ಭಯವಿಲ್ಲದೆ ಕೆಲಸಮಾಡುವದಕ್ಕೂ, ಎಣಿಕೆಹಾಕದೆ ಸ್ವಾರ್ಥತ್ಯಾಗಮಾಡುವದಕ್ಕೂ ಒರಜೀಕು. ಇಂಥ ಗುಣಗಳುಳ್ಳ ನಾಗರಿಕನು ಸತ್ಯಜೀವನವನ್ನು ಅಮರವಾಗುವಂತೆ ಮಾಡುವನು. ಆತನ ಆತ್ಮವು ಅಜರಾಮರವಾಗುವದು.

ಸತ್ಯಜ್ಞಾನವೇ ಬ್ರಹ್ಮಜ್ಞಾನ. ಒಳಿತು ಹೀನಗಳ ತಿಳಿವಳಿಕೆಯೇ ದೇವರ ತಿಳಿವಳಿಕೆ. ಇಂತಹ ಸತ್ಯದ ತಿಳಿವಳಿಕೆಯುಂಟಾದ ಬಾಲ–ಬಾಲಿಕೆಯರು ಪ್ರಾಪಂಚಿಕ ವಿದ್ಯಾವಿಷಯು ಗಳನ್ನು ಬಹು ಸುಲಭವಾಗಿಯೂ ಶೀಘ್ರವಾಗಿಯೂ ಸಹಜವಾಗಿಯೂ ದೊರಕಿಸಲು ಸಮರ್ಥ ರಾಗುವರು, ಮತ್ತು ಅದರಲ್ಲಿ ತುಂಬ ಯಶಸ್ಸು ಪಡೆಯುವರು. ಅವರು ತಮ್ಮ ಪ್ರಾಪಂ ಚಿಕ ಬಾಳುವೆಯಲ್ಲಿಯೂ ಸಾಮಾಜಿಕ ಜೀವನದಲ್ಲಿಯೂ ರಾಷ್ಟ್ರೀಯ ಕಾರ್ಯಕ್ಷೇತ್ರ

ದಲ್ಲಿಯೂ ಉತ್ತಮೋತ್ತಮ ಸಂಸ್ಕೃತಿ ಸಂಪನ್ನರೆನಿಸಿ ಬಾಳುವರು. ಇಂತಹ ವಿದ್ಯಾ ಸಂಸ್ಕಾರವೇ ಉತ್ತಮ ಸಂಸ್ಕಾರವೆಂದು ತಿಳಿಯಲಾಗುವದು. ಮತ್ತು ಇದರಿಂದಲೇ ಜಗತ್ತಿನಲ್ಲಿ ಶಾಂತಿ-ಸುಖ-ಸಮಾಧಾನಗಳು ನೆಲೆಗೊಳ್ಳುವವು.''

೨. **ಮೂಲ ಶಿಕ್ಷಣದ ಯೋಜನೆ**— ಡಾ. ಝಾಕೀರ ಹುಸೇನ ಸಮಿತಿಯವರ ಸಿಫಾರಸಿನ ಮೇರೆಗೆ ೧೯೩೯ ರಲ್ಲಿ ಹಿಂದುಸ್ತಾನದ ಹಲವು ಪ್ರಾಂತಗಳಲ್ಲಿ ವರ್ಧಾ ರಾಷ್ಟ್ರೀಯ ಮೂಲ ಶಿಕ್ಷಣದ ಯೋಜನೆಯು ಬಳಕೆಯಲ್ಲಿ ಬಂದಿತು. ಕಳೆದ ಐದುವರ್ಷಗಳಲ್ಲಿ ಈ ಪ್ರಯೋಗವು ಪ್ರಗತಿಪರವಾಗಿ ಕಂಡುಬಂದುದರಿಂದ ಮುಂಬಯಿ ಸರಕಾರದವರು ಇನ್ನೂ ಐದುವರ್ಷಗಳ ವರೆಗೆ ಇದನ್ನು ಪ್ರಚಾರದಲ್ಲಿಡಬೇಕೆಂದು ನಿರ್ಣಯಿಸಿದ್ದಾರೆ. ಇದಕ್ಕಾಗಿ ಮೊದಲನೆಯ ತರಗತಿಯ ಒಂದು 'ಸ್ಪೇಶಲ್ ಆಫೀಸರ' ಎಂಬ ಹೆಸರಿನ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಸ್ಥಳವನ್ನು ನಿರ್ಮಿಸಿದ್ದು ಈಗ ಶ್ರೀಮಾನ್ ಎಲ್, ಆರ್ ದೇಸಾಯಿ ಅವರು ಆ ಸ್ಥಾನದಲ್ಲಿ ನಿಯೋಜಿತರಾಗಿರುವರು. ನಮ್ಮ ಭಾಗದಲ್ಲಿ ಈ ಶಿಕ್ಷಣದ ಶಾಲೆಗಳು ಸುಮಾರು ೫೨ ಇವೆ. ಇವುಗಳಲ್ಲಿ ಇನ್ನು ಮುಂದೆ ಏಳನೆಯ ಇಯತ್ತೆಯ ವರೆಗೂ ಕ್ರಮುಗೊಳಿಸಿದ ಅಭ್ಯಾಸವನ್ನು ಸಾಗಿಸುವದು ಗೊತ್ತಾಗಿದೆ. ಅದು ೧೯೪೪ ರ ಜೂನದಿಂದ ಕಾತರಗಾವ, ಲೋಣಿ, ಧಾರವಾಡಗಳ ಪ್ರಾಥ. ಸ್ಕೂ. ಗಳಲ್ಲಿ ಮೊದಲು ಪ್ರಚಾರದಲ್ಲಿ ಬರಲಿದ್ದು ೧೯೪೫ ರ ಜೂನದಿಂದ ಉಳಿದ ಶಾಲೆಗಳಲ್ಲಿ ಅದನ್ನು ಬಳಕೆಯಲ್ಲಿ ತರಲಾಗುವದು. ಈ ಯೋಜನೆಯ ಶಾಲೆಗಳಲ್ಲಿ ಕೆಲಸಮಾಡುವ ಶಿಕ್ಷಕರಿಗೆ ಇದೇ ಜೂನ್ ತಿಂಗಳಿನಿಂದ ೫ ರೂ. ಹೆಚ್ಚಿನ ವೇತನವನ್ನು ಕೊಡಬೇಕೆಂದು ಗೊತ್ತಾಗಿದೆ.

೩. **ಹಳ್ಳಿಗರಿಗಾಗಿ ರೇಡಿಯೋ ಕಾರ್ಯಕ್ರಮಗಳು**— ಮುಂಬಯಿ ಸರಕಾರದವರು ಗ್ರಾಮಸುಧಾರಣೆಗಾಗಿ ಆಕಾಶವಾಣಿ (ಬಾನುಲಿ)ಯ ಉಪಯೋಗ ಮಾಡುವದನ್ನು ಗೊತ್ತುಪಡಿಸಿ ೬೦೦ ಸೆಟ್ಟುಗಳನ್ನು ಕೊಂಡು ಕೊಂಡು ಪ್ರಾಂತದ ವಿಶಿಷ್ಟ ಹಳ್ಳಿಗಳಲ್ಲಿ ಕೂಡಿಸಿ ಕಳೆದ ೧ ನೆಯ ಮೇ ದಿಂದ ಸಾಯಂಕಾಲದ ೭ ಗಂಟೆಗೆ ೬೧. ೪೮. ಮೀಟರಗಳ ಮೇಲಿಂದ ಕೆಲಸ ಸಾಗಿಸುತ್ತಲಿದ್ದಾರೆ. ಸದ್ಯಕ್ಕೆ ವಿದ್ಯುತ್ತಿನ ಅನುಕೂಲವಿದ್ದಲ್ಲಿ ಮರಾಠಿಯಲ್ಲಿ ಮಾತ್ರ ಕಾರ್ಯಕ್ರಮಗಳು ಪ್ರಾರಂಭವಾಗಿವೆ. ಈ ವರ್ಷವು ಮುಗಿಯುವದರೊಳಗಾಗಿ ಎಲ್ಲ ಸೆಟ್ಟಗಳನ್ನು ಎಲ್ಲ ಭಾಗಗಳಲ್ಲಿ ಕೂಡ್ರಿಸಿದ ಬಳಿಕ ಪ್ರಾಂತದ ಮುಖ್ಯ ಭಾಷೆಗಳಾದ ಕನ್ನಡ, ಮರಾಠಿ, ಗುಜರಾಥಿಗಳಲ್ಲಿ ಕಾರ್ಯಕ್ರಮಗಳು ಆರಂಭವಾಗುವವು. ಪ್ರಾರಂಭದ ಭಾಷಣದಲ್ಲಿ ನಾ. ಗವ್ಹರ್ನರ ಸಾಹೇಬರು ಹೀಗೆ ತಿಳಿಸಿರುವರು.

"ಸುದ್ದಿ ಸಂಗತಿಗಳನ್ನು ಬೇಗನೆ ತಿಳುಹಿಸಲು ಆಕಾಶವಾಣಿಯು ಒಂದು ಮಹತ್ವದ ಸಾಧನವಾಗಿದೆ. ಈಗ ಆರಂಭಿಸುವ ಈ ಯೋಜನೆಯಿಂದ ಹಳ್ಳಿಯ ಸುಧಾರಣೆಗೆ ತುಂಬ ಅನುಕೂಲವಾಗುವದು. ಈ ಸೆಟ್ಟುಗಳನ್ನು ಸರಕಾರದವರು ಕೊಂಡು ಕೊಂಡು ಹಳ್ಳಿಗಳಿಗೆ ಪುಕ್ಕಟೆಯಾಗಿ ಕೊಟ್ಟು ಕಾರ್ಯಕ್ರಮಗಳನ್ನು ಕೇಳಲು ಅನುಕೂಲಮಾಡಿ ಕೊಟ್ಟಿದ್ದಾರೆ. ಇನ್ನೂ ಹೆಚ್ಚು ಸೆಟ್ಟುಗಳನ್ನು ಕೊಂಡು ಕೊಡುವ ವಿಚಾರವಿದೆ. ಇದರಿಂದ ಉದ್ಯೋಗ ವ್ಯವಹಾರಗಳ ಸಂಗತಿಗಳು, ಭಜನೆ, ಗಾಯನ, ವಿನೋದಗಳು, ರಾಜಕೀಯ ಸಾಮಾಜಿಕ ಸುದ್ದಿ ಸಂಗತಿಗಳು, ಇವೆಲ್ಲ ಸಹಜವಾಗಿ ತಿಳಿದು ಬರುವವು. ಹಳ್ಳಿಗರು ಇದರ ಲಾಭವನ್ನು ಅವಶ್ಯವಾಗಿ ಪಡೆಯಬೇಕು." ಆ ಮಹನೀಯರ ಅಪ್ಪಣೆಯಂತೆ ಕನ್ನಡಿಗರಿಗೂ ಇದರ ಲಾಭವು ಬೇಗನೆ ದೊರೆಯಲೆಂದು ಆಶಿಸುವೆವು.

ನಮ್ಮ ವಿದ್ಯಾಧಿಕಾರಿಗಳು

೧. ಶ್ರೀಮಾನ್ ಸಾನೆ ಅನಂತರಾಯರು

ನಮ್ಮ ಭಾಗದ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀ. ಸಾನೆ ಅನಂತ ರಾಯರು ರತ್ನಾಗಿರಿ ಜಿಲ್ಲೆಯ ಮಾಲವಣ ತಾಲೂಕಿನ ಆಚರಾ ಎಂಬ ಊಗವರು. ಇವರ ತಂದೆಯವರಾದ ನಾರಾಯಣರಾಯರು ಕನ್ನಡ ಜಿಲ್ಲೆಗಳಲ್ಲಿ ಪೋಸ್ಟಮಾಸ್ತರರಾಗಿದ್ದರು. ತಾಯಿಯವರು ಮಾಲವಣ ತಾಲೂಕಿನ ತ್ರಿಂಬಕ ಎಂಬ ಹಳ್ಳಿಯ ದಶಗ್ರಂಥಿ ಬ್ರಾಹ್ಮಣ ಮನೆತನದವರು. ೧೮೯೫ ರಲ್ಲಿ ಇದೇ ಹಳ್ಳಿಯಲ್ಲಿ ಅನಂತರಾಯರ ಜನ್ಮವಾಯಿತು. ಬಾಲ್ಯದಲ್ಲಿ ನಾಲ್ಕನೆಯ ಇಯತ್ತೆ ಪೂರ್ಣ ಮರಾಠಿ ಶಿಕ್ಷಣವು ಇದೇ ಹಳ್ಳಿಯಲ್ಲಿ ಮುಗಿದ ಬಳಿಕ ಬಸವನಬಾಗೇವಾಡಿಗೆ ತಂದೆಯವರ ಹತ್ತಿರ ಬಂದರು. ಅನಂತರಾಯರು ಚುರುಕು ಬುದ್ಧಿಯವರಾದುದರಿಂದ ಸ್ವಲ್ಪ ದಿನಗಳಲ್ಲಿಯೇ ಕನ್ನಡ ಮೂತನಾಡಲು ಕಲಿತುಕೊಂಡರು. ಅಲ್ಲಿಯ ಹೆ. ಮಾ. ರಾದ ಅಂಬಾಜಿರಾಯರ ಪ್ರೋತ್ಸಾಹದಿಂದ ಒಂದೇ ವರ್ಷದಲ್ಲಿ ಕನ್ನಡ ೫ನೆಯ ಇಯತ್ತೆಯನ್ನು ಕೂಡ ಕಲಿತರು.

ಅನಂತರಾಯರ ಮನೆತನದವರು ಬಡವರು. ಐದಾರು ತಲೆಯಿಂದ ಶಿಕ್ಷಣವೃತ್ತಿಯನ್ನೂ ಕೀರ್ತನೆಯನ್ನೂ ಮಾಡಿ ಉಪಜೀವನ ಸಾಗಿಸುತ್ತಿದ್ದರು. ನಾರಾಯಣರಾಯರೊಬ್ಬರು ಮಾತ್ರ ಪೋಸ್ಟಖಾತೆಯಲ್ಲಿ ಸೇರಿದರು. ಪರಿಸ್ಥಿತಿಯು ಹೀಗಿರುವದರಿಂದ ಅನಂತರಾಯರು ಮುಂದಿನ ಶಿಕ್ಷಣವನ್ನು ಸ್ವಾವಲಂಬನದಿಂದಲೇ ಪಡೆಯಬೇಕಾಯಿತು. ಬೆಳಗಾವಿ ಸರದಾರ್ ಹಾಯಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿ ೧೯೧೫ ರಲ್ಲಿ ಸ್ಕಾಟ್ರಿಕ್ ಪಾಸಾದರು. ಎಲ್ಲ ವರ್ಗದಲ್ಲಿಯೂ ಇವರದೇ ಮೊದಲನೆಯ ನಂಬರು. ಮುಂದೆ ಫರ್ಗ್ಯೂಸನ್ ಹಾಗೂ ಎಲ್‌ಫಿನ್‌ಸ್ಟನ್ ಕಾಲೇಜುಗಳಲ್ಲಿ ಉಚ್ಚ ಶಿಕ್ಷಣವನ್ನು ಪಡೆದು ಬಿ. ಏ., ಆದರು. ಮುಂಬಯಿಯ ಕಲೆಕ್ಟರರ ಕಚೇರಿಯಲ್ಲಿ ಕೆಲವು ತಿಂಗಳು ಕೆಲಸ ಮಾಡಿ ೧೯೨೦ ರ ಜನವರಿಯಲ್ಲಿ ಪುಣೆಯ ಸರಕಾರಿ ಹೈಸ್ಕೂಲಿನಲ್ಲಿ ಅ. ಮಾಸ್ತರರಾಗಿ ನಿಯಮಿಸಲ್ಪಟ್ಟರು.

ಅನಂತರಾಯರು ತಮ್ಮ ಚುರುಕುಬುದ್ಧಿ, ಆಸ್ಥೆ, ಚಟುವಟಿಕೆಗಳಿಂದ ಎಲ್ಲರಿಗೂ ಪ್ರಿಯರಾದರು. ಮುಮತೆಯಿಂದ ಕಲಿಸುವ ವಿಷಯಗಳೆಂದರೆ ಭೂಗೋಲ ಮತ್ತು ಇಂಗ್ಲೀಷ ಮಾಧ್ಯಮಿಕ ಶಿಕ್ಷಣ ಪಡೆಯುವ ಕಾಲದಲ್ಲಿ ಚಿತ್ರಕಲೆಯ ಕೆಲವು ಪರೀಕ್ಷೆಗಳನ್ನು ಕೊಟ್ಟಿದ್ದರಿಂದ ಭೂಗೋಲ ಶಿಕ್ಷಣಕ್ಕೆ ಚಿತ್ರಕಲೆಯ ನೆರವು ದೊರೆದು ಇವರು ಸ್ವಲ್ಪಕಾಲದಲ್ಲಿಯೇ ನಾಮಾಂಕಿತ ಶಿಕ್ಷಕರಾದರು. ನಾಸಿಕ, ಸಾತಾರೆ, ಬೆಳಗಾವಿ, ಮುಂಬಯಿ, ಠಾಣೆ ಮೊದಲಾದ ಹಲವು ಹೈಸ್ಕೂಲುಗಳಲ್ಲಿ ಕೆಲಸಮಾಡಿದ ನಂತರ ೧೯೩೬ ರಲ್ಲಿ ಬಿ. ಟಿ. ಆಗಿ ಎಲ್‌ಫಿನ್‌ಸ್ಟನ್ ಹೈಸ್ಕೂಲಿನಲ್ಲಿ ಶಿಕ್ಷಕರಾದರು. ೧೯೩೯ ರಲ್ಲಿ ಬಿ. ಟಿ. ಕಾಲೇಜದ ಸ್ಟಾಫ್ ದಲ್ಲಿ ಬಂದರು. ೧೯೫೦ ರಲ್ಲಿ ಢಪರೀನ ಹಡಗದ ಮೇಲೆ ಶಿಕ್ಷಕರಾದರು. ೧೯೫೨ ರಲ್ಲಿ ಮುಂಬಯಿ ಬಿ. ಟಿ. ಕಾಲೇಜದಲ್ಲಿ ಲೆಕ್ಚರರಾದರು. ಅಲ್ಲಿಯೇ ೧೯೫೯ ರ ವರೆಗೆ ಇದ್ದು ನಂತರ ಬೆಳಗಾವಿಯ ಹೊಸ ಬಿ. ಟಿ. ಕಾಲೇಜಕ್ಕೆ ವರ್ಗವಾಗಿ ಬಂದರು. ನಾಲ್ಕು ವರ್ಷಗಳ ನಂತರ ೧೯೬೩ ರ ಮಾರ್ಚಿಯಿಂದ ನಮ್ಮ ಭಾಗದ ಅ. ಎ. ಇ. ರಾಗಿರುವರು. ಇವರು

ಹೈಸ್ಕೂಲದ ಎಲ್ಲ ತರಗತಿಗಳಿಗಾಗಿ ಭೂಗೋಲದ ಪುಸ್ತಕಗಳನ್ನು ಮರಾಠಿಯಲ್ಲಿ ಬರೆದಿದ್ದಾರೆ. ಅವುಗಳ ಕನ್ನಡ, ಗುಜರಾಥಿ ಅನುವಾದಗಳೂ ಆಗಿವೆ. ಇವೆಲ್ಲವೂ ಉಪಯುಕ್ತ ಪುಸ್ತಕಗಳಾಗಿವೆ. ಮುಂಬಯಿ ಜಾಗ್ರುಫಿ ಅಸೋಸಿಯೇಶನ್‌ದ ಸಮರಸ್ಕೂಲ್ ಪತ್ರಿಕೆಯಲ್ಲಿಯೂ ಕೆಲವು ಲೇಖನಗಳನ್ನು ಬರೆದಿದ್ದಾರೆ. ಭೂಗೋಲ ವಿಷಯದಲ್ಲಿ ನೂರಾರು ಮಾದರಿಯ ಪಾಠಗಳನ್ನೂ ಭಾಷಣಗಳನ್ನೂ ಕೊಟ್ಟಿದ್ದಾರೆ. ೧೯೩೫ ರ ಪೂರ್ವದಲ್ಲಿ ಮಿ. ವೇಬರ ಡಾ. ನೋಬ್ರೇನ ಮೊದಲಾದವರ ಕೈಯಲ್ಲಿ ಫಿಜಿಕಲ್ ಟ್ರೇನಿಂಗವನ್ನುಹೊಂದಿದ್ದಾರೆ. ೧೯೨೨ ರಲ್ಲಿ ಲೋಣಾವಳಿಯಲ್ಲಿ ಮಿ. ಮಿಲರ ಇವರ ಬಳಿಯಲ್ಲಿ ಸ್ಕೌಟ ಶಿಕ್ಷಣವನ್ನು ಕೂಡ ಹೊಂದಿದ್ದಾರೆ.

ಅನಂತರಾಯರ ಸ್ವಭಾವವು ನಿಸ್ಪೃಹವಾದುದಾದರೂ ನಿಷ್ಠುರವಿಲ್ಲ. ಕೈಕೊಂಡ ಕೆಲಸದಲ್ಲಿ ಎಂಥ ಅಡೆತಡೆಗಳು ಬಂದರೂ ಬಿಡದೆ ಫಲಾಶೆಯಿಲ್ಲದೆ ಅದನ್ನು ಕರ್ತವ್ಯವೆಂದು ತಿಳಿದು ಮಾಡುವಂಥವರು. ಯಾವಾಗಲೂ ತಾವು ವಿದ್ಯಾರ್ಥಿಯೆಂದೇ ಇವರ ತಿಳಿವಳಿಕೆ. ಕನ್ನಡವು ಬಳಕೆಯಲ್ಲಿಲ್ಲದ ಸ್ಥಳದಲ್ಲಿದ್ದಾಗಲೂ ಕೂಡ ದಿನಾಲು ಅದನ್ನು ಓದಿ ಅಭ್ಯಾಸಮಾಡಿದ್ದಾರೆ. ಈಗಲೂ ಮಾಡುತ್ತಲಿದ್ದಾರೆ. ತಮ್ಮ ವಿದ್ಯಾರ್ಥಿಗಳಿಗೆ ಮನೆಯಲ್ಲಿ ಕೂಡ ಸಲಹೆ ಕೊಡುತ್ತಾರೆ. ಬಹಳ ಹೆಣ್ಣುಮಕ್ಕಳ ತಂದೆಯವರಿದ್ದಾರೆಂದಬಳಿಕ ಇವರು ತುಂಬ ಅಂತಃಕರುಣಿಗಳೆಂದು ಬೇರೆ ಹೇಳುವದು ಬೇಡ. "ದಕ್ಷಿಣ ಭಾಗದಲ್ಲಿ ಇನ್ನೂ ಹೆಚ್ಚಾಗಿ ಶಿಕ್ಷಣ ಪ್ರಸಾರವಾಗಬೇಕು. ಅಲ್ಲಲ್ಲಿ ಶಾಲೆ-ಕಾಲೇಜಗಳು ಕಂಗೊಳಿಸಬೇಕು. ಧನಿಕರೂ ಮಧ್ಯಮಸ್ಥಿತಿಯವರೂ ಮುಕ್ತ ಹಸ್ತದಿಂದ ಅವಕ್ಕೆ ನೆರವಾಗಬೇಕು. ಪ್ರಾಥಮಿಕ ಶಾಲೆಗಳಲ್ಲಿ ಉಪಕರಣಗಳು ಹೆಚ್ಚಾಗಿ ನಿಜವಾದ ಪ್ರಗತಿಯಾಗಬೇಕು. ಬೇರೆ ಬೇರೆ ಸಂಸ್ಥೆಗಳು ನಡೆಯಿಸಿದ ಖಾಸಗೀ ಶಾಲೆಗಳು ಮಾದರಿಯ ಶಾಲೆಗಳಂತಾಗಬೇಕು. ಕನ್ನಡಿಗರು ಬುದ್ಧಿ-ಕಾರ್ಯಕ್ಷಮತೆಗಳಲ್ಲಿ ಉಳಿದ ಭಾಗದವರಿಗಿಂತ ಸ್ವಲ್ಪವೂ ಕಡಿಮೆಯಾಗಿಲ್ಲ. ಆದರೆ ಅವರಲ್ಲಿ ವಿದ್ಯಾಪ್ರಸಾರವಾಗದೆ ಉನ್ನತಿಯಾಗಲಿ ಉದ್ಧಾರವಾಗಲಿ ಆಗದು." ಎಂಬದು ಇವರ ಖಂಡಿತವಾದ ಅಭಿಪ್ರಾಯವು. ಇಂತಹ ಸಾತ್ವಿಕ ಮನೋವೃತ್ತಿಯ ಕಾರ್ಯಕ್ಷಮರಿಗೆ ಹೆಚ್ಚಿನ ಶ್ರೇಯಸ್ಸು ತಾನಾಗಿ ಒದಗಬಹುದೆಂದು ಆಶಿಸಿದರೆ ತಪ್ಪೇನು?

H. G. Katti

(೨) ಶ್ರೀಮತಿ ಸೌ. ಥಿಟೆ ಸರಸ್ವತಿಬಾಯಿ ಇವರು

(ಶ್ರೀ. ಸಿದ್ಧಲಿಂಗಪ್ಪ ಅಡಿಗಿ, ಹೆ. ಮಿ. ಗೋಕಾಕ ಇವರಿಂದ)

ನಮ್ಮ ಭಾಗದ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟ್ರಸರಾದ ಶ್ರೀಮತಿ ಸರಸ್ವತಿಬಾಯಿ ಥಿಟೆಯವರು ಶಹಾಪುರದ ಮುದಲಿಯಾರ ಮನೆತನದವರು. ತಂದೆಯವರು ಸಾಂಗಲಿಯಲ್ಲಿ ಸರಕಾರಿ ಡಾಕ್ಟರರಿದ್ದುದರಿಂದ ಸರಸ್ವತಿಬಾಯಿಯವರು ಬಾಲ್ಯವನ್ನು ಸಾಂಗಲಿಯಲ್ಲಿಯೇ ಕಳೆದರು. ಅಲ್ಲಿಯ ಮರಾಠಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನೂ ಬೆಳಗಾವಿಯ ಬೆನನ್‌ಸ್ಮಿಥ ಹಾಯಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣವನ್ನೂ ಧಾರವಾಡದ ಕರ್ನಾಟಕ ಕಾಲೇಜದಲ್ಲಿ ಉಚ್ಚ ಶಿಕ್ಷಣವನ್ನೂ ಪಡೆದು ಬಿ. ಎ. ಆದ ಬಳಿಕ ಧಾರವಾಡದ ಗರ್ಲ್ಸ್ ಹೈಸ್ಕೂಲಿನಲ್ಲಿ ಶಿಕ್ಷಕಿಯರಾದರು. ಅಧ್ಯಾಪನ ಹಾಗು ಸ್ತ್ರೀಯರ ಉನ್ನತಿ ಇವುಗಳ ಕಡೆಗೆ ಇವರ ಒಲವು ಬಹಳ. ೧೯೩೧ ರಲ್ಲಿ ಬಿ. ಟಿ. ಆಗಿ ಅವರು ಬೆಳಗಾವಿ ಜಿಲ್ಲೆಯಲ್ಲಿ ಕೆಲಕಾಲ ಅ. ಡಿ. ಎ. ಇನ್‌ಸ್ಪೆಕ್ಟ್ರಸರ ಕೆಲಸಮಾಡಿದರು. ಸರಕಾರದವರು ಕಳೆದ ಫೇಬ್ರುವರಿ ತಿಂಗಳಲ್ಲಿ ಇವರನ್ನು ನಮ್ಮ ಭಾಗದ ಅಸಿ. ಎಜ್ಯುಕೇಶನಲ್ ಇನ್‌ಸ್ಪೆಕ್ಟ್ರಸರಾಗಿ ನಿಯಮಿಸಿರುವರು.

ಸಾಂಗಲಿಯ ಶಿಕ್ಷಣಾಧಿಕಾರಿಗಳ ಮಕ್ಕಳಾದ ಶ್ರೀಮಾನ್ ಡಿ.ಕೆ.ಥಿಟೆ ಅವರು. ಇವರಿಗೆ ಪೂರ್ವಪರಿಚಿತರು. ಬಿ.ಎ., ಎಲ್.ಎಲ್.ಬಿ. ಆದವರು. ಧಾರವಾಡದಲ್ಲಿ ಕೆಲವು ವರ್ಷ ವಕೀಲಿಯನ್ನು ಮಾಡಿ ಈಗ ತೊರಗಲ್ಲ ಜಹಗೀರಿಯ ದಿವಾಣರಾಗಿದ್ದಾರೆ. ಇವರೊಡನೆ ಸುಗುಣಾಬಾಯಿಯವರ ಲಗ್ನವಾಗಿದ್ದು, ಈಗ ಮೂವರು ಮಕ್ಕಳು ಹುಟ್ಟಿದ್ದಾಳೆ. ಈ ರೀತಿ ಸಂತಾನ, ಸಂಪತ್ತು, ವಿದ್ಯೆ, ಅಧಿಕಾರ ವಿನಯ ಇವೆಲ್ಲವುಗಳ ಸಂಗಮವು ಇವರಲ್ಲಿ ಕಂಡುಬರುವದು.

"ಭಾರತೀಯರ ಅವನತಿಗೆ ಹೆಣ್ಣುಮಕ್ಕಳ ಅಜ್ಞಾನವೂ ಒಂದು ಬಲವಾದ ಕಾರಣವು. ಶಿಕ್ಷಣವೇ ಅದಕ್ಕೆ ಮದ್ದು. ಅದಕ್ಕಾಗಿ ಹೆಣ್ಣುಮಕ್ಕಳಿಗೆ ಎಷ್ಟು ಬಗೆಯಿಂದ ಶಿಕ್ಷಣವು ದೊರೆಯಲು ಶಕ್ಯವಿದೆಯೋ ಅಷ್ಟು ಬಗೆಯಲ್ಲಿಯೂ ಅದನ್ನು ಕೊಡಿಸುವದು ಅವಶ್ಯ." ಎಂಬುದು ಇವರ ಮತ. ಶಿಕ್ಷಕೆಯರ ಬಗೆಗೆ ಇರುವ ನಮ್ಮ ಸಮಾಜದ ದೋಷೈಕ ದೃಷ್ಟಿಯು ದೂರವಾಗಿ, ಸ್ತ್ರೀಯರಿಗಾಗಿ ಪ್ರಬುದ್ಧರ ವರ್ಗ, ಧರ್ಮಾರ್ಥ ವಾಚನಾಲಯ ಮೊದಲಾದವುಗಳ ಪ್ರಸಾರವಾಗಬೇಕೆಂದು ಇವರು ಹಂಬಲಿಸುವರು. ಲೌಕಿಕಾಡಂಬರದ ಅಪೇಕ್ಷೆಯಿಲ್ಲದ ಇವರರ ಕಾಲದಲ್ಲಿ ಸ್ತ್ರೀಯರ ಶೈಕ್ಷಣಿಕ ಯೋಗ್ಯತೆಯು ಹೆಚ್ಚಲೆಂದು ಆಶಿಸುವೆನು.

(೩) ಶ್ರೀ. ರಾಜೇಸಾಹೇಬ ಜಾತಿಗೇರ ಅವರು

ಕೇವಲ ಪ್ರಾಥಮಿಕ ಶಿಕ್ಷಕರೇ ಆಗಿದ್ದರೂ ಪದವೀಧರರ ದರ್ಜೆಯಲ್ಲಿ ಕೆಲಸಮಾಡಿ ವೇತನ ಪಡೆದು ಮೊನ್ನೆ(ಮೇ ೧೭ನೆಯ ತಾರೀಖು) ನಿವೃತ್ತರಾದ ಶ್ರೀ. ಜಾತಿಗೇರ ರಾಜೇ ಸಾಹೇಬರು ನಮ್ಮ ಪ್ರಾಥಮಿಕ ಶಿಕ್ಷಕರ ಅಭಿಮಾನಕ್ಕೆ ಅರ್ಹರೆಂಬುದನ್ನು ಬೇರೆ ಹೇಳಬೇಕಾ ಗಿಲ್ಲ. ಕೇವಲ ಸ್ವಪ್ರಯತ್ನದಿಂದಲೇ ಇವರು ಮುಂದೆ ಬಂದವರು. ಇಂತಹ ದಕ್ಷರೂ ಕಾರ್ಯಕ್ಷಮರೂ ಆದ ಪ್ರಾಥಮಿಕ ಶಿಕ್ಷಕರ ಬಗ್ಗೆ ನಾಲ್ಕು ಮಾತುಗಳನ್ನು ಬರೆದರೆ ಪ್ರಾಥಮಿಕ ಶಿಕ್ಷಣದಲ್ಲಿ ಅದು ಅಸ್ಥಾನೀಯವೆನಿಸಲಾರದೆಂದು ನಂಬುತ್ತೇವೆ.

ಶ್ರೀ. ಜಾತಿಗೇರ ಇವರು ಧಾರವಾಡದಿಂದ ೭ ಮೈಲು ದೂರದಲ್ಲಿರುವ ಅಮೀನಭಾವಿ ಎಂಬ ಹಳ್ಳಿಯಲ್ಲಿ ಹಿಂದುಳಿದ ಬಡತನದ ಚಿಕ್ಕಮನೆತನವೊಂದರಲ್ಲಿ ೧೮೮೯ ರಲ್ಲಿ ಹುಟ್ಟಿದರು. ಆ ಕಾಲದಲ್ಲಿ ಹಿಂದುಳಿದ ವರ್ಗದಲ್ಲಿ ಶಿಕ್ಷಣ ಪ್ರಸಾರವು ತೀರ ಅಲ್ಪಪ್ರಮಾಣದಲ್ಲಿತ್ತೆಂಬದು ಎಲ್ಲರೂ ಬಲ್ಲ ಮಾತು. ಇವರು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ೧೯೦೭ರಲ್ಲಿ ಆಗಿನ ಮುಲಕೀ ಪರೀಕ್ಷೆಯಲ್ಲಿ ಮೇಲ್ತರಗತಿಯಲ್ಲಿ ಪಾಸಾದರು. ೧೯೦೮ ರಿಂದ ೧೦೮ ವರೆಗೆ ಧಾರವಾಡದ ಟ್ರೇನಿಂಗ್ ಕಾಲೇಜದಲ್ಲಿ ಕಲಿತಬಳಿಕ ಒಮ್ಮೆಲೆ ಪ್ರ್ಯಾಕ್ಟಿಸಿಂಗ್‌ಸ್ಕೂಲಿನಲ್ಲಿ ಶಿಕ್ಷಕರಾಗಿ ನಿಯಮಿಸಲ್ಪಟ್ಟರು. ಆ ಕಾಲದಲ್ಲಿ ಟ್ರೇನಿಂಗ್ ಕಾಲೇಜಕ್ಕಾಗಲಿ ಶಿಕ್ಷಕವೃತ್ತಿಗಾಗಲಿ ಜಾತಿ ವಾರ ಆರಿಸುವಿಕೆಯು ಇನ್ನೂ ಪ್ರಚಾರದಲ್ಲಿ ಬಂದಿರಲಿಲ್ಲ. ಬೌದ್ಧಿಕ ಅರ್ಹತೆಗೇ ಹೆಚ್ಚು ಪ್ರಾಧಾನ್ಯವಿದ್ದಿತು. ಆದುದರಿಂದ ಶ್ರೀ. ಜಾತಿಗೇರ ಇವರು ಕೇವಲ ತಮ್ಮ ಬುದ್ಧಿಮತ್ತೆಯ ಬಲದಿಂದಲೇ ಕಾಲೇಜಕ್ಕೆ ಸೇರಿ ಅಲ್ಲಿ ಉಚ್ಚತರಗತಿಯಲ್ಲಿ ಪಾಸಾಗಿ ನೆಟ್ಟಗೆ ಕಾಲೇಜದ ಕಟ್ಟೆ ಯಲ್ಲಿಯೇ ಕೆಲಸವನ್ನು ಪ್ರಾರಂಭಿಸಿದರು. ಕಾಲೇಜದಲ್ಲಿದ್ದಾಗ ಅವರು ತಮ್ಮ ಸಹಪಾಠಿಗಳಿ ಗೆಲ್ಲ ಮುಂದಾಳಾಗಿದ್ದಂತೆಯೇ ಶಿಕ್ಷಕವೃಂದಕ್ಕೂ ತುಂಬ ಪ್ರಿಯರಾಗಿದ್ದರು. ಕಲಿಸುವದ ರಲ್ಲಿಯೂ ಕಲಿಯುವದರಲ್ಲಿಯೂ ಅಷ್ಟೇ ವಿಜಕ್ಷಣರಾಗಿದ್ದರು. ಇವರ ಫಲವಾಗಿ ಇವರನ್ನು ಪ್ರ್ಯಾಕ್ಟಿಸಿಂಗ್‌ಸ್ಕೂಲಿಗೆ ಆರಿಸಿದರು. ಕಾಲೇಜದಲ್ಲಿ ಇವರ ಸಹಾಧ್ಯಾಯಗಳಾಗಿದ್ದು, ಈಗಲೂ ಇವರ ನೆರೆಯಲ್ಲಿಯೇ ಇರುತ್ತಿರುವ ಶ್ರೀ. ಕುರಡಿಯವರೂ ಇವರೂ ಕೂಡಿಯೇ ಪ್ರ್ಯಾಕ್ಟಿಸಿಂಗ್

ಸ್ಕೂಲಿನಲ್ಲಿ ನೌಕರಿಯನ್ನು ಆರಂಭಿಸಿದರು. ಲೋಕಲ್ ಬೋರ್ಡಿನ ಪ್ರಾಥಮಿಕ ಶಾಲೆಯಲ್ಲಿ ಕೆಲಸಮಾಡುವ ಸಂದರ್ಭವೇ ಇವರಿಗೆ ಒದಗಲಿಲ್ಲ.

ಪ್ರ್ಯಾಕ್ಟೀಸಿಂಗ್ ಸ್ಕೂಲಿನಲ್ಲಿ ಕೆಲಸಮಾಡುವಾಗಲೂ ಕೂಡ ಅತಿಶಯ ವಿಚಕ್ಷಣೆಯಿಂದಲೇ ಕೆಲಸಮಾಡುತ್ತಿದ್ದರು. ನಿಷ್ಪ್ರಯೋಜಕವಾದ ಬಾಯಿ ಹರಟೆಯಾಗಲಿ, ಜೀ ಜೀ ಎಂದು ಅಧಿಕಾರಿಗಳ ಬಳಿ ಸುಳಿದಾಡುವದಾಗಲಿ ಇವರಿಗೆ ಗೊತ್ತೇ ಇಲ್ಲ. ತಾನಾಯಿತು, ತನ್ನ ಕೆಲಸವಾಯಿತು. ಹಿರಿಯರು ಹೇಳಿದಷ್ಟು ಕೆಲಸವನ್ನು ನಿಷ್ಠೆಯಿಂದಲೂ, ಕುಶಲತೆಯಿಂದಲೂ ತಟ್ಟನೆ ಮುಗಿಸಿ ಬಿಡುವದು ಇವರ ಹುಟ್ಟುಗುಣ. ಇಷ್ಟು ಕಾರ್ಯಕ್ಷಮರೂ ಕುಶಲರೂ ಆಗಿದ್ದರೂ ಯಾರನ್ನೂ ದೂರಸರಿಸಿ ಏರಾಟಕೆ ನಡೆಯಿಸದ ಶಾಂತ ಸ್ವಭಾವವಿವರದು. ಗಣಿತ ಭಾಷೆ ಮುಂತಾದ ಬೌದ್ಧಿಕ ವಿಷಯಗಳಲ್ಲಿಯೂ ಡ್ರಾಯಿಂಗು ಕಾರ್ಪೆಂಟರಿ ಮುಂತಾದ ಕಲಾ ಕೆಲಸಗಳಲ್ಲಿಯೂ ಇವರಿಗೆ ಅಷ್ಟೇ ಜಾಣ್ಮೆಯಿರುವದು. ಈ ಎಲ್ಲ ವಿಷಯಗಳನ್ನು ಇನ್ನೊಬ್ಬರು ಹಿಂದು ಮುಂದು ನೋಡದೆ ಅನುಕರಣ ಮಾಡುವಷ್ಟು ದಕ್ಷತೆಯಿಂದ ತಮ್ಮ ವಿದ್ಯಾರ್ಥಿಗಳಿಗೆ ಕಲಿಸಬಲ್ಲವರು. ಈ ಎಲ್ಲ ಅಸಾಮಾನ್ಯ ಗುಣಗಳನ್ನು ನೋಡಿ ಆ ಕಾಲದ ಅಧಿಕಾರಿಗಳು ಕೇವಲ ೮-೯ ವರ್ಷಗಳ ನೌಕರಿಯಾದಕೂಡಲೆ ಇವರನ್ನು ಅಸಿಸ್ಟಂಟ ಡೆಪ್ಯುಟಿಯ ಕೆಲಸಕ್ಕೆ ಆರಿಸಿದರು. ೧೯೧೯ ರಿಂದ ೧೯೪೪ರ ವರೆಗೆ ೨೫ ವರ್ಷ ಕಾಲ ಇವರು ವಿಜಾಪುರ, ಧಾರವಾಡ ಜಿಲ್ಲೆಗಳಲ್ಲಿ ಉರ್ದು ಶಾಲೆಗಳ ಮೇಲ್ವಿಚಾರಣೆಯ ಕೆಲಸದಲ್ಲಿ ನಿಯುಕ್ತರಾಗಿದ್ದರು. ೧೯೨೭ರಲ್ಲಿ ವಿಜಾಪುರದಲ್ಲಿ ಕೆಲಸಮಾಡುತ್ತಿದ್ದಾಗ ಪ್ರಾಥಮಿಕ ಶಿಕ್ಷಣದ ಆಡಳಿತೆಯು ಸ್ಕೂಲ್ ಬೋರ್ಡುಗಳ ಅಧೀನಕ್ಕೆ ಹೋಯಿತು. ಆ ಸಂದರ್ಭದಲ್ಲಿ ಕೇವಲ ಅಧಿಕಾರಿಗಳ ಆಯ್ಕೆಯಿಂದ ಅಸಿ| ಡೆ| ಆಗಿದ್ದವರಲ್ಲಿ ಹಲವರು ಹಿಂದಿರುಗಬೇಕಾಯಿತು. ಆದರೆ ಶ್ರೀ. ಜಾತಿಗೇರ ಇವರು ಬೋರ್ಡಿನ ಆಳಿಕೆಯಲ್ಲಿಯೂ ಮೊದಲಿನಷ್ಟೇ ಏಕೆ, ಇನ್ನೂ ಹೆಚ್ಚು ಆದರಣೆಯನ್ನು ಹೊಂದಿ ಕೆಲಸಮಾಡಿದರು.

೧೯೨೨ರಲ್ಲಿ ಇವರಿಗೆ ೧೫೦ ರೂ| ಪಗಾರು ಮೂವತ್ತು ರೂಪಾಯಿ ಡ್ಯೂಟಿಪೇ ಸಿಗುತ್ತಿದ್ದು ಸರಕಾರದ ಹೊಸ ನಿಯಮದ ಮೇರೆಗೆ ಡ್ಯೂಟಿಪೇಯನ್ನು ನಿಲ್ಲಿಸುವ ಸಂದರ್ಭವೊದಗಿತು. ಆಗ ಅಧಿಕಾರಿಗಳು ಇವರ ಕಾರ್ಯಕ್ಷಮತೆಯನ್ನೂ ಸರ್ವಜನರಿಗೂ ಸಮಾನವಾಗಿ ಪ್ರಿಯರಾಗಿರುವ ವಿಚಕ್ಷಣಾಯುಕ್ತ ನಡೆನಳಿಯನ್ನೂ ಕಂಡು ಸರ್ವಸಾಮಾನ್ಯ ನಿಯಮಕ್ಕಾಗಿ ವೈಯಕ್ತಿಕ ಹಾನಿಯಾಗುವದು ಅನ್ಯಾಯವೆಂದು ಪ್ರತಿಪಾದಿಸಿ ಇವರಿಗೆ ಪದವೀಧರರ ದರ್ಜೆಯ ವೇತನವನ್ನು ಮಂಜೂರ ಮಾಡಿದರು. ಇವರ ನಿಷ್ಕಾಮ ಪ್ರಯತ್ನ ನಿರ್ವಿಕಲ್ಪ ಪರಿಶ್ರಮಗಳ ಫಲವೇ ಇದೆಂದು ಹೇಳಿದರೆ ತಪ್ಪಾಗದು. ಇವರು ಹೈಸ್ಕೂಲಿನಲ್ಲಿ ಎಂದೂ ಕಲಿಯದೆ ಇದ್ದರೂ ಸ್ವಪ್ರಯತ್ನದಿಂದ ಇಂಗ್ಲೀಷು ಭಾಷೆಯನ್ನು ಓದು-ಬರೆಹಗಳ ಮಟ್ಟಿಗೆ ಅಭ್ಯಾಸ ಮಾಡಿಕೊಂಡಿರುವರು. ಸಭ್ಯದ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರಾಗಿರುವ ಶ್ರೀ. ಉಮಡಿರಾಯರು ಇವರ ಇಂಗ್ಲಿಷು ಶಿಕ್ಷಣಕ್ಕೆ ಮುಖ್ಯ ಸಹಾಯಕರು; ಪ್ರೇಕ್ಷಕರು.

ಪ್ರಾಥಮಿಕ ಶಿಕ್ಷಕರಾಗಿ ಇಪ್ಪತ್ತೈದು ವರ್ಷಗಳ ದೀರ್ಘಕಾಲ ಅಸಿ. ಡೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಕೆಲಸ ಮಾಡಿದ ವ್ಯಕ್ತಿಗಳು ನಮ್ಮ ಕೇಳಿಕೆಯಲ್ಲಂತೂ ಇಲ್ಲ. ಇವರು ಕೆಲಸದಲ್ಲಿದ್ದಾಗ ಶಿಕ್ಷಕವರ್ಗದ ಮತ್ತು ಜನತೆಯ ಸಂಪೂರ್ಣ ಪ್ರೀತಿಗೆ ಪಾತ್ರರಾಗಿದ್ದರೆಂಬದಕ್ಕೆ ಅಂದಿನಿಂದ ಇಂದಿನ ವರೆಗೂ ಅವರ ವಿರುದ್ಧ ತಕರಾರು ಹುಟ್ಟಿಯೇ ಇಲ್ಲವೆಂಬುದೊಂದೇ ಮಾತು ಸಾಕು. ೧೯೧೯ ರಿಂದ ೪೪ ರ ವರೆಗೆ ಹತ್ತೊಂಬತ್ತು ವರ್ಷಗಳ ಕಾಲ ವಿಜಾಪುರ ಜಿಲ್ಲೆಯೊಂದರಲ್ಲಿಯೇ ಇದ್ದರೆಂಬುದರಿಂದ ಅವರು ತಮ್ಮ ಮೇಲಣ ಅಧಿಕಾರಿಗಳಿಗೆ ಎಷ್ಟು ಪ್ರಿಯರಾಗಿದ್ದರೆಂಬದು ತಿಳಿದುಬರುವದು. ಮುಂದಾದರೂ ತಮ್ಮ

ಜನ್ಮಭೂಮಿಗೆ ಸಮೀಪವಾಗಿ ಬರಬೇಕೆಂಬ ಅಭಿಲಾಷೆಯು ಸ್ವಂತದ ಅಪೇಕ್ಷೆಯಿಂದಲೇ ಅವರಿಗೆ ಧಾರವಾಡಕ್ಕೆ ವರ್ಗವಾಯಿತು.

ಸೇವಾನಿವೃತ್ತರಾದ ಬಳಿಕ ಇವರು ಧಾರವಾಡದಲ್ಲಿ ತಾವೇ ಕಟ್ಟಿಸಿಕೊಂಡಿರುವ ಮನೆಯಲ್ಲಿ ಸುಖವಾಗಿರುವರು. ದೇವರು ಅವರಿಗೆ ಮುಂದಿನ ಆಯುಷ್ಯದಲ್ಲಿ ಹೆಚ್ಚಿನ ಕ್ಷೇಮಲಾಭಗಳನ್ನು ಸುಖ-ಸಮಾಧಾನಗಳನ್ನೂ ದಯಪಾಲಿಸಲಿ.

(೪) ಶ್ರೀ. ಬಿ. ಎವರ್. ಶಿಂತ್ರೆಯವರು

ನಮ್ಮ ಟ್ರೇನಿಂಗ್ ಕಾಲೇಜಿನ ಅಧ್ಯಾಪಕ ವರ್ಗದಲ್ಲಿ ಗಣ್ಯರಾದ ಶ್ರೀ. ಶಿಂತ್ರೆಯವರಿಗೆ ಧಾರವಾಡ ಮ್ಯುನಸಿಪಲ್ ಸ್ಕೂಲ್‌ಬೋರ್ಡಿನ ಎಡ್ಮಿನಿಸ್ಟ್ರೇಟಿವ್ವ ಆಫೀಸರರ ಸ್ಥಳಕ್ಕೆ ವರ್ಗವಾಗಿದ್ದು ಅಲ್ಲಿ ಕೆಲಸಮಾಡುತ್ತಿದ್ದ ಶ್ರೀ. ಎ. ಜೆ. ರಾಯಣ್ಣನವರು ಕಾಲೇಜಕ್ಕೆ ಬಂದರು. ವರು. ಶ್ರೀ. ಶಿಂತ್ರೆಯವರು ವಿಜಾಪುರ ಹೈಸ್ಕೂಲಿನಲ್ಲಿ ಒಂದೇ ಸವನೆ ೧೯ ವರ್ಷ ಕೆಲಸ ಮಾಡಿದ ಬಳಿಕ ಬೇಸಿಕ್ ಸ್ಕೂಲುಗಳ ಸುಪರವಾಯಿಜರರಾಗಿ ನೇಮಿಸಲ್ಪಟ್ಟಿದ್ದರು. ಅಲ್ಲಿಂದ ೧೯೪೧ ರಲ್ಲಿ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜಕ್ಕೆ ಹೋದವರು ೧೯೪೩ ರಲ್ಲಿ ಗಂಡು-ಮಕ್ಕಳ ಟ್ರೇನಿಂಗ್ ಕಾಲೇಜಕ್ಕೆ ಬಂದಿದ್ದರು. ಇವರು ೧೯೪೯ ರಲ್ಲಿ ಬಿ. ಎ. ಆದಬಳಿಕ ಸಹಕಾರೀ ಸಂಘಗಳ ಮೇಲ್ವಿಚಾರಣೆ ಕೆಲಸಕ್ಕೆ ಆರಿಸಲ್ಪಟ್ಟಿದ್ದರು. ಆದರೆ ಸದಾ ಶಾಂತಿ-ಪ್ರಿಯರಾದ ಇವರಿಗೆ ಪವಿತ್ರವಾದ ಶಿಕ್ಷಣದ ಹೋರೆಯಲ್ಲಿ— ತುಂಬ ಶಾಂತವಾದ ಜೀವನ ಮಾರ್ಗದಲ್ಲಿ ಪ್ರೀತಿಯಿದ್ದುದರಿಂದ ಹೆಚ್ಚು ಲಾಭದಾಯಕವಾಗಿದ್ದರೂ ಆ ಹೋರೆಯನ್ನು ಬಿಟ್ಟು ಬಿಟ್ಟು ವಿದ್ಯಾಖಾತೆಯಲ್ಲಿ ಕೆಲಸವನ್ನು ಒಪ್ಪಿಕೊಂಡರು. ಇವರು ಹೋದ ಹೋದಲ್ಲಿ ಅಧಿಕಾರಿಗಳನ್ನು ಸಹೋದ್ಯೋಗಿಗಳಿಗೂ ವಿದ್ಯಾರ್ಥಿಗಳಿಗೂ ಅತಿಶಯ ಪ್ರಿಯರಾಗಿ ಕೆಲಸ ಮಾಡುತ್ತ ಬಂದಿರುವರು. ಇನ್ನೊಂದು ಮಾತು.

ಶ್ರೀ. ಶಿಂತ್ರೆಯವರಿಗೆ ಬಹುದಿನಗಳಿಂದಲೂ ಜುಟ್ಟವನ್ನು ಸೇದುವ ರೂಢಿಯಿದ್ದಿತು. ಮಾನ್ಯ ಮಹಿಳೆಯರೊಬ್ಬರು ಇವರೊಡನೆ ಮಾತಾಡುತ್ತಿದ್ದಾಗ 'ಯಾರು ಏನು ಬಿಟ್ಟರೂ ಬಿಡಬಹುದು; ಶಿಂತ್ರೆಯವರು ಮಾತ್ರ ಜುಟ್ಟವನ್ನು ಬಿಡಲಾರರು.' ಎಂದರು, ಕೂಡಲೆ ಅವರು ಕೈಯಲ್ಲಿ ಹಿಡಿದ ಜುಟ್ಟವನ್ನು ದೂರ ಎಸೆದರು. ಇಂದಿನ ವರೆಗೂ ಅದನ್ನು ತಿರುಗಿ ಹಿಡಿದಿಲ್ಲ. ಶ್ರೀ. ಶಿಂತ್ರೆಯವರ ಮನೋದಾರ್ಢ್ಯದ ಒಗೆಗೆ ಇದೊಂದೇ ಉದಾಹರಣೆ ಸಾಕು. ಸ್ಕೂಲ್‌ಬೋರ್ಡ್ ಎಡ್ಮಿನಿಸ್ಟ್ರೇಟಿವ್ವ ಆಫೀಸರರಂಥ ತೊಡಕುಳ್ಳ ಹೋರೆಯಲ್ಲಿ ಕೂಡ ಚಾಣಾಕ್ಷರೂ ನಿಸ್ಪೃಹರೂ ಶಿಸ್ತಿನ ನಡೆವಳಿಯವರೂ ಆದ ಶ್ರೀ. ಶಿಂತ್ರೆಯವರು ಸಂಪೂರ್ಣ ಯಶಸ್ಸು ಪಡೆದು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಲೆಂದು ಹಾರೈಸುವೆವು.

N. V. K.

ಪನಾಮಾ ಕಾಲುವೆ

ಪನಾಮಾ ಕಾಲುವೆಯು ಶಿಲ್ಪಕಲಾಕೌಶಲ್ಯದ ಅತ್ಯದ್ಭುತವಾದ ಒಂದು ಉದಾಹರಣೆಯು. ಇದು ಸುಯೇಜ, ಕೀಲ ಮುಂತಾದ ಇತರ ಕಾಲುವೆಗಳಂತೆ ಸಮುದ್ರಪಾತಳಯ ಕಾಲುವೆಯಲ್ಲ. ಈ ಕಾಲುವೆಯು ಅಟ್ಲಾಂಟಿಕ ಮಹಾಸಾಗರದಿಂದ ಹೊರಟು ಉತ್ತರ ದಕ್ಷಿಣ ಅಮೇರಿಕಾ ಖಂಡಗಳನ್ನು ಜೋಡಿಸುವ ಪನಾಮಾ ಭೂಸಂದನ್ನು ಒಡೆದು ಪ್ಯಾಸಿಫಿಕ ಮಹಾಸಾಗರವನ್ನು ಕೂಡುತ್ತದೆ. ಆದರೆ ಈ ಕೆಲಸ ಮಾಡುವದರಲ್ಲಿ ಅದು ಒಂದು ಅದ್ಭುತ ಕಾರ್ಯವನ್ನು ನೆರವೇರಿಸಿದೆ. ಅದೇನಂದರೆ ಈ ಕಾಲುವೆಯು ಅಟ್ಲಾಂಟಿಕ ಮಹಾಸಾಗರ ವನ್ನು ಬಿಟ್ಟತರುವಾಯ ನಡುವೆ ಅಳ ಘೂಟು ಎತ್ತರವಾದ ಗುಡ್ಡಹತ್ತಿ, ಸುಮಾರು ೨೩ ಮೈಲು

ಆಗಲವಾದ ತಪ್ಪಲು ಪ್ರದೇಶದೊಳಗಿಂದ ಹಾಯಿದು ತಿರಿಗಿ, ಅಂದರೆ ದಕ್ಷಿಣದ ಕಡೆಗೆ, ಗುಡ್ಡ ಇಳಿದು ಪ್ಯಾಸಿಫಿಕ ಮಹಾಸಾಗರವನ್ನು ಸೇರುತ್ತದೆ. ಈ ಕಾಲುವೆಯ ಯೋಜನೆಯಲ್ಲಿ ಹಡಗವನ್ನು ಗುಡ್ಡ ಹತ್ತಿಸುವ ಕೆಲಸವು ಅಂದರೆ ಸಾಮಾನ್ಯವಾಗಿ ಅಸಾಧ್ಯವೆನಿಸುವ ಕೆಲಸವು ಶಕ್ಯವೆನಿಸಿದೆ. ಮೊದಲು ಇದರ ಇತಿಹಾಸವನ್ನು ತುಸುಮಟ್ಟಿಗೆ ವಿಚಾರಿಸುವಾ.

ಉತ್ತರ ಅಮೇರಿಕದ ಯುನಾಯಿಟೆಡ್ ಸ್ಟೇಟ್ಸ ಹಾಗೂ ಯುರೋಪದ ಇಂಗ್ಲಂಡ್ ಮುಂತಾದ ಕೈಗಾರಿಕೆಯ ಕೆಲಸದಲ್ಲಿ ತೊಡಗಿರುವ ದೇಶಗಳಿಗೆ ಕಚ್ಚಾ ಮಾಲು ಆಶಿಯಾ, ಆಸ್ಟ್ರೇಲಿಯಾ ಖಂಡಗಳಿಂದ ಬರಬೇಕಾಗುತ್ತದೆ; ಹಾಗೂ ತಯಾರಾದ ಮಾಲು ಈ ಖಂಡಗಳಿಗೆ ತಿರುಗಿ ಹೋಗಬೇಕಾಗುತ್ತದೆ. ಈ ಮಾಲು ತರುವ ಹಾಗೂ ಮೈಯುವ ಹಡಗಗಳು, ಈ ಕಾಲುವೆ ಆಗುವ ಮೊದಲು, ದಕ್ಷಿಣ ಅಮೇರಿಕವನ್ನು ಸುತ್ತುಹಾಕಿ, ದಕ್ಷಿಣ ಅಟ್ಲಾಂಟಿಕ ಸಾಗರದೊಳಗಿನ ಭಯಂಕರ ಬಿರುಗಾಳಿಗಳಿಂದ ಹಾಗೂ ಹೀಗೂ ಪಾರಾಗಿ, ಅನೇಕ ಕಷ್ಟಗಳನ್ನು ಸಹಿಸಿ, ಬಹಳ ದಿನಸ ಪ್ರವಾಸ ಮಾಡಿ ಮಿತಿಮೀರಿ ರೊಕ್ಕ ಖರ್ಚುಮಾಡಿ ಹೋಗಬೇಕಾಗುತ್ತಿತ್ತು. ಈಗ ಪನಾಮಾ ಕಾಲುವೆಯ ಮೂಲಕ ಹಡಗಗಳಿಗೆ ಸುಮಾರು ೮೦೦೦ ಮೈಲುಗಳಷ್ಟು ಸಮುದ್ರಪ್ರವಾಸವೂ, ಅದಕ್ಕೆ ತಗಲುವ ಖರ್ಚೂ ತೊಂದರೆಗಳೂ ಉಳಿಯುತ್ತವೆ. ಮೊದಲು ನ್ಯೂಯೋರ್ಕದಿಂದ ಸಾನ್‌ಫ್ರಾನ್ಸಿಸ್ಕೋಕ್ಕೆ ಹೋಗಬೇಕಾದರೆ ಒಂದು ಹಡಗಕ್ಕೆ ೪೦ ದಿವಸಗಳು ಹತ್ತುತ್ತಿದ್ದವು. ಆದರೆ ಈಗ ಪನಮಾ ಕಾಲುವೆಯ ಮಾರ್ಗವಾಗಿ ಹೋದರೆ ಈ ಪ್ರವಾಸಕ್ಕೆ ಬರೇ ೧೬ ದಿವಸಗಳು ಸಾಲುತ್ತವೆ. ಈ ಕಾಲುವೆಯನ್ನು ಸುಯೇಜಕಾಲುವೆಯಂತೆಯೇ ಸಮುದ್ರಪಾತಳಿಯ ಕಾಲುವೆಯನ್ನಾಗಿ ಮಾಡಲಿಕ್ಕೆ, ಆ ಕಾಲುವೆಯನ್ನು ಕಡಿದ ಫರ್ಡಿನಂಡ ಡಿ ಲೆಸೆಪ್ಸ ಎಂಬ ಶಿಲ್ಪ ಶಾಸ್ತ್ರನಿಪುಣನು ೧೮೮೧ ನೇ ಇಸವಿಯಲ್ಲಿ, ಫ್ರೆಂಚ್ ಸರಕಾರದ ವತಿಯಿಂದ ಯತ್ನಿಸತೊಡಗಿದನು. ಆದರೆ ಅವನ ಯತ್ನವು ಸಫಲವಾಗಲಿಲ್ಲ. ಯಾಕಂದರೆ, ಪನಾಮಾ ಭೂಸಂದಿನ ಮೇಲಿರುವ ಗುಡ್ಡಗಾಡು ಪ್ರದೇಶದಲ್ಲಿ ಕೆಟ್ಟ ಮಲೇರಿಯಾ ಹಾಗೂ ಅರಿಶಿನ ಜ್ವರ (yellow fever) ಗಳ ಬಾಧೆಯಿಂದ ಸಾವಿರಾರು ಕೆಲಸಗಾರರು ಮೃತಪಟ್ಟರು. ಮತ್ತು ೨೬೦ ಮಿಲಿಯ ಡಾಲರ ಅಂದರೆ ೭೮ ಕೋಟಿ ರೂಪಾಯಿಗಳಷ್ಟು ರೊಕ್ಕ ಖರ್ಚು ಮಾಡಿದ್ದು ನೀರಿನಲ್ಲಿ ಹೋಮವಿಟ್ಟಂತಾಗಿ ನಿಷ್ಪ್ರಯೋಜಕವಾಯಿತು.

ಕೆಲವು ಕಾಲ ವ್ಯರ್ಥವಾಗಿ ದುಡಿದು ಲೆಸೆಪ್ಸನು ನಿರಾಶನಾಗಿ ತಾನು ಕೈಕೊಂಡ ಕೆಲಸವನ್ನು ಬಿಟ್ಟುಕೊಟ್ಟನು. ಮುಂದೆ ೧೯೦೩ ನೇ ಇಸವಿಯಲ್ಲಿ ಯುನಾಯಿಟೆಡ್ ಸ್ಟೇಟ್ಸ ಸರಕಾರದವರು ಫ್ರೆಂಚ್ ಸರಕಾರದವರಿಗೆ ೪೦ ಮಿಲಿಯ ಡಾಲರ ಅಂದರೆ ೧೨೦ ಕೋಟಿ ರೂಪಾಯಿಗಳಷ್ಟು ಪ್ರತಿಫಲಕೊಟ್ಟು ಈ ಕಾಲುವೆ ತೋಡುವ ಕೆಲಸದ ಹಕ್ಕನ್ನು ಕೊಂಡುಕೊಂಡರು. ಹಾಗೂ ಕಾಲುವೆಗೆ ಸಾಕಷ್ಟು ಜಾಗೆಯನ್ನು ಕೊಟ್ಟದ್ದಕ್ಕಾಗಿ ಪನಾಮಾ ಪ್ರಾಂತದ ಸರಕಾರಕ್ಕೆ ೧೦ ಮಿಲಿಯ ಡಾಲರ ಅಂದರೆ ೩೦ ಕೋಟಿ ರೂಪಾಯಿಯಷ್ಟು ಹಣಕೊಟ್ಟು ಈಗಿನ ಕಾಲುವೆಯ ಕೆಲಸವನ್ನು ಆರಂಭಿಸಿದರು. ಗುಡ್ಡದ ಮೇಲಿನಿಂದ ಹಾಯುವ ಕಾಲುವೆಯೇ ಸುಲಭಸಾಧ್ಯವೂ ಕಡಿಮೆ ಖರ್ಚಿನದೂ ಆಗುವದೆಂದು ಕಂಡು ಅವರು ಅದನ್ನೇ ಮಾಡತೊಡಗಿದರು. ಮತ್ತು ೧೯೧೩ ನೇ ಇಸವಿಯ ಸುಮಾರಿಗೆ ಕಾಲುವೆಯ ಕೆಲಸವನ್ನು ಕೊನೆಗಾಣಿಸಿದರು. ಪರಂತು ಕಾಲುವೆಯ ಕೆಲಸವನ್ನು ಪ್ರಾರಂಭಿಸುವ ಮೊದಲು ಅದರ ಪೂರ್ವತಯಾರಿಯಾಗಿ ಕಾಲುವೆಯ ಮಾರ್ಗಕ್ಕೆ ಸಮೀಪದಲ್ಲಿ ಒಂದು ಉಗಿಬಂಡಿಯ ಮಾರ್ಗವನ್ನು ತಯಾರಿಸಿದರು. ಈ ಮಾರ್ಗವು ಉತ್ತರಕ್ಕೆ ಪನಾಮಾ ಶಹರದಿಂದ ಹೊರಟು ಭೂಸಂದನ್ನು ದಾಟಿ ದಕ್ಷಿಣಕ್ಕೆ ಕೋಲನ್ ಶಹರದ ತನಕ ಹೋಗುತ್ತದೆ. ಇದು ೪೮ ಮೈಲು ಉದ್ದವಿದೆ. ಈ ಉಗಿಬಂಡಿಯ ಮಾರ್ಗವು ಕಾಲುವೆ ತೋಡುವ ಕೆಲಸದಲ್ಲಿ ಬಹಳ ಸಹಾಯ

ಮಾಡಿತು; ಮಾತ್ರವಲ್ಲ, ಅಮೇರಿಕದ ಸರಕಾರದವರು ಈ ಮಾರ್ಗವನ್ನು ಕಟ್ಟುವಾಗ ನಡುವೆ ಇರುವ ಅಡವಿಯನ್ನು ಕಡಿದು ಕೆಟ್ಟ ನೀರು ನಿಲ್ಲುವ ಸ್ಥಳಗಳನ್ನು ಮುಚ್ಚಿ ಜಳಜ್ವರವನ್ನು ಉಂಟುಮಾಡುವ ಗುಂಗಾಡುಗಳನ್ನು ನಾಶಮಾಡಿ ಕಾಲುವೆ ಹಾಯಲಿಕ್ಕಿರುವ ಪ್ರದೇಶವನ್ನು ಆರೋಗ್ಯಕರವನ್ನಾಗಿ ಮಾಡಿಕೊಂಡರು.

ಈ ಕಾಲುವೆಯ ರಚನೆಯಲ್ಲಿ ಮುಂದೆ ಹೇಳುವಂತೆ ಬೇರೆಬೇರೆ ಮೆಟ್ಟುಗಳಿವೆ.

೧. ಇದು ಅಟ್ಲಾಂಟಿಕ ಸಾಗರದ ದಂಡೆಯನ್ನುತೋಡಿ ಪನಾಮಾ ಭೂಸಂದಿನ ಮೇಲಿನ ಗುಡ್ಡದ ಬುಡದ ತನಕ ಕಟ್ಟಿದ ಸಮುದ್ರ ಪಾತಳಿಯ ಕಾಲುವೆಯು. ಇದು ಸುಮಾರು ೭ ಮೈಲು ಉದ್ದವದೆ.

೨. ಇವು ಮೂರು "ಗೆಟೂನ್ ಲಾಕ್ಸ್" ಎಂಬ ಹೆಸರಿನ, ಗುಡ್ಡವನ್ನು ಅಗೆದು ಅದರೊಳಗೆ ಒಂದರ ಮೇಲೊಂದು ಹೀಗೆ ಕಟ್ಟಿದ ಪಾಣಿಬಂದ ಕೋಣೆಗಳು. ಪ್ರತಿಯೊಂದು ಕೋಣೆಯು ೧೦೦೦ ಫೂಟು ಉದ್ದ, ೧೧೦ ಫೂಟು ಅಗಲ ಮತ್ತು ೩೪ ಫೂಟು ಆಳವದೆ. ಈ ಕೋಣೆಗಳಲ್ಲಿ ಒಂದರೊಳಗಿಂದ ಮತ್ತೊಂದರೊಳಗೆ ಹಾಗೂ ಸಮುದ್ರದೊಳಗಿಂದ ಕೋಣೆಯೊಳಗೆ ನೀರು ಎಳಕೊಳ್ಳಲಿಕ್ಕೆ ಅಥವಾ ಬಿಟ್ಟುಕೊಡಲಿಕ್ಕೆ ಒಳಗಿನಿಂದ ದೊಡ್ಡ ದೊಡ್ಡ ನಳಗಳ ಯೋಜನೆಯನ್ನು ಮಾಡಿದ್ದಾರೆ. ಒಂದೊಂದು ನಳದ ಬಾಯಿಯು ಒಂದು ವಿಕ್ಟೋರಿಯಾ ಗಾಡಿ (ನಾಲ್ಕು ಗಾಲಿಗಳ ಕುದುರೆಯ ಗಾಡಿ) ಹಾಯುವಷ್ಟು ವಿಶಾಲವದೆ. ಈ ಲಾಕಗಳೊಳಗಿಂದ ಹಡಗವನ್ನು ೮೪ ಫೂಟು ಎತ್ತರವಿರುವ ಗುಡ್ಡದ ತುದಿಗೆ ಹೇಗೆ ಏರಿಸುತ್ತಾರೆಂಬದನ್ನು ನೋಡೋಣ. ಹಡಗವು ಸಮುದ್ರ ಪಾತಳಿಯ ಕಾಲುವೆಯೊಳಗಿನಿಂದ ಹಾಯ್ದಿದು ಮೊದಲನೇ ಲಾಕದ ಬಾಗಿಲಿಗೆ ಬಂದು ನಿಲ್ಲುತ್ತದೆ. ಕೂಡಲೇ ಲಾಕದ ಬಾಗಿಲು ತೆರೆಯುತ್ತಾರೆ. ಮತ್ತು ಹಡಗಕ್ಕೆ ದೊಡ್ಡ ಸರಪಳಿಗಳನ್ನು ಹಚ್ಚಿ, ಲಾಕದ ಗೋಡೆಗಳ ಮೇಲೆ ಹಿಂದೆ ಮುಂದೆ ಸರಿದಾಡುವ "ಮ್ಯೂಲ" ಎಂಬ ಹೆಸರಿನ ಯಂತ್ರಗಳು ಅದನ್ನು ಲಾಕದೊಳಗೆ ಎಳಕೊಳ್ಳುತ್ತವೆ. ಮೂರೂ ಲಾಕಗಳಿಂದ ಪಾರಾಗಿ ಹಡಗವು ಗುಡ್ಡ ಹತ್ತುವತನಕ ಅದರ ಸ್ವಂತ ಎಂಜಿನುಗಳು ಬಂದ ಇರುತ್ತವೆ. ಹಡಗವು ಮೊದಲನೇ ಲಾಕದೊಳಗೆ ಪೂರ್ಣವಾಗಿ ಸೇರಿದ ಮೇಲೆ ಲಾಕದ ಬಾಗಿಲ ಬಂದಮಾಡಿ, ಅದರ ಬುಡದೊಳಗಿನ ನಳದ ಮೂಲಕ ಸಮುದ್ರದೊಳಗಿನ ನೀರು ಎಳಕೊಳ್ಳುತ್ತಾರೆ. ಮತ್ತು ಅದರೊಳಗಿನ ನೀರಿನ ಪಾತಳಿಯನ್ನು ಮೇಲಿನ ೨ನೇ ಲಾಕದೊಳಗಿನ ನೀರಿನ ಪಾತಳಿಯತನಕ ಏರಿಸಿಕೊಳ್ಳುತ್ತಾರೆ. ಹಡಗವು ನೀರಿನ ಮೇಲೆ ತೇಲುತ್ತಿರುವದರಿಂದ ನೀರಿನ ಕೂಡ ಅದೂ ಮೇಲಕ್ಕೇರುತ್ತದೆ. ಹಾಗೂ ೨ನೇ ಲಾಕದ ಬಾಗಿಲದ ಮುಂದೆ ಬರುತ್ತದೆ. ಆಗ ಈ ೨ನೇ ಲಾಕದ ಬಾಗಿಲ ತೆರೆದು ಹಡಗವನ್ನು ಮೇಲೆ ಹೇಳಿದಂತೆ "ಮ್ಯೂಲ"ದ ಸಾಧನದಿಂದ ಅದರೊಳಗೆ ಎಳಕೊಂಡು, ಬಾಗಿಲ ಬಂದಮಾಡಿ ಅದರ ಬುಡದೊಳಗಿನ ನಳದ ಮುಖಾಂತರ ಕೆಳಗಿನ ಲಾಕದೊಳಗಿನ ನೀರನ್ನು ಅದರೊಳಗೆ ಎಳಕೊಳ್ಳುತ್ತಾರೆ. ಮತ್ತು ಅದರ ಪಾತಳಿಯನ್ನು ಅದಕ್ಕೂ ಮೇಲಿರುವ ೩ನೇ ಲಾಕದೊಳಗಿನ ನೀರಿನ ಪಾತಳಿಗೆ ತಂದು ಮುಟ್ಟಿಸುತ್ತಾರೆ. ನಂತರ ೩ನೇ ಲಾಕದ ಬಾಗಿಲ ತೆರೆದು ಹಡಗವನ್ನು ಅದರೊಳಗೆ ಎಳಕೊಂಡು ಬಾಗಿಲ ಬಂದ ಮಾಡಿ, ಒಳಗಿನ ನೀರಿನ ಪಾತಳಿಯನ್ನು ಗುಡ್ಡದ ಮೇಲಿನ ತಪ್ಪಲು ಪ್ರದೇಶದೊಳಗಿರುವ "ಗೆಟೂನ್" ಹೆಸರಿನ ಸರೋವರದ ನೀರಿನ ಪಾತಳಿಯ ತನಕ ಏರಿಸುತ್ತಾರೆ. ತರುವಾಯ ಈ ಲಾಕದ ಸರೋವರದ ಕಡೆಗಿನ ಬಾಗಿಲ ತೆರೆದು ಹಡಗವನ್ನು ಸರೋವರದೊಳಗೆ ಬಿಟ್ಟುಬಿಡುತ್ತಾರೆ. ಇಲ್ಲಿ ಹಡಗವು ತನ್ನ ಎಂಜಿನುಗಳಿಂದಲೇ ನಡೆಯುತ್ತದೆ.

೩. ಇದು ತಪ್ಪಲಿನ ಮೇಲಿರುವ ೧೪ ಮೈಲು ಉದ್ದವಾದ "ಗೆಟೂನ್" ಹೆಸರಿನ ಕೃತ್ರಿಮ ಸರೋವರವು. ಈ ಕಾಲುವೆಯ ಯೋಜನೆಯಾಗುವದಕ್ಕೆ ಮೊದಲು ಇಲ್ಲಿ ಬರೇ ಒಂದು ದೊಡ್ಡ ತಗ್ಗು ಪ್ರದೇಶವಿತ್ತು. ಹಾಗೂ ತಪ್ಪಲಿನ ಮೇಲಿನಿಂದ ಹರಿದು ಗುಡ್ಡ ಇಳಿದು ಅಟ್ಲಾಂಟಿಕ ಸಾಗರಕ್ಕೆ ಕೂಡುವ "ಶಾಗ್ರೀಶ" ಹೆಸರಿನ ಒಂದು ನದಿಯೂ ಇತ್ತು. ಮುಂದೆ ಈ ನದಿಯು ತಪ್ಪಲನ್ನು ಬಿಡುವ ಸಂದಿನಲ್ಲಿ ಅಂದರೆ ಅದರ ಮುಖದಿಂದ ೭ ಮೈಲು ಮೇಲಕ್ಕೆ ಅದಕ್ಕೆ ಒಂದು ದೊಡ್ಡ ಒಡ್ಡು ಹಾಕಿ ಅದರ ನೀರನ್ನು ಈ ತಗ್ಗಿನೊಳಗೆ ತಿರುವಿದರು. ಮತ್ತು ಈ "ಗೆಟೂನ್" ಸರೋವರವನ್ನು ರಚಿಸಿದರು. ಇದರ ವಿಸ್ತಾರವು ಸಮಾರು ೧೬೦ ಚೌರಸ ಮೈಲುಗಳಿಗೆ ಮಿಕ್ಕಿ ಆದೆ. ಇದು ಜಗತ್ತಿನಲ್ಲಿ ಎಲ್ಲಕ್ಕೂ ದೊಡ್ಡ ಕೃತ್ರಿಮ ಸರೋವರವು. ಈ ಒಡ್ಡಿಗೆ ಬೇಕಾದ ಕಲ್ಲು ಮಣ್ಣುಗಳು "ಕುಲೆಬ್ರಾ" ಗುಡ್ಡವನ್ನು ಕಡಿದು ಕಾಲುವೆತೋಡುವ ಕೆಲಸದಲ್ಲಿ ಹೊರಟವು. ಇವನ್ನು ಮೇಲೆಹೇಳಿದ ಉಗಿಬಂಡಿಯ ಸಹಾಯದಿಂದ ಒಡ್ಡಿನ ಸ್ಥಳಕ್ಕೆ ತಂದರು.

೪. "ಕುಲೆಬ್ರಾ" ಗುಡ್ಡದೊಳಗೆ ತೋಡಿ ಮಾಡಿದ ಸುಮಾರು ೯ ಮೈಲು ಉದ್ದವಿರುವ "ಗೈಲಾರ್ಡ" ಹೆಸರಿನ ಕಾಲುವೆಯು ಗುಡ್ಡದೊಳಗಿನಿಂದ ಹಾವಿನಂತೆ ತಿರುವುಮುರುವಾಗಿ ಹಾಯುತ್ತದೆ. ಈ ಕಾಲುವೆಯು "ಗೆಟೂನ್" ಸರೋವರದ ಪಾತಳಿಯಲ್ಲಿರುವದರಿಂದ ಹಡಗವು ಇದರೊಳಗೂ ತನ್ನ ಎಂಜಿನುಗಳ ಬಲದಿಂದಲೇ ನಡೆಯುತ್ತದೆ. ಈ ತಪ್ಪಲಿನಲ್ಲಿ ೨೦ ಮೈಲುಗಳ ಪ್ರವಾಸವನ್ನು ಹಡಗವು ತನ್ನ ಎಂಜಿನುಗಳಿಂದಲೇ ಮಾಡುತ್ತದೆ. ಗೈಲಾರ್ಡ ಕಾಲುವೆಯು ಮುಗಿಯುವಲ್ಲಿ ಹಡಗವು ಗುಡ್ಡವನ್ನು ಇಳಿಯಲಾರಂಭಿಸುವದು.

೫. ಇದು "ಗೈಲಾರ್ಡ" ಕಾಲುವೆಯ ಕೊನೆಗೆ ಗುಡ್ಡವನ್ನು ಅಗೆದು ತಯಾರಿಸಿದ "ಪೆದ್ರು ಮಿಗ್ವೆಲ್" ಹೆಸರಿನ ಲಾಕ ಅಂದರೆ ಕೋಣೆಯು. ಹಡಗವು ಕಾಲುವೆಯೊಳಗಿನಿಂದ ಹಾಯಿದು ಈ ಲಾಕದ ಬಾಗಿಲದ ಮುಂದೆ ಬಂದು ನಿಲ್ಲುತ್ತದೆ. ಮತ್ತು ತನ್ನ ಎಂಜಿನುಗಳನ್ನು ಬಂದಮಾಡುತ್ತದೆ. ಲಾಕದ ಬಾಗಿಲ ತೆರೆದು ಹಡಗವನ್ನು "ಮ್ಯೂಲ"ದ ಸಹಾಯದಿಂದ ಒಳಗೆ ಎಳಕೊಂಡು ಬಾಗಿಲ ಬಂದ ಮಾಡಿ ಲಾಕದೊಳಗಿನ ನೀರನ್ನು ಬುಡದೊಳಗಿನ ನಳದಿಂದ ಗುಡ್ಡದ ಒರೆಯ ಕೆಳಗಿರುವ "ಮಿರಾ ಫ್ಲಾರೆಸ್" ಹೆಸರಿನ ಸ್ವಾಭಾವಿಕವಾದ ಸರೋವರದಲ್ಲಿ ಬಿಟ್ಟುಕೊಂಡು ಲಾಕದೊಳಗಿನ ನೀರು ಸರೋವರದ ನೀರಿನ ಪಾತಳಿಗೆ ಇಳಿಯುವಂತೆ ಮಾಡುತ್ತಾರೆ. ಇದಾದ ಬಳಿಕ ಲಾಕದ ಸರೋವರದ ಕಡೆಗಿನ ಬಾಗಿಲ ತೆರೆದು ಹಡಗವನ್ನು "ಮಿರಾ ಫ್ಲಾರೆಸ್" ಸರೋವರದಲ್ಲಿ ಬಿಟ್ಟುಬಿಡುತ್ತಾರೆ.

೬. ಇದೇ "ಮಿರಾ ಫ್ಲಾರೆಸ್" ಸರೋವರವು. ಇದು ಎರಡು ಮೈಲು ಉದ್ದವದೆ; ಮತ್ತು ಇದರೊಳಗೆ ಹಡಗವು ತನ್ನ ಎಂಜಿನುಗಳಿಂದಲೇ ನಡೆಯುತ್ತದೆ.

ಇನ್ನೆರಡು ಲಾಕಗಳು ಹಡಗವನ್ನು "ಮಿರಾ ಫ್ಲಾರೆಸ್" ಸರೋವರದ ಪಾತಳಿಯಿಂದ ಪ್ಯಾಸಿಫಿಕ ಸಾಗರದ ಪಾತಳಿಯ ಕಾಲುವೆಗೆ ಇಳಿಸುವ ಸಾಧನಗಳು. ಹಡಗವು ಮಿರಾ ಫ್ಲಾರೆಸ್ ಸರೋವರದ ಪಯಣವನ್ನು ಮುಗಿಸುವಲ್ಲಿ ಗುಡ್ಡವು ತಿರಿಗಿ ಇಳುಕಲಿನ ಮೇಲೆ ಸಮುದ್ರದಂಡೆಯತನಕ ಹಬ್ಬಿದೆ. ಈ ಗುಡ್ಡದೊಳಗೆ ಅಗೆದು ಒಂದರ ಕೆಳಗೊಂದು ಹೀಗೆ ಎರಡು ಲಾಕಗಳನ್ನು "ಗೆಟೂನ್" ಲಾಕಗಳ ತೆರದಲ್ಲಿಯೇ ತಯಾರಿಸಿದ್ದಾರೆ. ಮೊದಲನೇ ಲಾಕವು "ಮಿರಾ ಫ್ಲಾರೆಸ್" ಸರೋವರಕ್ಕೆ ಹೊಂದಿ ಆದೆ. ಹಡಗವು ಈ ಲಾಕದ ಬಾಗಿಲದ ಮುಂದೆ ಬಂದು ನಿಂತಕೂಡಲೇ ಲಾಕದೊಳಗಿನ ನೀರಿನ ಪಾತಳಿಯು ಸರೋವರದ ನೀರಿನ ಪಾತಳಿಯಗಿಂತ ಕೆಳಗಿದ್ದರೆ ಅದನ್ನು ಒಳಗಿನ ನಳದ ಮೂಲಕ ಸರೋವರದೊಳಗಿನಿಂದ ನೀರು ಎಳಕೊಂಡು ಏರಿಸಿ ಲಾಕದ ಬಾಗಿಲ ತೆರೆದು ಹಡಗವನ್ನು ಒಳಗೆ ಎಳ-

ಕೊಂಡು ಬಾಗಿಲ ಬಂದ ಮಾಡಿ ಅದರೊಳಗಿನ ನೀರನ್ನು ಪುನಹ ಇಳಿಸಿ ಕೆಳಗಿನ ಲಾಕ ಒಳಗಿನ ನೀರಿನ ಪಾತಳಿಗೆ ಬರುವಂತೆ ಮಾಡುತ್ತಾರೆ. ತರುವಾಯ ಹಡಗವನ್ನು ಈ ಕೆಳಗಿನ ಲಾಕದೊಳಗೆ ಎಳಕೊಂಡು ಇದರೊಳಗಿನ ನೀರನ್ನು ಹೊರಗಿನ ಸಮುದ್ರಪಾತಳಿಯ ಕಾಲುವೆಯ ನೀರಿನ ಪಾತಳಿಗೆ ಇಳಿಸಿ ಲಾಕದ ಬಾಗಿಲ ತೆರೆದು ಈ ಕಾಲುವೆಯೊಳಗೆ ಹಡಗವನ್ನು ಬಿಟ್ಟುಬಿಡುತ್ತಾರೆ.

೮. ಇದು ಪ್ಯಾಸಿಫಿಕ ಸಾಗರದ ಕಡೆಗಿನ ಸುಮಾರು ೮ ಮೈಲು ಉದ್ದವಿರುವ ಸಮುದ್ರ ಪಾತಳಿಯ ಕಾಲುವೆಯು. ಇದರೊಳಗೆ ಸೇರಿದ ಕೂಡಲೇ ಹಡಗವು ತನ್ನ ಯಂತ್ರಗಳಿಂದಲೇ ನಡೆಯಲಾರಂಭಿಸುತ್ತದೆ. ಅಟ್ಲಾಂಟಿಕ ಸಾಗರದ ಕಡೆಗಿರುವ ಇದೇ ತೆರದ ಕಾಲುವೆಯು ೭ ಮೈಲು ಉದ್ದವಿದೆಯೆಂದು ಮೇಲೆ ಹೇಳಿದೆ. ಆದ್ದರಿಂದ ಈ ಒಟ್ಟು ೫೦ ಮೈಲು ಉದ್ದವಿರುವ ಪನಾಮಾ ಕಾಲುವೆಯಲ್ಲಿ ಬರೇ ೧೫ ಮೈಲಿನಷ್ಟು ಸಮುದ್ರ ಪಾತಳಿಯ ಕಾಲುವೆಯು; ಉಳಿದದ್ದು ಗುಡ್ಡದ ಮೇಲಿನ ಕಾಲುವೆಯು.

ಈ ಅದ್ಭುತವಾದ ಕಾಲುವೆಯ ರಚನೆಯು ಈ ರೀತಿ ಇರುವದು. ಒಂದು ಹಡಗಕ್ಕೆ ಈ ಕಾಲುವೆಯೊಳಗಿಂದ ಉತ್ತರಕ್ಕಿರುವ ಅಟ್ಲಾಂಟಿಕ ಸಾಗರದಿಂದ ದಕ್ಷಿಣಕ್ಕಿರುವ ಪ್ಯಾಸಿಫಿಕಕ್ಕೆ ದಾಟಬೇಕಾದರೆ ೧೦ ರಿಂದ ೧೨ ತಾಸುಗಳು ಹಿಡಿಯುವವು. ಹಾಗೂ ಲಾಕಗಳು ಜೋಡು ಜೋಡಾಗಿರುವ ಮೂಲಕ ಎರಡೆರಡು ಹಡಗಗಳು ಒಮ್ಮೆಲೆ ಅವುಗಳೊಳಗಿನಿಂದ ಪಾಯುವದು ಶಕ್ಯವದೆ. ೨೪ ತಾಸುಗಳಲ್ಲಿ ಸುಮಾರು ೪೦ ಹಡಗಗಳು ಒರಬಹುದು; ಹಾಗೂ ೪೦ ಹಡಗಗಳು ಹೋಗಬಹುದು. ವರ್ಷದಲ್ಲಿ ಸರಾಸರಿ ೫೦೦೦ ಹಡಗಗಳು ಈ ಕಾಲುವೆಯನ್ನು ಉಪಯೋಗಿಸುತ್ತವೆ.

ಈ ಪನಾಮಾ ಕಾಲುವೆಯು "ಪಾಶ್ಚಾತ್ಯರು ಕಲಿತ ವಿದ್ಯೆಗೆ ಜೋಡಿಲ್ಲ" ಎಂಬ ಮಾತಿನ ಒಂದು ಉತ್ತಮ ಉದಾಹರಣೆಯಾಗಿರುತ್ತದೆ.

N. S. ULLAL
D. E. I. for visual Instruction, Bombay

ಇಂದಿನ ಭಾರತೀಯ ವಿಜ್ಞಾನಿಗಳ ಪಿತಾಮಹ ಸರ್ ಪ್ರಫುಲ್ಲಚಂದ್ರರಾಯರು

ಅಖಂಡ ಭರತಖಂಡದಲ್ಲಿಯಷ್ಟೇ ಏಕೆ ಜಗತ್ತಿನಲ್ಲಿಯೇ ಹೆಸರಾದ ವಿಜ್ಞಾನಿಗಳಲ್ಲೊಬ್ಬರೆಂದು ಹೆಸರುಪಡೆದ ಸರ್ ಪ್ರಫುಲ್ಲಚಂದ್ರರಾಯರು ಜೂನ್ ತಿಂಗಳ ೧೪ ನೆಯ ತಾರೀಖಿನ ದಿನ ಸಾಯಂಕಾಲ ಆರುಗಂಟೆಯ ಸುಮಾರಕ್ಕೆ ತಮ್ಮ ಇಹಲೋಕಯಾತ್ರೆಯನ್ನು ಮುಗಿಸಿದರೆಂದು ಬರೆಯಲು ವಿಷಾದವಾಗುವದು. ಅವರಿಗೀಗ ೮೬ ವರುಷಗಳಾಗಿದ್ದುವು. ಅಜನ್ಮ ಬ್ರಹ್ಮಚರ್ಯದಿಂದಿದ್ದು ಕೇವಲ ದೇಶಸೇವೆಯಲ್ಲಿಯೇ ತಮ್ಮ ಆಯುಷ್ಯವನ್ನೆಲ್ಲ ಕಳೆದ ಭಾರತ ಮಾತೆಯ ವರಪುತ್ರರಿವರು. ಕಳೆದ ವಾರದಲ್ಲಿ ಮಹಾತ್ಮಾ ಗಾಂಧಿಯವರು ಅವರಿಗೊಂದು ತಂತಿಯ ಸಂದೇಶವನ್ನು ಕಳುಹಿಸಿ 'ನೀವು ಶತಾಯುಷಿಗಳಾದರೂ ಆಗುವಿರೆಂದು ಆಶಿಸುತ್ತೇನೆ' ಎಂದು ಆಶಿಸಿದ್ದರು. ವಯೋವೃದ್ಧರೂ ಜ್ಞಾನವೃದ್ಧರೂ ಆದ ಈ ಮಹಾನುಭಾವರು ಭಾರತೀಯ ವಿಜ್ಞಾನ ಜಗತ್ತಿಗೂ ಔದ್ಯೋಗಿಕ ಪ್ರಪಂಚಕ್ಕೂ ಹಿರಿಯ ಹೂಣೆಗಾರರೆನಿಸಿಕೊಂಡು ಮುಂದಾಗಿ ದುಡಿಯುವ ಜನಸಮೂಹಕ್ಕೆ ಹಿಂದೆ ನಿಂತು ಮಾರ್ಗದರ್ಶನ ಮಾಡಿಸುವ ಬಹುದೊಡ್ಡ ಜವಾಬದಾರಿಯ ಕಾರ್ಯವನ್ನು ವಹಿಸಿಕೊಂಡಿದ್ದರು. ಒಂಗಾಲಾ

ಕೆಮಿಕಲ್ ಎಂಡ್ ಫಾರ್ಮಾಕ್ಯೂಟಿಕಲ್ ವರ್ಕ್ಸ್‌ದಂಥ ಬಹುಮೌಲ್ಯದ ದೇಶಹಿತದ ಸಂಸ್ಥೆಯನ್ನು ಪ್ರಾರಂಭಿಸಿ ಪುರಸ್ಕರಿಸಿ ಅಭಿವೃದ್ಧಿಗೊಳಿಸಿದ ಸಂಪೂರ್ಣ ಶ್ರೇಯಸ್ಸು ರಾಯರದು.

ಒಂದೆರಡು ವಾರಗಳಿಂದಲೂ ಅವರು ನೆಮೋನಿಯಾ ಎಂಬ ಪುಪ್ಪುಸದ ವ್ಯಾಧಿಯಿಂದ ಬಳಲುತ್ತಿದ್ದರು. ಅವರ ವಿದ್ಯಾರ್ಥಿಗಳೂ ಅನುಚರರೂ ತಜ್ಞರೂ ಆದ ಅನೇಕ ಡಾಕ್ಟರರ ಅವಿಶ್ರಾಂತ ಶ್ರಮ, ಆಂತಃಕರಣಪೂರ್ವಕವಾದ ಆರೈಕೆ ಉಪಚಾರ ಇವನ್ನೆಲ್ಲ ವ್ಯರ್ಥಗೊಳಿಸಿ ಕಾಲನು ಅವರ ಪ್ರಾಣವನ್ನು ಹರಣಮಾಡಿ ಒಯ್ದು ಆಸೇತು ಹಿಮಾಚಲವ್ಯಾಪಿಯಾದ ಭಾರತೀಯ ವಿಜ್ಞಾನ ವಿದ್ವಾಂಸರನ್ನೂ ಅಖಿಲ ಪ್ರಜಾಪ್ರಪಂಚವನ್ನೂ ದುಃಖಿಕ್ಕೀಡು ಮಾಡಿದನು. 'ವಿದ್ವಾಂಸನಾದರೂ ಸಾಯಲೇಬೇಕು; ವಿಜ್ಞಾನಿಯಾದರೂ ಸಾಯಲೇಬೇಕು. ಆಳಾದರೂ ಸಾಯಬೇಕು; ಅರಸಾದರೂ ಸಾಯಬೇಕು. ಸಾವು ಸರ್ವತ್ರ ಸ್ವಾತಂತ್ರ್ಯವುಳ್ಳದು' ಎಂಬ ಹಳೆಯ ಮಾತೊಂದನ್ನು ಸ್ಮರಿಸಿ ಎಲ್ಲರೂ ಸಮಾಧಾನವನ್ನು ತಳೆಯಬೇಕಾಗಿದೆ. ಅಂದು ದೇಶಬಂಧು ಸಿ. ಆರ್. ದಾಸರವರ ೧೯೨೫ನೆಯ ಪುಣ್ಯತಿಥಿಯ ಕಾರ್ಯಕಲಾಪಗಳು ನಡೆಯಬೇಕಾಗಿದ್ದಿತು. ಕ್ಷಣಮಾತ್ರದಲ್ಲಿ ಈ ಸುದ್ದಿಯು ಕಲಕತ್ತಾ ನಗರದಲ್ಲೆಲ್ಲ ಹಬ್ಬಿತು. ಜನರು ತಂಡತಂಡವಾಗಿ ನೆರೆದರು. ಅಖಿಲ ಭರತಖಂಡದಲ್ಲಿಯೂ ಪರದೇಶಗಳಲ್ಲಿಯೂ ಇಂದು ರಸಾಯನಶಾಸ್ತ್ರದ ಅಧ್ಯಯನ ಅಧ್ಯಾಪನಗಳಲ್ಲಿ ತೊಡಗಿರುವ ನಮ್ಮ ವಿದ್ವಾಂಸರ ಪಂಗಡಕ್ಕೆ ರಾಯರು ಗುರುಸ್ಥಾನದಲ್ಲಿದ್ದವರು.

ರಾಯರು ೧೮೬೧ನೆಯ ಇಸ್ವಿಯಲ್ಲಿ ಬಂಗಾಲದ ಖುಲ್ನಾ ಜಿಲ್ಲೆಯ ಒಂದು ಹಳ್ಳಿಯಲ್ಲಿ ಪರ್ಶಿಯನ್ ಪಂಡಿತರಾದ ಹರೀಶಚಂದ್ರರಾಯರ ಸುಪುತ್ರರಾಗಿ ಹುಟ್ಟಿದರು. ಪ್ರಾಥಮಿಕ ಮಾಧ್ಯಮಿಕ ವಿದ್ಯಾಭ್ಯಾಸಗಳನ್ನು ಮುಗಿಸಿ ಕಲಕತ್ತೆಯ ಎಶ್ವವಿದ್ಯಾನಿಲಯದ ಪದವಿಯನ್ನು ಪಡೆದು ೧೮೮೫ರಲ್ಲಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ಇಂಗ್ಲಂಡಕ್ಕೆ ಹೋದರು. ಎಡಿನ್‌ಬರ್ಗ ಕಾಲೇಜದಲ್ಲಿ ಆರುವರ್ಷಗಳವರೆಗೆ ನಿರಿಂದ್ರಿಯ ರಸಾಯನಶಾಸ್ತ್ರವನ್ನು ಕೂಲಂಕಷವಾಗಿ ಅಭ್ಯಾಸಮಾಡಿ ೧೮೮೭ರಲ್ಲಿ ಡಿ. ಎಸ್‌ಸಿ. ಪದವಿಯನ್ನು ಪಡೆದು ತಿರುಗಿ ಸ್ವದೇಶಕ್ಕೆ ಬಂದು ಕಲಕತ್ತೆಯ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರೊಫೆಸರರ ಕೆಲಸವನ್ನು ಕೈಕೊಂಡರು. ಬಂಗಾಲಾ ಸರಕಾರದವರು ಇವರನ್ನು ಯುರೋಪದೊಳಗಿನ ಪ್ರಮುಖ ರಾಸಾಯನಿಕ ಪ್ರಯೋಗಶಾಲೆಗಳನ್ನು ನೋಡಿಬರಲು ಕಳುಹಿಸಿದ್ದರು. ರಾಯರು ತಮ್ಮ ವಿದ್ವತ್ತೆಯಿಂದ ಹೋದ ಹೋದಲ್ಲಿ ಸನ್ಮಾನ ಪಡೆದು ಮರಳಿಬಂದರು.

ರಾಯರು ರಸಾಯನ ಶಾಸ್ತ್ರದಲ್ಲಿ ಹಲವು ಹೊಸ ಶೋಧಗಳನ್ನು ಮಾಡಿ ಶ್ರೇಯಸ್ಸು ಪಡೆದಿರುವಂತೆಯೇ ಔದ್ಯೋಗಿಕ ಕಾರ್ಯಕ್ಷೇತ್ರದಲ್ಲಿಯೂ ಅತಿ ಮಹತ್ವದ ಕಾರ್ಯಗಳನ್ನು ನೆರವೇರಿಸಿರುವರು. ತಮ್ಮ ವಯಸ್ಸಿನ ೫೦ನೆಯ ವರ್ಷದಲ್ಲಿ ಪ್ರೆಸಿಡೆನ್ಸಿ ಕಾಲೇಜದಲ್ಲಿ ಕಾರ್ಯಮಾಡುತ್ತಿರುವಾಗ ಕೇವಲ ೫೦೦ ರೂ. ಭಾಂಡವಲು ಹಾಕಿ ಕೆಲವು ಜನ ಸ್ನೇಹಿತರನ್ನು ಕೂಡಿಕೊಂಡು ತಮ್ಮ ಸ್ವಂತ ಮನೆಯಲ್ಲಿ ಒಂದು ಚಿಕ್ಕ ಸಂಸ್ಥೆಯನ್ನು ಪ್ರಾರಂಭಿಸಿದರು. ದೇಶೀಯ ವನಸ್ಪತಿಗಳಿಂದ ಒಳ್ಳೆಯ ಔಷಧಗಳನ್ನು ತಯಾರಿಸುವದೇ ಇದರ ಮುಖ್ಯ ಉದ್ದೇಶವಾಗಿದ್ದಿತು. ಆದೇ ಮುಂದೆ ಬೆಳೆಬೆಳೆದು ಸದ್ಯದ ಬಂಗಾಲಾ ಕೆಮಿಕಲ್ ಎಂಡ ಫಾರ್ಮಾಕ್ಯೂಟಿಕಲ್ ವರ್ಕ್ಸ್ ಎಂಬ ಮಹಾಸಂಸ್ಥೆಯಾಗಿ ಮೂರ್ಪಟ್ಟಿರುವದು. ಅದರಲ್ಲಿ ಈಗ ಅಸಂಖ್ಯ ಔಷಧಗಳೂ ಅಮೌಲ್ಯ ರಾಸಾಯನಿಕ ದ್ರವ್ಯಗಳೂ ಸಿದ್ಧವಾಗುತ್ತಿದ್ದು ಅದೊಂದು ದೇಶದ ದೊಡ್ಡ ಔದ್ಯೋಗಿಕ ಕೇಂದ್ರವಾಗಿದೆ. ಇದರಲ್ಲಿ ಕೆಲಸಮಾಡುವ ಒಬ್ಬ ಮುಖ್ಯಾಧಿಕಾರಿಯ ಒಂದು ವರ್ಷದ ಸಂಬಳವುಳಂ ಸಾವಿರ್‌ರೂಪಾಯಿರುವದು. ಇದರಿಂದ ಈ ಸಂಸ್ಥೆಯ ಕಾರ್ಯವಿಸ್ತಾರದ ಕಲ್ಪನೆಯಾಗಬಹುದು. ಇದಲ್ಲದೆ ಸಾಬಾಣ ತೊಗಲು ಮುಂತಾದ ಪದಾರ್ಥ

ಗಳನ್ನು ಹುಟ್ಟಿಸುವ ಹನ್ನೆರಡು ಬೇರೆ ಬೇರೆ ಕಾರ್ಖಾನೆಗಳ (factories) ಡೈರೇಕ್ಟರರಾಗಿದ್ದರು. ದೇಶದ ಔದ್ಯೋಗಿಕ ಪ್ರಗತಿಯಲ್ಲಿ ಅವರಿಗೆ ಇಷ್ಟು ಆಸ್ಥೆ ಉತ್ಸಾಹಗಳಿದ್ದವು.

೧೯೧೬ ರಲ್ಲಿ ಪ್ರೆಸಿಡೆನ್ಸಿ ಕಾಲೇಜಿನಿಂದ ನಿವೃತ್ತರಾದ ಬಳಿಕ ಕಲಕತ್ತೆಯ ವಿಶ್ವವಿದ್ಯಾನಿಲಯದ ರಸಾಯನ ಶಾಸ್ತ್ರದ ಪ್ರಾಧ್ಯಾಪಕರಾಗಿ ನಿಯಮಿಸಲ್ಪಟ್ಟಿದ್ದರು. ೧೯೩೨ ರಿಂದ ಇವರು ರಸಾಯನಶಾಸ್ತ್ರದ ಸಂಶೋಧನ ಶಾಖೆಯ ಕಾರ್ಯಭಾಗದ ಮೇಲ್ವಿಚಾರಣೆಯ ಕಾರ್ಯದಲ್ಲಿ ನಿಯುಕ್ತರಾಗಿದ್ದರು. ೧೯೩೬ ರಿಂದ ಈಚೆಗೆ ತಮಗೆ ವಿಶ್ವವಿದ್ಯಾನಿಲಯದವರಿಂದ ದೊರೆತ ವೇತನವನ್ನೆಲ್ಲ ಕೂಡಿಸಿಟ್ಟು ತಮ್ಮ ವಿದ್ಯಾರ್ಥಿಗಳ ವೇತನಕ್ಕೂ ಸಹಾಯಕ್ಕೂ ವೆಚ್ಚ ಮಾಡಬೇಕೆಂದು ನಿರ್ಧರಿಸಿ ಅದನ್ನು ಸಾರ್ವಜನಿಕ ಸೊತ್ತೆಂದು ನಿರ್ಣಯಿಸಿದ್ದರು ಅದು ಎರಡು ಲಕ್ಷ ರೂ. ಗಳಿಗಿಂತಲೂ ಹೆಚ್ಚಾಗಿರುವದು. ಕಲಕತ್ತಾ, ಡಾಕಾ, ನಾಗಪುರ, ಬಂಗಾಲ ಮೊದಲಾದ ವಿಶ್ವವಿದ್ಯಾನಿಲಯಗಳೂ ವಿದ್ಯಾರ್ಥಿಗಳೂ ಇತರ ವಿದ್ಯಾಮಂದಿರಗಳೂ ರಾಯರಿಂದ ಅಮೋಘವಾದ ಸಹಾಯ ಸಂಪತ್ತುಗಳನ್ನು ಪಡೆದಿವೆ. ರಾಯರ ವಿಯೋಗದಿಂದ ಅಖಿಲ ಭಾರತಕ್ಕೂ ಅತ್ಯಂತ ಖೇದವಾಗಿದೆ.

'ಬಂಗಾಲದ ಸುಪ್ರಸಿದ್ಧ ವಿಜ್ಞಾನಿಗಳೂ ಶಿಕ್ಷಣ ತಜ್ಞರೂ ಅವಿಶ್ರಾಂತ ಶ್ರಮವಹಿಸುವ ಕಾರ್ಯಕರ್ತರೂ ನಮ್ಮ ಕಣ್ಮರೆಯಾದರೆಂದೂ—' 'ಶ್ರೇಷ್ಠ ವಿಭೂತಿಯೊಂದು ನಮ್ಮನ್ನು ಅಗಲಿಹೋಯಿತು. ಬಂಗಾಲದ ಇಷ್ಟೇಕೆ ಅಖಿಲ ಭಾರತದ ಆಕಾಶದಲ್ಲಿ ಮಿರಿಮಿರಿಮಿರುಗುವ ನಕ್ಷತ್ರಮಣಿಯು ಇಂದು ಅದೃಶ್ಯವಾಯಿತೆಂದೂ'— 'ಬಂಗಾಲದ— ಭಾರತದ— ವಿಜ್ಞಾನಿಗಳೂ ಮಾರ್ಗದರ್ಶಕರೂ— ತತ್ವಜ್ಞಾನಿಗಳೂ ಇಂದು ತಮ್ಮ ಮುಂದಾಳನ್ನು ಕಳೆದುಕೊಂಡಂತಾಯಿತೆಂದೂ'— 'ಜಗತ್ತಿನಲ್ಲಿ ಹಿಂದುಸ್ತಾನದ ಹೆಸರನ್ನು ಬೆಳಗಿಸಿದ ವಿದ್ವನ್ಮಣಿಯೊಂದು ಇಂದು ಕಳೆದುಹೋಯಿತು. ವಿಜ್ಞಾನ, ದೇಶಸೇವೆ, ಇವಕ್ಕಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟ ಸತ್ವಶಾಲಿಯಾದ ವ್ಯಕ್ತಿಯು ಕಣ್ಮರೆಯಾಯಿತು, ವ್ಯವಸಾಯ ವ್ಯಾಪಾರಗಳಲ್ಲಿ ಬಂಗಾಲಿಗಳು ಮುಂದೆ ಬರುವದಕ್ಕೆ ಮೂಲಭೂತ ಶಕ್ತಿಯೆಂಬ ಶ್ರೇಯಸ್ಸು ಪಡೆದ ರಾಯರು ಇಂದು ನಮ್ಮನ್ನು ಶೋಕಸಾಗರದಲ್ಲಿ ತಳ್ಳಿದರೆಂದೂ'— ದೇಶದ ಅತಿ ಪ್ರಮುಖ ವ್ಯಕ್ತಿಗಳು ಈಗಲೂ ಉಸುರ್ಗರೆಯುತ್ತಲಿದ್ದಾರೆ. "ಜಗತ್ತು ಅವಿನಾಶಿ" ಯೆಂದು ಸಾರುತ್ತಿರುವ ವಿಜ್ಞಾನಿಗಳ ಆತ್ಮವು ಅಮರವಾಗಿರುವದೆಂದು ಹೇಳುವದಕ್ಕೆ ನಾವೆಷ್ಟರವರು? ಇಂತಹ ಅಮೃತಾತ್ಮರ ಆತ್ಮಕ್ಕೆ ಶಾಂತಿಯನ್ನು ಕೋರುವದಕ್ಕೆ ನಮಗೆ ಅಧಿಕಾರವೆಲ್ಲಿದೆ? ಎಲ್ಲದಕ್ಕೂ ಭಗವಂತನ ಇಚ್ಛೆಯೇ ಕಾರಣವಲ್ಲವೆ?

ಲೇಖಗಳ ಮುಖ್ಯಾಂಶಗಳು

ಒತ್ತಾಯದ ಶಿಕ್ಷಣ

ಶ್ರೀ. ಕರಿಯಪ್ಪ ಹುಚ್ಚಣ್ಣನವರ; ಉಪಾಧ್ಯಕ್ಷ ಜಿ. ಸ್ಕೂ. ಬೋ. ಧಾರವಾಡ ಅವರಿಂದ

ಜಗತ್ತಿನೊಳಗಿನ ಇತರ ರಾಷ್ಟ್ರಗಳೊಡನೆ ಹೋಲಿಸಿದರೆ ಕಲಿತವರ ಸಂಖ್ಯೆಯು ಹಿಂದುಸ್ತಾನದಲ್ಲಿ ತೀರ ಕಡಿಮೆ. ನಿರಕ್ಷರತೆಯು ಹೋಗದಿದ್ದರೆ ಸುದಿನಗಳ ಆಶೆ ಇಲ್ಲ. ಈ ಮಹತ್ವವಾದ ಸುಧಾರಣೆಯನ್ನು ಬಳಕೆಯಲ್ಲಿ ತರುವದಕ್ಕೆ ಸಾರ್ವಜನಿಕರೂ ಸರಕಾರವೂ

ಕಳಕಳಿಯಿಂದ ನೆರವಾಗಬೇಕು. ಧಾರವಾಡ ಜಿ. ಸ್ಕೂ. ಬೋರ್ಡಿನವರು ಪ್ರಾರಂಭಿಸಿದ, ಶಿಫ್ಟ್ ಪದ್ಧತಿಯು ಒತ್ತಾಯದ ಶಿಕ್ಷಣದ ಮೊದಲನೆಯ ಮೆಟ್ಟಲಾಗಿದೆ. ಒತ್ತಾಯದ ಶಿಕ್ಷಣದ ಯೋಜನೆಯನ್ನು ಜನಹಿತದ ದೃಷ್ಟಿಯಿಂದ ಕೈಕೊಳ್ಳದೆ ಗತ್ಯಂತರವಿಲ್ಲವೆಂದು ಕಂಡು ಧಾ. ಬೋ. ನವರು ರಾಣೆಬೆನ್ನೂರ, ಬ್ಯಾಡಗಿ, ಹಾವೇರಿ ಮೊದಲಾದ ಸಣ್ಣ ಸಣ್ಣ ಮ್ಯುನಸಿಪಾಲಟಿ ಗಳಲ್ಲಿ ಈ ಒತ್ತಾಯದ ಪದ್ಧತಿಯನ್ನು ಬಳಕೆಯಲ್ಲಿ ತಂದಿದ್ದಾರೆ. ಇದು ಯಶಸ್ವಿಯಾದಲ್ಲಿ ಇಡೀ ಜಿಲ್ಲೆಯಲ್ಲಿಯೂ ಬಳಕೆಯಲ್ಲಿ ತರುವದು ಆರ್ಥಿಕ ಯೋಜನೆಗನುಸರಿಸಿ ಸಾಧ್ಯವಿದೆ. ಹೊಣೆಗಾರವಾದ ಸಂಸ್ಥೆಗಳು ಈ ಯೋಜನೆಯನ್ನು ಕೈಕೊಂಡಲ್ಲಿ ಸಹಾಯಮಾಡುವದಾಗಿ ಮುಂಬಯಿ ಸರಕಾರವು ತನ್ನ ಉದಾರ ಮತವನ್ನು ವ್ಯಕ್ತಮಾಡಿದೆ. ನಿರಕ್ಷರತೆಯು ಅಮೂಲಾಗ್ರವಾಗಿ ಇಲ್ಲದಂತಾಗಬೇಕೆಂಬ ಮಾತಿಗೆ ಯಾರೂ ಅಡ್ಡ ಬರಲಾರರು. ಮುಂದುವರಿದ ಕೆಲವು ಪಂಗಡಗಳಲ್ಲಿ ಸುಶಿಕ್ಷಿತರು ಹೆಚ್ಚಾಗಿದ್ದರೂ ಹಿಂದುಳಿದ ಹಾಗು ಕಾಡು ಜನರಲ್ಲಿ ವಿದ್ಯೆಯ ಗಂಧವು ಕೂಡ ಕಾಣುವದಿಲ್ಲ. ರಾಷ್ಟ್ರದ ಪ್ರಗತಿಗೆ ಕಾರಣೀಭೂತವಾದ ಈ ಸುಧಾರಣೆಯು ಬಲುಮೆಯಿಂದ. ಹೇರಲ್ಪಟ್ಟಾಗ ಬಡವರೂ ಅಜ್ಞಾನಿಗಳೂ ಇದಕ್ಕೆ ವಿರೋಧಿಸಬಹುದು. ಇಂಥ ಅಡೆ-ತಡೆಗಳನ್ನು ಧೈರ್ಯದಿಂದ ಎದುರಿಸಿ ಮುಂದೆ ಸಾಗಬೇಕಾಗಿದೆ. ಒತ್ತಾಯದ ಶಿಕ್ಷಣವು ಬಹು ಪೆಚ್ಚಾದ್ದೆಂದು ನಿರಾಶೆಗೊಳ್ಳದೆ ಉಚ್ಚಧ್ಯೇಯ ತ್ಯಾಗಬುದ್ಧಿಗಳಿಂದ ಸಾಗಿಸಬೇಕು. ಶಿಕ್ಷಣವೇ ನಾಡಿನ ಜೀವಾಳ. ಶಿಕ್ಷಣ ಸುಧಾರಣೆಯೇ ಏಳಿಗೆಯ ಮೊದಲ ಮೆಟ್ಟಲು. ಎಲ್ಲರೂ ಹುರುಪಿನಿಂದ, ಸಹಕಾರತೆಯಿಂದ, ಸದಭಿಮಾನದಿಂದ ಸಾಗಿದರೆ ಇದೇನು ನೀಗದ ಕಾರ್ಯವಲ್ಲ.

ಪ್ರಾಥಮಿಕ ಶಾಲೆಗಳಲ್ಲಿ ಕವಿತಾಪಾಠದ ಅಗತ್ಯ

ಲೇಖಕ—ಗ. ಜಿ. ಮಜ್ಜಿಗುಡ್ಡ, ಕನ್ನಡ ಶಾಲೆಯ ಶಿಕ್ಷಕ. ಹುಬ್ಬಳ್ಳಿ

ಭಾಷೆಯಲ್ಲಿ ಕವಿತೆ (ಹಾಡಿ)ಗೆ ಮಹತ್ತ್ವದ ಸ್ಥಾನವಿದೆ. ಸಾಹಿತ್ಯವು ಹಾಡಿನ ಹಿರಿಮೆಯಿಂದ ಕಳೆಗೊಂಡು ಬೆಳಗುತ್ತಿದೆ. ಭಾವ. ರಸ, ರಾಗ, ತಾಳ, ಅಲಂಕಾರಾದಿ ಸೌಕರ್ಯಗಳಿಂದ ಮನಮೆಚ್ಚಿಸಿ ಆತ್ಮಕ್ಕೆ ಆನಂದವನ್ನು ನೀಡುವ ಶಕ್ತಿ ಕವಿತೆಗಿದೆ. ಅದು ಸೌಂದರ್ಯದ ಸವಿಯನುಣ್ಣಿಸುತ್ತಿದೆ. ಭಾವನಾತೃಷೆಯನ್ನು ತೃಪ್ತಿಬಡಿಸುತ್ತಿದೆ. ಬುದ್ಧಿವಿಕಾಸಕ್ಕೂ ಜ್ಞಾನಾರ್ಜನೆಗೂ ಸಹಾಯಕಾರಿಯಾಗಿದೆ

ಉತ್ತಮ ಕವಿತೆ ಕೇಳುವದರಿಂದ ಮನದ ದುಗುಡವು ದೂರವಾಗಿ ಸಹಜಾನಂದವು ಲಭಿಸುವದು. ರಸಿಕತನದಲ್ಲಿ ಹಾಡೂ ಒಂದಾಗಿದೆ. ಹಿರಿಯರು, ಕಿರಿಯರು, ಕಲಿತವರು, ಕಲಿಯದವರು, ಮಾನವ ಸಾಮಾನ್ಯರು ಆನಂದದ ಲಹರಿಯಲ್ಲಿ ಸ್ವೇಚ್ಛೆಯಾಗಿ ಹಾಡಬಲ್ಲರು. ತೊಟ್ಟಿಲಲ್ಲಿ ಅಳುವ ಕಂದನು ತಾಯಿಯು ಮಧುರವಾದ ಜೋಗುಳ ಪದವನ್ನು ಕೇಳಿ ಸುಮ್ಮನಾಗುವದು. ಪಾಪಿಕಾರನು ಜನಂದದ ಮನೋರಾಜ್ಯದಲ್ಲಿ ಹಾಡುತ್ತ ತಾದೀನಡೆಯುವನು. ಬೀಸು-ಕುಟ್ಟುವಲ್ಲಿಯೂ ಹಾಡು ಜನಪ್ರಿಯವಾಗಿ ಜರಿದಾಡಿದೆ. ಲಾವಣಿಯ ಹಾಡು, ಗೊಂದಲಿಗರ ಹಾಡು, ದಾಸರ ಹಾಡುಗಳು ಜನತೆಯ ಚಿತ್ತವನ್ನಾಕರ್ಷಿಸಿದ್ದುದು ನಮಗೆಲ್ಲ ಗೊತ್ತಿದ್ದ ಮಾತು. ಪಶುಪಕ್ಷಿಗಳೂ ಹಾಡನ್ನು ಪ್ರೀತಿಸಬಲ್ಲವು. ಆದಿಶೇಷನಿಗೂ ಹಾಡು ಅಮೃತ ಪ್ರಾಯವಾಗಿದೆ. ಇಂದ್ರನ ಸಭೆಯಲ್ಲಿ ಹಾಡಿನ ಹರುಷವಿದೆಯಂತೆ. ಒಟ್ಟಿನಲ್ಲಿ ದೇವ, ಮಾನವ, ಪಶು, ಪಕ್ಷಿಗಳಿಗೆಲ್ಲ ಹಾಡು ಮೆಚ್ಚಿಗೆಯುದಾಗಿದೆ. ಇಂತಹ ಮಹತ್ತ್ವದ ವಿಷಯವಾದ ಕವಿತೆಯನ್ನು ಭಾವೀ ನಾಗರಿಕರಾಗಲಿರುವ ನಮ್ಮ ಪ್ರಾಥಮಿಕ ಶಾಲೆಗಳ ಬಾಲ-ಬಾಲಿಕೆಯರು ಕಲಿಯಬೇಕಾದುದು ತುಂಬ ಅವಶ್ಯವಾಗಿದೆ.

ಕವಿತಾಪಾಠದಿಂದ ಬಾಲಕರ ನುನ್ನೋಭಾವನೆಗಳು ಜಾಗ್ರತೆಹೊಂದಿ ಅವು ಯೋಗ್ಯ ದಿಶೆಯಲ್ಲಿ ಮುಂದುವರಿಯಬೇಕು. ಕವಿಯು ಹಾಡಿದಾಗ ಅವನು ಅನುಭವಿಸಿದ ಭಾವ ಸನ್ನಿವೇಶಗಳನ್ನು ಬಾಲಕರು ಹಾಡುವಾಗ ತಾವೂ ಅನುಭವಿಸಿ ಕವಿಸೃಷ್ಟಿಯಲ್ಲಿ ಲೋಲಾಡ ಬೇಕು. ಕವಿಯ ಕೃತಿಯಲ್ಲಿಯ ಅಂದ ಚೆಂದವನ್ನರಿತು, ಚಮತ್ಕೃತಿಯನ್ನು ಕೊಂಡಾಡಿ, ಭಾವ ಸೌಂದರ್ಯಗಳನ್ನು ಮುದ್ದಾಡಿ ಅದರಲ್ಲಿ ಲೀನರಾಗಿ ಮತ್ತೆ ಮತ್ತೆ ಆ ಕವಿತೆ ಅನ್ನಲು ಹಾತೊರೆಯಬೇಕು. ಕಾಲ ಬಾಹುಲ್ಯವಾದರೂ ಕಲಿತ ಕವಿತೆಯ ಸವಿ ನೆನಪು ನೆಗೆದು ಬಂದು ಕಂಪಿಡುಗಬೇಕು. ಕವಿತಾಪಾಠದ ಆಶೆಯ ನೀರೂರಬೇಕು. ಅಂತಹ ಕವಿತೆಗಳನ್ನು ಇನ್ನೂ ಕಲಿಯಲು ಹವಣಿಸಬೇಕು. ಅವರ ರಸಾಸ್ವಾದನೆಯ ರುಚಿಯ ಈ ರೂಢಿಯು ಪ್ರಾಚೀನ ಮಹಾಕವಿಗಳ ಕಾವ್ಯಗಳನ್ನೋದಿ ತಣಿಯಲು ಪೂರ್ವರಂಗವಾಗಬೇಕು; ಇಷ್ಟೇ ಅಲ್ಲ, ಕೊಬ್ಬಿ ಬೆಳೆದ ಬಳ್ಳಿಯಿಂದ ಕೋಮಲವಾದ ತಳಿರು ಹೂಗಳು ಹೊರಹೊಮ್ಮುವಂತೆ ಬಾಲಕರು ಕವಿತಾರಚನೆ ಮಾಡಿ ಓದುಗರ ಕೈಗೆ ಕೊಡಲು ಸಹ ಅಣಿಯಾಗಬೇಕು. ಎಂದರೆ ಕವಿತಾಪಾಠದ ಉದ್ದೇಶವು ಸಮರ್ಪಕವಾಗಿ ಸಾಧ್ಯವಾದಂತಾಗುವದು.

ಕವಿತೆಯನ್ನು ಕಲಿಸುವ ಕ್ರಮದ ವಿಷಯವಾಗಿ ಪ್ರಾಥಮಿಕ ಶಿಕ್ಷಣದ ಆಕ್ಟೋಬರ ೧೯೪೦ ರ ಸಂಚಿಕೆಯಲ್ಲಿಯ ಶ್ರೀ. ಪಂಡಿತ ಪೂಜಾರ ಅವರ 'ಕವಿತಾಶಿಕ್ಷಣ' ಎಂಬ ಲೇಖವನ್ನು ಓದಬಹುದು.

ಕನ್ನಡನಾಡು:— (ಶ್ರೀ. ಮ. ನಿ. ಇಂಗಳಗಿ, ಆ. ಮೂ. ಬುದರಕಟ್ಟಿ)

ವರಕರಿನಾಡಿದು ಬಹುಚೆಂದ | ಚೆಂದ | ಭರದಿಂದ ಬಂದಿಹುದಾನಂದ ‖ ಪಲ್ಲ ‖
ಸೊಂಪಿನ ಮಂದಿರ ಕರಿನಾಡು | ರನ್ನ | ಪಂಪರುಡಯಿಸಿದ ನೆಲೆವೀಡು ‖
ವೀರ ಯುವತಿಯರದೀನಾಡು | ಶೂರ ಹನುಮ ಪುಲಿಕೇಶಿ ಜನಿಸಿದ ನಾಡು ‖ ೧ ‖

ಸೂರ್ಯೋದೇವ:— (ಶ್ರೀ. ವೆಂಕಟರಮಣ ರಾಮಕೃಷ್ಣ ನಾಯ್ಕ, ಸಹಶಿಕ್ಷಕ ಸಿದ್ದಾಪುರ)

ಮೂಡಿ ಬಾ ದೇವ | ಮೂಡಿ ಬಾ. ‖ ಪಲ್ಲ ‖
ಹೊಂದೇರನೇರಿ ತಿಳಿಬಾನಸೇರಿ ಬುವಿಗೆಲ್ಲ ಸಾರಿ ಮೂಡಿ ಬಾ ‖ ೧ ‖
ಕೆಂಪುಕೆಂಪಾಗಿ ದುಂಡುದುಂಡಾಗಿ ಮಿಂಚುಮಿಂಚಾಗಿ ಮೂಡಿ ಬಾ ‖ ೨ ‖
ಕತ್ತಲೆಯನರಿದು ಮೇಘವನುಕೊರೆದು ತಾವರೆಯಬಿರಿದು ಮೂಡಿ ಬಾ ‖ ೩ ‖
ತಿರೆಯಲ್ಲಿ ಸುತ್ತಿ ಊಷೆಯನ್ನು ಎತ್ತಿ ಬಾಂದಳವಹತ್ತಿ ಮೂಡಿ ಬಾ ‖ ೪ ‖
ತುರುಸಿರೆಯಬಿಡಿಸಿ ಭೃಂಗಗಳನಲಸಿ ಚಿಣ್ಣರನು ಕುಣಿಸಿ ಮೂಡಿ ಬಾ ‖ ೫ ‖
ತಾರೆಗಳನಟ್ಟಿ ನಿಶೆಯನ್ನುಮೆಟ್ಟಿ ಕೋಳಿಗಳಮುಟ್ಟಿ ಮೂಡಿ ಬಾ ‖ ೬ ‖
ಮೂಡಣದಿ ಮೂಡಿ ಬೆಂಗದಿರನೀಡಿ ಸರಸಿಜೆಯ ಕೂಡಿ ಮೂಡಿ ಬಾ ‖ ೭ ‖
ಬಾಳ ಬೆಳಕಾಗಿ ಜಗದ ಕಣ್ಣಾಗಿ ಕಣ್ಣ ಮಣಿಯಾಗಿ ಮೂಡಿ ಬಾ ‖ ೮ ‖
ನಿನಗೆ ಪೊಡಮಡುವೆ ಎದೆಮನೆ ತೆರವೆ ನಿನ್ನ ಕರೆಕರೆವೆ ಮೂಡಿ ಬಾ ‖ ೯ ‖

ಕನ್ನಡ 'ವರ್ಧಪ್ರಾಯೋಜ' ಪರೀಕ್ಷೆ ೧೯೪೫

೧. **ಪರೀಕ್ಷೆಯ ವಿಷಯಗಳು:**— (ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯ-ಪದ್ಯ ಭಾಗಗಳ ಅರ್ಥವಿವರಣೆ ಮಾಡಲಿಕ್ಕೂ ಅವುಗಳಿಗೆ ಟೀಕೆಟಿಪ್ಪಣಿಗಳನ್ನು ಬರೆಯಲಿಕ್ಕೂ ಹಳೆಯ ಮತ್ತು ಹೊಸಗನ್ನಡದಲ್ಲಿ ನಿಬಂಧ ಬರೆಯಲಿಕ್ಕೂ ಉಮೇದುವಾರರು ಸಮರ್ಥರಾಗಿರಬೇಕು. (ಬ) ವರ್ಧಸಾಹೇಬರು ರಚಿಸಿರುವ ಪ್ರಾಕ್ಕಾವ್ಯಮಾಲೆ ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆಯಲ್ಲಿ ಅರ್ಥವಿವರಣೆ, ಟೀಕೆಟಿಪ್ಪಣಿ, ಸ್ವತಂತ್ರ ನಿಬಂಧ, ಪದ್ಯರಚನೆ ಈ ವಿಷಯಗಳ ಸಮಾವೇಶವಾಗುವದು.

೨. **ಬಹುಮಾನ:**— ಈ ಮೊದಲು ಇದ್ದ ೬೦ ರೂ. ಗಳ ಒಂದೇ ಬಹುಮಾನದ ಬದಲಾಗಿ ಈಗ ಬಹುಮಾನಗಳು ಎರಡು ಎಂದು ಗೊತ್ತಾಗಿದೆ. ಮೊದಲನೆಯ ಬಹುಮಾನ ೫೦ ರೂ. ಎರಡನೆಯ ಬಹುಮಾನ ೩೦ ರೂ. ಮೊದಲನೆಯ ಬಹುಮಾನ ಪಡೆಯುವ ಉಮೇದುವಾರನು ಒಟ್ಟಿನಲ್ಲಿ ೧೦೦ ಕ್ಕೆ ೭೫ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಎರಡನೆಯ ಬಹುಮಾನ ಪಡೆಯುವ ಉಮೇದುವಾರನು ಒಟ್ಟಿನಲ್ಲಿ ೧೦೦ ಕ್ಕೆ ೬೦ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಪಡೆದಿರಬೇಕು. ಈ ಉಮೇದುವಾರರು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿಮೆ ಗುಣಗಳನ್ನು ಪಡೆದು ನಾಪಾಸಾಗಿರಕೂಡದು. ಒಂದು ವೇಳೆ ಒಬ್ಬನಿಗಿಂತ ಹೆಚ್ಚು ಉಮೇದುವಾರರು ಸಮಾನಗುಣಗಳನ್ನು ಪಡೆದು ಸಮಾಧಾನಕರವಾಗಿ ಪಾಸಾಗಿದ್ದರೆ ಬಹುಮಾನಗಳನ್ನು ಸರಿಯಾಗಿ ವಿಭಜಿಸಿ ಹಂಚಲಾಗುವದು.

೩. **ಅರ್ಜಿಸಮಾಡತಕ್ಕ ಅವಧಿ:**— ಪರೀಕ್ಷೆಗೆ ಕೂಡ್ರಲಿಚ್ಛಿಸುವವರು ೧೯೪೫ ನೆಯ ಇಸವಿಯ ಅಗಷ್ಟ ತಿಂಗಳ ೧೫ನೆಯ ತಾರೀಖಿನೊಳಗಾಗಿ ಮೆ| ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾ| ದಕ್ಷಿಣ ಭಾಗ ಧಾರವಾಡ ಇವರಿಗೆ ಮುಟ್ಟುವಂತೆ ಅಪೇಕ್ಷಾಪತ್ರವನ್ನು ಕಳುಹಿಸತಕ್ಕದ್ದು.

೪. **ಪರೀಕ್ಷೆಯ ಸ್ಥಳ, ದಿವಸ ಹಾಗು ವೇಳೆ:**— ಧಾರವಾಡ ಗಂಡುಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಈ ಪರೀಕ್ಷೆಯು ೧೯೪೫ ನೆಯ ಇಸವಿಯ ಅಗಸ್ಟ ತಿಂಗಳಲ್ಲಿ ನಡೆಯುವದು. ತಾರೀಖು ವೇಳೆ ಮೊದಲಾದವುಗಳನ್ನು ಹಿಂದಿನಿಂದ ಪ್ರಕಟಿಸಲಾಗುವದು.

೫. **ಪ್ರಶ್ನ ಕಾಗದಗಳು:**— ಪ್ರತಿಯೊಂದು ಕಾಗದಕ್ಕೆ ೩ ತಾಸು ಅವಧಿಯೂ ೧೦೦ ಗುಣಗಳೂ ಉಂಟು.

ಮೊಪಲನೆಯದು— ಪ್ರಾಕ್ಕಾವ್ಯಮಾಲೆ ೭೦; ವ್ಯಾಕರಣ ಮತ್ತು ಛಂದಸ್ಸು ೩೦.

ಎರಡನೆಯದು—ಹಳಗನ್ನಡ ನಿಬಂಧ೫೦; ಕನ್ನಡ ಬಾವುಟದಲ್ಲಿಯ ಕವಿತಾಭಾಗ* ೩೦; ಹಳಗನ್ನಡ ಅಪರಿಚಿತ ಗದ್ಯಭಾಗಗಳು ೨೦.

ಮೂರನೆಯದು— ಹೊಸಗನ್ನಡ ನಿಬಂಧ ೭೫; ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯಪರಿಚಯ ೭೫.

* **ಕನ್ನಡ ಬಾವುಟದಲ್ಲಿಯ ಕವಿತಾಭಾಗದ ವಿವರಣೆ**— (೧) ರಾಷ್ಟ್ರಕೂಟ ರಾಜನ ಶಾಸನ. ಪುಟ ೫ (೨) ಕನ್ನಡನಾಡಿನ ಚೆಲುವು. ಪುಟ ೧೭-೨೦ ಪೂರ್ಣ (೩) ಬಸವಣ್ಣನವರ ಗುಣ. ಪುಟ ೪೫ (೪) ಮಹಾದೇವಿಯಕ್ಕನ ಪುಟ ೪೬-೪೯ ಪೂರ್ಣ (೫) ಕನಕದಾಸರು ಪುಟ ೫೯-೬೧ ಪೂರ್ಣ (೬) ಅರುಣೋದಯ ಪುಟ ೯೭ (೭) ಕಾರ್ಗಾಲದ ವೈಭವ ಪುಟ ೧೦೦ (೮) ಕೊಡಗು ಪುಟ ೧೦೨ (೯) ತೆಂಕಣಗಾಳಿಯಾಟ ಪುಟ ೧೦೬ (೧೦) ಕುಮಾರವ್ಯಾಸ ಪುಟ ೧೨೧ (೧೧) ಬೇಲೂರಿನ ಶಿಲಾಬಾಲಿಕೆಯರು ಪುಟ ೧೩೬.

ಈ ಕವಿತಾಭಾಗವನ್ನು ಸಂಪೂರ್ಣ ಅಭ್ಯಾಸ ಮಾಡಿರಬೇಕು; ಮೂರನೆಯ ಕಾಗದದ ವಿಷಯದಲ್ಲಿ ೨೫ ಗುಣಗಳ ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯಪರಿಚಯ, ಎಂಬ ಭಾಗದ ಅಭ್ಯಾಸಕ್ಕಾಗಿ ಕನ್ನಡ ಕವಿಚರಿತೆಯ ಮೊದಲನೆಯ ಭಾಗವನ್ನು ಓದಬಹುದು.

ಗವ್ಹರ್ನಮೆಂಟ ಟ್ರೇನಿಂಗ್ ಕಾಲೇಜ
ಫಾರ್ ಮೆನ್ ಧಾರವಾಡ, ೧-೪-೧೯೪೪

Sd/- H. B. Umadi.
ಪ್ರಿನ್ಸಿಪಾಲರು

ಧಾರವಾಡ ಗ. ಟ್ರೇ. ಕಾ. ದ ಸರ್ಟಿಫಿಕೇಟ ಪರೀಕ್ಷೆಯ ಪರಿಣಾಮ ೧೯೪೪

ಒಟ್ಟು ೯೫೦ ಗುಣಗಳಲ್ಲಿ ಕೆಳಗೆ ತೋರಿಸಿದಂತೆ ಗುಣಗಳನ್ನು ಪಡೆದು ಪಾಸಾದವರು

ಡಿ. ಎಸ್. ಬಿ. ಧಾರವಾಡ. ಅ. ಶಿ. ನೀಲಗುಂದ ೫೩೨ ಬ. ಭ. ಪಾಟೀಲ ೪೩೨ ಬಾ. ಬ. ತಡಕೋಡ ೫೫೭ ಚ. ಬ. ಅಂಗಡಿ ೫೫೯ ಜ. ಬ. ಅಲ್ಲಾಪುರ ೫೧೭ ಜ. ಮು. ಗದ್ದಿಗೌಡರ ೫೩೬ ಜ. ವೀ. ಧೂಳಪ್ಪನವರ ೫೪೪ ದೇ. ಶಿ. ಲಕ್ಕಣ್ಣವರ ೪೯೫ ಫ. ಬ. ಸಂಗಣ್ಣವರ ೫೦೭ ಗ. ಉ. ಮಾಳಾಪುರ ೪೭೧ ಗೂ. ಅ. ಕರಡ್ಡಿ ೪೧೨ ಹೊ. ಬ. ನಿಡಗುಂದಿ ೪೯೧ ಕಾ. ಸೈ. ಕಟಗರ ೫೧೯ ಕಾ. ಇ. ಕಳಸ ೪೪೪ ಕೃ. ಶ್ರೀ. ಕುಲಕರ್ಣಿ ೪೭೧ ಲಾ. ಇ. ಕಳ್ಳೀಮನಿ ೫೯೯ ಮು. ಮು. ಪಾಲೀಕೊಪ್ಪ ೪೭೭ ಸ. ಭ. ನಾಗಮ್ಮನವರ ೫೯೭ ರು. ವಿ. ನಿಂಬನಗೌಡರ ೪೪೫ ಸಂ. ಗೋ. ಗೋಲಪ್ಪನವರ ೪೮೯ ಶಿ. ಶಾ. ಅರಳಗುಪ್ಪಿ ೪೪೨.

ಡಿ. ಎಸ್. ಬಿ. ಬೆಳಗಾವಿ ಅ. ರಾ. ಹಾವರಿ ೪೦೫ ಅ. ಬಾ. ಪಾಚ್ಛಾಪುರ ೪೦೫ ಬ. ಸಿ. ಪಾಟೀಲ ೪೫೪ ಬ. ಪ. ನರಗುಂದ ೪೯೨ ಬ. ಶಿ. ಜಕಾತಿ ೫೬೫ ಬ. ನಿ. ಸುಣಗಾರ ೪೮೯ ಬಾ. ದ. ದೇಶಪಾಂಡೆ ೪೫೨ ಭಾ. ಬು. ಅಮ್ಮಣ್ಣವರ ೪೪೫ ಭೀ. ಭೀ. ತಳವಾರ ೪೦೮ ಭೀ. ಭೀ. ಘಸ್ತಿ ೪೫೫ ಭೀ. ಕೈ. ಕಟ್ಟಿ ೪೪೦ ಚ. ಮ. ಮುರಕೀಭಾವಿ ೫೧೨ ಧೋ. ದ. ಕುಲಕರ್ಣಿ ೪೫೫ ಗೋ. ಕೀ. ಕುಲಕರ್ಣಿ ೫೫೬ ಗು. ನಾ. ಕಾಥವಟೆ ೪೪೨ ಹ. ವಿ. ಚಿತ್ರಗಾರ ೪೭೦ ಹು. ವೀ. ಕಿತ್ತೂರ ೪೬೫ ಈ. ಮ. ಪಟ್ಟಣಶಟ್ಟಿ ೪೬೪ ಜಿ. ಪಾ. ಹಣಮಿನಹಾಳ ೫೫೦ ಕ. ಮ. ಲಕ್ಕಣ್ಣವರ ೪೬೩ ಕಾ. ಬು. ಜಮಾದಾರ ೪೯೨ ಮ. ಗು. ಮಾಲಗಾರ ೪೫೪ ಮ. ಕೇ. ಅಲಾಸೆ ೪೪೯ ಮ. ಕೃ. ತಂಗಡಿ ೫೬೫ ಮ. ವಿ. ಪದಕಿ ೫೨೨ ಪ. ನೂ. ಕಾದರೊಳ್ಳಿ ೫೧೨ ಪ. ಜೆ. ಪಟ್ಟೇದ ೫೧೭ ಪ್ರ. ರಾ. ಜೋಶಿ ೪೫೦ ರಾ. ಪ. ಚಿಮ್ಮಡ ೪೬೫ ರಾ. ಕೃ. ಕುಲಕರ್ಣಿ ೫೫೨. ವಾ. ರಾ. ಮಾಹುಲಿ ೫೫೭. ವೀ ಮು. ಕಳಸಣ್ಣವರ ೫೦೪ ವಿ. ಪ. ಹಿರೇಮಠ ೪೪೬

ಡಿ. ಎಸ್. ಬಿ. ವಿಜಾಪುರ ಅ. ಫೇ. ಠಾಕೂರ ೪೪೭ ಅ. ಹಾ. ಓಲೆಕಾರ ೪೫೧ ಚಿ. ಜೆ. ಗಣಾಚಾರಿ ೫೬೧ ಗು. ಬಾ. ಕುಲಕರ್ಣಿ ೫೪೦ ಗು. ವಿ. ತಳವಾರ ೪೦೮ ಹ. ಭೀ. ಕುಲಕರ್ಣಿ ೪೫೦ ಮ. ಅ. ನಂದಗಾವ ೪೯೦ ಕೃ. ಯ. ಗುಡಿಸಲಮನಿ ೪೦೮ ಕೃ. ರಾ. ಕುಲಕರ್ಣಿ ೫೬೧ ಮು. ಸ. ತೋಟಿಗೇರ ೪೬೪ ಮು. ಯ. ಅರುಟಗಿ ೪೬೭ ಮು. ಜೆ. ಮತಪತಿ ೫೦೩ ಮು. ವೀ. ಬಿರಾದರ ೪೪೨ ಮು. ಬ. ಹಿರೇಮಠ ೪೨೪ ಮು. ನ. ಸಜ್ಜನ

ಳ್ಳೇ ನ. ದ್ವ. ಕಟ್ಟಿ ಖಖಖ ನ. ಗು. ಯಜುರ್ವೇದಿ ಳ್ಳಿ ಪೀ. ತು. ಪೋಳ ಳಒ೦ ಪ್ರ. ವಿ. ಕರ್ಜಗಿ ಖಒಖ ರಾ. ಬಿ. ಜಮದಗ್ನಿ ಖಂಲ ರಾ. ಸ. ಕಣ್ಮುಚನಾಳ ಳಗಲ ಸಾ. ಗಿ. ಬಗಲಿ ಖಖಳ ಶಿ. ಬಾ. ಗೌಡರ ಳಖಿ ಶಿ. ಮಾ. ಯರನಾಳ ಖಗಖ. ಶ. ನಾ. ಕಡಿಬಾಗಲ ಳಲಒ ಸಿ. ಎಂ. ಶೇರಖಾನೆ ಳ್ಳಳ ತಿ. ಸೋ. ಸಂಕನಗೌಡರ ಳಖಒ ತಿ. ರಾ. ಚಾಕಲಬ್ಬಿ ಳಖಒ ಉ. ಗು. ಬಿರಾದರ ದೇಸಾಯಿ ಳಒಖ ವಿ. ತು. ಅಂಕಲಗಿ ಖಖಂ ವೀ. ವೀ. ಶಿವಶಿಂಪಿಗೇರ ಳಒಲ ಯ. ಬಿ. ಚಲವಾದಿ ಳಳಖ ಯ. ರಾ. ಕುದರಿ ಳಒಖ

ಡಿ. ಎಸ್. ಬಿ. ಕಾರವಾರ ಗೋ. ಅ. ಪಾಲಕರ ಳ್ಳಳ ಮಾ. ವಿ. ದೇಸಾಯಿ ಳಒಖ ಮ. ಓ. ನಾಯಿಕ ಳಒಗ ನ್ಯಾ. ತು. ಮಶಾಲ್ದಿ ಖಖಳ ನಾ. ಪ. ಗಂಗೆ ಳಒಗ ನೀ. ಸ. ನಾಯಿಕ ಳಗಒ ರಾ. ದು. ನಾಯ್ಕಿಕ ಳಖಖ ಶಿ. ದು. ಶಿರೂರ ಳಒಲ ಶಿ. ಜು. ಲುಯಿಸ ಳಒಒ ಸು. ತಿ. ದೇಸಾಯಿ ಳ್ಳಖ ವಿ. ನಾ. ಅಡಕೋಳಿ ಖಳಒ

ಡಿ. ಎಸ್. ಬಿ. ಸೊಲ್ಲಾಪುರ ಶ. ಹ. ದೇಶಪಾಂಡೆ ಳ್ಳಖ. **ಮ್ಯು. ಸ್ಕೂ. ಬೋ. ಧಾರವಾಡ** ಅ. ಮು. ಜಮಾದಾರ ಳಒಳ **ಮ್ಯು. ಸ್ಕೂ. ಬೋ. ಹುಬ್ಬಳ್ಳಿ** ಬ. ಗು. ಮಟ್ಟೆಣ್ಣವರ ಖಲಖ. ಕೊ. ವೀ. ಹಿರೇಮಠ ಳಒಲ ನಾ. ದು. ಖಾಪರೆ ಖಒಖ. **ನಾ.** ಹ. ಪಾಸ್ತೆ ಖಖಗ ರಾ. ವಿ. ಜೋಶಿ ಖರ್ಂ ವೆ. ಭಿ. ಜೋಶಿ ಖಳಲ **ಮ್ಯು. ಸ್ಕೂ. ಬೋ. ಗದಗ** ಭೋ. ಬ. ಕೊಟಬಾಗಿ ಖಲಒ ಜೆ. ಬ. ಹಡಪದ ಳಳಲ ಜೆ. ಭೀ. ರಜಪೂತ ಳಳ್ಳ ಫ. ತು. ಘೋಡಕೆ ಳಖಒ ಈ. ಕ. ಕಾಲವಾಡಮಠ ಖಒಲ ವೆ. ರಾ. ಪುರಾಣಿಕ ಖಂಲ **ಮ್ಯು. ಸ್ಕೂ. ಬೋ. ವಿಜಾಪುರ** ಗು. ರಾ. ರಾನಡೆ ಳ್ಳಒ ರಾ. ಅ. ಘಾಟಕ ಳಲಒ ಸಾ. ಭೀ. ಕಾಖಂಡಕೆ ಳಖಳ ತ್ರಿ. ಅ. ಕುಲಕರ್ಣಿ ಖಗಖ. ವಾ. ರಾ. ಆನೇಖಿಂಡಿ ಳ್ಳಒ **ಮ್ಯು. ಸ್ಕೂ. ಬೋ. ಸೊಲ್ಲಾಪುರ** ಶ್ರೀ. ಭೀ. ಯಜುರ್ವೇದಿ ಳಖಲ **ಅಪ್ರೂವ್ಡ ಸ್ಕೂಲ್ ಧಾರವಾಡ** ಫ. ಯ. ಪಾಟೀಲ ಳಒಒ **ಕೆ. ಎಲ್. ಇ. ಸೊ. ಧಾರವಾಡ** ಸ್ವಾ. ಬ. ಕಿತ್ತೂರ ಖಗಗ **ಕೆ. ಎಲ್. ಇ. ಸೋ. ಪ್ರಾ. ಸ್ಕೂ. ಧಾರವಾಡ** ಶ್ರೀ. ಹ. ಮುಳಗುಂದ ಖಒಳ ಯ. ಫ. ಮೂಲೀಮನಿ ಳಳಒ **ಪಿ. ಎಸ್. ಪಿ. ಮುಂ. ಧಾರವಾಡ** ಭೀ. ಶ. ಕುಲಕರ್ಣಿ ಳಳಳ **ಕಾರವಾರ** ಶಿಮಿತಿ **ಸದಾಶಿವಗಡ** ಮು. ಹಾ. ನಾಯಕ ಳಒಲ **ಬಾ. ಮಿ. ಸ್ಕೂಲ್ ಧಾರವಾಡ** ಇ. ರಾ. ಪತ್ತಾರ ಖಗಂ **ಎಜ್ಯುಕೇಶನಲ್ ಸೋ. ಹುಬ್ಬಳ್ಳಿ** ಮ. ಶಿ. ಪಾಟೀಲ ಳ್ಳಖ **ಬೆಳಗಾವಿ ಜಿಲ್ಲಾ ಪ್ರಾ. ಶಿ. ಸಮಿತಿ** ಅ. ಪ. ಬೋರಣ್ಣವರ ಳಲಖ **ಬಿ. ಜಿ. ಎಡೆಡ್ ಸ್ಕೂ. ಕಟಿಧಾಳ** ಮು. ಸ. ಶೀಲವಂತ ಳಒಖ **ಎಡೆಡ್ ಸ್ಕೂಲ ಅಥಣಿ** ಬಾ. ಬ. ದೇಶಪಾಂಡೆ ಳಒಗ ರಂ. ಪಾ. ಜೋಶಿ ಳ್ಳಗ **ಗುಂಜೆ ಸೆಟಲಮೆಂಟ** ಶ್ರೀ. ಕೃ. ಗಲಗಲಿ ಖಳಂ **ವಿಜಾಪುರ** ಪ. ಪ್ರಾ. ಸ್ಕೂಲ್ ವೆ. ಹ. ಗುಡಿಖಳಒ **ವಿಜಾಪುರ ಮಿಶನ್ ಸ್ಕೂಲ್** ಸ. ಗು. ಜಾಡಿಗೇರಮಠ ಳ್ಳಳ **ವಿಜಾಪುರ ಜಿ. ವ್ಹಾ. ಲಂಟಿರಿಸ್ಕೂಲ್.** ನಿ. ರಾ. ಸುಣಗಾರ ಳಒಂ

ಟೀಪು:— ಕೆಳಗೆ ಕಾಣಿಸಿದ ಎಂಟು ಮುಂದಿ ಶಿಕ್ಷಕ ವಿದ್ಯಾರ್ಥಿಗಳಿಗೆ ಅವರ ಹೆಸರಿನ ಮುಂದೆ ತೋರಿಸಿದ ವಿಷಯದಲ್ಲಿ ಮಾತ್ರ ಮುಂದಿನ ವರ್ಷ ಪರೀಕ್ಷೆಗೆ ಕೂಡಲಿಕ್ಕೆ ಪರವಾನಿಗಿಯು ಕೊಡಲ್ಪಟ್ಟಿದೆ. ಗು. ಲಿ. ವಸ್ತ್ರದ ಶಿಕ್ಷಣ (ಆ); ಗೂ. ಹ. ತಹಶೀಲದಾರ ಅಂಕಗಣಿತ; ಹ. ದು- ಚಲವಾದಿ ಅಂಕಗಣಿತ; ರಾ. ಬ. ಬೂದಿಹಾಳ ಭೂಗೋಲ; ಗ. ಮು. ಬೆನಕೊಪ್ಪ ಇತಿಹಾಸ; ಸಾ. ತ. ಜೋಲಾಪುರಿ ಇತಿಹಾಸ; ವಿ. ನಾ. ನಾಯ್ಕ ಸಾಯಿನ್ಸ ದ. ಚಿ. ಕುಲಕರ್ಣಿ ಇತಿಹಾಸ.

ಪಾರಿತೋಷಕಗಳನ್ನು ಪಡೆದವರು

೧. ಜಾಯಿಲ್ಸ ಪ್ರಾಯಿಝು ಶಿಕ್ಷಣದಲ್ಲಿ ೧ನೆಯ ನಂಬರು— ೧೬ ರೂ. ೪ ಆ.
ಫ್ಹಿ. ಎಮ್. ಕಳಸಣ್ಣವರ ಡಿ. ಎಸ್. ಬಿ. ಬೆಳಗಾವಿ.

೨. ಜನರಲ್ ಪ್ರಾಯಿಝು ೧ ಶಿಕ್ಷಣದಲ್ಲಿ ೨ನೆಯ ನಂಬರು—೧೨ ರೂ. ಬಿ. ಬಿ. ತಡಕೋಡ
ಡಿ. ಸ್ಕೂ ಬೋ. ಧಾರವಾಡ

೩. ಸರ್‌ಜೇಮ್ಸ ಮಾಂಟೀಥ ಪ್ರಾಯಿಝು ೧ ಕನ್ನಡದಲ್ಲಿ ೧ ನಂಬರು— ೧೫ ರೂ.
ಪಿ. ಫ್ಹಿ. ಕರ್ಜಗಿ ಡಿ. ಸ್ಕೂ. ಬೋ. ವಿಜಾಪುರ

೪. ಸರ್‌ಜೇಮ್ಸ ಮಾಂಟೀಥ ಪ್ರಾಯಿಝು ೨ ಕನ್ನಡದಲ್ಲಿ ೨ ನಂಬರು— ೧೩ ರೂ.
ಫ್ಹಿ. ಎನ್. ಅಡಕೋಳಿ ಡಿ. ಸ್ಕೂ. ಬೋ. ಕಾರವಾರ

೫. ಜನರಲ್ ಪ್ರಾಯಿಝು ೨ ಗಣಿತ ಶಾಸ್ತ್ರೀಯವಿಷಯಗಳಲ್ಲಿ ೧ ನಂಬರು— ೧೨ ರೂ.
ಫ್ಹಿ. ಬಿ. ಜೋಶಿ ಮ್ಯು. ಸ್ಕೂ. ಬೋ. ಹುಬ್ಬಳ್ಳಿ

೬. ಜನರಲ್ ಪ್ರಾಯಿಝು ೩ ಚಿತ್ರಕಲೆ ಕೈಕೆಲಸಗಳಲ್ಲಿ ೧ ನಂ. ೧೨ ರೂ. } ಇವರಿಬ್ಬರಲ್ಲಿ
ಫ್ಹಿ. ಟಿ. ಅಂಕಲಗಿ ಡಿ. ಸ್ಕೂ. ಬೋ. ವಿಜಾಪುರ } ಸಮನಾಗಿ
ಎನ್. ಡಿ. ಖಾಪರೆ ಮ್ಯು. ಸ್ಕೂ. ಬೋ. ಹುಬ್ಬಳ್ಳಿ } ಹಂಚಿದೆ.

೭. ಚಾಟಫೀಲ್ಡಮೆ ಮೋರಿಯಲ್ ಪ್ರಾಯಿಝು ಜನರಲ್ ಪ್ರೊಫಿಸಿಯನ್ಸಿ— ೧೬ ರೂ.
ಫ್ಹಿ. ಬಿ. ಜೋಶಿ ಮ್ಯು. ಸ್ಕೂ. ಬೋ. ಹುಬ್ಬಳ್ಳಿ

Sd/ H, B. Umadi
ಪ್ರಿನ್ಸಿಪಾಲರು ಟ್ರೇ. ಕಾ. ಧಾರವಾಡ.

ಧಾರವಾಡ ಹೆ. ಟ್ರೇ. ಕಾ. ದ ಸರ್ಟಿಫಿಕೇಟಿ ಪರೀಕ್ಷೆಯ ಪರಿಣಾಮ ೧೯೪೪

೧ನೆಯ ವರ್ಷ ಸೀನಿಯರ ಒಟ್ಟು ಗುಣಗಳು ೯೦೦

ಬಸವಣ್ಣೆವ್ವ ಹರ್ತಿ ೪೬೬ ಚಂದ್ರಾಬಾಯಿ ಕುಲಕರ್ಣಿ ೪೪೮ ಎಲ್ಲವ್ವ ಕೋಂಬಳೆ ೪೪೮ ಗಂಗೂಬಾಯಿ ಎವಲೇಕರ ೫೦೭ ಗಂಗವ್ವ ಮಡ್ಡಿಮನಿ ೪೩೬ ಗಂಗೂಬಾಯಿ ಬಾಪಟ ೪೪೨ ಗೌರಮ್ಮ ಶಾಸ್ತ್ರಿ ೪೪೪ ಗೌರವ್ವ ಎಲಿಗಾರ ೫೩೨ ಗ್ಲೋರ್ಮಿನ್ ರೇಗೋ ೪೪೫ ಇಂದಿರಾ ಪೈ ೪೪೬ ಕಮಲಾಬಾಯಿ ತಿಂಪಿ ೪೭೭ ಕಮಲಾಕ್ಷಿ ಕೊನೆ ಸಾಗರ ೫೧೩ ಕೃಷ್ಣಾಬಾಯಿ ಕುರ್ತಕೋಟಿ ೪೪೪ ಲೀಲಾಬಾಯಿ ಬಾಳಿಗಡ್ಡಿ ೪೭೭ ಮಲಪ್ರಭಾ ಹಿರೇಮಠ ೪೪೯ ಮೇರಿ ಝುಳಕೆ ೪೩೨ ಮೇರಿ ಪೇಂಟರ ೪೩೫ ನಂದಾದೇವಿ ದೇವ ೫೨೦ ನೀಲವ್ವ ತಳವಾರ ೫೦೬ ನೀಲಗಂಗವ್ವ ಮಠ ೪೬೦ ಪಾರ್ವತೆವ್ವ ಗಡ್ಡಿ ೪೪೭ ಪಾರ್ವತೆವ್ವ ಕತ್ತಿ ೪೨೭ ರೇಣವ್ವ ಸತ್ತಿಗೇರಿ ೪೯೦ ಸಖೂಬಾಯಿ ತಿಂಪಿ ೪೫೪ ಸಾರಾ ಅಂಚನ ೫೧೪ ಸಾತ್ವೀರವ್ವ ಹಿರೇಮಠ ೪೦೭ ಸೀತಾಬಾಯಿ ಹುನ್ನೂರ ೫೦೨ ಶಂಕರೆವ್ವ ಮಾಡಿಗಿ ೫೧೫ ಶಾಂತಾಬಾಯಿ ದೇಶಪಾಂಡೆ ೪೫೧ ಶರಾಬಾಯಿ

ಭವಾನಿ ೪೫೫ ಸುಭದ್ರಾ ಶಾನಭಾಗ ೪೧೩ ಸುಮಿತ್ರಾಬಾಯಿ ಸಾಂಗಲೀಕರ ೪೩೧ ತಾಯವ್ವ ಪಾಟೀಲ ೪೬೭ ತುಂಗವ್ವ ಭಂಡಿವಾಡ ೪೨೯ ಹುಸೇನಬಿ ಢವಳಗಿ ೪೪೪

ಕೆಳಗಿನ ವಿದ್ಯಾರ್ಥಿನಿಯರಿಗೆ ಅವರ ಹೆಸರಿನ ಮುಂದೆ ತೋರಿಸಿದ ವಿಷಯದಲ್ಲಿ ಮಾತ್ರ ಮುಂದಿನ ವರ್ಷ ಪರೀಕ್ಷೆಗೆ ಕೂಡಲು ಪರವಾನಗಿ ಕೊಟ್ಟಿದೆ.

ದೇವಕಿಬಾಯಿ ಶೆಟ್ಟಿ ಗಣಿತ ಎಲ್ಲವ್ವ ಕಿತ್ತೂರ ಶಿಕ್ಷಣ

೨ ನೆಯ ವರ್ಷ ಒಟ್ಟುಗುಣಗಳು ೯೭೫

ಅಂದವ್ವ ಹಿರೇಮಠ ೫೨೩ ಅನ್ನಮ್ಮ ಝುಳಕಿ ೫೨೦ ಬಾಲವ್ವ ಪಾಟೀಲ ೪೬೮ ಭಾಗೀರಥಿ ಪಾಟೀಲ ೫೭೭ ಚನ್ನವ್ವ ಬಿರಾದಾರ ೫೦೪ ಚಿನ್ನವ್ವ ಬನ್ನಾ ೬೦೫ ಎಮ್ಮೀಲಮ್ಮ ಜಾನ್ ೫೬೧ ಗಂಗೂಬಾಯಿ ಪ್ರಸಾದ ೫೨೩ ಗಂಗವ್ವ ಬಾರಕೇರ ೫೪೪ ಗಂಗೂಬಾಯಿ ಮುಳಗೀಕರ ೫೬೫ ಗುರುಸಿದ್ದವ್ವ ಮಾನ್ವಿ ೫೦೫ ಹಂಪವ್ವ ಉಪ್ಪಳದ ೪೫೩ ಹನಮವ್ವ ಸುಳೀಭಾವಿ ೫೩೬ ಜೊಸೆಫಿನ್ ರಾಡ್ರಿಗ್ಸ ೪೮೫ ಕಮಲಾ ಅರವಟಿಗಿ ೫೩೬ ಕಾಶೀಬಾಯಿ ಜಂಗಿನ ೫೪೩ ಲಕ್ಷ್ಮೀಬಾಯಿ ಸುಣಗಾರ ೫೧೫ ಮಹಾಲಿಂಗವ್ವ ಗೌಡರ ೫೪೫ ಮಂಕಾಳಿ ನಾಯಿಕ ೫೯೪ ಮರಿಯಾ ಆಡಿನ ೫೦೭ ನೀಲವ್ವ ಜಂಗಿನ ೬೦೪ ಪಾವಲಿನ ಫರ್ನಾಂಡೀಸ ೫೦೯ ರಾಜಮ್ಮಾ ಬಳಬಟ್ಟಿ ೫೬೨ ರೀತಾಬಾಯಿ ಎಲಿಶಿರೂರ ೫೧೩ ಸಾತವ್ವ ಪೂಜಾರ ೫೪೭ ಸಾವಿತ್ರವ್ವ ಬಡಿಗೇರ ೫೧೫ ಸಾಯವ್ವ ಹೊಲೇರ ೪೫೪ ಸುಶೀಲಾ ಜಂತ್ಲಿ ೫೦೩ ತಾಯವ್ವ ಅರಳೀಕಟ್ಟಿ ೫೨೧ ವೀರವ್ವ ಶೀಲವಂತ್ರ ೫೪೭

Sd| E. S. Elijah,
Lady Superintendent,
Training College for women, Dharwar.

ತಾ. ೩೧-೫-೪೪

ಪ್ರಕಟನೆ

ವರ್ಧಾ ರಾಷ್ಟ್ರೀಯ ಅಧ್ಯಾಪನ ಕೇಂದ್ರದಲ್ಲಿ ಶಿಕ್ಷಣ ಪಡೆದು ಸನ್ ೧೯೪೪ ನೆಯ ಸರ್ಟಿಫಿಕೇಟ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಶಿಕ್ಷಕ ಶಿಕ್ಷಕಿಯರ ಹೆಸರುಗಳು ಕೆಳಗೆ ಕೊಟ್ಟ ಪ್ರಕಾರ ಗುಣಾನುಕ್ರಮವಾಗಿರುವವು.

ಸಿ. ಚ. ಬಬಲೇಶ್ವರ ೬೫೬ ಗ. ನಾ. ಪಂಡಿತ ೬೫೧ ಬ. ಸೋ. ಮಲ್ಲೂರ ೬೪೪ ಬೊ. ಚ. ಕಲ್ಯಾಣಿ ೬೪೪ ಶ್ರೀ. ನಾ. ಕುಲಕರ್ಣಿ ೬೪೩ ವೀ. ರಾ. ಪಾಟೀಲ ೬೩೮ ವೆ. ನಾ. ಪಾಗಾ ೬೩೬ ಗೋ. ಗು. ನಾಡಿಗೇರ ೬೨೦ ವ. ವಿ. ಅಮಾನಿ ೬೦೬ ಭೀ. ಶ್ರೀ. ಅಧ್ಯಾಪಕ ೬೦೩ ಬಾ. ಬಾ. ಕಾಮತಿ ೬೯೬ ಸಾ. ಜ. ಯಜುರ್ವೇದಿ ೬೯೧ ಬಿ. ರಾ. ನಾಡವುರೋಹಿತ ೬೭೧ ಗೊ. ವೆ. ಜಕಾತಿ ೬೬೩ ತ. ರಾ. ಕುಲಕರ್ಣಿ ೬೬೨ ಸು. ಗ. ಹೆಗಡೆ ೬೫೬ ಲ. ಮು. ಚಿಕ್ಕರಡ್ಡಿ ೬೫೫ ರಾ. ನಾ. ವ್ಹಾವಳ ೬೪೪ ವೆ. ಕೃ. ವಡವಿ ೬೪೧ ಬಾ. ಭೀ. ಬಿರಾದಾರ ೬೪೧ ರಾ. ಜಿ. ಜೋಶಿ ೬೩೯ ನಾ. ಬ. ಜಾಲಿಹಾಳ ೬೩೫ ನೀ. ಕೃ. ಸರದೇಸಾಯಿ ೬೩೩ ಬ. ವಿ. ಬಿ. ಪಾಟೀಲ ೬೨೨ ಭೀ. ನ. ಮುಳಗುಂದ ೬೨೧ ತಾ. ಗೋ. ಮಾನೆ ೬೧೫ ಭೀ. ಅ. ಸೂಳೇಭಾವಿ ೬೧೩ ಸಿ. ದು. ಪಟ್ಟಣಶೆಟ್ಟಿ ೬೧೩

ರಾ. ಕೃ. ಗದಗಕರ ೬೦೦ ಅಂಟೋನೆವ್ಸಾ ಚಿ. ಝುಳಿಕಿ ೫೯೪ ಬಿ. ಜ. ೀಲ ೫೯೩
ವೆ. ಚಿ. ಜೋಶಿ ೫೯೦ ವೀ. ಭೀ. ಗುರ್ಲಹೊಸೂರ ೫೬೮ ಸ. ಹ. ಪಾಟೀಲ ೫೪೪
ಹ. ದೇ. ಹನಮಕ್ಕನವರ ೫೩೦ ಗ. ಬ. ಬೊಬ್ಲಿ ೫೦೨

ವರ್ಧಾ ರಾಷ್ಟ್ರೀಯ ಅಧ್ಯಾಪನ ಕೇಂದ್ರ
ಧಾರವಾಡ
ಶಾ. ೩೧–೫–೧೯೪೪

Sd/ R. V. Desai
ಮುಖ್ಯಾಧ್ಯಾಪಕ
ವ. ರಾ. ಅ. ಕೇಂದ್ರ ಧಾರವಾಡ

ಕನ್ನಡ ಬುಕ್ ಕಮೀಟಿಯವರಿಂದ ಮಂಜೂರಾದ ಪುಸ್ತಕಗಳು

ಟಪ್ಪಣಿ:— ಪ್ರಾ. ಪ್ರಾಥಮಿಕ; ಮಾ. ಮಾಧ್ಯಮಿಕ; ಟ್ರೇ. ಟ್ರೇನಿಂಗ; ಶಿ. ಶಿ. ಶಿಕ್ಷಕ;
ವಿ. ವಿದ್ಯಾರ್ಥಿ; ವಾ. ವಾಚನಾಲಯ; ಶಾ. ಶಾಲೆ.

ನಂ.	ಪುಸ್ತಕಗಳ ಹೆಸರು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರಾಗಿವೆ?
೧	**ಪ್ರಾಚೀನ ಜಗತ್ತು** ೨ನೆ ಆ. ೧೯೪೩.	ಕರ್ನಾಟಕ ಬುಕ್‌ಡಿಪೋ ಬೆಳಗಾವಿ	೦–೮–೬	ಪ್ರಾ. ಶಾ. ವಿ. ವಾ.
೨	**ಶೈಕ್ಷಣಿಕ ಮನಶ್ಶಾಸ್ತ್ರ** ೨ನೆ ಆ. ೧೯೪೩.	ಕರ್ನಾಟಕ ಸಾಹಿತ್ಯಮಂದಿರ ಧಾರವಾಡ	೧–೪–೦	ಟ್ರೇ. ಪಠ್ಯಪುಸ್ತಕ.
೩	**ಮೊದಲನೆಯ ದರ್ಜೆಯ ಕಥೆಗಳು** ೩ನೆ ಆ. ೧೯೪೩.	ಆಯ್. ಆರ್. ಆಕಳವಾಡಿ ಧಾರವಾಡ	೦–೧–೬	ಪ್ರಾ. ಶಾ. ವಿ. ವಾ.

ಸಾಭಾರ-ಸ್ವೀಕಾರ

ತೂರಯಾ ಮತ್ತು ಮಹೇಶ— ಇದೊಂದು ಕತೆಗಳ ಪುಸ್ತಕವು. ಶ್ರೀ. ಪ್ರೇಮಚಂದ ಮತ್ತು ಶ್ರೀ. ಶರಚ್ಚಂದ್ರ ಇವರು ಬರೆದವುಗಳನ್ನು ಶ್ರೀ. ಗುರುನಾಥ ಜೋಶಿ ಅವರು ಕನ್ನಡದಲ್ಲಿ ಅನುವಾದಿಸಿದ್ದಾರೆ. ಕತೆಗಳು ಅದ್ಭುತರಮ್ಯ ಹಾಗು ಹೃದಯದ್ರಾವಕವಾಗಿವೆ. ಕ್ರೌನ್ ಆಕಾರದ ೪೮ ಪುಟಗಳು. ಬೆಲೆ ೪ ಆಣೆಗಳು. ಪ್ರಕಾಶಕರು ಭಾರತೀಯ ಸಾಹಿತ್ಯಮಂದಿರ ಧಾರವಾಡ.

ಜೇನುಹುಟ್ಟಿನ ಗುಟ್ಟು— ಕ್ರೌನ್ ಆಕಾರದ ೩೦ ಪುಟಗಳ ಪುಸ್ತಕವಿದು. ಧಾರವಾಡ ಡಿಸ್ಟ್ರಿಕ್ಟ ರೂರಲ್ ಡೆವ್ಹಲೆಪಮೆಂಟ ಬೋರ್ಡಿನ ಜೇಅರಮನ್ನರು ಪ್ರಸಿದ್ಧಿಸಿದ್ದಾರೆ. ಅಗತ್ಯವುಳ್ಳವರು ಬೇಡಿದಲ್ಲಿ ಪುಕ್ಕಟೆಯಾಗಿ ದೊರೆಯುವದು. ಎಲ್ಲರೂ ಈ ಗುಟ್ಟನ್ನು ಅರಿಯುವದು ಒಳ್ಳೆಯದು.

ಜಲತರಂಗ— ಇದು ಹಿಂದುಸ್ತಾನಿ ಭಾಷೆಯ ನಾಗರಿ ಲಿಪಿಯ ಪುಸ್ತಕವು. ಕ್ರೌನ್ ಆಕಾರದ ೫೮ ಪುಟಗಳಿವೆ. ಬೆಲೆ ೮ ಆಣೆಗಳು. ಇದನ್ನು ಶ್ರೀ. ಗುರುನಾಥ ಜೋಶಿ ಅವರು ಸಂಪಾದಿಸಿದ್ದು, ಧಾರವಾಡದ ಭಾರತೀಯ ಸಾಹಿತ್ಯಮಂದಿರದವರು ಪ್ರಸಿದ್ಧಿಸಿದ್ದಾರೆ.

ಕನ್ನಡದಲ್ಲಿ ಕೀರ್ತಿವೆತ್ತ ಶ್ರೀ. ಅ. ನ. ಕೃಷ್ಣರಾಯರು, ಶ್ರೀ. ಬೆಟಗೇರಿ ಕೃಷ್ಣಶರ್ಮರು, ಶ್ರೀ. ಪಡುಕೋಣೆ ರಮಾನಂದರಾಯರು ಮೊದಲಾವರ ಕೃತಿಗಳನ್ನು ಹಿಂದುಸ್ತಾನಿಯಲ್ಲಿ ಪ್ರಕಟಿಸಿ, ಸಾಹಿತ್ಯದ ವಿಶಿಷ್ಟ ಪ್ರಕಾರವನ್ನು ಕೈಕೊಂಡುದರಿಂದ ಮುಂಬಯಿ ಸರಕಾರದ ಹಿಂದುಸ್ತಾನಿ ಬೋರ್ಡಿನಿಂದಲೂ ತಕ್ಕ ಮೆಚ್ಚುಗೆಯು ಈ ಪುಸ್ತಕಕ್ಕೆ ದೊರೆತಿದೆ.

ಮಕ್ಕಳ ಆಟಗಳು— ಇದು ಕ್ರೌನ್ ಆಕಾರದ ೩೦೪ ಪುಟಗಳ ಪುಸ್ತಕವು. ಶ್ರೀಮಾನ್ ವ್ಹಿ. ಕೆ. ಜವಳಿ ಬಿ. ಎ., (ಆನರ್ಸ್.) ಬಿ. ಟಿ., ಡಿಪ್. ಪಿ. ಎಡ್., ಅಧ್ಯಾಪಕ ಟ್ರೇನಿಂಗ್ ಕಾಲೇಜು, ಧಾರವಾಡ ಇವರು ಬರೆದಿರುವರು. ಬೆಂಗಳೂರಿನ ಸತ್ಯಶೋದ್ಧನ ಪ್ರಕಟನ ಮಂದಿರದವರು ಪ್ರಕಟಿಸಿರುವರು. ಬೆಲೆ ೩ ರೂ. ಇದರಲ್ಲಿ ಶಾರೀರಿಕ ಶಿಕ್ಷಣದ ಕ್ರಮ, ಪದ್ಧತಿಗಳು, ಮನೋರಂಜಕವಾದ ನೂರಾರು ಆಟಗಳು, ಬಯಲಾಟ ಪಂದ್ಯಾಟಗಳು, ಲಾಠಿ, ಲೇಝಿಮು, ಕವಾಯಿತು ಮೊದಲಾದವುಗಳ ವಿವೇಚನೆಯು ಸಾಕಷ್ಟು ಇರುವದು. ೧೧೨ ಚಿತ್ರಗಳಿಂದ ಕೂಡಿದ ಈ ಪುಸ್ತಕವು ಮಾಧ್ಯಮಿಕ–ಪ್ರಾಥಮಿಕ ಶಿಕ್ಷಕ–ಶಿಕ್ಷಕಿಯರಿಗೆ ತುಂಬ ಉಪಯುಕ್ತವಿದೆ.

ಪತ್ರಗಳ ಮುಖ್ಯಾಂಶಗಳು

ಧಾರವಾಡದಲ್ಲಿ ಜೇನು ಸಾಕುವ ವರ್ಗ ಧಾರವಾಡ ಜಿಲ್ಲೆಯ ಗ್ರಾಮಸುಧಾರಣಾ ಸಂಘದ ವತಿಯಿಂದ ಕಳೆದ ನವ್ಹಂಬರ ೧೫ ರಿಂದ ಡಿಶಂಬರ ೧೫ ರ ವರೆಗೆ ಒಂದು ವರ್ಗವು ನಡೆದು ಅದರಲ್ಲಿ ೫೭ ವಿದ್ಯಾರ್ಥಿಗಳು ಉತ್ತೀರ್ಣರಾದರು. ಮೆ. ಕಲೆಕ್ಟರ ಸಾಹೇಬರ ಹಸ್ತದಿಂದ ಪ್ರಮಾಣ ಪತ್ರಗಳನ್ನು ಕೊಡಿಸಲಾಯಿತು. ಆಗ "ಅರಬಸ್ತಾನದಂಥ ಉಸುಬಿನ ಬೈಲಿನಲ್ಲಿ ಈ ಉದ್ಯೋಗ ನಡೆದಿದೆ. ಅಂದ ಮೇಲೆ ಧಾರವಾಡದಂಥ ಸುಂದರ ಸ್ಥಾನದಲ್ಲಿ ಇದರ ಪ್ರಸಾರವಾಗದೇನು ಮಾಡೀತು" ಎಂದು ಅವರು ತಿಳಿಸಿದರು.

—ಶ್ರೀ. ಕೃ. ನಾ. ಗೋಸಾವಿ, ಧಾರವಾಡ

ಬೆಳವಡಿ (ಬೆಳಗಾವಿ ಜಿಲ್ಲೆ) ಇಲ್ಲಿಯ ಅ. ಮಾ. ಶ್ರೀ. ಸಂ. ಕೂ. ಖೋದಾನವುರ ಅವರು ವಿದ್ಯಾರ್ಥಿಗಳೊಂದಿಗೆ ವಾದವಿವಾದ, ನಾಟಕ, ಪ್ರವಾಸ ಮೊದಲಾದ ಶೈಕ್ಷಣಿಕ ಚಟುವಟಿಕೆಗಳನ್ನು ಕೈಕೊಂಡು ಜನಪ್ರಿಯರಾಗಿರುವರು.

—ಶ್ರೀ. ಜಿ. ಸಿ. ಬೆಳವಡಿ, ಅ. ಮಾ.

ಕೆಲಸಂಗ (ಬೆಳಗಾವಿ ಜಿಲ್ಲೆ) ದಲ್ಲಿ ಮಾರ್ಚ ೧೭ ನೆಯ ದಿವಸ ಡಿ. ಎಸ್. ಬಿ. ಮೆಂಬರರಾದ ಶ್ರೀ. ಆರ್. ಎಸ್. ಪಾಟೀಲ ಇವರ ಹಿರಿಯತನದಲ್ಲಿ; ಅ. ಡೆ. ಎ. ಇ. ಸ್ಥಾನದಿಂದ ನಿವೃತ್ತರಾಗುತ್ತಲಿರುವ ಶ್ರೀ. ಶೇಖ ಸಾಹೇಬರಿಗೆ ತಾಂಬೂಲ ಸಮಾರಂಭ ವಾಯಿತು.

—ಶ್ರೀ. ಎಸ್. ಕೆ. ಗುರುಸ್ವಾಮಿ ಶಿಕ್ಷಕರು

ಫಿಜಿಕಲ್ ಕ್ಯಾಂಪ್, ಬೆಳಗಾವಿಯ ಸಂಚಾಲಕರಾದ ಮೆ. ಸಿಗ್ಗಾವಿ ಅವರ ನೇತೃತ್ವದಲ್ಲಿ ಕುಡಚಿಯ ಪ್ರವಾಸವನ್ನು ಮಾಡಿದಾಗ ಅಲ್ಲಿಯ ವಿದ್ಯಾರ್ಥಿಗಳು, ಶಿಕ್ಷಕರು ತುಂಬ ನೆರವಾದರು. ಕಾಳಿನ ಕೊರತೆಯ ಇಂತಹ ದಿನಗಳಲ್ಲಿ ಕೂಡ ಎಲ್ಲರಿಗೆ ಊಟದ ವ್ಯವಸ್ಥೆಯನ್ನು ಮಾಡಿದ್ದು ಅಭಿನಂದನೀಯವು.

—ಶ್ರೀ. ತುಕ್ಕಣ್ಣವರ.

ಕುಡಚಿ (ಬೆಳಗಾವಿ ತಾಲೂಕ) ಯಲ್ಲಿ ೨೫-೧-೧೯೪೪ ನೆಯ ದಿವಸ ಮೆ. ವ್ಹಾಯಿಸ ರಾಯರು ಶಾಲೆಗೆ ಭೆಟ್ಟಿಯನ್ನು ಕೊಟ್ಟು ಸಂತೋಷವನ್ನು ವ್ಯಕ್ತಮಾಡಿದರು. ಅವರ ಸಂಗಡ ಗವ್ಹರ್ನರರು, ಕಮಿಶನರರು, ಕಲೇಕ್ಟರರು ಅಡ್ಮಿನಿಸ್ಟ್ರೆಟಿವ್ಹ ಆಫೀಸರರು ಇದ್ದರು. ವಿದ್ಯಾರ್ಥಿಗಳ ಕವಾಯಿತು, ಶಿಕ್ಷಕರ ಚಟುವಟಿಕೆ ಉತ್ಸಾಹಗಳು ಜೆನ್ನಾಗಿದ್ದವು. —ಹೆ. ಮಾ. ಕುಡಚಿ

ಮುದ್ದೇಬಿಹಾಳ (ವಿಜಾಪುರ ಜಿಲ್ಹೆ) ಅ. ಡೆ. ಎ. ಇ. ಅವರಾದ ಶ್ರೀಮಾನ್ ಕೋರಬು ಅವರು ನಿವೃತ್ತರಾಗುತ್ತಲಿರುವದರಿಂದ ಮುದ್ದೇಬಿಹಾಳದ ಮಹಾಜನರು ೧೨-೩-೪೪ ನೆಯ ದಿವಸ ಸಭೆ ನೆರೆಯಿಸಿ ತಮ್ಮ ಪ್ರೇಮಾದರಗಳನ್ನು ವ್ಯಕ್ತಪಡಿಸಿದರು.

—ಶ್ರೀ. ಚಿ. ತು. ವಾಳವೇಕರ

ಸೂಡಿ (ಧಾರವಾಡ ಜಿಲ್ಹೆ) ೬-೨-೪೪ ನೆಯ ದಿವಸ ರೋಣದಲ್ಲಿ ಜರುಗಿದ ಸ್ಪರ್ಧೆಯಲ್ಲಿ ಇಲ್ಲಿಯ ಹೆಣ್ಣುಮಕ್ಕಳ ಶಾಲೆಯ ಕುಮಾರೀ ಸಂಘದವರಿಗೆ ಶ್ರೀ. ಸಂಗನಗೌಡರು ಪಾಟೀಲ ರೋಣ ಇವರಿಂದ ಇಡಲ್ಪಟ್ಟ ಸುಮಾರು ೨೦೦ ರೂ. ಬೆಲೆಯ ಬೆಳ್ಳಿಯ ಸರಸ್ವತೀ ಶೀಲ್ಡ ದೊರೆಯಿತು. ರೇಶಿಮೆ ಹುಳಸಾಕುವದಕ್ಕಾಗಿ ಒಂದು, ಬೇರೆ ಚಟುವಟಿಕೆಗಳಿಗಾಗಿ ಒಂದು, ಹೀಗೆ ಎರಡು ಬೆಳ್ಳಿಯ ಕಪ್ಪುಗಳು ಮೆಚ್ಚುಗೆಯಾಗಿ ದೊರಕಿರುವವು. ಜೇನುಹುಳ ಸಾಕಿರುವದಕ್ಕಾಗಿ ಶ್ರೀ. ವ್ಹಿ. ಸಿ. ಬಸರಿಗಿಡದ ಅವರು ೫ ರೂ. ಬಹುಮಾನ ಕೊಟ್ಟರು ಟಪಾಲ ವೆಚ್ಚಕ್ಕಾಗಿ ೧೪ ಆಣೆ ಟಿಕೇಟಕಳಿಸಿದ್ದಾದರೆ ರೇಶಿಮೆ ಹುಳಗಳ ತತ್ತಿಗಳನ್ನು ಕಳಿಸುವೆವು.

—ಶ್ರೀ. ಗಂಗಾದೇವಿ ಪಾಟೀಲ ಕುಮಾರಿ ಸಂಘ

ಹೊಸರಿತ್ತಿ (ಹಾವೇರಿ ತಾಲೂಕು) ೧೪-೪-೪೪ ನೆಯ ದಿವಸ ಶಿರಹಟ್ಟಿಯ ಫಕೀರಸ್ವಾಮಿಗಳು ಶಾಲೆಗೆ ದಯಮಾಡಿಸಿ ವಿದ್ಯಾರ್ಥಿಗಳ ಗಾಯನ, ಸಂಭಾಷಣೆ ಶಾರೀರಿಕ ಚಟುವಟಿಕೆಗಳನ್ನು ಕಂಡು ಆನಂದಬಟ್ಟು ಡ್ರಮ್ ಮೊದಲಾದ ವಾದ್ಯಗಳಿಗಾಗಿ ೬೫ ರೂ. ಕೊಟ್ಟರು. ಕಡಿಮೆ ಬಿದ್ದ ಹಣ ಕೊಡುವೆವೆಂದೂ ವಾಗ್ದಾನ ಮಾಡಿರುವರು.

—ಶ್ರೀ. ತಾ. ಭ. ಪಡ್ಡರ ಆ. ಮಾ. ಹೊಸರಿತ್ತಿ

ಕೊಡಗಾನೂರು (ವಿಜಾಪುರ ಜಿಲ್ಹೆ) ಶಾಲಾವಾಚನಾಲಯದ ಏಳನೆಯ ವರ್ಷದ ವರದಿಯು:— ವಾಚನಾಲಯವು ರಜಿಸ್ಟರ ಆಗಿದ್ದು ೨೦೦ ಪುಸ್ತಕಗಳಿವೆ. ಹಲವು ವೃತ್ತಪತ್ರಿಕೆಗಳು ಬರುವವು ಮಹಾಜನರು ಸದಭಿಪ್ರಾಯಗಳನ್ನು ಇತ್ತಿದ್ದಾರೆ.

—ಶ್ರೀ. ಚಿ. ತು. ವಾಳನೇಕರರು ಕಾರ್ಯದರ್ಶಿ

ಹೊಸತೋಟಿ (ಕಾರವಾರ ಜಿಲ್ಹೆ) ಊರ ಹಿರಿಯರು ೧೬-೪-೪೪ ನೆಯ ದಿವಸ ಶಾಲೆಯಲ್ಲಿ ಶ್ರೀ. ಸರಸ್ವತಿ ವಾಚನಾಲಯವನ್ನು ಸ್ಥಾಪಿಸಿದರು.

—ಶ್ರೀ. ಸ್ಕೂಲ್ ಮಾಸ್ತರ ಹೊಸತೋಟ

ಎಡಹಳ್ಳಿ (ವಿಜಾಪುರ ಜಿಲ್ಹೆ) ೧೫-೪-೧೯೪೪ ನೆಯ ದಿವಸ ಅ. ಡೆ. ಎ. ಇ. ಅವರಾದ ಶ್ರೀ. ಗುಡಿಸಾಗರರ ಹಿರಿಯತನದಲ್ಲಿ ಸಮ್ಮೇಲನವಾಯಿತು. ವಾತ, ಚರ್ಚೆ, ಡಂಬೆಲ್ಸ ಲೇಝಿಮು, ಪಂದ್ಯಾಟಗಳೆಲ್ಲವೂ ಚಿತ್ತಾಕರ್ಷಕವಾಗಿದ್ದವು.

—ಶ್ರೀ. ಆರ್. ಎನ್. ಹಬ್ಬು ಹೆ. ಮಾ. ಮುಂಡ್ಹಗನೂರ

ತೆಗ್ಗಿ (ವಿಜಾವುರ ಜಿಲ್ಹೆ) ೧೨-೪-೪೪ ನೆಯ ದಿವಸ ಇಲ್ಲಿ ಶಿಕ್ಷಕರ ಸಮ್ಮೇಲನವು ಯಶಸ್ವಿಯಾಗಿ ಸಾಗಿತು. —ಶ್ರೀ. ಗು. ದೇಸಪಾಂಡೆ ಹೆ. ಮಾ.

ಬಾದಾಮಿ (ವಿಜಾಪುರ ಜಿಲ್ಹೆ) ಇಲ್ಲಿಯ ಹೆಣ್ಣುಮಕ್ಕಳ ಪ್ರೌಢ ವರ್ಗದಿಂದ ೧೫ ಜನರು ತೇರ್ಗಡೆಯಾದರು. ಹೆಣ್ಣುಮಕ್ಕಳ ಧರ್ಮಾರ್ಥ ವಾಚನಾಲಯವು ಉತ್ತಮ ರೀತಿಯಿಂದ ಸಾಗಿದೆ. —ಹೆಡ್‌ಮಿಸ್ಟ್ರೆಸ್ ಬಾದಾಮಿ ಕ. ಹೆ. ಶಾಲೆ

ಹುಬ್ಬಳ್ಳಿ ಉರ್ದು ಹೆಣ್ಣುಮಕ್ಕಳ ಶಾಲೆ, ನಂಬರ ೧— ೧೯೪೪ ರ ಮಾರ್ಚದಲ್ಲಿ ಆದ ಹೆಣ್ಣುಮಕ್ಕಳ ಮುಲ್ಕೀ ಪರೀಕ್ಷೆಯಲ್ಲಿ ಈ ಶಾಲೆಯ ೧೧ ಹುಡುಗಿಯರು ಪಾಸಾದರು. ಇಷ್ಟು ಹುಡುಗಿಯರು ಇದುವರೆಗೆ ಮತ್ತೆಲ್ಲಿಯೂ ಆಗಿಲ್ಲ.

—ಶ್ರೀ. ಎಚ್. ಅಯ್. ಮೋಮಿನ್ ಹುಬ್ಬಳ್ಳಿ

ಶಿರಹಟ್ಟಿ (ಸಾಂಗಲಿ ಸಂಸ್ಥಾನ) ಅ. ಎಜ್ಯುಕೇಶನಲ್ ಇನಸ್ಪೆಕ್ಟರರಾದ ಶ್ರೀ. ಬಿ. ಬಿ. ಕುಲಕರ್ಣಿ ಅವರು ಶಾಲೆಯ ವಾರ್ಷಿಕ ಪರೀಕ್ಷೆಗೆ ಬಂದಕಾಲದಲ್ಲಿ ಶಿಕ್ಷಕರ ವಾಕ್ ಸ್ಪರ್ಧೆಯ ಹೊಸತಾದ ಉಪಕ್ರಮವೊಂದನ್ನು ಪ್ರಾರಂಭಿಸಿದರು. ಯಶಸ್ವಿಯಾದ ಶಿಕ್ಷಕರಿಗೂ, ಬಾಲ-ಬಾಲಿಕೆಯರಿಗೂ ಪಾರಿತೋಷಕಗಳನ್ನು ಕೊಟ್ಟರು.

—ಶ್ರೀ. ಆರ್. ಬಾಲೇಹೊಸೂರ

ಉಗಾರ (ಬೆಳಗಾವಿ ಜಿಲ್ಲೆ) ಇಲ್ಲಿ ಜನಪ್ರಿಯರಾಗಿ ೩೦ ವರ್ಷ ಕೆಲಸಮಾಡಿದ ಶ್ರೀ. ದ. ಗೋ. ವಠಾರಕರ ಇವರಿಗೆ ಅಥಣಿ ತಾ. ಮಾ. ಕೆಲಸದಲ್ಲಿ ವರ್ಗವಾದುದರಿಂದ ಊರ ಹಿರಿ-ಕಿರಿಯರೂ ಗ್ರಾಮ ಪಂಚಾಯತಿಯವರೂ ಬೀಳ್ಕೊಡುವ ಸಮಾರಂಭವನ್ನು ಜರುಗಿಸಿದರು.

—ಮಿರ್ಜಿ ಅಣ್ಣಾರಾಯರು

ನೇಸರಗಿ (ಬೆಳಗಾವಿ ಜಿಲ್ಲೆ) ಶಾಲೆಯಲ್ಲಿ ಗ್ರಾಮಪಂಚಾಯತಿಯವರು ಡಿ. ಎಲ್. ಬಿ. ಪ್ರೆಸಿಡೆಂಟರಾದ ಶ್ರೀ. ಕೌಜಲಗಿಯವರಿಗೆ ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಸುಮಾರು ಇನ್ನೂರು ಜನರು ನೆರೆದಿದ್ದರು.

—ಶ್ರೀ. ವ್ಹಿ. ಎಸ್. ಪಾಟೀಲ ಪೀ. ಮಾಸ್ತರ

ಬೆಂಡಿಗೇರಿ (ಬೆಳಗಾವಿ ತಾಲೂಕು) ಗ್ರಾಮ ವಾಚನಾಲಯದ ವಾರ್ಷಿಕೋತ್ಸವದ ಕಾಲದಲ್ಲಿ ಶ್ರೀ. ಎಸ್. ಡಿ. ಇಂಚಲ ಬಿ. ಎ., ಬಿ. ಟಿ., ಮಾಸ್ತರರು ಕೆಲವು ಪುಸ್ತಕಗಳನ್ನು ಕಾಣಿಕೆಯಾಗಿ ಕೊಟ್ಟರು.

—ಶ್ರೀ. ಹೊನ್ನಿದಿಬ್ಬ ಸೆ. ಗ್ರಾ. ವಾ. ಬೆಂಡಿಗೇರಿ

ಬಯಕೆಯೇ ಬಡತನ; ತೃಪ್ತಿಯೇ ಸಂಪತ್ತು

(ಸಾಕ್ಷರಿಗಳಾದ ಪ್ರಬುದ್ಧರಿಗಾಗಿ)

ಒಂದು ದಿನ ಮುಂಜಾನೆ ಇನ್ನೂ ಸೂರ್ಯೋದಯವಾಗಿರಲಿಲ್ಲ. ಒಬ್ಬ ಭಿಕ್ಷುಕನು ಆಗಲೆ ಎದ್ದು ಮನೆ ಮನೆ ತಿರಿದುಕೊಳ್ಳಲು ಹೊರಟನು. ಇದು ಬಡವರ ಮನೆ, ಇದು ಶ್ರೀಮಂತರ ಮನೆ, ಎಂಬ ಭೇದವಿಲ್ಲದೆ ಪ್ರತಿ ಮನೆಯನ್ನೂ ಹೊಕ್ಕು ಹೊರಡುವನು. ಅವರು ಕೊಟ್ಟದ್ದನ್ನು ಭಿಕ್ಷಾಪಾತ್ರೆಯಲ್ಲಿ ಹಾಕಿಕೊಂಡು ಮುಂದೆ ಸಾಗುವನು. ಮೈತುಂಬ ಹರಕು ಕಂತೆಗಳು; ಹೆಗಲಲ್ಲಿ ಅಲೆದಾಡುವ ಜೋಳಿಗೆ; ಕೈಯಲೊಂದು ಭಿಕ್ಷಾ ಪಾತ್ರೆ, ಇವಿಷ್ಟೇ ಅವನ ಸುಖ ಸಾಧನಗಳು.

ಆ ಊರು ಅವನಿಗೆ ಚಿರಪರಿಚಿತವಾದುದು. ಇದು ಇವನ ಮನೆ;

ಅದು ಅವನ ಮನೆ, ಎಂಬುದನ್ನು ಅವನು ಚೆನ್ನಾಗಿ ಬಲ್ಲನು. ಮನೆ ಮನೆಗೆ ಹೋಗುವಾಗ ಅವನು ಅವರವರ ಸ್ಥಿತಿಗತಿಗಳನ್ನು ಆಲೋಚಿಸುವನು. ಮನಸ್ಸಿಗೆ ತೋರಿದ್ದನ್ನೆಲ್ಲ ಗೊಣಗುವನು. "ಏನಪ್ಪಾ ಈ ಶ್ರೀಮಂತರ ದುರಾಶೆ? ಎಷ್ಟು ಸಂಪತ್ತಿದ್ದರೂ ಮತ್ತೂ ಬೇಕು, ಇನ್ನೂ ಬೇಕು, ಎಂಬ ಇವರ ಆಶೆಗೆ ಕೊನೆಯೇ ಇರದು. ಅವನು ಇಷ್ಟ ಕೊಡಬೇಕು; ಮತ್ತೊಬ್ಬನಿಂದ ಇಷ್ಟು ಬರಬೇಕು, ಎಂದು ಸಾವಿರ ಸಾವಿರಗಳ ಲೆಕ್ಕ ಹಾಕುತ್ತಾರೆ." ಎಂದು ನೊಂದುಕೊಳ್ಳುವನು.

ಹೋಗಹೋಗುತ್ತ ಅವನೊಂದು ಮನೆಯ ಮುಂದೆ ಬಂದು ನಿಂತನು. "ಅಹಾ! ಇವನೆಂಥ ಮೂರ್ಖ! ಒಂದಾನೊಂದು ಕಾಲದಲ್ಲಿ ಈ ಊರಿಗೇ ಶ್ರೀಮಂತನಾಗಿದ್ದನು. ಲಕ್ಷ ಲಕ್ಷ ವರಹಗಳ ವ್ಯವಹಾರ ಮಾಡುವ ಸಾವುಕಾರನಾಗಿದ್ದನು. ಅಷ್ಟೇ ಸಂಪತ್ತನ್ನು ಇಟ್ಟುಕೊಂಡು ಸುಮ್ಮನಿರಬಾರದಾಗಿತ್ತೇ? ಹಾಗಿದ್ದರೆ ಹತ್ತು ತಲೆಗಳ ವರೆಗೂ ಇವನ ಕುಲ ಕುಟುಂಬದವರೆಲ್ಲ ಉಂಡುಟ್ಟು ಸುಖದಿಂದ ಇರಬಹುದಾಗಿದ್ದಿತು. ಕಡುಲೋಭಿಯಾದ ಇವನಿಗೆ ಅಂಥ ಸುಬುದ್ಧಿ ಹೇಗೆ ಬರಬೇಕು? ದೊಡ್ಡ ದೊಡ್ಡ ಹಡುಗುಗಳನ್ನು ಕಟ್ಟಿಸಿ ಬೆಲೆಯುಳ್ಳ ಸರಕುಗಳನ್ನು ತುಂಬಿ ಪರದೇಶಕ್ಕೆ ಕಳುಹಿದನು. ತನ್ನ ಮನೆಯ ಮುಂದೆ ಹೊನ್ನಿನ ಪರ್ವತವನ್ನೇ ಒಟ್ಟಿಕೊಳ್ಳಬೇಕೆಂದು ಬಯಸಿದನು. ಶ್ರೀಮಂತರಿಗೆ ಜಗತ್ತೆಲ್ಲವೂ ತಮ್ಮದೇ ಆದರೂ ತೃಪ್ತಿಯಾಗುವದಿಲ್ಲ. ಹಡಗುಗಳೆಲ್ಲವೂ ಹೊರಟವು. ಅವುಗಳ ಸಂಗಡಲೇ ಇವನ ಮನೆಯ ಭಾಗ್ಯಲಕ್ಷ್ಮಿಯೂ ಹೊರಟು ನಡೆಸಳು. ಸಮುದ್ರದಲ್ಲಿ ಪ್ರಯಾಣ ಮಾಡುತ್ತಿರುವಾಗ ಬಿರುಗಾಳಿಗೆ ಸಿಲುಕಿ ಹಡಗುಗಳೆಲ್ಲವೂ ಮುಳುಗಿಹೋದವು. ಇವನ ಸಕಲ ಸಂಪತ್ತೂ ಸಮುದ್ರದ ತಳವನ್ನು ಕಂಡಿತು. ಲಕ್ಷಾಧೀಶನಾಗಿದ್ದವನು ಭಿಕ್ಷಾಧೀಶನಾಗಿ ಹೋದನು" ಎಂದು ಆ ಮನೆಯ ಯಜಮಾನನ ವಿಷಯವಾಗಿ ಗೊಣಗುತ್ತ ಮುಂದೆ ಸಾಗಿದನು.

ಅವನ 'ಗುಣುಗುಣು' ಮಾತು ಇಲ್ಲಿಗೇ ಮುಗಿಯಲಿಲ್ಲ. "ನಾನಾದರೂ ಹಾಗೆಂದೂ ಮಾಡುತ್ತಿದಿಲ್ಲ. ನನಗೆ ದೇವರು ಹೊಟ್ಟೆತುಂಬ ಅನ್ನ, ಮೈ ತುಂಬ ಬಟ್ಟೆ, ಇಷ್ಟು ದಯಪಾಲಿಸಿದ್ದರೆ, ಮೇಲೆ ಒಂದು ಕವಡೆಯನ್ನೂ ಬೇಡುತ್ತಿದ್ದಿಲ್ಲ. ಸದಾ ತೃಪ್ತಿಯಿಂದ ಇದ್ದು ಭಗವಂತನ ಧ್ಯಾನದಲ್ಲಿಯೇ ಕಾಲ ಕಳೆಯುತ್ತಿದ್ದೆನು."

"ಏನು! ಈ ಮಾತು ನಿಜವೇ" ಎನ್ನುತ್ತ ಪರಮ ತೇಜಃಶಾಲಿನಿಯಾದ ಸ್ತ್ರೀ ಮೂರ್ತಿಯೊಂದು ಅವನ ಎದುರಿಗೆ ನಿಂತಿತು.

"ನಾನು ನಿನ್ನ ಭಾಗ್ಯದೇವತೆ, ವರವನ್ನು ಬೇಡಿಕೋ. ಆದರೆ ನಿನ್ನ ಮಾತನ್ನು ಮಾತ್ರ ಮರೆಯದಿರು. ಬಯಕೆಯೇ ಬಡತನ; ತೃಪ್ತಿಯೇ ಸಂಪತ್ತು, ಎಂಬುದನ್ನು ನಿಜವಾಗಿಯೂ ನಂಬುವೆಯಾ"

"ಹೌದು ತಾಯೀ, ಹೊಟ್ಟೆತುಂಬ ಅನ್ನ ಮೈತುಂಬ ಬಟ್ಟೆ ಸಿಕ್ಕರೆ ಸಾಕು."

"ಹಿಡಿ ನಿನ್ನ ಭಿಕ್ಷಾಪಾತ್ರೆಯನ್ನು! ಈ ಬಂಗಾರದ ನಾಣ್ಯಗಳನ್ನು ಸುರಿಯುತ್ತೇನೆ. ಆದರೆ ಒಂದು ಮಾತು. ನಿನ್ನ ಭಿಕ್ಷಾ ಪಾತ್ರೆಯಲ್ಲಿ ಬಿದ್ದ ನಾಣ್ಯಗಳೆಲ್ಲಾ ಚೊಕ್ಕ ಬಂಗಾರದವು. ನೆಲಕ್ಕೆ ಬಿದ್ದುದೆಲ್ಲಾ ಮಣ್ಣು ಹಂಚಾಗುವದು."

"ಹಾಗೇ ಆಗಲಿ ತಾಯೀ" ಎನ್ನುತ್ತ ಭಿಕ್ಷುಕನು ಭಿಕ್ಷಾಪಾತ್ರೆಯನ್ನು ಹಿಡಿದನು. ಭಾಗ್ಯದೇವತೆ ಬಂಗಾರದ ನಾಣ್ಯಗಳನ್ನು ಸುರಿದಳು. ಆ ನಾಣ್ಯಗಳ ಝಗಿರುಗಿಸುವ ಬೆಳಕಿನಿಂದ ಅವನ ಕಣ್ಣು ಕುಕ್ಕಿ ಬುದ್ಧಿ ಮಂಕಾಗಹತ್ತಿತು.

"ಹಾ! ಎಚ್ಚರಿಕೆ ನಿನ್ನ ಪಾತ್ರೆ ತುಂಬಿತು. ನಿನ್ನ ಜೀವಮಾನದ ವರೆಗಿನ ಹೊಟ್ಟೆ–ಬಟ್ಟೆಗಳಿಗೆ ಸಾಕೆನ್ನಿಸುವದು."

"ಇನ್ನೂ ಸ್ವಲ್ಪ ಹಿಡಿಯುವಂತಿದೆ ತಾಯೀ!"

"ಭಿಕ್ಷಾ ಪಾತ್ರೆಯು ತುಂಬಿತು. ಅದು ಮುರಿಯುವಂತೆ ರಟ, ರಟ, ದನಿಯಾಗುತ್ತಿದೆ."

"ಇನ್ನೂ ನಾಲ್ಕೈದು ನಾಣ್ಯಗಳು ಬೀಳಲಿ." ಭಾಗ್ಯದೇವತೆ ಬೀಳುವ ನಾಣ್ಯಗಳನ್ನು ಎಣಿಸಿದಳು—ಒಂದು, ಎರಡು, ಮೂರು. ಭಿಕ್ಷುಕನಿಗೆ ತೃಪ್ತಿಯಿಲ್ಲ. ನಾಣ್ಯಗಳ ಪ್ರವಾಹವನ್ನು ಮಂಕು ಬುದ್ಧಿಯಿಂದ ನೋಡುತ್ತಿದ್ದಾನೆ.

ಭಿಕ್ಷಾಪಾತ್ರೆಯ ತಳವು ಹರಿದು ಬಿದ್ದಿತು. ನಾಣ್ಯಗಳೆಲ್ಲಾ ನೆಲದಲ್ಲಿ ಹರವಿ ಬಿದ್ದು ಮಣ್ಣು ಹಂಚಾದವು. ಭಾಗ್ಯದೇವತೆಯೂ ಅದೃಶ್ಯಳಾದಳು. ಭಿಕ್ಷುಕನ ಕೈಯಲ್ಲಿಯ ಭಿಕ್ಷಾಪಾತ್ರೆಯು ಮಾತ್ರ ಸ್ಥಿರವಾಗಿ ಉಳಿಯಿತು. ಈಗ ಅದೂ ಕೂಡ ಒಡೆದು ತಳಕಳಚಿ ಹೋಗಿದೆ. ಜನರು ನೀಡಿದ ಹಿಡಿ ಜೋಳವೂ ಕೂಡ ಅದರಲ್ಲಿ ನಿಲ್ಲದು. ಮುಂದೇನು ಗತಿ?

ಗಣಿತ ಶಿಕ್ಷಕ

೪೧೨ ಪುಟಗಳು ಂ ಬೆಲೆ ೧ ರೂ. ೩ ಆಣೆ ಂ ೫-೬-೭ನೆಯ ಇ. ಗಳಿಗಾಗಿ

೨-೩ ಕ್ಲಾಸುಗಳು ಒಬ್ಬ ಮಾಸ್ತರನ ಕಡೆಗೆ ಇರುವಂಥ ಶಾಲೆಗಳಲ್ಲಿ ಗಣಿತ ಶಿಕ್ಷಕವು ನಿಜವಾಗಿಯೇ ಗಣಿತ-ಶಿಕ್ಷಕನಾಗಿ ಸಹಾಯಕವಾಗಿಲ್ಲವೇ? ೧೦ವರ್ಷ ಅನುಭವ ತಕ್ಕೊಂಡವರಿಗೆ ಇದರ ಬಗ್ಗೆ ಹೆಚ್ಚಿಗೆ ವರ್ಣಿಸುವದು ಬೇಡ. ಇಷ್ಟರಲ್ಲಿಯೇ ಎಲ್ಲರ ಪ್ರೀತಿಗೆ ಪಾತ್ರವಾಗಿ ಅನೇಕಸಾರೆ ಮುದ್ರಣ ಹೊಂದಿದೆ. ಈಗಿನ ತುಟಾಗ್ರತೆಯ ಕಾಲದಲ್ಲಿ ವೆಚ್ಚ ಮಾಡಿದ ಹಣದಿಂದ ಬಹಳ ಲಾಭವಾಗಬೇಡವೇ?

ಕೊರತೆ ಇಲ್ಲ ಂ ಬೆಲೆ ಕಡಿಮೆ ಂ ವೆಚ್ಚವಿಲ್ಲದೆ ಪೂರೈಕೆ

ಪುಸ್ತಕಗಳು ಕರ್ನಾಟಕದ ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ದೊರೆಯುತ್ತವೆ. ದೊರೆಯುವದಿಲ್ಲೆಂದು ಅನಿಸಿದರೆ ನಿಮಗೆ ಬೇಕಾಗುವಷ್ಟು ಪ್ರತಿಗಳ ಮೂಲಬೆಲೆಯನ್ನು ಮನಿಯಾರ್ಡರದಿಂದ ಕಳಿಸಿ ಪಾವತಿಗಳನ್ನು ಕಾಯ್ದಿಡಿರಿ. ಅವನ್ನು ತೆಗೆದುಕೊಂಡು ಯಾವ ವೆಚ್ಚವೂ ಇಲ್ಲದೆ ಪುಸ್ತಕ ಕೊಡುವಂತೆ ನಿಮ್ಮ ಸನಿಹದ ಪುಸ್ತಕವ್ಯಾಪಾರಿಗಳಲ್ಲಿ ಇಲ್ಲವೆ ದೊಡ್ಡ ಸಾಲೆಗಳಲ್ಲಿ ವ್ಯವಸ್ಥೆ ಮಾಡಲಾಗುವದು. ಶಕ್ಯವಾದರೆ ನಿಮ್ಮ ಊರಿಗೇ ತಂದುಕೊಡಬಹುದು. ಹೆಚ್ಚಿನ ವಿವರಕ್ಕೆ ಬರೆಯಿರಿ.

ವಿಳಾಸ :— ಬ. ದು. ಹಿರೇಮಠ, ಮಾಸ್ತರ ವಿಜಾಪುರ.

ಹೊಸ ಪುಸ್ತಕಗಳಿಗೆ ತ್ವರೆಮಾಡಿರಿ ಲಾಭಪಡೆಯಿರಿ!

ಹೊಸ ಪದ್ಧತಿಯ

(೧) ಹಿಂದೀ ಜಮಾಖರ್ಚು ಭಾಗ ೧

(ಮನೆಯ ಜಮಾಖರ್ಚು)

ಸರಕಾರದವರು ಈ ಪುಸ್ತಕವನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಿರುವರು. ಇದು ೫-೬ನೆಯ ಇಯತ್ತೆಯವರಿಗೂ ಹೆಣ್ಣು ಮಕ್ಕಳ ಮುಲ್ಕೀಪರೀಕ್ಷೆಗೂ ಉಪಯುಕ್ತವಿದೆ.

ಬೆಲೆ: ೮ ಆಣೆ

೨. ಆರಂಭದ ಜಮಾಖರ್ಚು : ೪ನೆಯ ಇಯತ್ತೆಯವರಿಗೆ ಉಪಯೋಗವಿದೆ. ಬೆಲೆ : ೩ ಆಣೆ

೩. ಅಂಗಸಾಧನ ಶಿಕ್ಷಕ : ಬೆಲೆ : ೪ ಆಣೆ

೪. ಗಣಿತಸಾರ ಸಂಗ್ರಹ : ಇದು ಈಗಿನ ಪರೀಕ್ಷೆಯ ಪದ್ಧತಿಯಂತಿರುವದರಿಂದ ಸ್ಕಾಲರ ಮತ್ತು ಮುಲ್ಕೀ ಪರೀಕ್ಷೆಯವರಿಗೆ ಉಪಯುಕ್ತವಿದೆ.

ಬೆಲೆ: ೪ ಆಣೆ

ಹೊಸ ಪದ್ಧತಿಯ

ಹಿಂದೀ ಜಮಾಖರ್ಚು ಭಾಗ ೨

(ವ್ಯಾಪಾರಿ ಜಮಾಖರ್ಚು)

ಇದರಲ್ಲಿ ಹುಂಡಿ, ಚೆಕ್ಕು, ಮನಿಯಾರ್ಡರ, ಬಡ್ಡೀ ಅಕರಣೆ ಜಮಾಖರ್ಚಿನ ಇತರ ವಹಿಗಳು, ಯಾದಿಗಳ ನಮೂನೆಗಳು, ಪ್ರಶ್ನಗಳು ಪ್ರಶ್ನಕಾಗದಗಳು ಇರುವವಲ್ಲದೆ, ಒಳ್ಳಲತನ ಒಲವಿನ ಶಾಲೆಯ ವಿದ್ಯಾರ್ಥಿಗಳ ಸಲುವಾಗಿ ಬರೆದ ಜಮಾಖರ್ಚು ಅಂದರೆ ಡೇಲಿ ಲೇಬರ ಶೀಟ, ವೀಕಲಿ ಮಸ್ಟರ ರೋಲ್, ಕಲ್ಟಿವೇಶನ್ ಶೀಟ ಮುಂತಾದವುಗಳ ಪತ್ರಿಕೆಗಳೂ ಕಬುಲಾಯತಿ, ಬಾಡಿಗೆಯ ಪತ್ರಗಳ ನಮೂನೆಗಳೂ ಇರುವದರಿಂದ ಇದು ೭ನೆಯ ಇಯತ್ತೆಯವರಿಗೂ, ಅಗ್ರಿಕಲ್ಚರಲ್ ಬಾಯಿಸ್ ಕ್ಲಾಸಿನವರಿಗೂ ಉಪಯುಕ್ತವಿದೆ. ಸ್ವಲ್ಪ ಪ್ರತಿಗಳಿರುವದರಿಂದ ನಮೂನೆಗಾಗಿ ಒಂದನ್ನಾದರೂ ಎಲ್ಲರೂ ತರಿಸಿಕೊಳ್ಳಿರಿ. ಬೆಲೆ: ೮ ಆಣೆ

ವಿಳಾಸ :— ರಾ. ಸಿ. ಸಜ್ಜನ, ಮಾಸ್ತರ ಜೋಕಾಪುರ ಪೇಟೆ, ವಿಜಾಪುರ.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದು ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕನಿಷಾಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ-ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ-ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು-ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.

ಜುಲೈ-ಅಗಷ್ಟ-ಸಪ್ಟಂಬರ ೧೯೪೪

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕಿಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ಹುಚ್ಚರಾವ ಭೀಮರಾವ ಉಮಡಿ, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ
೧.	ಕವಿ ರವೀಂದ್ರರ ಕೆಲವು ಕವಿತೆಗಳು	೧
೨.	ಪ್ರಚಲಿತ ವಿಷಯಗಳು	೩
೩.	ಪಿ. ಎಸ್. ಸಿ. ಪರೀಕ್ಷೆಯ ಅನುಭವಗಳು	೮
೪.	ಶಿಸ್ತು	೧೧
೫.	ಆಹಾರ ಮೀಮಾಂಸೆ	೧೯
೬.	ಅಂಗಸಾಧನೆಗಳನ್ನು ಕಲಿಸುವ ಪದ್ಧತಿಗಳು	೨೧
೭.	ಪತ್ರಗಳ ಮುಖ್ಯಾಂಶಗಳು	೨೪
೮.	ಗಂಟುಕಳೆದುಕೊಂಡ ಹೀರಾಸಿಂಗ್	
	(ಸಾಕ್ಷರಿಗಳಾದ ಪ್ರಬುದ್ಧರಿಗಾಗಿ) ..	೨೬

ನಾಲ್ಕಕ್ಕೆ ಚಂದಾ ಹಣ ನಿರಡು ರೂಪಾಯಿಗಳು ಮಾತ್ರ.

Printed by V. Y. Jathar at the Karnatak Printing Works, Dharwar and Published by H. B. Umadi, Esq. M. A., Principal Training College For-Men Dharwar, at his Office. 7003-44-1400.

ಪ್ರಿಲಿಮ್ಸ್‌ರಿ ಪರೀಕ್ಷೆ ೧೯೪೫

ಪ್ರ್ಯಾಕ್ಟಿಸಿಂಗ್ ಸ್ಕೂಲಿನ ಪ್ರಿಲಿಮ್ಸ್‌ರಿ ಪರೀಕ್ಷೆಯ ಪ್ರಶ್ನ-ಪತ್ರಿಕೆಗಳನ್ನು ಈ ವರೆಗೆ ನಮ್ಮ ಶಾಲೆಗಾಗಿ ಮಾತ್ರ ಅಚ್ಚು ಮಾಡಿಸುತ್ತಲಿದ್ದರೂ ಅವುಗಳನ್ನು ಬೇಡುವವರ ಸಂಖ್ಯೆಯು ಹೆಚ್ಚುತ್ತಲಿದ್ದುದರಿಂದ ಅವು ಎಲ್ಲರಿಗೂ ದೊರೆಯುವಂತೆ ಯೋಜನೆ ಮಾಡಿದ್ದೇವೆ. ಅನುಭವಿಕರೂ ಉತ್ಸಾಹಿಗಳೂ ನಮ್ಮ ಕಡೆಗೆ ಪ್ರಶ್ನೆ ತಿಗೆದು ಕಳಿಸಿಕೊಡಬಹುದು. ಒಳ್ಳೆಯ ಪ್ರಶ್ನಗಳಿಗೆ ಪ್ರೋತ್ಸಾಹ ಕೊಡುವೆವು. ಬಹುಕಾಲದ ಅನುಭವವುಳ್ಳ ತಜ್ಞರ ಮಂಡಲವೊಂದನ್ನು ನಿರ್ಮಿಸಿ, ಪ್ರಶ್ನ ಪತ್ರಿಕೆಗಳನ್ನು ಸಿದ್ಧಪಡಿಸಿ, ಮುದ್ರಿಸಿ ಬರುವ ಜನವರಿ ತಿಂಗಳಲ್ಲಿ ಗ್ರಾಹಕರಿಗೆ ಕೊಡುವೆವು. ಮೇಲ್ತರಗತಿಯ ಮಾದರಿಯ ಪ್ರಶ್ನಗಳನ್ನು, ಒಳ್ಳೆಯ ಕಾಗದದಲ್ಲಿ ಮುದ್ದಾಗಿ ಮುದ್ರಿಸುವೆವು. ಹೆಚ್ಚಿನ ವಿವರಗಳನ್ನು ಸಮುಕ್ಷಮ ಇಲ್ಲವೆ ಪತ್ರಮುಖಾಂತರ ತಿಳಿದುಕೊಳ್ಳಬಹುದು. ಬೆಲೆ ಒಂದು ಸೆಟ್ಟಿಗೆ ಅಂಚೆಯ ವೆಚ್ಚಸಹಿತ ೮ ಆಣೆ ಮಾತ್ರ ಇರುವದು. ಮುಂಗಡ ಹಣ ಕೊಟ್ಟವರಿಗಷ್ಟೇ ಪ್ರತಿಗಳು ದೊರೆಯುವವು.

ಹೆಣ್ಣುಮಕ್ಕಳ ಪ್ರಿಲಿಮ್ಸ್‌ರಿ ಪ್ರಶ್ನಪತ್ರಿಕೆಗಳು ಬೇಕಾದವರು ಒಂದು ಸೆಟ್ಟಿಗೆ ೮ ಆಣೆಯಂತೆ ಕೂಡಲೆ ಕಳಿಸಿದರೆ ಡಿಸೆಂಬರ ತಿಂಗಳ ಕೊನೆಗೆ ಪ್ರಶ್ನ-ಪತ್ರಿಕೆಗಳನ್ನು ಕಳಿಸುವೆವು.

G. C. HIREMATH

ಹೆಡ್ ಮಾಸ್ತರ ಪ್ರಾ. ಸ್ಕೂ. ಟ್ರೇ. ಕಾ. ಧಾರವಾಡ

ವಿ-ಸೂ ಚ ನೆ

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವದಕ್ಕಾಗಿ ಕಳುಹಿಸುವ ಲೇಖನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು. ಲೇಖನಗಳು ಮುಖ್ಯ ಮುದ್ದೆಗಳಿಗೆ ಅನುಸಾರವಾಗಿ ಸಂಕ್ಷೇಪವಾಗಿರಬೇಕು.

೨. ಈ **ತ್ರೈಮಾಸಪತ್ರಿಕೆ**ಯು ಪ್ರತಿ ಮೂರು ತಿಂಗಳ ಕೊನೆಯ ವಾರದಲ್ಲಿ ಪ್ರಸಿದ್ಧವಾಗುವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ ತಿಳಿಸಬೇಕು.

೩. ಲೇಖಕರು ಹಾಗು ಪ್ರಕಾಶಕರು, ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರಿಗೆ ಉಪಯುಕ್ತವಾದ ಪುಸ್ತಕ-ನಕಾಶ-ಚಿತ್ರ-ಉಪಕರಣಗಳನ್ನು ವಿಮರ್ಶೆಗಾಗಿ ಕಳುಹಿಸಬಹುದು.

೪. ತಾವು ಪ್ರಕಟನೆಗಾಗಿ ಕಳುಹಿಸಿರುವ ಲೇಖನಗಳನ್ನು ತಿರುಗಿ ಪಡೆಯಲು ಅಪೇಕ್ಷಿಸುವವರೂ ಅದರ ಪರಿಣಾಮವನ್ನು ಕೂಡಲೆ ತಿಳಿದುಕೊಳ್ಳಲಿಚ್ಛಿಸುವವರೂ ಅದಕ್ಕಾಗಿ ತಗಲುವ ಅಂಚೆಯ ಚೀಟಿಗಳನ್ನು ತಮ್ಮ ಲೇಖನದ ಸಂಗಡ ಕಳುಹಿಸಿಕೊಡಬೇಕು.

ಜಾಹಿರಾತಿನ ದರಗಳು

ಪುಟ	೧೨ ತಿಂಗಳುಗಳಲ್ಲಿ ನಾಲ್ಕು ಸಾರೆ	೬ ತಿಂಗಳುಗಳಲ್ಲಿ ೨ ಸಾರೆ	೩ ತಿಂಗಳುಗಳಲ್ಲಿ ಒಮ್ಮೆ
೧	೧೨ ರೂ.	೭½ ರೂ.	೪ ರೂ.
½	೭½ ರೂ.	೪ ರೂ.	೨½ ರೂ.
¼	೪ ರೂ.	೨½ ರೂ.	೧½ ರೂ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹುಚ್ಚರಾವ ಭೀಮರಾವ ಉಮಡಿ, ಎಂ. ಎ.

ಸಂಪುಟ ೮೩	ಜುಲೈ-ಆಗಷ್ಟ-ಸಪ್ಟಂಬರ ೧೯೪೪	ವರ್ಷ ೧೭ ಸಂ. ೪-೫-೬

ಕವಿರವೀಂದ್ರರ ಕೆಲವು ಕವಿತೆಗಳು

(೨) ಮರಣವೋ ಮಾರಣವೋ ?

ಜಗದ ಬುದ್ಧಿಯನೆ ಬೆಳಗಿಸಿದ ಬುದ್ಧದೇವನೆಂತೋಗತಿಸಿ ನಡೆದನು.

ಜಗದ ಕಲಾ-ಕುಶಲರ ಬುದ್ಧಿಯನೆ ಬೆಳಗಿಸುವಂತಹ ಮಂದಿರವನೊಂದನು; ತಿಂಗಳನ ಹೂಬೆಳಕನ್ನೂ ಬೆಳಗಿಸುವ ಬಿಳಿಯ ಅಮೃತ ಶಿಲಾಮಯ ಭವನವೊಂದನು; ಆ ಬುದ್ಧದೇವನ ನೆನಹಿನ ನಿವಾಸವೊಂದನು; ಪರಮ ಪವಿತ್ರ ದೇವಾಗಾರ-ವೊಂದನು; ವಿರಚಿಸಿದನು, ಬಿಂಬಸಾರನು.

ಅರಮನೆಯ ನೂತನೆ ಮುದುಪಕ್ಕೂ, ರಾಜ ರಾಣಿಯರೂ, ಅರಸು-ಗುವರ-ಗುವರಿ-ಯರೂ, ದಿನದಿನವೂ ಆ ದೇವಾಗಾರಕ್ಕೆ ಬಂದು, ಹಣ್ಣು ಹೂಗಳನರ್ಪಿಸಿ ಜಗವನೆ, ಬೆಳಗಿಸಿದ ಆ ಮಹಾಬೆಳಕಿನ ಮಹಾದೀವಿಗೆಯ ಮುಂದೆ ತಾವು ಶಂದ ತುಪ್ಪದ ಕಿರುದೀವಿಗೆಗಳನು ಬೆಳಗಿಸಿ ಮರಳುವರು, ತಮ್ಮರಮನೆಗೆ.

ಆ ಬುದ್ಧಿಯ ಬೆಳಕನ್ನು ಅನುಸರಿಸಿದ ಬಿಂಬಸಾರನೂ ಅತನನ್ನೇ ಅನುಸರಿಸಿ ಗತಿಸಿ ನಡೆದನು. ಆತನ ಮಗನು ತಂದೆಯ ಆ ಪವಿತ್ರ ಸಿಂಹಾಸನದಲ್ಲಿ ವಿರಾಜಮಾನನಾದನು, ನರಿ; ಆದರೆ ಆತನ ಹೃದಯ ಸಿಂಹಾಸನದ ಹತ್ತಿರ ಕೂಡ ಹೋಗಲಾರದಾದನು. ತಂದೆಯ ಕಾಲದ ದೇವಾಗಾರ ಧರ್ಮಾಗಾರಗಳಿಲ್ಲವೂ ಆತನ ಅನುಯಾಯಿಗಳ ಕಾರಾಗೃಹ ಶಿಕ್ಷಾ ಗೃಹಗಳಾಗಿ ಮಾರ್ಪಟ್ಟುವು. ಅಹಿಂಸೆಯ ಮೂರ್ತಿಯ ಗರ್ಭದಲ್ಲಿ ರಕ್ತಪಿಪಾಸುವಾದ ಬಂಸಾರಾಕ್ಷಸನ ಉದಯವಾದಂತಾಯಿತು. ತಂದೆಯ ಕಾಲದ ಪವಿತ್ರ ಧರ್ಮ ಗ್ರಂಥಗಳು ಮಗನ ಯಜ್ಞಕುಂಡದಲ್ಲಿ ಆಹುತಿಯಾಗಿ ಹೊತ್ತಿ ಉರಿದುಹೋದುವು.

ಅದೊಂದು ವಸಂತ ಕಾಲದ ಸಂಧ್ಯಾಸಮಯ. ಅಸ್ತಾಚಲವನ್ನು ಸಮೀಪಿಸಿದ ಸೂರ್ಯದೇವನ ರಕ್ತವರ್ಣದಿಂದ ಭೂದೇವಿಯು ರಕ್ತಾಂಬರವ ಧರಿಸಿ ಮೆರೆವಂತಾಗಿದ್ದಳು.

ಸಂಧ್ಯಾಕಾಲದ ಪೂಜಾಸಮಯವು ಸಮೀಪಿಸಿದ್ದಿತು. ದೇವಾಗಾರದ ಘಂಟಾನಾದವು ನಕ್ಷತ್ರರನ್ನು ಕೂಗಿಕರೆಯುವಂತೆ ಮೊರೆದುಲಿವ ಸಮಯವದು. ಹಿರಿಯ ರಾಣಿಯ ದಾಸಿ ಸುರ ಹಿರಿಯ ಮಣಿಯಂತಿರುವ ಶ್ರೀಮತಿಯು, ಪರಾತ್ಪರ ಬುದ್ಧದೇವನ ಪರಾತ್ಪರ

ಸೇವಿಕೆಯಾಡವಳು, ಪವಿತ್ರ ಗಂಗೋದಕದಲ್ಲಿ ಮಿಂದು, ಮಿರುಗುವ ಪೀತಾಂಬರವನುಟ್ಟು ಸಿಂಗಾರಾಗಿ ಬಂಗಾರದ ಹರಿವಾಣದಲ್ಲಿ ಹಣ್ಣು ಹೂಗಳನೂ ತುಪ್ಪದ ದೀವಿಗೆಗಳನ್ನು ಅನುಗೊಳಿಸಿಕೊಂಡು ತನ್ನೊಡತಿಯ ಮುಂದೆ ಬಂದು ನಿಂದು, ತನ್ನೊಡನೆ ಕರೆಯುವೇನೋ ಎನ್ನುವಂತಹ ದೃಷ್ಟಿಯಿಂದ ಅವಳ ಮುಖವ ನೋಡಿದಳು.

ರಾಣಿಯ ಮೈ ಜುಮ್ಮೆಂದಿತು; ಎದೆನಡುಗಿತು; ತೊದಲುವ ನುಡಿಗಳಿಂದ ಕೇಳಿದಳು.— "ಹುಚ್ಚು ಹುಡುಗೀ, ನೀನರಿಯೆಯಾ! ಅರಸನ ಕ್ರೂರ ಆಜ್ಞೆಯನು. ಬುದ್ಧದೇವನ ಮುಂದಿನ ಬಳಿ ಸುಳಿವವರೆಲ್ಲರಿಗೂ ಪೂಜೆ ಪುನಶ್ಚರಣೆಗಳನ್ನು ಅರ್ಪಿಸುವವರಿಗೂ ಮರಣ ದಂಡನೆಯೆ ಅಲ್ಪ ಶಿಕ್ಷೆಯೆಂಬುದನು."

ಶ್ರೀಮತಿಯು ತನ್ನರಸಿಯನು ವಂದಿಸಿದಳು. ಮರುಮಾತಾಡಲಿಲ್ಲ. "ತನಗೀ ರಾಜದಲ್ಲಿರುವುದು ಮರಣಕ್ಕಿಂತಲೂ ಕಡುತರವಾದ ಶಿಕ್ಷೆಯಾಗಿದೆ" ಎನ್ನುವಂತಹ ದಪ್ಪನಡಿಗೆಯಿಂದ ಮುಂದೆ ನಡೆದಳು.

ಶ್ರೀಮತಿಯು ಅರಸುಕುಮಾರನು ಅಂದೇ ಮದುವೆಯಾದ ನೂತನ ರಾಣಿ ಅಮಿತಾದೇವಿಯ ನಿವಾಸಕ್ಕೆ ಬಂದಳು.

ಹರಳುಕೆಚ್ಚಿದ ಬಂಗಾರದ ಕಟ್ಟಿನಲ್ಲಿ ಕೂಡ್ರಿಸಿದ ವಜ್ರದ ಕನ್ನಡಿಯನು ತೊಡೆಯ ಮೇಲಿಟ್ಟು ಕಮಲವನೆರಗುವ ಮರಿದುಂಬಿಗಳನು ಹೋಲುವ ಮುಂಗುರುಳಿನ ಸೀಮಂತನನ್ನು ನೀವಿಕೊಂಡು ನೊಸಲಿಗೆ ಕುಂಕುಮದ ಬೊಟ್ಟಿಡುವ ಸಂಭ್ರಮದಲ್ಲಿದ್ದಳಾ ಅರಸುಗುವರಿ ಚೆನ್ನೆ! ಹರೆಯದ ಹೊಸ್ತಿಲಲಿ ಕಾಲಿಟ್ಟ ರನ್ನೆ!

ಅರಸುಮಗನ ನೂತನ ರಾಣಿ ಅಮಿತೆಯ ಕೈ ನಡುಗಿತು. "ಅವ್ವಯ್ಯಾ! ಎಂತ ಕೇಡಿಯೇ ನೀನು. ನನ್ನನ್ನಾವ ಬಗೆಯ ಸಂಕಟದಲ್ಲಿ ನೂಂಕಲಿರುವಿಯೇ! ತೊಲಗತ್ತ ಮೊದಲು ತೊಲಗು!" ಎಂದವಳು ಕೂಗಿದಳು.

ಅರಸುಗುವರಿ ಶುಕ್ಲೆಯು ತನ್ನ ನಿವಾಸದ ಕಿಡಕಿಯ ಬಳಿಯಲ್ಲಿ ಕುಳಿತು ಅಸ್ತಾಚಲವ ನೇರುವ ಹೊಂದೇರನ ಹೂಬಿಳಕಿನಲಿ ಪ್ರಣಯ ಕಥೆಯನೊಂದನು ಓದುತ್ತ ಕುಳಿತಿದ್ದಳು.

ಪೂಜೋಪಕರಣಗಳನೊಡಗೊಂಡು ತನ್ನಾ ಭವ್ಯಭವನದ ಮುಂದೆ ಬಂದಿರುವ ಶ್ರೀಮತಿಯನ್ನು ನೋಡಿದಳು. ಅವಳ ಕೈಯೊಳಗಿನ ಪುಸ್ತಕವು ತೊಡೆಯ ಮೇಲಿಂದ ಜಾರಿ ನೆಲಕ್ಕುರುಳಿತು. "ಅಕ್ಕಾ, ಮೃತ್ಯುವಿನ ದವಡೆಯಲ್ಲಿ ಕೊರಳನ್ನು ಇಕ್ಕುವ ಧೈರ್ಯವನೆಲ್ಲಿ ಪಡೆದೇ ನಿನ್ನದು!" ಎಂದವಳು ನಡುಗುವ ದನಿಯಲ್ಲಿ ನುಡಿದಳು.

ಶ್ರೀಮತಿಯು ಹೀಗೆಯೇ ರಾಣೀವಾಸದೊಳಗಿನ ಅರಸಿಯರ ಮನೆಮನೆಯನ್ನೂ ಸೇವೆ ಮಾಡಿದಳು. "ಅರಮನೆಯ ಸೆರೆಯಾಳುಗಳಂತಿರುವ ಅರಸುಗುವರಿಯರೇ; ಚಿನ್ನದ ಪಂಜರದೊಳಗಿರುವ ಅರಗಿಳಿಗಳೇ, ಅವಸರ ಮಾಡಿರಿ! ಜುತ್ತಾತ್ಮನಾದ ಬುದ್ಧದೇವನ ಪೂಜಾಕಾಲ ಸವಿಾಪಿಸುತ್ತಿದೆ. ನಡೆಯಿರಿ! ನಡೆಯಿರಿ!" ಎಂದು ಕೂಗಿ ಕರೆಯುವಳು.

ಅರಸಿಯರಲ್ಲಿ ಕೆಲವರು ಬೆದರಿ ತಮ್ಮ ಬಾಗಿಲು ಮುಚ್ಚಿಕೊಂಡರು. ಮತ್ತೆ ಕೆಲವರು ಅವಳನ್ನು ಸಾರಿದೂರಿ ಶಪಿಸಿದರು.

ಸಂಧ್ಯಾ ಸಮಯದ ಅರುಣ ರಶ್ಮಿಯು ಕೊನೆಯ ಕಿರಣಧಾರೆಯು ಅರಮನೆಯ ಹೊಂಗಲಶದ ಕೊನೆಯನ್ನು ಸೋಂಕಿ ಮಾಯವಾಯಿತು.

ರಾಜಧಾನಿಯ ಬೀದಿಬೀದಿಗಳಲಿ ನುಗ್ಗಿ ಬಂದು ಕತ್ತಲೆಯು ತನ್ನ ಬೀಡುಬಿಟ್ಟಿತು. ನಗರದ ಮರ್ಮರ ಮೊರೆದಾಟವು ನಿಂತಿತು. ನೆರೆಯ ಶಿವಾಲಯದ ಘಂಟಾನಾದ ಮೊರೆದು ಮೊಳಗಿ ಪೂಜಾಸಮಯವು ಸವಿಾಪಿಸಿತೆಂದು ಸೂಚಿಸಿತು.

ನಿರ್ಮಲವಾದ ಮಹಾ ಸರೋವರದ ಆಳವಾದ ತಳದಲ್ಲಿ ಮುಳುಗಿದಂತಿರುವ ನಕ್ಷತ್ರಗಳು ಮಿಣಿಮಿಣಿನೆ ಮಿನುಗುವ ಬೆಳಕಿನಿಂದ ಕಗ್ಗತ್ತಲೆಯ ರಾತ್ರಿಯನ್ನು ಬೆಳಗಿಸುತ್ತಿದ್ದುವು. ಅರಮನೆಯ ಉಪವನದ ಕಾವಲುಗಾರರು ಬುದ್ಧದೇವನ ಮಂದಿರದ ಮುಂದೆ ಬೆಳಗುತ್ತಿರುವ ಸಾಲುದೀವಿಗೆಗಳ ಬೆಳಕು ಗಿಡಗಳ ಜಿಡುಸಿನೊಳಗಿಂದ ಹಾದು ಬರುತ್ತಿರುವುದನ್ನು ಕಂಡು ವಿಸ್ಮಿತರಾಗಿ ಸಿಡಿದೆದ್ದು ನಿಂತರು.

ಒರೆಗಳಿದ ಖಡ್ಗಗಳನ್ನು ಝಳಪಿಸುತ್ತ ಅತ್ತಿತ್ತಾವಿಸಿ ನಡೆದರವರು! "ಯಾರವಳು? ಕಾವಿಗಂಜದ ಹುಚ್ಚು ಹುಡುಗಿ!" ಎಂಬಾಗರ್ಜನೆಯಿಂದ ಉಪವನವೆಲ್ಲ ನಡುಗಿತು.

'ನಾನು! ಶ್ರೀಮತಿ! ಬುದ್ಧದೇವನ ದೀನ ಸೇವಿಕೆ' ಎಂಬಾ ಕೋಮಲಕಂಠದ ಸಿರಿವೆದ ಸೊಲ್ಲು ಅವರ ಕಿವಿಗಳಿಗೆ ಕೇಳಿಸಿದರೂ ಎದೆಗೆ ಅದರ ಅರ್ಥವಾಗಲಿಲ್ಲ.

ಅರೆ ನಿಮಿಷದಲ್ಲಿ ಅವಳಾ ಹೃದಯದಿಂದ ಚಿಮ್ಮಿದ ರಕ್ತಧಾರೆಯಿಂದ ಪವಿತ್ರವಾದಾ ಸೇವಾಗಾರದ ಅಮೃತ ಶಿಲೆಯ ನೆಲಗಟ್ಟು ತೋದು ರಕ್ತರಂಜಿತವಾಯ್ತು. 'ನನ್ನೀ ಮರಣವು ಬುದ್ಧದೇವನ ವಿರೋಧಿಗಳಿಗೆ ಮಾರಣವಾಗದಿರಲಿ!' ಎನ್ನುವ ಶುಭಾಕಾಂಕ್ಷೆಯೊಡನೆ ಶ್ರೀಮತಿಯ ಆತ್ಮವು ಆಕಾಶದಲ್ಲಿ ವಿಲೀನವಾಗಿ ಸಾಗಿತು.

ನಕ್ಷತ್ರಗಳ ಬೆಳಕಿನ ಶಾಂತ ವಾತಾವರಣದಲ್ಲಿ ಆ ಸಾಲುದೀಪಗಳು ಒಂದೊಂದಾಗಿ ಮಂದವಾಗುತ್ತ ಸಾಗಿ ಕೊನೆಯ ದೀವಿಗೆಯೂ ಶಾಂತವಾಯಿತು.

ಪ್ರಚಲಿತ ವಿಷಯಗಳು

೧. ಮುಂಬಯಿ ಸರಕಾರದ ಪಂಚದಶ ವಾರ್ಷಿಕ ಯುದ್ಧೋತ್ತರ ಪ್ರಗತಿಯ ಯೋಜನೆಗಳು

ಮಹಾಯುದ್ಧದ ಬೇಗೆಯಿಂದ ಬೆಂದು ಬೆಂಡಾದ ಜನತೆಯು ಆದು ಎಂದು ಕೊನೆಗಾಣುವದೋ ಮುಂದೇನಾದರೂ ಪ್ರಗತಿಯ ಆಶೆಯಿರುವದೋ ಎಂದು ನಿರೀಕ್ಷಿಸುತ್ತಿರುವದು ಸಹಜವೇ ಅಲ್ಲವೇ? ಮುಂಬಯಿ ಸರಕಾರವು ಈ ಪ್ರಶ್ನೆಗಳಿಗೆ ಈಗಾಗಲೆ ಕೆಲವು ಸಂಗತಿಗಳಲ್ಲಿ ಆಶಾಜನಕವಾದ ಉತ್ತರಕೊಡಲು ಪ್ರಯತ್ನಿಸಿ ಒಂದು ಪಂಚದಶವಾರ್ಷಿಕ ಯೋಜನೆಯನ್ನು ಪ್ರಕಟಿಸಿದೆ. ರಶಿಯಾ ಅಮೇರಿಕಾ ಬ್ರಿಟನ್ ಈ ಮೂರೂ ರಾಷ್ಟ್ರಗಳು ಜರ್ಮನಿಯು ಎಂಜಿನ ವೇಗದ ಯುದ್ಧಕ್ರಮವನ್ನು ತಡೆದು ಹಿಡಿದು ಹತ್ತಿಕ್ಕಿ ಅದನ್ನು ಹಿಂದೊತ್ತುತ್ತ ಹೋಗಿ ಜರ್ಮನಿಯ ಗಡಿಯನ್ನು ಸೇರುವ ಸಿದ್ಧತೆಯಲ್ಲಿವೆ. ಸುತ್ತುಮುತ್ತಲು ಒತ್ತಿಬರುತ್ತಿರುವ ವಿರೋಧಿಗಳ ಒತ್ತಡವನ್ನು ತಡೆಯಲಾರದೆ ಅತ್ತ ಜರ್ಮನಿಯು ನಾಗಾಲೋಟದಿಂದ ಹಿಂದೆ ಸಾಗಿದ್ದರೆ ಇತ್ತ ಜಪಾನವು ಬ್ರಹ್ಮದೇಶದ ಗಡಿಯಿಂದ ಹಿಂದೆ ಸಾಗುತ್ತಿದೆ; ಹಲವು ಸಾಗರಾಯುದ್ಧಗಳಲ್ಲಿ ಅಮೇರಿಕನ್ ಹಡಗುಪಡೆಯ ಪೆಟ್ಟು ತಾಳಲಾರದೆ ಅನೇಕ ನೌಕಾ ಸೈನ್ಯಗಳನ್ನು ಕಳೆದುಕೊಳ್ಳುತ್ತ ಹಿಂಗಾಲೋಟ ನಡೆಯಿಸಿದೆ. ಇದನ್ನೆಲ್ಲ ಓದಿದವರು ಕೃತದ ಮಹಾಯುದ್ಧವು ಬೇಗನೆ ಕೊನೆಗಾಣಬಹುದೆಂದು ನಿರೀಕ್ಷಿಸಿದರೆ ತಪ್ಪೇನು?

ಮುಂಬಯಿ ಸರಕಾರವು ಸದ್ಯಕ್ಕೆ ಪ್ರಕಟಿಸಿದ ಮುಂದೆ ಹೇಳುವ ಎಲ್ಲ ಯೋಜನೆಗಳು ಅಕ್ಷರಶಃ ಕಾರ್ಯರಂಗಕ್ಕಿಳಿಯಬಹುದೆಂದು ನಿರ್ಧರಿಸುವ ಕಾರಣವಿಲ್ಲೆಂದು ಆ ಪ್ರಕಟಣೆಯಲ್ಲಿಯೇ ಹೇಳಿದೆ. ಯಾಕೆಂದರೆ, ಆ ಕಾಲದ ಸಾರ್ವಜನಿಕ ಪರಿಸ್ಥಿತಿ, ತತ್ಕಾಲದ ಸರಕಾರದ ಪ್ರವೃತ್ತಿ, ಆರ್ಥಿಕ ಸಮಸ್ಯೆ ಇವನ್ನೆಲ್ಲ ಅನುಲಕ್ಷಿಸಿ ಅವು ಕೊನೆಗಾಣಬೇಕಾಗುವದು. ಏನೇ ಇದ್ದರೂ ಪ್ರಕೃತದ ಪ್ರಕಟನೆಯಿಂದ ನಮ್ಮ ಸದ್ಯದ ಕೊರತೆಗಳ ಸರ್ವಸಾಮಾನ್ಯ ಕಲ್ಪನೆ ಯಾಗುವದಲ್ಲದೆ ಅವುಗಳ ಸಾಧನೆಯ ಉಪಾಯಗಳನ್ನಾದರೂ ಕಂಡುಕೊಳ್ಳಬಹುದು.

ನಮ್ಮ ನಾಡು ಚಿಕ್ಕ ದೊಡ್ಡ ಹಳ್ಳಿಗಳ ಬೀಡು. ದೊಡ್ಡ ನಗರಗಳು ಅಲ್ಲೊಂದು ಇಲ್ಲೊಂದು ಕೈಬೆರಳಿನಿಂದ ಎಣಿಸುವಷ್ಟೂ ಕೂಡ ಇಲ್ಲ. ಇಂಥ ಹಳ್ಳಿಗಳ ನಿವಾಸಿಗಳಾದ ಒಕ್ಕಲಿಗರ ಸರ್ವತೋಮುಖವಾದ ಪ್ರಗತಿ ಸುಖಸಮಾಧಾನಗಳೇ ಸರಕಾರದ ಆದ್ಯ ಅವಶ್ಯ ಕರ್ತವ್ಯ. ಈ ಕರ್ತವ್ಯಾನುಗುಣವಾಗಿ ಒಕ್ಕಲಿಗರಿಗೆ ಬೇಕಾಗುವ ನೀರಾವರಿ ಮುಂ ಸ್ಥಾನಿಕ ಅನುಕೂಲತೆಗಳು, ಸಾರ್ವತ್ರಿಕ ಶಿಕ್ಷಣ, ಆರೋಗ್ಯಸಾಧನೆ, ಆರ್ಥಿಕ ಉನ್ನತಿ, ಇವೆ ಮೊದಲಾದ ಪ್ರಶ್ನೆಗಳನ್ನು ವಿಮರ್ಶಿಸಿ ಅವುಗಳ ಸಲುವಾಗಿ ಕೈಕೊಳ್ಳಬೇಕಾದ ಯೋಜ ನೆಗಳನ್ನು ಇದರಲ್ಲಿ ಸಂಕ್ಷೇಪವಾಗಿ ಸೂಚಿಸಲಾಗಿದೆ. ಮಹಾಯುದ್ಧದಲ್ಲಿ ತೊಡಗಿದ ಸೈನಿಕ ಹಿತಚಿಂತನೆಯೂ ಇದರಲ್ಲಿ ಅಡಕವಾಗಿದೆ. ಈ ದೃಷ್ಟಿಯಿಂದ ನಮ್ಮ ಕರ್ನಾಟಕ ಬೆಳಗಾಂವಿ ಮತ್ತು ವಿಜಾಪುರ ಈ ಎರಡು ಜಿಲ್ಲೆಗಳು ಪ್ರಾಮುಖ್ಯತೆಯನ್ನು ಪಡೆದಿವೆ. ಹೀಗೆ ಪ್ರಕೃತದ ಯುದ್ಧಕಾರ್ಯಕ್ಕೆ ಹೆಚ್ಚು ಸೈನಿಕರನ್ನು ಒದಗಿಸಿದ ಪ್ರದೇಶ, ಅಡಿಗಡಿಗೆ ಬರಗಾಲಕ್ಕೆ ಒಳಗಾಗುವ ಸೀಮೆ, ಮುಂತಾದ ಮಹತ್ವದ ಸಂಗತಿಗಳನ್ನು ಅನುಲಕ್ಷಿಸಿ ಮಹತ್ವ ಕಾರ್ಯಕ್ಷೇತ್ರವೆಂದು ಇಡಿಯ ಇಲಾಖೆಯೊಳಗಿನ ಒಂಬತ್ತು ಜಿಲ್ಲೆಗಳನ್ನು ಆರಿಸಲಾಗಿದೆ ಮತ್ತು ಸುಧಾರಣೆಯ ಕಾರ್ಯಗಳಲ್ಲಿಯೂ ಮೊತ್ತಮೊದಲು ಪ್ರಾರಂಭಿಸಬೇಕಾದ ಕಾರ್ಯಗಳು, ಕ್ರಮಶಃ ನಡೆಯಬೇಕಾದುವು, ಮುಂತಾದ ವರ್ಗಗಳನ್ನು ಕಲ್ಪಿಸಲಾಗಿದೆ ಮುಂದೆ ಇಡಿಯ ಇಲಾಖೆಯಲ್ಲಿ ಕೈಕೊಳ್ಳಲಿರುವ ಸರ್ವತೋಮುಖವಾದ ಉನ್ನತಿಯ ಕಾರ್ಯಗಳಿಗೆ ಸಹಾಯಕವಾಗುವ ಕಾರ್ಯಗಳನ್ನು ಮೊದಲು ಪ್ರಾರಂಭಿಸಬೇಕೆಂಬದು ಕ್ರಮಪ್ರಾಪ್ತವಾಗುವ ಮಾತಲ್ಲವೇ? ಮತ್ತು ಅಂಥ ಕಾರ್ಯಗಳನ್ನು ನಡೆಯಿಸಲು ಸಮರ್ಥರಾದ ಕೆಲಸಗಾರರನ್ನು ಒದಗಿಸಿಕೊಳ್ಳುವದು ಮೊತ್ತಮೊದಲಿನ ಕೆಲಸವೆಂಬುದೂ ಕೂಡ ತೀರ ಸಹಜವಾದಮಾತು. ಅದಕ್ಕನುಗುಣವಾಗಿ ಅಂಥ ಎಲ್ಲ ವಿಷಯಗಳ ಶಿಕ್ಷಣ ಕಾರ್ಯಕ್ಕೆ ಪ್ರಥಮ ಸ್ಥಾನವನ್ನು ಕಲ್ಪಿಸಿರುವರು. ಪ್ರಾಥಮಿಕ ಶಾಲೆಗಳ ಸುಧಾರಣೆ, ಪ್ರಸಾರ ಇವನ್ನು ವಿಮರ್ಶಿಸುವಾಗ ೪೦೦ ಕ್ಕಿಂತ ಹೆಚ್ಚು ಜನವಸತಿಯಿರುವ ಎಲ್ಲ ಊರುಗಳಲ್ಲಿ ಪ್ರಾಥಮಿಕಶಾಲೆಗಳನ್ನು ಪ್ರಾರಂಭಿಸಬೇಕೆಂದು ಗೊತ್ತಾಗಿದೆ. ಇವು ಸುಮಾರು ೬೫೦ ಆಗುವವು ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕೆಂದು ನಿರ್ಣಯವಾಗಿದೆ. ಸಂಪೂರ್ಣ ಅಭ್ಯಾಸ ಕ್ರಮವುಳ್ಳ ೩೮ ಹೆಣ್ಣುಮಕ್ಕಳ ಪ್ರಾಥಮಿಕ ಶಾಲೆಗಳಿಗೆ ವಸತಿಗೃಹಗಳನ್ನು ಜೋಡಿಸಬೇಕು; ಮತ್ತು ಪ್ರಾ. ಶಾಲೆಗಳಿಗೆ ತಕ್ಕ ಶಾಲಾಗೃಹಗಳನ್ನು ಕಟ್ಟಿಸಿ ಮಕ್ಕಳಿಗಾಗಿ ಆಟದ ಬಯಲುಗಳನ್ನು ಒದಗಿಸಿಕೊಡಬೇಕು ಮುಂತಾದ ವಿಚಾರಗಳೂ ಇದರಲ್ಲಿ ಸಮಾವೇಶವಾಗಿವೆ. ಸರ್ವಸಾಮಾನ್ಯವಾದ ಒತ್ತಾಯದ ಶಿಕ್ಷಣ ಕ್ರಮವನ್ನು ಪ್ರಾರಂಭಿಸಿ ಎಲ್ಲರಿಗೂ ಶಿಕ್ಷಣವು ಉಚಿತವಾಗಿ ದೊರೆಯುವ ಯೋಜನೆಯನ್ನು ಕ್ರಮಶಃ ಕೈಕೊಳ್ಳಲಾಗುವದು. ಅದಕ್ಕಾಗಿ ತಕ್ಕಷ್ಟು ಶಿಕ್ಷಕರನ್ನು ದೊರಕಿಸುವದಕ್ಕಾಗಿ ೫ ಗಂಡುಮಕ್ಕಳ ಮತ್ತು ೩ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜುಗಳನ್ನು ಪ್ರಾರಂಭಿಸಲಾಗುವದು. ಇವಲ್ಲದೆ ಮೂರು ಟ್ರೇನಿಂಗ್ ಕಾಲೇಜುಗಳನ್ನು ಕೂಡಲೆ ಪ್ರಾರಂಭಿಸ

ಪ್ರತಿಯೊಂದರಲ್ಲಿ ಪ್ರತಿವರ್ಷ ೧೫೦ ಎರಡನೆಯ ವರ್ಷದ ಟ್ರೇನಿಂಗ್ ಪಡೆದ ಶಿಕ್ಷಕರು ಹೊರಬೀಳುವಂತಹ ಯೋಜನೆಯನ್ನು ಈಗಾಗಲೆ ಕೈಕೊಳ್ಳಲಾಗಿದೆ. ೧೯೪೬ನೆಯ ಇಸ್ವಿಯ ಏಪ್ರಿಲ್‌ದೊಳಗಾಗಿಯೇ ಇದು ನಡೆದು ಹೋಗುವದು. ಮತ್ತು ಶಾಲೆಗಳ ಮೇಲ್ವಿಚಾರಣೆಯ ಕೆಲಸವು ಹೆಚ್ಚು ದಕ್ಷತೆಯಿಂದ ನಡೆಯುವದಕ್ಕಾಗಿ ೫೦ ಶಾಲೆಗಳಿಗೆ ಒಬ್ಬರಂತೆ ಅಸಿಸ್ಟಂಟ ಡೆವ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರನ್ನು ನಿಯಮಿಸಬೇಕೆಂದೂ ಇದಕ್ಕಾಗಿ ಪ್ರತಿವರ್ಷ ೨೧ (೧೮ ಗಂಡು ೩ ಹೆಣ್ಣು)ರಂತೆ ಐದುವರ್ಷಗಳಲ್ಲಿ ೧೦೫ ಅಸಿಸ್ಟಂಟ ಡೆ. ಎ. ಇ. ರನ್ನು ನಿಯಮಿಸಬೇಕೆಂದೂ ಯೋಜನೆ ಮಾಡಿದೆ.

ಸದ್ಯಕ್ಕೆ ನಡೆದಿರುವವಲ್ಲದೆ ೨೦ ಹೆಚ್ಚಿಗೆ ಒಕ್ಕಲುತನದ ಶಿಕ್ಷಣವುಳ್ಳ ಶಾಲೆಗಳನ್ನೂ ನಾಲ್ಕು ಒಕ್ಕಲುತನದ ಹೈಸ್ಕೂಲುಗಳನ್ನೂ ಪ್ರಾರಂಭಿಸಲಾಗುವದು. ಮತ್ತು ಎರಡು ಟೆಕ್ನಿಕಲ್ ಸ್ಕೂಲುಗಳೂ ಪ್ರಾರಂಭವಾಗುವವು. ಸೈನಿಕರ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗವಂತೆ ಹೆಚ್ಚು ಜನ ಸೈನಿಕರು ಕೂಡಿರುವ ಪ್ರದೇಶದಲ್ಲಿ ಯುದ್ಧವು ಮುಗಿಯುವದರೊಳಗಾಗಿಯೇ ೨೦ ವಸತಿಗೃಹಗಳನ್ನು ಆರಂಭಿಸಲಾಗುವದು.

ಇದೇ ಮೇರೆಗೆ ಒಕ್ಕಲುತನದ ಶಿಕ್ಷಣ, ಡಾಕ್ಟರರು, ನರ್ಸಜನರು, ಸಹಕಾರ, ಇಂಜನೀಯರಿಂಗ್‌ದನಗಳ ಆರೈಕೆ ಮುಂತಾದ ಸಂಸ್ಥೆಗಳಲ್ಲಿ ಕೆಲಸಮಾಡುವದಕ್ಕಾಗಿ ತಕ್ಕ ಶಿಕ್ಷಣವನ್ನು ಪಡೆದ ಜನರನ್ನು ತಯಾರಿಸುವ ಯೋಜನೆಯೂ ಕೂಡ ಕೂಡಲೆ ಪ್ರಾರಂಭವಾಗುವದು.

ಈ ಎಲ್ಲ ಕಾರ್ಯಗಳಿಗಾಗಿ ತಕ್ಕ ಧನ ಸಂಗ್ರಹವನ್ನು ದೊರಕಿಸುವದು ಅತಿ ಮಹತ್ವದ ಮಾತಷ್ಟೆ? ಮೊದಲಿನ ಐದುವರ್ಷಗಳಲ್ಲಿಯೇ ಇದಕ್ಕಾಗಿ ೫೦ ಕೋಟಿ ರೂ. ಗಳು ಬೇಕಾಗಬಹುದೆಂದು ಅಂದಾಜಾಗಿದೆ. ಇಷ್ಟು ದೊಡ್ಡ ರಕಮನ್ನು ಹೆಚ್ಚಿನ ಕರ ಸಾಲ ಇವುಗಳಿಂದಲೂ ಮಧ್ಯವರ್ತಿ ಸರಕಾರದಿಂದ ದೊರೆಯುವ ಸಹಾಯ ದ್ರವ್ಯದಿಂದಲೂ ಪಡೆಯಬೇಕೆಂಬ ವಿಚಾರವಿದೆ. ಯುದ್ಧೋತ್ತರ ಸುಧಾರಣೆಗೆಂದು ಸರಕಾರವು ಸಂಗ್ರಹಿಸಿದ ನಿಧಿಯು ಕೂಡ ಈ ಕಾರ್ಯಕ್ಕಾಗಿ ಉಪಯೋಗವಾಗುವದು. ಮುಂಬಯಿ ಸರಕಾರವು ಕೈಕೊಂಡ ಯುದ್ಧೋತ್ತರ ಸುಧಾರಣೆಗಳ ನಿಧಿಯಲ್ಲಿ ಈಗಾಗಲೆ (೧೯೪೪-೪೫ ರ ಕೊನೆಗೆ) ೭ ಕೋಟಿ ರೂ. ಗಳು ಸಂಗ್ರಹವಾಗಿವೆ. ಒಟ್ಟಿಗೆ ಈ ಎಲ್ಲ ಯೋಜನೆಗಳಿಗಾಗಿ ಬೇಕಾಗುವ ಧನಸಂಗ್ರಹವು ಅಷ್ಟೇನೂ ಅಸಾಧ್ಯವಲ್ಲವೆಂದೂ ಆ ಎಲ್ಲ ಸುಧಾರಣೆಗಳನ್ನು ಆಶಾ ಜನಕ ದೃಷ್ಟಿಯಿಂದಲೇ ನೋಡಬೇಕೆಂದೂ ಸರಕಾರದ ಈ ಪ್ರಕಟನೆಯಲ್ಲಿ ಹೇಳಲಾಗಿದೆ.

೨. ಮಹಾಯುದ್ಧದಲ್ಲಿ ತೊಡಗಿದ ಸೈನಿಕರ ಕುಟುಂಬದವರಿಗೆ ಶೈಕ್ಷಣಿಕ ಸೌಕರ್ಯಗಳು

ಈಗಾಗಲೆ ನಮ್ಮ ಸೈನಿಕರಿಗೂ ಅವರ ಕುಟುಂಬದವರಿಗೂ ಹಲವು ಬಗೆಯ ಸಹಾಯ ಸೌಕರ್ಯಗಳನ್ನು ಸರಕಾರವು ಒದಗಿಸಿ ಕೊಟ್ಟಿರುವದಷ್ಟೇ? ಅಂಥವರ ಕುಟುಂಬದವರಿಗೆ ದೊರೆಯುವ ಶೈಕ್ಷಣಿಕ ಸೌಕರ್ಯಗಳನ್ನು ಹೆಚ್ಚಿಸುವ ಮತ್ತು ಅಂಥ ಕಾರ್ಯಗಳನ್ನು ಕೈಕೊಂಡವರಿಗೆ ಹೆಚ್ಚಿನ ಸಹಾಯ ದ್ರವ್ಯವನ್ನು ಕೊಡುವ ವಿಷಯದಲ್ಲಿ ಮುಂಬಯಿ ಸರಕಾರದವರು ಈ ಕೆಳಗಿನ ಪ್ರಕಟನೆಯನ್ನು ಹೊರಡಿಸಿರುವರು.

ಮುಂಬಯಿ ಪ್ರಾಂತದ ಹಿಂದೀ ಸೈನಿಕರು, ಹಿಂದೀ ಸಂಸ್ಥಾನಗಳ ಸೈನಿಕರು ಮರ್ಕಂಟಾಯಿಲ್ ಮರೀನದವರು (ಹಿಂದೀ ಸಂಸ್ಥಾನಗಳನ್ನು ಬಿಟ್ಟು) ಇವರ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಮತ್ತು ಎಲ್ಲ ಕುಟುಂಬದವರಿಗೆ (ಆಶ್ರಿತರಿಗೂ ಸಹ) ಈ ಸೌಕರ್ಯಗಳು ದೊರೆಯುವವು. ಇಂಥ ಸೈನಿಕರು ಪ್ರತ್ಯಕ್ಷ ರಣಭೂಮಿಯಲ್ಲಿರುವವರ ಯಾದಿಯಲ್ಲಿ

ದ್ದವರಿದ್ದು ಅವರ ಪ್ರತಿ ತಿಂಗಳಿನ ಸಂಬಳವು ೩೦೦ ರೂ. ಗಳಿಗಿಂತ ಹೆಚ್ಚಿಗೆ ಇರಕೂಡದು. ಸೈನಿಕರ ಮಲಮಕ್ಕಳೂ ದತ್ತಕ ಮಕ್ಕಳೂ ಸಹ ಈ ಸೌಕರ್ಯಗಳನ್ನು ಪಡೆಯಬಹುದು. ಮತ್ತು ಸೈನಿಕರ ಮೇಲೆಯೇ ಅವಲಂಬಿಸುವ ಅವರ ಬಂಧುಭಗಿನಿ ಮಡಿದು ಹೋದ ಬಂಧು ಭಗಿನಿ ಇವರ ಮಕ್ಕಳೂ ಸಹ 'ಆಶ್ರಿತರು' ಈ ಸದರಿನಲ್ಲಿ ಸಮಾವೇಶವಾಗುವರು.

ಸೌಕರ್ಯಗಳು:— (೧) ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ಪುಕ್ಕಟೆ ಶಿಕ್ಷಣ ಮತ್ತು ಪಾಟಿ ಪುಸ್ತಕಗಳಿಗಾಗಿ ವರ್ಷಕ್ಕೆ ೧೫ ರೂ. ಸಹಾಯ ದ್ರವ್ಯ. (೨) ಮಾಧ್ಯಮಿಕ ಶಾಲೆ ಮತ್ತು ಹೈಸ್ಕೂಲುಗಳಲ್ಲಿ ಕಲಿಯುತ್ತಿರುವವರಿಗೆ ಆ ಶಾಲೆಗಳ ಯಾವತ್ತೂ ಫೀ (ಆಟದ ಫೀ ಸಹಿತ) ಮತ್ತು ವರ್ಷಕ್ಕೆ ೬೪ ರೂ. ಗಳಷ್ಟು ಸಹಾಯ ಅಥವಾ ಅಂಥ ಸರಕಾರೀ ಶಾಲೆಗಳಲ್ಲಿ ಪೂರ್ಣ ಮಾಫಿ. (೩) ಆರ್ಟ್ಸ್ ಮತ್ತು ಔದ್ಯೋಗಿಕ ಕಾಲೇಜಗಳಲ್ಲಿ ಓದುವವರಿಗೂ ವೈದ್ಯಕೀಯ ಶಿಕ್ಷಣ ಮತ್ತು ಒಕ್ಕಲುತನದ ಶಿಕ್ಷಣ ಇವನ್ನು ಪಡೆಯುವವರಿಗೂ ಆಯಾ ಸಂಸ್ಥೆಗಳಿಗೆ ಕೊಡಬೇಕಾದ ಸಂಪೂರ್ಣ ಫೀಯ ರಕಮು ಮತ್ತು ಪ್ರತಿತಿಂಗಳಿಗೆ ೧೫ ರೂ. ಶಿಷ್ಯವೃತ್ತಿ. ಇಂಥ ವಿದ್ಯಾರ್ಥಿಗಳು ಆಯಾ ಸಂಸ್ಥೆಗಳಲ್ಲಿ ನಡೆಯುವ ಒಂದು ಯೋಗ್ಯತೆಯ ಪರೀಕ್ಷೆಯಲ್ಲಿ ಪಾಸಾಗಿ ೧೦೦ಕ್ಕೆ ನಿರ್ದಿಷ್ಟಪಡಿಸಿದಷ್ಟು ಗುಣಗಳನ್ನು ಪಡೆದಿರಬೇಕಾಗುವದು. ಇಂಥ ಶಿಕ್ಷಣ ಸಂಸ್ಥೆಗಳು ಸರಕಾರದವಾಗಿದ್ದರೆ ಅವುಗಳಲ್ಲಿ ಸಂಪೂರ್ಣ ಫೀಯು ಮಾಫಿ ಮಾಡಲ್ಪಡುವದು. ಔದ್ಯೋಗಿಕ ಅಥವಾ ತಾಂತ್ರಿಕ ಶಿಕ್ಷಣವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಆಯಾ ಸಂಸ್ಥೆಗಳಿಗೆ ಕೊಡಬೇಕಾಗುವ ಸಂಪೂರ್ಣ ಫೀಯ ಹಣವಲ್ಲದೆ ಒಂದು ವರ್ಷಕ್ಕೆ ೧೫ ರೂ. ಸಹಾಯ ದ್ರವ್ಯವು ದೊರೆಯುವದು.

ಇದಲ್ಲದೆ ವಸತಿಗೃಹಗಳಲ್ಲಿ ಇರಬೇಕಾದ ಸಂದರ್ಭದಲ್ಲಿ ಆ ವಿದ್ಯಾರ್ಥಿಗಳಿಗೆ ವಸತಿ ಗೃಹದ ಖರ್ಚಿನ ಹಣವೂ ದೊರೆಯುವದು. ಆದರೆ ಇದು ಪ್ರತಿ ತಿಂಗಳಿಗೆ ೪೦ ರೂ. ಗಳಿಗಿಂತ ಹೆಚ್ಚಾಗಲಾರದು.

೩. ರಾಷ್ಟ್ರೀಯ ಶಿಕ್ಷಣದ ಪುನರ್ಘಟನೆ:— ಕಳೆದ ವರ್ಷದ (ಅಕ್ಟೋಬರ-ಡಿಸೆಂಬರ) ಪ್ರಾ. ಶಿ. ದ ಸಂಚಿಕೆಯಲ್ಲಿ ಈ ವಿಷಯವನ್ನು ಕುರಿತು ಹಿಂದುಸ್ತಾನ ಸರಕಾರದ ಶಿಕ್ಷಣ ವಿಷಯದ ಸಲಹೆಗಾರರಾದ ಮಿ. ಸಾರ್ಜಂಟರು ತಯಾರಿಸಿದ ವರದಿಯ ವಿಚಾರವನ್ನು ವಿವರಿಸಿದೆ. ಆ ವರದಿಯಂತೆ ಕಾರ್ಯವನ್ನು ಕೈಕೊಳ್ಳಬೇಕಾದರೆ ೨೭೩ ಕೋಟಿ ರೂ. ಗಳ ವೆಚ್ಚವನ್ನು ಸಹಿಸಬೇಕಾಗುವದೆಂದೂ ಆ ಲೇಖನದಲ್ಲಿ ಹೇಳಿದೆ. ಯುದ್ಧೋತ್ತರ ಕಾಲದಲ್ಲಿ ಕೈಕೊಳ್ಳಲಿರುವ ಒಕ್ಕಲುತನದ ಸುಧಾರಣೆಗಾಗಿ ೧,೦೦೦ ಕೋಟಿ ರೂ. ವೆಚ್ಚದ ಯೋಜನೆ, ಭೋರೆ ಸಮಿತಿಯವರು ಸೂಚಿಸಿರುವ ಆರೋಗ್ಯ ಖಾತೆಯ ಕಾರ್ಯಕಲಾಪಗಳು ಇವೆಲ್ಲ ಅನೇಕಾನೇಕ ಸ್ವಯಂಶಾಸಿತ ಪ್ರಾಂತಗಳು ಹತ್ತಾರು ಹಲವಾರು ಸಂಸ್ಥಾನಗಳು ಇವನ್ನೊಳಗೊಂಡ ಮಹಾಭಾರತ ಸಾಮ್ರಾಜ್ಯದಲ್ಲಿ ಕಾರ್ಯರಂಗಕ್ಕೆ ಬರುವದು ಸಾಧ್ಯವೇ? ಸ್ವಾತಂತ್ರ್ಯ ಭೋರಣೆ, ಆರ್ಥಿಕ ಪರಿಸ್ಥಿತಿ ಮುಂತಾದವುಗಳಿಂದ ಭಿನ್ನ ಭಿನ್ನವಾಗಿರುವ ಇಂತಹ ಹಲವು ವಿಭಾಗಗಳು ಪರಸ್ಪರ ಸಹಕಾರದಿಂದ ಕೆಲಸಮಾಡುವದು ಸಂಭವನೀಯವೇ? ಆದುದರಿಂದ ಇಂಥ ಸುಧಾರಣೆಗಳು ಕೇವಲ ಕಾಗದದ ಕುದುರೆಗಳ ಹಾರಾಟದಲ್ಲಿಯೇ ಉಳಿದುಬಿಡಬಹುದು, ಎಂದು ಹಲವರು ಟೀಕಾಕಾರರು ಆಕ್ಷೇಪಿಸಿದ್ದರು. ಆದರೆ ಹಿಂದುಸ್ತಾನ ಸರಕಾರದವರು ಇಂತಹ ಟೀಕಾಕಾರರಿಗೆ ಸಮರ್ಪಕ ಉತ್ತರ ಕೊಡುವ ಕಾರ್ಯವನ್ನು ಪ್ರತ್ಯಕ್ಷ ಮಾಡಿ ತೋರಿಸಲು ಪ್ರಾರಂಭಿಸಿರುವರೆಂಬ ಸಂತೋಷದ ಸುದ್ದಿಯು ಈಗಾಗಲೆ ಪ್ರಕಟವಾಗಿದೆ. ಮಿ. ಸಾರ್ಜಂಟರ ವರದಿಯಂತೆ ಆಗಬೇಕಾದ ಪುನರ್ಘಟನೆಯು ಕಾರ್ಯವು ಮಧ್ಯವರ್ತಿ ಸರಕಾರದ ಪ್ರತ್ಯಕ್ಷ ಆಡಳಿತೆಗೆ ಒಳಗಾಗಿರುವ ದಿಲ್ಲಿ ಪ್ರಾಂತದಲ್ಲಿ ಈಗಾಗಲೆ

ಪ್ರಾರಂಭವಾಗಿದೆ. ಮು. ಸ. ದ ಅಜಮೀರ-ಮಾರವಾಡ, ಬ್ರಿಟಿಶ ಬಲೂಚಿಸ್ತಾನ, ಕೊಡಗು, ಈ ಪ್ರಾಂತಗಳಲ್ಲಿಯೂ ಅವು ಕಾರ್ಯಕಾರಿಯಾಗಿ ನಡೆಯಬಹುದೆಂದು ಆಶಿಸಲಾಗಿದೆ.

ದಿಲ್ಲೀ ಪ್ರಾಂತದಲ್ಲಿ ಸಾರ್ವತ್ರಿಕ ಶಿಕ್ಷಣದ, ಪ್ರತಿಯೊಂದು ಕೂಸೂ ತನ್ನ ಮುಂದಿನ ಜೀವನಕ್ಕೆ ಸಹಾಯಕವಾಗುವ ಶಿಕ್ಷಣವನ್ನು ಪಡೆಯಲೇಬೇಕೆಂಬ, ಯೋಜನೆಯು ಈಗಾಗಲೆ ಪ್ರಚಾರದಲ್ಲಿ ಬಂದು ಹೋಗಿದೆ.

ದಿಲ್ಲೀ ಪ್ರಾಂತದ ಹೈಸ್ಕೂಲುಗಳ ಅಭ್ಯಾಸಕ್ರಮದಲ್ಲಿಯೂ ಕೂಡ ಸಂಪೂರ್ಣ ಪುನರ್ಘಟನೆ ಮಾಡುವ ಕಾರ್ಯವು ಪ್ರಾರಂಭವಾಗಿದೆ. ಹೈಸ್ಕೂಲುಗಳಲ್ಲಿ ಹೈಸ್ಕೂಲುಗಳ ಅಭ್ಯಾಸಕ್ರಮವಷ್ಟೇ ಅಲ್ಲದೆ ಸದ್ಯಕ್ಕೆ ಭಾರತದೇಶದೊಳಗಿನ ಇತರ ವಿಶ್ವವಿದ್ಯಾಲಯಗಳ ಕಾಲೇಜುಗಳಲ್ಲಿ ಕೈಕೊಳ್ಳುವ ಅಭ್ಯಾಸಕ್ರಮದ ಕೆಲವೊಂದು ಭಾಗವನ್ನು ಕೂಡ ಕಲಿಸಿ ಮುಗಿಸುವ ಏರ್ಪಾಡಾಗಿದೆ. ಇದರಿಂದ ಪದವೀಧರರಾಗಲಿರುವವರಿಗೆ ಕಾಲೇಜುಗಳಲ್ಲಿ ಕಲಿಸುವ ಮಹತ್ವದ ಹೆಚ್ಚಿನ ವಿಷಯಗಳ ಅಭ್ಯಾಸಕ್ಕೆ ಹೆಚ್ಚು ಅವಕಾಶವು ದೊರೆದಂತಾಗುವದು. ನಮ್ಮ ದೇಶದ ಸದ್ಯದ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಿಂದ ಫೀ ಹಣವನ್ನು ದೊರಕಿಸುವದು ಅವರನ್ನು ಹಲಕೆಲವು ವಿಷಯಗಳಲ್ಲಿ ಪರೀಕ್ಷಿಸಿ ಪಾಸಾದವರಿಗೆ ಪದವಿಗಳನ್ನು ಕೊಡುವದು ಇವೆರಡೇ ಕೆಲಸಗಳನ್ನು ಪ್ರಾಮುಖ್ಯವಾಗಿ ಕೈಕೊಂಡಂತಿದೆ. ಆದರೆ ಮಿ. ಸಾರ್ಜಂಟರ ವರದಿಗೆ ಅನುಗುಣವಾಗಿ ಹೊಸದಾಗಿ ದಿಲ್ಲಿ ಪ್ರಾಂತದಲ್ಲಿ ಪ್ರಾರಂಭವಾದ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವದಕ್ಕೇ ಹೆಚ್ಚು ಪ್ರಾಧಾನ್ಯತೆಯಿರುವದು. ಪಾಶ್ಚಿಮಾತ್ಯ ದೇಶಗಳ ವಿಶ್ವವಿದ್ಯಾಲಯಗಳಂತೆಯೇ ಮೂರು ವರ್ಷಗಳ ಶಿಕ್ಷಣಕ್ರಮವನ್ನಿಟ್ಟುಕೊಂಡು ವಿದ್ಯಾರ್ಥಿಗಳನ್ನು ಆ ಸಂಸ್ಥೆಗೆ ಸಂಬಂಧಿಸಿದ ವಸತಿಗೃಹಗಳಲ್ಲಿಯೇ ಇಟ್ಟು ಶಿಕ್ಷಣಕೊಟ್ಟು ಆಯಾ ವಿಷಯಗಳಲ್ಲಿ ಪಾರಂಗತರಾದವರಿಗೆ ಪದವಿಗಳನ್ನು ಕೊಡುವ ಮಹತ್ವದ ಕೆಲಸವನ್ನು ಈ ನೂತನ ವಿಶ್ವವಿದ್ಯಾಲಯವು ಕೈಕೊಳ್ಳುವದು. ಇದರಿಂದ ಈಗ ನಮ್ಮಲ್ಲಿ ಪ್ರಚಾರದಲ್ಲಿರುವ ವಿಶ್ವವಿದ್ಯಾಲಯಗಳ ಸ್ವರೂಪವು ಸಂಪೂರ್ಣ ಬದಲಾಗಿ ಅದೊಂದು ಹೆಚ್ಚಿನ ಶೈಕ್ಷಣಿಕ ಕೇಂದ್ರವಾಗಿ ಮಾರ್ಪಡುವದು.

ಮೂರು ವರ್ಷಗಳ ಹಿಂದೆ ದಿಲ್ಲಿಯಲ್ಲಿ ಪ್ರಾರಂಭಿಸಲ್ಪಟ್ಟ ಶಿಕ್ಷಣಸಂಸ್ಥೆಯೊಂದರಿಂದ ಈ ದೇಶದಲ್ಲಿ ಉಚ್ಚ ಶಿಕ್ಷಣದ ಬಹುಮುಖದ ಸ್ವರೂಪವು ಜನತೆಯ ನಿದರ್ಶನಕ್ಕೆ ಬಂದಿರುವದು. ಪ್ರಕೃತಕ್ಕೆ ಇದೇ ಸಂಸ್ಥೆಯನ್ನು ವಿಸ್ತರಿಸಿ ಇದನ್ನು ಲಂಡನದೊಳಗಿನ 'ಸಿಟಿ ಎಂಡ್ ಗಿಲ್ಡ್ಸ ಇನ್‌ಸ್ಟಿಟ್ಯೂಟ' (City and Guild's Institute) ದಷ್ಟು ಘನತರವಾದ ಸ್ವರೂಪಕ್ಕೆ ತರಬೇಕೆಂದು ನಿಶ್ಚಿತವಾಗಿದೆ. ಇಂಜನೀಯರಿಂಗ್, ಔದ್ಯೋಗಿಕ ರಸಾಯನ ಶಾಸ್ತ್ರ, ಶಿಲ್ಪ-ಶಾಸ್ತ್ರ, ಮತ್ತು ಕಾಮರ್ಸ ಈ ವಿಷಯಗಳ ಉಚ್ಚತರಗತಿಯ ಅಭ್ಯಾಸಕ್ಕೆ ಈ ಸಂಸ್ಥೆಯಲ್ಲಿ ಅನುಕೂಲತೆ ಮಾಡಿಕೊಡಲಾಗುವದು. ಇದರಲ್ಲಿಯ ಇನ್ನೂ ಒಂದು ವಿಶೇಷವೆಂದರೆ ಸ್ತ್ರೀಯರು ಗೃಹಕರ್ಮವಿಜ್ಞಾನ, ಮಾತೃತ್ವ, ಬಾಣಂತಿಯರ ಆರೈಕೆ, ಶಿಶುಸಂಗೋಪನ, ಸಾರ್ವಜನಿಕ ಆರೋಗ್ಯರಕ್ಷಣೆ ಮುಂತಾದ ವಿಷಯಗಳಲ್ಲಿ ಉಚ್ಚತರಗತಿಯ ಜ್ಞಾನವನ್ನು ದೊರಕಿಸಲು ಅನುಕೂಲವಾಗುವಂಥ ಒಂದು ಸ್ವತಂತ್ರ ವಿಭಾಗವನ್ನು ಕಲ್ಪಿಸಲಾಗಿದೆ. ಇಲ್ಲಿ ಶಿಕ್ಷಣಪಡೆದ ಸ್ತ್ರೀಯರು ಮೇಲ್ತರಗತಿಯ ಕೌಟುಂಬಿಕ ವನಿತೆಯರಾಗಬಹುದಲ್ಲದೆ ಸಾರ್ವಜನಿಕ ಆರೋಗ್ಯರಕ್ಷಣೆ ರೋಗಿಗಳ ಶುಶ್ರೂಷೆ ಮೊದಲಾದ ದೇಶಹಿತದ ಕಾರ್ಯಗಳಿಗೆ ನೇರವಾಗಿ ಸ್ವದೇಶದ ಉತ್ಕರ್ಷಕ್ಕೆ ತಕ್ಕ ಸಹಾಯವನ್ನು ನೀಡಲು ಸಮರ್ಥರಾಗುವರು.

ಪಿ. ಎಸ್. ಸಿ. ಪರೀಕ್ಷೆಯ ಅನುಭವಗಳು (೧೯೪೪)

೧. **ಭಾಷಾವಿಷಯಗಳು**— ಉಮೇದುವಾರರು ಬರೆದ ಉತ್ತರಗಳು ಒಟ್ಟಿನ ಮೇಲೆ ತಕ್ಕಮಟ್ಟಿಗೆ ಸರಿಯಾಗಿದ್ದವೆನ್ನಬಹುದು. ಆದರೆ ಅವರ ಬರೆಹದಲ್ಲಿ ನಿಶ್ಚಿತವಾದ ಜ್ಞಾನ, ವ್ಯಾಕರಣಶುದ್ಧಿ ಇವುಗಳ ಅಭಾವವು ಸರ್ವತ್ರ ಕಂಡುಬರುತ್ತಿತ್ತು. ಸಂಕ್ಷೇಪ ಬರೆಹವು ತೀರ ಕಡಿಮೆತರಗತಿಯದಾಗಿದ್ದಿತು. ವಿಸ್ತೃತ ಬರೆಹದೊಳಗಿನ ಹಲಕೆಲವು ವಾಕ್ಯಗಳನ್ನು ಅಲ್ಲೊಂದು ತೆಗೆದುಹಾಕಿ ಸಣ್ಣದಾಗಿಸಿ ಬರೆಯಲು ಹವಣಿಸಿದವರೇ ಬಹಳ. ಇದೇಸರಿಯಾದ ಸಂಕ್ಷೇಪ ಬರೆಹವೆಂದು ಅವರು ತಿಳಿದುಕೊಂಡಂತಿತ್ತು. 'ಸ್ವಾರಸ್ಯ ಗ್ರಹಣ'ಕ್ಕೆ ಸಂಬಂಧಿಸಿದ ಪ್ರಶ್ನೆಗೆ ಬರೆದ ಉತ್ತರವು ಸಮಾಧಾನಕರವಾಗಿರಲಿಲ್ಲ. ವ್ಯಾಕರಣದ ಪ್ರಶ್ನೆಗಳನ್ನು ಬಹುಜನರು ಬಿಟ್ಟುಬಿಟ್ಟಿರುವರು. 'ತತ್ಸಮ' 'ತದ್ಭವ' ಇವುಗಳ ಅರ್ಥವು ಸರಿಯಾಗಿ ತಿಳಿಯದ್ದರಿಂದ ಒಂದನ್ನೊಂದು ಅದಲುಬದಲಾಗಿ ಉತ್ತರ ಬರೆದಿರುವರು. ಅಲಂಕಾರದ ವಿಷಯವನ್ನಂತೂ ತಿಳಿದುಕೊಂಡವರು ತೀರ ವಿರಳ. ಒಳ್ಳೆಯ ಶೈಲಿ, ಪದಗಳನ್ನೂ ವಾಕ್ಯಖಂಡಗಳನ್ನೂ ಸಾರ್ಥಕವಾಗಿ ಉಪಯೋಗಿಸುವದು, ಇವುಗಳಿಗೆ ಸಂಬಂಧಿಸಿದ ದೋಷಗಳನ್ನಂತೂ ಎಷ್ಟು ಹೇಳಿದರೂ ತೀರದು.

ಆರನೆಯ ಇಯತ್ತ್ತೆಯಿಂದಲೇ ಅಥವಾ ಅದಕ್ಕೂ ಮೊದಲೇ ವಿದ್ಯಾರ್ಥಿಗಳಿಗೆ ಸಂಕ್ಷೇಪ ಬರೆಹ ಸ್ವಾರಸ್ಯಗ್ರಹಣ ಮತ್ತು ಅರ್ಥವಿವರಣೆ ಇವುಗಳ ಮೂಲ ತತ್ವಗಳನ್ನು ಕಲಿಸಲು ಶಿಕ್ಷಕರು ಪ್ರಾರಂಭಿಸಬೇಕು. ಮತ್ತು ಅವರಿಗೆ ವ್ಯಾಕರಣದ ಅಭ್ಯಾಸದಲ್ಲಿ ಹೆಚ್ಚು ಸ್ಪಷ್ಟವಾದ ಜ್ಞಾನವನ್ನು ಮಾಡಿಕೊಡಬೇಕು. ಭಾಷಾವಿಷಯಗಳ ಹಲವು ಅಭ್ಯಸನಗಳನ್ನು ಕೊಟ್ಟು ಅವನ್ನು ಬಿಡಿಸಲು ಹಚ್ಚಬೇಕು; ಮತ್ತು ಬರೆಹದ ರೂಢಿಯನ್ನು ಹೆಚ್ಚು ಮಾಡಿಸಬೇಕು. ಭಾಷಾವಿಷಯಗಳ ಅಭ್ಯಾಸದ ಬೇರೆ ಬೇರೆ ಉದ್ದೇಶಗಳನ್ನು ವಿದ್ಯಾರ್ಥಿಗಳಲ್ಲಿ ದೃಢಗೊಳಿಸಬೇಕು. ಸುವಾಚ್ಯವಾದ ಶುದ್ಧ ಬರೆಹವನ್ನು ಪ್ರಾರಂಭದಿಂದಲೂ ಪ್ರತಿಪಾಠದಲ್ಲಿಯೂ ಆಗ್ರಹಪೂರ್ವಕವಾಗಿ ಬರೆಯಿಸಿಕೊಳ್ಳಬೇಕು.

೨. **ನಿಬಂಧ ಬರೆಹ**— 'ಮುಖ್ಯ' ಪ್ರಶ್ನೆಗಳನ್ನೂ 'ಅಥವಾ' ಪ್ರಶ್ನೆಗಳನ್ನು ಕೂಡಿಯೇ ಬಿಡಿಸಲು ಹವಣಿಸಿದ್ದರಿಂದ ಬಹುಜನ ಉಮೇದವಾರರಿಗೆ ಅವರು ಬರೆಯಬೇಕಾದ ಎಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಲು ವೇಳೆಯು ಸಾಕಾಗಲಿಲ್ಲ. ಕಥಾರಚನೆಗಾಗಿ ಕೊಟ್ಟ ಪ್ರಶ್ನೆಯ ಉತ್ತರವು ತೀರ ಅಸಂಪೂರ್ಣವಾಗಿದ್ದು ಮನುಷ್ಯನನ್ನು ಮಾಡಲು ಹೊರಟವನು ಕೇವಲ ಎಲುವಿನ ಹಂದರವನ್ನು ಮಾಡಿಟ್ಟಂತಾಗಿತ್ತು. ಕಥಾರಚನೆಯಲ್ಲಿ ಉಮೇದವಾರರು ತಮ್ಮ ಕಲ್ಪನಾಶಕ್ತಿಯನ್ನು ಜೆಚ್ಚಾಗಿ ಉಪಯೋಗಿಸಬೇಕಾಗುವದು. ಸಂಭಾಷಣೆಯ ಪ್ರಶ್ನೆಗೆ ಬರೆದ ಉತ್ತರವು ತಕ್ಕ ಮಟ್ಟಿಗೆ ಸರಿಯಾಗಿದ್ದರೂ ಅದರಲ್ಲಿ ತರ್ಕಬದ್ಧವಾದ ವಿಷಯ ವಿವೇಚನೆಯು ಎಷ್ಟೂ ಇರಲಿಲ್ಲ, ಇಷ್ಟೇ ಅಲ್ಲ ಏಕತಾರಿಯ ನಾದದ ಹಾಗೆ ಅದೇ ಅದೇ ಮಾತನ್ನೇ ತಿರುತಿರುಗಿ ಹೇಳುವದು ಹೆಚ್ಚಾಗಿದ್ದಿತು.

ಪತ್ರ ಬರೆಹದಲ್ಲಿ ಪತ್ತೆಯನ್ನು ಬರೆಯುವ ಪದ್ಧತ್ತಿಯು ಕಡೆಗೆ ಹೆಚ್ಚು ಲಕ್ಷ್ಯವನ್ನು ಪೂರೈಸಬೇಕಾಗಿತ್ತು. ಪತ್ರದಲ್ಲಿ ಯಾವ ಸಂಗತಿಯನ್ನು ಬರೆಯಬೇಕೆಂಬದನ್ನು ಬಹುಜನ ಉಮೇದುವಾರರು ತಿಳಿದುಕೊಳ್ಳದೆ ದುರ್ಲಕ್ಷ್ಯದಿಂದ ಉತ್ತರ ಬರೆದಿದ್ದರು. ಒಳ್ಳೆಯ ಪ್ರಚಾರ ಪತ್ರಿಕೆ (ಜಾಹಿರಾತು) ಯು ಸಂಕ್ಷೇಪವಾಗಿದ್ದು ಮುಖ್ಯ ಮುದ್ದೆಯು ಮಾತುಗಳನ್ನು ಒಡೆದು ತೋರಿಸುತ್ತಿರಬೇಕು. ಉಮೇದವಾರರು ಈ ಮಾತನ್ನು ಇನ್ನೂ ತಿಳಿದುಕೊಂಡಿಲ್ಲ ಮುಂದೆ ಕಲಿಯಬೇಕು.

ಪಿ. ಎಸ್. ಸಿ. ಪರೀಕ್ಷೆಯ ಅನುಭವಗಳು

ನಿಬಂಧವನ್ನು ಬರೆಯುವದಕ್ಕೆ ಪ್ರಾರಂಭಿಸುವದಕ್ಕಿಂತ ಮೊದಲು ಬಾಯಿಯಿಂದ ಜನ್ನಾಗಿ ಚರ್ಚಿಸಿ ನಿಬಂಧದ ಎಲ್ಲ ಮುದ್ದೆಗಳನ್ನು ಕ್ರಮಗೊಳಿಸಿಕೊಂಡು ಅವುಗಳ ಬಗ್ಗೆ ಹೇಳತಕ್ಕ ಮಾತುಗಳನ್ನೆಲ್ಲ ಹೇಳುವ ರೂಢಿಮಾಡಿಸಬೇಕು. ಪ್ರಾರಂಭದಲ್ಲಿ ನಿಬಂಧ **ಲೇಖನ** ಕ್ಕಿಂತಲೂ **ವಾಚಾನಿಬಂಧಕ್ಕೇ** ಹೆಚ್ಚು ಪ್ರಾಧಾನ್ಯತೆಯನ್ನು ಕೊಡಬೇಕು. ನಿಬಂಧ, ಸಂಭಾಷಣೆ ಮತ್ತು ಪತ್ರಬರೆಹ ಇವುಗಳಿಗೆ ಸಂಬಂಧಿಸಿದ ವಿಷಯಗಳನ್ನು ವಿದ್ಯಾರ್ಥಿಗಳ ಸ್ವಂತ ಅನುಭವದ ವಿಷಯಗಳಿಂದಲೇ ಆರಿಸಿರಬೇಕು. ಶಿಕ್ಷಕರು ವಿದ್ಯಾರ್ಥಿಗಳ ಬರೆಹವನ್ನು ಹೆಚ್ಚು ಲಕ್ಷಗೊಟ್ಟು ತಿದ್ದಬೇಕು; ಮತ್ತು ಅವರವರ ತಪ್ಪುಗಳನ್ನು ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ತಿಳಿಸಿಕೊಟ್ಟು ಸರಿಪಡಿಸಬೇಕು. ಹಾಗು ಒಮ್ಮೆ ಮಾಡಿದ ತಪ್ಪನ್ನು ಪುನಃ ಮಾಡದಂತೆ ವಿದ್ಯಾರ್ಥಿಗಳಿಗೆ ಎಚ್ಚರ ಕೊಟ್ಟು ಆದಕ್ಕೆ ತಕ್ಕಷ್ಟು ಅವಕಾಶವನ್ನು ಕಲ್ಪಿಸಿ ಕೊಡಬೇಕು.

೩. **ಅಂಕಗಣಿತ**— ಪ್ರಶ್ನ ಪತ್ರಿಕೆಯೊಳಗಿನ ಉದಾಹರಣೆಗಳು ಒಹುಶಃ ಉಮೇದು ವಾರರ ದಿನದ ವ್ಯವಹಾರಕ್ಕೆ ಸಂಬಂಧಿಸಿದವುಗಳೇ ಇದ್ದುದರಿಂದ ಈ ವಿಷಯದಲ್ಲಿ ಉಮೇದು ವಾರರ ಉತ್ತರಗಳು ತಕ್ಕಷ್ಟು ಸಮಾಧಾನಕರವಾಗಿದ್ದುವೆಂದು ಹೇಳಲು ಅಡ್ಡಿಯಿಲ್ಲ. ಆದರೂ ತಾವು ಬಿಡಿಸಿದ ಉದಾಹರಣೆಗಳನ್ನಷ್ಟೇ ಬಿಡಿಸಬಲ್ಲ ಹಲವರು ಉಮೇದುವಾರರಿಗೆ ಇಂಥ ಸುಲಭ ಉದಾಹರಣೆಗಳನ್ನು ಬಿಡಿಸಲು ಕೂಡ ತೊಂದರೆಯಾದಂತೆ ಕಂಡು ಬಂದಿರುವದು.

=, :, ::, % ಇಂಥ ಅತಿ ಮಹತ್ವದ ಮತ್ತು ಸರ್ವಸಾಮಾನ್ಯವಾದ ಚಿಹ್ನಗಳನ್ನು ಕೂಡ ಸರಿಯಾಗಿ ತಿಳಿದುಕೊಂಡು ಉಪಯೋಗಿಸಲಿಕ್ಕೂ ಮೆಟ್ಟುಗಳಂತೆ ಸಾಗುವದಕ್ಕೂ ಬಹುಜನ ಉಮೇದುವಾರರಿಗೆ ಬರಲಿಲ್ಲ.

ಉಮೇದುವಾರರಿಗೆ ಗಣಿತದ ಉದಾಹರಣೆಗಳನ್ನು ಪದ್ಧತಿಗನುಸರಿಸಿ ಬಿಡಿಸುವ ರೂಢಿಯನ್ನು ಮಾಡಿಸಬೇಕು. ಬಾಯಲೆಕ್ಕಗಳ ರೂಢಿಯಿಂದ ಪಾಟಿಯ ಮೇಲಿನ ಲೆಕ್ಕಗಳನ್ನು ಬಿಡಿಸುವದಕ್ಕೆ ತುಂಬಾ ಸಹಾಯವಾಗುವದು. ದಿನದ ವ್ಯವಹಾರಕ್ಕೆ ಸಂಬಂಧಿಸಿದ ಪ್ರತ್ಯಕ್ಷ ಉದಾಹರಣೆಗಳನ್ನು ಆರಿಸಿಕೊಟ್ಟು ಅವನ್ನು ಬಿಡಿಸುವ ರೂಢಿ ಮಾಡಿಸುವದು ಅವಶ್ಯ.

೪. **ಭೂಮಿತಿ**— ಈ ವಿಷಯದಲ್ಲಿ ಉಮೇದುವಾರರ ಉತ್ತರಗಳು ತಕ್ಕಮಟ್ಟಿಗೆ ಸಮಾಧಾನಕರವಾಗಿದ್ದುವು. ಬಹುಜನ ಉಮೇದುವಾರರು ಮೊದಲನೆಯ ಪ್ರಶ್ನೆಯಲ್ಲಿಯ ಹೌದು ಅಥವಾ ಅಲ್ಲ' ಎಂಬ ಉತ್ತರಕ್ಕೆ ತಕ್ಕ ಕಾರಣವನ್ನು ಹೇಳಿಲ್ಲ. ಮತ್ತು ಕೇವಲ ಅಂದಾಜಿನಿಂದಲೇ ಉತ್ತರಕೊಟ್ಟು ಪಾರಾಗಲು ಹವಣಿಸಿರುವರು. ಭೂಮಿತಿಯ ಉಪಕರಣಗಳ ಉಪಯೋಗಕ್ಕೆ ಸಂಬಂಧಿಸಿದ ಪ್ರಶ್ನೆಗೆ ಕೊಟ್ಟ ತೀರ ಅಸಮರ್ಪಕವಾದ ಉತ್ತರದಿಂದ ಬಹುಜನ ಉಮೇದುವಾರರಿಗೆ ಪ್ರೊಟ್ರೇಕ್ಟರ (ಕೋನಮಾಪಕ) ದಂಥ ತೀರ ಸಾದಾ ಉಪಕರಣವನ್ನು ಕೂಡ ಹೇಗೆ ಸರಿಯಾಗಿ ಉಪಯೋಗಿಸಬೇಕೆಂಬದು ಗೊತ್ತಿಲ್ಲವೆಂದು ಕಂಡುಬರುವದು. ಭೂಮಿತಿಯ ಪ್ರಮೇಯಗಳನ್ನು ಪ್ರಾಧಾರವಾಗಿ ಸಿದ್ಧ ಮಾಡದೆ ಕಾಲ್ಪನಿಕವಾಗಿ ಸ್ಪಷ್ಟೀಕರಿಸಲು ಹೊರಟಿರುವದು ಸರ್ವತ್ರ ಕಂಡುಬರುತ್ತಿರುವದು. ಪ್ರವಾಸದ ಅಂಕೆ ಸಂಖ್ಯೆಗಳ ಆಧಾರದಿಂದ ಆಕೃತಿಯನ್ನು ರಚಿಸುವಾಗ ದಿಕ್ಕುಗಳು ಅಂಶಗಳು ಇವುಗಳ ಸರಿಯಾದ ಅರ್ಥವು ಬಹುಜನ ಉಮೇದುವಾರರಿಗೆ ತಿಳಿಯಲಿಲ್ಲ. ಪ್ರಮೇಯಗಳನ್ನು ಅಕ್ಷರಶಃ ಪಾಠ ಮಾಡುವ ಚಟವು ಬಿದ್ದದರಿಂದ ಹಲವು ಉಮೇದುವಾರರು ಪ್ರಶ್ನೆಯಲ್ಲಿ ಬೇಕೆಂದು ಬದಲಿಸಿಕೊಟ್ಟ ಅಕ್ಷರಗಳನ್ನು ಸಹ ದುರ್ಲಕ್ಷಿಸಿ ತಾವು ಪಾಠಮಾಡಿದ ಅಕ್ಷರಗಳನ್ನೇ ಉಪಯೋಗಿಸಿ **ಉತ್ತರ** ಬರೆಯಲು ಹವಣಿಸಿರುವರು.

ಈ ವಿಷಯವನ್ನು ಕಲಿಸುವ ಶಿಕ್ಷಕರು ಭೂಮಿತಿಯ ಪ್ರಮೇಯಗಳನ್ನೂ ಅವನ್ನು ಸಿದ್ಧಮಾಡುವ ಕ್ರಮವನ್ನೂ ಸರಿಯಾಗಿ ತಿಳಿದುಕೊಂಡು ಮುಂದೆ ಸಾಗಬೇಕಲ್ಲದೆ ಕೇವಲ ಪಾಠಮಾಡಿದರೆ ವಿಷಯ ಜ್ಞಾನವಾಯಿತೆಂಬ ತಪ್ಪು ತಿಳಿವಳಿಕೆಗೆ ವಿದ್ಯಾರ್ಥಿಗಳು ಒಳಗಾಗದಂತೆ ನೋಡಿಕೊಳ್ಳಬೇಕು. ಮತ್ತು ಅವರಿಗೆ ಭೂಮಿತಿಯ ಉಪಕರಣಗಳನ್ನು ಸರಿಯಾಗಿ ಉಪಯೋಗಿಸುವದಕ್ಕೆ ಕಲಿಸಿಕೊಡಬೇಕು. ಭೂಮಿತಿಯ ತತ್ವಗಳನ್ನು ದಿನದ ವ್ಯವಹಾರದ ವಿಷಯಗಳಲ್ಲಿ ಹೇಗೆ ಉಪಯೋಗಿಸಿಕೊಳ್ಳಬೇಕೆಂಬದನ್ನೂ ಕೂಡ ವಿದ್ಯಾರ್ಥಿಗಳಿಗೆ ತಿಳಿಸಿಕೊಡುವದು ಶಿಕ್ಷಕರ ಕರ್ತವ್ಯವು.

೫. **ಜಮಾಖರ್ಚು**— ಕೊನೆಯ ಪ್ರಶ್ನೆಯು ತುಸು ಗಡುಚಾಗಿದ್ದು ಉಮೇದುವಾರರ ದಾರಿಯಲ್ಲಿ ಅದೊಂದು ದೊಡ್ಡ ಎಡರುಗಲ್ಲಾಗಿದ್ದಿತು. ಇದೊಂದು ಪ್ರಶ್ನೆಯನ್ನು ಬಿಟ್ಟರೆ ಉಮೇದುವಾರರ ಉತ್ತರಗಳು ತಕ್ಕಮಟ್ಟಿಗೆ ಸಮಾಧಾನಕರವಾಗಿದ್ದವು. ಎಷ್ಟೋ ಉಮೇದುವಾರರಿಗೆ ಕಿರ್ದಿ ಮತ್ತು ಬೆಲೆಯಪಟ್ಟಿ ಇವುಗಳಲ್ಲಿರುವ ಭೇದವೇ ಗೊತ್ತಾಗಿರಲಿಲ್ಲ.

ಶಾಲೆಯಲ್ಲಿ ಕಲಿಸಲ್ಪಡುವ ಎಲ್ಲ ವಿಷಯಗಳಲ್ಲಿ ಜಮಾಖರ್ಚು ಹೆಚ್ಚು ವ್ಯಾವಹಾರಿಕ ವಿಷಯವು. ಆದುದರಿಂದ ಈ ವಿಷಯವನ್ನು ಕಲಿಸುವಾಗ ಅದರ ವ್ಯಾವಹಾರಿಕ ಸ್ವರೂಪವನ್ನೇ ಅನುಸರಿಸುವದು ಅತ್ಯಾವಶ್ಯಕವಾಗಿದೆ. ಪ್ರತಿಯೊಂದು ಪಾರಿಭಾಷಿಕಪದ, ಪ್ರತಿಯೊಂದು ಪ್ರಕಾರದ ವ್ಯವಹಾರದ ಬರೆವಣಿಗೆ ಮತ್ತು ಜಮಾಖರ್ಚಿನ ತತ್ವ ಇವುಗಳನ್ನು ದಿನದ ವ್ಯವಹಾರದ ಅನೇಕ ಉದಾಹರಣೆಗಳಿಂದ ವಿವರಿಸಿ ತಿಳಿಸಿಕೊಡುವದು ಅವಶ್ಯವೆಂಬುದನ್ನು ಈ ವಿಷಯದ ಶಿಕ್ಷಕರು ತಿಳಿದಿರಬೇಕು.

೬. **ಇತಿಹಾಸ**— ಈ ವರ್ಷದ ಹೊಸಮಾದರಿಯ ಪ್ರಶ್ನಪತ್ರಿಕೆಯಲ್ಲಿ ವಿಸ್ತಾರವಾದ ವಿವರಣೆಗೆ ಅಥವಾ ನಿಬಂಧರೂಪದ ಉತ್ತರಕ್ಕೆ ಎಷ್ಟೂ ಅವಕಾಶವಿರಲಿಲ್ಲ. ಉಮೇದುವಾರರು ಯಥಾಸ್ಥಿತ ಸಂಗತಿಗಳನ್ನೂ ಕಾಲ, ಕಾರ್ಯಕಾರಣ ವಿವೇಚನೆ, ಇವುಗಳನ್ನೂ ನಿರ್ದಿಷ್ಟವಾಗಿ ಹೇಳಲೇಬೇಕಾಗಿತ್ತು. ಯಥಾಸ್ಥಿತ ಜ್ಞಾನವುಳ್ಳವರೇ ಇವಕ್ಕೆ ಉತ್ತರ ಬರೆಯಲು ಸಾಧ್ಯವಾಗುವಂತಿತ್ತಲ್ಲದೆ ಅಂದಾಜಿನಿಂದ ಹಾಗೆ ಹೀಗೆ ಬರೆಯಲು ಅವರಿಗೆ ಅವಕಾಶವಿರಲಿಲ್ಲ. ಈ ಬಗೆಯ ಪ್ರಶ್ನಪತ್ರಿಕೆಯಿಂದ ಉಮೇದುವಾರರ ಇತಿಹಾಸದ ತಪ್ಪು ತಿಳಿವಳಿಕೆ, ಸರಿಯಾದ ಸಂಗತಿಗಳ ಮತ್ತು ಕಾರ್ಯಕಾರಣ ಭಾವಗಳ ಜ್ಞಾನದ ಅಭಾವ ಇವು ಬೆಳಕಿಗೆ ಬಂದುವು. ಉಮೇದುವಾರರು ಒಮ್ಮೆ ಅಂದಾಜಿನಿಂದ ಉತ್ತರ ಬರೆಯುವ ಹವ್ಯಾಸಕ್ಕೆ ಬಿದ್ದರೆಂದರೆ ಅವರಿಗೆ ಸರಿಯಾದ ದಾರಿಯು ಹತ್ತಲೇ ಆರದು. ಒಂದು ಸುಳ್ಳು ಮುಚ್ಚಲು ಹವಣಿಸುವನು ಹತ್ತು ಸುಳ್ಳು ಹೇಳಬೇಕಾಗುವಂತೆ ಅಂದಾಜಿನಿಂದ ತಪ್ಪು ಉತ್ತರಕೊಡಲು ಹೊರಟವನು ತಪ್ಪಿನ ಮಾಲಿಕೆಯನ್ನೇ ರಚಿಸುತ್ತ ಹೋಗುವನು.

ಇತಿಹಾಸದಲ್ಲಿ ಕಾಲ್ಪನಿಕ ವಿಚಾರಗಳಿಗೆ ಅವಕಾಶ ಕೊಡದಿರುವದು ಅತ್ಯವಶ್ಯವಾದ ಮಾತು. ಕೇವಲ ಬಾಯಿಪಾಠವು ಉಮೇದುವಾರರಿಗೆ ಎಷ್ಟೂ ಪ್ರಯೋಜನವಾಗಲಾರದು. ಆದುದರಿಂದ ವಿದ್ಯಾರ್ಥಿಗಳಿಗೆ ಇತಿಹಾಸವನ್ನು ಪ್ರತ್ಯಕ್ಷನಡೆದುಹೋದ ಸಂಗತಿಗಳಂತೆಯೇ ಕಲಿಸತಕ್ಕದ್ದು. ಅದಕ್ಕಾಗಿ ಶಿಕ್ಷಕರು ಕಾಲರೇಷೆ (time line) ಯಂಥ ಸಾಧನಗಳನ್ನು ಉಪಯೋಗಿಸಿಕೊಂಡು ವಿಷಯವು ಅವರಿಗೆ ಮನದಟ್ಟಾಗುವಂತೆ ಕಲಿಸತಕ್ಕದ್ದು.

೭. **ಭೂಗೋಲ**:—ಉಮೇದುವಾರರು ಪ್ರಾಕೃತಿಕ ಪರಿಸ್ಥಿತಿಗಳು ಮಾನವನ ಜೀವನದ ಹಾಗು ಅವನ ಚಟುವಟಿಕೆಗಳ ಮೇಲೆ ಎಂಥ ಪರಿಣಾಮವನ್ನುಂಟು ಮಾಡುವವೆಂಬ ವಿಷಯದಲ್ಲಿ ತೋರಿಸಿದ ಅಜ್ಞಾನವನ್ನು ನೋಡಿದರೆ ಮನಸ್ಸು ಮರುಗುವದು. ಅವರಿಗೆ ಬೇರೆ ಬೇರೆ

ದೇಶಗಳ ಮತ್ತು ಜನಾಂಗಗಳ ವಿಷಯದಲ್ಲಿದ್ದ ಜ್ಞಾನವು ತೀರ ಕಡಿಮೆತರಗತಿಯದಾಗಿತ್ತು. ನಕಾಶೆಯನ್ನು ಓದಿ ತಿಳಿದುಕೊಳ್ಳುವ ವಿಷಯದ ತೀರ ಪ್ರಾರಂಭದ ಕಲ್ಪನೆಗಳು ಕೂಡ ಅವರಿಗೆ ತಿಳಿದಿರಲಿಲ್ಲ. ಉಮೇದುವಾರರು ಏನೂ ವಿಚಾರಮಾಡದೆ ಮನಬಂದಂತೆ ಉತ್ತರ ಬರೆದಿರುವಂತೆ ಕಂಡುಬಂದಿತು.

ಪ್ರಾ. ಶಾಲೆಗಳಲ್ಲಿ ಈ ವಿಷಯವನ್ನು ಹೆಚ್ಚು ಕ್ರಮಬದ್ಧವಾಗಿ ಕಲಿಸಬೇಕು. ಪ್ರವಾಸ, ನಿರೀಕ್ಷಣೆ, ಮತ್ತು ನಕಾಶೆಗಳ ಉಪಯೋಗ ಇವುಗಳ ಸಹಾಯದಿಂದಲೇ ಈ ವಿಷಯವನ್ನು ಕಲಿಸಿದ ಹೊರತು ಈ ಪರಿಸ್ಥಿತಿಯು ಸುಧಾರಿಸಲಾರದು. ತಕ್ಕ ಉಪಕರಣಗಳನ್ನು ಉಪಯೋಗಿಸಿ ಕಲಿಸಿದ ಹೊರತು ಈ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಅಭಿರುಚಿಯು ಹುಟ್ಟಲಾರದು; ಮತ್ತು ಸರಿಯಾದ ಜ್ಞಾನವಾಗಲಾರದು. ಭೂಗೋಲದಲ್ಲಿ ಓದುವ ಸಂಗತಿಗಳು ಪ್ರತ್ಯಕ್ಷ ಸಂಗತಿಗಳೆಂಬ ವಿಚಾರವು ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ಕಲಿಸುವದು ಅವಶ್ಯವೆಂಬದನ್ನು ಶಿಕ್ಷಕರು ನೆನಪಿಡಬೇಕು.

ಬ. **ಶಾಸ್ತ್ರೀಯ ವಿಷಯಗಳು:**— ಶಾಲೆಗಳಲ್ಲಿ ಈ ವಿಷಯವನ್ನು ಕಲಿಸುವದಕ್ಕೆ ಅವಶ್ಯವಿದ್ದ ಪ್ರಯೋಗಶಾಲೆ, ಉಪಕರಣಗಳು ಮೊದಲಾದ ಸಾಧನಗಳ ಮತ್ತು ಅನುಕೂಲತೆಗಳ ಅಭಾವದ ಮೂಲಕ ತೊಂದರೆಯಾಗುತ್ತಿದ್ದರೂ ಉಮೇದುವಾರರ ಉತ್ತರಗಳು ತಕ್ಕಮಟ್ಟಿಗೆ ಸರಿಯಾಗಿದ್ದವೆನ್ನಬಹುದು. ಉಮೇದುವಾರರು ತಮಗೆ ಹೇಳಿದ ಸಂಗತಿಗಳನ್ನು ಕೇವಲ ನೆನಪಿಟ್ಟುಕೊಂಡು ಉತ್ತರ ಬರೆದಿರುವರೆಂಬದು ಒಡೆದು ತೋರುವಂತಿದೆ. ನೀರು ಹನಿ ಮುಂತಾದ ತೀರ ಸಾಮಾನ್ಯವಾದ ಪದಾರ್ಥಗಳ ಘಟಕಗಳು ಕೂಡ ಎಷ್ಟೋ ಉಮೇದುವಾರರಿಗೆ ಗೊತ್ತಿರಲಿಲ್ಲ. ಅಷ್ಟುಮಟ್ಟಿಗೆ ಅವರು ಅಜ್ಞಾನದಲ್ಲಿರುವರು.

ಪ್ರತ್ಯಕ್ಷ ಪ್ರಯೋಗಗಳ ಮೂಲಕವಾಗಿ ಕಲಿಸಿದಹೊರತು ಈ ವಿಷಯದಲ್ಲಿ ಸುಧಾರಣೆಯಾಗುವ ಆಶೆಯಿಲ್ಲ. ಅದಕ್ಕಾಗಿ ಶಾಲೆಗಳಿಗೆ ತಕ್ಕ ಪ್ರಯೋಗಶಾಲೆಗಳನ್ನು ಒದಗಿಸಿಕೊಟ್ಟಹೊರತು ಗತ್ಯಂತರವಿಲ್ಲ. ಶಿಕ್ಷಕರು ಉದ್ದಕ್ಕೆ ಪುಸ್ತಕಗಳನ್ನು ಓದಿ ತಿಳಿಸುವ, ಹಲ ಕೆಲವು ಸೂಚಿತಿಯನ್ನು ವಿದ್ಯಾರ್ಥಿಗಳ ತಲೆಯಲ್ಲಿ ತುಂಬುವ, ಪದ್ಧತಿಯನ್ನು ಬಿಟ್ಟುಬಿಡಬೇಕು. ವಿದ್ಯಾರ್ಥಿಗಳು ಈ ವಿಷಯವನ್ನು ಕೇವಲ ಓದಿ ನೆನಪಿಡುವ ದಾರಿಯನ್ನು ಬಿಟ್ಟುಕೊಟ್ಟು ಪ್ರತ್ಯಕ್ಷ ಮಾಡಿ, ನಿರೀಕ್ಷಿಸಿ ತಿಳಿದುಕೊಳ್ಳುವ ಮಾರ್ಗವನ್ನು ಅನುಸರಿಸಬೇಕು.

ಶಿಸ್ತು

ಲೇಖಕರು: ಶ್ರೀ. ಎಸ್. ಜಿ. ಭೈಚಪಾಳ, ಎಮ್. ಎ.

ಶಿಕ್ಷಣ ಕ್ಷೇತ್ರದಲ್ಲಿ ಶಿಸ್ತಿಗೆ ಒಂದು ಮಹತ್ವದ ಸ್ಥಾನವಿದೆ. ಬಾಲಕರ ಶೀಲವನ್ನು ಕಟ್ಟುವದೇ ಶಿಕ್ಷಣದ ಮುಖ್ಯ ಧ್ಯೇಯವಾಗಿರುವುದು. ವಿದ್ಯಾರ್ಥಿಗಳು ತಾವಾಗಿಯೇ ಸಾಂತತೆಯಿಂದ ಪೂರೈಸಿದ ಸಾಮಗ್ರಿಗಳಿಂದ ಶಿಕ್ಷಕನಾಗಲಿ ತಾಯಿ-ತಂದೆಗಳಾಗಲಿ ಬಾಲಕರ ಶೀಲವೆಂಬ ಮಂದಿರವನ್ನು ಕಟ್ಟುವರೆಂದು ಕಲ್ಪಿಸಿದರೆ ಸರಿಯಾದ ಅರ್ಥವಾಗುವುದಿಲ್ಲ. ವಿದ್ಯಾರ್ಥಿಗಳು ಭದ್ರವಾದ ಶೀಲವನ್ನು ಕಟ್ಟಿಕೊಳ್ಳುವಂತಹ ಪರಿಸ್ಥಿತಿಯನ್ನು ಶಿಕ್ಷಕನು ಒದಗಿಸಿಕೊಡಬೇಕು. ಅವನು ವಿದ್ಯಾರ್ಥಿಗಳ ನಿಸರ್ಗದತ್ತ ಬುದ್ಧಿ, ಸ್ಮರಣಶಕ್ತಿ, ಕುತೂಹಲ

ಪ್ರವೃತ್ತಿ ಹಾಗು ಇತರ ಸ್ವಾಭಾವಿಕ ಒಲವುಗಳನ್ನು ಉಪಯೋಗಿಸಿಕೊಳ್ಳಬೇಕಾಗುವುದು
ಬಾಲಕರಲ್ಲಿ ಕಾಣಬಹುದಾದ ಇತರರ ಸಹವಾಸದ ಇಚ್ಛೆ, ಆತ್ಮಪ್ರತಿಷ್ಠೆ, ಗೌರವ, ವಿನಯ
ಶೀಲತೆ, ಸ್ವಪ್ರಯತ್ನಗಳು ವ್ಯರ್ಥವಾದಾಗ ಯೋಗ್ಯತೆಯುಳ್ಳವರ ಸಹಾಯವನ್ನು ಕೋರುವುದು
ಉಪಯುಕ್ತ ವಸ್ತುಗಳನ್ನು ಕಲೆಹಾಕುವದು, ಭಯದಿಂದ ಹಿಂಜರಿಯುವುದು, ವಿರೋಧಕ್ಕೆ
ಪ್ರತಿಯಾಗಿ ಪ್ರತಿಭಟಿಸುವುದು, ದುರ್ಬಲರನ್ನೂ ಸಂತ್ರಸ್ತರನ್ನೂ ಸಮಾಧಾನಗೊಳಿ
ರಕ್ಷಿಸುವುದು, ವೇಳೆಬಂದಾಗ ಜೀವನದ ಜೊತೆಗಾರ್ತಿಯನ್ನು ಆರಿಸುವುದು,— ಇವೆ
ನೊದಲಾದ ಪ್ರವೃತ್ತಿಗಳನ್ನು ಚೆನ್ನಾಗಿ ಪರೀಕ್ಷಿಸಿ, ಅವುಗಳನ್ನು ಬಲಗೊಳಿಸಬೇಕು. ಸಹಜ
ಪ್ರವೃತ್ತಿ ಹಾಗು ಆದರ್ಶಗಳ ನಡುವೆ ತಿಕ್ಕಾಟ ಉಂಟಾದಾಗ, ಯೋಗ್ಯ ದಾರಿಯನ್ನು ಕೂಡ
ಕಂಡುಹಿಡಿಯುವ ಜಾಣ್ಮೆಯನ್ನು ಶಿಕ್ಷಕರು ವಿದ್ಯಾರ್ಥಿಗಳಲ್ಲಿ ನೆಲೆಗೊಳಿಸಬೇಕು.

ನಾನು ತೀವ್ರ ಏಳಬೇಕೊ, ಹಾಗೆಯೇ ಆಲಸ್ಯದಿಂದ ಹಾಸಿಗೆಯಲ್ಲಿ ಹೊರಳಾಡಬೇಕೊ
ಒಂದು ರೂಪಾಯಿಯನ್ನು ಭದ್ರವಾಗಿ ಜೇಬಿನಲ್ಲಿ ಇರಿಸಲೊ ಅಥವಾ ನನಗಿಂತಲೂ ಹೆಚ್ಚಿ
ಅಗತ್ಯವಿರುವ ನನ್ನ ಗೆಳೆಯನಿಗೆ ಅದನ್ನು ಕೊಡಲೊ, ಈ ಅಪಮಾನವನ್ನು ನುಂಗಿಕೊಳ್ಳ
ಬೇಕೊ, ಅಥವಾ ಪ್ರತಿಕ್ರಿಯೆಯನ್ನು ಕೈಕೊಳ್ಳಬೇಕೊ, ಎರಡನೆಯವರ ಹಿತವನ್ನು ಲೆಕ್ಕಿಸ
ನನ್ನ ಸ್ವಾರ್ಥವನ್ನು ಸಾಧಿಸಲೊ ಅಥವಾ ಬಿಡಲೊ, ಮುಂತಾದ ಸನ್ನಿವೇಶಗಳು ನಮ್ಮನ
ಎದುರಿಸಿದಾಗ, ಎರಡು ಮೂರು ದಾರಿಗಳು ನಮ್ಮೆದುರಿಗೆ ಧುತ್ತೆಂದು ಬಂದು ನಿಂತ
ನಮ್ಮನ್ನು ದಿಗಿಲುಗೊಳಿಸುವುವು. ಇಂಥ ಪ್ರಸಂಗಗಳಲ್ಲಿ ನಿರ್ಣಯಕ್ಕೆ ಬರುವ ಮೊದಲೆ
ಆಲೋಚನೆಗೆ ಕೆಲವು ವೇಳೆ ಹತ್ತಬಹುದು. ಕಡೆಗೆ ವಿಶ್ವಪ್ರಯತ್ನದಿಂದ ಒಂದು ನಿರ್ಧಾರಕ್ಕೆ
ಬರುವೆವು. ಮನಸ್ಸಿನ ಹೊಯ್ದಾಟವಿಲ್ಲದೆ, ನೈತಿಕ ಆಧಾರದ ಮೇಲೆ ಬಾಲಕರು ಯೋಗ್ಯ
ನಿರ್ಧಾರಕ್ಕೆ ಬರುವಂತೆ ಮಾಡುವದೇ ಬಾಲಕರ ಹಾಗು ಶಿಕ್ಷಕರ ಹೊಣೆಯಾಗಿದೆ.

ಶಿಕ್ಷಕನ ಈ ಹೊಣೆಗಾರಿಕೆಯ ಕಾರ್ಯವು ಸುಗಮವಾಗಿ ಸಾಗಬೇಕಾದರೆ, ಅವನಲ್ಲಿ
ಒಂದು ಪ್ರಕಾರದ ಅಧಿಕಾರವು ಇದ್ದೇ ತೀರಬೇಕೆಂಬ ಮಾತನ್ನು ಎಲ್ಲರೂ ಒಪ್ಪುವರು. ಆ
ಅಧಿಕಾರದ ಉಗಮಸ್ಥಾನವೆಲ್ಲಿ? ವಿದ್ಯಾರ್ಥಿಗಳು ಶಿಕ್ಷಕರಿಗೆ ವಿಧೇಯರಾಗಿ ನಡೆಯುವ
ಕಾರಣವೇನು? ಈ ಪ್ರಶ್ನೆಗೆ ಸಾಮಾನ್ಯವಾಗಿ ಮೂರು ಉತ್ತರಗಳು ಸಿಕ್ಕಬಹುದು.

೧ **ಶಾರೀರಿಕ ಬಲ:**— ಸಾಮಾನ್ಯವಾಗಿ ಶಿಕ್ಷಕನ ಶಾರೀರಿಕ ಬಲದ ಭಯದಿಂ
ವಿದ್ಯಾರ್ಥಿಗಳು ಅವನಿಗೆ ವಿಧೇಯರಾಗಿ ನಡೆಯುವರು. ವಿಚಾರಮಾಡಿ ನೋಡಿದರೆ, ಇದ
ಸರಿಯಾದ ಕಾರಣವಲ್ಲವೆಂದು ಹೊಳೆಯದಿರದು. ಶಾರೀರಿಕ ಬಲವು ಇದ್ದ ಮಾತ್ರಕ್ಕೆ
ಶಿಕ್ಷಕನು ತಪ್ಪುಗಾರನಾದ ವಿದ್ಯಾರ್ಥಿಯನ್ನು ಅವನ ಒಪ್ಪಿಗೆಯಿಲ್ಲದೆ ದಂಡಿಸಲಾಗದು
ಹಾಗೆ ಮಾಡಿದರೆ ಅದು ಯುದ್ಧವೆನಿಸುವುದು. ಈ ಯುದ್ಧದಲ್ಲಿ ಶಿಕ್ಷಕನು ಒಬ್ಬನೆ ಕೂ
ಹೋರಾಡಬಹುದು; ಇಬ್ಬರ ಕೂಡ ಹೋರಾಡಬಹುದು; ಆದರೆ ವರ್ಗದ ಅಥವಾ ಶಾಲೆಯ
ಎಲ್ಲ ವಿದ್ಯಾರ್ಥಿಗಳು ಅವನ ಮೇಲೆ ಏಕಕಾಲಕ್ಕೆ ಹಲ್ಲೆಮಾಡಿದರೆ ಅವನ ಅವಸ್ಥೆಯ
ಏನಾಗಬಹುದೆಂಬುದನ್ನು ಸಹಜವಾಗಿ ಊಹಿಸಬಹುದು.

೨. **ಶಿಕ್ಷಕನ ಮೇಲಿನ ಪ್ರೇಮ:**— ಈ ಕಾರಣವೂ ಪೂರ್ಣ ಸರಿಯೆಂದು ತೋರದ
ಅನೇಕ ಸಲ ತಮಗೆ ಸೇರದೆ ಇದ್ದ ಶಿಕ್ಷಕನ ಆಜ್ಞೆಯನ್ನೂ ವಿದ್ಯಾರ್ಥಿಗಳು ಪಾಲಿಸುವುದಿಲ್ಲವೆ

೩. **ಶಿಕ್ಷಕನ ಮೇಲ್ತರದ ಜ್ಞಾನದ ಬಗ್ಗೆ ಆದರ:**— ಈ ಕಾರಣದಲ್ಲಿಯ
ತಥ್ಯಾಂಶವಿಲ್ಲ. ಶಿಕ್ಷಕನ ಪುಸ್ತಕೀಯ ಜ್ಞಾನಕ್ಕಿಂತಲು, ವ್ಯಾವಹಾರಿಕ ಜಾಣ್ಮೆ, ವಿಮೋ
ಮೋಟಾರಗಳನ್ನು ನಡೆಯಿಸುವದು, ವಿನೋದ ಪ್ರಹಸನಗಳನ್ನು ಮಾಡಿ ತೋರಿಸುವುದ
ಓದುಗಾರಿಕೆ, ಇವೇ ಮೊದಲಾದ ಉಳಿದ ಚಾತುರ್ಯಗಳಿಗೆ ಬಾಲಕರು ಹೆಚ್ಚು ಮೆಚ್ಚುವರ

ಹೀಗಿದ್ದರೂ ಶಿಕ್ಷಕರಿಗೇ ಅವರು ವಿಧೇಯರಾಗಿ ನಡೆಯಲು ಕಾರಣವೇನು? ಇದರಿಂದ ಶಿಕ್ಷಕನ ಪ್ರಭಾವದ ಉಗಮವು ಇಲ್ಲಿರದೆ ಬೇರೆ ಕಡೆಯಲ್ಲಿ ಇದೆಯೆಂಬದು ಕಂಡುಬರುತ್ತದೆ.

೧. **ಸಮಾಜ ರಚನೆ:—** ನಮ್ಮ ಜೀವನದ ವಿಶಿಷ್ಟವಾದ ಒಂದು ಸಾಮಾಜಿಕ ರಚನೆ, ವಿದ್ಯಾಖಾತೆಯ ಅಧಿಕಾರಿಗಳು ಮೇಲ್ವಿಚಾರಕರು ಹಾಗು ವ್ಯವಸ್ಥೆ, ದೊಡ್ಡ ದೊಡ್ಡ ಕಟ್ಟಡಗಳು, ಮುಂತಾದ ಶೀವಿಯಿಂದ ಜನರಲ್ಲಿ ಶಿಕ್ಷಕನ ಬಗ್ಗೆ ಕೆಲಪುಟ್ಟಿಗೆ ಆದರವೂ ಅಭಿಮಾನವೂ ತಲೆದೋರುತ್ತವೆ. ದಾದಿಗಳನ್ನು ಬೆದರಿಸುವ ಪುಂಡ ಬಾಲಕನು ಅಜ್ಞಾನದಿಂದಲೂ ಹೆಮ್ಮೆಯಿಂದಲೂ ಶಿಕ್ಷಕನಿಗೆ ಕೈತೋರಿಸುವನೆಂದು ಹೇಳಿ ಶಾಲೆಯಲ್ಲಿ ಕಾಲಿಟ್ಟ ಕೂಡಲೆ ಶಿಕ್ಷಕನಿಗೆ ವಿಧೇಯನಾಗಿ ನಡೆಯುತ್ತಾನೆ. ಉಳಿದ ವಿದ್ಯಾರ್ಥಿಗಳೆಲ್ಲರು ವಿಧೇಯರಾಗಿದ್ದುದನ್ನು ಕಂಡು ತಾನೂ ವಿಧೇಯನಾಗಿ ನಡೆಯಬೇಕೆಂಬ ಒಲವು ಹುಟ್ಟಿ ಆತನು ಶಿಕ್ಷಕನ ಆಜ್ಞೆಯನ್ನು ಪಾಲಿಸುವನು. ಇದೇ ಸಾಮಾಜಿಕ ರಚನೆಯ ಸಾಮರ್ಥ್ಯ.

೨. **ಶಿಕ್ಷಕನ ವೈಯಕ್ತಿಕ ಪವರ್ಚಸ್ಸು:—** ಸಮಾಜ ರಚನೆಯು ಜಿಂಬಲವಿದ್ದಾಗ್ಯೂ ಬಾಲಕರಲ್ಲಿ ವಿಧೇಯತೆಯನ್ನುಂಟುಮಾಡುವ ಸಾಮರ್ಥ್ಯವು ಕೆಲವು ಶಿಕ್ಷಕರಲ್ಲಿ ಇರಲಿಕ್ಕಿಲ್ಲ; ಅಥವಾ ಹೆಚ್ಚು ಕಡಿಮೆ ಪ್ರಮಾಣದಲ್ಲಿರಬಹುದು. ಕಡಿಮೆ ಶಕ್ತಿಯುಳ್ಳವನಿಗೆ ಯುಕ್ತಿಯಿಂದ ಆ ಶಕ್ತಿಯನ್ನು ಹೇಗೆ ಹೆಚ್ಚಿಸಿಕೊಳ್ಳಬೇಕೆಂಬ ಜ್ಞಾನವನ್ನು ಟ್ರೇನಿಂಗ್ ಕಾಲೇಜುಗಳು ಕೊಡಬಹುದು. ಆದರೆ ಆ ಶಕ್ತಿಯಿಲ್ಲದವನಿಗೆ ಅದನ್ನು ಕೊಡಹೋದರೆ ಬೆನ್ನೆಲವಿಲ್ಲದ ಪ್ರಾಣಿಗಳಿಗೆ ಬೆನ್ನೆಲವನ್ನು ದಯಪಾಲಿಸಲು ಯತ್ನಿಸಿದಂತಾಗುವುದು. ವಿದ್ಯಾರ್ಥಿಗಳ ಮೇಲೆ ನಡೆಯಿಸುವ ಈ ಶಕ್ತಿಗೆ ಶಿಸ್ತನ್ನು ಕಾದುಕೊಳ್ಳುವ ಶಕ್ತಿಯೆಂದು ಬೇರೊಂದು ಹೆಸರು. ಈ ಶಕ್ತಿಯು ಶಿಕ್ಷಣದ ಮೂಲಾಧಾರವಾಗಿದೆ. ಇದರ ಅಭಾವವಿದ್ದರೆ ಕಲಿಸುವುದು ಸಾಧ್ಯವಾಗದು. ಆದರೆ ಈ ಶಕ್ತಿಯೊಂದಿದ್ದ ಮಾತ್ರಕ್ಕೆ ಕಲಿಸುವ ಕೆಲಸವು ನಿಶ್ಚಿತವಾಗಿ ಸಾಧಿಸುವದೆಂದು ತಿಳಿದರೆ ತಪ್ಪಾಗುವುದು. ಏನೂ ಕಲಿಸಲು ಬಾರದೆ ಇದ್ದ ಶಿಕ್ಷಕನಲ್ಲಿ ಅಥವಾ ಬೇರೊಬ್ಬ ವ್ಯಕ್ತಿಯಲ್ಲಿ ಈ ಶಕ್ತಿಯು ತುಂಬ ಇರಬಹುದು. ಒಮ್ಮೆ ಒಂದು ಶಾಲೆಯ ಮುಖ್ಯಾಧ್ಯಾಪಕನು ಕೋರ್ಟಿಗೆ ಸಾಕ್ಷಿ ಹೇಳಲು ಹೋಗಬೇಕಾಯಿತು. ಅಂದೇ ದುರ್ದೈವದಿಂದ ಉಳಿದ ಶಿಕ್ಷಕರು ಸಹ ಬೇನೆಯ ಕಾರಣದಿಂದ ಶಾಲೆಗೆ ಬಂದಿರಲಿಲ್ಲ; ಹೀಗಾಗಿ ಶಾಲೆಯ ೧೨೦ ವಿದ್ಯಾರ್ಥಿಗಳೆಲ್ಲರು ಅಟ್ಟದಮೇಲಿನ ಒಂದು ಕೋಣೆಯಲ್ಲಿ ಹೋಗಿ ಗದ್ದಲಮಾಡುತ್ತ ಕುಳಿತರು. ಆಗ ಶಾಲೆಯ ಬಾಗಿಲವನ್ನು ಕಾಯುವ ನೌಕರನು ಇದೇನು ಅನಾಹುತವಾಯಿತೆಂದು ಭರದಿಂದ ಅಟ್ಟವನ್ನು ಏರಿ ಕೋಣೆಯಲ್ಲಿಯೆ ಪೀಠದ ಮೇಲೆ ಟಣ್ಣನೆ ಜಿಗಿದು ನಿಂತು ಎಲ್ಲ ವಿದ್ಯಾರ್ಥಿಗಳನ್ನು ದುರದುರನೆ ನೋಡತೊಡಗಿದನು. ಕೂಡಲೆ ಎಲ್ಲ ಕಡೆಗೂ ನಿಶ್ಶಬ್ದತೆಯುಂಟಾಯಿತು. ಹೀಗೆಯೇ ೮೦ ನಿಮಿಷಗಳ ವರೆಗೆ ಮುಖ್ಯಾಧ್ಯಾಪಕನು ತಿರುಗಿ ಬರುವ ವರೆಗೆ ಆ ಬಿರುನೋಟವು ನಡೆದೇ ಇತ್ತು; ಮತ್ತು ಪೂರ್ಣ ಶಾಂತತೆಯು ಉಳಿದಿತ್ತು. ಆದರೆ ಶಿಕ್ಷಣದ ಯಾವ ಕಾರ್ಯಕ್ರಮವೂ ನಡೆಯಲಿಲ್ಲ.

ವರ್ಗವನ್ನು ಅಂಕಿತದಲ್ಲಿಟ್ಟುಕೊಳ್ಳುವುದರಿಂದ ಶಿಕ್ಷಣವನ್ನು ಪ್ರಾರಂಭಿಸಲು ಸಹಾಯಕವಾಗುವ ಸ್ಥಿತಿಯನ್ನು ಮಾತ್ರ ತಂದುಕೊಂಡಂತಾಗುವುದು. ಆದರೆ ವಿದ್ಯಾರ್ಥಿಗಳು ಸುಮ್ಮನೆ ಕೂಡುವುದರಿಂದ ಶಿಕ್ಷಣಕಾರ್ಯವು ಸುಗಮವಾಗಿ ಸಾಗುವುದೆಂದಲ್ಲ. ಶಾಲೆಯಲ್ಲಿ ಕಂಡುಬರುವ ಶಿಸ್ತಿಗೆ ವಿಶಿಷ್ಟ ಗ್ಯಾರಂಟಿ (ಸಹಾಯಧನ) ಕೊಡುವ ಪದ್ಧತಿ ಇದ್ದಾಗ ಶಾಲೆಯ ಶಿಕ್ಷಕರು ತೀರ ಕಠೋರ ಸಾಧನಗಳಿಂದ ಸೈನಿಕ ವೃತ್ತಿಯ ಶಿಸ್ತನ್ನು ಬಾಲಕರಲ್ಲಿ ನೆಲೆಗೊಳಿಸಲು ಯತ್ನಿಸಹತ್ತಿದರು. ಸಾಮಾನ್ಯವಾಗಿ ಶಿಸ್ತಿನ ಕಲ್ಪನೆಗಳಲ್ಲಿ ಮೂರು ಯುಗಗಳನ್ನು ಕಾವು ಕಾಣಬಹುದು:—

೧. **ಒತ್ತಾಯದಿಂದ ಹತ್ತಿಕ್ಕುವುದು :—** ವಿದ್ಯಾರ್ಥಿಗಳ ಒಪ್ಪಿಗೆ ಇರಲಿ ಇಲ್ಲದಿರಲಿ, ಬೆತ್ತದ ಭಯದಿಂದಲೇ ಶಿಸ್ತನ್ನು ಕಾದುಕೊಳ್ಳುವ ಪರಿಪಾಠವು ಅನೇಕವರುಷಗಳ ವರೆಗೆ ಅವ್ಯಾಹತವಾಗಿ ಸಾಗಿತ್ತು. ಈ ಕಾಲದ ಶಿಕ್ಷಕರ ಶಿಸ್ತಿನ ವಿಧಾನಕ್ಕೆ ಒಬ್ಬ ಆಂಗ್ಲ ಕವಿಯು "ರಕ್ತ ಹೀರುವುದು" ಎಂಬ ಹೆಸರನ್ನು ಕೊಟ್ಟಿರುವನು. ಬರಬರುತ್ತ ಇದರಿಂದ ಅನೇಕ ದುಷ್ಪರಿಣಾಮಗಳು ಕಂಡು ಬಂದದ್ದರಿಂದ ವಿಚಾರವಂತರಾದ ಶಿಕ್ಷಣ ಸುಧಾರಕರು ಶಿಸ್ತನ್ನು ಕಾದುಕೊಳ್ಳುವ ಬೇರೆ ವಿಧಾನವನ್ನು ಅನುಸರಿಸಬೇಕೆಂದು ಪ್ರಚಾರ ಮಾಡತೊಡಗಿದರು.

೨. **ವರ್ಚಸ್ಸಿನ ಉಪಯೋಗ :—** ಇದು ಎರಡನೆಯ ಸ್ಥಿತ್ಯಂತರ. ಈ ಅವಧಿಯಲ್ಲಿ ಶಿಕ್ಷಕರು ತಮ್ಮ ವ್ಯಕ್ತಿತ್ವದ ವರ್ಚಸ್ಸನ್ನು ವಿದ್ಯಾರ್ಥಿಗಳ ಮೇಲೆ ಉಪಯೋಗಿಸಿ ತಮ್ಮ ಪ್ರಭಾವವನ್ನು ಬೀರಿದರು. ಬೆತ್ತವು ಬರಬರುತ್ತ ಮಾಯವಾಗತೊಡಗಿತು. ಆದರೆ ವಿದ್ಯಾರ್ಥಿಗಳಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಡಲು ಇವರ ಮನಸ್ಸಾದರೂ ಒಪ್ಪಲಿಲ್ಲ. ವಿಖ್ಯಾತರಾದ ಅಧ್ಯಾಪಕರು ಕೂಡ ವಿದ್ಯಾರ್ಥಿಗಳ ಸ್ವಾತಂತ್ರ್ಯ-ಮಾರ್ಗವನ್ನು ವಿರೋಧಿಸಹತ್ತಿದರು. ಇದರಿಂದ ವಿದ್ಯಾರ್ಥಿಗಳಲ್ಲಿ ಹುದುಗಿಕೊಂಡ ಅನೇಕ ಅದ್ಭುತ ಶಕ್ತಿಗಳ ಬೀಜಗಳು ಅಲ್ಲಿಯೇ ಕಮರಿಹೋಗಿ ಬಾಲಕರ ವ್ಯಕ್ತಿತ್ವದ ವಿಕಾಸಕ್ಕೆ ಸುಗಮವಾದ ಮಾರ್ಗವು ದೊರೆಯದಾಯಿತು.

೩. ಮುಂದೆ ಇದರ ಬದಲು ಶಿಕ್ಷಣದಲ್ಲಿ ಹೊಸದೊಂದು ಯುಗವು ಪ್ರಾರಂಭವಾಗಿ 'ಶಿಸ್ತು' ಈ ಶಬ್ದಕ್ಕೆ ಬೇರೊಂದು ಅರ್ಥವು ಉಂಟಾಯಿತು. ಇದೇ 'ಸ್ವಯಂಪ್ರೇರಿತ ಶಿಸ್ತು' ಅಥವಾ 'ಸ್ವನಿಯಂತ್ರಿತ ಶಿಸ್ತು.' ಇದರಲ್ಲಿ ಯಾವ ತರದ ದಬ್ಬಾಳಿಕೆಯೂ ವಿದ್ಯಾರ್ಥಿಗಳ ಮೇಲೆ ನಡೆಯಬಾರದೆಂಬುದೇ ಮುಖ್ಯ ವಿಚಾರವು. ವಿದ್ಯಾರ್ಥಿಗಳ ಸ್ವಾತಂತ್ರ್ಯವು "ಹೀಗೆ ಮಾಡು" ಎನ್ನುವ ನಿಶ್ಚಯಾತ್ಮಕ ಸ್ವರೂಪದ್ದಾಗಿರಬೇಕೇ ಹೊರತು "ಇದನ್ನು ಮಾಡಬೇಡ" "ಅದನ್ನು ಮಾಡಬೇಡ" ಎನ್ನುವ ನಿಷೇಧಾತ್ಮಕ ಸ್ವರೂಪದ್ದಿರಕೂಡದು. "ನಿಷೇಧಾತ್ಮಕ ಶಿಸ್ತು ಸತ್ವಹೀನವಾದುದು" ಎಂದು ಹೇಳುವ ಗಟೇ ಎಂಬ ಜರ್ಮನ್ ತತ್ವಜ್ಞಾನಿಯ ಅಭಿಪ್ರಾಯವೂ ಇದೇ ಮಾತನ್ನೇ ಪುಷ್ಟೀಕರಿಸುತ್ತದೆ. "ವಿದ್ಯಾರ್ಥಿಗಳು ತಮ್ಮನ್ನು ತಾವೇ ಒಂದು ಪ್ರಕಾರದ ಕಟ್ಟಿನಿಂದ ಬಿಗಿದುಕೊಳ್ಳುವದೇ ಉತ್ತಮ ಪ್ರಕಾರದ ಶಿಸ್ತು" ಎಂದು ಮ್ಯಾಕಮನ್ನನು ಪ್ರತಿಪಾದಿಸುವನು. ಪ್ರಥಮ ತರಗತಿಯ ಶಿಕ್ಷಕನ ವರ್ಚಸ್ಸು ಎಷ್ಟು ಉತ್ತಮ ಪ್ರಕಾರದ್ದಿದ್ದಾಗ್ಯೂ ವಿದ್ಯಾರ್ಥಿಗಳು ತಮ್ಮದೇ ಆದ ಒಂದು ಸ್ವತಂತ್ರ ರೀತಿಯಿಂದಲೇ ಸಾಗುವುದು ಲೇಸು; ವಿದ್ಯಾರ್ಥಿಗಳು ತಮ್ಮ ಶಿಕ್ಷಕರ ಪಡಿಯಚ್ಚಿನ ಪ್ರತಿಮೆಗಳಾಗುವುದಕ್ಕಿಂತ ಸ್ವತಂತ್ರ ವ್ಯಕ್ತಿಗಳಾಗುವುದೇ ಮೇಲು ಎಂಬುದೇ ಅವನ ಅಭಿಪ್ರಾಯ.

ಇಲ್ಲಿ ಶಿಸ್ತಿನ ನಿಜವಾದ ಅರ್ಥವನ್ನು ಮಾಡಿಕೊಳ್ಳುವುದು ಅತ್ಯಂತ ಅವಶ್ಯ. "ಬಾಲಕರು ತಮ್ಮ ಇಚ್ಛಾನುಸಾರವಾಗಿ ನಡೆದರೆ, ಶಿಕ್ಷಣದ ಹೋರೆಗೆ ಬಲವಾದ ವಿರೋಧವುಂಟಾಗುವ ಭಯವಿದೆ" ಎಂದು ಕೆಲವರು ಹೇಳುವರು; ಇಷ್ಟೇ ಅಲ್ಲ, "ಸ್ವಚ್ಛಂದ ಮತ್ತು ಶಿಸ್ತು ಇವುಗಳಲ್ಲಿ ಅನ್ಯೋನ್ಯ ವಿರೋಧವಿದೆ" ಎಂದು ಅವರು ವಾದಿಸುವರು. ಬಾಲಕರಿಗೆ ತಮ್ಮ ಮನಬಂದಂತೆ ನಡೆಯಗೊಟ್ಟರೆ ಶಿಕ್ಷಣದ ಮುಖ್ಯ ಧ್ಯೇಯವಾದ ಸುವ್ಯವಸ್ಥೆಯು ಹೇಗೆ ತಾನೇ ಸಾಧ್ಯವಾದೀತು ?

ಮೊದಲು "ಶಿಸ್ತು" ಈ ಶಬ್ದಕ್ಕೆ ಬೌದ್ಧಿಕ ಶಿಕ್ಷಣವೆಂಬ ಅರ್ಥವು ಕೊಡಲ್ಪಡುತ್ತಿತ್ತು, ಮತ್ತು ಕೆಲವು ಸಾಂಪ್ರದಾಯಿಕ ವಿಷಯಗಳನ್ನು ಅಭ್ಯಾಸಿಸುವುದರಿಂದ ದೊರೆತ ಅನುಭವವು ಜೀವನದ ಸಮಸ್ಯೆಗಳನ್ನು ಬಿಡಿಸಲು ಸಹಾಯವಾಗುವುದೆಂಬ ಕಲ್ಪನೆಯಾಯಿತು. ವ್ಯಾಪಕಾರ್ಥದಲ್ಲಿ ಶಿಸ್ತು ಎಂದರೆ ದಂಡನೆಯ ಭಯದಿಂದಾಗಲಿ ಪಾರಿತೋಷಿಕದ ಆಸೆಯಿಂದಾಗಲಿ ಕೆಲವು ಸ್ವಾಭಾವಿಕ ಒಲವುಗಳನ್ನು ಅಂಕಿತದಲ್ಲಿಟ್ಟುಕೊಳ್ಳುವುದು. ಈ ಅಂಕಿತದಲ್ಲಿ

ಇಟ್ಟುಕೊಳ್ಳುವ ಕೆಲಸವು ಸುಲಭಸಾಧ್ಯವಲ್ಲದ್ದರಿಂದ ಬೆತ್ತದ ಉಪಯೋಗ ಮಾಡಿಕೊಂಡು ಅದನ್ನು ಸಾಧಿಸುವ ರೂಢಿಯು ಬಂದು ಸೈನಿಕಶಿಸ್ತು ಅಥವಾ ಯಾಂತ್ರಿಕ ವಿಧೇಯತೆಯೇ ಶಿಕ್ಷಣದ ಮುಖ್ಯ ಧ್ಯೇಯವಾಯಿತು. ಬಾಹ್ಯನಿಯಂತ್ರಣೆಯಿಂದ ಒಳಿಸಿದ ಶಿಸ್ತು ಪರೀಕ್ಷೆಯ ಕಾಲ ಬಂದಾಗ ಕುಸಿದು ಬೀಳುವುದು. ನಿಯಂತ್ರಣೆಯ ಪ್ರಮಾಣವು ಹೆಚ್ಚಾದಂತೆ ಶಿಸ್ತಿನ ಬಿಗಿಲತೆಯು ಹೆಚ್ಚಾಗಿದೆಯೆಂದು ತಿಳಿಯಬೇಕು. ಸೈನಿಕ ಶಿಸ್ತಿನಿಂದ ನೈತಿಕ ಶಿಸ್ತು ಪರಿಣಮಿಸ ಸಾರದು. ಅದರಿಂದ ತೋರಿಕೆಯ ಬಾಹ್ಯ-ವ್ಯವಸ್ಥೆಯು ಮಾತ್ರ ಸಾಧ್ಯವಾಗಬಹುದು. ಕ್ರಲ್ ಮಾಡಿಸುವುದರಿಂದ ಶಿಸ್ತು ಬರಲಾರದು. ಶಿಕ್ಷಕನ ಆಜ್ಞೆಯನ್ನು ಎಲ್ಲರೂ ಪಾಲಿಸಲೇ-ಬೇಕೆಂದು ಕಟ್ಟಪ್ಪಣೆಯನ್ನು ಹೊರಡಿಸಿದರೆ, ಬಾಲಕರಲ್ಲಿ ಸ್ವಯಂಪ್ರೇರಣೆಯು ತೋರಿ ಬರುವದಿಲ್ಲ. ಆಟದ ಬಯಲಿನಲ್ಲಿ ವಿದ್ಯಾರ್ಥಿಯು ತನ್ನ ಪಕ್ಷವು ಗೆಲ್ಲಬೇಕೆಂದು ತಾನೇ ಸ್ವಸಂತೋಷದಿಂದ ಕೆಲವು ನಿರ್ಬಂಧಗಳನ್ನು ಪಾಲಿಸುವನು. ಆಗ ಸ್ವಾರ್ಥ ಪ್ರತಿಷ್ಠೆಯ ಸ್ಪದ್ರ ವಿಚಾರ ಇವು ಅವನನ್ನು ತಡೆಯಲಾರವು. ಹೀಗೆ ಕೆಲವೊಂದು ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ಸ್ವಸಂತೋಷದಿಂದ ಬಾಲಕರು ಪಾಲಿಸಿದ ನಿಯಮಗಳು ನಿಜವಾದ ಶಿಸ್ತಿನ ಪಾಠವನ್ನು ಕಲಿಸುತ್ತವೆ. ವಿದ್ಯಾರ್ಥಿಗಳು ನಿಜವಾದ ಶಿಸ್ತನ್ನು ಪಾಲಿಸುವರೋ ಇಲ್ಲವೊ ಎಂಬುದನ್ನು ಅವರ ವರ್ಗದಲ್ಲಿಯ ಆಚರಣೆಯಿಂದ ನಿರ್ಧರಿಸದೆ, ಅವರು ತಮ್ಮಿಷ್ಟಕ್ಕೆ ತಾವೇ ಬೇರೆಕಡೆಯಲ್ಲಿದ್ದಾಗ ಹೇಗೆ ವರ್ತಿಸುವರೆಂಬುದನ್ನು ಗಮನಿಸಿಕೊಂಡು ನಿರ್ಣಯಿಸಬೇಕು. "ಶಿಸ್ತು" (Discipline) ಈ ಶಬ್ದದ ಉತ್ತಮ ಅರ್ಥವು "ಶಿಷ್ಯ (Disciple) ವೃತ್ತಿ" ಎಂಬುದರಲ್ಲಿ ಸ್ಪಷ್ಟವಾಗುವುದು. ಶಿಷ್ಯನೆಂದರೆ ಸ್ವಯಂಸ್ಫೂರ್ತಿಯಿಂದ ಕಲಿಯುವವ ಅಥವಾ ಬೆಂಬಲಿಗನೆಂದು ಅರ್ಥವಾಗುತ್ತದೆ. "ಆಂತರಿಕ ಸ್ಫೂರ್ತಿಯಿಂದ ಫಲಿಸಿದ ಆಚರಣೆಯೇ ನಿಜವಾದ ಶಿಸ್ತಿನ ಆವಿರ್ಭಾವವು." ಇಂತಹ ಅನಿರ್ಬಂಧಶಿಸ್ತೇ ಶಿಕ್ಷಕರು ಸಾಧಿಸಬಹುದಾದ ನಿಜವಾದ ಧ್ಯೇಯವಾಗಿದೆ; ಇದು ಕಾಲ್ಪನಿಕವಾದ ಆಕಾಶ ಕುಸುಮ ಅಥವಾ ಗಾಳಿಗೋಪುರವಲ್ಲ; ಬಾಲಕರ ವರ್ಗದಿಂದ ವಿಶ್ವವಿದ್ಯಾನಿಲಯದ ಮಂದಿರಗಳವರೆಗೆ ಅದು ಸಾಧ್ಯವಿದೆಯೆಂದು ಮನಗಾಣ ಬಹುದು. ವರ್ಗದಲ್ಲಿ ಇದರ ಅಭಾವವು ಕಂಡುಬಂದರೆ ಶಿಕ್ಷಕನಲ್ಲಿಯಾಗಲಿ ಕಾರ್ಯಕ್ರಮಗಳಾಗಿಸುವ ಪರಿಸ್ಥಿತಿಯಲ್ಲಾಗಲಿ ದೋಷವಿದೆಯೆಂದು ನಿಶ್ಚಯವಾಗಿ ತಿಳಿದುಕೊಳ್ಳತಕ್ಕದ್ದು. ಇದರೆ ಸ್ವಾತಂತ್ರ್ಯವನ್ನು ಸ್ವೈರವೃತ್ತಿಯೆಂದು ತಿಳಿದರೆ ಮಾತ್ರ ಈ ತತ್ತ್ವದ ವಿಪರ್ಯಾಸ ಮಾಡಿದಂತೆ ಆಗುವುದು. ಉತ್ತಮ ಶಿಕ್ಷಕನಿದ್ದರೆ ಬಾಲಕರ ವರ್ಗದಲ್ಲಿ ಹಾಗು ಪ್ರೌಢವಿದ್ಯಾರ್ಥಿಗಳ ವರ್ಗದಲ್ಲಿ ನಿಜವಾದ "ಅನಿರ್ಬಂಧ ಶಿಸ್ತು" ದೊರೆಯುವುದು. ಪ್ರಾಜನಾ-ಪದ್ಧತಿಯಲ್ಲಿ ಚಿಕ್ಕಮಕ್ಕಳು ತೊಡಗಿದಾಗ ಅಥವಾ ಪ್ರೌಢ ವಿದ್ಯಾರ್ಥಿಗಳು ಸ್ವಪ್ರೀತಿಯ ವಿಷಯವನ್ನು ತಮ್ಮ ಮೆಚ್ಚಿನ ಶಿಕ್ಷಕನ ಕಡೆಯಿಂದ ಹೇಳಿಸಿಕೊಳ್ಳುವಾಗ ವಿಷಯವನ್ನು ಮನರಂಜನೆಯಾಗುವಂತೆ ಮಾಡುವ ಪ್ರಯತ್ನದ ಆವಶ್ಯಕತೆಯೇ ಇಲ್ಲ. ಅಲ್ಲಿ ಶಿಸ್ತಿನ ವಾತಾವರಣವು ತಾನಾಗಿಯೇ ಲಭಿಸುವುದು.

ಆದರೆ ಈ ಸ್ವಯಂಪ್ರೇರಿತ ಶಿಸ್ತು ಶಿಕ್ಷಣದಲ್ಲಿ ಎಷ್ಟರಮಟ್ಟಿಗೆ ಪ್ರತ್ಯಕ್ಷವಾಗಿ ಕಾರ್ಯಾಂಗಕ್ಕೆಳಿಯಬಹುದು? ಶಿಕ್ಷಕನ ವ್ಯಕ್ತಿತ್ವ, ಅಧಿಕಾರ, ನಿಯಂತ್ರಣ, ವರ್ಜನೆಗಳು ಇವುಗಳನ್ನು ಎಷ್ಟರ ಮಟ್ಟಿಗೆ ಹತ್ತಿಕ್ಕಿಡಲು ಸಾಧ್ಯವದೆ? ಎಂಬುದೊಂದು ಮುಖ್ಯ ಸಮಸ್ಯೆ. ಬಾಲಕರು ಸ್ವೈರವಾಗಿ ವರ್ತಿಸತೊಡಗಿದರೆ ವರ್ಗದಲ್ಲಿ ಶಿಕ್ಷಕನಿಗೆ ಮಹತ್ವವುಳ್ಳ ಸ್ಥಾನವು ಉಳಿಯುವುದಿಲ್ಲ. ಶಿಕ್ಷಕನು ವರ್ಗದಲ್ಲಿ ಇದ್ದೂ ಇಲ್ಲದಂತೆ ಪೂರ್ಣ ಮಾಯವಾಗುವುದು ಸಾಧ್ಯ. ಮಾಂಟೆಸರಿ ಪದ್ಧತಿಯ ಪುರಸ್ಕರ್ತರು ತಮ್ಮ ಶಾಲೆಗಳಲ್ಲಿ ಮಾರ್ಗದರ್ಶಕಳು

ಯಾವಾಗಲೂ ಮರೆಯಲ್ಲಿರುವಳೆಂದು ಆತ್ಮಸ್ತುತಿಮಾಡಿಕೊಂಡು ಕಿಂಡರ ಗಾರ್ಟನ್ ಪದ್ಧತಿಯಲ್ಲಿ ಮಾತ್ರ ಶಿಕ್ಷಕನಿಗೆ ವರ್ಗದಲ್ಲಿ ಮಹತ್ವದ ಸ್ಥಾನವಿದೆಯೆಂದು ಅದನ್ನು ಟೀಕಿಸುವರು. ಆದರೆ ಕಿಂಡರಗಾರ್ಟನಿಗರು ಕನಿಷ್ಟಪಕ್ಷ, ಶಿಕ್ಷಕನ ಭವ್ಯ ಆಕಾರದಿಂದಲಾದರೂ ಬಾಲಕರ ಅವನಿಗೆ ವರ್ಗದಲ್ಲಿ ಮಹತ್ವವನ್ನು ಕೊಟ್ಟೇತೀರುವರು ಎಂದು ಮಾರುತ್ತರವನ್ನು ಕೊಡುವರು. ಅವರು ಮಾಂಟೆಸರಿ ಶಾಲೆಯ ಮಾರ್ಗದರ್ಶಕಳ ಪುಷ್ಟದೇಹವನ್ನು ವರ್ಣಿಸಲಿಲ್ಲ. ಇದು ಕಿಂಡರಗಾರ್ಟನಿಗರ ವಿನಯವನ್ನೇ ಸೂಚಿಸುತ್ತದೆ. ಶಿಕ್ಷಕನು ವಿದ್ಯಾರ್ಥಿಗಳಿಗೆ ಗಂಭೀರತೆಯಿಂದ "ನಾನು ಮಾಡಿದಂತೆ ಮಾಡಬೇಡಿರಿ; ನಾನು ಹೇಳಿದಂತೆ ಮಾಡಿರಿ" ಎಂದು ಹೇಳಿದಾಗ್ಯೂ ಅವರು ಅವನನ್ನು ಅನುಕರಿಸದೆ ಬಿಡರು.

ಆದರೆ ವಿಚಾರವಂತನಾದ ಶಿಕ್ಷಕನು ತಾನು ಮಾತಾಡುವುದನ್ನು ಹುಸು ಕಡಮೆ ಮಾಡಿ ವಿದ್ಯಾರ್ಥಿಗಳನ್ನು ಹೆಚ್ಚು ಮಾತಾಡಹಚ್ಚಬಹುದು. ಆದರೆ ಅವನಿಗೆ ತನ್ನ ವ್ಯಕ್ತಿತ್ವವನ್ನು ಬಿಟ್ಟುಕೊಡಲು ಬಲುಮೆಯನ್ನು ಮಾಡಲಾಗದು; ಮಾಡಿದರೂ ಅದು ಶಕ್ಯವಿಲ್ಲ. ಸ್ವಾತಂತ್ರ್ಯವಾದಿಗಳಾದ ಮ್ಯಾಕಮನ್ ಮೊದಲಾದವರೂ ಸಹ ತಮ್ಮ ವಿದ್ಯಾರ್ಥಿಗಳ ಮೇಲೆ ತಮ್ಮ ವರ್ಚಸ್ಸನ್ನು ಬೀರದೆ ಇರಲಾರರು. ಪ್ರೊ. ಪಾಮರರು ವರ್ಣಿಸಿದ ಆದರ್ಶ ಶಿಕ್ಷಕನಂ

೧. ವರ್ಗದಲ್ಲಿ ತನ್ನನ್ನು ತಾನು ಮರೆಯಬೇಕೆಂಬುದು,

೨. ಪಾದ್ರಿಯಂತೆ ಸ್ವಾರ್ಥತ್ಯಾಗಿಯಾಗುವ ಸ್ವಭಾವವುಳ್ಳವನಿರಬೇಕೆಂಬುದು, ಹಾಗ

೩. ಸ್ತುತಿ ಒಪ್ಪಿಗೆ ಮುಂತಾದವುಗಳ ಆಶೆಯಿಲ್ಲದೆ ಸೇವೆಯನ್ನು ಸಲ್ಲಿಸಲು ಸಿದ್ಧನಾಗಿರಬೇಕೆಂಬುದು, ಇವೇ ಮೊದಲಾದ ಧ್ಯೇಯಗಳನ್ನು ಆಚರಣೆಯಲ್ಲಿ ತರಲು ಶಿಕ್ಷಕನು ಉತ್ಸುಕನಾಗಿರಬಹುದು. ಆದರ್ಶ ಶಿಕ್ಷಕನು ತನ್ನ ಹಿತದ ಸಲುವಾಗಿ ಜೀವಿಸದೆ ವಿದ್ಯಾರ್ಥಿಯ ಮತ್ತು ತಾನು ಕಲಿಸುವ ಸತ್ಯದ ಸಲುವಾಗಿ ಜೀವಿಸುವನು. ಅವನು ತನ್ನ ವ್ಯಕ್ತಿತ್ವದ ಬಣ್ಣವು ಸ್ವಲ್ಪವೂ ತಾಗದಂತೆ— ವರ್ಣರಹಿತವಾದ ಮಾಧ್ಯಮದಿಂದ ಹಾದು ಹೋಗುವಂತೆ— ಬಾಲಕರ ಮನಸ್ಸಿನ ಮೇಲೆ ಸತ್ಯದ ತಿಳಿಬೆಳಕನ್ನು ಬಿಂಬಿಸಲು ಯತ್ನಿಸಬಹುದು. ಆದರೆ ವರ್ಣರಹಿತವಾದ ಮಾಧ್ಯಮದಿಂದ ಕಲಿಸುವ್ರದು ಸಾಧ್ಯವೇ? ನಾವು ನಮ್ಮಲ್ಲಿರುವ ಗರ್ವ, ಅಸೂಯೆ, ನಿರ್ದಯತೆ ಇವುಗಳನ್ನು ಕಿತ್ತೊಗೆಯಬಹುದು; ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಪರಿಣಾಮವಾಗದಂತೆ ಕೆಲಮಟ್ಟಿಗೆ ನಮ್ಮ ಸದ್ಗುಣಗಳನ್ನು ಹತ್ತಿಕ್ಕಬಹುದು; ಆದರೆ ನಮ್ಮ ಎಲ್ಲ ಗುಣಗಳನ್ನೂ ಗಾಳಿಗೆ ತೂರಿ, ಸ್ಕ್ಯಾಂಡಿನೇವಿಯಾ ದೇಶದ ಪೌರಾಣಿಕ ಕಥೆಗಳಲ್ಲಿ ಬರುವ ಸುಂದರಿಯರಂತೆ ಬೆನ್ನಿಲ್ಲದೆ ಒಳಗೆ ಎಲ್ಲವೂ ಪೊಳ್ಳು ಮಾಡಲ್ಪಟ್ಟು ಮುಂದೆ ಮಾತ್ರ ಚಂದಕಾಣುವಂತೆ ನಾವು ಮಾಡಿಕೊಳ್ಳಲಾರೆವು. ಉಭಯ ಪಕ್ಷಗಳನ್ನು ವಿವರಿಸಿ ಸತ್ಯವನ್ನು ಬಾಲಕರಿಗೆ ನಿರೂಪಿಸುವಾಗ ತಮ್ಮ ವ್ಯಕ್ತಿತ್ವದ ಲವಲೇಶವೂ ತಗಲದಂತೆ ತಿಳಿಸುವುದು ತೀರ ಅಸಾಧ್ಯ; ಇಷ್ಟೇ ಅಲ್ಲ, ವಿವಾದಾತ್ಮಕ ವಿಷಯಗಳನ್ನು ಹೇಳುವಾಗ, ನಮ್ಮ ಸ್ವಂತ ಅಭಿಪ್ರಾಯದ ಮುದ್ರಿಕೆಯು ಎಳ್ಳಷ್ಟೂ ಮೂಡಬಾರದೆಂದು ಪ್ರಯತ್ನಿಸುವಾಗ, ಒಮ್ಮೊಮ್ಮೆ ನಾವು ಸತ್ಯದ ಸ್ವರೂಪವನ್ನೇ ಬದಲಿಸುವ ಭಯವಿದೆ.

ಹಾಗಾದರೆ ಶಾಲೆಯ ಅಥವಾ ವರ್ಗದ ನಿಯಂತ್ರಣವನ್ನು ವಿದ್ಯಾರ್ಥಿಗಳಿಗೆ ಒಪ್ಪಿಸುವ ಸಾಧ್ಯವಿದೆಯೇ? ಹೀಗೆ ಮಾಡಿದರೆ "ಅರಾಜಕತೆ" ಯುಂಟಾಗಬಹುದೆಂದು ಅನುಭವಿ ಶಿಕ್ಷಕನು ಭಯಪಡುವನು. ಶಿಕ್ಷಕನು ಪ್ರೇಕ್ಷಕನಂತೆ ಅಥವಾ ಸಲ್ಲಾಗಾರನಂತೆ ಉಳಿಯುವೆನೆಂದು ಹೇಳಿದರೂ ಭಯವು ತಪ್ಪಿದ್ದಲ್ಲ. ಆಕರ್ಷಕಶಕ್ತಿಯ ಪ್ರಭಾವದಿಂದ ವಿದ್ಯಾರ್ಥಿಗಳು ಶಿಕ್ಷಕನ ಕಡೆಗೆ ಒಲಿಯಲೇಬೇಕೆಂಬುದು ಸಿದ್ಧವಿದೆ.

ವರ್ಗದಲ್ಲಿ ವಿದ್ಯಾರ್ಥಿಗಳಿಗೆ ಸ್ವತಂತ್ರ ವಾತಾವರಣವನ್ನು ಕಲ್ಪಿಸಿಕೊಟ್ಟು "ನೀವು ಷ್ಟೇಚ್ಛೆಯಂತೆ ವರ್ತಿಸಬಹುದು; ನಿಮಗೆ ಯಾವ ತರದ ಶಿಕ್ಷೆಯನ್ನಾಗಲಿ ದಂಡವನ್ನಾಗಿ ಧಿಸುವ ಭಯವಿಲ್ಲ" ಎಂದು ಒಬ್ಬ ಶಿಕ್ಷಕನು ಹೇಳಿದಾಗ ಕೆಡಿಗೇಡಿಯಾದ ವಿದ್ಯಾರ್ಥಿ ಸೊಬ್ಬನು ವರ್ಗದಲ್ಲಿಯ ಕಾಜಿನ ಪಾತ್ರೆಯನ್ನು ಪುಡಿಪುಡಿಯಾಗಿ ಒಡೆದನಂತೆ. ಆಗ ಕ್ಷಕನು ಶಾಂತನಾಗಿ ತನ್ನ ಜೇಬಿನಲ್ಲಿಯ ಗಡಿಯಾರವನ್ನು ತೆಗೆದು "ಇದನ್ನೊಂದು ಒಡೆ ಹೋಡುವಾ" ಎಂದು ಆ ವಿದ್ಯಾರ್ಥಿಯ ಕೈಯಲ್ಲಿ ಕೊಟ್ಟ ಕೂಡಲೇ ಅವನು ನಾಚಿಕೊಂಡು ಾಜಿನ ಪಾತ್ರೆಯನ್ನು ಒಡೆದುದಕ್ಕೆ ಪಶ್ಚಾತ್ತಾಪಬಟ್ಟು ಗಾಬರಿಯಾಗಿ ಆಪಾದಮಸ್ತಕ ರಥರನೆ ನಡುಗಿ ತನ್ನಿಂದ ಸರ್ವಥಾ ಆಗುವುದಿಲ್ಲೆಂದು ಹೇಳಿದನು. ಈ ನಿಜವಾದ ಥೆಯನ್ನು ಸಾಮಾನ್ಯ ಶಿಕ್ಷಕರಿಗೆ ಹೇಳಿದಾಗ ಅವರು ತಮ್ಮ ಜೇಬಿನಲ್ಲಿಯ ಗಡಿಯಾರವನ್ನು ಗೆದು ಅದನ್ನು ದಿಟ್ಟಿಸಿ ನೋಡಿ ಸಂದೇಹದಿಂದ ತಲೆಯನ್ನಾಡಿಸಿ ಪುನಃ ಅದನ್ನು ೀಬಿನಲ್ಲಿ ನೂಕಿದರಂತೆ. ಪೂರ್ಣ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೆ ಕೊಟ್ಟು ವರ್ಗದ ೃವಸ್ಥೆಯನ್ನು ಕಾದುಕೊಳ್ಳಲು ಸಮರ್ಥರಾದ ಶಿಕ್ಷಕರು ದೊರೆಯುವುದು ದುರ್ಲಭ.

ಆದ್ದರಿಂದ ಶಿಕ್ಷಣ ಮತ್ತು ಅಭ್ಯಾಸದ ದೃಷ್ಟಿಯಿಂದ ವಿದ್ಯಾರ್ಥಿಗಳ ಮೇಲೆ ಹೆಚ್ಚಿನ ಹೊಣೆಯನ್ನು ಹಾಕಬಹುದು; ಆದರೆ ನಿಯಂತ್ರಣ ಕಾರ್ಯದಲ್ಲಿ ಮಾತ್ರ ಅವರಿಗೆ ಹೆಚ್ಚು ಾಗವನ್ನು ಕೊಡುವುದು ವಾದಗ್ರಸ್ತ ವಿಷಯ. ವರ್ಗವೆಂಬ ಗಾಡಿಯು ಹಳಿಗಳ ಮೇಲೆ ಾಗುವಂತೆ ನೋಡುವ ಹೊಣೆಯನ್ನು ಸಮಾಜವು ಶಿಕ್ಷಕನ ಮೇಲಿರಿಸಿದೆ. ಗಾಡಿಗೆ ಪಘಾತವಾಗದಂತೆ ಅವನು ನೋಡುತ್ತಿರಬೇಕಲ್ಲವೇ? ಈ ಮಾತನ್ನು ಎತ್ತಿದ ಕೂಡಲೆ ಸ್ವಾತಂತ್ರ್ಯವಾದಿಗಳು ರೇಗಿ ಈ ತರದ ವರ್ತನವು ಸ್ವಾತಂತ್ರ್ಯದ ಪರಿಹಾಸವೆಂದೂ ಶಿಕ್ಷಕನ ಧೀನವಾಗಿ ಅಥವಾ ಅವನ ಹೇಳಿಕೆಯಂತೆಯೇ ವರ್ಗವು ನಡೆಯಬೇಕೆಂದು ಹೇಳಿದಂತೆ ಾಗುವುದೆಂದೂ ಬಲವಾಗಿ ಆಕ್ಷೇಪಿಸುವರು. ವಿದ್ಯಾರ್ಥಿಗಳು ಯಾವುದಾದರೊಂದು ಸ್ವತಂತ್ರ ಮಾರ್ಗವನ್ನು ಹುಡುಕಿ ಅದರಂತೆ ವರ್ತಿಸಹತ್ತಿದ ಕೂಡಲೆ ಅವರನ್ನು ತಡೆಯುವುದೆಂದರೆ ವರಿಗೆ ಸಂಕೋಲೆಗಳನ್ನು ಹಾಕಿ ಕುಣಿಯಹೇಳಿದಂತಾಗುವುದೆಂದೂ ವಿದ್ಯಾರ್ಥಿಗಳು ಡಿದ ದಾರಿಯು ಸರಿಯಾದುದಲ್ಲದಿದ್ದರೂ ಆ ದಾರಿಯಲ್ಲಿಯೇ ಅವರನ್ನು ಹೋಗಗೊಟ್ಟು ಪ್ಪು-ತಡೆಗಳನ್ನು ಮಾಡಗೊಟ್ಟು ಬೆಳಕಿನ ಮಾರ್ಗವನ್ನು ಅವರೇ ಕಂಡು ಹಿಡಿಯುವಂತೆ ಾಡಬೇಕೆಂದೂ ಸ್ವತಂತ್ರವಾದಿಗಳ ಆಗ್ರಹದ ಹೇಳಿಕೆ.

ಇದಕ್ಕೆ ಉತ್ತರವಿಷ್ಟೆ. ಕಟ್ಟಕಡೆಗೆ, ನಿಯಂತ್ರಣದ ಅಧಿಕಾರವನ್ನು ಉಪಯೋಗಿಸುವ ಕ್ತಿಯು ಯಾರಾಡರೊಬ್ಬರಲ್ಲಿ ಇರಲೇಬೇಕು. ಇಡಿಯ ವರ್ಗಕ್ಕೆ ಬಾಧೆಯಾಗದಂತೆ ಶಿಕ್ಷಕನು ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯವನ್ನು ಕೊಡಲಿ. ಆದರೆ ಕಟ್ಟಕಡೆಗೆ ಕೈಹಾಕುವ ಮತ್ತು ಅನ್ಯಾಯ ನ್ನು ನಿಷೇಧಿಸುವ ಅಧಿಕಾರವು ಶಿಕ್ಷಕನಲ್ಲಿ ಇರಲಿ. ಎಲ್ಲ ಶಿಕ್ಷಕರಲ್ಲಿ ಅಷ್ಟೇ ಪ್ರಮಾಣದಿಂದ ಮ್ಮ ಅಧಿಕಾರವನ್ನು ಎರಡನೆಯವರಿಗೆ ಬಿಟ್ಟುಕೊಡುವ ಸಾಮರ್ಥ್ಯವಿರುವುದಿಲ್ಲ. ಚ್ಚು ಕರ್ತೃತ್ವಶಕ್ತಿಯುಳ್ಳವನು ಹೆಚ್ಚು ಅಧಿಕಾರವನ್ನು ಬಿಟ್ಟುಕೊಡಬಹುದು. ತಾನು ಟ್ಟ ಅಧಿಕಾರದ ದುರುಪಯೋಗವಾಗದಂತೆ ನೋಡಿಕೊಳ್ಳುವ ಚಾಣಾಕ್ಷತನವು ಅವನಲ್ಲಿ ರಬೇಕು. ಆದರ್ಶ ಪರಿಸ್ಥಿತಿಯುಂಟಾಗಿ, ಇಂತಹ ಚಾಣಾಕ್ಷ ಶಿಕ್ಷಕರು ದೊಡ್ಡ ಪ್ರಮಾಣ ಂದ ಸಿಕ್ಕಾಗ ಸ್ವಾತಂತ್ರ್ಯವಾದಿಗಳು ತಮ್ಮ ಸಿದ್ಧಾಂತವನ್ನು ಒರೆಗೆ ಹಚ್ಚುವ ಯತ್ನ ಮಾಡಬಹುದು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಉತ್ತಮ ವರ್ಗದ ಶಿಕ್ಷಕನಷ್ಟೇ ಸ್ವಾತಂತ್ರ್ಯವನ್ನು ಕಡಿಮೆ ತರಗತಿಯ ಶಿಕ್ಷಕನೂ ಕೊಡಬೇಕೆಂದು ಒತ್ತಾಯಮಾಡಬಾರದು.

ಮೇಲಾಗಿ ಮುಂದಿನ ಜೀವನದಲ್ಲಿ ವಿದ್ಯಾರ್ಥಿಗಳು ನಿರಂಕುಶ ಸ್ವಾತಂತ್ರ್ಯವನ್ನು

ಪಡೆಯುವುದು ಸಾಧ್ಯವಿಲ್ಲ. ಸಾಮಾಜಿಕ ನಿರ್ಬಂಧಗಳನ್ನೂ ತಮ್ಮ ಮೇಲಧಿಕಾರಿಗಳ ಆಜ್ಞೆಯನ್ನೂ ಅವರು ಪಾಲಿಸಲೇಬೇಕಾಗುವುದು. ವಿದ್ಯಾರ್ಥಿಗಳು ತಮ್ಮ ಶೀಲ ಹಾಗೂ ವ್ಯಕ್ತಿತ್ವ ಇವು ಉತ್ತಮ ರೀತಿಯಿಂದ ಬೆಳೆಯಲು ದಾರಿತೋರುವ ಶಾಲೆಯ ನಿಯಮ ನಿರ್ಬಂಧಗಳನ್ನು ಸರಿಯಾಗಿ ಪಾಲಿಸತೊಡಗಿದರೆ ಮುಂದಿನ ಜೀವನದಲ್ಲಿ ಅವರಿಗೆ ಎಷ್ಟೊ ಸಹಾಯವಾಗುವುದು. ಹೀಗೆಂದ ಮಾತ್ರಕ್ಕೆ ಶಿಕ್ಷಕನು ಬೆತ್ತವನ್ನುಪಯೋಗಿಸಿ ಶಿಸ್ತನ್ನು ಕಾದುಕೊಳ್ಳಬೇಕೆಂದು ಹೇಳಿದಂತಾಗಲಿಲ್ಲ. ಬೆತ್ತದ ಕಾಲವು ಈಗಾಗಲೆ ಸಂದುಹೋಗಿದೆ.

೧. ಶಾಲೆಯಲ್ಲಿ ಆಟ-ನೋಟಗಳು, ನಾಟಕ-ಮೇಳಗಳು, ಮಾಸಿಕ-ಪತ್ರಗಳು, ಶೈಕ್ಷಣಿಕ ಪ್ರವಾಸಗಳು, ಸ್ಕೌಟ ಶಿಬಿರಗಳು ಮುಂತಾದವು ಪ್ರಚಾರದಲ್ಲಿ ಬಂದಂದಿನಿಂದ ಬೆತ್ತದ ಉಪಯೋಗವು ತೀರ ತಗ್ಗಿದೆಯೆಂದು ತಜ್ಞರ ಅಭಿಪ್ರಾಯವಿದೆ.

೨. ಪರೀಕ್ಷೆಯು ಪರಿಣಾಮಗಳ ಮೇಲಿಂದ ಗ್ರ್ಯಾಂಟನ್ನು ಕೊಡುವ ಪದ್ಧತಿಯು ಹೋಗಿ ಶಾಲೆಯಲ್ಲಿ ಶಿಕ್ಷಕ ವಿದ್ಯಾರ್ಥಿಗಳ ಸಂಬಂಧವು ಗೆಳೆತನದ ಸಂಬಂಧದಂತೆ ಪರಿಣಮಿಸಿ ಹತ್ತಿದ್ದರಿಂದ ಸುಧಾರಣೆಯು ತಲೆದೋರಿದೆ.

೩. ಪಾಠ್ಯಕ್ರಮದಲ್ಲಿ ವಿದ್ಯಾರ್ಥಿಗಳ ಅಭಿರುಚಿಗೆ ತಕ್ಕ ವಿಷಯಗಳಿರುವುದರಿಂದ ಸೇರದ ವಿಷಯಗಳನ್ನು ಒತ್ತಾಯದಿಂದ ಕಲಿಸುವ ಪರಿಪಾಠವಾಗಲಿ ಪಾಠವನ್ನು ಒಪ್ಪಿಸದ ಇದ್ದಾಗ ಬೆತ್ತದ ಪ್ರಹಾರ ಮಾಡುವದಾಗಲಿ ಈಗ ಕಂಡುಬರುವುದಿಲ್ಲ.

೪. ಕಲಿಸುವಾಗ ಹೆಚ್ಚಿನ ಸಾಧನಗಳನ್ನೂ ಸ್ವಾತಂತ್ರ್ಯವನ್ನೂ ಉಪಯೋಗಿಸುವ ಅನುಕೂಲ್ಯವಿದ್ದುದರಿಂದ ಶಿಕ್ಷಕ ವಿದ್ಯಾರ್ಥಿಗಳ ಸಂಬಂಧವು ದೂರವಾಗಿ ಉಳಿಯುವ ಮೈತ್ರಿಯದಾಗಿ ಪೋರಹತ್ತಿದೆ. ಆಟಗಳಲ್ಲಿ ಇಚ್ಛಿಕ ವಿಷಯಗಳಲ್ಲಿ ಶಿಕ್ಷಕರು ಪಾಲುಗಾರರಾಗುವುದರಿಂದ ಕೃತ್ರಿಮ ಅಂತರವಿಲ್ಲದಂತಾಗಿ ಭಯವೂ ಅವಿಶ್ವಾಸವೂ ಮಾಯವಾಗಿವೆ ಒಟ್ಟಿನಲ್ಲಿ ಮೇಲಿನ ಕಾರಣಗಳೆಲ್ಲ ಒಂದಾಗಿ ಬೆತ್ತವನ್ನೇ ಬೆದರಿಸಿ ಓಡಿಸಿಬಿಟ್ಟಿವೆ.

ಇನ್ನು ಶಾಲಾ ವ್ಯವಸ್ಥೆಯು ತೊಡಕುಗಳನ್ನು ಬಿಡಿಸುವುದಕ್ಕಾಗಲಿ, ಸ್ವಭಾವ-ವೈಷಮ್ಯಗಳನ್ನು ಸರಿಪಡಿಸುವುದಕ್ಕಾಗಲಿ "ಸ್ವಯಂಪ್ರೇರಿತ ಶಿಸ್ತು"ನ್ನು ಬಲಪಡಿಸುವ ಕೆಳಗೆ ಹೇಳಿದ ಸಾಮಾನ್ಯ ಉಪಾಯಗಳನ್ನು ಯೋಜಿಸಬಹುದು.

೧. ಶಾಲೆಯ ಆಡಳಿತೆಯನ್ನು ಸಹಕಾರ ತತ್ತ್ವದಿಂದ ಸಾಗಿಸುವದು.

೨. ಶಿಕ್ಷಾರ್ಹವಾದ ತಪ್ಪು ಮಾಡಿದ ಬಾಲಕನನ್ನು ವರ್ಗದ ಅವಧಿಯು ಮುಗಿದ ಮೇಲೆ ಕೆಲವು ಹೊತ್ತು ವರ್ಗದಲ್ಲಿ ಉಳಿಯುವಂತೆ ಮಾಡುವುದು.

೩. ಅವನಿಗೆ ದೊರೆತ ಗುಣಗಳಲ್ಲಿ ಕೆಲವನ್ನು ಕಡಿಯುವುದು.

೪. ವೈಯಕ್ತಿಕ ವರ್ಚಸ್ಸನ್ನು ಉಪಯೋಗಿಸಿ ಬಾಲಕರಲ್ಲಿ ಪರಸ್ಪರ ಮೈತ್ರಿಯನ್ನು ಭದ್ರಪಡಿಸುವುದು.

೫. ಚುರುಕಾದ ಟೀಕೆ-ಹದನವಾದ ನಾಲಗೆ-ಯಿಂದ ಶಿಸ್ತನ್ನು ಕಾದುಕೊಳ್ಳುವುದು.

ಆದರೆ ಸದ್ಯದ ಪರಿಸ್ಥಿತಿಯಲ್ಲಿ ಶಿಕ್ಷಕನ ನಿರಂಕುಶ ಪ್ರವೃತ್ತಿಗೆ ಅವಕಾಶವಿಲ್ಲ. ಶಿಶು ಪ್ರಾಥಮ್ಯ ಶಾಲೆಗಳಲ್ಲಿ ಶಿಕ್ಷಕನ ವ್ಯಕ್ತಿತ್ವಕ್ಕೆ ಅಗ್ರವಾದ ಸ್ಥಾನವಿಲ್ಲ. ಯಾಕೆಂದರೆ ಬಾಹ್ಯ ನಿಯಂತ್ರಣದ ಯೋಜನೆಗಳು ಹೆಚ್ಚಾದಂತೆ ಶಾಲೆಯ ನೈತಿಕ ವಾತಾವರಣವು ದೂಷಿತ ವಾಗುವುದು. ಆದುದರಿಂದ ಶಿಕ್ಷಕನಾದವನು ಈಗ ಸ್ವಯಂಪ್ರೇರಿತ ಶಿಸ್ತಿನ ಯುಗವು ಪ್ರಾರಂಭವಾಗಿದೆಯೆಂಬುದನ್ನು ಲಕ್ಷ್ಯದಲ್ಲಿಟ್ಟು ತನ್ನ ಹೊಣೆಗಾರಿಕೆಯನ್ನು ಚೆನ್ನಾಗಿ ಅರಿತು ಕೊಂಡು ಜಾಗರೂಕತೆಯಿಂದ ವರ್ತಿಸಬೇಕು. ಅವನು ವರ್ಗದಲ್ಲಿ ನಿರಂಕುಶ ಪ್ರಭುವಾಗಿರಬಾರದು; ಅಥವಾ ಸತ್ವರಹಿತ ತುಚ್ಛಪ್ರಾಣಿಯೂ ಆಗಿರಕೂಡದು. ಅವನ ವರ್ತನೆಯ

ವಿದ್ಯಾರ್ಥಿಗಳ ಗಳಿಯನಂತಿರಬೇಕು; ಅವನ ಧೋರಣೆಯು ಅಂತಃಕರಣಪೂರ್ವಕವಾಗಿರಬೇಕು; ಮತ್ತು ಅವನ ನಿಯಂತ್ರಣವು ಸಮಯೋಚಿತವಾಗಿರಬೇಕು. ಶಿಕ್ಷಕರ ಮೇಲೆ ಬಿದ್ದಿರುವ ಈ ಮಹತ್ವದ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿರ್ವಹಿಸಲು ಅವಶ್ಯವಿದ್ದ ಸಾಮರ್ಥ್ಯವು ಅವರಲ್ಲಿ ತೀರ ಕಡಿಮೆ ಪ್ರಮಾಣದಲ್ಲಿದ್ದುದು ವಿಷಾದದ ಸಂಗತಿ; ಆದರೆ ಅವರಲ್ಲಿದ್ದ ಉತ್ತಮಾಂಶವನ್ನು ಬೆಳಕಿಗೆ ತರುವ ಅವಕಾಶವನ್ನೇ ಅವರಿಂದ ಕಸಿದುಕೊಂಡರೆ ಪರಿಸ್ಥಿತಿಯು ಸುಧಾರಿಸಲಾರದೆಂಬುದು ಖಂಡಿತ.



ಆಹಾರ ಮೀಮಾಂಸೆ

ಪ್ರಕೃತದ ಮಹಾಯುದ್ಧದ ಮೂಲಕವಾಗಿ ಬರಗಾಲದ ಭವಣೆಯ ಕಾಲದಲ್ಲಿ ಆಹಾರ ಪೂರೈಕೆಯ ಪ್ರಶ್ನೆಯು ದಿನ ದಿನಕ್ಕೆ ಜಟಿಲವಾಗುತ್ತ ಸಾಗಿದೆ. 'ಸಮತೋಲ ಆಹಾರ' ಮುಂತಾದ ವಿಷಯಗಳ ಮೇಲೆ ಬರೆದ ಅನೇಕ ಲೇಖನಗಳನ್ನು ನಮ್ಮ ಪಾಠಕರು ಓದಿರುವರು. ಪ್ರಕೃತದ ಲೇಖನದಲ್ಲಿ ನಮ್ಮ ಆಹಾರ ಸಾಮಗ್ರಿಗಳ ವಿಭಜನೆಯಿಂದ ಹೊರಡುವ ದ್ರವ್ಯಗಳು ಅವುಗಳ ಕಾರ್ಯಗಳು ಇವುಗಳ ಸಂಬಂಧದಿಂದ ಕೆಲವು ಶಾಸ್ತ್ರೀಯ ವಿಚಾರಗಳನ್ನು ಹೇಳಲು ಬಯಸುವೆವು.

ನಾವು ಸೇವಿಸುವ ಆಹಾರದಿಂದ ನಮ್ಮ ಶರೀರದಲ್ಲಿ ಬೆಳೆವಣಿಗೆ ರಕ್ಷಣೆ ಶಕ್ತ್ಯುತ್ಪಾದನೆ ಎಂಬ ಎರಡು ಬಗೆಯ ಕಾರ್ಯಗಳು ನಡೆಯಬೇಕಾಗುವದು. ಮತ್ತು ಅವುಗಳಲ್ಲಿ ಪ್ರೋಟೀನುಗಳು ಕ್ಯಾಲ್ಸಿಯಮ್ ಮುಂತಾದ ಖನಿಜಗಳು ಜಿಣ್ಣೆ ತುಪ್ಪ ಮುಂತಾದ ಉಷ್ಣತಾಜನಕ ಪದಾರ್ಥಗಳು ವ್ಹಿಟಾಮಿನ್ನಗಳು ಎಂಬ ವರ್ಗಗಳನ್ನು ಕಲ್ಪಿಸುವದುಂಟು.

೧. ಪ್ರೋಟೀನುಗಳು-ಶರೀರದ ಬೆಳೆವಣಿಗೆ ಮತ್ತು ಕ್ಷಣಕ್ಷಣ ಅವಿಶ್ರಾಂತವಾಗಿ ನಮ್ಮ ಶರೀರದಲ್ಲಿ ನಡೆದಿರುವ ಸವಕಳಿಯ ಪೂರೈಕೆ ಈ ಕಾರ್ಯಗಳನ್ನು ನಮ್ಮ ಆಹಾರದೊಳಗಿನ ಪ್ರೋಟೀನುಗಳಿಂದ ಆಗುವವು. ಹಾಲು ಹಾಲಿನ ರೂಪಾಂತರಗಳು ಹಸುರು ಪಲ್ಲೆಯ ಬೀನಸುಗಳು ಗೋದಿ ಜೋಳ ಅಕ್ಕಿ ಮುಂತಾದ ಧಾನ್ಯಗಳು ಅಕ್ಕಡಿಯಕಾಳುಗಳು ಬೇಳೆ ಹಣ್ಣು ಹಂಪಲಗಳು ಮುಂತಾದವುಗಳಿಂದ ನಮಗೆ ಬೇಕಾಗುವ ಪ್ರೋಟೀನುಗಳು ದೊರೆಯುವವು.

೨. ಖನಿಜಗಳು-ಅಕ್ಕಿ ಗೋದಿ ಶೆಜ್ಜಿ ಮುಂತಾದ ನಮ್ಮ ಆಹಾರದೊಳಗಿನ ಮುಖ್ಯ ಧಾನ್ಯಗಳ ತೌಡಿನಲ್ಲಿ ನಮಗೆ ಬೇಕಾಗುವ ಖನಿಜಗಳು ವಿಶೇಷವಾಗಿರುವವು. ಕ್ಯಾಲ್ಸಿಯಮ್ ಎಂಬ ದ್ರವ್ಯವು ನಮ್ಮ ಶರೀರದ ಸುಸ್ಥಿತಿಗೂ ಆರೋಗ್ಯ-ರಕ್ಷಣೆಗೂ ಅತ್ಯವಶ್ಯವಾದದ್ದು. ಎಲುವುಗಳ ವಿಕಾಸಕ್ಕೂ ಹಲ್ಲುಗಳ ಆರೋಗ್ಯಕ್ಕೂ ಕ್ಯಾಲ್ಸಿಯಮ್ಮವು ಬೇಕೇ ಬೇಕು. ಚಿಕ್ಕ ಮಕ್ಕಳಲ್ಲಿ ಕಂಡುಬರುವ ಮುಟ್ಟುದೋಷ (ರಿಕೆಟ್ಸ್) ಎಂಬ ಎಲುವುಗಳ ಬೆಳೆವಣಿಗೆಗೆ ಸಂಬಂಧಿಸುವ ಬೇನೆಯು ಕ್ಯಾಲ್ಸಿಯಮ್ಮದ ಕೊರತೆಯಿಂದ ಹುಟ್ಟುವ ವಿಶೇಷಪ್ರಕಾರದ ಬೇನೆಗೆ ಒಳ್ಳೆಯ ದೃಷ್ಟಾಂತವಾಗುವದು. ಜ್ಞಾನತಂತುಗಳ ಕ್ಷೀಣತೆ, ತಜ್ಜನ್ಯವಾದ ಶೀಘ್ರ ಕೋಪ ಮುಂತಾದ ವಿಕಾರಗಳು ನಮ್ಮ ಶರೀರದಲ್ಲಿಯ ಕ್ಯಾಲ್ಸಿಯಮ್ಮದ ಕೊರತೆಯನ್ನು ಸೂಚಿಸುವವು. ನಾವು ಸೇವಿಸುವ ಹಾಲಿನಿಂದಲೇ ನಮಗೆ ಬೇಕಾದ ಕ್ಯಾಲ್ಸಿಯಮ್ಮವು ದೊರೆಯುವದೆಂದು ಹೇಳುವರು. ನಮ್ಮ ಶರೀರಕ್ಕೆ ಕ್ಯಾಲ್ಸಿಯಮ್‌ದಂತೆಯೇ ಅಯೋಡಿನ್ನೂ ಎಂದು ಉಪಯುಕ್ತ ಖನಿಜ ದ್ರವ್ಯವಾಗಿದೆ. ನಮ್ಮ ಕುಟ್ಟಿಗೆಯಲ್ಲಿರುವ ಥಾಯಿರಾಯಿಡ್

ಗ್ರಂಥಿಗಳಿಂದ ಅಯೋಡಿನ್ ತತ್ವದ ಉಪಯೋಗವಾಗುವದು. ಅಯೋಡಿನ್ನದ ಕೊರತೆಯಾದರೆ ಮನುಷ್ಯನ ಬೆಳವಣಿಗೆಯು ಕುಂದುವದು; ಬುದ್ಧಿಯು ಮಂಕಾಗುವದು; ಕುತ್ತಿಗೆಯ ಕೆಳಭಾಗವು ಬಾಯ್ಬುವದು. ಆಡಿನ ಹಾಲು ಲವಂಗ ಶುಂಠಿ (ಅಲ್ಲ) ಮುಂತಾದ ಮಸಾಲೆಗಳು ಇವುಗಳಲ್ಲಿ ಅಯೋಡಿನ್ನವು ವಿಶೇಷವಾಗಿರುವದು.

೩. **ಉಷ್ಣತಾಜನಕಗಳು**-ಇವುಗಳಲ್ಲಿ ಸ್ನಿಗ್ಧಪದಾರ್ಥಗಳು ಮತ್ತು ಶರ್ಕರೆಗಳು ಎಂದು ಎರಡು ವರ್ಗಗಳಿರುವವು. ವನಸ್ಪತಿಗಳ ಎಣ್ಣೆಗಳು ಬೆಣ್ಣೆ ತುಪ್ಪಗಳು ಇವು ಸ್ನಿಗ್ಧ ಪದಾರ್ಥಗಳು. ಪಿಷ್ಟಗಳು ಅನ್ನ ಕಣಕ ಮೊದಲಾದವುಗಳೂ ಬೆಲ್ಲ ಸಕ್ಕರೆ ಜೇನುತುಪ್ಪ ಮೊದಲಾದವುಗಳೂ ಶರ್ಕರಾಯುಕ್ತ ಪದಾರ್ಥಗಳು.

೪. **ವ್ಹಿಟಾಮಿನ್ನಗಳು** — ವ್ಹಿಟಾಮಿನ್‌ಗಳ ಸಂಬಂಧದಿಂದ ಗುಡ್ ಹೆಲ್ತ್ (Good Health) ಎಂಬ ಅಮೇರಿಕನ್ (U. S. A.)ಪತ್ರಿಕೆಯಲ್ಲಿ ಈ ಕೆಳಗೆ ಬರೆದ ವಿಚಾರಗಳು ಪ್ರಕಟವಾಗಿವೆ.

" ವ್ಹಿಟಾಮಿನ್ನಗಳು ತುಬಾಕಿಯ ಕಿವಿಯ ಬಳಿಯಲ್ಲಿರುವ ಕೇಪಿನಂತಿವೆ. ಅ ನಮ್ಮ ಶರೀರದೊಳಗಿನ ಯಂತ್ರಗಳಿಗೆ ಚಾಲನೆ ಕೊಡುವವು. ಕೇವು ಮುಂದಿನ ಮದ್ದಿಗೆ ಉ ಯನ್ನು ಹಚ್ಚುವಂತೆ ವ್ಹಿಟಾಮಿನ್ನಗಳು ನರಗಳ ಕೇಂದ್ರಗಳಲ್ಲಿ ಚಾಲನೆಯನ್ನು ಹುಟ್ಟಿಸುವವ ಕೇವು ಇಲ್ಲದಿದ್ದರೆ ಬಂದೂಕಿನ ಕಿವಿಯನ್ನು ಒತ್ತಿದರೂ ಸಹ ಗುಂಡು ಹಾರಲಾರದಷ್ಟೇ ಅದರಂತೆ ವಿದುಳು ನರಗಳ ಕೇಂದ್ರಗಳಿಗೆ ಚಲನೆಯು ಅಪ್ಪಣೆಯನ್ನು ಕೊಟ್ಟರೂ ಸ ವ್ಹಿಟಾಮಿನ್ನಗಳಿಲ್ಲದ ಆಹಾರವನ್ನು ಪಯೋಗಿಸುವವರ ನರಗಳ ಕೇಂದ್ರಗಳು ದುರ್ಬಲವಾ ಅವು ಕಾರ್ಯ ಮಾಡಲಾರದಂತಾಗುವವು. ಪಚನಕ್ರಿಯೆ ಕರುಳು ರಕ್ತಾಶಯ ಸ್ನಾಯು ಸಂಸ್ಥೆಗಳು ವಿದುಳು ಇವುಗಳ ಕ್ರಿಯೆಗಳು, ಇಷ್ಟೇ ಏಕೆ, ಶರೀರದ ಎಲ್ಲಬಗೆಯ ಚಟುವಟಿಕೆ ಗಳು ವ್ಹಿಟಾಮಿನ್ನಗಳೆಂಬ ಜೀವನಸತ್ವಗಳನ್ನೇ ಅವಲಂಬಿಸಿರುವವು. ಇವು ಮಾನವ ಜೀವನಕ್ಕೆ ಅತ್ಯಂತ ಮಹತ್ವವುಳ್ಳ ಘಟಕಗಳಾಗಿರುವದರಿಂದಲೇ ಇವಕ್ಕೆ **ಜೀವನಸತ್ವ**ಗಳೆಂಬ ಹೆಸರು ಬಂದಿದೆ.

ವ್ಹಿಟಾಮಿನ್ನಗಳು ತೀರ ಆಧುನಿಕ ಮತ್ತು ಅತ್ಯಂತ ಮಹತ್ವದ ಶಾಸ್ತ್ರೀಯ ಶೋಧಗಳ ಪರಿಣಾಮಗಳಾಗಿವೆ. ಶರೀರದೊಳಗಿನ ಜೀವಾಣುಗಳ ಸವಕಳಿಯನ್ನು ಪೂರೈಸುವದಕ್ಕೆ ಪ್ರೊಟೀನು (Protein) ಗಳೂ ಶರೀರದಲ್ಲಿ ಉಷ್ಣತೆಯನ್ನೂ ಕಾರ್ಯಶಕ್ತಿಯನ್ನೂ ಹುಟ್ಟಿಸುವದಕ್ಕೆ ಸ್ನಿಗ್ಧಪದಾರ್ಥಗಳೂ ಶರ್ಕರೆಯೂ ಬೇಕೇ ಬೇಕು. ಆದರೆ ಈ ಪದಾರ್ಥಗಳು ಆಹಾರಗಳನ್ನು ಬೇಕಾದಷ್ಟು ಸೇವಿಸಿದರೂ ಕೂಡ ಅದರಲ್ಲಿ ವಿಟಾಮಿನ್ನವಿಲ್ಲದಿದ್ದ ನಿರಾಹಾರದಿಂದಿರುವವರ ಶರೀರದಂತೆ ನಮ್ಮ ಶರೀರವು ಕೃಶವಾಗುತ್ತ ಹೋಗುವದು.

ಪ್ರೊಟೀನುಗಳೇ ಮೊದಲಾದ ಆಹಾರಸಾಮಗ್ರಿಗಳು ಕಟ್ಟಡಕ್ಕೆ ಬೇಕಾಗುವ ಕಲ್ಲು ಕಟ್ಟಿಗೆಗಳಂತಿದ್ದರೆ ಜೀವನಸತ್ವಗಳು ಉಪ್ಪಾರ ಬಡಿಗರಂತಿರುವವು. ನಮ್ಮ ಶರೀರದಲ್ಲಿರು ಅಸ್ಥಿಮಾಂಸಾದಿಗಳು ನಮಗೆ ಕಾಣಿಸುತ್ತಿರುವವು. ಆದರೆ ಪ್ರಾಣಶಕ್ತಿಯು ಎಲ್ಲಿದೆಯೆಂಬದು ನಮಗೆ ಕಾಣಿಸದು. ಆ ಪ್ರಾಣಶಕ್ತಿಯ ಪೋಷಣೆಗೆ ವ್ಹಿಟಾಮಿನ್ನಗಳು ಕಾರಣವಾಗಿರುವ ಎಂದಮೇಲೆ ಈ ಜೀವನಸತ್ವಗಳ ಮಹತ್ವವೆಷ್ಟೆಂಬದು ತಾನೇ ವ್ಯಕ್ತವಾಗುವದು.

ಒಂದೊಂದು ಬಗೆಯ ವ್ಹಿಟಾಮಿನ್ನವು ಒಂದೊಂದು ಬಗೆಯ ನಿರ್ದಿಷ್ಟ ಕಾರ್ಯವನ್ನು ಮಾಡುವದು. ಮತ್ತು ಒಂದು ಬಗೆಯ ವ್ಹಿಟಾಮಿನ್ನದ ಕೊರತೆಯಿಂದ ಅದೇ ಬಗೆಯ ವಿಶೇ ಪ್ರಕಾರದ ಕೊರತೆಯನ್ನು ನಿದರ್ಶಿಸುವ ಪರಿಣಾಮವು (ವ್ಯಾಧಿಯು) ನಮ್ಮ ಶರೀರದಲ್ಲಿ ಕಂಡು ಬರುವದು. ಬೇರೆಬೇರೆ ಬಗೆಯ ವ್ಹಿಟಾಮಿನ್ನಗಳು ಪರಸ್ಪರಪೂರಕಗಳಾಗಿ ನಮ್ಮ ಶರೀರದ

ಕೆಲಸಮಾಡುತ್ತಿರುವದರಿಂದ ಕೆಲಕೆಲವು ವ್ಹಿಟಾಮಿನ್ನಗಳ ಸಾಮುದಾಯಿಕ ಉಪಯೋಗದಿಂದಲೇ ಅವುಗಳಿಂದಾಗುವ ಪ್ರಯೋಜನವಾಗುವದು. ವ್ಹಿಟಾಮಿನ್ನಗಳಿಗೆ ಸಂಬಂಧಿಸುವ ಶಾಸ್ತ್ರವು ಹೆಚ್ಚು ಗಹನವಾದದ್ದೂ ಹಲವು ಕವಲುಗಳುಳ್ಳದ್ದೂ ಜಟಿಲವಾದದ್ದೂ ಇರುವದು. ಜಗತ್ತಿನೊಳಗಿನ ಪ್ರವೀಣರಾದ ಅನೇಕಾನೇಕ ಶಾಸ್ತ್ರಜ್ಞರು ಕಣ್ಣೊಳಗೆ ಎಣ್ಣೆಯಿಟ್ಟು ಹಗಲಿರುಳು ಪರಿಶ್ರಮಮಾಡಿ ಈ ವಿಷಯವನ್ನು ಅಭ್ಯಾಸಮಾಡಿ ಈ ವಿಷಯದಲ್ಲಿ ಪ್ರಕೃತಕ್ಕೆ ಗೊತ್ತಾಗಿರುವ ಕೆಲವು ಸಂಗತಿಗಳನ್ನು ಸಂಶೋಧನೆ ಮಾಡಿರುವರು. ಇನ್ನೂ ಈ ಸಂಶೋಧನೆಯು ಕಾರ್ಯವು ನಡೆದೇ ಇದೆ. ಈಗ ಆರು ಬಗೆಯ ವ್ಹಿಟಾಮಿನ್ನಗಳು ಗೊತ್ತಾಗಿದ್ದು ಅವುಗಳ ನಿರ್ದಿಷ್ಟ ಕಾರ್ಯಕಲಾಪಗಳೂ ಗೊತ್ತಾಗಿವೆ. ಮತ್ತು ಅವುಗಳ ಸರಿಯಾದ ಉಪಯೋಗವೂ ನಮಗೆ ಗೊತ್ತಾಗಿದೆ. ಆದರೆ ಇನ್ನೂ ನಿರ್ದಿಷ್ಟ ಕಾರ್ಯಗಳು ಗೊತ್ತಾಗದಿರುವ ಎಷ್ಟೋ ಬಗೆಯ ವ್ಹಿಟಾಮಿನ್ನಗಳಿರುವವು. ಅವುಗಳ ಬಗ್ಗೆ ಶಾಸ್ತ್ರಜ್ಞರು ಇನ್ನೂ ಶೋಧನಡೆಯಿಸಿರುವರು.

ನಮ್ಮ ಆಹಾರದಲ್ಲಿ ವ್ಹಿಟಾಮಿನ್ನಗಳ ಅಭಾವದಿಂದ ಹಲವು ಬಗೆಯ ವ್ಯಾಧಿಗಳು ಹುಟ್ಟುವವು. ಶರೀರದ ಸವಕಳಿ ಕಾರ್ಯಶಕ್ತಿಯ ಹ್ರಾಸ ಕಾರ್ಯೋತ್ಸಾಹದ ಅಭಾವ ಇವಕ್ಕೆ ಕಾರಣವಾಗುವ, ಪ್ರಾಮುಖ್ಯವಾಗಿ ಶರೀರದ 'ಜರೆ' ಎಂದು ನಮ್ಮ ಆಯುರ್ವೇದ ಪಂಡಿತರು ಹೇಳುವ ಮಹಾವ್ಯಾಧಿಯೂ ಅದರ ಅನುಷಂಗಿಕ ವ್ಯಾಧಿಗಳೂ ಈ ವ್ಹಿಟಾಮಿನ್ನದ ತತ್ತ್ವ (Theory) ವನ್ನೇ ಅವಲಂಬಿಸಿರುವವು."

(ಮುಂದಿಸಾಗುವದು.)

ಅಂಗಸಾಧನೆಗಳನ್ನು ಕಲಿಸುವ ಪದ್ಧತಿಗಳು

ಲೇಖಕರು :— ಶ್ರೀ. ವ್ಹಿ. ಕೆ. ಜವಳಿ, ಬಿ. ಎ., ಬಿ. ಟಿ.

ಅಂಗಸಾಧನೆಗಳೆಂದರೆ ಕೃತ್ರಿಮ ಚಟುವಟಿಕೆಗಳು. ಅವು ದೇಹದ ಅಂಗಗಳಾದ ನಡ, ತಲೆ, ಕೈ ಮತ್ತು ಕಾಲುಗಳ ಪ್ರತ್ಯೇಕ ಚಲನಗಳಾಗಿರಬಹುದು; ಅಥವಾ ಲಾಠಿ, ಲೇಝೀಮು, ಬಡಿಗೆ, ನಿಶಾನಿ ಮೊದಲಾದ ಉಪಕರಣ ಸಹಿತ ಚಟುವಟಿಕೆಗಳಾಗಿರಬಹುದು. ಈ ಅಂಗಸಾಧನೆಗಳಿಂದ ಶರೀರದ ಬೇರೆ ಬೇರೆ ಸ್ನಾಯುಗಳು ಬಲಪಡುತ್ತವೆ.

ಅಂಗಸಾಧನೆಗಳನ್ನು ಕಲಿಸುವ ಪದ್ಧತಿಗಳು ಅನೇಕವಾಗಿರುವವು. ಅವುಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ಕೆಳಗೆ ವಿವರಿಸಿದೆ.

೧. ಆಜ್ಞಾಪದ್ಧತಿ—ಆಜ್ಞಾಪದ್ಧತಿಯಲ್ಲಿ ಪ್ರಕ್ರಿಯಾತ್ಮಕ ಹುಕುಮನ್ನು ಉಪಯೋಗಿಸುವದುಂಟು; ಎಂದರೆ ಒಂದು ಆಜ್ಞೆಯನ್ನು ಅಥವಾ ಹುಕುಮನ್ನು ಕೊಟ್ಟಕೂಡಲೇ ಅದಕ್ಕೆ ಪ್ರತಿಯಾಗಿ ಒಂದೇ ಒಂದು ಕ್ರಿಯೆಯು ನಡೆದು ಅದು ಅಲ್ಲಿಗೆ ಮುಗಿಯುತ್ತದೆ. ಮುಂದೆ ಬರುವ ಕ್ರಿಯೆಯ ಸ್ವರೂಪವಾಗಲಿ ವೇಳೆಯಾಗಲಿ ಬಾಲಕರಿಗೆ ಗೊತ್ತಿರುವದು ಅವಶ್ಯವಿಲ್ಲ. ಒಂದು ಸಾಧನೆಯಲ್ಲಿ ಭಾಗಗಳನ್ನು ಮಾಡಿ ಅವುಗಳನ್ನು ಪ್ರತ್ಯೇಕವಾಗಿ ಕಲಿಸುವಾಗ ಪ್ರತಿಕ್ರಿಯಾತ್ಮಕ ಹುಕುಮುಗಳನ್ನು ಉಪಯೋಗಿಸುತ್ತಾರೆ. ಹೊಸ ಸಾಧನೆಗಳನ್ನು ಕಲಿಸುವಾಗ ತಪ್ಪುಗಳನ್ನು ತಿದ್ದಿ ಸರಿಮಾಡುವಾಗ ಅಂಗದೋಷಗಳನ್ನು ತಿದ್ದುವಾಗ ಸ್ನಾಯುಗಳನ್ನು ಬಿಗಿಹಿಡಿಯಲಿಕ್ಕೆ ಕಲಿಸುವಾಗ ಒಂದೇ ಸ್ಥಿತಿಯಲ್ಲಿ ಬಹಳ ಹೊತ್ತಿನವರೆಗೆ ಇರಬೇಕಾದಾಗ ಆಜ್ಞಾಪದ್ಧತಿಯನ್ನು ಉಪಯೋಗಿಸಬೇಕು; ಏಕೆಂದರೆ ಒಂದೇ ಸ್ಥಿತಿಯಲ್ಲಿ ಅವಯವಗಳನ್ನು ಬಿಗಿಹಿಡಿಯುವದರಿಂದ ಅವುಗಳ ಮೇಲೆ ಒಳ್ಳೆಯ ಪರಿಣಾಮವಾಗುವದು.

ಆಜ್ಞಾಪದ್ಧತಿಯ ಪ್ರತಿಕ್ರಿಯಾತ್ಮಕ ಹುಕುಮುಗಳಲ್ಲಿ ಮೂರು ಭಾಗಗಳಿರುವವು. (ಅ) ವಿವರಣೆಯ ಭಾಗ (ಬ) ವಿರಾಮ ಭಾಗ (ಕ) ಕ್ರಿಯಾ ಭಾಗ.

೨. **ಕ್ರಮಿಕ ಪದ್ಧತಿ**— ಯಾವದಾದರೊಂದು ಅಂಗಸಾಧನೆಯನ್ನು ಅಥವಾ ಕವಾಯತನ್ನು ಒಮ್ಮೆ ಜೆನ್ನಾಗಿ ಕಲಿಸಿದನಂತರ ಅದನ್ನು ಕೆಲಹೊತ್ತು ಒಂದೇಸವನೆ ಮಾಡುವಾಗ ಕ್ರಮಿಕ ಪದ್ಧತಿಯನ್ನು ಉಪಯೋಗಿಸುತ್ತಾರೆ. ಆಗ ಒಂದು ತಾಳವನ್ನು ಹಿಡಿದು ಚಲನವನ್ನು ಮಾಡುವದಿರುತ್ತದೆ. ಇಂಥ ಕ್ರಿಯೆಗಳನ್ನು ಮಾಡಿಸುವಾಗ ಉಪಯೋಗಿಸುವ ಹುಕುಮುಗಳಿಗೆ ತಾಳಬದ್ಧ ಅಥವಾ ಕ್ರಮಿಕ ಹುಕುಮುಗಳು ಎಂದೆನ್ನುವರು. ಸ್ನಾಯುಗಳನ್ನು ಕ್ರಮದಿಂದ ಚಲಿಸುವದರಿಂದ ದೇಹದ ಮೇಲೆ ಒಳ್ಳೆಯ ಪರಿಣಾಮವಾಗುತ್ತದೆ. ತಾಳಬದ್ಧ ಹುಕುಮುಗಳನ್ನು ಅತಿ ಅವಸರದಿಂದಾಗಲೀ ಅಥವಾ ಅತಿ ಸಾವಕಾಶವಾಗಲಿ ಕೊಡಕೂಡದು. ತಾಳಬದ್ಧ ಅಥವಾ ಕ್ರಮಿಕ ಹುಕುಮುಗಳಲ್ಲಿ ಮುಂದೆ ಹೇಳಿದ ಭಾಗಗಳನ್ನು ಮಾಡಬಹುದು. (ಅ) ಆರಂಭ (ಆ) ವಿರಾಮ (ಇ) ಕ್ರಿಯೆ (ಈ) ಎಣಿಕೆ ಅಥವಾ ತಾಳ (ಉ) ಮತ್ತೊಂದುಬದಿಗೆ ಮಾಡುವದು (ಊ) ಅದಲು ಬದಲು ಮಾಡುವದು (ಎ) ಮುಗಿವು.

ಮೊದಲನೆಯ ೩ ಭಾಗಗಳು ಪ್ರತಿಕ್ರಿಯಾತ್ಮಕ ಹುಕುಮಿನಲ್ಲಿ ವಿವರಿಸಿದಂತೆ ಇರುವವು. ಬಹುಮಟ್ಟಿಗೆ ಕ್ರಮಿಕ ಹುಕುಮಿನ ಕಡೆಯ ಶಬ್ದವು (ಕ್ರಿಯಾಭಾಗವು) "**ಶುರು.**" ಎಂದು ಇರುತ್ತದೆ. ಮತ್ತು ಅದಾದನಂತರ ಅಂಕಿಗಳನ್ನು ಎಣಿಸಿ ಮುಗಿಸುವಾಗ ಸೀಟಿಯನ್ನಾಗಲೀ "ಮೌಕೂಫ" ಎಂಬ ಪದವನ್ನಾಗಲೀ ಉಪಯೋಗಿಸುವದುಂಟು. ಶರೀರದ ಮತ್ತು ಆರೋಗ್ಯದ ಬೆಳವಣಿಗೆಯ ದೃಷ್ಟಿಯಿಂದ ಈ ಪದ್ಧತಿಯನ್ನು ಉಪಯೋಗಿಸುವದು ಒಳಿತು. ಒಂದು ಹೊಸಸಾಧನೆಯನ್ನು ಸಂಪೂರ್ಣ ಕಲಿತನಂತರ ಅದನ್ನು ತಾಳಕ್ಕೆ ಅನುಸಾರವಾಗಿ ಮಾಡಬೇಕು. ತಾಳವನ್ನು ಅಥವಾ ಸಮಾಂತರದ ವೇಳೆಯನ್ನು ಸೂಚಿಸಲಿಕ್ಕೆ ಒಂದೇಸವನೆ ಅಂಕಿಗಳನ್ನು ಎಣಿಸುವದುಂಟು. ಆಗ ಶಿಕ್ಷಕನು ಈ ಹುಕುಮನ್ನು ಕೊಡಬೇಕು- "ಕ್ರಮಶಃ ಅಥವಾ ಏಕ್‌ಸಾಥ್ ಶುರು." ಆ ಮೇಲೆ ಅಂಕಿಗಳನ್ನು ಎಣಿಸುತ್ತ ಕಡೆಯವರೆಡು ಎಣಿಕೆಯ ಬದಲು ಮೌಕೂಫ್, ಹುಕುಮನ್ನು ಕೊಡುವದು. ಅಂಕೆಗಳನ್ನು ಎಣಿಸುವರೀತಿ :— ೧-೨-೩-೪-೫-೬-೭-೮,-೮-೭-೬-೫-೪-೩. — —

೩. **ನಿದರ್ಶನ ಪದ್ಧತಿ**— ಶಿಕ್ಷಕನು ತಾನು ಕಲಿಸಬೇಕಾದ ಪ್ರತಿಯೊಂದು ಚಲನವನ್ನು ಅಥವಾ ಸ್ಥಿತಿಯನ್ನು ಮೊದಲು ಸ್ವತಃ ಮಾಡಿ ತೋರಿಸುವನು. ಆಗ ಹುಡುಗರು "ಕದಮ್‌ಖೋಲ್" (ಸ್ವಸ್ಥ) ಸ್ಥಿತಿಯಲ್ಲಿ ನಿಲ್ಲುವರು. ಪ್ರತಿಯೊಂದು ಎಣಿಕೆಯ ಪ್ರಕಾರ ಶಿಕ್ಷಕನು ಕ್ರಿಯೆಯನ್ನು ಮಾಡುವಾಗ ವಿದ್ಯಾರ್ಥಿಗಳು ಕೇವಲ ಅದನ್ನು ನೋಡಿ ತಿಳಿದುಕೊಳ್ಳುವರು. ಶಿಕ್ಷಕನು ತನಗೆ ತಾನೆ ಹುಕುಮುಗಳನ್ನು ಕೊಡುತ್ತ ಕವಾಯತವನ್ನು ಒಮ್ಮೆ ತಾನೇ ಮಾಡಿ ತೋರಿಸಬೇಕು. ಎಷ್ಟೋ ಶಿಕ್ಷಕರು ಆಜ್ಞೆಯ ಕ್ರಿಯಾ ಭಾಗವನ್ನೂ ಚಲನವನ್ನೂ ಕೂಡಿಯೇ ಮಾಡುವರು; ಇದು ತಪ್ಪು. ನಿದರ್ಶನವು ಮುಗಿದ ನಂತರ ಶಿಕ್ಷಕನು ಕ್ರಮಶಃ ಹುಕುಮಿನ ಪ್ರಕಾರ ಹುಡುಗರಿಂದ ಆ ಕ್ರಿಯೆಯನ್ನು ಮಾಡಿಸಬಹುದು.

೪. **ವರ್ಣನಾ ಪದ್ಧತಿ**:— ಇಲ್ಲಿ ಹುಡುಗರು ಮಾಡಬೇಕಾದ ಚಲನಗಳನ್ನು ಶಿಕ್ಷಕನು ಕೇವಲ ಶಬ್ದಗಳಿಂದ ವರ್ಣಿಸುವನು. ವರ್ಣಿಸುವಾಗ ಹುಡುಗರು ಸ್ವಚ್ಛ ("ಕದಮ್-ಖೋಲ್") ಸ್ಥಿತಿಯಲ್ಲಿ ನಿಲ್ಲುವರು. ಅತಿಸುಲಭವಾದ ಸಾಧನೆಗಳನ್ನು ಮಾಡಿಸುವಾಗ ವಿದ್ಯಾರ್ಥಿಗಳು "ಹೋಶ್-ಯಾರ್" ಸ್ಥಿತಿಯಲ್ಲಿ ನಿಲ್ಲಬಹುದು. ಚಲನಗಳ ಮುಖ್ಯ ಸಂಗತಿಗಳನ್ನು ಸಂಕ್ಷಿಪ್ತದಲ್ಲಿ ಹೇಳಬೇಕು. ಮೊದಲು ಕಲಿತ ಭಾಗವನ್ನು ಆಧಾರವಾಗಿಟ್ಟುಕೊಳ್ಳಬೇಕು. ಕೆಲವು ಶಿಕ್ಷಕರು ಅನವಶ್ಯಕ ಬಹಳ ಮಾತಾಡುವದು

ಇದು ಬೇಜಾರನ್ನುಂಟುಮಾಡುತ್ತದೆ. ವರ್ಣನಾಪದ್ಧತಿಯು ಅಷ್ಟೊಂದು ಫಲಕಾರಿಯಲ್ಲ; ಏಕೆಂದರೆ ಹುಡುಗರು ಕೇಳಿ ಕಲಿಯುವದಕ್ಕಿಂತ ನೋಡಿ ಕಲಿಯುವದೇ ಹೆಚ್ಚು.

೫. ಅನುಕರಣ ಪದ್ಧತಿ:— ಶಿಕ್ಷಕನು ಮಾಡಿದಹಾಗೆ ಅವನ ಸಂಗಡ ವರ್ಗದ ಹುಡುಗರೆಲ್ಲರೂ ಮಾಡುವರು. ವಿದ್ಯಾರ್ಥಿಗಳು ಮೊದಲೇ ಕಲಿತ ಹಲವು ಅಂಗಸಾಧನೆಗಳನ್ನು ಕೂಡಿಸಿ ಒಂದರಹಿಂದೆ ಮತ್ತೊಂದನ್ನು ಮಾಡುತ್ತ ಹೋಗುವಾಗ ಈ ಪದ್ಧತಿಯೆನ್ನು ಅನುಸರಿಸುವದುಂಟು. ಸಾಧನೆಯನ್ನು ಬದಲಿಸುವಾಗ ಶಿಕ್ಷಕನು ಆದರ ಹೆಸರಿನಿಂದಾಗಲಿ ಅಥವಾ " ಹಾಥ್-ಬದಲ್ " ಎಂಬ ಹುಕುಮಿನಿಂದಾಗಲಿ ಸೂಚಿಸುವನು. ಶಿಕ್ಷಕನು ಅಂಕಿಗಳನ್ನು ಎಣಿಸಬಹುದು, ಅಥವಾ ಬಿಡಬಹುದು. ಸಂಗೀತದೊಡನೆ ಕವಾಯತೆ ಮಾಡುವಾಗ ಅನುಕರಣ ಪದ್ಧತಿಯನ್ನೇ ಉಪಯೋಗಿಸುವದು ಉತ್ತಮ.

೬. ನಟನಾ ಪದ್ಧತಿ:— ಸ್ವಾಭಾವಿಕ ಚಟುವಟಿಕೆಗಳಿಗೆ ಸಂಬಂಧಪಟ್ಟ ಜಲನಗಳನ್ನು ಕಲಿಸುವಾಗ ಈ ಪದ್ಧತಿಯನ್ನು ಉಪಯೋಗಿಸುವದುಂಟು. ಆನೆ-ಹುಲಿ-ಕುದುರೆ ಮೊದಲಾದ ಪ್ರಾಣಿಗಳ, ಹದ್ದು-ಗರುಡ ಮೊದಲಾದ ಹಕ್ಕಿಗಳ, ಉಗಿಬಂಡಿ, ವಿಮಾನ ಮೊದಲಾದ ವಾಹನಗಳ, ಕುಂಬಾರ ಅಗಸ ಮೊದಲಾದವರ ಉದ್ಯೋಗಗಳ ಜಲನಗಳನ್ನು ಅನುಕರಿಸುವಾಗ ಶಿಕ್ಷಕನು ನಿಯತ ಹುಕುಮುಗಳನ್ನು ಉಪಯೋಗಿಸದೆ ಏಕರೂಪತೆಯು ಸಲುವಾಗಿ ಒಮ್ಮೊಮ್ಮೆ ಅಂಕಿಗಳನ್ನು ಎಣಿಸಬಹುದು. ಕೆಳಗಿನ ವರ್ಗಗಳ ಚಿಕ್ಕಮಕ್ಕಳಿಗೆ ಅನಿಯಮಿತ ಚಟುವಟಿಕೆಗಳನ್ನು ಕಲಿಸುವಾಗ ನಟನಾಪದ್ಧತಿಯನ್ನು ಅನುಸರಿಸುವುದುತ್ತಮ.

೭. ಸ್ವೇಚ್ಛಾ ಪದ್ಧತಿ:— ಒಂದು ಸಾಧನೆಯನ್ನು ಶಿಕ್ಷಕನು ತಾನು ಮಾಡಿ ತೋರಿಸಿದ ಅಥವಾ ವರ್ಣಿಸಿದ ನಂತರ ಅದನ್ನು ಕಲಿಯಲಿಕ್ಕೆ ಹುಡುಗರನ್ನು ಕೆಲಹೊತ್ತು ಬಿಟ್ಟು ಬಿಡುವನು. ಆಗ ಅವರು ತಮಗೆ ಬೇಕಾದಷ್ಟು ಸಾರೆ ವೈಯಕ್ತಿಕವಾಗಿ ತಾಳಕ್ಕೆ ಅನುಸರಿಸಿ ಒಬ್ಬರನ್ನೊಬ್ಬರು ವಿಚಾರಿಸಿಕೊಳ್ಳುತ್ತ ಆ ಸಾಧನೆಯನ್ನು ರೂಢಿಮಾಡಿಕೊಳ್ಳುವರು.

೮. ಮಿಶ್ರಪದ್ಧತಿ:— ಒಂದೊಂದು ಪ್ರಸಂಗದಲ್ಲಿ ಮೇಲೆ ವಿವರಿಸಿದ ಒಂದೊಂದು ಪದ್ಧತಿಯು ಹೆಚ್ಚು ಫಲದಾಯಕವಾಗುವದು. ಆದರೆ ಅನೇಕಸಾರೆ ಎರಡು ಮೂರು ಪದ್ಧತಿಗಳನ್ನು ಕೂಡಿಸುವದರಿಂದ ಒಳ್ಳೆಯ ಪರಿಣಾಮವು ಆಗುವುದು. ಒಂದು ಸಾಧನೆಯನ್ನು ಪ್ರದರ್ಶಿಸುವಾಗ ಸಮಯೋಚಿತವಾಗಿ ಅದನ್ನು ಸಂಕ್ಷಿಪ್ತದಲ್ಲಿ ವರ್ಣಿಸುವುದು ಒಳಿತು. ಬಹುಜನರು ಸಾಮಾನ್ಯವಾಗಿ ಈ ಮಿಶ್ರಪದ್ಧತಿಯನ್ನೇ ಹೆಚ್ಚಾಗಿ ಉಪಯೋಗಿಸುವರು. ಯಾವ ಸಂದರ್ಭದಲ್ಲಿ ಯಾವ ಪದ್ಧತಿಗಳನ್ನು ಉಪಯೋಗಿಸಬೇಕೆಂಬುದು ಸಂಶೋಧಕ ಬುದ್ಧಿಯುಳ್ಳ ಶಿಕ್ಷಕನಿಗೆ ತನ್ನಿಂದ ತಾನೆ ಹೊಳೆಯುವದು.

ಹೊಸ ಅಂಗಸಾಧನೆಗಳನ್ನು ಕಲಿಸುವಾಗ ಶಿಕ್ಷಕನು ಅನುಸರಿಸಬೇಕಾದ ಮುಖ್ಯ ಮೂರು ಮೆಟ್ಟುಗಳು :—

ಮೆಟ್ಟು ೧. ನಿದರ್ಶನ— ಹುಡುಗರಿಗೆ ಸಾಧನೆಯ ಕಲ್ಪನೆಯನ್ನೂ ಮಾನಸಿಕ ಚಿತ್ರವನ್ನೂ ತಂದುಕೊಡುವದು.

ಮೆಟ್ಟು ೨. ರೂಢಿ— ಸರಿಯಾದ ಜಲನಗಳನ್ನೂ ಪದ್ಧತಿಗಳನ್ನೂ ತಿಳಿದುಕೊಳ್ಳಲಿಕ್ಕಂದು ಪ್ರತಿಕ್ರಿಯಾತ್ಮಕ ಆಜ್ಞೆಗಳನ್ನು ಕೊಟ್ಟು ಅಂಗಸಾಧನೆಯು ರೂಢಿಯನ್ನು ಮಾಡಿಸುವದು; ಮತ್ತು ತಪ್ಪು ತಿದ್ದುವದು.

ಮೆಟ್ಟು ೩. ಪುನರಾವೃತ್ತಿ— ದೃಢೀಕರಿಸಲಿಕ್ಕೆಂದು ಅಂಗಸಾಧನೆಯನ್ನು ಒಂದೇ ಲಯ ಮತ್ತು ತಾಳಕ್ಕೆ ಅನುಸಾರವಾಗಿ ಕ್ರಮಶಃ ಮತ್ತೆ ಮತ್ತೆ ಮಾಡುವದು.

ಪತ್ರಗಳ ಮುಖ್ಯಾಂಶಗಳು

ಬೆಳಗಾಲ ಪೇಟೆ— (ಹಾನಗಲ್ಲ ತಾಲೂಕು) ಮೆ. ಕಲೇಕ್ಟರ ಸಾಹೇಬರವರ ಹಸ್ತದಿಂದ ೩-೬-೪೪ನೆಯ ದಿವಸ ಹೊಸ ಕಟ್ಟಡದ ಉದ್ಘಾಟನ ಸಮಾರಂಭವು ನೆರವೇರಿತು.

—ಶ್ರೀ. ಬ. ಗು. ಅಲದಕಟ್ಟಿ ಅ. ಮಾಸ್ತರ.

ಮರೋಳ— (ಹುನಗುಂದ ತಾಲೂಕು) ಶಾಲೆಯಲ್ಲಿ ಈ ಭಾಗದ ಶಿ. ಶಿ. ಸಮ್ಮೇಲನವು ೧೦-೬-೧೯೪೦ನೆಯ ದಿವಸ ಸುವ್ಯವಸ್ಥಿತವಾಗಿ ಸಾಗಿತು.

—ಶ್ರೀ. ರ. ರಾ. ಕೋಡಿಹಾಳ.

ಹಿರಿಯೆಬಾಗೇವಾಡಿ— (ಬೆಳಗಾವಿ) ಶಾಲೆಯು ಈ ವರ್ಷದ ಪ್ರಾ. ಶಾ. ಪ್ರ. ಪತ್ರ ಪರೀಕ್ಷೆಗೆ ಕುಳಿತ ೨೧ ವಿ. ಗಳಲ್ಲಿ ೧೫ ವಿ. ಗಳು ತೇರ್ಗಡೆ ಹೊಂದಿದರು.

—ಶ್ರೀ. ರಾ. ಬ. ಪಾಟೀಲ

ಮುಮುದಾಪುರ— (ಗೋಕಾಕ) ಶಾಲೆಯಲ್ಲಿ ೨೭-೬-೧೯೪೪ನೆಯ ದಿವಸ ಶ್ರೀ. ಗೊಳಸಂಗಿ ಅವರ ಹಿರಿಯತನದಲ್ಲಿ ಸಭೆಯಾಗಿ ಪ್ರಾ. ಶಾ. ಪ್ರ. ಪ. ಯಲ್ಲಿ ಉತ್ತೀರ್ಣರಾದವರಿಗೆ ೧೦ ರೂ. ಮೆಚ್ಚುಗೆ ಕೊಡಲಾಯಿತು. —ಶ್ರೀ. ವಾ. ಗು. ಹುದ್ದಾರ

ಬಬಲೇಶ್ವರ— ದಲ್ಲಿ ೨೨-೬-೧೯೪೪ನೆಯ ದಿನಸ ಪಾಲಕರ ದಿನವನ್ನು ಮಾಡಿದಾಗ ಶಾಲೆಯ ಉನ್ನತಿಗಾಗಿ ಊರವರು ೪೫ ರೂ. ಕೊಟ್ಟರು. — ಶ್ರೀ. ವೀ. ಸ. ಬಿರಾದರ.

ಕೋಳಿ— (ಚಿಕ್ಕೋಡಿ) ಶಾಲೆಯ ಬಡ ಹುಡುಗರಿಗಾಗಿ ಶ್ರೀ. ಕೊನಾಯಿ ಜಿನ್ನಪ್ಪನವರು ಪ್ರಯತ್ನ ಮಾಡಿ ೧೫ ರೂ. ೮ ಆ ಗಳ ಪಾಟಿಪುಸ್ತಕಗಳನ್ನು ತರಿಸಿಕೊಟ್ಟರು.

—ಶ್ರೀ. ಪಾ. ಮ. ಕುಲಕರ್ಣಿ

ಬೆಳವಡಿ— (ಬೈಲಹೊಂಗಲ) ಶಾಲೆಯಲ್ಲಿ ಪ್ರಾ. ಶಾ. ಪ್ರ. ಪ. ವರ್ಗವನ್ನು ಕಲಿಸುವ ಶಿಕ್ಷಕರಾದ ಶ್ರೀ. ಸಂ. ಕೂ. ಖೋದಾನಪುರ ಅವರಿಗೆ ಬಂಗಾರದ ಉಂಗುರವನ್ನೂ ವಿದ್ಯಾರ್ಥಿಗಳಿಗೆ ೪ ಬೆಳ್ಳಿಯ ಕಪ್ಪುಗಳನ್ನೂ ಊರ ಹಿರಿಯರು ಕೊಟ್ಟು ಹರಿಸಿದರು.

—ಶ್ರೀ. ಗು. ನಿಶಾನಿ ಹೆ. ಮಾ.

ಬೆಳಗಾವಿಯು— ಸರದಾರ ಹೈಸ್ಕೂಲದ ಅಧ್ಯಾಪಕರಾದ ಶ್ರೀ. ಪಂಡಿತಹುಲಿಕವಿ ಅವರು ಮ್ಯಾಟ್ರಿಕ್, ಎಸ್. ಟಿ. ಸಿ. ಆಗಿರುವರಲ್ಲದೆ ಈಗ ೫೦ ನೆಯ ವಯಸ್ಸಿನಲ್ಲಿ ಕಾಲೇಜವನ್ನು ಸೇರದೆ ಪರೀಕ್ಷೆಯ ಮಟ್ಟಿಗೆ ರಜೆ ತಕ್ಕೊಂಡು ಆಜಮಿಾರ ಬೋರ್ಡಿನ ಇಂಟರ ಮಿಜಿಯೇಟ ಪರೀಕ್ಷೆಯಲ್ಲಿ ಮರಾಠಿ ವಿಷಯ ತಕ್ಕೊಂಡು ಪಾಸಾದರು. ಈ ಸಾಹಸವು ಕನ್ನಡ ಶಿಕ್ಷಕವರ್ಗಕ್ಕೆ ಭೂಷಣಾಸ್ಪದವು.

—ಶ್ರೀ. ಕೆ. ಎನ್. ದೇಶಪಾಂಡೆ ಹೆ. ಮಾ. ಬೆಲ್ಲದ ಬಾಗೇವಾಡಿ.

ಮುದ್ದೇಬಿಹಾಳ— ಶಾಲೆಯು ಹೆ. ಮಾ. ಶ್ರೀ. ಎಚ್ ಎಫ್. ಅತ್ತಾರ ಅವರಿಗೆ ಸಿಂದಿಗೆಗೆ ವರ್ಗವಾದುದರಿಂದ ಬೀಳ್ಕೊಡುವ ಸಮಾರಂಭವು ೩೦-೭-೪೪ನೆಯ ದಿವಸ ಮಾಮಲೇದಾರರ ಹಿರಿಯತನದಲ್ಲಿ ಆಯಿತು. —ಶ್ರೀ. ಎಮ್ ಡಿ. ಐ.

ಗಳತಗಿ— (ಚಿಕ್ಕೋಡಿ) ಶಾಲೆಯಲ್ಲಿ ಊರ ಹಿರಿಯರು ಕೊಟ್ಟ ೧೭ ರೂ. ಗಳನ್ನು ೩೨ ವಿದ್ಯಾರ್ಥಿಗಳಲ್ಲಿ ಹಂಚಲಾಯಿತು. —ಶ್ರೀ. ಶಿ. ಹಾ. ಬುರ್ಗೆ

ಉಗಾರ— (ಅಥಣಿ) ಶಾಲೆಯಲ್ಲಿ ಸರಸ್ವತೀ ಪೂಜಾಸಮಾರಂಭದ ಕಾಲದಲ್ಲಿ ಹಿರಿಯರು ಏಕಾಂಕ ನಾಟಕ ನೋಡಿ ೨ ರೂ. ಮೆಚ್ಚು ಕೊಟ್ಟರು.

—ಶ್ರೀ. ಮಿರ್ಜಿ ಅಣ್ಣಾರಾಯರು.

ಧಾರವಾಡ— ಮ್ಯು. ಸ್ಕೂ. ಜೋ. ಎಡ್‌ಮಿನಿಸ್ಟ್ರೇಟಿವ್ಹ ಆಫೀಸರರಾದ ಶ್ರೀಯುತ ಬಿ. ಎಸ್. ತಿಂತ್ರಿ ಅವರು ಜೇಅರಮನ್ನರಾದ ಶ್ರೀ. ಮುಂಕಣಿ ಅವರ ಹಿರಿಯತನದಲ್ಲಿ ಏಳನೆಯ ಇಯತ್ತ್ತಿಗೆ ಭೂಗೋಲದ ಮಾದರಿಯ ಪಾಠವನ್ನು ಕಲಿಸಿ ತೋರಿಸಿದರು. ಅದು ಪ್ರೇಕ್ಷಣೀಯವೂ ಚಿತ್ತಾಕರ್ಷಕವೂ ಆಗಿದ್ದಿತು. —ಶ್ರೀ. ನಾ. ಳ. ಧಾರವಾಡಕರ

ಇಂಗಳಗಿ— (ಬಂಕಾಪುರ) ಶಾಲೆಯಲ್ಲಿ ೫ ದಿವಸ ಗಜಾನನೋತ್ಸವವು ವಿಜೃಂಭಣೆಯಿಂದ ನಡೆಯಿತು. —ಶ್ರೀ. ಎ. ಎ. ಬೆನಕನಹಳ್ಳಿ ಪಿ. ಪಾ.

ಹೆರೂರು— (ಹುನಗುಂದ) ಶಾಲೆಯಲ್ಲಿ ೩೧-೭-೪ಳನೆಯ ದಿವಸ ಈ ಭಾಗದ ೨. ಶಿ. ಸಮ್ಮೇಲನವು ಶ್ರೀ. ಜೇರೆ ಅವರ ಹಿರಿಯತನದಲ್ಲಿ ಶಾಂತರೀತಿಯಿಂದ ಸಾಗಿತು.
—ಶ್ರೀ, ವೆಂಕಟರಾವ ದೇಸಾಯಿ

ಐಗಳಿ— (ಅಥಣಿ) ಶಾಲೆಯಲ್ಲಿ ಗಜಾನನ ಕ್ಲಬ್, ನಿರ್ಮಿತವಾಗಿದ್ದು ಒಕ್ಕಲತನದ ೀಕ್ಷಣ ಎಂಬ ನಾಟಕವನ್ನು ವಿದ್ಯಾರ್ಥಿಗಳು ಅಭಿನಯಿಸಿದಾಗ ಊರವರು ೧೦ ರೂಪಾಯಿಗಳನ್ನೂ ೩ ಬೆಳ್ಳಿಯ ಪದಕಗಳನ್ನೂ ಮೆಚ್ಚಿಗೆಯಾಗಿ ಕೊಟ್ಟರು.
—ಶ್ರೀ. ಕೆ. ಎಸ್. ಪಾಟೀಲ ಐಗಳಿ

ಕಾರವಾರ— ೧ನೆಯ ನಂಬರ ಶಾಲೆಯ ಮೂವರು ವಿದ್ಯಾರ್ಥಿಗಳಿಗೆ ಈ ವರ್ಷ ಸ್ಕಾಲರಶಿಪ್ ಸಿಕ್ಕಿತು. ಶ್ರೀ. ಪವಾರ ಮಾಸ್ತರರಿಗೆ ಇದರ ಶ್ರೇಯಸ್ಸು ಸಲ್ಲುವದು.
—ಶ್ರೀ. ಶೇಖ ಉಮರ ಅಬ್ದುಲ್ ಲತೀಫ ಮ್ಯು. ಸ್ಕೂ. ಕ. ನಂಬರ

ಸಾಭಾರ-ಸ್ವೀಕಾರ

೧. **ಭೂಮಿಯು ಬಾಳಿನ ಕತೆಗಳು**— ಬರೆದವರು—ಶ್ರೀ. ಫ. ತೋ. ಕಲ್ಯಾಣಶಟ್ಟಿ; ಪ್ರಕಾಶಕರು— ರಾಮಾಶ್ರಯ ಬುಕ್‌ಡಿಪೊ ಧಾರವಾಡ. ಕ್ರೌ. ಆಕಾರ ೬೪ ಪುಟಗಳು. ಲೆ ೮ ಆಣೆ. ಹೊಸ ಅಭ್ಯಾಸಪತ್ರಿಕೆಯನ್ನು ಅನುಸರಿಸಿ ಮೂರನೆಯ ಇಯತ್ತ್ತೆಯ ವಿದ್ಯಾರ್ಥಿಗಳು ತಿಳಿಯಬೇಕಾದ ಇತಿಹಾಸ ವಿಷಯದ ಪುಸ್ತಕವಿದು. ಶಿಕ್ಷಕರೂ ವಿದ್ಯಾರ್ಥಿಗಳೂ ಇದರ ಲಾಭವನ್ನು ಪಡೆಯಬಹುದು.

೨. **ರಸಾಯನಶಾಸ್ತ್ರ ಪ್ರವೇಶ**:—ಬರೆದವರು ಹಾಗು ಪ್ರಕಾಶಕರು ಶ್ರೀ. ಲ. ಗೋ. ಕೊಪ್ಪರ M. Sc; B. T; D. P. E. ಸರದಾರ ಹೈಸ್ಕೂಲ ಬೆಳಗಾವಿ, ೧ನೆಯ ಆವೃತ್ತಿ ರೈನ್ ೧೯೩ ಪುಟಗಳು ಬೆಲೆ ೨ ರೂ.

ಈ ಪುಸ್ತಕವನ್ನು ಮ್ಯಾಟ್ರಿಕ್ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವೆಂದು ಬರೆದಿದ್ದಾರೆ. ಅವಶ್ಯವಿದ್ದ ಎಲ್ಲ ವಿಷಯಗಳನ್ನು ನೂರಾರು ಚಿತ್ರಗಳೊಡನೆ ಅಚ್ಚುಕಟ್ಟಾಗಿ ನಸೆಚ್ಚುವಂತೆ ಒಳ್ಳೆಯ ಕಾಗದದ ಮೇಲೆ ಚೆನ್ನಾಗಿ ಮುದ್ರಿಸಿದ್ದಾರೆ. ಇದರಿಂದ ಮ್ಯಾಟ್ರಿಕ್ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಶಾಸ್ತ್ರೀಯ ವಿಷಯವನ್ನು ಕಲಿಯುವದಕ್ಕೆ ತುಂಬ ಅನುಕೂಲವಾಯಿತು. ಉತ್ತರ ಕನ್ನಡ ನಾಡಿನಲ್ಲಿ ಇಂತಹ ಪುಸ್ತಕದ ಅಗತ್ಯವು ಇತ್ತು. ಅದನ್ನು ಸಕಾಲದಲ್ಲಿ ಶ್ರೀ. ಕೊಪ್ಪರ ಅವರು ಪೂರೈಸಿದರು. ಮ್ಯಾಟ್ರಿಕ್ ಪರೀಕ್ಷೆಯ ವಿದ್ಯಾರ್ಥಿಗಳೂ ನಮ್ಮ ಪ್ರಾಥಮಿಕ ಶಾಲಾ ಶಿಕ್ಷಕರೂ ಈ ಪುಸ್ತಕವನ್ನು ಅವಶ್ಯವಾಗಿ ಉಪಯೋಗಿಸಿಕೊಳ್ಳಬೇಕೆಂದು ಬಯಸುತ್ತೇವೆ.

ಗಂಟು ಕಳೆದುಕೊಂಡ ಹೀರಾಸಿಂಗ

(ಸಾಕ್ಷರರಿಗಳಾದ ಪ್ರಬುದ್ಧರಿಗಾಗಿ)

ಹೀರಾಸಿಂಗನೆಂಬ ಒಬ್ಬ ಮಾರವಾಡಿಯು ಒಮ್ಮೆ ಒಂದು ಗಂಟು ಕಳೆದುಕೊಂಡನು. ಅದರಲ್ಲಿ ಎರಡುನೂರು ರೂಪಾಯಿಗಳಿದ್ದವು. ಹೀರಾಸಿಂಗನು ತಾನು ಗಂಟು ಕಳೆದುಕೊಂಡ ಸ್ಥಳ, ಕಾಲ ಮುಂತಾದ ವಿವರಗಳನ್ನು ತಿಳಿಸಿ ಅದು ಯಾರಿಗಾದರೂ ಸಿಕ್ಕಿದ್ದರೆ ತಿರುಗಿ ತಂದುಕೊಬೇಕೆಂದೂ ಹಾಗೆ ತಂದು ಕೊಡುವವರಿಗೆ ಒಂದುನೂರು ರೂಪಾಯಿ ಇನಾಮು ಕೊಡುವೆನೆಂದೂ ಪ್ರಕಟಿಸಿದನು.

ಹೀರಾಸಿಂಗನ ಗಂಟು ಒಬ್ಬ ಅಗಸನಿಗೆ ದೊರೆದಿತ್ತು. ಬಟ್ಟೆಗಳನ್ನು ಒಗೆಯುವದಕ್ಕೆ ನದಿಗೆ ಹೋದಾಗ ದಂಡೆಯ ಮೇಲಿನ ಗಿಡದ ಬುಡದ ಅವನಿಗೆ ಆ ಗಂಟು ಸಿಕ್ಕಿತ್ತು.

ಅಗಸನು ಸತ್ಯವಂತನು. ಪರರ ವಸ್ತು ಒಡವೆಗಳನ್ನು ಬಯಸದವನು ಹೀರಾಸಿಂಗನ ಪ್ರಕಟನೆಯು ಗೊತ್ತಾದ ಕೂಡಲೆ ಅಗಸನು ಅವನ ಬಳಿಗೆ ಹೋಗಿ ತನಗೆ ಗಂಟು ಸಿಕ್ಕಿರುವದೆಂದೂ ಅವನು ಕೊಡಲೊಪ್ಪಿ ಒಂದು ನೂರು ರೂಪಾಯಿಗಳನ್ನು ಕೊಟ್ಟರೆ ಆ ಗಂಟನ್ನು ತಂದು ಕೊಡುವೆನೆಂದೂ ಹೇಳಿದನು.

ಹೀರಾಸಿಂಗನ ಬಾಯಿಯಲ್ಲಿ ನೀರು ಬಿಟ್ಟಿತು. 'ಈ ಅಗಸನಿಗೆ ಒಮ್ಮೆ ಒಂದು ನೂರು ರೂಪಾಯಿಗಳನ್ನು ಕೊಡಬೇಕೇ? ಇವನು ಅಂಥದೇನು ಕಸರತ್ತು ಮಾಡಿದ್ದಾನೆ?' ಎಂದವನು ಆಲೋಚಿಸಿದನು. ಮತ್ತೆ 'ತಮ್ಮಾ, ಆ ಗಂಟು ತಂದಿರುವೆಯಾ? ಇಲ್ಲವಾದರೆ ಈಗಲೆ ಹೋಗಿ ತೆಗೆದುಕೊಂಡು ಬಾ' ಎಂದನು.

ಹೀರಾಸಿಂಗನ ಬಾಯಿಯಲ್ಲಿ ಇನಾಮಿನ ಸುದ್ದಿಯೇ ಬಾರದಿದ್ದುದನ್ನು ಕಂಡು ಅಗಸನಿಗೆ ಅನುಮಾನ ಹುಟ್ಟಿತು. ಅವನು "ತಾವು ಪ್ರಕಟಿಸಿದ ನನ್ನ ಇನಾಮಿನ ಸಮಾಚಾರವೇನು?" ಎಂದು ಕೇಳಿದನು. ಮಾರವಾಡಿಯು ತಿರುತಿರುಗಿ ತನ್ನ ಗಂಟಿನ ಸುದ್ದಿಯನ್ನಷ್ಟೇ ಹೇಳಿದನಲ್ಲದೆ ಇನಾಮಿನ ವಿಚಾರವನ್ನೇ ಹೇಳದಾದನು. ಅಗಸನು ಅಂತಹ ಧನಲೋಭ

ಯಾಗಿರದಿದ್ದರೂ ಮಾರವಾಡಿಯ ಮೊಂಡತನವನ್ನೂ ದುರಾಶೆಯನ್ನೂ ಅನೀತಿಯನ್ನೂ ತಾಳಲಾರದೆ ಮೊದಲು ತನ್ನ ಇನಾಮು ಕೊಟ್ಟರೆ ಮಾತ್ರ ಗಂಟು ತಂದುಕೊಡುವೆನೆಂದೂ ಇಲ್ಲವಾದರೆ ಇಲ್ಲವೆಂದೂ ಖಂಡಿತವಾಗಿ ಹೇಳಿದನು.

ಮಾರವಾಡಿಗೆ ಕೋಪಬಂದಿತು. ಅವನೊಂದು ಹೊಸ ಯುಕ್ತಿಯನ್ನು ಹೂಡಿದನು. ಅವನು 'ಸರಿ, ನಿನಗೆ ನನ್ನ ಗಂಟು ಸಿಕ್ಕಿರುವದಂತೂ ನಿಶ್ಚಯವೆಲ್ಲವೇ? ಆ ಮಾತಿಗೆ ಇವರೆಲ್ಲರೂ ಸಾಕ್ಷಿಯಾಗಿದ್ದಾರೆ. ನೀನು ಆ ಗಂಟನ್ನು ತಂದುಕೊಡು. ಅದರಲ್ಲಿ ೨೦೦ ರೂಪಾಯಿ ಮತ್ತು ಒಂದು ವಜ್ರದ ಹರಳಿನ ಉಂಗುರ ಇದ್ದವು. ನೀನು ಆ ಉಂಗುರವನ್ನೂ ೨೦೦ ರೂಪಾಯಿಗಳನ್ನೂ ತಂದು ಕೊಟ್ಟು ನಿನ್ನ ಇನಾಮಿನ ಒಂದು ನೂರು ರೂಪಾಯಿಗಳನ್ನು ತೆಗೆದುಕೊಂಡು ಹೋಗಬೇಕು; ಇಲ್ಲವಾದರೆ ಚಾವಡಿಗೆ ಹೋಗಿ ನಿನ್ನ ಮೇಲೆ 'ಫಿರ್ಯಾದಿ' ಮಾಡುವೆನು, ಎಂದು ನುಡಿದು ಅವನನ್ನು ಬೆದರಿಸಿದನು.

ಅಗಸನು ಬೆದರಲಿಲ್ಲ. 'ನಿನ್ನ ಗಂಟಿನಲ್ಲಿ ಎರಡು ನೂರು ರೂಪಾಯಿ ಇದ್ದವು. ಮೇಲೊಂದು ಕಪಡೆಯೂ ಇದ್ದಿಲ್ಲ. ಇನಾಮು ಕೊಡಲಾಗದೆಂದು ಈ ಠಕ್ಕುತನವನ್ನು ಹೂಡಿದೆಯಾ? ಇರಲಿ. ನೀನು ಫಿರ್ಯಾದಿ ಮಾಡು' ಎಂದು ನಿಷ್ಠುರವಾಗಿ ನುಡಿದು ತನ್ನ ಮನೆಗೆ ನಡೆದನು.

ಹೀರಾಸಿಂಗನಿಗೆ ಬೇರೆ ದಾರಿ ಉಳಿಯಲಿಲ್ಲ. ಅವನು ನ್ಯಾಯಾಧೀಶನ ಮುಂದೆ ಫಿರ್ಯಾದಿಮಾಡಿದನು.

ನ್ಯಾಯಾಧೀಶನು ಅಗಸನನ್ನು ಕರೆಯಿಸಿ ಎಲ್ಲ ಸಂಗತಿಗಳನ್ನು ಚೆನ್ನಾಗಿ ಕೇಳಿಕೊಂಡನು. ಅಗಸನ ಮಾತಿನಿಂದ ಅವನು ಸತ್ಯವಂತನಾಗಿ ಕಂಡುಬಂದನು. "ಯಾರೂ ಇಲ್ಲದಾಗ ಕೈಗೆ ಸಿಕ್ಕ ಗಂಟನ್ನು ಕೊಡಲೊಪ್ಪಿ ಇನಾಮು ಬೇಡುವ ಹವ್ಯಾಸಕ್ಕೆ ಏಕೆ ಬೀಳಬೇಕಿತ್ತು? ಇವನು ಮಳೆಯ ನೀರು ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡುವ ಹೆಡ್ಡನಾಗಿ ಮಾರವಾಡಿಯ ಠಕ್ಕುತನಕ್ಕೆ ಸಿಕ್ಕುಬಿದ್ದಿರುವನು" ಎಂದು ಮುಂತಾಗಿ ನ್ಯಾಯಾಧೀಶನು ಆಲೋಚಿಸುತ್ತಿರುವಾಗಲೇ ಮಾರವಾಡಿಯು ಹೇಳಿದನು:—

"ಜೀ, ಈತನು ತೀರ ಸುಳ್ಳನಿದ್ದಾನೆ. ನನ್ನ ವಜ್ರದ ಹರಳಿನ ಉಂಗುರವನ್ನು ನುಂಗಿದ್ದಲ್ಲದೆ ಮೇಲೆ ನೂರು ರೂಪಾಯಿ ಬೇಡುತಾನೆ."

ನ್ಯಾಯಾಧೀಶನು ಮಾರವಾಡಿಗೆ ಉಂಗುರದ ವಿವರಗಳನ್ನೂ ಅದನ್ನು ಯಾವಾಗ ಯಾವ ಪತ್ತಾರನಲ್ಲಿ ಮಾಡಿಸಿರುವೆ ಇವೇ ಮುಂತಾದ ಹಲವು ತೊಡಕಿನ ಪ್ರಶ್ನೆಗಳನ್ನೂ ಕೇಳಿದನು. ಹೀರಾಸಿಂಗನು ಪೆಚ್ಚಾದನು. ಅವನ ಮಾತುಗಳು ಒಂದಕ್ಕೊಂದು ವಿಸಂಗತವಾಗಿ ತೋರಿದವು. ನೆರೆದವರು ಮಾರವಾಡಿಯ ದುರಾಶೆಗೆ ಸಿಟ್ಟಿಗೆದ್ದರು. ಅಗಸನ ಹೆಡ್ಡತನಕ್ಕೆ ಮರುಗಿದರು; ಸತ್ಯಕ್ಕೆ ಮೆಚ್ಚಿದರು. ನ್ಯಾಯಾಧೀಶನಿಗೂ ಹಾಗೆಯೇ ಅನಿಸಿತು.

ಅವನು ಹೀರಾಸಿಂಗನಿಗೆ ಹೇಳಿದನು:—

"ಸಿಂಗಜೀ, ನೀವು ದೊಡ್ಡವರು. ಬಹುಶಃ ಸುಳ್ಳಾಡಲಿಕ್ಕಿಲ್ಲ. ನಿಮ್ಮ ಗಂಟೂ ದೊಡ್ಡದು; ಹೆಚ್ಚು ಬೆಲೆಯುಳ್ಳದ್ದು...."

"ಹೌದು, ಹೌದು; ನನ್ನ ಉಂಗುರದ ಬೆಲೆ ಏನಿಲ್ಲೆಂದರೂ ಐದು ನೂರು ರೂಪಾಯಿ ಆಗಬಹುದು." ಎಂದು ಹೀರಾಸಿಂಗನು ಉಬ್ಬಿನಿಂದ ನಡುವೆಯೇ ಮಾತಾಡಿದನು.

"ಸರಿ. ಈ ಬಡವನಾದ ಅಗಸನು ಮೋಸಹೋಗಿದ್ದಾನೆ. ಅವನಿಗೆ ನಿಮ್ಮ ಉಂಗುರವುಳ್ಳ ಗಂಟು ಸಿಕ್ಕಿಲ್ಲ. ಈ ಬರಿಯ ಎರಡು ನೂರು ರೂಪಾಯಿಗಳ ಗಂಟು ಬೇರೆ ಯಾತದೋ ಆಗಿರಬೇಕು."

ಮಾರವಾಡಿಯ ಮೋರೆ ಬಾಡಿತು. ಅವನು "ಜೀ...."

ನ್ಯಾಯಾಧೀಶನು ಮಾರವಾಡಿಗೆ ಮಾತಾಡಗೊಡಲಿಲ್ಲ. ಮತ್ತು ಅಗಸನೆನ್ನು ಕುರಿತು "ಈ ಬರಿಯ ಎರಡು ನೂರು ರೂಪಾಯಿಗಳ ಗಂಟು ಹೀರಾಸಿಂಗರದಲ್ಲ. ಅವರದೂ ತಪ್ಪು ತಿಳಿವಳಿಕೆಯಾಗಿದೆ. ನೀನು ಇನ್ನೂ ಮೂರು ವಾರಗಳ ವರೆಗೆ ದಾರೀ ನೋಡಬೇಕು. ಬರಿಯ ರೂಪಾಯಿಗಳ ಗಂಟು ಕಳೆದುಕೊಂಡವರು ಯಾರಾದರೂ ಬಂದರೆ ಅವರಿಗೆ ಅದನ್ನು ಕೊಡು; ಇಲ್ಲವಾದರೆ ನೀನೇ ಅದನ್ನು ಬಳಿಸಿಕೊಂಡು ಬಿಡು. ಮತ್ತೇನು ಮಾಡುವದು?" ಎಂದನು.

ನೆರೆದವರೆಲ್ಲರೂ 'ಸರಿ, ಸರಿ' ಎಂದರು. ಅಗಸನು 'ದೇವರು ದೊಡ್ಡವನು' ಎಂದು ನುಡಿದು ನ್ಯಾಯಾಧೀಶನನ್ನು ವಂದಿಸಿ ಮನೆಗೆ ಹೋದನು. ಮಾರವಾಡಿಯು ತನ್ನ ಹಂಚಿಕೆ ಸಾಧಿಸದೆ ಗಂಟು ಕಳೆದುಕೊಂಡು ಮತ್ತೊಂದು ದಾರಿಯಿಂದ ಹೊರಗೆ ಬಂದನು.

ಗಣಿತ ಶಿಕ್ಷಕ

೪೧೨ ಪುಟಗಳು ಬೆಲೆ ೧ ರೂ. ೩ ಆಣೆ ಪೋ-೬-೭ನೆಯ ತ. ಗಳಿಗಾಗಿ

೨-೩ ಕ್ಲಾಸುಗಳು ಒಬ್ಬ ಮಾಸ್ತರನ ಕಡೆಗೆ ಇರುವಂಥ ಶಾಲೆಗಳಲ್ಲಿ ಗಣಿತ ಶಿಕ್ಷಕವು ನಿಜವಾಗಿಯೇ ಗಣಿತ. ಶಿಕ್ಷಕನಾಗಿ ಸಹಾಯಕವಾಗಿಲ್ಲವೇ? ೧೦ವರ್ಷ ಅನುಭವ ತಕ್ಕೊಂಡವರಿಗೆ ಇದರ ಬಗ್ಗೆ ಹೆಚ್ಚಿಗೆ ವರ್ಣಿಸುವದು ಬೇಡ. ಇಷ್ಟರಲ್ಲಿಯೇ ಎಲ್ಲರ ಪ್ರೀತಿಗೆ ಪಾತ್ರವಾಗಿ ಅನೇಕಸಾರೆ ಮುದ್ರಣ ಹೊಂದಿದೆ. ಈಗಿನ ತುಟಾಗ್ರತೆಯ ಕಾಲದಲ್ಲಿ ವೆಚ್ಚಮಾಡಿದ ಹಣದಿಂದ ಬಹಳ ಲಾಭವಾಗಬೇಡವೇ?

ಕೊರತೆ ಇಲ್ಲ ಬೆಲೆ ಕಡಿಮೆ ವೆಚ್ಚವಿಲ್ಲದೆ ಸ್ವಾಮ್ಯಕೆ

ಪುಸ್ತಕಗಳು ಕರ್ನಾಟಕದ ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ದೊರೆಯುತ್ತವೆ. ದೊರೆಯುವದಿಲ್ಲೆಂದು ಅನಿಸಿದರೆ, ನಿಮಗೆ ಬೇಕಾಗುವಷ್ಟು ಪ್ರತಿಗಳ ಮೂಲಬೆಲೆಯನ್ನು ಮನಿಯಾರ್ಡರಿನಿಂದ ಕಳಿಸಿ ಪಾವತಿಗಳನ್ನು ಕಾಯ್ದಿರಿ. ಅವನ್ನು ತೆಗೆದುಕೊಂಡು ಯಾವ ವೆಚ್ಚವೂ ಇಲ್ಲದೆ ಪುಸ್ತಕ ಕೊಡುವಂತೆ ನಿಮ್ಮ ಸಮೀಪದ ಪುಸ್ತಕವ್ಯಾಪಾರಿಗಳಲ್ಲಿ ಇಲ್ಲವೆ ದೊಡ್ಡ ಶಾಲೆಗಳಲ್ಲಿ ವ್ಯವಸ್ಥೆ ಮಾಡಲಾಗುವದು. ಶಕ್ಯವಾದರೆ ನಿಮ್ಮ ಊರಿಗೇ ತಂದುಕೊಡಬಹುದು. ಹೆಚ್ಚಿನ ವಿವರಕ್ಕೆ ಬರೆಯಿರಿ.

ವಿಳಾಸ :— ಬ. ದು. ಹಿರೇಮಠ, ಮಾಸ್ತರ ವಿಜಾಪುರ.

ಹೊಸ ಪುಸ್ತಕಗಳಿಗೆ ತ್ವರೆಮಾಡಿರಿ! ಲಾಭಪಡೆಯಿರಿ!

ಹೊಸ ಪದ್ಧತಿಯ

(೧) ಹಿಂದೀ ಜಮಾಖರ್ಚು ಭಾಗ ೧

(ಮನೆಯ ಜಮಾಖರ್ಚು)

ಸರಕಾರದವರು ಈ ಪುಸ್ತಕವನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಿರುವರು. ಇದು ೫-೬ನೆಯ ಇಯತ್ತೆಯವರಿಗೂ ಹೆಣ್ಣು ಮಕ್ಕಳ ಮುಲ್ಕೀಪರೀಕ್ಷೆಗೂ ಉಪಯುಕ್ತವಿದೆ.

ಬೆಲೆ: ೮ ಆಣೆ

೨. ಆರಂಭದ ಜಮಾಖರ್ಚು: ೪ನೆಯ ಇಯತ್ತೆಯವರಿಗೆ ಉಪಯೋಗವಿದೆ. ಬೆಲೆ: ೩ ಆಣೆ

೩. ಅಂಗಸಾಧನ ಶಿಕ್ಷಕ: ಬೆಲೆ: ೪ ಆಣೆ

೪. ಗಣಿತಸಾರ ಸಂಗ್ರಹ: ಇದು ಈಗಿನ ಪರೀಕ್ಷೆಯ ಪದ್ಧತಿಯಂತಿರುವದರಿಂದ ಸ್ಕಾಲರ ಮತ್ತು ಮುಲ್ಕೀ ಪರೀಕ್ಷೆಯವರಿಗೆ ಉಪಯುಕ್ತವಿದೆ.

ಬೆಲೆ: ೪ ಆಣೆ

ಹೊಸ ಪದ್ಧತಿಯ

ಹಿಂದೀ ಜಮಾಖರ್ಚು ಭಾಗ ೨

(ವ್ಯಾಪಾರಿ ಜಮಾಖರ್ಚು)

ಇದರಲ್ಲಿ ಹುಂಡಿ, ಚೆಕ್ಕು, ಮನಿಯಾರ್ಡರ, ಬಡ್ತೀ ಆಕರಣೆ ಜಮಾಖರ್ಚಿನ ಇತರ ವಹಿಗಳು, ಯಾದಿಗಳ ನಮೂನೆಗಳು, ಪ್ರಶ್ನೆಗಳು ಪ್ರಶ್ನೆಕಾಗದಗಳು ಇರುವವಲ್ಲದೆ, ಒಕ್ಕಲತನ ಒಲವಿನ ಶಾಲೆಯ ವಿದ್ಯಾರ್ಥಿಗಳ ಸಲುವಾಗಿ ಬರೆದ ಜಮಾಖರ್ಚು ಅಂದರೆ ನೇಲಿ ಲೇಬರ ಶೀಟ, ವೀಕಲಿ ಮಸ್ಟರ ರೋಲ್, ಕಲ್ಟಿವೇಶನ್ ಶೀಟ ಮುಂತಾದವುಗಳ ಪತ್ರಿಕೆಗಳೂ ಕಬುಲಾಯತಿ, ಬಾಡಿಗೆಯ ಪತ್ರಗಳ ನಮೂನೆಗಳೂ ಇರುವದರಿಂದ ಇದು ೬ನೆಯ ಇಯತ್ತೆಯವರಿಗೂ, ಆಗ್ರಿಕಲ್ಚರಲ್ ಬಾಯಸ್ ಕ್ಲಾಸಿನವರಿಗೂ ಉಪಯುಕ್ತವಿದೆ. ಸ್ವಲ್ಪ ಪ್ರತಿಗಳಿರುವದರಿಂದ ನಮೂನೆಗಾಗಿ ಒಂದನ್ನಾದರೂ ಎಲ್ಲರೂ ತರಿಸಿಕೊಳ್ಳಿರಿ. ಬೆಲೆ: ೮ ಆಣೆ

ವಿಳಾಸ :— ರಾ. ಸಿ. ಸಜ್ಜನ, ಮಾಸ್ತರ ಜೋರಾಪುರ ಪೇಟೆ, ವಿಜಾಪುರ.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದು ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕು ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕವಿಾಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯುಮಿಸಿರುವರು. ಪ್ರತಿ-ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ-ಕೋಶಗಳನ್ನೂ ಪುಹತ್ಪದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು-ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.

ಅಕ್ಟೋಬರ–ನವೆಂಬರ–ಡಿಸೆಂಬರ ೧೯೪೪

(ಇದರಲ್ಲಿ ಕನ್ನಡ ಶಾಲಾಪತ್ರಿಕೆಯೂ ಶಿಕ್ಷಕಿಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹುಚ್ಚರಾವ ಭೀಮರಾವ ಉಮಡಿ, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ
೧.	ಕರ್ಮಯೋಗ	೧
೨.	ಮುಂಬಯಿ ಇಲಾಖೆಯಲ್ಲಿ ಶೈಕ್ಷಣಿಕ ಪ್ರಗತಿ	೨
೩.	ಶಿಕ್ಷಣದಲ್ಲಿ ಬುದ್ಧಿಮಾಪನದ ಸ್ಥಾನ	೪
೪.	ಕೆ. ಎ. ಬೋ. ಕ. ಶಾ. ಒನೆಯ ಹುಟ್ಟು ಹಬ್ಬದ ಆಧ್ಯಕ್ಷೀಯ ಭಾಷಣ	೬
೫.	ಶಿಕ್ಷಕನ ಬೈಬ	೯
೬.	ಶಿಕ್ಷಣವೂ ಆವರ ವ್ಯಾಪಕತೆಯೂ	೧೦
೭	ಹೆಣ್ಣುಮಕ್ಕಳ ಪಿ. ಎಸ್ ಸಿ. ಪರೀಕ್ಷೆಯ ಅನುಭವಗಳು (೧೯೪೪) ..	೧೪
೮.	ಫೆರ್ಲಿ ಮ್ಯೂರ ಪಾರಿತೋಷಿಕಗಳು	೧೪
೯.	ಆಹಾರ ಮೀಮಾಂಸೆ	೧೯
೧೦.	ಹೆಣ್ಣುಮಕ್ಕಳ ಪ್ರಾ. ಶಾ. ಪ್ರ. ಪ. ಪರೀಕ್ಷೆ ಮತ್ತು ಕಾರ್ಯಕ್ರಮ (೧೯೪೪)	೨೦
೧೧.	ಮಿಡಲ್ ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆ (೧೯೪೪)	೨೨
೧೨.	ಪತ್ರಗಳ ಮುಖ್ಯಾಂಶಗಳು	೨೪
೧೩.	ಕೊಲೆಗೆ ಕೊಲೆಯೇ ಪ್ರತೀಕಾರವೇ? (ಪ್ರಬುದ್ಧರಿಗಾಗಿ) ..	೨೭

ಸಂಪಾದಕರು ಹುಚ್ಚರಾವ ಭೀಮರಾವ ಉಮಡಿ ಇವರು ಧಾರವಾಡ ಜಿಲ್ಲೆಯ ಶಿರಸಂಗಿಯಲ್ಲಿ ಜನಿಸಿದರು. ಮುಂಬಯಿ ಇಲಾಖೆಯ ಶಿಕ್ಷಣ ಸೇವೆಯಲ್ಲಿ ಸೇರಿ ಹಲವು ವರ್ಷಗಳು ಕೆಲಸ ಮಾಡಿದರು. ಈಗ ಧಾರವಾಡದ ಶಿಕ್ಷಕರ ತರಬೇತಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದಾರೆ.

Printed by V. Y. Jathar at the Karnatak Printing Works, Dharwar and Published by H. B. Umadi, Esq. M. A., Principal Training College For-Men Dharwar, at his Office. 7003-44-7312.

ಪ್ರಿಲಿಮ್ಸರಿ ಪರೀಕ್ಷೆ ೧೯೪೫

ಧಾರವಾಡದ ಸರಕಾರಿ **ಗಂಡುಮಕ್ಕಳ** ಪ್ರಾಕ್ಟಿಸಿಂಗ್‌ಸ್ಕೂಲಿನ ಪ್ರಿಲಿಮ್ಸರಿಯ ಪರೀಕ್ಷೆಯು ತಾ. ೮-೨-೧೯೪೫ ಕ್ಕೆ ಆರಂಭವಾಗುವದು. ಎಲ್ಲ ವಿಷಯಗಳ ಪ್ರಶ್ನಪತ್ರಿಕೆಗಳ ಒಂದು ಸೆಟ್ಟಿಗೆ ಪೋಸ್ಟಿನ ವೆಚ್ಚಸಹಿತ ಬೆಲೆ ೮ ಆಣೆ. ಮುಂಗಡ ಹಣ ಕಳಿಸಿದವರಿಗಷ್ಟೇ ದೊರೆಯುವವು. ೫ ಕ್ಕಿಂತ ಹೆಚ್ಚು ಸೆಟ್ಟುಗಳನ್ನು ತರಿಸಿಕೊಳ್ಳುವವರಿಗೆ ರಜಿಸ್ಟರ ಪೋಸ್ಟಿನಿಂದ ೧೫-೨-೧೯೪೫ ರೊಳಗಾಗಿ ಕಳಿಸುವೆವು. ಇದರಿಂದ ನಮ್ಮಲ್ಲಿಯ ಕಾರ್ಯಕ್ರಮದಂತೆಯೆ ಪರೀಕ್ಷೆ ನಡಿಸಲು ಅನುಕೂಲವಾಗುವದು. ಉಪೇದುವಾರರ ಸಂಖ್ಯೆಯಷ್ಟೇ ಸೆಟ್ಟುಗಳನ್ನು ತಕ್ಕೊಳ್ಳುವದು ಉತ್ತಮ. ಒಂದೆರಡು ಸೆಟ್ಟುಗಳನ್ನು ಬೇಡಿದವರಿಗೆ ಪರೀಕ್ಷೆಯ ಕೊನೆಯ ದಿವಸ ಮುಟ್ಟುವಂತೆ ಕಳಿಸುವೆವು.

ಹೆಣ್ಣುಮಕ್ಕಳ ಪ್ರಿಲಿಮ್ಸರಿ ಪ್ರಶ್ನಪತ್ರಿಕೆ ಬೇಕಾದವರು ಒಂದು ಸೆಟ್ಟಿಗೆ ೮ ಆಣೆಯಂತೆ ಹಣ ಕಳಿಸಿದರೆ ಕೂಡಲೆ ಕಳಿಸುವೆವು. ಕೆಲವು ಸೆಟ್ಟುಗಳು ಮಾತ್ರ ಶಿಲಕು ಇವೆ.

ಮನಿಯಾರ್ಡರ ಕೂಪನದಲ್ಲಿ ಪೂರ್ಣ ವಿಳಾಸ ಹಾಗು ವಿವರಗಳನ್ನು ಬರೆಯಬೇಕು.

G. C. HIREMATH,
ಹೆಡ್‌ಮಾಸ್ತರ ಪ್ರಾ. ಸ್ಕೂ. ಟ್ರೇ. ಕಾ. ಫಾರ್‌ಮೆನ್. ಧಾರವಾಡ

ವಿನಂತಿ

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವದಕ್ಕಾಗಿ ಕಳುಹಿಸುವ ಲೇಖನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು. ಲೇಖನಗಳು ಮುಖ್ಯ ಮುದ್ದೆಗಳಿಗೆ ಅನುಸಾರವಾಗಿ ಸಂಕ್ಷೇಪವಾಗಿರಬೇಕು.

೨. ಈ **ತ್ರೈಮಾಸಪತ್ರಿಕೆ**ಯು ಪ್ರತಿ ಮೂರು ತಿಂಗಳ ಕೊನೆಯ ವಾರದಲ್ಲಿ ಪ್ರಸಿದ್ಧವಾಗುವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ ತಿಳಿಸಬೇಕು.

೩. ಲೇಖಕರು ಹಾಗು ಪ್ರಕಾಶಕರು, ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರಿಗೆ ಉಪಯುಕ್ತವಾದ ಪುಸ್ತಕ-ನಕಾಶ-ಚಿತ್ರ-ಉಪಕರಣಗಳನ್ನು ವಿಮರ್ಶೆಗಾಗಿ ಕಳುಹಿಸಬಹುದು.

೪. ತಾವು ಪ್ರಕಟನೆಗಾಗಿ ಕಳುಹಿಸಿರುವ ಲೇಖನಗಳನ್ನು ತಿರುಗಿ ಪಡೆಯಲು ಅಪೇಕ್ಷಿಸುವವರೂ ಅದರ ಪರಿಣಾಮವನ್ನು ಕೂಡಲೆ ತಿಳಿದುಕೊಳ್ಳಲಿಚ್ಛಿಸುವವರೂ ಅದಕ್ಕಾಗಿ ತಗಲುವ **ಅಂಚೆಯ ಚೀಟಿ**ಗಳನ್ನು ತಮ್ಮ ಲೇಖನದ ಸಂಗಡ ಕಳುಹಿಸಿಕೊಡಬೇಕು.

ಜಾಹಿರಾತಿನ ದರಗಳು

ಪುಟ	೧೨ ತಿಂಗಳುಗಳಲ್ಲಿ ನಾಲ್ಕು ಸಾರೆ	೬ ತಿಂಗಳುಗಳಲ್ಲಿ ೨ ಸಾರೆ	೩ ತಿಂಗಳುಗಳಲ್ಲಿ ಒಮ್ಮೆ
೧	೧೨ ರೂ.	೭½ ರೂ.	೪ ರೂ.
½	೭½ ರೂ.	೪ ರೂ.	೨½ ರೂ.
¼	೪ ರೂ.	೨½ ರೂ.	½ ರೂ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹುಚ್ಚರಾವ ಭೀಮರಾವ ಉಮಡಿ, ಎಂ. ಎ.

ಸಂಪುಟ ೬೩	ಅಕ್ಟೋಬರ-ನವಂಬರ-ಡಿಸೆಂಬರ ೧೯೪೪	ವರ್ಷ ೧೭ ಸಂ. ೭-೮-೯

ಕರ್ಮಯೋಗ

'ಪರಮ ಕರುಣಾವನಧಿ ದೇವನ ।
ಮರೆಯ ಸಾರುವ ನರಗೆ ಪಾತಕ ।
ವಿರದು ಲೋಕವ ಬೆಳಗುವಾರವಿ
ಕಳೆಯನೇ ತಮವ' ॥

ಬರಿಯ ಹೊಗೆಯೀ ಮಾತು ದುರ್ಬಲ ।
ಮರುಳು ಮನುಜನ ಹಗಲುಗನಸಿದು ।
ಹಿರಿಯ ಹೊಲಬಿನ ಮಾನುಷತ್ವದ
ಹುರುಳು ಕಿರಿದಹುದೇ * ॥ ೧ ॥

ದಾರಿಯನು ಕಂಡಿರದ ದಾರಿಗ ।
ದಾರಿ ತಪ್ಪಿದಡೇನು ದೋಷವು ।
ತೋರಿ ಕೈವಿಡಿದೊಯ್ವರಿರದಿರೆ
ಸಮಯವೊದಗದಿರೆ ॥

ದಾರಿಗೊಯ್ಯುವ ಸುತ್ತಲಿನ ಸಂ ।
ಸಾರ ಸಾಧನವೊದಗಿ ಬರದಿರೆ- ।
ಅರುಬೋಷಿಗಳೇಕೆ ಪಾತಕ
ಸೂತಕವು ನರಗೆ ॥ ೨ ॥

ಪಾಪಿಗಳ ದೂರಿರಿಸಿ ಶಿಷ್ಟರ ।
ಭಾಪು ! ಬಾರೆಂದೊಯ್ವ ದೇವನು ।
ಪಾಪಿ ಮಾನವನಿದ್ದರೂ ಸರಿ,
ಬಿದ್ದರೂ ಸರಿಯೇ ॥

ಪೋಪರಲ್ಲವೆ ಪುಣ್ಯವಂತರು ।
ಆ ಪರಂಧಾಮಕ್ಕೆ ತಾವೇ ।
ಪಾಪರಹಿತಾಚಾರ ಪುಣ್ಯಾಚರಣೆಗಳ
ಬಲದ ॥ ೩ ॥

ಇದರೊಳಿಲ್ಲಿದೆಯವನದಯೆ ಮೇ. ।
ಣಿದರೊಳಿಲ್ಲಡಗಿರುವುದುಪಕೃತಿ ।
ಯಿದರೊಳಿಲ್ಲಳುತಿರುವುದಾತನ
ಭಕ್ತವತ್ಸಲತೆ ॥

ಇದುವೆ ಪಾಪಕೆ ಇದುವೆ ಪುಣ್ಯಕೆ ।
ಇದಕೊ ಕರ್ಮಫಲಂಗಳೆನ್ನುವ ।
ಮುದುಕ ಕೋಮಟಿ ಜಿಪುಣ ದೇವನು
ನಮಗೆ ಬೇಕಿಲ್ಲ ॥ ೪ ॥

ಇರದು ಪಾತಕವದುವೆ ಕತ್ತಲೆ ।
ಹರಿದು ಪಾತಕತಮವ ಬೆಳಕನು ।
ನರಗೆ ಕೊಡುವಾ ಪರಮ ತೇಜವೆ
ದೇವನಹುದಹುದು ॥

ಪರಿಪರಿಯ ರೋಗೋಪಶಮನಕೆ ।
ಪರಿಪರಿಯ ದಿವ್ಯೌಷಧಂಗಳು ।
ಇರುವತೆರದಲಿ ಕಳೆಯೆ ನರರಜ್ಞಾನ
ತಿಮಿರವನು ॥ ೫ ॥

* Man is not so weak in mental strength.

ಅವರವರ ಸಂಸ್ಕಾರಸಂಚಿತ |
ವವರವರ ಗುಣಕರ್ಮ ಭೇದದೆ |
ಅವರವರಿಗೊಂದೊಂದು ಬೆಳಕಿನೆ
ಬೇರೆ ಬೇರಾಗಿ ||

ತವಕವಗೆ ತಿಳಿದಂತೆ ನಡೆದಾ |
ಭುವನವಾವರಿಸಿರುವ ತೇಜನ |
ತವಕದಲಿ ಕಣ್ತೆರೆದು ನೋಳ್ಪುದೆ
ಪರಮ ಗುರಿನರಗೆ || ೬ ||

ಬೆದರಿ ಕೂಗಿದೊಡಳಿಯದಾತಮ |
ವದಕೆ ನೀನೆದೆಗೊಟ್ಟು ನಡೆದರೆ |
ಚದರಿ ತಾನೇ ಮಾಯವಾಗುತ
ಬೆಳಕು ತೋರುವುದು ||

ಹುದುಗಿದಾತ್ಮದ ದಿವ್ಯತೇಜವು |
ಬೆದರುವಳಿ ಬಲದವಗೆ ಲಭಿಸದು | †
ಅದಕೆ 'ಆತ್ಮವಿಕಾಸ ಕಾರಣಕರ್ಮ'
ಸಾಧನವು || ೭ ||

'ಪಾಪಿನಾಂ ಪಾಪಾತ್ಮನಾಂ ನಿಜ |
ಪಾಪಕರ್ಮಂ ನಾನು ದಯದಿಂ |
ಪಾಪಸಂಭವನೆನ್ನ ರಕ್ಷಿಸು ಭಕ್ತವತ್ಸಲನೆ'||
ಪಾಪಿನೀನಿಂತಳಲು ದೇವನು |
ಪಾಪದಿಂದುದ್ಧರಿಸಲಾರನು |
ಪಾಪಿ ನೀನೇ ನಿನ್ನಶುದ್ಧೀಕರಣ ಸಾಧನವು ||
ಕರ್ಮಪೇಬಲ, ಕರ್ಮಫಲವೇ |
ಕರ್ಮಭೂತಾರಣಕೆ ಸಾಧನ, |
ಕರ್ಮವೇ ನಿನ್ನಾತ್ಮ ಶುದ್ಧೀಕರಣ
ಸಾಧನವು ||
ಧರ್ಮಮಾರ್ಗದಿ ನಡೆದು ನಿಜಹಿತ-|
ಕರ್ಮಸಂಸ್ಕಾರದಲಿ ಮಾನವ |
ನಿರ್ಮಲಾಂತಃಕರಣೆಯಾಗೆ
ಪುನೀತನಾಗುವನು || ೯ ||
ಗುರುವಿವೇಕಾನಂದರುಸಿರಿದ |
ಗುರುವಿವೇಕದ ಕರ್ಮಯೋಗವ |
ನೊರೆದೆ ಧೀರೋದಾತ್ತಭಾವದೆ
ನೋಳ್ಪುದೀಕೃತಿಯು ||

† ನಾಯಮಾತ್ಮಾ ಬಲಹೀನೇನ ಲಭ್ಯಃ

ಮುಂಬೈ ಇಲಾಖೆಯಲ್ಲಿ ಶೈಕ್ಷಣಿಕ ಪ್ರಗತಿ

ಕೆಲವು ದಿನಗಳ ಹಿಂದೆ ನಮ್ಮ ಇಲಾಖೆಯ ಡೈರೆಕ್ಟರ ಸಾಹೇಬರವರು ಒಂದು ಸಂತೋಷಕೂಟದಲ್ಲಿ ಮಾತಾಡುವಾಗ ಮುಂಬಯಿ ಇಲಾಖೆಯ ಶಿಕ್ಷಣ ಪ್ರಗತಿಯ ಸಮಸ್ಯೆಯನ್ನು ಕುರಿತು ಹೀಗೆ ಮಾತಾಡಿದರು:—

"ಈ ಇಲಾಖೆಯ ಎರಡು ಕೋಟಿ ಜನಸಂಖ್ಯೆಯಲ್ಲಿ ನೂರಕ್ಕೆ ಅಂದರೆ ಸುಮಾರು ಜನರು ಹಳ್ಳಿಗಳಲ್ಲಿ ವಾಸಿಸುವರು. ಈ ಇಲಾಖೆಯೊಳಗಿನ ೨೨ ಸಾವಿರ ಹಳ್ಳಿಗಳಲ್ಲಿ ೧೨ ಸಾವಿರಕ್ಕಿಂತ ಹೆಚ್ಚು ಹಳ್ಳಿಗಳಲ್ಲಿ ೫೦೦ ಅಥವಾ ಅದಕ್ಕೂ ಕಡಿಮೆ ಜನರಿರುವರು. ಇಂಥ ಹಳ್ಳಿಗಳು ಶಾಲೆಗಳನ್ನು ನಡೆಯಿಸುವದಕ್ಕೆ ತೀರ ಸಣ್ಣವೆನಿಸುವವು. ಅಲ್ಲಿ ಒಬ್ಬನೇ ಶಿಕ್ಷಕನು ಕೆಲಸ ಮಾಡಬೇಕಾಗುವದು. ಇದರಿಂದ ವೆಚ್ಚಕ್ಕೆ ಅನುಗುಣವಾಗಿ ಪ್ರತಿಫಲವು ದೊರೆಯುವದಿಲ್ಲ. ಹಾಗೆ ಒಬ್ಬ ಶಿಕ್ಷಕನು ಕೆಲಸ ಮಾಡುವದ್ದೂ ಕೂಡ ಸಾಕಷ್ಟು ವಿದ್ಯಾರ್ಥಿಗಳು ಕೂಡದ್ದರಿಂದ ಇಂಥ ಹಳ್ಳಿಗಳಲ್ಲಿ ಈಗಿರುವ ಶಾಲೆಗಳು ಸಹ ದಿನದಿನಕ್ಕೆ ಕಡಿಮೆಯಾಗುತ್ತ ಸಾಗಿವೆ. ತೀರ ಸ್ವಲ್ಪ ಜನಸಂಖ್ಯೆಯಿರುವ ಬಿಡಿಬಿಡಿಯಾಗಿ ಹಬ್ಬಿರುವ ಹಳ್ಳಿಗಳನ್ನು ಹತ್ತಿ ಹೊಂದಿಸುವ ಮಾರ್ಗಸೌಕರ್ಯವನ್ನು ಒದಗಿಸುವದು ಯುದ್ಧೋತ್ತರ

ಪ್ರಗತಿಯ ಮಾರ್ಗದಲ್ಲಿ ಕೈಕೊಳ್ಳಬೇಕಾದ ಅತಿ ಮಹತ್ವದ ಕಾರ್ಯವು. ಅದರಿಂದಲೇ ಶಿಕ್ಷಣ ಪ್ರಗತಿಗೆ ಅನುಕೂಲ ಪರಿಸ್ಥಿಯುಂಟಾಗಬಹುದೆಂದು ಅತಿಸಲಾಗಿದೆ. ನಮ್ಮ ಇಲಾಖೆಯಲ್ಲಿರುವ ಶಾಲೆಗೆ ಹೋಗುವ ಅಂದರೆ ೬ರಿಂದ ೧೧ ವರ್ಷ ವಯಸ್ಸುಳ್ಳ ೩೦ಲಕ್ಷ ಬಾಲಕ ಬಾಲಿಕೆಯರಲ್ಲಿ ೧೦ ಲಕ್ಷದಷ್ಟು ಮಾತ್ರ ಸಾಲೆಗೆ ಹೋಗುತ್ತಿದ್ದಾರೆ. ಎಂದರೆ ಮೂರರಲ್ಲಿ ಎರಡು ಪಾಲು ಇನ್ನೂ ಕತ್ತಲೆಯಲ್ಲಿಯೇ ಉಳಿದಿದೆ. ಎಂದರೆ ಅವರು ಇನ್ನೂ ಸಾಲೆಯ ಬೆಳಕಿನ ವಾತಾವರಣವನ್ನು ಕಂಡೇ ಇಲ್ಲ. ಸಾಲೆಗೆ ಹೋಗುವವರಲ್ಲಿಯೂ ಹೆಣ್ಣು ಮಕ್ಕಳ ಸಂಖ್ಯೆ ತೀರ ಸಣ್ಣದು. ನೂರರಲ್ಲಿ ೩೮ ಮಾತ್ರ. ಹಳ್ಳಿಗಳಲ್ಲಿ ಬಾಲಿಕೆಯರನ್ನು ಶಾಲೆಗೆ ಕಳಿಸಲು ಪಾಲಕರ ಮನವೊಲಿಸುವದು ತೀರ ಕಷ್ಟದ ಕೆಲಸವಾಗಿದೆ.

ಇನ್ನು ಈ ಇಲಾಖೆಯೊಳಗಿನ ಸಾಲೆಗಳಲ್ಲಿ ಕಲಿಯುತ್ತಿರುವ ಬಾಲಕ ಬಾಲಿಕೆಯರ ಪ್ರಮಾಣದಲ್ಲಿರುವ ಅಂತರವನ್ನೂ ಸಾಲೆಗಳಲ್ಲಿ ಕೆಲಸಮಾಡುತ್ತಿರುವ ಶಿಕ್ಷಕ ಶಿಕ್ಷಿಕೆಯರ ಪ್ರಮಾಣದಲ್ಲಿರುವ ತಾರತಮ್ಯವನ್ನೂ ಪರದೇಶದ ಅಂಕೆ ಸಂಖ್ಯೆಗಳೊಡನೆ ಹೋಲಿಸಿ ನೋಡೋಣ.

ಇಂಗ್ಲಂಡ ಮತ್ತು ವೇಲ್ಸ ಕೂಡ ಜನಸಂಖ್ಯೆ ನಾಲ್ಕು ಕೋಟಿ; ಎಂದರೆ ಮುಂಬಯಿ ಇಲಾಖೆಯ ಎರಡರಷ್ಟು. ಅಲ್ಲಿ ಜನದಟ್ಟಣೆ ಪ್ರತಿ ಚೌರಸಮೈಲಿಗೆ ೯೦೦; ಆದರೆ ನಮ್ಮಲ್ಲಿ ನೂರುನೂರು ಮಾತ್ರ, ಅಥವಾ ಅದಕ್ಕೂ ಕಡಿಮೆ ಎಂದರೂ ಸರಿಯೇ. ಆ ದೇಶದಲ್ಲಿ ೨೨ ಸಾವಿರ ಪ್ರಾಥಮಿಕ ಶಾಲೆಗಳಿವೆ. ಆ ಸಾಲೆಗಳನ್ನು ನಡೆಯಿಸುವ ಒಟ್ಟು ೧೭೦ ಸಾವಿರ ಜನರಲ್ಲಿ ಅರ್ಧದಷ್ಟು ಶಿಕ್ಷಕರು; ಮಿಕ್ಕರ್ಧ ಶಿಕ್ಷಿಕೆಯರು. ಮುಂಬಯಿ ಇಲಾಖೆಯೊಳಗಿನ ೩೦ಸಾವಿರ ಶಾಲೆಗಳನ್ನು ೪೫ ಸಾವಿರ ಜನರು ನಡೆಯಿಸುತ್ತಿದ್ದು ಅವರಲ್ಲಿ ನೂರರಲ್ಲಿ ೧೭ರಷ್ಟು ಮಾತ್ರ ಶಿಕ್ಷಿಕೆಯರು. ಈ ಸ್ಥಿತಿಯು ಎಷ್ಟು ಕಾಲದವರೆಗೆ ಮುಂದೆ ಸಾಗಬೇಕೆಂಬದನ್ನೂ ತಮ್ಮ ಮಕ್ಕಳನ್ನು 'ನರೆಗೂದಲಿನ ಹುರುಪಳಿದ ಹಳೆಯ' ಶಿಕ್ಷಕ ಶಿಕ್ಷಕಿಯರ ಕೈಯಲ್ಲಿಯೇ ಒಪ್ಪಿಸಬೇಕೋ ಅಥವಾ 'ಹುರುಪಿನ ತರುಣ' ಪೀಳಿಗೆಯು ಮುಂದೆ ಬಂದು ಅವರ ಸ್ಥಾನವನ್ನು ಆಕ್ರಮಿಸುವಂತೆ ಮಾಡಬೇಕೋ ಎಂಬದನ್ನು ಜನತೆಯೇ ನಿರ್ಣಯಿಸಬೇಕು. ಶಿಕ್ಷಣದಲ್ಲಿ ತಕ್ಕ ಸುಧಾರಣೆಯಾಗಬೇಕಾದರೆ ಶಿಕ್ಷಿಕೆಯರ ಕೊರತೆಯು ದೂರಾಗಬೇಕು. ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸುವ ವಿಷಯದಲ್ಲಿ ಸದ್ಯಕ್ಕೆ ಜನತೆಯಲ್ಲಿ ಕಂಡು ಬರುವ ಅನಾದರವು ಹೋಗಿ ಅದರ ಬದಲು ಉತ್ಸಾಹವೂ ಆಸ್ಥೆಯೂ ಕಂಡುಬರಬೇಕು. ಅದಕ್ಕಾಗಿ ಜನತೆಯ ದೃಷ್ಟಿಕೋನವು ಬದಲಾಗಬೇಕು ಶೈಕ್ಷಣಿಕ ಪ್ರಗತಿಪಥದಲ್ಲಿ ಹಿಂದಿನದನ್ನೇ ಯೋಚಿಸುತ್ತ ಕೂಡ್ರದೆ ಮುಂದಿನ ಸುಧಾರಣೆಯ ಮಾರ್ಗವನ್ನು ಕಂಡು ನುಗ್ಗುವರಿಯಬೇಕು.

ಶಿಕ್ಷಣ ಕ್ರಮದಲ್ಲಿ ಔದ್ಯೋಗಿಕ ಶಿಕ್ಷಣಕ್ಕೆ ಮಹತ್ವದ ಸ್ಥಾನವಿರಬೇಕೆಂಬದೂ ಕೂಡ ಸರ್ವಸಮ್ಮತವಾಗಿದೆ. ಅದಕ್ಕನುಗುಣವಾಗಿ ಹೈಸ್ಕೂಲುಗಳ ಅಭ್ಯಾಸ ಕ್ರಮದಲ್ಲಿಯೂ ಬದಲಾವಣೆಯಾಗಿ ಬೇರೆ ಬೇರೆ ಉದ್ಯೋಗಗಳ ಶಿಕ್ಷಣಕ್ಕೆ ಅನುವು ಜೊರೆದಿದೆ. ಸ್ಕೂಲ್ ಲೀವ್ವಿಂಗ್ ಸರ್ಟಿಫಿಕೇಟ ಪರೀಕ್ಷೆಯನ್ನು ಹೊಸದಾಗಿ ಆರಂಭಿಸಿದೆ. ಯುದ್ಧೋತ್ತರದ ಸುಧಾರಣೆಯ ಕಾಲದಲ್ಲಿ ಅಂಥ ಹೈಸ್ಕೂಲುಗಳ ಸಂಖ್ಯೆಯನ್ನು ಹೆಚ್ಚಿಸುವ ಯೋಜನೆಯನ್ನೂ ಕೈಕೊಳ್ಳಲಾಗುವದು." ಇತ್ಯಾದಿ.

ಶಿಕ್ಷಣದಲ್ಲಿ ಬುದ್ಧಿಮಾಪನದ ಸ್ಥಾನ

ಲೇಖಕ :— ನಿಶಾಚರ

ಒಂದು ವಸ್ತುವಿನ ನಿಜವಾದ ಸ್ಥಿತಿ, ಅವಸ್ಥೆಗಳನ್ನರಿಯದೆ ಆ ವಸ್ತುವನ್ನು ತಿದ್ದಿ, ತೀಡಿ, ಕಟೆದು ಸುಂದರವಾಗಿ ಮಾಡಹೋದರೆ ಮಧ್ಯದಲ್ಲಿಯೇ ಅದು ಒಡೆದು ಚೂರಾಗಬಹುದು; ಇಲ್ಲವೆ ವಿಕೃತವಾಗಬಹುದು. ನಿರ್ಜೀವವಾದ ವಸ್ತುವಿನ ರೀತಿ ಇಂತಿರುವಾಗ ಜೈತನ್ಯ ಯುತರಾದ, ಪ್ರತಿಕ್ಷಣಕ್ಕೂ ವಿಕಾಸ ಹೊಂದಬಹುದಾದ ಮಕ್ಕಳನ್ನು ತಿದ್ದಿ, ತೀಡಿ, ರಾಷ್ಟ್ರದ ಅಡಿಗಲ್ಲುಗಳನ್ನಾಗಿ ಮಾಡುವ ಕಾರ್ಯದಲ್ಲಿ ತೊಟ್ಟ ತೊದಲು, ಆ ಮಕ್ಕಳ ಮನಸ್ಸು, ಬುದ್ಧಿ, ವಯಸ್ಸು ಇವುಗಳನ್ನರಿತುಕೊಳ್ಳುವದು ಅತ್ಯವಶ್ಯ. ಮಕ್ಕಳ ವಯಸ್ಸು, ಅವರ ದೈನಂದಿನ ಜೀವನದ ನೆಲೆ, ಶಾರೀರಿಕ ಸಾಮರ್ಥ್ಯ ಮೊದಲಾದವುಗಳನ್ನು ತಿಳಿದುಕೊಳ್ಳುವುದು ಅಷ್ಟು ದುಸ್ತರವಲ್ಲ. ಆದರೆ ಮಕ್ಕಳ ಶಿಕ್ಷಣದಲ್ಲಿ ಅತಿ ಮಹತ್ವದ ಸ್ಥಾನವಿರುವುದು ಅವರ ಮೂಲ ಬುದ್ಧಿಸಾಮರ್ಥ್ಯಕ್ಕೆ. ಮಕ್ಕಳ ಬುದ್ಧಿಸಾಮರ್ಥ್ಯವನ್ನರಿಯದೆ ಅವರ ಶಿಕ್ಷಣವನ್ನು ಸಾಗಿಸಿದರೆ ಬೋರ್ಗಲ್ಲ ಮೇಲೆ ಮಳೆಗರೆದಂತೆಯೇ ಸರಿ.

"ಈ ಹುಡುಗ ಜಾಣ, ಈ ಹುಡುಗ ದಡ್ಡ," ಎನ್ನುವುದು ಎಂದಿನಿಂದಲೂ ವಾಡಿಕೆಯಾಗಿ ಬಂದಿದೆ. ಹಿಂದೆ ಬುದ್ಧಿಸಾಮರ್ಥ್ಯವನ್ನಳೆಯುವ ವಿಶಿಷ್ಟ ಸಾಧನಗಳು ಇಲ್ಲದಿದ್ದರೂ, ಆಯಾ ಬಾಲಕನು ಒಂದೊಂದು ಸನ್ನಿವೇಶದಲ್ಲಿ, ಪ್ರಸಂಗದಲ್ಲಿ, ತೋರಿಸಿದ ವರ್ತನದ ಆಧಾರದಿಂದ ಅವನು ಜಾಣ ಆಥವಾ ಮೂಢ ಎನ್ನುವುದು ಸ್ವಾಭಾವಿಕವಾಗಿತ್ತು. ಆದರೆ ಹಾಗೆ ಹೇಳುವಾಗ ಹೇಳುವವನ ಅಭಿರುಚಿ, ಆಸಕ್ತಿ, ದೃಷ್ಟಿಕೋನ ಇವುಗಳೇ ಆಧಾರವಾಗುತ್ತಿದ್ದವು. ಆದುದರಿಂದ ಅನೇಕ ಸಲ ಅವು ದೋಷಯುಕ್ತವಾಗುತ್ತಿದ್ದವು. ಆದರೆ ಇತ್ತೀಚೆಗೆ ಹುಡುಕಿ ತೆಗೆದು ನಿರ್ಮಿಸಿದ ನಿಧಾನಗಳು ಪ್ರಾಯೋಗಿಕ ಪದ್ಧತಿಗನುಸರಿಸಿದವುಗಳಾಗಿದ್ದು, ಅವುಗಳಲ್ಲಿ ಪರೀಕ್ಷಕನ ಅಭಿರುಚಿ, ಆಸಕ್ತಿ, ಒಲವುಗಳಿಗೆ ಮಹತ್ವದ ಸ್ಥಾನವಿರುವದಿಲ್ಲ. ಇಂತಹ ವಿಧಾನಗಳಿಂದ ಶಿಕ್ಷಕನು ಮಕ್ಕಳ ಬುದ್ಧಿಸಾಮರ್ಥ್ಯವನ್ನಳೆದು, ತನ್ನ ಕಾರ್ಯವನ್ನು ಪ್ರಾರಂಭಿಸುವುದು ಲೇಸು.

ಹಾಗಾದರೆ ಈ ಬುದ್ಧಿಸಾಮರ್ಥ್ಯವೆಂದರೇನು? ಅದನ್ನು ಹೇಗೆ ಅಳೆದು ತಿಳಿಯಬೇಕು? ಎಂಬ ಪ್ರಶ್ನೆಗಳು ಉದ್ಭೂತವಾಗುವವು. ಬುದ್ಧಿಯೆಂಬುವುದು ಮನುಷ್ಯನಲ್ಲಿ ನೆಲೆಗೊಂಡ ಒಂದು ಗೂಢವಾದ, ವಿಚಿತ್ರವಾದ, ತೊಡಕಿನ ಶಕ್ತಿ ಅಥವಾ ಸ್ವಭಾವವೆಂದು ತೋರುತ್ತದೆ. ಎಷ್ಟೋ ಮನೋವೈಜ್ಞಾನಿಕರು ವಿವಿಧ ರೀತಿಯಲ್ಲಿ ಅದರ ವ್ಯಾಖ್ಯೆಯನ್ನು ಕೊಡಲು ಯತ್ನಿಸಿದ್ದಾರೆ. ಬುದ್ಧಿಯೆಂದರೆ:—

"ಭಾವಾತ್ಮಕ ವಿಚಾರಶಕ್ತಿ"ಯೆಂದು ಟರ್ಮನರು, "ಸತ್ಯ ಮತ್ತು ಪ್ರತ್ಯಕ್ಷದರ್ಶನಗಳ ದೃಷ್ಟಿಯಿಂದ ಸರಿಯಾದ ಪ್ರತಿಕ್ರಿಯೆಗಳನ್ನು ತೋರಿಸುವ ಶಕ್ತಿ"ಯೆಂದು ಥಾರ್ನಡಾಯಿಕರೂ, "ಹೊಸಸನ್ನಿವೇಶಗಳಿಗೆ ಹೊಂದಿಕೊಂಡು ನಡೆಯುವ ಜಾಣ್ಮೆ ಮತ್ತು ಶಕ್ತಿ" ಯೆಂದು ಸ್ಟರ್ನ್ ಮತ್ತು ಬರ್ಟ್‌ರೂ ಅಭಿಪ್ರಾಯ ಪಡುತ್ತಾರೆ. ಆದರೆ ಥರ್ಸ್ಟನ್‌ನರು "ರೂಢಿ, ದರ್ಶನ, ಕಲ್ಪನೆ, ವಿಚಾರ" ಈ ನಾಲ್ಕು ಮುಖವಾಗಿ ಬುದ್ಧಿಯನ್ನು ವಿಭಾಗಿಸುತ್ತಾರೆ. ಇವರೆಲ್ಲರ ವಿಚಾರಗಳು ನಮ್ಮನ್ನು ಪಾರುಗಾಣದ ಗೊಂದಲದಲ್ಲಿ ಹಾಕುತ್ತವೆಂದು ಹೇಳಬಹುದು. ಈ ಜಂಜಾಟದಿಂದ ಪಾರಾಗಲು ಸ್ಪೀಮನ್ನರು "ವಿದ್ಯುತ್ತಿನ ಸ್ವಭಾವ ವ್ಯಾಖ್ಯೆಗಳನ್ನರಿಯದೆ ಅದನ್ನು ಅಳೆಯುವುದು

ಸಾಧ್ಯವಿದ್ದಂತೆ ಬುದ್ಧಿಯನ್ನಾದರೂ ಅಳೆಯಬಹುದು" ಎಂದು ಅಭಿಪ್ರಾಯ ಪಡುತ್ತಾರೆ. ಮೇಲೆ ವಿವರಿಸಿದ ಎಲ್ಲ ವ್ಯಾಖ್ಯೆಗಳನ್ನು ಲಕ್ಷ್ಯದಲ್ಲಿಟ್ಟು, "ಬುದ್ಧಿಯೆಂದರೆ ಒಂದು ಜೀವಿಯ ಸರ್ವತೋಮುಖವಾದ ಆಂತರ್ಗತ ಹುಟ್ಟು–ಸಾಮರ್ಥ್ಯವೆಂದು" ನಾವು ಹೇಳಬಹುದು. ಈ ಹುಟ್ಟು–ಸಾಮರ್ಥ್ಯವು ಭಿನ್ನ ಭಿನ್ನ ವಾಗಿದೆಯೆಂತಲೇ ಬೇರೆ ಬೇರೆ ಬಾಲಕರು, ಕೊಟ್ಟ ಒಂದೇ ಸನ್ನಿವೇಶಕ್ಕೆ ತರತರದ ಪ್ರತಿಕ್ರಿಯೆಗಳನ್ನು ತೋರಿಸುವರು.

ಇನ್ನು ಈ ಬುದ್ಧಿಯ ಸ್ವಭಾವವೆಂತಹದು ಎಂಬುದನ್ನು ಪರಕಿಸೋಣ. ಬುದ್ಧಿಯನ್ನು ಪ್ರಯತ್ನದಿಂದ ಸಂಪಾದಿಸಬಹುದೆಂದು ಕೆಲವರು; ಅದು ನಮ್ಮ ಜನ್ಮದೊಡನೆ ಬಂದದ್ದೆಂದು ಉಳಿದವರು, ಹೇಳುವರು. ಅದನ್ನು ಪ್ರಯತ್ನದಿಂದ ಸಂಪಾದಿಸಬಹುದಾದರೆ ಅದು ಜಾಣ್ಮೆ, ವಿದ್ಯೆ, ಕೌಶಲವಾಗಬಹುದು. ಆದರೆ ಬುದ್ಧಿಯು ಜಾಣ್ಮೆ, ವಿದ್ಯೆ ಇವುಗಳಿಗಿಂತ ತೀರ ಭಿನ್ನವಾದ, ತೀರ ತೊಡಕಿನ ಶಕ್ತಿಯಾಗಿದೆ. ವಿದ್ಯೆ, ಜಾಣ್ಮೆ ಇವು ಜೀವನದ ಒಂದು ವಿಭಾಗದಲ್ಲಿ, ಒಂದು ವೃತ್ತಿಯಲ್ಲಿ ಮಾತ್ರ ಗೋಚರವಾಗತಕ್ಕವು; ಆದರೆ ಬುದ್ಧಿಯು ಎಲ್ಲ ಪ್ರಸಂಗಗಳಲ್ಲಿ ಪ್ರಕಟವಾಗುವ ಒಂದು ಶಕ್ತಿ.

ಅಂದ ಬಳಿಕ ಬುದ್ಧಿಯಲ್ಲಿ ಅಡಕವಾದ ಶಕ್ತಿಗಳಾಗಲಿ, ಲಕ್ಷಣಗಳಾಗಲಿ ಯಾವವು ಎಂಬ ಪ್ರಶ್ನೆಗೆ ಉತ್ತರ ಕೊಡಬೇಕಾಗುವುದು. ಈ ಲಕ್ಷಣಗಳನ್ನು ನಾವು ಮೂರು ಗುಂಪುಗಳಾಗಿ ವಿಭಾಗಿಸಬಹುದು. (೧) ವಿಶಿಷ್ಟ ಲಕ್ಷಣ (೨) ಸಾಮೂಹಿಕ ಲಕ್ಷಣ. (೩) ಕೇಂದ್ರ ಲಕ್ಷಣ. ವಿಶಿಷ್ಟ ಲಕ್ಷಣವು ಒಂದಕ್ಕೊಂದು ವಿಶಿಷ್ಟ ಸನ್ನಿವೇಶದಲ್ಲಿಯೂ, ಸಾಮೂಹಿಕ ಲಕ್ಷಣವು ಒಂದಕ್ಕೊಂದು ಸಂಬಂಧವಿದ್ದಕೆಲವು ವಿಷಯಗಳಲ್ಲಿ ಮಾತ್ರವೂ ಕೇಂದ್ರ ಲಕ್ಷಣವು ಉಳಿದ ಎಲ್ಲ ಲಕ್ಷಣಗಳನ್ನು ಅಂಕಿತದಲ್ಲಿಟ್ಟುಕೊಂಡು ಎಲ್ಲ ಪ್ರಸಂಗಗಳಲ್ಲಿಯೂ, ಪ್ರಕಟವಾಗುವ ಶಕ್ತಿಯೆಂದು ಸಾಮಾನ್ಯವಾಗಿ ಹೇಳಬಹುದು. ಸ್ಪಿಯರಮನ್ನರು ಬುದ್ಧಿಯಲ್ಲಿ "ಸಾಮಾನ್ಯ" ಮತ್ತು "ವಿಶಿಷ್ಟ" ಹೀಗೆ ಎರಡೇ ಶಕ್ತಿಗಳು ಅಡಕವಾಗಿವೆಯೆಂದು ಬಹು ಜಾಣ್ಮೆಯಿಂದ ಪ್ರತಿಪಾದಿಸಿದ್ದಾರೆ. ಆದರೆ ಎಷ್ಟೋ ಪ್ರಸಂಗಗಳಲ್ಲಿ ಈ "ಸಾಮಾನ್ಯ" ವು "ವಿಶಿಷ್ಟ"ವನ್ನೂ ಕೂಡ ವ್ಯಾಪಿಸಿಕೊಳ್ಳುತ್ತದೆ. ಆದ್ದರಿಂದ ಒಬ್ಬ ವ್ಯಕ್ತಿಯು ಯಾವದೇ ಪ್ರತಿಕ್ರಿಯೆಯನ್ನು ತೋರಿಸಲಿಕ್ಕೆ ಸಂಪೂರ್ಣ ಸ್ವತಂತ್ರನಿದ್ದಾಗ, ತಮ್ಮ ಪ್ರಭಾವವನ್ನು ಬೀರುವ ಎಲ್ಲ ಶಕ್ತಿಗಳ, ಎಲ್ಲ ಲಕ್ಷಣಗಳ ಸಾಮೂಹಿಕ, ಕೇಂದ್ರೀಕೃತ ಸಾಮರ್ಥ್ಯವೇ ಬುದ್ಧಿಯೆಂದು ನಾವು ಹೇಳುವಾ.

ಬುದ್ಧಿಮಾಪನ :— ಬುದ್ಧಿಯ ವ್ಯಾಖ್ಯೆ ಮತ್ತು ಅದರ ಲಕ್ಷಣಗಳನ್ನು ವಿಮರ್ಶಿಸಿದ ಬಳಿಕ ಸ್ವಾಭಾವಿಕವಾಗಿಯೇ ಅದನ್ನು ಸರಿಯಾಗಿ, ಅದಷ್ಟು ಸರಿಯಾಗಿ ಅಳೆಯುವ ವಿಧಾನ ಯಾವುದು ಎಂದು ಎಲ್ಲರೂ ಕೇಳುವರು. ಬುದ್ಧಿಯು ಒಂದು ಭಾವವಾಚಕ ಗುಣ ಅಥವಾ ಶಕ್ತಿಯಾಗಿದ್ದರಿಂದ ಅದು ಪ್ರತ್ಯಕ್ಷವಾಗಿ ತೂಕ, ಅಳತೆ, ಮಾಪುಗಳಿಗೆ ಸಿಗುವ ವಸ್ತುವಲ್ಲ. ಬಲವು ಅನುಭವಗಳಲ್ಲಿ ಪ್ರಕಟವಾಗುವಂತೆ ಅನೇಕ ವಿಧವಾದ ವಾಹಕಗಳನ್ನು ನಾವು ಬುದ್ಧಿಗೆ ಪೂರೈಸಬೇಕಾಗುವುದು. ಬುದ್ಧಿಪರೀಕ್ಷಣದ ಯಾವದಾದರೊಂದು ಸನ್ನಿವೇಶದಲ್ಲಿ ಬುದ್ಧಿಯು ಕೆಲಸಮಾಡುತ್ತಿರುವಾಗ, ಅನುಭವ ಸಂಬಂಧವುಳ್ಳ ಭಾವಗ್ರಂಥಿಯ ವರ್ತುಲಗಳು ಹಾಗು ಕೇಂದ್ರಗಳು ಮೆದುಳಿನಲ್ಲಿ ನಿರ್ಮಾಣವಾಗುವವು; ಮತ್ತು ಮೆದಳು ಅದರ ಪರಿಣಾಮವಾಗಿ ಒಂದು ವಿಶಿಷ್ಟ ರೀತಿಯಲ್ಲಿ ಪ್ರತಿಕ್ರಿಯೆಯನ್ನು ತೋರಿಸುವುದು. ಇಂತಹ ಅನೇಕ ಪ್ರತಿಕ್ರಿಯೆಗಳನ್ನು ಪರೀಕ್ಷಿಸಿ ನಾವು ವಿವಿಧ ವ್ಯಕ್ತಿಗಳ ಬುದ್ಧಿಯನ್ನು ಅಪ್ರತ್ಯಕ್ಷವಾಗಿ ಅಳೆಯಬೇಕಾಗುತ್ತದೆ.

ಹಿಂದಿನ ಕಾಲದಲ್ಲಿ ಜನರು ತೀರ ಕಾಡು ಸಾಧನಗಳಿಂದ ಬುದ್ಧಿಯನ್ನಳೆಯುತ್ತಿದ್ದುದರಿಂದ ಅವು ಎಷ್ಟೋ ಸಲ ತಪ್ಪಾಗಿರುತ್ತಿದ್ದವು. ತಲೆಬುರುಡೆಯ ಸುತ್ತಳತೆಯ ಮೇಲಿಂದ

ಬುದ್ಧಿಯನ್ನಳೆಯುವ ನಗೆಬರುವ ವಿಚಿತ್ರ ಕಾಲವು ಒಂದು ಇತ್ತು. ಇದೇ ಪ್ರಕಾರವಾ ಬೇರೆಬೇರೆ ದೇಶಗಳಲ್ಲಿ, ಕೈ, ಕಾಲು, ಕಿವಿ, ಮೊದಲಾದ ಅವಯವಗಳ ಅಳತೆಯಿಂದ ಬುದ್ಧಿಯನ್ನು ಅಳೆಯುತ್ತಿದ್ದುದು ಕಂಡುಬರುತ್ತದೆ. ಆದರೆ ಈ ಎಲ್ಲ ವಿಧಾನಗಳು ವಿಫಲವಾದುವೆಂದು ಬೇರೆ ಹೇಳಬೇಕಿಲ್ಲ.

ಸದ್ಯಕ್ಕೆ ಉಪಲಬ್ಧವಿರುವ ಸಾಧನಗಳಲ್ಲಿ ಬಿನೆ ಇವರ ಪರೀಕ್ಷಣಗಳೇ ಹೆಚ್ಚು ಉಪಯುಕ್ತವಾಗಿವೆ. ಯಾಕೆಂದರೆ ಬುದ್ಧಿಸಾಮರ್ಥ್ಯದ ಎಲ್ಲ ಅಂಗಗಳ ಕಾರ್ಯವನ್ನ ಅಡಕವಾಗುವಂತೆ, ಮತ್ತು ವಿವಿಧ ಮನೋವೃತ್ತಿಯ ಜನರಿಗೆ ಹೊಂದಿಕೊಳ್ಳುವಂತೆ ಅವರು ಜಾಗ್ರತೆಯನ್ನು ವಹಿಸಿದ್ದಾರೆ. ಅಲ್ಲದೆ, ವಯೋಮಾನಕ್ಕೆ ತಕ್ಕಂತೆ ಪರೀಕ್ಷಣಗಳನ್ನು ನೇರ್ಪುಗೊಳಿಸಿ, ಆಯಾ ವಯೋಮಾನದ ಗುಂಪುಗಳಲ್ಲಿ ಅವುಗಳನ್ನು ವಿಭಾಗಿಸಿ ಬುದ್ಧಿಮಾಪನದ ಕಾರ್ಯವನ್ನು ಸುಲಭಗೊಳಿಸಿದ್ದಾರೆ. ಅವುಗಳ ಆಧಾರದ ಮೇಲೆಯೇ ಡಾ. ವಿ. ವಿ. ಕಾಮತರು ಕನ್ನಡದಲ್ಲಿ ಬುದ್ಧಿಮಾಪನದ ಸಾಧನಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರ ನೇತೃತ್ವದಲ್ಲಿ ಕರ್ನಾಟಕದ ಕೆಲವು ಶಿಕ್ಷಕರು ಬುದ್ಧಿಮಾಪನದ ಕೆಲಸವನ್ನು ಸಾಗಿಸಿದ್ದಾರೆ; ಈಗಲೂ ಸಾಗಿಸುತ್ತಲಿದ್ದಾರೆ.

ಕ. ಎ. ಬೋರ್ಡಿನ ಕನ್ನಡಶಾಲೆಯು ೭ನೆಯ ಹುಟ್ಟುಹಬ್ಬದ

ಅಧ್ಯಕ್ಷೀಯ ಭಾಷಣ

ಹಿರಿಯಯ್ಯನವರೇ, ಶಿಕ್ಷಣಪ್ರೇಮಿಗಳೇ, ಎಳೆಯ ಗೆಳೆಯರೇ,

ನಿಮ್ಮ ಶಾಲೆಯ ಏಳನೆಯ ಹುಟ್ಟುಹಬ್ಬದ ಮುಖ್ಯ ಅತಿಥಿಗಳನ್ನಾಗಿ ನಮ್ಮನ್ನು ಒರ ಮಾಡಿಕೊಂಡದುದಕ್ಕೆ ನಾನೂ ನನ್ನ ಪತ್ನಿಯೂ ನಿಮಗೆ ಋಣಿಯಾಗಿದ್ದೇವೆ. ನಿಮ್ಮ ಬೇರೆ ಬೇರೆ ಚಟುವಟಿಕೆಗಳನ್ನು ಕಂಡು ನಾವು ಸಂತೋಷಪಟ್ಟಿದ್ದೇವೆ. ನಿಮ್ಮ ಹಬ್ಬದ ಉಬ್ಬಿನಲ್ಲಿ ನಾವೂ ಪಾಲುಗಾರರಾಗಿದ್ದೇವೆ.

ಪ್ರಾಥಮಿಕ ಶಾಲೆಯೆಂದರೆ ಶಿಕ್ಷಣವೆಂಬ ಕಟ್ಟಡದ ತಳಹದಿಯಿದ್ದಂತೆ. ಕಟ್ಟಡವು ಗಟ್ಟಿಯಾಗಬೇಕಾದರೆ ಅದರ ತಳಹದಿ ಗಟ್ಟಿಯಾಗಿರಬೇಕಾಗುತ್ತದೆ. ಪ್ರಾಥಮಿಕ ಶಾಲೆಯೆಂಬ ಕಾರಣಕ್ಕಾಗಿ ಅದನ್ನು ದುರ್ಲಕ್ಷಿಸಿದರೆ ಶಿಕ್ಷಣದ ಗೋಪುರವು ಕುಸಿದುಬೀಳುವದು.

ದೇಹವು ನಿರೋಗಿಯಾಗಬೇಕಾದರೆ ದೇಹದ ಎಲ್ಲ ಅವಯವಗಳೂ ಸರಿಯಾಗಿ ಬೆಳೆಯಬೇಕು. ಈ ಮಾತು ಶಿಕ್ಷಣಕ್ಕೂ ಅನ್ವಯಿಸುತ್ತದೆ. ದೇಹ, ಮನಸ್ಸು, ಬುದ್ಧಿ, ಶೀಲ ಇವೆಲ್ಲವುಗಳ ಬೆಳವಣಿಗೆಗೆ ಅವಕಾಶ ದೊರೆತಾಗಲೇ ಶಿಕ್ಷಣವು ಪರಿಪೂರ್ಣವಾಗುತ್ತದೆ. ಬುದ್ಧಿಯೊಂದೇ ಬೆಳೆದರೆ ದೊಡ್ಡ ಹೊಟ್ಟೆಯ ಗಿಡ್ಡ ಮೂರ್ತಿಯಂತಾಗುತ್ತದೆ. ಅಂತೆಯೆ ಬುದ್ಧಿಯ ಜೊತೆಗೆ ದೇಹ, ಮನಸ್ಸು, ಶೀಲಗಳ ಬೆಳವಣಿಗೆಗೆ ಅವಕಾಶವನ್ನು ಕಲ್ಪಿಸಿಕೊಡುವ ಶಿಕ್ಷಣಾಲಯಗಳು ಇಂದು ನಮಗೆ ಬೇಕಾಗಿವೆ. ನಿಮ್ಮ ಶಾಲೆಯು ಅಂತಹ ಶಿಕ್ಷಣಾಲಯಗಳಲ್ಲಿ ಒಂದಾಗಿದೆಯೆಂದು ನಾನು ನಂಬುತ್ತೇನೆ. ತೆರೆದಿಟ್ಟ ಓದುಮನೆ, ಜರ್ಜ್, ನಾಟ್ಯ, ರಕ್ಷಕದಳ, ದಿನದ ನೆನವು, ಸುದ್ದಿಗಳು ಈಯೆಲ್ಲ ವಿಭಾಗಗಳ ವ್ಯವಸ್ಥೆ ನಿಮ್ಮ ಶಾಲೆಯಲ್ಲಿರುವುದು ಒಳ್ಳೆಯ ಸಂಗತಿಯಾಗಿದೆ. ಗಾಳಿ ಬೆಳಕಿನ ಆವರಣ, ಆಧುನಿಕ ಶಿಕ್ಷಣಶಾಸ್ತ್ರದ ಸಾಧನಗಳು,

ಹುರುಪಿನ ಚುರುಕಿನ ಶಿಕ್ಷಕರು ಇವುಗಳ ಅನುಕೂಲತೆ ನಿಮಗೆ ಇದೆ. ಇಂತಹ ಅನುಕೂಲತೆಗಳು ನಮ್ಮ ಕಾಲಕ್ಕೆ ಇದ್ದಿರಲಿಲ್ಲ. ಅಂತು ನೀವು ನಮ್ಮ ಕಾಲದವರಿಗಿಂತ ಹೆಚ್ಚು ಸುದೈವಿಗಳು.

ಪ್ರಾಥಮಿಕ ಶಾಲೆಯೆಂದರೆ ಹಳೆಯ ಗುಡಿಯಲ್ಲಿ, ಮುರುಕು ಖುರ್ಚಿಯ ಮೇಲೆ ಕುಳಿತ ಹರುಕು ಬಟ್ಟೆಯ ಮುದುಕ ಮಾಸ್ತರರೆದುರು ಸ್ವಚ್ಛತೆಯ ಅರಿವಿಲ್ಲದೆ, ಶಿಸ್ತಿನ ಪರಿಚಯವಿಲ್ಲದೆ ಅಪದ್ಧ ಧ್ವನಿಯಲ್ಲಿ 'ವಿದ್ಯೆಯಿಲ್ಲ, ಬುದ್ಧಿಯಿಲ್ಲ; ಕಾಯೋ ದೇವನೇ' ಎಂದು ಕಿರಚುತ್ತಿರುವ ಬಾಲಕರ ಗುಂಪು ಎಂಬ ಕಲ್ಪನೆ ಒಂದು ಕಾಲಕ್ಕೆ ಇತ್ತು. ಇಂದು ಅಂತಹ ಸ್ಥಿತಿ ದೂರಾಗಿರುವುದು ಸಂತೋಷದ ಮಾತು. ನಮ್ಮ ಸಂತಸ ಇನ್ನಿಷ್ಟು ಹೆಚ್ಚುವುದಕ್ಕೆ ನಮ್ಮ ಮುನ್ನಡೆ ಇನ್ನಿಷ್ಟು ತೀವ್ರವಾಗುವುದಕ್ಕೆ ನಮ್ಮ ಪ್ರಾಥಮಿಕ ಶಿಕ್ಷಣವು ಇನ್ನೂ ಮುಂದುವರಿಯಬೇಕಾಗಿದೆ.

ಹಿಂದೆ ನಮ್ಮ ನಾಡಿನಲ್ಲಿ ಮಠದ ಅಯ್ಯನವರ ಸಾಲೆಗಳಿದ್ದವು. ಪ್ರತಿ ನಾಲ್ಕುನೂರು ಜನರಿಗೆ ಒಂದರಂತೆ ಸಾಲೆಗಳು ಇದ್ದವೆಂದೂ ಈಗಿನಕಿಂತ ಹೆಚ್ಚು ಜನರಿಗೆ ಓದುಬರೆಹ ಗೊತ್ತಿತ್ತೆಂದೂ ಗೊತ್ತಿದ್ದವರು ಲೆಕ್ಕಮಾಡಿ ಹೇಳಿದ್ದಾರೆ. ಇಂದಿನ ಲೆಕ್ಕವನ್ನು ಸ್ವಲ್ಪ ಕೇಳುವಿರಾ?

ಇಂದು ನಮ್ಮ ದೇಶದಲ್ಲಿ ಸಾಲೆಗೆ ಹೋಗುವ ಬಾಲಕರ ಸಂಖ್ಯೆ ನೂರಕ್ಕೆ ಹದಿನಾಲ್ಕರಷ್ಟು ಇದೆಯಂತೆ. 'ಸಾಲೆಗೆ ಹೋಗುವವರು' ಎಂದು ಹೇಳಿದ ಕೂಡಲೆ 'ಪೂರ್ಣ ಓದು ಬರೆಹ ಬಲ್ಲವರು' ಎಂಬರ್ಥವಲ್ಲ. ಬಾಲಕರ ವರ್ಗಕ್ಕೆ ಸೇರಿದ ನೂರುಜನ ವಿದ್ಯಾರ್ಥಿಗಳಲ್ಲಿ ೨೭% ರಷ್ಟು ಬಾಲಕರು ೧೩% ರಷ್ಟು ಬಾಲಕಿಯರು ನಾಲ್ಕನೆ ಇಯತ್ತೆಯನ್ನು ಮುಟ್ಟುವರಂತೆ. ಸಾಲೆಗೆ ಹೋಗುವ ಬಾಲಕರ ಸಂಖ್ಯೆಯ ಪ್ರಮಾಣ ನಮ್ಮಲ್ಲಿ ಮೊದಲೇ ಕಡಿಮೆ. ಹೋದವರಲ್ಲಿ ತೀರ ಕಡಿಮೆ ಜನರು 'ಅಕ್ಕರಿಗ' (ಓದುಬರೆಹ ಬಲ್ಲವರೆಂಬ ಅರ್ಥದಲ್ಲಿ ಈ ಪದವನ್ನು ಉಪಯೋಗಿಸಿದ್ದೇನೆ) ರಾಗುತ್ತಾರೆ. ನಮ್ಮ ಶಿಕ್ಷಣದಲ್ಲಿ ಹೆಚ್ಚಾದ 'ಅಪವ್ಯಯ' (wastage) ಇದೆಯೆಂದು ತಿಳಿಯುತ್ತಿದೆ. ಅಕ್ಕರಿಗರ ಸಂಖ್ಯೆ ನಮ್ಮ ದೇಶದಲ್ಲಿ ೧೮೮೧ರಲ್ಲಿ ೩.೫% ಇತ್ತು. ೧೯೫೧ರಲ್ಲಿ ಅದು ೬೦% ರಷ್ಟು ಆಯಿತು. ಅಂದರೆ ಐವತ್ತು ವರುಷಗಳಲ್ಲಿ ಅಕ್ಕರಿಗರ ಸಂಖ್ಯೆ ನೂರಕ್ಕೆ ೪.೫ ರಷ್ಟು ಮಾತ್ರ ಹೆಚ್ಚು ಜನರಂತೆ ಆಯಿತು. ಈ ಸಂಖ್ಯೆಯೊಂದಿಗೆ ಬೇರೆ ದೇಶಗಳ ಸಂಖ್ಯೆಯನ್ನು ಹೋಲಿಸಿ ನೋಡೋಣ. ಇಪ್ಪತ್ತು ವರುಷಗಳಲ್ಲಿ ರಶಿಯಾ ದೇಶದಲ್ಲಿ ಅಕ್ಕರಿಗರ ಸಂಖ್ಯೆ ಎಪ್ಪತ್ತರಷ್ಟು ಹೆಚ್ಚಿದೆ. ಫಿಲಿಫೈನ್ಸ್ ದ್ವೀಪದಲ್ಲಿ ೪೦ ವರುಷಗಳಲ್ಲಿ ೫೦ರಷ್ಟು ಹೆಚ್ಚಿದೆ. ನಮ್ಮ ಶಿಕ್ಷಣದ ಪ್ರಸಾರದ ಮಂದಗತಿ ಇದರಿಂದ ತಿಳಿದುಬರುತ್ತಿದೆ. ನಮ್ಮ ಶಿಕ್ಷಣ ಖಾತೆಗಳು ಆರಂಭವಾದ ಕಾಲದಲ್ಲಿ ಒಂದು ತತ್ತ್ವವನ್ನು ಅನುಸರಿಸಲಾಯಿತು. ಅದೆಂದರೆ ಮುಂದುವರಿದ ಕೆಲವರಿಗೆ ಶಿಕ್ಷಣ ಕೊಟ್ಟರೆ ಆ ಶಿಕ್ಷಣವು ಕೆಳಕ್ಕೆ ಇಳಿದು ಸಮಾಜದಲ್ಲಿ ಪ್ರಸಾರವಾಗುವುದು ಎಂಬುದು. ಇದಕ್ಕೆ 'Filteration Theory' ಎಂದು ಹೆಸರು. ಆದರೆ ಈ ತತ್ತ್ವ ಸರಿಯಾದುದಲ್ಲವೆಂದು ಮುಂದೆ ಸಿದ್ಧವಾಯಿತು. ಅಂತೆಯೆ ಗೋಖಲೆಯವರು ೧೯೧೦ರಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಸೂಚಿಸಿದರು. ಈಜಿಗೆ ಈ ತತ್ತ್ವ ಕೆಲವು ಊರುಗಳಲ್ಲಿ ರೂಢಿಯಲ್ಲಿ ಬಂದಿದೆ. ವಿಶಾಲವಾದ ಹಾಗೂ ಬಡತನ ಮೂಢತನಗಳಿಂದ ಕೂಡಿದ ನಮ್ಮ ದೇಶದಲ್ಲಿ 'ನಿರಕ್ಷರ'ದ ಸಮಸ್ಯೆ ಗಂಭೀರವಾಗಿದೆ. ನಾಡಿನ ಮುಂದಾಳುಗಳು ಆ ಸಮಸ್ಯೆಯನ್ನು ಎದುರಿಸಬೇಕಾಗಿದೆ. ನಮ್ಮ ಮಟ್ಟಿಗೆ ಹೇಳಬೇಕಾದರೆ ನಮ್ಮ ಪ್ರಾಥಮಿಕ ಶಾಲೆಗಳು ಬಾಲಕರಿಗೆ ಹೆಚ್ಚು ಆಕರ್ಷಕವಾಗುವಂತೆ ರೂಪುಗೊಂಡಲ್ಲಿ ಆ ಸಮಸ್ಯೆಯನ್ನು ನಾವು ಸ್ವಲ್ಪಮಟ್ಟಿಗಾದರೂ

ಕಡಿಮೆಮಾಡಿದಂತೆ ಆಗಬಹುದು. ಇಂದು ಪ್ರಾಥಮಿಕ ಶಾಲೆಗಳಲ್ಲಿ ಒಬ್ಬ ಬಾಲಕನಿಗಾಗಿ ವರುಷಕ್ಕೆ ೮ ರೂಪಾಯಿಗಳ ಬಾಲಕೆಗಾಗಿ ೧೦ ರೂಪಾಯಿಗಳ ಖರ್ಚು ಬರುವದೆಂದು ತಿಳಿಯುತ್ತದೆ. ಹೀಗಿದ್ದು ನಮ್ಮ ಸಮಸ್ಯೆ ಅದೇಕೆ ಭೀಕರವಾಗಿ ಉಳಿಯಬೇಕೆಂಬುದನ್ನು ನಾವು ವಿಚಾರಿಸಬೇಕಾಗಿದೆ. ಒತ್ತಾಯದ ಪ್ರಾಥಮಿಕ ಶಿಕ್ಷಣ ಸಂಪೂರ್ಣವಾಗಿ ರೂಢಿಯಲ್ಲಿ ಬರುವ ವರೆಗೆ ನಾವು ಕೈಕಟ್ಟಿಕೊಂಡು ಕೂಡದೆ ಹೆಣಗಬೇಕಾಗಿದೆ. ಅದಕ್ಕಾಗಿ ಕೆಲವು ಸೂಚನೆಗಳನ್ನು ಮಾಡಬಹುದೇ?

ಬಾಲಕರು, ಪಾಲಕರು, ಬೋಧಕರು ಎಂಬ ತ್ರಿಕೋಣದಲ್ಲಿ ಹೊಂದಿಕೆ ಕಂಡು ಬಂದಾಗಲೇ ನಮ್ಮ ಶಿಕ್ಷಣದ ಪ್ರಗತಿಯಾಗುವುದೆಂದು ನಾನು ತಿಳಿಯುತ್ತೇನೆ. ನಮ್ಮ ಪಾಲಕರು 'ಕಾಡಾಟ'ವನ್ನು ತಪ್ಪಿಸುವದಕ್ಕಾಗಿ ಮಕ್ಕಳನ್ನು ಸಾಲೆಗೆ ಕಳಿಸುವ ಮನೋವೃತ್ತಿಯನ್ನು ಬಿಟ್ಟುಕೊಡಬೇಕು. ಪಾಪ, ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ಸ್ವಂತದ ಕಾಡಾಟಗಳೆಷ್ಟೋ ಇರುತ್ತವೆ. ಅವರು ಪಾಲಕರ ಭಾರವನ್ನು ಹಗುರು ಮಾಡುವ ಮತ್ತೊಂದು ಹೊರೆಯನ್ನೇಕೆ ಹೊರಬೇಕು? ಇನ್ನು ಶಿಕ್ಷಣ ವಿಚಾರ. ಪ್ರಾಥಮಿಕ ಶಾಲೆಯ ಶಿಕ್ಷಕನು ಬಾಲಕರ ಒಡನಾಡಿಯಾಗಿರಬೇಕು ಬಾಲಕರಲ್ಲಿ ಒಂದಾಗಿ ಬೆರೆಯುವ ಜಾಣ್ಮೆ ಅವನಿಗಿರಬೇಕು. ಬಾಲಕನಿಗೆ ಶಾಲೆಯು ಒಂದು ಕೃತ್ರಿಮ ವಾತಾವರಣದ ಬಂಧನದಂತೆ ಅನಿಸದಿದ್ದರೆ ಅವನಲ್ಲಿ ಸ್ವಾಭಾವಿಕವಾಗಿಯೇ ಕಲಿಯುವ ಲವಲವಿಕೆಯುಂಟಾಗುತ್ತದೆ. ಅದಕ್ಕಾಗಿ ನಮ್ಮ ಮನೆ ಹಾಗೂ ಮಠಗಳಲ್ಲಿಯ ವಾತಾವರಣಗಳ ಅಂತರ ಅದಷ್ಟು ಕಡಮೆಯಾಗಬೇಕು. ಬಾಲಕನ ವ್ಯಕ್ತಿತ್ವ ವಿಕಾಸಕ್ಕೆ ಸರಿಯಾದ ಹಾದಿ ಮನೆ-ಮಠಗಳೆರಡರಲ್ಲೂ ದೊರೆಯಬೇಕು. 'ಸಿರಿವಂತರ ಆವರಣದಲ್ಲಿದ್ದೂ ಕೆಲವು ಹುಡುಗರಿಗೆ ಬಡತನದ ಬವಣೆ ತಪ್ಪಿಲ್ಲ' ಎಂಬರ್ಥದ ಹೇಳಿಕೆಯೊಂದು ನಿಮ್ಮ ಸಾಲೆಯ ವರದಿಯಲ್ಲಿದೆ. ಬಡತನದ ಬವಣೆಯನ್ನು ಎದುರಿಸಿಯೂ ನಮ್ಮ ಶಿಕ್ಷಣ ಮುಂದುವರಿಯಬೇಕಾಗಿದೆ. ನಿಮ್ಮ ಶಾಲೆಯು ಬಡವರನ್ನು, ಶಿಕ್ಷಣದಲ್ಲಿ ಹಿಂದುಳಿದವರನ್ನು ಇನ್ನೂ ಹೆಚ್ಚಾಗಿ ಆಕರ್ಷಿಸಲಿ. ನಮ್ಮ ನಾಡಿನಲ್ಲಿ ಪ್ರಾಥಮಿಕ ಶಿಕ್ಷಣವು ಒತ್ತಾಯದಿಂದಲೇ ಯಶಸ್ವಿಯಾಗುವುದು, ಎಂಬ ಹೇಳಿಕೆಯನ್ನು ನಿಮ್ಮ ಶಾಲೆಯು ತನ್ನ ಆಕರ್ಷಕವಾದ ಶಿಕ್ಷಣಪದ್ಧತಿಯ ಮೂಲಕ ಕೆಲವಂಶದಿಂದಾದರೂ ಅಲ್ಲಗೊಳಿಸಲಿ. ಹಾಗೆ ಮಾಡುವ ಜಾಣ್ಮೆ ನಿಮ್ಮ ಹಿರಿಯಯ್ಯನವರಲ್ಲಿ ಇದೆಯೆಂದು (ಅವರ ಶಿಕ್ಷಕನಾದ) ನಾನು ಕಂಡುಕೊಂಡಿದ್ದೇನೆ.

ವ್ಯವಸ್ಥಿತವಾಗಿ ಯಶಸ್ವಿಯಾಗಿ ಪೌಢ ಶಿಕ್ಷಣಾಲಯಗಳನ್ನು ನಡೆಸುತ್ತಿರುವ ಕ. ಎ. ಬೋರ್ಡು ಪ್ರಾಥಮಿಕ ಶಾಲೆಗೂ ತನ್ನ ಲಕ್ಷ್ಯ ಪೂರೈಸಿದ್ದಕ್ಕಾಗಿ ಬೋರ್ಡಿನ ಚಾಲಕರನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಕೊನೆಗೆ ತಮ್ಮೆಲ್ಲರನ್ನೂ ಅಭಿವಂದಿಸುತ್ತೇನೆ.

ನಮ್ಮ ಶಿಕ್ಷಣದ ಅಡಿಗಲ್ಲು ಭದ್ರವಾಗಲಿ. ನಮ್ಮ ನಾಡಿಗೆ ಮುಂಗಳವಾಗಲಿ. ಸಿರಿಗನ್ನಡನಾಡು ಸಿರಿಯ ಸೊಸೆ ಸರಸತಿಯ ಬೀಡೂ ಆಹುದೆಂಬುದನ್ನು ತೋರಿಸಲಿ. ಸಿರಿಗನ್ನಡ ಬಾಳಲಿ; ಬೆಳೆಯಲಿ.

—ಸ. ಸ. ಮಾಳವಾಡ

ಶಿಕ್ಷಕನ ದೈವ

'ಶಿಕ್ಷಣವು ರಾಷ್ಟ್ರದ ಪ್ರಗತಿಯ ಮಹತ್ವದ ಸಾಧನವು. ಮತ್ತು ಭಾರತದ ಯುದ್ಧಾನಂತರದ ಪ್ರಗತಿಗೆ ಶಿಕ್ಷಣವ್ಯವಸ್ಥೆಯು ಅನುಕೂಲವಾಗಬೇಕಾದರೆ ಅದರಲ್ಲಿ ಅಮೂಲಾಗ್ರ ಬದಲಾವಣೆಯಾಗಲೇಬೇಕು.' ಈಜಿಗೆ ಜರುಗಿದ ಶೈಕ್ಷಣಿಕ ಸಮ್ಮೇಲನಗಳ ಮತ್ತು ವಿಶ್ವವಿದ್ಯಾನಿಲಯಗಳ ಪದವೀದಾನ ಸಮಾರಂಭಗಳ ಅಧ್ಯಕ್ಷೀಯ ಭಾಷಣದಲ್ಲಿ ಇದೇ ಮಾತು ಸಾಮಾನ್ಯವಾಗಿ ವಿವೇಚಿಸಲ್ಪಟ್ಟಿರುವದು. ಮತ್ತು ಇವುಗಳಲ್ಲಿ ಚರ್ಚಿಸಲ್ಪಟ್ಟ ಹಲವು ಶೈಕ್ಷಣಿಕ ವಿಷಯಗಳಲ್ಲಿ 'ಶಿಕ್ಷಕನ ದೈವಗತಿ'ಯು ಎಲ್ಲಕ್ಕೂ ಹೆಚ್ಚು ಲಕ್ಷ್ಯವನ್ನು ಆಕರ್ಷಿಸಿಕೊಂಡಿರುವದು. (ದಿಲ್ಲಿಯ ವಿಶ್ವವಿದ್ಯಾನಿಲಯದ ವೈಸ್ ಚಾನ್ಸೆಲರರಾದ) ಸರ್ ಮೌರಿಸ್ ಗ್ವಾಯರರವರು ಶಿಕ್ಷಕರು ಎಂಥ ಅಪಮಾನಕರವಾದ ಹಾಗೂ ಅಸಹ್ಯವಾದ ಅವಸ್ಥೆಯಲ್ಲಿ ಜೀನಿರ್ವಾಹಕ್ಕಾಗಿ ದುಡಿಯಬೇಕಾಗಿರುವದೆಂಬುದನ್ನು ವಿವರಿಸಿರುವರು. ಮೊನ್ನೆ ಕಾನಪುರದಲ್ಲಿ ಕೂಡಿದ ಅಖಿಲಭಾರತೀಯ ಶಿಕ್ಷಕರ ಸಮ್ಮೇಲನದ ಅಧ್ಯಕ್ಷರಾಗಿದ್ದ ಸರದಾರ ಗಾಣಿಕ್ಕರರವರೂ ಕೂಡ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಇವೇ ಉದ್ಗಾರಗಳನ್ನೇ ಪ್ರತಿಧ್ವನಿಗೊಳಿಸಿದರು. ಈ ಟೀಕೆಯು ಸಾಧಾರವಾದುದು. ಯಾಕಂದರೆ, ಭಾರತದ ಶಿಕ್ಷಕವೃತ್ತಿಗೆ ಯೋಗ್ಯವಾದ ಮಾನ್ಯತೆಯು ದೊರೆಯದಿದ್ದರೆ ಯುದ್ಧಾನಂತರದ ಶೈಕ್ಷಣಿಕ ಕಾರ್ಯಕ್ರಮಗಳು ಯಶಸ್ವಿಯಾಗಬಹುದೆಂದು ಆಶಿಸುವಂತಿಲ್ಲ. ಹಿಂದಿನ ಕಾಲದಲ್ಲಿ ಶಿಕ್ಷಕರ ಪಕ್ಷವನ್ನು ಎತ್ತಿಹಿಡಿಯುವ ಎಷ್ಟೋ ಮಾತುಗಳು ಕೇಳಿಬಂದಿರುವವು. ಸದ್ಯಕ್ಕೆ ಶಬ್ದವಷ್ಟೇ ಸಾಲದು. ಭಾರತದೇಶದ ಪ್ರಕೃತದ ತೀರ ನಿರಾಶಾಜನಕವಾದ ಶೈಕ್ಷಣಿಕ ವ್ಯವಸ್ಥೆಯನ್ನು ಸುಧಾರಿಸುವುದಕ್ಕೆ ಕೆಲವೊಂದು ಪ್ರತ್ಯಕ್ಷ ಕಾರ್ಯವನ್ನು ಕೈಕೊಳ್ಳಲೇಬೇಕಾಗಿದೆ.

ಶಿಕ್ಷಕವೃತ್ತಿಗೆ ಹಿಂದಿನ ಕಾಲದಲ್ಲಿದ್ದ ಸನ್ಮಾನ್ಯವಾದ ಸ್ಥಾನವನ್ನು ಪುನಃ ದೊರಕಿಸಿಕೊಟ್ಟರೆ ಭಿನ್ನ ಭಿನ್ನ ಯೋಗ್ಯತೆಯ ಹೆಂಗುಸರೂ ಗಂಡುಸರೂ ಇತ್ತ ಆಕರ್ಷಿಸಲ್ಪಡುವರು. ಎಷ್ಟೋ ವರ್ಷಗಳ ವರೆಗೆ ಈ ವೃತ್ತಿಯಲ್ಲಿದ್ದವರು ಭ್ರಮನಿರಸನವಾದವರೂ ಅಸಂತುಷ್ಟರೂ ಆಗಿದ್ದರು. ಯೋಗ್ಯವಾದ ಶಿಕ್ಷಣಕ್ಕೆ ಯೋಗ್ಯತೆಯುಳ್ಳ ಶಿಕ್ಷಕರೇ ಬೇಕು. ಶಿಕ್ಷಣದ ಸರ್ವಸ್ವವೆನಿಸುವ ಶಿಕ್ಷಕನಲ್ಲಿ ಜೈತನ್ಯವನ್ನು ಹುಟ್ಟಿಸುವ ಧಾರಾವಾಹಿಯಾದ ಪ್ರಯತ್ನವನಡೆಯದಿರುವವರೆಗೆ, ಭಾರತೀಯ ಸರ್ವಸಾಮಾನ್ಯ ವಿದ್ಯಾರ್ಥಿಗಳ ಪುಸ್ತಕೀಯ ಜ್ಞಾನದಿಂದಲೇ ತೃಪ್ತಿಹೊಂದುವ ಮನೋವೃತ್ತಿ ಮತ್ತು ಲೇಖೀ ಪರೀಕ್ಷಾಪದ್ಧತಿಯ ದೋಷ ಇವುಗಳನ್ನು ಎತ್ತಿತೋರಿಸುವದರಲ್ಲಿ ಏನೂ ಅರ್ಥವಿಲ್ಲ. ಪರದೇಶದಲ್ಲಿಯ ಕೆಲವು ಶಿಕ್ಷಣ ಕ್ರಮಗಳು ಹೆಚ್ಚಿನ ತರಗತಿಯವಾಗಿರುವವು. ಯಾಕಂದರೆ ಆ ತಮ್ಮ ವೃತ್ತಿಗೆ ಜೀವನವನ್ನು ಅರ್ಪಣ ಮಾಡಿದವರು ಶಿಕ್ಷಣ ಕೊಡುತ್ತಿರುವರು. ಭಾರತದೇಶದ ಶಿಕ್ಷಕವೃತ್ತಿಯಲ್ಲಿ ಇಂಥ ಜನರಿರುವರೆಂದು ಎದೆತಟ್ಟಿಕೊಂಡು ಹೇಳಬಹುದಾದ ಸ್ಥಿತಿಯುಂಟಾದಾಗಲೇ ಈ ದೇಶದ ಶಿಕ್ಷಣಕ್ರಮದಿಂದ ಏನಾದರೂ ಪ್ರಯೋಜನವಾಗಲು ಪ್ರಾರಂಭವಾಗಬಹುದು. ಭಾರತದ ಪ್ರಗತಿಯಲ್ಲಿ ಆಸಕ್ತಿಯುಳ್ಳವರು ಇಂಥ ಶಿಕ್ಷಕರದೊಂದು ಪ್ರಬಲವಾದ ಸೈನ್ಯವನ್ನು ಕೂಡಿಸಲಿ. ಆಗಲೇ ಈ ದೇಶವು ನವಯುಗದ ಹೊಸ್ತಿಲದಲ್ಲಿ ಹೆಜ್ಜೆಯನ್ನಿಡುವದು.

(೬-೧೧-೧೯೪೫ನೆಯ ದಿನದ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯೊಳಗಿನ ಲೇಖನದ ಆಧಾರದಿಂದ.)

ಶಿಕ್ಷಣವೂ ಅದರ ವ್ಯಾಪಕತೆಯೂ

ಲೇ— ಶ್ರೀ. ಎಸ್. ಜಿ. ಬೈಜವಾಳ, ಎಂ. ಎ.,

೧) ಶಿಕ್ಷಣವೆಂದರೇನು? ಸಾಮಾನ್ಯವಾಗಿ ಶಿಕ್ಷಣವೆಂದರೆ ಜ್ಞಾನವನ್ನು ಪಡೆದವನು ಅದನ್ನು ಬೇರೊಬ್ಬನಿಗೆ ಕೊಡುವದು; ಇದಕ್ಕೆ ಕಲಿಸುವದು ಎಂದೂ ಹೇಳಬಹುದು. ಈ ಶಿಕ್ಷಣವು ಕಲಿಸುವ ಪದ್ಧತಿ, ಕಲಯುವವನ ಆಸ್ಥೆ, ಸುತ್ತುಮುತ್ತಲಿನ ಪರಿಸ್ಥಿತಿ, ಸಾಧನ, ಉಪಕರಣಗಳು, ದೃಷ್ಟಾಂತಗಳು, ಕಥನ ಕೌಶಲ್ಯ, ಕಲಿಸುವ ಹಿಡಿತ ಮುಂತಾದ ಹಲವು ಸಂಗತಿಗಳನ್ನು ಅವಲಂಬಿಸುವದು.

ಕಲಿಸುವದೆಂದರೆ ತಾನು ಮಾಡಿದಂತೆ ಎರಡನೆಯವರಿಗೆ ಮಾಡಲಿಕ್ಕೆ ಹೇಳುವದು ಅಥವಾ ಹಾಗೆ ಮಾಡಹಚ್ಚುವದು ಎಂದು ಸಕೃದ್ದರ್ಶನಕ್ಕೆ ತೋರಬಹುದು. "ಮಾಡಬಲ್ಲವನು ಮಾಡಿ ತೋರಿಸುವನು; ಮಾಡಲರಿಯದವನು ಪರರಿಗೆ ಹೇಳಹೋಗುವನು" ಎಂದು ಬರ್ನಾರ್ಡ ಶಾ ಇವರು ಚಿತ್ರಕಲಾ ಶಿಕ್ಷಕನ ಯೋಗ್ಯತೆಯನ್ನು ಕುರಿತು ನಗೆಮಾತುಗಳನ್ನು ಆಡಿದ್ದಾರೆ. ಹೇಗೆ ಶಾಸ್ತ್ರವಾಕ್ಯಗಳ ವ್ಯಾಖ್ಯಾನದಿಂದ ಕಲಾಶಿಕ್ಷಣವೆ ಸಾಧಿಸಲಾರದೊ ಹಾಗೆ ಕಲಿಸುವ ಕಲೆಯು ಹೀಗೆ ಹಾಗೆ ಮಾತಾಡಿ ತಿಳಿಸಿಕೊಡುವಷ್ಟು ಸುಲಭವಾಗಿಲ್ಲ. ಹಿಂದೊಂದು ಕಾಲದಲ್ಲಿ ಇಂಗ್ಲಂಡದಲ್ಲಿಯ ಶಾಲೆಗಳ ವ್ಯವಸ್ಥಾಪಕರು ವಿದ್ಯಾರ್ಥಿಗಳ ಕೃತಿನೈಪುಣ್ಯವನ್ನು ಉತ್ತಮ ರೀತಿಯಿಂದ ಸಾಧಿಸಬೇಕೆಂಬ ಉತ್ಸಾಹದಿಂದ ಪ್ರೇರಿತರಾಗಿ ಉತ್ತಮೋತ್ತಮ ಬಡಿಗರು, ಚಿತ್ರಕಾರರು, ಮುಂತಾದ ಕಲಾಕೋವಿದರನ್ನು ಶಿಕ್ಷಕರನ್ನಾಗಿ ನಿಯಮಿಸಿದರು; ಮತ್ತು ಅವರಿಂದ ವಿದ್ಯಾರ್ಥಿಗಳಲ್ಲಿ ಮೇಲ್ತರದ ಪ್ರಗತಿಯನ್ನು ಅಪೇಕ್ಷಿಸಿದರು. ಇಂತಹ ಕಲಾವಿದರು ಬೇರೆ ಬೇರೆ ಕಲಾಕೃತಿಗಳನ್ನು ಉತ್ತಮೋತ್ತಮವಾಗಿ ಮಾಡಿ ತೋರಿಸಿ ತಮ್ಮ ವಿದ್ಯಾರ್ಥಿಗಳನ್ನು ಜಕಿತಗೊಳಿಸುತ್ತಿದ್ದರು; ಇನ್ನೂ ಒಂದು ಹೆಜ್ಜೆ ಮುಂದೆ ಎಂದರೆ, ಅವರಲ್ಲಿ ಆ ಕಲೆಗಳ ಬಗ್ಗೆ ಆಸ್ಥೆಯನ್ನು ಹುಟ್ಟಿಸುತ್ತಿದ್ದರು. ಸರಿ. ಆದರೆ ಆಯಾ ಕೃತಿಗಳನ್ನು ತಾವೇ ರಚಿಸುವ ಬೇರೆ ಬೇರೆ ಮೆಟ್ಟನ್ನೂ ಕ್ರಮವನ್ನೂ ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ತಿಳಿಸಿಕೊಡಲು ಅವರಿಗೆ ಸಾಧ್ಯವಾಗಲಿಲ್ಲ. ಬಡಿಗನಲ್ಲಿ ಬಡಿಗತನದ ಕೌಶಲ್ಯವೂ ಚಿತ್ರಕಾರನಲ್ಲಿ ಚಿತ್ರಿಸುವ ಕೈವಾಡವೂ ಶಿಲ್ಪಿಗನಲ್ಲಿ ಕೆತ್ತುವ ಕಲೆಯೂ ಹುದುಗಿಕೊಂಡಿರುವಂತೆ ಶಿಕ್ಷಕನಲ್ಲಿ ಕಲಿಸುವ ಹತೋಟಿಯು ವಿದ್ಯಾರ್ಥಿಗಳು ಕಲಿಯುವಂತೆ ಮಾಡುವ ಸ್ವಾಭಾವಿಕ ಶಕ್ತಿಯು ಅಡಗಿರುವದೆಂದು ಹೇಳಬಹುದು. ಶಿಕ್ಷಣದ ಧ್ಯೇಯವು ವಿದ್ಯಾರ್ಥಿಗಳಲ್ಲಿ ವಿಷಯಗಳ ಉತ್ತಮೋತ್ತಮ ಸಂಸ್ಕಾರಗಳನ್ನು ಒಡಮೂಡಿಸುವದು ಆಗಿದೆಯೇ ಹೊರತು ಅದರ ಉಪಯುಕ್ತತೆಯನ್ನಾಗಲಿ ಉತ್ಕೃಷ್ಟತೆಯನ್ನಾಗಿ ತಿಳಿಸಿಕೊಡುವದಿರುವದಿಲ್ಲ. ಯಾವನೊಬ್ಬನು ಯಾವುದೊಂದು ವಿಷಯದಲ್ಲಿ ಪಾರಂಗತನಾದ ಮಾತ್ರಕ್ಕೆ ಅವನು ಆ ವಿಷಯವನ್ನು ಚೆನ್ನಾಗಿ ಕಲಿಸಬಹುದೆಂದು ಆಶಿಸಲು ಸಾಧ್ಯವಿಲ್ಲ. ತಾನು ತಿಳಿಯುವುದರ, ತಿಳಿದುಕೊಂಡದ್ದನ್ನು ಪರರಿಗೆ ತಿಳಿಸಿಕೊಡುವದರ ನಡುವೆ ಒಂದು ಸಂಕಲೆ (ಸರಪಳಿಯ ಕೊಂಡಿ)ಯಿದೆ. ಅದಕ್ಕೇ 'ಶಿಕ್ಷಣಕಲೆ'ಯೆಂದು ಹೆಸರು.

ಮಾನಸಶಾಸ್ತ್ರದ ಅಭ್ಯಾಸದ ಬಲದಿಂದ ಕಾಲಕಾಲಕ್ಕೆ ಶಿಕ್ಷಣದ ದಿಶೆಯು ಬದಲಾಗುತ್ತ ಬಂದಿತು. ಜೀವನದ ಧ್ಯೇಯಕ್ಕೂ ಶಿಕ್ಷಣದ ಗುರಿಗೂ ಸಾಮರಸ್ಯವುಂಟಾಯಿತು. ಬಾಹ್ಯ ಜಗತ್ತಿನಲ್ಲಿಯ ದಿನದ ಕಾರ್ಯಕಲಾಪಗಳಿಗೂ ಶಾಲೆ ಮುಂತಾದ ಶೈಕ್ಷಣಿಕ ಸಂಸ್ಥೆಗಳ ವಾತಾವರಣಕ್ಕೂ ವ್ಯತ್ಯಾಸವು ಕಡಿಮೆಯಾಗಿ ಸಾದೃಶ್ಯವು ಹೆಚ್ಚುತ್ತ ಬಂದಿತು. ಶಿಕ್ಷಣವು ಉಳಿದ ಕಲೆಗಳಂತೆಯೇ ಒಂದು ವಿಶಿಷ್ಟ ಕಲೆಯೆಂದು ಆದರವನ್ನು ಪಡೆಯಿತು. ಆ ಕಲಾಸಿದ್ಧಿಗೆ ಬೇಕಾಗುವ ಸಂಶೋಧನ, ಪ್ರಯೋಗ, ಪ್ರಯತ್ನಗಳು ಹೆಚ್ಚು ಹೆಚ್ಚಾಗಿ ನಡೆಯತೊಡಗಿದುವು.

ಪ್ರಯತ್ನ, ಪ್ರಯೋಗ ಮುಂತಾದ ಸಾಧನಗಳನ್ನು ಹೆಚ್ಚು ಹೆಚ್ಚು ಆಕರ್ಷಿಸುತ್ತ ಹೋದಹಾಗೆ, ಶಿಕ್ಷಣಶಾಸ್ತ್ರವು ಸರ್ವತೋಮುಖವಾಗಿ ಬೆಳೆಯುತ್ತ ಸಾಗಿತು. ಶಿಕ್ಷಣತಜ್ಞರು ತಮ್ಮ ತಮ್ಮ ಶೋಧಗಳನ್ನು ವ್ಯವಹಾರಕ್ಷೇತ್ರದಲ್ಲಿ ಧಾರಾಳವಾಗಿ ಬೀರತೊಡಗಿದರು. ಸಾಮೂಹಿಕ ಮತ್ತು ವೈಯಕ್ತಿಕ ಶಿಕ್ಷಣಗಳ ಲೋಪದೋಷಗಳನ್ನೂ ವಿಶಿಷ್ಟ ಲಾಭಗಳನ್ನೂ ಕೂಲಂಕಷವಾಗಿ ವಿವೇಚಿಸಿದರು. ಪ್ರಶ್ನೋತ್ತರ ಕಲೆಯನ್ನೂ ದೃಷ್ಟಾಂತಗಳ ಸೌಕರ್ಯವನ್ನೂ ಸಮಯಾನುಸಾರವಾಗಿ ತತ್ಕಾಲಕ್ಕೆ ಚಿತ್ರಿಸುವ ಚಾತುರ್ಯವನ್ನೂ ನಿರೂಪಣ ಶೈಲಿಯನ್ನೂ ಶಿಕ್ಷಕನು ಪಡೆಯುತ್ತ ಹೋದನು. ಆಗ ಶಿಕ್ಷಣದ ಸ್ವರೂಪವು ಕೇವಲ "ಓದು, ಬರೆಹ, ಗಣಿತ" ಇವನ್ನು ಕಲಿಸಿದರಾಯಿತೆಂಬ ಸಂಕುಚಿತ ಕಲ್ಪನೆಯನ್ನು ದಾಟಿ ವಿದ್ಯಾರ್ಥಿಗಳನ್ನು ಉತ್ತಮ ಮಾನವರನ್ನೂ ಸುಸಂಸ್ಕೃತರನ್ನೂ ಮಾಡುವ ವ್ಯಾಪಕಾರ್ಥವನ್ನು ಪಡೆಯಿತು.

ಶಿಕ್ಷಣದ ಸ್ವರೂಪವು ವಿಶಾಲವಾದಂತೆ ಶಿಕ್ಷಕನ ಕಾರ್ಯಕ್ಷೇತ್ರವು ಬೆಳೆಯುತ್ತ ಹೋಯಿತು. ಅದಕ್ಕನುಗುಣವಾಗಿ ಆಧುನಿಕ ಶಿಕ್ಷಣತಂತ್ರವು ಪೂರ್ವಕಾಲದ ತಂತ್ರದಿಂದ ತೀರ ಭಿನ್ನವಾಗುತ್ತ ಸಾಗಿದೆ.

ಬುದ್ಧ, ನಾನಕ, ಕಬೀರ, ಶಂಕರ, ಮಧ್ವ ಮೊದಲಾದ ಮಹೋಪದೇಶಕರಂತೆ ಶಿಕ್ಷಕನು ತನ್ನ ವಿದ್ಯಾರ್ಥಿಗಳಿಗೆ ಆಧ್ಯಾತ್ಮಿಕ ಸ್ಫೂರ್ತಿಯನ್ನು ಕೊಡಲಾರನೆಂದು ಭಾವಿಸುವವರು ಭಾವಿಸಲಿ. ಆದರೆ ಶಿಕ್ಷಣ ತಂತ್ರವನ್ನು ಜನ್ಮಾಗಿ ಅಭ್ಯಾಸ ಮಾಡಿಕೊಂಡು, ತನ್ನ ಶಿಕ್ಷಣ ತಂತ್ರವನ್ನು ಶಿಕ್ಷಣಧ್ಯೇಯಗಳಿಗೆ ಅನುರೂಪವಾಗಿ ಹದಗೊಳಿಸಿಕೊಂಡು, ಉತ್ತಮ ಶಿಕ್ಷಕರು ಕಲಿಸುವದನ್ನು ಮೇಲಿಂದ ಮೇಲೆ ನಿರೀಕ್ಷಿಸಿ ತನ್ನಲ್ಲಿ ತಕ್ಕ ಸುಧಾರಣೆ ಮಾರ್ಪಾಡುಗಳನ್ನು ಮಾಡಿಕೊಂಡ ಒಳ್ಳೆಯ ಶಿಕ್ಷಕನು ಹೆಚ್ಚಿನ ವಿಷಯಜ್ಞಾನವನ್ನೂ ನವನವತೆಯನ್ನೂ ಕಾದುಕೊಳ್ಳುತ್ತಿದ್ದರೆ, ತನ್ನ ವಿದ್ಯಾರ್ಥಿಗಳಲ್ಲಿ ಆಯಾ ವಿಷಯಜ್ಞಾನದ ಮೇಲು ಮಟ್ಟನ್ನು ತೋರಿಸಿಕೊಡಬಲ್ಲವನಾಗುವನೆಂದು ಧಾರಾಳವಾಗಿ ಹೇಳಬಹುದು. ಶಿಕ್ಷಕನು ಯಾವದೇ ವಿಷಯವನ್ನು ಕಲಿಸಿದರೂ ಆ ವಿಷಯದ ಬಗ್ಗೆ ಒಳ್ಳೆಯ ಧೋರಣವನ್ನಿಟ್ಟುಕೊಳ್ಳಬೇಕು; ವಿದ್ಯಾರ್ಥಿಗಳ ಮನಸ್ಸನ್ನು ಆ ವಿಷಯಕ್ಕೆ ಆಕರ್ಷಿಸಿಕೊಳ್ಳಬೇಕು; ಅವರ ದೃಷ್ಟಿಕೋನವು ಸರಿಯಾದ ಗುರಿಯನ್ನು ಹಿಡಿದಿರುವಂತೆ ನೋಡಿಕೊಳ್ಳಬೇಕು; ಆ ಜ್ಞಾನವು ಕೇವಲ ಪುಸ್ತಕೀಯವಾಗಿರದೆ ವ್ಯಾವಹಾರಿಕ ಉಪಯುಕ್ತತೆಗೆ ತಕ್ಕದ್ದಾಗುವಂಥ ಬಾಹ್ಯದ ಮುನ್ನೋಟ (out-look)ವೂ ಇರಬೇಕು; ಮತ್ತು ವಿದ್ಯಾರ್ಥಿಗಳ ಮೇಲೆ ನೈತಿಕ ಪರಿಣಾಮವನ್ನು ಬೀರುತ್ತಿರಬೇಕು. ಈ ಮಹತ್ವದ ಮುದ್ದೆಗಳು ವಿದ್ಯಾರ್ಥಿಗಳಿಗೆ ಶಿಕ್ಷಣದ ದೃಷ್ಟಿಯಲ್ಲಿ ಅತಿಮಹತ್ವವಾದವುಗಳು. ಶಿಕ್ಷಣದ ಇಷ್ಟೊಂದು ವ್ಯಾಪಕವಾದ ಸ್ವರೂಪದ ಯಥಾರ್ಥವಾದ ಕಲ್ಪನೆಯಾಗಬೇಕಾದರೆ ಅದರ ಆವಶ್ಯಕತೆ. ಉದ್ದೇಶ, ವಿಶಿಷ್ಟರೂಪಗಳು ಇವನ್ನೆಲ್ಲ ಬೇರೆ ಬೇರೆಯಾಗಿ ವಿವೇಚಿಸುವದು ಅವಶ್ಯವೆನಿಸುವದು.

೨) ಶಿಕ್ಷಣದ ಆವಶ್ಯಕತೆ:— ಪ್ರಪಂಚದಲ್ಲಿ ಎಂದಿನಿಂದಲೂ ಶಿಕ್ಷಣಕ್ಕೆ ಒಂದು ಮಹತ್ತ್ವದ ಸ್ಥಾನವುಂಟು. ಆಧುನಿಕ ಜೀವನದಲ್ಲಂತೂ ಅದರ ಮಹತ್ತ್ವವು ಇನ್ನೂ ಹೆಚ್ಚಾಗಿದೆ. ಅಂತೆಯೇ ಸಾಮಾಜಿಕ ಜೀವನದಲ್ಲಿ ಶಿಕ್ಷಕನಿಗೆ ಸಲ್ಲುತ್ತಿರುವ ಪ್ರೇಮಾದರಗಳು ಉಳಿದವರಿಗೆ ಸುಲಭವಾಗಿ ಲಭಿಸಲಾರವು. ಶಿಕ್ಷಣಕ್ಕೆ ಇಷ್ಟು ಮಹತ್ತ್ವವು ಏಕೆ ಪ್ರಾಪ್ತವಾಗಿದೆಯೆಂಬುದನ್ನು ನೋಡುವ.

ಒಂದು ದೃಷ್ಟಿಯಿಂದ ಶಿಕ್ಷಣವು ಮಕ್ಕಳ ದೇಹ-ಮನಗಳ ಬೆಳವಣಿಗೆಯನ್ನು ಸಾಧಿಸುವ ಸಾಧನವೆಂದು ತೋರಬಹುದು. ತೋಟಿಗನು ತನ್ನ ಸಸಿಗಳ ಪರಿಪೂರ್ಣ ಬೆಳವಣಿಗೆಗೆ ಯೋಗ್ಯವಾದ ಭೂಮಿಗಳನ್ನು ಹುಡುಕಿ ಅವುಗಳಿಗೆ ಬೇಕಾಗುವ ನೀರು, ಗೊಬ್ಬರ, ಜೋಪಾಸನೆ

ಮೊದಲಾದವುಗಳನ್ನು ಹೇಗೆ ಸರಿಯಾಗಿ ಒದಗಿಸಿಕೊಡುವನೋ ಹಾಗೆಯೆ ಶಿಕ್ಷಕನ ವಿದ್ಯಾರ್ಥಿಗಳನ್ನು ಆರೋಗ್ಯಕರ ವಾತಾವರಣದಲ್ಲಿರಿಸಿ, ಅವರ ಶಾರೀರಿಕ ಮಾನಸಿಕ ಬೆಳವಣಿಗೆಗೆ ಪೋಷಕವಾದ ಆಹಾರ ಮತ್ತು ವ್ಯಾಯಾಮಗಳನ್ನೂ ಸಂಸ್ಕಾರಗಳನ್ನೂ ಒದಗಿಸಬೇಕು. ಸಸ್ಯಾದಿಗಳು ಸರಿಯಾಗಿ ಬೆಳೆಯಬೇಕಾದರೆ ತೋಟಿಗನು ಬಲುಮೆಯನ್ನು ಹೇಗೆ ಮಾಡಕೂಡದೊ, ಹಾಗೆಯೆ ಶಿಕ್ಷಕನು ವಿದ್ಯಾರ್ಥಿಗಳನ್ನು ಒತ್ತಾಯಗೊಳಿಸಿ ಅವರ ಮನಸ್ಸು, ಶರೀರ, ನೀತಿ, ಇವುಗಳ ಬೆಳವಣಿಗೆ, ವಿಕಾಸಗಳನ್ನು ಹದಗೆಡಿಸಬಾರದು. ಕಾಮಿನಿಯಸನ ಅಭಿಪ್ರಾಯದಂತೆ ಜೀವನದಲ್ಲಿ ಯಾವತರದ ಒತ್ತಾಯವೂ ಇರಕೂಡದು. ಮೀನಗಳಿಗೆ ಈಸಲು ಬರುವಂತೆ, ಪಕ್ಷಿಗಳಿಗೆ ಹಾರಲು ಬರುವಂತೆ, ಪ್ರಾಣಿಗಳಿಗೆ ಓಡಲು ಬರುವಂತೆ, ಮಕ್ಕಳು ಸಹಜವಾಗಿ ಜ್ಞಾನವನ್ನು ಪಡೆಯಬೇಕು.

ಶಿಕ್ಷಕನು ಬೇರೆಬೇರೆ ವಿಷಯಗಳಲ್ಲಿ ತನಗೆ ತಿಳಿದ ಕೆಲವು ಭಾಗಗಳನ್ನು ಅಭ್ಯಾಸಮಾಡಲು ಅರಿಸಿಕೊಟ್ಟು, ವಿದ್ಯಾರ್ಥಿಗಳಿಂದ ಕೇವಲ ಕಠೋರತೆಯಿಂದ ಅವುಗಳನ್ನು ಒಪ್ಪಿಸಿಕೊಳ್ಳುವ ಅಧಿಕಾರಿ (Task-master) ಯಾಗಿರದೆ, ತನ್ನ ವಿದ್ಯಾರ್ಥಿಗಳು ಮುಂದಿನ ವಿಕಾಸದ ಮೆಟ್ಟಿಗೆ ಸಿದ್ಧರಾಗುವಂತೆ ಅವರ ಬೆಳವಣಿಗೆಯಲ್ಲಿಯ ಕುರುಹುಗಳನ್ನು ಜಾಗ್ರತೆಯಿಂದ ಕಂಡು ಹಿಡಿಯಲು ಆತುರನಾದ ಉಪದೇಶಕನೂ ಮಾರ್ಗದರ್ಶಿಯೂ ಆಗಿರಬೇಕು. ಹೀಗೆ ಬಾಲ ಬಾಲಿಕೆಯರು ಜಾಣರಾಗಬೇಕಾದರೆ, ಅವರಲ್ಲಿ ಕಲಿಯುವ ಕುತೂಹಲ, ಆಸ್ಥೆ, ಅಭಿರುಚಿ, ಇವು ಸ್ವಾಭಾವಿಕವಾಗಿ ಹುಟ್ಟಿ ಬೆಳೆದುಬರಬೇಕು.

ಆದರೆ ಚಿಕ್ಕಮಕ್ಕಳು ಕೇವಲ ಸಸ್ಯಗಳಲ್ಲವೆಂದೂ, ಅವರು ಮುಂದೆ 'ದೈವತ್ವವನ್ನು ಹೊಂದಬಹುದಾದ ಯೋಗ್ಯತೆಯುಳ್ಳ' ಮನುಷ್ಯ ಜೀವಿಗಳೆಂದೂ ನಾವು ತಿಳಿದಿರಬೇಕಲ್ಲವೆ? ಸಸ್ಯಗಳು ಸಸ್ಯಗಳೇ ಸರಿ. ಅವುಗಳಿಗೆ ಕಲಿಸುವುದು ಸಾಧ್ಯವಿಲ್ಲ. ಬಾಲಬಾಲಿಕೆಯರಿಗೆ ಮನಸ್ಸಿದೆ. ಅವರು ಎಲ್ಲಯುಗಗಳ ಸಂಸ್ಕಾರವನ್ನು ಪಡೆದಿರುವರು. ಅನುಭವವನ್ನು ಸಂಗ್ರಹಿಸಿರುವರು. ಅರ್ಥಾತ್ ಅವರಲ್ಲಿ ಪೂರ್ವ ಸಂಸ್ಕಾರದ ಸಂಬಂಧವುಳ್ಳ ಮನಸ್ಸಿದೆ. ಅವರು ಭವಿಷ್ಯದ ಮುನ್ನೋಟವನ್ನು ಇಣಿಕಿ ನೋಡಬಲ್ಲರು.

ಈ ತೆರದ ಸಾಮಾಜಿಕ ಮತ್ತು ಮಾನಸಿಕ ಸೊತ್ತಿನ, ಮತ್ತು ಪೀಳಿಗೆಯಿಂದ ಪೀಳಿಗೆಗೆ ಇಳಿದು ಬರುವ, ಸಂಸ್ಕಾರದ ಮಹತ್ವವನ್ನು ಅರಿತುಕೊಳ್ಳಲು, ಆ ಸೊತ್ತು ಇಲ್ಲದಿದ್ದರೆ ಯಾವ ಪರಿಸ್ಥಿತಿಯುಂಟಾಗುತ್ತಿತ್ತೆಂಬುದನ್ನು ಕಲ್ಪಿಸುವ. ಮಾನವ ಜೀವನದ ಪ್ರಗತಿಪರವಾದ ಕುಲಗಳು ಈ ಸೊತ್ತಿನ ಲಾಭವನ್ನು ಪಡೆಯದಿದ್ದರೆ, ಅವು ಈ ಜಗತ್ತಿನಿಂದ ತೀವ್ರ ಮಾಯವಾಗುವುವು. ನಮ್ಮ ಸೃಷ್ಟಿಗೆ ಯಾವುದಾದರೊಂದು ಪ್ರಬಲ ಧೂಮಕೇತುವು ಬಂದು ಅಪ್ಪಳಿಸಿದರೆ, ಅದರ ಪರಿಣಾಮವಾಗಿ, ಶೋಧಕ ಬುದ್ಧಿ, ಸ್ಮರಣ, ರೂಢಿ ಮುಂತಾದ ಎಲ್ಲ ಶಕ್ತಿಗಳು ಉಳಿದಾಗ್ಯೂ, ಪೂರ್ವ ಪೀಳಿಗೆಯಿಂದ ದೊರೆತ ಜ್ಞಾನ, ಸಂಪ್ರದಾಯ, ಸಂಸ್ಕಾರಗಳಿಗೆ ಎರವಾದರೆ, ಲಂಡನ ಅಥವಾ ನ್ಯೂಯಾರ್ಕಿನ ಗಿಂಥ ಪಟ್ಟಣಿಗರು ಒಂದು ತಿಂಗಳ ಅವಧಿಯಲ್ಲಿಯೂ ಉಳಿದ ಗ್ರಿಂದಲ್ಲಿಯ ೧೦೦ಕ್ಕೆ ೯೯ ಜನರು ಆರು ತಿಂಗಳಲ್ಲಿಯೂ ಮೃತಪಡುವರೆಂದು ಗ್ರಾಹಾಮ ನಾಲಸರ ಅಭಿಪ್ರಾಯವಿರುವದು.

೩) **ಶಿಕ್ಷಣದ ಉದ್ದೇಶ.** ಶಾಲೆಯೆಂಬ ತೋಟದಲ್ಲಿ ಮಕ್ಕಳನ್ನು ತಂದಿಳಿಸಿ ಮನಬಂದತೆ ಬೆಳೆಯಲು ಅವರನ್ನು ಬಿಟ್ಟು ಬಿಟ್ಟರೆ, ಶಿಕ್ಷಕನ ಹೊಣೆಯು ತೀರಲಿಲ್ಲ. ಅವನು ಮನುಷ್ಯಕೋಟಿಯ ಮಾನಸಿಕ ಮತ್ತು ಆಧ್ಯಾತ್ಮಿಕ ಅನುಭವ ಸಂಪತ್ತಿನ ಅರಿವನ್ನು ತನ್ನ ವಿದ್ಯಾರ್ಥಿಗಳಿಗೆ ಕೊಟ್ಟು ಅದರಲ್ಲಿ ಅವರು ಭಾಗಿಗಳಾಗುವಂತೆ ಮಾಡಬೇಕು.

ಸಂಬಲಸಾಧ್ಯವಾದಷ್ಟು ಕಷ್ಟ ಸಂತಾಪಗಳಿಂದ ದೊರಕಿಸಿದ ಯುಗಯುಗಾಂತರದ ಅನುಭವರಾಶಿಯು ನಮ್ಮ ಮುಂದಿದೆ. ಅದನ್ನು ಐದು ಭಾಗಗಳಾಗಿ ವಿಂಗಡಿಸಬಹುದು:—

(ಅ) ವಸ್ತು-ಗುಣ ಸಂಬಂಧಗಳ ಜ್ಞಾನ (ಶಾಸ್ತ್ರೀಯ ವಿಷಯ)
(ಆ) ಮಾನವಶ್ರೇಷ್ಠರ ಆಶಿ ಆಕಾಂಕ್ಷೆಗಳು (ಸಾಹಿತ್ಯ)
(ಇ) ಸೌಂದರ್ಯಾನುಭವದ ಉದ್ರೇಕದ ಅತ್ಯುನ್ನತ ಅವಸ್ಥೆಗಳು. (ಕಲೆ)
(ಈ) ಸಮಾಜರಚನಾತ್ಮಕ ಪದ್ಧತಿಗಳು. (ಇತಿಹಾಸ, ಪೌರನೀತಿ, ಕಾನೂನು, ಶಾಸನಪದ್ಧತಿ ಮುಂ.)
(ಉ) ಪ್ರಕಟವಾದ ಧರ್ಮಗಳ ಉದ್ಗ್ರಂಥಗಳು. (ಧರ್ಮ)

ಬಾಲಬಾಲಿಕೆಯರು ತಮ್ಮ ಜೀವನದ ತೋಟದಲ್ಲಿ ತಾವೇ ಬೆಳೆದು ಮೇಲ್ಕಾಣಿಸಿದ ಎಲ್ಲ ತರತರದ ಅನುಭವಗಳ ಸಹಾಯವನ್ನು ಪಡೆದು ತಾವು ಜೀವಿಸುವ ಅಲ್ಪಾವಧಿಯಲ್ಲಿಯೇ ಉತ್ಕ್ರಾಂತಿಯನ್ನು ಹೊಂದುವರು; ಅನಾದಿಯಿಂದ ಇಂದಿನವರೆಗಿನ ಮಾನವ ಕುಲದ ಅನುಭವಗಳನ್ನು ಪುನಃ ಅನುಭವಿಸಿ ಸದ್ಯದ ಸುಧಾರಿಸಿದ ಸ್ಥಿತಿಗೆ ಬರುವರು, ಎಂದು ಭಾವಿಸುವದು ತೀರ ಅಸಂಭವನೀಯವಾದ ಮಾತು. ಯಾವ ಶಿಕ್ಷಕನೂ ಅವರಿಂದ ಈ ಬಗೆಯ ಸಂಸ್ಕಾರವನ್ನು ಅಪೇಕ್ಷಿಸಲಾರನು. ಶಿಕ್ಷಕನು ಅವರಿಗೆ ಪೂರ್ವಜರ ಅರಿವನ್ನು ಆನಂದದಿಂದ ಮಾಡಿಕೊಟ್ಟು ಅವರ ಅನುಭವಗಳ ಜ್ಞಾನವನ್ನು ಸಂಗ್ರಹಿಸಿ ತಿಳಿಸಿಕೊಟ್ಟು ಅವನ್ನು ಬೆಳೆಯಿಸಿಕೊಳ್ಳಲು ಪ್ರೋತ್ಸಾಹನಜೇಕಾಗುವದು. ಆದ್ದರಿಂದಲೇ ಶಿಕ್ಷಣದ ವ್ಯಾಖ್ಯೆಯನ್ನು–"ಅವರವರ ಯೋಗ್ಯತೆಗೆ ಅನುಗುಣವಾಗಿ ಅವರವರ ಪೂರ್ವಸಂಸ್ಕಾರದ ಸೊತ್ತಿನಲ್ಲಿ ಪೂರ್ಣಭಾಗಿಗಳಾಗುವಂತೆ ದಾರಿತೋರುವ ಕ್ರಮ" ಎಂದು ನಿಃಸ್ಸಂದೇಹವಾಗಿ ಸಾರಿರುವರು.

ಚಿಕ್ಕ ಮುಕ್ಕಳು ಜ್ಞಾನದ ದೃಷ್ಟಿಯಿಂದ ಅಪೂರ್ಣಾವಸ್ಥೆಯಲ್ಲಿ ಹುಟ್ಟುವದು ನಿಸರ್ಗದ ನಿಯಮವೆಂದು ಹೇಳುವದರಿಂದ ಶಿಕ್ಷಣದ ಆವಶ್ಯಕತೆಯು ಸ್ವಯಂಸಿದ್ಧವೆಂದು ಹೇಳಿದಂತಾಗುವದು. ಶಿಕ್ಷಕನು ತನ್ನ ವಿದ್ಯಾರ್ಥಿಗಳ ಸಮ್ಮತಿಯಲ್ಲಿಯೂ ವಿಶ್ವಾಸದಲ್ಲಿಯೂ ನಂಬುಗೆಯನ್ನಿಟ್ಟು ಆಯಾ ವಿದ್ಯಾರ್ಥಿಗಳ ಗುಣಾವಗುಣಗಳನ್ನು ಜನ್ಮಾಗಿ ಅರಿತುಕೊಳ್ಳುವನು; ಮತ್ತು ಅವರ ಪ್ರಾಗತಿಕ ಬೆಳವಣಿಗೆ–ವಿಕಾಸಗಳ ಬಗ್ಗೆ ಏನೂ ಸಂದೇಹಪಡದೆ ಹೊಸ ಹೊಸ ಅಭಿರುಚಿಗಳನ್ನು ಹುಟ್ಟಿಸಲಿಕ್ಕೂ ಶಕ್ತಿಗಳನ್ನು ಜಾಗ್ರತಗೊಳಿಸುವುದಕ್ಕೂ, ವಿಶಿಷ್ಟ ಜಾಣ್ಮೆಯನ್ನು ತೋರಿಸಲಿಕ್ಕೂ, ಸ್ವ-ಪರ ಹಿತವನ್ನು ಸಾಧಿಸುವ ಸ್ವಾತಂತ್ರ್ಯ ಪ್ರೇಮಿಗಳನ್ನಾಗಿ ಮಾಡುವುದಕ್ಕೂ ಯತ್ನಿಸಬೇಕು. ಈ ಸಂದರ್ಭದಲ್ಲಿ ಅವನು ತಾಳ್ಮೆಯಿಂದಿದ್ದು ನ್ಯೂನತೆಗಳಿದ್ದವರ ಮತ್ತು ಪರಿಸ್ಥಿತಿಗೆ ಹೊಂದಿಕೊಳ್ಳದವರ ಸಲುವಾಗಿ ಕಷ್ಟಪಡುತ್ತ ತುಂಟ ಹುಡುಗರ ಕಿಡಿಗೇಡಿತನವನ್ನು ಸಹಿಸಿಕೊಳ್ಳುತ್ತ ಸಾಗಬೇಕಾಗುವದು.

ಕಲಿಸುವಾಗ ಶಿಕ್ಷಕನು ತಾನೂ ಕಲಿಯುವನು. ಅವನು ತನ್ನ ಜ್ಞಾನವನ್ನು ಮೇಲಿಂದ ಮೇಲೆ ಬೆಳಗುತ್ತ ಪುನರುಜ್ಜೀವನಗೊಳಿಸಿ ತನ್ನ ಮನಸ್ಸಿನ ಸಿರಿಯನ್ನು ಹೆಚ್ಚಿಸುವ ಸಾಧನವಾದ ಹೊಸ ಹೊಸ ಜ್ಞಾನವನ್ನು ಸಂಗ್ರಹಿಸಿ, ಕೇವಲ ತನ್ನ ಬುದ್ಧಿಯನ್ನು ಬಲಗೊಳಿಸುವ ಉದ್ದೇಶದಿಂದಲ್ಲದಿದ್ದರೂ, ಮನುಷ್ಯನಲ್ಲಿ ಸರ್ವದಾ ನಡೆಯುತ್ತಿರುವ ಮನಸ್ಸಿನ ಚಟುವಟಿಕೆಯ ಮತ್ತು ಮಾನವನಿಗೆ ಸ್ವಾತಂತ್ರ್ಯದ ಬೆಳಕನ್ನು ಬೀರಿ ಮೋಕ್ಷದ ಮಾರ್ಗವನ್ನು ತೋರಿಸುವ ಸತ್ಯಶೋಧನೆಯೆ ಜ್ಯೋತಿಯ ಸಾಕ್ಷಾತ್ಕಾರವೆಂದಾದರೂ ಮಾನವನ ಬುದ್ಧಿ ಆತ್ಮಗಳ ಬಹುಮುಖದ ಸಾಹಸ, ಪ್ರಯತ್ನಗಳಲ್ಲಿ ಆನಂದದಿಂದ ಭಾಗವಹಿಸುತ್ತ ಸಾಗುವನು.

೪) ಶಿಕ್ಷಣದ ಸರ್ವಸಾಮಾನ್ಯ ಸ್ವರೂಪ— ಸತ್ಯಾನ್ವೇಷಣೆಯನ್ನು ಸಾಗಿಸುತ್ತ, ಜ್ಞಾನಾರ್ಜನೆಯ ಹಂಬಲವನ್ನಿಟ್ಟುಕೊಂಡು, ಆಜನ್ಮ ವಿದ್ಯಾರ್ಥಿಯಾಗಿಯೇ ಉಳಿದು,

ತಾನು ಹಿಡಿದ ಸತ್ಕಾರ್ಯದ ದೀವಟಿಗೆಯನ್ನು ಭಾವಿ ಪೀಳಿಗೆಗೆ ಸಾಗಿಸುತ್ತ, ತನ್ನ ವಿದ್ಯಾರ್ಥಿಗಳ ಜೀವನದಲ್ಲಿ ಪುನಃ ಜೀವಿಸುತ್ತಿರುವ ಶಿಕ್ಷಕನು ಅಜರಾಮರನೇ ಸರಿ. ಅವನು ಕಾಲವಶನಾದರೂ ಅವನ ಕಾರ್ಯವು ಆಚಂದ್ರಾರ್ಕವಾಗಿ ಬಾಳುವುದು." ಎಂದು ಹೇಳುವ ಮಹಾನುಭಾವರ ಉದಾತ್ತಧ್ಯೇಯಪೂರಿತವಾದ ಸೂತ್ರವಾಕ್ಯಗಳು ಶಿಕ್ಷಣದ ಮಹತ್ವ, ವ್ಯಾಪಕತೆ, ಸ್ವರೂಪ, ಇವನ್ನಷ್ಟೇ ಹೇಳುವವೆಂದಲ್ಲ, ಶಿಕ್ಷಕವೃತ್ತಿಯ ಅದ್ವಿತೀಯ ಗೌರವವನ್ನೂ ವರ್ಣಿಸುವವು.

ಹೆಣ್ಣುಮಕ್ಕಳ ಪಿ. ಎಸ್. ಸಿ. ಪರೀಕ್ಷೆಯ ಅನುಭವಗಳು (೧೯೪೪)

(೧) **ಭಾಷಾ ವಿಷಯಗಳು—ಪ್ರಶ್ನ ಪತ್ರಿಕೆ ೧.** ಪ್ರಶ್ನೆ ೧. ತೀರ ಸ್ವಲ್ಪ ಉಮೇದವಾರರು ಈ ಪ್ರಶ್ನೆಯನ್ನು ಸಮರ್ಪಕವಾಗಿ ಬಿಡಿಸಿದ್ದರು. ಯಾಕೆಂದರೆ ಆರಿಸಿದ ಗದ್ಯಭಾಗದಲ್ಲಿಯೂ ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳಲ್ಲಿಯೂ ಪಾರಿಭಾಷಿಕ ಪದಗಳೂ ಕಠಿಣ ಶಬ್ದಗಳೂ ಹೆಚ್ಚಾಗಿದ್ದವು. ಈವುಗಳ ಅರ್ಥವನ್ನು ತಕ್ಕಂತೆಯೂ ಸರಿಯಾಗಿಯೂ ತಿಳಿದುಕೊಳ್ಳಲಿಕ್ಕೆ ಉಮೇದುವಾರರಿಗೆ ಸಾಧ್ಯವಾಗಲಿಲ್ಲ.

ಪ್ರಶ್ನೆ ೨. ಈ ಪ್ರಶ್ನೆಯೊಳಗಿನ ಗದ್ಯ ಭಾಗವು ಸಾಕಾದಷ್ಟು ಸುಲಭವಾಗಿತ್ತು. ಆದರೂ ಉಮೇದುವಾರರು ಅದರೊಳಗಿನ ಅಮುಖ್ಯ ಭಾಗಗಳನ್ನೆಲ್ಲ ಬಿಟ್ಟು ಬಿಟ್ಟು ಮಹತ್ವದ ಭಾಗವನ್ನಷ್ಟೇ ಉಳಿಸಲು ಸಮರ್ಥರಾಗಲಿಲ್ಲ. ಕೆಲವರು ಅದನ್ನು ಸಂಕ್ಷೇಪಿಸಿ ಬರೆಯುವದರ ಬದಲು ವಿಸ್ತರಿಸಿ ಬರೆದಿದ್ದರು.

ಪ್ರಶ್ನೆ ೩. ಬಹುಜನ ಉಮೇದುವಾರರು ಪ್ರಚಾರದಲ್ಲಿದ್ದ ಗಾದೆಯ ಮಾತುಗಳ ಅರ್ಥವನ್ನು ತಕ್ಕ ಮಟ್ಟಿಗೆ ಸರಿಯಾಗಿ ವಿವರಿಸಿದ್ದರು; ಆದರೆ ಅದರಲ್ಲಿ ಕೊಟ್ಟಿದ್ದ ವಾಕ್ಯ ಖಂಡಕ್ಕೆ ಬದಲು ಒಂದೇ ಪದವನ್ನು ಹೇಳುವದಕ್ಕೆ ತೀರ ಸ್ವಲ್ಪೇ ಉಮೇದುವಾರರಿಗೆ ಶಕ್ಯವಾಯಿತು. ಸ್ವಲ್ಪ ಜನರಿಗೆ ಎಷ್ಟು ಪ್ರಶ್ನ ಭಾಗಗಳಿಗೆ ಉತ್ತರ ಕೋಡಬೇಕೇಬದು ಗೊತ್ತಾಗದ್ದರಿಂದ ನಾಲ್ಕೂ ಭಾಗಗಳಿಗೆ ಉತ್ತರ ಬರೆದಿದ್ದರು.

ಪ್ರಶ್ನೆ ೪. ಕವಿತೆಯ ತಾತ್ಪರ್ಯವು ಬಹುಜನ ಉಮೇದುವಾರರಿಗ ತಿಳಿದಂತೆ ಕಂಡು ಬಂದಿತು. ಆದರೆ ಆ ಕವಿತೆಯ ಮೇಲೆ ಕೇಳಿದ ಪ್ರಶ್ನೆಗಳಲ್ಲಿ ೧ ಮತ್ತು ೪ ನೆಯ ಪ್ರಶ್ನೆಗಳು ಹೇಗೆ ಇರಬೇಕೋ ಹಾಗೆ ಇರಲಿಲ್ಲವೆಂದು ಹೇಳಬೇಕಾಗುವದು.

ಪ್ರಶ್ನೆ ೫. ಕವಿತೆಯು ಸುಲಭವಾಗಿದ್ದರೂ ಬಹುಜನ ಉಮೇದುವಾರರು ಅದರ ಮುಖ್ಯ ಭಾವವನ್ನು ಗ್ರಹಿಸಲಾಗಲಿಲ್ಲ. ಯಾಕೆಂದರೆ ಅವರಿಗೆ ಶಾಲೆಗಳಲ್ಲಿ ಸಾರಾಂಶ ಬರೆಹವನ್ನು ಸರಿಯಾಗಿ ಬರೆಯುವದಕ್ಕೆ ಸಾಕಷ್ಟು ರೂಢಿ ಮಾಡಿಸಿಲ್ಲ.

ಪ್ರಶ್ನೆ ೬-೭. ಇವು ವ್ಯಾಕರಣ ಮತ್ತು ವಾಕ್ಯರಚನೆ ಇವಕ್ಕೆ ಸಂಬಂಧಿಸಿದವು. ಇವುಗಳಲ್ಲಿ ಕೆಲವು ಅಸ್ಪಷ್ಟವೂ ಸಂಶಯಾತ್ಮಕವೂ ಆಗಿದ್ದವು. ಉದಾ— ೬ (ಕ) ೨ ಮತ್ತು ೩; ೭ (ಕ) ೨, ೩ ಮತ್ತು ೪. ಮಿಕ್ಕ ಪ್ರಶ್ನೆಗಳನ್ನೂ ಉಮೇದುವಾರರು ಸರಿಯಾಗಿ ಬಿಡಿಸಲಿಲ್ಲ. ಇದರಿಂದ ಶಾಲೆಗಳಲ್ಲಿ ವ್ಯಾಕರಣ, ವಾಕ್ಯ ವಿಭಜನೆ, ವಾಕ್ಯರಚನೆ ಮತ್ತು ಪದಗಳ ಜೋಡಣೆ ಈ ವಿಷಯಗಳು ಯೋಗ್ಯ ಕ್ರಮದಿಂದ ಕಲಿಸಲ್ಪಡುವದಿಲ್ಲವೆಂಬು ಗೊತ್ತಾಗುವದು.

ಮುಂದಿನ ಸುಧಾರಣೆಗೆ ಸೂಚನೆಗಳು— ೧. ವಿದ್ಯಾರ್ಥಿನಿಯರಿಗೆ ಮೌನವಾಚನ ಗದ್ಯಪದ್ಯ ಭಾಗಗಳ ಅರ್ಥ ವಿವರಣೆ ಸ್ವಾರಸ್ಯಗ್ರಹಣ ಇವುಗಳ ರೂಢಿಯನ್ನು ಸಾಕಷ್ಟು

ಮಾಡಿಸಬೇಕು. ಮೊದಲು ಬಾಯಿಯಿಂದ ತರುವಾಯ ಲೇಖ ಮೂಲಕವಾಗಿ ತಾವು ಓದಿದ ಗದ್ಯಪದ್ಯ ಭಾಗಗಳ ಸಾಂರಾಂಶವನ್ನು ಹೇಳುವದಕ್ಕೂ ಬರೆಯುವದಕ್ಕೂ ಕಲಿಸಬೇಕು.

೨. ವಿದ್ಯಾರ್ಥಿನಿಯರಿಗೆ ೨ ನೆಯ ಇಯತ್ತೆ ಮೊದಲುಗೊಂಡು ವ್ಯಾಕರಣದ ಮೂಲ ತತ್ತ್ವಗಳನ್ನು ಪ್ರಥಕ್ಕರಣ ಪದ್ಧತಿಯಿಂದ ಕಲಿಸಿ ದೃಢಗೊಳಿಸಬೇಕು. ಮತ್ತು ನಾಲ್ಕನೆಯ ಇಯತ್ತೆಯಿಂದ ವಾಕ್ಯ ವಿಭಜನೆ ವಾಕ್ಯರಚನೆ ಮತ್ತು ಪದಗಳ ಜೋಡಣೆ ಮುಂತಾದ ವಿಷಯಗಳ ರೂಢಿ ಮಾಡಿಸಬೇಕು.

ಭಾಷಾವಿಷಯಗಳು ಪ್ರಶ್ನಪತ್ರಿಕೆ ೨. ಒಟ್ಟಿನ ಮೇಲೆ ಉಮೇದುವಾರರ ಉತ್ತರಗಳು ತಕ್ಕಮಟ್ಟಿಗೆ ಸಮರ್ಪಕವಾಗಿದ್ದವು. ಅವರಿಗೆ ತಮ್ಮ ಭಾವನೆಗಳನ್ನು ಬರೆದು ತಿಳಿಸುವದಕ್ಕೆ ಬರುವದೆಂದೂ ಕೆಲವರಂತೂ ಜನ್ಮಾಗಿಯೇ ಬರೆದಿರುವರೆಂದೂ ಹೇಳಬಹುದು. ಆದರೂ ಈ ಕೆಳಗೆ ಹೇಳುವ ದೋಷಗಳನ್ನು ಸರಿಪಡಿಸಬೇಕೆನಿಸುವದು.

(೧) ತಮಗೆ ಕೇಳಿದ ಪ್ರಶ್ನೆಯೇನು? ಅದಕ್ಕೆ ಉತ್ತರವೇನು ಎಂಬದನ್ನು ಹಲವರು ಸರಿಯಾಗಿ ತಿಳಿದುಕೊಳ್ಳದ್ದರಿಂದ ಅಪ್ರಾಸಂಗಿಕವಾದ ಉತ್ತರಬರೆಯಲು ಅವಕಾಶವಾಯಿತು.

(೨) ಅಲಂಕಾರಿಕ ಭಾಷೆಯನ್ನು ಉಪಯೋಗಿಸಲಿಕ್ಕೆಯತ್ನಿಸಿ ಹಲವರು ಅಸಮರ್ಪಕವಾಗಿಯೂ ತಪ್ಪುತಪ್ಪಾಗಿಯೂ ಬರೆದು ಬಿಟ್ಟಿರುವರು. ಇದನ್ನು ತಪ್ಪಿಸಲೇಬೇಕು. ಈ ತರಗತಿಯ ಉಮೇದುವಾರರಿಗೆ ಶುದ್ಧವೂ ಸರಳವೂ ಆದ ಭಾಷೆಯಿಂದ ತಮ್ಮ ವಿಚಾರಗಳನ್ನು ಬರೆದುತೋರಿಸಲಿಕ್ಕೆ ಬಂದರೆ ಸಾಕೆನಿಸುವದು.

(೩) ವಾಕ್ಯರಚನಾದೋಷಗಳೂ ವ್ಯಾಕರಣವಿರುದ್ಧ ಪ್ರಯೋಗಗಳೂ ಹೆಚ್ಚಾಗಿವೆ. ವಿರಾಮಚಿಹ್ನಗಳನ್ನು ಸರಿಯಾಗಿ ಉಪಯೋಗಿಸಿದವರು ತೀರ ಕಡಿಮೆ. ಅಶುದ್ಧ ಬರೆಹವೂ ವಿಪುಲವಾಗಿದೆ. ಪ್ರಾದೇಶಿಕ ಪ್ರಯೋಗಗಳೂ ಕಂಡುಬಂದಿವೆ.

(೪) ಐದನೆಯ ಪ್ರಶ್ನೆಯೊಳಗಿನ ಅಲಂಕಾರಿಕ ಭಾಗವನ್ನುತೆಗೆದುಹಾಕಿ ವಾಕ್ಯರಚನೆ ಮಾಡಲಿಕ್ಕೆ ಬಹುಜನರಿಗೆ ಬರಲಿಲ್ಲ. ಅವರಿಗೆ ಆ ವಾಕ್ಯದ ಅರ್ಥವೇ ತಿಳಿದಂತೆ ತೋರಲಿಲ್ಲ.

(೫) ಮೂರನೆಯ ಪ್ರಶ್ನೆಯಲ್ಲಿ ಕೊಟ್ಟ ಮಾತುಗಳ ಆಧಾರದಿಂದ ಕಥೆಯನ್ನು ರಚಿಸುವದರ ಬದಲು ಹಲವರು ಅಲ್ಲೊಂದು ಇಲ್ಲೊಂದು ಶಬ್ದವನ್ನು ಸೇರಿಸಿ ವಾಕ್ಯ ಪೂರ್ಣ ಮಾಡಿ ಬರೆದಿರುವರು.

(೬) **ಗಣಿತ ವಿಷಯಗಳು**—ಧಾರವಾಡ ಮತ್ತು ಸಿಸಿ ಕೇಂದ್ರಗಳ ಉಮೇದುವಾರರ ಉತ್ತರಗಳು ಒಟ್ಟಿನ ಮೇಲೆ ಸಮರ್ಪಕವಾಗಿದ್ದವು. ಉಳಿದ ಕೇಂದ್ರಗಳ ಉಮೇದುವಾರರ ಉತ್ತರಗಳು ಅಸಮಾಧಾನಕರವಾಗಿರುವವು. ವಿಜಾಪುರ, ಗದಗ ಮತ್ತು ಹುಬ್ಬಳ್ಳಿ ಕೇಂದ್ರಗಳ ಉಮೇದುವಾರರಿಗೆ ಈ ವಿಷಯದ ಶಿಕ್ಷಣವು ತಕ್ಕಷ್ಟು ಸರಿಯಾಗಿ ದೊರೆತಿರಲಿಲ್ಲವೆಂದೇ ಹೇಳಬೇಕಾಗುವದು.

ಮೊದಲನೆಯ ಪ್ರಶ್ನೆಯನ್ನು ಬಹುತರ ಎಲ್ಲ ಕೇಂದ್ರಗಳ ಉಮೇದುವಾರರು ಬಿಡಿಸಿದ್ದರು.

ಎರಡನೆಯ ಪ್ರಶ್ನೆಯನ್ನು ಧಾರವಾಡ ಮತ್ತು ಸಿಸಿ ಕೇಂದ್ರಗಳ ೫೦% ರಷ್ಟು ಉಮೇದುವಾರರು ಮಾತ್ರ ಬಿಡಿಸಿದ್ದರು. ಉಳಿದ ಕೇಂದ್ರಗಳ ಉಮೇದುವಾರರಲ್ಲಿ ತೀರ ಸ್ವಲ್ಪೇ ಜನರು ಮಾತ್ರ ಇದನ್ನು ಬಿಡಿಸಲು ಹವಣಿಸಿದರೂ ಅವರ ಉತ್ತರವು ಸಮರ್ಪಕವಾಗಿರಲಿಲ್ಲ.

ಮೂರನೆಯ ಪ್ರಶ್ನೆಯನ್ನು ತೀರ ಸ್ವಲ್ಪ ಉಮೇದುವಾರರು ಮಾತ್ರ ಸರಿಯಾಗಿ ಬಿಡಿಸಿರುವರು.

ನಾಲ್ಕನೆಯ ಪ್ರಶ್ನೆಯ **ಅ, ಬ** ಭಾಗಗಳನ್ನು ಬಹುಜನರು ಬಿಡಿಸಿರುವರು. **ಕ** ವಿಭಾಗವನ್ನು ಬಿಡಿಸಿದವರ ಸಂಖ್ಯೆ ಕೈಬೆರಳುಗಳಿಂದ ಎಣಿಸುವಷ್ಟು ಮಾತ್ರ.

ಐದನೆಯ ಪ್ರಶ್ನೆಯಲ್ಲಿ ಕೇಳಿದ ಸಮಾಂತರ ಭುಜಚತುಷ್ಕೋಣವನ್ನು ತೀರ ಸ್ವಲ್ಪ ಉಮೇದುವಾರರು ಮಾತ್ರ ರಚಿಸಿರುವರು. ಉಳಿದ ಉಮೇದುವಾರರಿಗೆ ಈ ರಚನೆಯನ್ನು ಕಲಿಸಿಯೇ ಇಲ್ಲವೋ ಏನೋ ಎನ್ನುವಂತಿತ್ತು.

ಆರನೆಯ ಪ್ರಶ್ನೆಯ **ಅ** ಭಾಗವನ್ನು ಬಹುತರ ಎಲ್ಲರೂ ಬಿಡಿಸಿದ್ದರು. **ಬ** ವಿಭಾಗವನ್ನು ೫೦% ರಷ್ಟು ಉಮೇದುವಾರರು ಮಾತ್ರ ಬಿಡಿಸಿರುವರು.

ಏಳನೆಯ ಪ್ರಶ್ನೆಯನ್ನು ಧಾರವಾಡ ಕೇಂದ್ರದ-ಉಮೇದವಾರರಷ್ಟೇ ಬಿಡಿಸಿರುವರು, ಮಿಕ್ಕವರಲ್ಲಿ ಯಾರೂ ಬಿಡಿಸಿಲ್ಲ.

ಎಂಟನೆಯ ಪ್ರಶ್ನೆಯನ್ನು ಒಬ್ಬಳೇ ವಿದ್ಯಾರ್ಥಿನಿಯು ಸರಿಯಾಗಿ ಬಿಡಿಸಿದ್ದಳು.

ಈ ವಿಷಯವನ್ನು ಕಲಿಸುವದಕ್ಕೆ ಹೆಚ್ಚು ವೇಳೆಯನ್ನೂ ಲಕ್ಷ್ಯವನ್ನೂ ಪೂರೈಸುವದು ಅವಶ್ಯವಾಗಿದೆ. ಕೆಳಗಿನ ಇಯತ್ತೆಗಳಿಂದಲೇ ಈ ವಿಷಯವನ್ನು ಹೆಚ್ಚು ಚೆನ್ನಾಗಿ ಕಲಿಸಬೇಕು. ಹಾಗಿಲ್ಲದಿದ್ದರೆ ಮೇಲಿನ ಇಯತ್ತೆಗಳಲ್ಲಿ ಈ ವಿಷಯವು ನೀರಸವೂ ತಲೆಬೇಸರವನ್ನುಂಟುಮಾಡುವಂಥದೂ ಆಗಿಬಿಡುವದು. ಬಾಯಿಲೆಕ್ಕಗಳನ್ನು ಹೆಚ್ಚು ಹೆಚ್ಚಾಗಿ ರೂಢಿಮಾಡಿಸಬೇಕು. ಮತ್ತು ಪ್ರತಿದಿನದ ವ್ಯವಹಾರದೊಳಗಿನ ಉದಾಹರಣೆಗಳನ್ನೇ ಹೆಚ್ಚಾಗಿ ಉಪಯೋಗಿಸಬೇಕು. ಭೂಮಿತಿಯಲ್ಲಿ ಜೀರೆಬೀರೆ ಆಕೃತಿಗಳನ್ನು ರಚಿಸುವದಕ್ಕೆ ಹೆಚ್ಚಾಗಿ ರೂಢಿಮಾಡಿಸಬೇಕು. ಜಮಾಖರ್ಚಿನ ವಿಷಯದಲ್ಲಿ ವಿದ್ಯಾರ್ಥಿನಿಯರಿಗೆ ಬರೆಹದ ರೂಢಿಯು ಹೆಚ್ಚಾಗಿ ಆಗಬೇಕು.

(೩) **ಇತಿಹಾಸ**—ಪ್ರತಿಯೊಂದು ಗುಂಪಿನಲ್ಲಿ ೨೫ ಗುಣಗಳ ಪ್ರಶ್ನೆಯನ್ನಷ್ಟೇ ಉಮೇದುವಾರರು ಬಿಡಿಸಬೇಕಾಗಿದ್ದಿತು. ಆದರೆ ಬಹುಜನರು ಎರಡೂ ಗುಂಪಿನೊಳಗಿನ ಎಲ್ಲ ಪ್ರಶ್ನೆಗಳನ್ನು ಅಥವಾ ಪ್ರತಿ ಗುಂಪಿನಲ್ಲಿ ೨೫ ಕ್ಕಿಂತ ಹೆಚ್ಚು ಗುಣಗಳ ಪ್ರಶ್ನೆಗಳನ್ನು ಬಿಡಿಸಿದ್ದರು. ಇದರಿಂದ ಪರೀಕ್ಷಕರಿಗೆ ತೊಂದರೆಯಾಯಿತು. ಮತ್ತು ಉಮೇದುವಾರರು ತಾವು ಬಿಡಿಸಬೇಕಾದ ಪ್ರಶ್ನೆಯನ್ನು ಸರಿಯಾಗಿ ತಿಳಿದುಕೊಳ್ಳಲಿಲ್ಲವೆಂಬದು ಕಂಡು ಬಂದಿತು.

ಮೊದಲನೆಯ ಗುಂಪಿನಲ್ಲಿ ಪಾಠ ಪುಸ್ತಕಕ್ಕೆ ಸಂಬಂಧಿಸಿದ ಪ್ರಶ್ನೆಗಳಿದ್ದವು. ಇವಕ್ಕೆ ಉಮೇದುವಾರರು ತಕ್ಕಂತೆ ಉತ್ತರ ಬರೆದಿದ್ದರು. ಎರಡನೆಯ ಗುಂಪಿನಲ್ಲಿ ಕೆಲವು ಸಾಮಾನ್ಯ ಪ್ರಶ್ನೆಗಳಿದ್ದವು. ಅವುಗಳ ಬಗ್ಗೆ ಉಮೇದುವಾರರಿಗೆ ಏನೂ ಜ್ಞಾನವಿದ್ದಿಲ್ಲ.

ಒಟ್ಟಿನ ಮೇಲೆ ಉಮೇದುವಾರರ ಉತ್ತರಗಳು ತಕ್ಕಮಟ್ಟಿಗೆ ಚೆನ್ನಾಗಿದ್ದವೆಂದೇ ಹೇಳಬಹುದು.

(೪) **ಭೂಗೋಲ**—ಒಟ್ಟಿನ ಮೇಲೆ ಉಮೇದುವಾರರ ಉತ್ತರಗಳು ಸಮಾಧಾನಕರವಾಗಿದ್ದವು. ನಾಪಾಸಾದ ಉಮೇದುವಾರರಲ್ಲಿ ಹಲವರಿಗೆ ೧೦ ಕ್ಕಿಂತ ಕಡಿಮೆ ಗುಣಗಳು ಬಿದ್ದಿರುವವು. ಎಷ್ಟೋ ಸಂದರ್ಭಗಳಲ್ಲಿ ಉಮೇದುವಾರರ ಉತ್ತರಗಳು ಭೂಗೋಲ ವಿಷಯದ ದೃಷ್ಟಿಯಿಂದ ಎಷ್ಟೂ ಸರಿಯಾಗಿರಲಿಲ್ಲ. ಭೂಗೋಲಿಕ ಸಂಗತಿಗಳ ಪರಸ್ಪರ ಸಂಬಂಧಗಳನ್ನು ಬಹುಜನ ಉಮೇದುವಾರರಿಗೆ ಸರಿಯಾಗಿ ವಿವರಿಸಲಿಕ್ಕೆ ಬರಲಿಲ್ಲ.

ಬಹುಜನ ಉಮೇದುವಾರರಿಗೆ ನಕಾಶೆ, ಸ್ಕೇಲು, ಮತ್ತು ಅಂತರ ಇವುಗಳಿಗೆ ಸಂಬಂಧಿಸಿದ ಪ್ರಶ್ನೆಯು ಸರಿಯಾಗಿ ಅರ್ಥವೇ ಆಗಲಿಲ್ಲ. ಅವರು ಆ ಪ್ರಶ್ನೆಯನ್ನು ಆವಶ್ಯಕವಾಗಿ ಬಿಡಿಸಬೇಕಾಗಿತ್ತು. ಉಮೇದುವಾರರಿಗೆ ಭೂಗೋಲದಲ್ಲಿ ಪ್ರಾಯೋಗಿಕವಾಗಿ ಕೆಲಸ ಮಾಡುವದು ಗೊತ್ತೇ ಇಲ್ಲವೆನಿಸುವದು. ಬಾಹ್ಯರೇಷಾ ನಕಾಶದಲ್ಲಿ ತುಂಬುವದು, ಸ್ಕೇಲಿಗೆ

ಅನುಸರಿಸಿ ಆಕೃತಿ ತೆಗೆಯುವದು, ನಕಾಶೆಯನ್ನು ಓದಿ ಭೂಗೋಲದ ಸಂಗತಿಗಳನ್ನು ತಿಳಿದುಕೊಳ್ಳುವದು ಮುಂತಾದ ಕೆಲಸಗಳನ್ನು ಅವರು ಕಲಿತೇ ಇಲ್ಲವೆಂದು ಹೇಳಬಹುದು. ಹಿಂದುಸ್ತಾನದ ಹವಾಮಾನ, ಹುಟ್ಟುವಳಿ, ಇವಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಬಹುಜನರು ಬಿಡಿಸಿರಲಿಲ್ಲ. ಕೆಲವರು ಉತ್ತರದ ಕಾಗದದಲ್ಲಿ ಪ್ರಶ್ನೆಯನ್ನು ನಕಲು ಮಾಡಿದ್ದರು.

ಉಮೇದುವಾರರ ಉತ್ತರದ ಕಾಗದದಲ್ಲಿ ಬಂದಿರುವ ವಿಸಂಗತ ಉತ್ತರಗಳಲ್ಲಿ ಕೆಲವನ್ನು ಇಲ್ಲಿ ಮಾದರಿಗಾಗಿ ಆರಿಸಿಕೊಟ್ಟಿದೆ.

ಇಡೀವರ್ಷ ಮಳೆಯಾಗುವ ಪ್ರದೇಶ— ಸಹಾರಾ; ಗಲ್ಫ್‌ಸ್ಟ್ರೀಮ್. ಮೆಲಜೋನ್ಸ್ ದಲ್ಲಿ ಬರ್ಫಿನ ಮನೆಗಳು ಇರುವವು. ಇಂಗ್ಲಂಡದಲ್ಲಿ ಬರ್ಫಿನ ಮನೆಯಿಲ್ಲ; ಆದ್ದರಿಂದ ಅವರು ಬಿಸಿಬಿಸಿ ಆಹಾರ ತಿನ್ನುವರು. ಪರ್ವತದಲ್ಲಿ ಎಲ್ಲ ನದಿಗಳು ಹುಟ್ಟುವವು; ಆದ್ದರಿಂದ ಶಿಖರಗಳು ತಂಪಾಗಿರುವವು. ಪೃಥ್ವಿಯ ಒಳಭಾಗದಲ್ಲಿ ವಿಷುವವೃತ್ತವು ಹಾಯ್ದಿರುವದರಿಂದ ಒಳಭಾಗವು ಉಷ್ಣವಿರುವದು. ಗ್ರೀನಿಜದ ಉತ್ತರಕ್ಕೆ ಕರಾಚಿ ದೇಶವು ಇರುವದು. ವಿಷುವವೃತ್ತದ ಪಶ್ಚಿಮಕ್ಕೆ ಈ ದೇಶವು ಇರುವದು. ಹೊಲಕ್ಕೆ ಕಾಲುವೆ ತೆಗೆದು ನೀರು ಉಪಯೋಗಿಸಿಕೊಳ್ಳುತ್ತಿರುವರು; ಆದ್ದರಿಂದ ಕಣ್ಣೀರಿನ ಹೊಳೆ ಎನ್ನುವರು. ಯುರೋಪದಲ್ಲಿ ಸಹಕಾರಿ ಸಂಘಗಳ ಮುಖಾಂತರ ಹೈನದ ಉದ್ಯೋಗ— ಪ್ಯಾರಿಸ್ ದೇಶವು

(೫) ಐಚ್ಛಿಕ ವಿಷಯಗಳು

(ಅ) ಪ್ರಕೃತಿವಿಮರ್ಶೆ. ಈ ವಿಷಯದಲ್ಲಿ ಪರೀಕ್ಷೆಗೆ ಕುಳಿತ ೧೫೩ ಉಮೇದವಾರರಲ್ಲಿ ೬೨ ಅಲ್ಪದಷ್ಟು ಎಂದರೆ ೯೬ ಜನರು ಪಾಸಾಗಿರುವರು. ಅವರ ಉತ್ತರಗಳೂ ಒಟ್ಟಿನ ಮೇಲೆ ಸಮಾಧಾನಕರವಾಗಿದ್ದಿಲ್ಲ.

ಬಿಟ್ಟ ಸ್ಥಳಗಳನ್ನು ತುಂಬುವದು (ಪ್ರಶ್ನೆ ೧) ಸರಿ-ತಪ್ಪು (ಪ್ರಶ್ನೆ ೪) ಪಕ್ಷಿಗಳ ಮತ್ತು ಕ್ರಿಮಿಕೀಟಕಗಳ ವರ್ಣನೆ (ಪ್ರಶ್ನೆ ೨) ಇವಕ್ಕೆ ತಕ್ಕಮಟ್ಟಿಗೆ ಚೆನ್ನಾಗಿ ಉತ್ತರಬರೆದಿದ್ದರು. ಮೂರನೆಯ ಪ್ರಶ್ನೆಯಲ್ಲಿ ಪಶುಪಕ್ಷಿಗಳ ಪಾದರಚನೆಯನ್ನು ಚಿತ್ರಿಸಬೇಕಾಗಿದ್ದು ಅದರ ಉತ್ತರವು ಸ್ವಲ್ಪವೂ ಸಮರ್ಪಕವಾಗಿರಲಿಲ್ಲ. ಇದರಿಂದ ಅವರು ಆಕೃತಿಗಳನ್ನು ತೆಗೆಯುವದಕ್ಕೆ ಕಲಿಯಲೇ ಇಲ್ಲವೆಂದೂ ಅವರಿಗೆ ನಿರೀಕ್ಷಣೆ ಮಾಡುವ ರೂಢಿಯಿರಲಿಲ್ಲವೆಂದೂ ಕಂಡು ಬಂದಿತು. ಆಕೃತಿಯನ್ನು ರಚಿಸಬೇಕಾಗಿದ್ದ ಆರನೆಯ ಪ್ರಶ್ನೆಯ ಉತ್ತರದಲ್ಲಿಯೂ ಇದೇ ಮಾತು ನಿದರ್ಶನಕ್ಕೆ ಬಂದಿರುವದು. ೬-೭ನೆಯ ಪ್ರಶ್ನೆಗಳಲ್ಲಿ ಕೆಲವು ಪ್ರಯೋಗಗಳನ್ನು ವರ್ಣಿಸಬೇಕಾಗಿದ್ದಿತು. ಹಲವು ಉಮೇದುವಾರರು ಅದನ್ನು ತೀರ ತಪ್ಪಾಗಿ ತಿಳಿದುಕೊಂಡಿದ್ದರು ೭ನೆಯ ಪ್ರಶ್ನೆಯಲ್ಲಿ ಬಂದಿದ್ದ 'ಪ್ರಯೋಗ' ಶಬ್ದದಿಂದ ಅವರು ಈ ಪ್ರಶ್ನೆಯು ವ್ಯಾಕರಣಕ್ಕೆ ಸಂಬಂಧಿಸಿದ ಪ್ರಶ್ನೆಯೆಂದು ತಿಳಿದುಕೊಂಡರು! ಮತ್ತು ಅದರಲ್ಲಿರುವ ಮೂರು ವಾಕ್ಯಗಳನ್ನು ವಿಭಜನೆಮಾಡಿ ಬೇರೆ ಬೇರೆ ಕೋಷ್ಟಕಗಳಲ್ಲಿ ತುಂಬಿದ್ದರು. ಇದರಿಂದ ಪ್ರಕೃತಿವಿಮರ್ಶೆಯ ಅಭ್ಯಾಸಕ್ರಮದಲ್ಲಿ ಬಂದಿರುವ ಪ್ರಾಯೋಗಿಕ ವಿಭಾಗವು ಅವರಿಗೆ ಗೊತ್ತೇ ಇರಲಿಲ್ಲವೆಂದು ಸಿದ್ಧವಾಗುವದು.

(ಬ) ಸಂಗೀತ— ಈ ವಿಷಯದ ಪರೀಕ್ಷಕರು ಪ್ರತಿ ಕೇಂದ್ರಕ್ಕೂ ಬೇರೆ ಬೇರೆ. ಆಗಿದ್ದರು. ಅವರೆಲ್ಲರ ಅನುಭವಗಳಲ್ಲಿ ಒಂದು ಮಾತು ಸಾಮಾನ್ಯವಾಗಿರುವದು— 'ಉಮೇದುವಾರರಿಗೆ ರಾಗ ತಾಳಗಳ ಜ್ಞಾನವೂ ಶಾಸ್ತ್ರೀಯವಾದ ಹಾಡುಗಾರಿಕೆಯೂ ಗೊತ್ತಿಲ್ಲ.' ಗದಗಿನ ಕೇಂದ್ರದಲ್ಲಿ ಒಬ್ಬಳೇ ವಿದ್ಯಾರ್ಥಿನಿಯು ಈ ವಿಷಯವನ್ನು ಐಚ್ಛಿಕವಾಗಿ ಆರಿಸಿಕೊಂಡಿದ್ದಳು. ಮ್ಯುನಿಸಿಪಾಲಿಟಿಯ ಅಧಿಕಾರಿಗಳು ಈ ವಿಷಯದ

ಶಿಕ್ಷಣಕ್ಕೆ ತಕ್ಕ ಅನುಕೂಲತೆಯನ್ನು ಒದಗಿಸಿಕೊಟ್ಟರೆ ಉಮೇದುವಾರರು ಈ ವಿಷಯವನ್ನು ಆರಿಸಿಕೊಳ್ಳುವ ಸಂಭವವುಂಟು ಎಂದು ಆ ಕೇಂದ್ರದ ಪರೀಕ್ಷಕರು ಅಭಿಪ್ರಾಯಪಟ್ಟಿರುವರು. ಉಮೇದುವಾರರಿಗೆ ಕರ್ನಾಟಕೀ ಗಾಯನದ ಪರಿಚಯ ಕಡಿಮೆ. ಪ್ರಾರ್ಥನೆಯ ಪದಗಳನ್ನೂ ಕ್ರಮಿಕ ಪುಸ್ತಕದೊಳಗಿನ ಕವಿತೆಗಳನ್ನೂ ಶಾಸ್ತ್ರೀಯವಾಗಿ ಹಾಡುವದಕ್ಕೆ ಕಲಸಬೇಕು ಮುಂತಾದ ಕೆಲವು ಸೂಚನೆಗಳು ಬೇರೆ ಬೇರೆ ಕೇಂದ್ರಗಳ ಪರೀಕ್ಷಕರಿಂದ ಒಂದಿವೆ.

(ಕ) **ಡ್ರಾಯಿಂಗು**. ಉಮೇದುವಾರರಿಗೆ ತಾವು ಚಿತ್ರ ತೆಗೆಯತಕ್ಕ ವಸ್ತುವಿನ ಬೇರೆ ಬೇರೆ ಭಾಗಗಳ ಪರಸ್ಪರ ಪ್ರಮಾಣದ ಕಲ್ಪನೆ ಯಿರಲಿಲ್ಲ. ಡಿಝಾಯಿನುಗಳನ್ನು ರಚಿಸುವಲ್ಲಿ ಉಮೇದುವಾರರು ಯಾವ ತರದ ಸ್ವಬುದ್ಧಿಯನ್ನೂ ಉಪಯೋಗಿಸಿದೆ ಪರರು ಕಲಿಸಿದ್ದರ ನಕಲು ಮಾಡಲು ಹವಣಿಸಿದಂತೆ ಕಂಡುಬಂದಿತು. ಶಾಲೆಗಳಲ್ಲಿ ಮೆಮರಿ ಡ್ರಾಯಿಂಗನ್ನು ಕಲಿಸುವದೇ ಇಲ್ಲವೋ ಏನೋ ಎನ್ನಿಸುವದು. ಮೆಮರಿ ಡ್ರಾಯಿಂಗಿನಿಂದ ವಿದ್ಯಾರ್ಥಿಗಳ ನಿರೀಕ್ಷಣ ಶಕ್ತಿಯು ಬೆಳೆಯುವದರಿಂದ ಶಿಕ್ಷಕರು ಈ ವಿಷಯವನ್ನು ಅಲಕ್ಷಿಸಬಾರದು; ಇತ್ಯಾದಿ.

೬. **ಹೊಲಿಗೆಯ ಕೆಲಸ**. ಸಾಮಾನ್ಯವಾಗಿ ಉಮೇದುವಾರರಿಗೆ ಬ್ಲೌಜನ್ನು ಕತ್ತರಿಸುವದಕ್ಕೆ ಬೇಕಾದ ಜ್ಞಾನವು ಇದ್ದಿಲ್ಲ. ಗುಂಡಿಗಳನ್ನು ಹಚ್ಚುವದು ಮುಂತಾದ ಸಣ್ಣ ಕೆಲಸಗಳನ್ನು ಸಹ ಅವರು ಸರಿಯಾಗಿ ಕಲಿತಿಲ್ಲ. ಈ ವಿಷಯಕ್ಕೆ ಹೆಚ್ಚು ಲಕ್ಷ ಪೂರೈಸಬೇಕು.

ಫೇರ್ಲಿ ಮ್ಯೂರ ಪಾರಿತೋಷಿಕಗಳು

ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜವು ೧೮೯೫ ರಲ್ಲಿ ಸ್ಥಾಪಿತವಾಯಿತು. ಧಾರವಾಡ ಜಿಲ್ಲೆಯ ಆಗಿನ ಕಲೆಕ್ಟರರಾದ ಫೇರ್ಲಿ ಮ್ಯೂರ ಸಾಹೇಬರು ಹೆಣ್ಣುಮಕ್ಕಳ ಶಿಕ್ಷಣ ಪ್ರಸಾರದ ವಿಷಯದಲ್ಲಿ ವಿಶೇಷ ಆಸ್ಥೆವಹಿಸಿ, ಈ ಸಂಸ್ಥೆಯಲ್ಲಿ ಟ್ರೇನಿಂಗ್ ಪಡೆಯುತ್ತಿರುವ ಶಿಕ್ಷಿಕೆಯರನ್ನು ಪ್ರೋತ್ಸಾಹಿಸುವದಕ್ಕಾಗಿ ತಮ್ಮ ಹೆಸರಿನ ೨ ಪಾರಿತೋಷಿಕಗಳನ್ನು ಕೊನೆಯ ವರ್ಷದ ವರ್ಗದ ವಾರ್ಷಿಕ ಮತ್ತು ಪಾಠ್ಯಾಸಿಕ ಪರೀಕ್ಷೆಗಳಲ್ಲಿ ಮೊದಲನೆಯ ನಂಬರು ಪಡೆದ ವಿದ್ಯಾರ್ಥಿನಿಯರಿಗೆ ಕೊಡುವ ಏರ್ಪಾಡು ಮಾಡಿದರು. ಈ ಪಾರಿತೋಷಿಕಗಳು ೧೦೦೦ ರೂಪಾಯಿಗಳ ಬಡ್ಡಿಯ ಮೇಲೆ ನಡೆಯುವಂತೆ ವ್ಯವಸ್ಥೆಮಾಡಿ ಅಷ್ಟು ಹಣವನ್ನು ಧಾರವಾಡ ಮ್ಯುನಸಿಪಾಲ್ಟಿಯ ಕಡೆಗೆ ಒಪ್ಪಿಸಿದರು.

ಹೀಗೆ ಕೆಲವು ವರ್ಷ ಕಳೆಯಲಾಗಿ ಬ್ಯಾಂಕಿನಲ್ಲಿ ಇಡಲಾಗಿದ್ದ ಈ ಪಾರಿತೋಷಿಕಗಳ ಹಣದ ಲೆಕ್ಕವು ಬೇರೊಂದು ಪಾರಿತೋಷಿಕದ ಹಣದ ಲೆಕ್ಕದಲ್ಲಿ ಬೆರೆತುಹೋಯಿತು. ಮತ್ತು ಈ ವಿಷಯವು ಎಷ್ಟೋ ವರ್ಷಗಳ ವರೆಗೆ ಮ್ಯುನಸಿಪಾಲ್ಟಿಯ ಗಮನಕ್ಕೆ ಬರಲಿಲ್ಲ. ಮೊನ್ನೆ ಮೊನ್ನೆ ಈ ಸಂಗತಿಯು ಮ್ಯುನಸಿಪಾಲ್ಟಿಯ ಕಾಗದಪತ್ರಗಳ ಮೂಲಕ ಕಂಡು ಬರಲು, ಮ್ಯುನಸಿಪಾಲ್ಟಿಯವರು ಬ್ಯಾಂಕಿನ ಕಾಗದಪತ್ರಗಳನ್ನು ತರಿಸಿಕೊಂಡು ಅವುಗಳ ಪರಿಶೀಲನೆ ಮಾಡಿದರು. ಆಗ ಮೂಲ ಧನ ೧೦೦೦ ಗಳ ಮೇಲೆ ೧೦೦೦ ರೂ. ಬಡ್ಡಿಯು ಸಂಚಯವಾದುದು ತಿಳಿದುಬಂದಿತು.

ಬಳಿಕ ಮ್ಯುನಸಿಪಾಲ್ಟಿಯ ಅಧಿಕಾರಿಗಳು ಈ ಪಾರಿತೋಷಿಕಗಳಿಗೆ ಸಂಬಂಧಿಸಿದ ಎಲ್ಲ ವಿವರಗಳನ್ನು ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜಿನ ಲೇಡಿ ಸುಪರಿಂಟೆಂಡೆಂಟ ಸಾಹೇಬರಿಗೆ ತಿಳಿಸಿದರು. ಅವರ ಸೂಚನೆಯ ಮೇರೆಗೆ ಮೇಲೆ ವಿವರಿಸಿದ ೬೦೦೦ ರೂ. ಗಳ ಮೇಲೆ ಬರುವ ಬಡ್ಡಿಯಿಂದ ಕೆಳಗಿನಂತೆ ನಾಲ್ಕು ಪಾರಿತೋಷಿಕಗಳನ್ನು ಪುಸ್ತಕಗಳ ರೂಪದಲ್ಲಿ ಕೊಡುವ ಏರ್ಪಾಡು ಮಾಡಿದೆ.

೨ನೆಯ ವರ್ಷದ ವರ್ಗದ ವಾರ್ಷಿಕ ಪರೀಕ್ಷೆಯಲ್ಲಿ ೧ನೆಯ ನಂಬರು ಪಡೆದವಳಿಗೆ—೧
೧ನೆಯ ವರ್ಷ ಸೀನಿಯರ ವರ್ಗದ ವಾರ್ಷಿಕ ಪರೀಕ್ಷೆಯಲ್ಲಿ ೧ನೆಯ ನಂಬರು ಪಡೆದವಳಿಗೆ—೧
೨ನೆಯ ವರ್ಷ ವರ್ಗದ ತ್ರೈಮಾಸಿಕ ಪರೀಕ್ಷೆಯಲ್ಲಿ ೧ನೆಯ ನಂಬರು ಪಡೆದವಳಿಗೆ—೧
೧ನೆಯ ವರ್ಷ ಸೀನಿಯರ ವರ್ಗದ ತ್ರೈಮಾಸಿಕ ಪರೀಕ್ಷೆಯಲ್ಲಿ ೧ನೆಯ ನಂಬರು ಪಡೆದವಳಿಗೆ—೧

ಧಾರವಾಡ
೬-೧೧-೧೯೪೫ }

E. S. Elijah
ಲೇಡಿ ಸುಪರಿಂಟೆಂಡೆಂಟ, ಟ್ರೇ. ಕಾ. ಧಾರವಾಡ

ಆಹಾರ ಮೀಮಾಂಸೆ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ವಿಟಾಮಿನ್ನುಗಳಲ್ಲಿ ಕೆಳಗೆ ಹೇಳುವ ಆರು ಮುಖ್ಯ ಪ್ರಕಾರಗಳಿದ್ದು ನಮ್ಮ ಶರೀರದಲ್ಲಿ ಇವುಗಳ ಕಾರ್ಯವೂ ಕೂಡ ಬೇರೆಬೇರೆ ಯಾಗಿರುವದು.

(a) ಇದಕ್ಕೆ ಅಂಟುರೋಗಗಳ ಮತ್ತು ಕಣ್ಣಿನ ಬೇನೆಗಳ ಪ್ರತಿಬಂಧಕ ವಿಟಾಮಿನ್ನು ಎನ್ನುವರು. ಇದು ಪ್ರಾಮುಖ್ಯವಾಗಿ ಕಣ್ಣು ಮತ್ತು ಶ್ವಾಸಕೋಶಗಳ ರೋಗಪ್ರತಿಬಂಧಕ ಶಕ್ತಿಯುಳ್ಳದ್ದಿರುವದು; ಶರೀರದ ಬೆಳವಣಿಗೆಗೂ ದೀರ್ಘಾಯುಷ್ಯಕ್ಕೂ ಸಹಾಯಕವು; ಆರೋಗ್ಯವನ್ನೂ ಶಕ್ತಿ ಚಟುವಟಿಕೆಗಳನ್ನೂ ಕೊಡುವದು; ಪಚನಕ್ರಿಯೆಯನ್ನು ಸರಿಯಾಗಿ ನಡೆಯಿಸಿ ಹಸಿವನ್ನುಂಟುಮಾಡುವದು. ಸ್ವಾಭಾವಿಕವಾದ ಗರ್ಭಧಾರಣೆಗೂ ಹಾಲು ಬೀಳುವದಕ್ಕೂ ಚಿಕ್ಕಮಕ್ಕಳ ಸಂರಕ್ಷಣೆಗೂ ಅವಶ್ಯವಾಗಿ ಬೇಕು.

ಮಾನವ ಶರೀರದಲ್ಲಿ ಎ ವಿಟಾಮಿನ್ನಿನ ಕೊರತೆಯಿಂದ ಈ ಕೆಳಗೆ ಹೇಳುವ ಬೇನೆಗಳು ಹುಟ್ಟುವವು. ಶರೀರದ ರೋಗಪ್ರತಿಬಂಧಕ ಶಕ್ತಿಯು ಕುಂದುವದು. ಅವಯವಗಳ ಬೆಳವಣಿಗೆಯೂ ವಿಕಾಸವೂ ಕುಂಠಿತವಾಗುವವು. ನಾಲಿಗೆಯ ಕೆಳಗಿನ ಗ್ರಂಥಿಗಳು, ಕಣ್ಣು (ಇರುಳು ಕಣ್ಣು ಕಾಣಿಸದಂತಾಗುವದು), ಕಣ್ಣೀರಿನ ಗ್ರಂಥಿಗಳು (ಕಣ್ಣೀರನ್ನು ಹುಟ್ಟಿಸುವ ಶಕ್ತಿಯು ಕುಂದುವದು), ಲಾಲಾಗ್ರಂಥಿಗಳು, ಶ್ವಾಸಕೋಶಗಳು, ಕಿವಿ (ಕಿವಿ ಸೋರುವದು), ಮೂಗು, ತೊಗಲು, ಮೂತ್ರಪಿಂಡಗಳು, ಮೂತ್ರಾಶಯ, ಪಚನೇಂದ್ರಿಯಗಳು ಇವು ಬೇನೆಗೆ ಗುರಿಯಾಗುವವು. ಹೊಟ್ಟೆಹುಣ್ಣಾಡಿಸುವದು; ಶಾರೀರಿಕ ಶಕ್ತಿಯು ಹ್ರಾಸವಾಗುವದು; ಪಚನ ಕ್ರಿಯೆಯು ಸರಿಯಾಗಿ ನಡೆಯದ್ದರಿಂದ ಆಹಾರವು ಸೇರದಂತಾಗುವದು. ಬೀಜಾಂಡಗಳ ಅಭಾವದಿಂದ ಬಂಜೆತನವುಂಟಾಗುವದು. ಕಣ್ಣಿನಲ್ಲಿ ನೀರು ಹುಟ್ಟದಂತಾಗಿ ಕಣ್ಣು ಕೆಡುವದು.

(ಮುಂದೆಸಾಗುವದು.)

ಪ್ರಕಟನೆ ೧

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ ೧೯೪೫

ಈ ವರ್ಷದ ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯು ತಾ. ೫-೩-೧೯೪೫ ನೆಯ ಸೋಮವಾರ ಮತ್ತು ಮುಂದಿನ ದಿನಗಳಲ್ಲಿ ಮುಂದೆ ಹೇಳುವ ಕೇಂದ್ರಗಳಲ್ಲಿ ನಡೆಯುವದೆಂದು ಗೊತ್ತಾಗಿದೆ. ಮತ್ತು ಈ ಕೆಳಗೆ ವಿವರಿಸಿದಂತೆ ಆಯಾ ಕೇಂದ್ರಗಳ ಬಗ್ಗೆ ಒಂದೊಂದು ಪರೀಕ್ಷಾ ಸಮಿತಿಗಳಿದ್ದು ಅವರು ಪರೀಕ್ಷೆಯನ್ನು ನಡೆಯಿಸುವರು. ಆಯಾ ಸಮಿತಿಗಳ ಚೇಅರಮನ್ನರು ಈ ಕೆಳಗೆಹೇಳುವ ಜನರಿರಬೇಕೆಂದು ಗೊತ್ತಾಗಿರುವದು.

ಧಾರವಾಡ— ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜದ ಲೇಡೀ ಸುಪರಿಟೆಂಡೆಂಟರು; ಧಾರವಾಡ.

ಹುಬ್ಬಳ್ಳಿ— ಆಂಗ್ಲೋ ಉರ್ದು ಹೈಸ್ಕೂಲಿನ ಹೆಡ್‌ಮಾಸ್ತರರು; ಹುಬ್ಬಳ್ಳಿ.

ಗದಗ— ಧಾರವಾಡ ಜಿಲ್ಲೆಯ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು; ಧಾರವಾಡ.

ಬೆಳಗಾಂವಿ— ಸರದಾರ್ಸ ಹೈಸ್ಕೂಲಿನ ಹೆಡ್‌ಮಾಸ್ತರರು; ಬೆಳಗಾಂವಿ.

ವಿಜಾಪುರ— ಆಂಗ್ಲೋ ಕನ್ನಡ ಗರ್ಲ್ಸ್ ಹೈಸ್ಕೂಲಿನ ಹೆಡ್‌ಮಿಸ್ಟ್ರೆಸರು; ವಿಜಾಪುರ.

ಕಾರವಾರ— ಸರಕಾರಿ ಹೈಸ್ಕೂಲಿನ ಹೆಡ್‌ಮಾಸ್ತರರು; ಕಾರವಾರ.

ಸಿಸಿ ಉಪಕೇಂದ್ರ— (ಕಾರವಾರ ಮುಖ್ಯ ಕೇಂದ್ರದ ಕೆಳಗೆ) ಸದರ.

ಕೊಲ್ಲಾಪುರ— ಕೊಲ್ಲಾಪುರ ಸರಕಾರದ ಶಿಕ್ಷಣಾಧಿಕಾರಿಗಳು; ಕೊಲ್ಲಾಪುರ.

ಸಿಸಿ-ಸಿದ್ದಾಪುರ ಹಳ್ಳಿಯಾಳ ಹೊನ್ನಾವರ ಕುಮಟಾ ತಾಲೂಕುಗಳ ಉಮೇದವಾರರು ಸಿಸಿ ಉಪಕೇಂದ್ರದಲ್ಲಿ ಪರೀಕ್ಷೆಗೆ ಕೂಡ್ರಬೇಕು. ಮತ್ತು ಅವರು ತಮ್ಮ ಅರ್ಜಿಯಲ್ಲಿ ಸಿಸಿ ಉಪಕೇಂದ್ರದ ಹೆಸರನ್ನು ಬರೆದಿರಬೇಕು. ಅವರು ತಮ್ಮ ಅರ್ಜಿಯನ್ನೂ ಫೀಯನ್ನೂ ಸ್ಥಾನಿಕ ಸಮಿತಿಯ ಚೇಅರಮನ್ನರಾದ ಕಾರವಾರ ಹೈಸ್ಕೂಲಿನ ಹೆಡ್‌ಮಾಸ್ತರರಿಗೇ ಕಳುಹಿಸಬೇಕು. ಹಳಿಯಾಳ ಊರಿನ ಅಥವಾ ಹಳಿಯಾಳ ತಾಲೂಕಿನ ಉಮೇದವಾರರು ಧಾರವಾಡ ಕೇಂದ್ರದಲ್ಲಾಗಲಿ ಸಿಸಿ ಕೇಂದ್ರದಲ್ಲಾಗಲಿ ಪರೀಕ್ಷೆಗೆ ಕೂಡ್ರಬಹುದು. ಕಾರವಾರ ಜಿಲ್ಲೆಯ ಉಳಿದ ಎಲ್ಲ ಉಮೇದವಾರರು ಕಾರವಾರ ಕೇಂದ್ರದಲ್ಲಿ ಪರೀಕ್ಷೆಗೆ ಕೂಡ್ರತಕ್ಕದ್ದು.

೪. ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಮೇದುವಾರರು ತಮ್ಮ ಅರ್ಜಿಗಳನ್ನು ತಾವು ಕೂಡ್ರಲಿಚ್ಛಿಸುವ ಕೇಂದ್ರದ ಸಮಿತಿಯ ಚೇಅರಮನ್ನರಿಗೆ ಸರಕಾರದವರು ಗೊತ್ತುಪಡಿಸಿ ಮುದ್ರಿಸಿದ ಫಾರ್ಮಿನಲ್ಲಿ ತುಂಬಿ ಕಳುಹಿಸಬೇಕು. ಈ ಫಾರ್ಮುಗಳಿಗೆ ಬೆಲೆ ಬೀಳುವದಿಲ್ಲ. ಆಯಾ ಸಮಿತಿಗಳ ಚೇಅರಮನ್ನರಿಗೆ ಅರ್ಜಿಮಾಡಿಕೊಂಡರೆ ಕಳುಹಿಸಿಕೊಡುವರು.

೫. ಉರ್ದು ಉಮೇದುವಾರರ ಪರೀಕ್ಷೆಯು ಸಹ ಮೇಲೆ ಹೇಳಿದ ಕೇಂದ್ರಗಳಲ್ಲಿಯೇ ಈವೇ ದಿನಗಳಲ್ಲಿಯೇ ನಡೆಯುವದು.

ಅಥಣಿ ಶಾಲೆಯಲ್ಲಿ ಸುಮಾರು ೭೫ ಶಿ. ಶಿ.ರ ಸಮ್ಮೇಲನವು ೧೮-೧೦-೪೪ ನೆಯ ದಿವಸ ಶ್ರೀ. ಜಗತಾಪ ಸಾಹೇಬರ ಹಿರಿಯತನದಲ್ಲಿ ನೆರವೇರಿತು. —ಶ್ರೀ. ಭೀ. ನ. ಮಣ್ಣೂರ.

ಅಂಕೋಲಾ ಶಾಲೆಯಲ್ಲಿ ೨೬-೯-೪೪ ನೆಯ ದಿವಸ ಶ್ರೀ. ಸ. ಪ. ಗಾವಕರರ ಹಿರಿಯತನದಲ್ಲಿ 'ತೆನ್ನಾಲರಾಮಕೃಷ್ಣ' ಎಂಬ ಚಿಕ್ಕ ನಾಟಕವಾಯಿತು. —ಶ್ರೀ. ಡ. ಏ. ಟ್ಟಿ.

ಹಳಗೆ (ಕಾರವಾರ) ಶಾಲೆಯಲ್ಲಿ ಶ್ರೀ. ವಿ. ರಾ. ಪ್ರಭು ಅವರ ಪ್ರಯತ್ನದಿಂದ ವಿದ್ಯಾರ್ಥಿಗಳ ಸಂಖ್ಯೆಯು. ೧೫ ರಿಂದ ೩೦೦ ಆಗಿದೆ. ಅಧಿಕಾರಿಗಳು ಸದಭಿಪ್ರಾಯ ವಿತ್ತಿದ್ದಾರೆ. —ಶ್ರೀ. ಎನ್. ವ್ಹಿ. ಗಾಯತೋಂಡೆ ಸರಪಂಚರು

ಗದಗ ಸೆಂ. ಸ್ಕೂಲದ ಶ್ರೀ. ಕೆ. ಬಿ. ಅಂಗಡಿ ಅವರು ಆ. ಡೆ. ಎ. ಇ. ಆದುದರಿಂದ ಜೇರಮನ್ನರ ಹಿರಿಯತನದಲ್ಲಿ ಬೀಳ್ಕೊಡುವ ಸಮಾರಂಭವು ೪-೧೧-೪೪ನೆಯ ದಿವಸ ಸಡಗರದಿಂದ ಆಯಿತು. —ಶ್ರೀ. ಬಾ. ಲ. ಹಂಚಾಟೆ

ಹುಕ್ಕೇರಿ ಶ್ರೀ. ಟಿ. ಎಫ್. ದೇಸಾಯಿ ಇವರಿಗೆ ಧಾರವಾಡಕ್ಕೆ ವರ್ಗವಾದುದರಿಂದ ಶ್ರೀ. ನಾಯಿಕ ಅವರ ಹಿರಿಯತನದಲ್ಲಿ ಬೀಳ್ಕೊಡುವ ಸಮಾರಂಭವು ೧೭-೯-೪೪ ನೆಯ ದಿವಸ ಸಂಭ್ರಮದಿಂದ ನೆರವೇರಿತು. —ಶ್ರೀ. ಕೆ. ಬಿ. ಕೆಂಪಣ್ಣೌಗಲಾ

ಅಳಣಾವರ ಇಲ್ಲಿಯ ಅ ವರ್ಗದ ಶಾಲೆಯ ಇನ್‌ಸ್ಪೆಕ್ಶನ್ ಕಾಲದಲ್ಲಿ ವಿದ್ಯಾರ್ಥಿಗಳ ವಿನೋದಗಳನ್ನು ಕಂಡು ಅಧಿಕಾರಿಗಳೂ ಊರ ಹಿರಿಯರೂ ಆನಂದ ಬಟ್ಟರು. ರಾ. ಸಾ. ಕೆ. ಆರ್. ಪಾಟೀಲ ಮೊದಲಾದವರು ಕೂಡಿ ೧೯ ರೂ. ಗಳ ಸಹಾಯ ಮಾಡಿದರು. —ಶ್ರೀ. ಚಂಪ್ರಕಾಂತ ಪಾಟೀಲ.

ಶಿರೋಳ (ನವಲಗುಂದ) ಶಾಲೆಯಲ್ಲಿ ಶಿ. ಶಿ. ಸಮ್ಮೇಲನವು ೧೧-೧೧-೪೪ ನೆಯ ದಿವಸ ಮೆ. ಏ- ಓ. ಸಾಹೇಬರ ಹಿರಿಯತನದಲ್ಲಿ ನೆರವೇರಿತು. ಗ್ರಾಮ ಪಂಚಾಯತಿಯವರು ಜೆನ್ನಾಗಿ ಸಹಾಯ ಮಾಡಿದರು. —ಶ್ರೀ. ಆ. ಶ್ರೀ. ಇನಾಮದಾರ.

ಕೊಡಗಾನೂರು (ವಿಜಾಪುರ ಜಿಲ್ಲೆ) ಶಾಲಾ ವಾಚನಾಲಯಕ್ಕೆ ಜನರಿಂದ ಸಹಾಯವು ಬೇಕಾಗಿದೆಯಂದು ಮುದ್ದೇಬಿಹಾಳದ ಅಭಿಪ್ರಾಯ ಪಡುತ್ತಾರೆ. —ಶ್ರೀ. ಚಿ. ತು. ವಾಳವೇಕರ, ಸೆಕ್ರೆಟರಿ

ಬೀಳಗಿ ಶಾಲೆಯಲ್ಲಿ ೨೨-೧೧-೪೪ ನೆಯ ದಿವಸ ಶ್ರೀ. ವಾಳವೇಕರ ಸಾಹೇಬರ ಹಿರಿಯತನದಲ್ಲಿ ಶಿ. ಶಿ. ಸಮ್ಮೇಲನವಾಯಿತು. ಪಾಠ, ಜರ್ಜೆ, 'ದೇವನೆಲ್ಲಿ' ಎಂಬ ನಾಟಕ ಇವೆಲ್ಲ ಜೆನ್ನಾಗಿ ಆದವು. —ಶ್ರೀ. ಬಿ. ಜಿ. ಘಾನ.

ಮುಶ್ರಿಕೋಟಿ ೨೬-೧೧-೪೪ ನೆಯ ದಿವಸ ಮೆ. ಡೆ. ಎ. ಇ. ಸಾಹೇಬರ ಹಿರಿಯತನದಲ್ಲಿ ಶಿ. ಶಿ. ಸಮ್ಮೇಲನವಾಯಿತು. ಊರ ಹಿರಿಯರೂ, ಅಧಿಕಾರಿಗಳೂ ಬಹಳ ಸಹಾಯ ಮಾಡಿದರು. —ಶ್ರೀ. ಟಿ. ಜಿ. ಗುಪ್ತೆ.

ಬಾಗೇವಾಡಿ (ಹುಕ್ಕೇರಿ ತಾಲೂಕು) ಊರಲ್ಲಿ ಕಳೆದ ನವ್ಹಂಬರ ತಿಂಗಳಲ್ಲಿ, ಶ್ರೀ. ಚಿಕ್ಕಣ್ಣವರ ಇವರು ಜಿ. ಸ್ಕೂ. ದ ಜೇಅರಮನ್ನರಾಗಿ ಆರಿಸಿಬಂದುದಕ್ಕೆ ಸತ್ಕಾರ ಸಮಾರಂಭವಾಯಿತು. —ಶ್ರೀ. ವ್ಹಿ. ವ್ಹಿ. ದೇಶಪಾಂಡೆ.

ಕುಡಚಿ (ಅಥಣಿ ತಾಲೂಕು) ಶಾಲೆಯ ಬಾಲಕರು ೩೦-೧೧-೪೪ ನೆಯ ದಿವಸ 'ಅಹಿಂಸಾವಿಜಯ' ಎಂಬ ಏಕಾಂಕ ನಾಟಕವನ್ನು ಅಭಿನಯಿಸಿದರು. ಅದನ್ನು ನೋಡಿ ಶ್ರೀ. ಕದ್ದು ಅಪ್ಪಾ ಸಾಹೇಬರು ೫ ರೂ. ಮೆಚ್ಚುಗೆ ಕೊಟ್ಟರು. —ಶ್ರೀ. ಮ. ರಾ. ಬಾಲೋಜಿ.

ನವಲೂರು (ಧಾರವಾಡ ತಾಲೂಕು) ೧೦-೧೨-೪೪ ನೆಯ ದಿವಸ ಶಿ. ಶಿ. ಸ

ಸಮ್ಮೇಲನವು ಶ್ರೀ. ಭಂಡಿವಾಡ ಸಾಹೇಬರ ಹಿರಿಯತನದಲ್ಲಿ ಸಾಗಿತು. ಶಾಲೆಯ ವಿದ್ಯಾರ್ಥಿಗಳು ಮಾಡಿ ತೋರಿಸಿದ ಸಂಭಾಷಣೆ, ಆಟ, ಹರಕ ಸಂಸಾರ-ಮುರಕ ವಿದ್ಯೆ ಎಂಬ ಚಿಕ್ಕ ನಾಟಕ ಇವನ್ನು ನೋಡಿ ಊರವರು ಸಂತೋಷದಿಂದ ಶಾಲಾ ವಾಚನಾಲಯಕ್ಕಾಗಿ ೧೫ ರೂ. ಕೊಟ್ಟರು. —ಶ್ರೀ. ಬ. ಹ. ಕೆಂಚರಡ್ಡಿಯವರ ಹೆ. ಮಾ.

ರಟ್ಟೀಹಳ್ಳಿ (ಹಿರೇಕೇರೂರ ತಾಲೂಕು) ೧೦-೧೨-೪೪ ನೆಯ ದಿವಸ ಮೆ. ಮುಲ್ಲಾ ಸಾಹೇಬರ ಹಿರಿಯತನದಲ್ಲಿ ಶಿ. ಶಿ. ಸಮ್ಮೇಲನವು ವಿಜೃಂಭಣೆಯಿಂದ ಸಾಗಿತು. —ಶ್ರೀ. ಬ. ಭೀ. ಇಂಗಳಗೊಂದಿ ಹೆ. ಮಾ.

ಧಾರವಾಡ ಮ್ಯು. ಪ್ರಾ. ಸ್ಕೂಲುಗಳ ಮಾದರಿಯ ಪಾಠಮಾಲೆಯಲ್ಲಿ ಈ ವರ್ಷ ೫ ಪಾಠಗಳಾದವು. ೧೪-೧೨-೪೪ ನೆಯ ದಿವಸ ಶ್ರೀ. ಶಿಂತ್ರಿಸಾಹೇಬರು 'ನಕ್ಷತ್ರ ವಿಜ್ಞಾನ'ದ ಉಪನ್ಯಾಸವನ್ನಿತ್ತು ರಾತ್ರಿಯಲ್ಲಿ ಪ್ರತ್ಯಕ್ಷ ತೋರಿಸಿದರು.

—ಶ್ರೀ. ನಾ. ಲಿ. ಧಾರವಾಡ ಕಾರ್ಯದರ್ಶಿ.

ಮೂರೂರು (ಕುಮಟಾ ತಾಲೂಕು) ೧೬-೧೨-೪೪ ಶಾಲೆಯಲ್ಲಿ ಶಾರೀರಿಕ ಶಿಕ್ಷಣದ ಚಟುವಟಿಕೆಗಳ ಪ್ರದರ್ಶನವಾಯಿತು. —ಶ್ರೀ. ಅಡಕೋಳಿ.

ಕೊಟಬಾಗಿ (ಧಾರವಾಡ ತಾಲೂಕ) ಇಲ್ಲಿಯ ಮಲ್ಲಿಕಾರ್ಜುನ ವಾಚನಾಲಯಕ್ಕೆ ಊರ ಹಿರಿಯರು ೩೫ ರೂ. ಕಾಣಿಕೆಯಿತ್ತರು. —ಬಿ. ಎಸ್. ಶಾಕೂರ, ಹೆ. ಮಾ.

ಐಗಳಿ (ಬೆಳಗಾವಿ ಜಿಲ್ಲೆ) ೧೬-೧೨-೪೪ ನೆಯ ದಿವಸ ಇಲ್ಲಿ ಆದ ಶಾರೀರಿಕ ಶಿಕ್ಷಣ ದಿನೋತ್ಸವದ ಕಾಲದಲ್ಲಿ ವಿದ್ಯಾರ್ಥಿಗಳ ಚಟುವಟಿಕೆಗಳನ್ನು ಕಂಡು ಗ್ರಾಮಪಂಚಾಯತಿಯವರು ೩೦ ರೂ. ಕಾಣಿಕೆಯಾಗಿ ಕೊಟ್ಟರು. —ಶ್ರೀ. ಗೋವಿಂದಪ್ಪ ನೇಮಗೌಡ ಸೆಕ್ರೆಟರಿ.

ಹುಲೇಕಲ್ಲು— (ಕಾರವಾರ ಜಿಲ್ಲೆ) ೧೬-೧೨-೪೪ನೆಯ ದಿವಸ ಶ್ರೀ. ತಿಮ್ಮಪ್ಪ ನವರ ಹಿರಿಯತನದಲ್ಲಿ ಶಾರೀರಿಕ ಶಿಕ್ಷಣ ದಿನಾಚರಣೆಯು ಆಚರಿಸಲ್ಪಟ್ಟಿತು.

—ಶ್ರೀ. ಲ. ಪಿತ್ರೆ ಹೇ. ಮಾ. ಹುಲೇಕಲ್ಲು

ಕಾರವಾರ— ತಾಲೂಕ ಶಾಲೆಯಲ್ಲಿ ೧೪-೧೨-೪೪ನೆಯ ದಿವಸ ಶಾರೀರಿಕ ಶಿಕ್ಷಣ ಶಿಬಿರದ ಸಮಾರೋಪ ಸಮಾರಂಭವು ವಿಜೃಂಭಣೆಯಿಂದ ನೆರವೇರಿತು.

—ಶ್ರೀ. ವಿ. ಸ. ಪವಾರ ಅ. ಮಾ.

ಕೋಟುಉಮಚಗಿ— ಇಲ್ಲಿಯ ಮೋಹನ ವಾಚನಾಲಕ್ಕೆ ೨೫ ರೂ. ಮತ್ತು ೩೨ ಪುಸ್ತಕಗಳು ಕೂಡಿವೆ. —ಶ್ರೀ. ಲ. ವಿ. ಘಾಟಕ ಹೆ. ಮಾ.

ಸಾದರಸ್ವೀಕಾರ

೧. **ನಿಬಂಧ ಮತ್ತು ವ್ಯಾಕರಣ**-ಮೂರನೆಯ ಇಯತ್ತೆಯ ಸಲುವಾಗಿ. ಪುಟ ೨೦; ಬೆಲೆ ೫ ಆ; ಈ ಪುಸ್ತಕವನ್ನು ಶ್ರೀ. ಚಿ. ಶ್ರೀ. ಕುಲಕರ್ಣಿಯವರು ಬರೆದಿರುವರು. ರಾಮಾಶ್ರಯ ಬುಕ್‌ಡಿಪೋ ಧಾರವಾಡ ಇವರು ಪ್ರಸಿದ್ಧಿಸಿರುವರು.

೨. **ಕನ್ನಡ ಬಾಲಬೋಧನೆಯಲ್ಲಿಯ ಪದಗಳ ನೋಟೇಶನ್**— ಬರೆದವರು ಶ್ರೀ. ಟಿ. ವ್ಹಿ. ಕಟ್ಟಿ ಹೆ. ಮಾ. ಹೆಬ್ಬಳ್ಳಿ, ಜಿ. ವಿಜಾಪುರ. ಬೆಲೆ ೪ ಆಣೆ. ಬಾಲಬಾಲಿಕೆಯರಿಗಾಗಿ ಬರೆದ ತಮ್ಮ ಬಾಲಬೋಧನೆಯಲ್ಲಿಯ ಪದಗಳ ನೋಟೇಶನ್ (ರಾಗ-ತಾಳಗಳ ವಿಸ್ತಾರ)ವನ್ನು ಚೆನ್ನಾಗಿ ಕೊಟ್ಟಿದ್ದಾರೆ.

೩. **ಮೊದಲನೆಯ ಇಯತ್ತೆಯ ವಾಚನ ಪುಸ್ತಕ**— ಬರೆದವರು ಶ್ರೀ. ಟಿ. ವ್ಹಿ. ಕಟ್ಟಿ ಹೆ. ಮಾ. ಹೆಬ್ಬಳ್ಳಿ ಜಿ. ವಿಜಾಪುರ. ೧೨೦ ಪುಟಗಳು; ಬೆಲೆ ೨ ಆ. ೯ ಪೈ. ಮುದ್ರಣ, ಕಾಗದ, ಚಿತ್ರಗಳು ಚೆನ್ನಾಗಿವೆ. ಬಲೆಯೂ ಕಡಿಮೆ. ಪಠ್ಯಪುಸ್ತಕವೆಂದು ಮಂಜೂರಾಗಿದೆ.

ಕೊಲೆಗೆ ಕೊಲೆಯೇ ಪ್ರತೀಕಾರವೇ !

(ಸಾಕ್ಷರಿಗಳಾದ ಪ್ರಬುದ್ಧರಿಗಾಗಿ)

ನಮ್ಮ ದೇಶದ ಪಶ್ಚಿಮಕ್ಕೆ ಅರಬಸ್ಥಾನವೆಂಬ ದೇಶವಿರುವದು. ಅಲ್ಲಿ ಖರ್ಜೂರದ ಗಿಡಗಳು ನಮ್ಮ ದೇಶದಲ್ಲಿ ತೆಂಗಿನ ಗಿಡಗಳು ಬೆಳೆವಂತೆ ೫೦-೪೦ ಅಡಿ ಎತ್ತರವಾಗಿ ಬೆಳೆಯುವವು. ಜನರು ಅಷ್ಟು ಎತ್ತರವಾದ ಗಿಡಗಳನ್ನು ಏರಿ ಹಣ್ಣುಗಳನ್ನು ಹರಿದುಕೊಳ್ಳುವರು. ಬಹುಕಾಲದ ಹಿಂದೆ ಆ ಅರಬಸ್ಥಾನದಲ್ಲಿ ಇಬನ್‌ಸಾವೂದನೆಂಬ ಹೆಸರಾದ ಅರಸನು ಆಗಿಹೋದನು. ಅವನು ವಾದಿಪ್ರತಿವಾದಿಗಳಿಬ್ಬರಿಗೂ ಅಹಿತವಾಗದಂತೆ ನ್ಯಾಯತೀರಿಸಬಲ್ಲ ಜಾಣನಾದ ನ್ಯಾಯಾಧೀಶನೆಂದು ಹೆಸರಾಗಿದ್ದನು. ಒಂದು ದಿನ ಹೆಂಗುಸೊಬ್ಬಳು ಅತನ ಮುಂದೆ ಬಂದು 'ಒಬ್ಬ ಅರಬನು ತನ್ನ ಗಂಡನ ಕೊಲೆಮಾಡಿರುವನೆಂದೂ ತನ್ನ ಗಂಡನ ಕೊಲೆಗೆ ಪ್ರತಿಯಾಗಿ ತಾನು ಅತನ ಪ್ರಾಣತೆಗೆದುಕೊಳ್ಳಲು ಅಪ್ಪಣೆ ಕೊಡಬೇಕೆಂದೂ' ಫಿರ್ಯಾದಿಮಾಡಿದಳು.

ಅರಸನು ಕೊಲೆಯಾದ ವಿವರಗಳನ್ನೆಲ್ಲ ಕೇಳಿಕೊಂಡು 'ಅಮ್ಮಾ, ನಾನು ನಿನಗೆ ಆದ ಹಾನಿಯನ್ನು ತುಂಬಿಕೊಡಲು ಕೆಲವು ಹಣವನ್ನು ಕೊಡಿಸಿದರೆ ನಡೆಯಬಹುದೋ' ಎಂದು ಕೇಳಿದನು. "ಈ ದುರಾತ್ಮನ ಸಲುವಾಗಿ ನಾನು ವಿಧವೆಯಾಗಬೇಕಾಯಿತು. ನನ್ನ ವೈಧವ್ಯ ದುಃಖವು ನೀವು ಕೊಡಿಸುವ ಹಣದಿಂದ ತುಂಬಿ ಬರಲಾರದು. ನನಗೆ ಈತನ ಕೊಲೆ ಮಾಡಲು ಅಪ್ಪಣೆ ದೊರೆಯಬೇಕು. ಕೊಲೆಗೆ ಕೊಲೆಯೇ ಪ್ರತೀಕಾರ ಎಂದು ತಮ್ಮ ನಿರ್ಣಯವಿರುವದಲ್ಲವೇ?"

"ಅದೇನೋ ನಿಜ! ತಾಯೀ, ಈತನು ನಿನ್ನ ಗಂಡನ ಮೇಲೆ ಬೀಳಬೇಕೆಂದೇ ಗಿಡವನ್ನು ಏರಿದ್ದನೇ?"

"ಅದೆಲ್ಲಾ ನನಗೆ ಗೊತ್ತಿಲ್ಲ; ನಾವಿಬ್ಬರೂ ಆ ಖರ್ಜೂರದ ಗಿಡದ ಕೆಳಗೆ ಕುಳಿತಿದ್ದೆವು. ಈ ನೀಚನು ೪೦ ಅಡಿ ಎತ್ತರದ ಮೇಲಿನಿಂದ ಬಿದ್ದನು. ಅದರಿಂದ ನನ್ನ ಗಂಡನ ಗೋಣು ಮುರಿದು ತಕ್ಷಣ ಮರಣ ಹೊಂದಿದನು.

ತುಂಬಿದ ಆರೋಗ್ಯದಿಂದಿರುವ ನನ್ನ ಗಂಡನ ಮೇಲೆ ಬಿದ್ದು

ಕೊಲೆಮಾಡಿದ ಈತನ ಕೊಲೆ ಮಾಡುವದರಿಂದಲೇ ನನ್ನ ಮನಸ್ಸಿಗೆ ಸ್ವಲ್ಪವಾದರೂ ಸಮಾಧಾನವಾದೀತು. "

" ತಾಯೀ, ನಿನ್ನ ಮಾತು ನನಗೆ ತಿಳಿಯಿತು. ನ್ಯಾಯಾಧೀಶನು ಕೊಲೆಮಾಡಿದವನ ಉದ್ದೇಶವನ್ನೂ ನೋಡಿ ಶಿಕ್ಷೆಯನ್ನು ವಿಧಿಸಬೇಕೆಂದು ನಿಯಮವಿದೆ. ನಿನಗಾದ ಹಾನಿಗೆ ನಿನ್ನ ವಿಚಾರದಂತೆ ಅಲ್ಲದಿದ್ದರೂ ನನ್ನ ಅಭಿಪ್ರಾಯದಂತೆ ತಕ್ಕಷ್ಟು ಪರಿಹಾರವನ್ನು ಕೊಡಿಸಲೋ ಅಥವಾ ನೀನು ಈತನ ಕೊಲೆಮಾಡುವದಕ್ಕೇ ಆತುರಳಾಗಿರುವಿಯೋ ಎಂಬುದು ನನ್ನ ಪ್ರಶ್ನೆ. ಕೊಲೆಮಾಡುವದೇ ನಿನ್ನ ಉದ್ದೇಶವಿದ್ದರೆ, ನಾನು ಅದನ್ನೂ ಒಪ್ಪಿಕೊಳ್ಳಬಹುದು. ಆದರೆ ಕೊಲೆಮಾಡುವ ಕ್ರಮವನ್ನು ಗೊತ್ತು ಪಡಿಸುವ ಅಧಿಕಾರವು ಮಾತ್ರ ಸಂಪೂರ್ಣ ನನ್ನದು. "

"ಈತನ ಕೊಲೆ ಮಾಡುವದಕ್ಕೇ ನನಗೆ ಅಪ್ಪಣೆ ದೊರೆಯಬೇಕು."

ನ್ಯಾಯಾಧೀಶನು ತನ್ನ ಕೊನೆಯ ನಿರ್ಣಯವನ್ನು ಹೀಗೆಂದು ಹೇಳಿದನು:—

"ಅಪರಾಧಿಯನ್ನು ಳಂ ಅಡಿ ಎತ್ತರವಾದ ಅದೇ ಖರ್ಜೂರದ ಗಿಡದ ಬುಡದಲ್ಲಿ ಬಿಗಿಯಾಗಿ ಕಟ್ಟಿ ಕೂಡ್ರಿಸಬೇಕು. ಫಿರ್ಯಾದಿಯು ಗಿಡವನ್ನು ಏರಿ ಅತನ ಮೇಲೆ ಹಾರಿ ಕೊಲೆ ಮಾಡಬೇಕು. ಇದರಿಂದ ಕೊಲೆಗೆ ಕೊಲೆಯೇ ಪ್ರತೀಕಾರವಾಯಿತಷ್ಟೇ ಅಲ್ಲದೆ, ಕೊಲೆಯ ಕ್ರಮದಲ್ಲಿಯೂ ಬದಲಾಗಲಿಲ್ಲ. ಹಾಗಲ್ಲದೆ ಇದ್ದರೆ ಅಪರಾಧಿಯು ಅಕೆಯ ಗಂಡನ ಕೊಲೆ ಮಾಡುವದಕ್ಕಲ್ಲದೆ ಖರ್ಜೂರದ ಹಣ್ಣುಗಳನ್ನು ಹರಿಯುವದಕ್ಕೆ ಗಿಡವನ್ನೇರಿ ಕೈತಪ್ಪಿ ಬಿದ್ದಿರುವನೆಂದೂ ಅಕಸ್ಮಾತ್ ಘಟಿಸಿದ ಅಪಘಾತದಿಂದಲೇ ಅತನು ಮರಣ ಹೊಂದಿದನೆಂದೂ ತಿಳಿದು ಅದಕ್ಕೆ ತಕ್ಕಷ್ಟು ಪರಿಹಾರ ದ್ರವ್ಯವನ್ನು ಅಪರಾಧಿಯಿಂದ ಪಡೆದು ಫಿರ್ಯಾದಿಯು ಸಮಾಧಾನ ಹೊಂದಬಹುದು."

ಇಬನ್ ಸಾವೂದನ ಈ ನ್ಯಾಯ ನಿರ್ಣಯಕ್ಕೆ ಎಲ್ಲರೂ ಸೈ ಸೈ ಎಂದು ತಲೆದೂಗಿದರು. ಫಿರ್ಯಾದಿ ಮಾಡಿದ ಹೆಣ್ಣುಮಗಳೂ ಕೂಡ ತನ್ನ ತಪ್ಪು ವಿಚಾರವನ್ನು ತಿದ್ದಿಕೊಂಡು ತಕ್ಕಷ್ಟು ಪರಿಹಾರ ದ್ರವ್ಯವನ್ನು ಪಡೆದು ಸಮಾಧಾನ ಹೊಂದಿದಳು.

೬. ಪರೀಕ್ಷೆಗೆ ಕೂಡ್ರಲಿಕ್ಕೆ ಅಪ್ಪಣೆಯನ್ನು ಬೇಡುವ **ಅರ್ಜಿಯೂ** ಪರೀಕ್ಷೆಯ **ಫೀ ಮೂರು ರೂಪಾಯಿಗಳೂ** ಆಯಾ ಕೇಂದ್ರಗಳ ಜೇಅರವುನ್ನರಿಗೆ **೧-೩-೧೯೪೫** ನೆಯ ದಿವಸ ಅಥವಾ ಅದಕ್ಕೂ ಮೊದಲೇ ಮುಟ್ಟಿರಬೇಕು. ಅದಕ್ಕೂ ತಡವಾಗಿ ಬಂದ ಅರ್ಜಿಗಳು ಸ್ವೀಕರಿಸಲ್ಪಡಲಾರವು. ಗುಡ್ಡಗಾಡು ಜನರ ತಂಡಗಳನ್ನೊಳಗೊಂಡ ಹಿಂದುಳಿದ ವರ್ಗಗಳ ಉಮೇದುವಾರರಿಗೆ ಪರೀಕ್ಷೆಗೆ ಫೀಯು **ಒಂದು ರೂಪಾಯಿ** ಮಾತ್ರ ಇರುವದು.

೭. ಹೆಚ್ಚಿನ ವಿವರಣೆಗಳು ಹಿಂದೆ ೧೯೪೪ನೆಯ ಇಸ್ವಿಯ ಜನವರಿ ತಿಂಗಳ ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟವಾಗಿರುವವು.

(ಸಹಿ) A KHAN
ಎಜ್ಯುಕೇಶನಲ್ ಇನ್‌ಸ್ಪೆಕ್ಟರ.

ತಾ. ೩೧-೧೨-೧೯೪೪

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ ೧೯೪೫ ಕಾರ್ಯಕ್ರಮ ಪತ್ರಿಕೆಯು

ವಾರ ಮತ್ತು ತಾರೀಖು	ವೇಳೆ ಇಂದ	ವರೆಗೆ	ವಿಷಯ	ಗುಣಗಳು
ಸೋಮವಾರ ೫-೩-೪೫	೨	೨-೨೦	ಪರೀಕ್ಷೆಗೆ ಕೂಡ್ರುವ ಉಮೇದುವಾರರ ಹಾಜರಿ ತಕ್ಕೊಳ್ಳುವದು.	ಅ. ೬೫ ಬ. ೩೫
	೨-೩೦	೫-೦	೧ನೆಯ ಸದರು- ೧ನೆಯ ಕಾಗದ- ಪ್ರಾಂತಿಕ ಭಾಷೆ. (ಅಂದರೆ ಕನ್ನಡ, ಮರಾಠಿ, ಗುಜರಾಥಿ, ಉರ್ದು) (ಅ) ಗದ್ಯ ಮತ್ತು ಪದ್ಯ (ಬ) ವ್ಯಾಕರಣ.	
ಮಂಗಳವಾರ ೬-೩-೪೫	೧೦-೩೦	೨-೩೦	೨ನೆಯ ಸದರು- (ಅ) ಅಂಕಗಣಿತ (ಭೂಮಿತಿ ಸಹಿತ) ಮತ್ತು (ಬ) ಮನೆತನದ ಜಮಾಖರ್ಚು.	ಅ. ೪೦ ಬ. ೨೦
	೩-೩೦	೫-೩೦	೪ನೆಯ ಸದರು - ಗೃಹಕರ್ಮವಿಜ್ಞಾನ.	೧೦೦
ಬುಧವಾರ ೭-೩-೪೫	೧೧-೩೦	೨-೦	೩ನೆಯ ಸದರು- (ಅ) ಇತಿಹಾಸ ಮತ್ತು (ಬ) ಭೂಗೋಲ.	ಅ. ೫೦ ಬ. ೫೦
	೩-೦	೫-೩೦	೧ನೆಯ ಸದರು ೨ನೆಯ ಕಾಗದ- ನಿಬಂಧ ಮತ್ತು ಕೈಬರೆಹ.	೧೦೦
ಗುರುವಾರ ೮-೩-೪೫	೧೧-೩೦	೧-೩೦	೬ನೆಯ ಸದರು- ಐಚ್ಛಿಕ ವಿಷಯ * ಡ್ರಾಯಿಂಗ, ಗಾಯನ, ಪ್ರಕೃತಿವಿಮರ್ಶೆ.	೧೦೦
	೩-೩೦	೬-೦	೫ನೆಯ ಸದರು- ಹೊಲಿಗೆಯ ಕೆಲಸ.	೧೦೦

* ಉಮೇದವಾರರು ಈ ಮೂರರಲ್ಲೊಂದು ಐಚ್ಛಿಕ ವಿಷಯವನ್ನು ತೆಗೆದುಕೊಳ್ಳಲೇಬೇಕು.

ವಿಶೇಷ ಸೂಚನೆ— ಉಮೇದುವಾರರು ಪರೀಕ್ಷೆಯ ಮೊದಲನೆಯ ದಿನ ಪ್ರತ್ಯಕ್ಷ ಪರೀಕ್ಷೆಯು ಪ್ರಾರಂಭವಾಗುವ ವೇಳೆಗಿಂತ ಒಂದು ತಾಸು ಮೊದಲು ಪರೀಕ್ಷೆಯು ನಡೆಯುವ ಸ್ಥಳದಲ್ಲಿ ಹಾಜರ ಇರಲೇಬೇಕು.

ಈ ವರ್ಷದ ಮಿಡಲ್‌ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆ

ವಾರ ಮತ್ತು ತಾರೀಖು	ವೇಳೆ		ವಿಷಯ	ಗುಣಗಳು
	ಇಂದ	ವರೆಗೆ		
ಗುರುವಾರ ೮-೨-೧೯೪೫	೧೨—೦	೧೨-೧೫	ಉಮೇದುವಾರರ ಹಾಜರಿ ತೆಗೆದುಕೊಳ್ಳುವದು.	
	೧೨-೩೦	೧—೩೦	ಅಂಕಗಣಿತ	೧೦೦
	೨—೩೦	೩—೧೫	ಸಾಮಾನ್ಯ ವಿಜ್ಞಾನ–ಮೊದಲನೆಯ ಕಾಗದ ಇತಿಹಾಸ ಮತ್ತು ಭೂಗೋಲ (ರಾಜಕೀಯ)	೫೦
	೪—೦	೪—೪೫	ಸಾಮಾನ್ಯವಿಜ್ಞಾನ–ಎರಡನೆಯ ಕಾಗದ (ಪ್ರಾಕೃತಿಕ) ಭೂಗೋಲ ಮತ್ತು ಶಾಸ್ತ್ರೀಯ ವಿಷಯ	೫೦
ಶುಕ್ರವಾರ ೯-೨-೧೯೪೫	೩—೦	೩—೪೫	ಪ್ರಾಂತಿಕ ಭಾಷೆ–ಮೊದಲನೆಯ ಕಾಗದ (ಮೌನವಾಚನ, ಪುನರ್ಲೇಖನ ಮತ್ತು ನಿಬಂಧ)	೫೦
	೫—೦	೫—೪೫	ಪ್ರಾಂತಿಕ ಭಾಷೆ–ಎರಡನೆಯ ಕಾಗದ (ವಾಚನ, ಅರ್ಥ ತಿಳಿದುಕೊಳ್ಳುವದು, ಮುಂತಾದವು.)	೫೦

ಧಾರವಾಡ ಜಿಲ್ಲೆಯಲ್ಲಿ ವೆಂಕಾಸಾನಿ ಸ್ಕಾಲರ್‌ಶಿಪ್ಪಿನ ಮತ್ತು ಮತ್ತು ಮಜಮ್ಮಡನ್ ಬರ್ಸರಿ ಫಂಡಿನ ಸ್ಕಾಲರ್‌ಶಿಪ್ಪಿನ-ಸಲುವಾಗಿ ನಡೆಯುವ ಪರೀಕ್ಷೆಗಳೂ ಇದೇ ಕಾಲದಲ್ಲಿಯೇ ನಡೆಯುವವು.

ಪ್ರಕಟನೆ ೨

ಮಿಡಲ್ ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆ ೧೯೪೫

೧. ಕೆಳಗೆ ಬರೆದಂತೆ ಸಾರ್ವತ್ರಿಕ ಮತ್ತು ವಿಶಿಷ್ಟಪ್ರಕಾರದ ವಿದ್ಯಾರ್ಥಿ ವೇತನಗಳನ್ನು ಕೊಡುವದರ ಸಲುವಾಗಿ ನಡೆಯುವ ಈ ವರ್ಷದ ಮಿಡಲ್ ಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆಯು ೧೯೪೫ ನೆಯ ಇಸ್ವಿಯ ಫೆಬ್ರುವರಿ ತಿಂಗಳ ೮ ಮತ್ತು ೯ ನೆಯ ತಾರೀಖುಗಳ ದಿವಸ ದಕ್ಷಿಣಭಾಗದೊಳಗಿನ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿ ನಡೆಯಬೇಕೆಂದು ಗೊತ್ತಾಗಿದೆ.

ಈ ಕೆಳಗೆ ಬರೆದಷ್ಟು ಸ್ಕಾಲರ್‌ಶಿಪ್ಪುಗಳು ಆಯಾ ಜಿಲ್ಲೆಗಳಲ್ಲಿ ಆಯಾ ವರ್ಗಗಳ ವಿದ್ಯಾರ್ಥಿಗಳಿಗೆ ದೊರೆಯುವವು.

ಜಿಲ್ಲೆಯ ಕೇಂದ್ರದ ಹೆಸರು	ಜಿಲ್ಲೆಯೊಳಗಿನ ಎಲ್ಲ ವರ್ಗಗಳ ಜನರ ಬಗ್ಗೆ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ವೇತನಗಳು	ಜಿಲ್ಲೆಯೊಳಗಿನ ವಿಶಿಷ್ಟ ವರ್ಗಗಳ ಜನರಿಗಾಗಿ ಕಾಯ್ದಿಟ್ಟ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ವೇತನಗಳು			
		ಮಾಧ್ಯಮಿಕ ವರ್ಗಗಳ ವಿದ್ಯಾರ್ಥಿಗಳ ಬಗ್ಗೆ	ಹಿಂದುಳಿದ ವರ್ಗಗಳ ವಿ. ಗಳ ಬಗ್ಗೆ	ಮುಸಲ್ಮಾನ ವಿ. ಗಳ ಬಗ್ಗೆ	ಒಟ್ಟು
ಧಾರವಾಡ	೨	೧೩	೫	೧೧	೩೧
ಬೆಳಗಾವಿ	೨	೧೩	೫	೬	೨೬
ವಿಜಾಪುರ	೨	೧೦	೫	೬	೨೪
ಕಾರವಾರ	೨	೫	೧	೩	೧೧
ಒಟ್ಟು	೮	೪೧	೧೬	೨೬	೯೨

(೧) ಹಿಂದುಳಿದ ವರ್ಗಗಳಿಗಾಗಿ ಗೊತ್ತುಪಡಿಸಿದ ಒಟ್ಟು ವಿದ್ಯಾರ್ಥಿ ವೇತನಗಳಲ್ಲಿ ನೂರಕ್ಕೆ ೨೦ ರಷ್ಟು ವಿದ್ಯಾರ್ಥಿವೇತನಗಳನ್ನು ಹೆಣ್ಣುಮಕ್ಕಳಿಗಾಗಿ ಕಾಯ್ದಿಡಲಾಗಿದೆ.

ಕಾರವಾರ ಜಿಲ್ಲೆಯಲ್ಲಿ ಈ ಬಗ್ಗೆ ಕಾಯ್ದಿಟ್ಟ ವಿದ್ಯಾರ್ಥಿವೇತನವನ್ನು ಒಂದು ವರ್ಷ ಒಬ್ಬ ವಿದ್ಯಾರ್ಥಿಗೂ ಮರುವರ್ಷ ಒಬ್ಬ ವಿದ್ಯಾರ್ಥಿನಿಗೂ ಕೊಡಬೇಕೆಂದು ಗೊತ್ತಾಗಿದೆ. ಈ ವರ್ಷ ಅದು ಒಬ್ಬ ವಿದ್ಯಾರ್ಥಿಗೆ ಹೋಗುವದು.

(೨) ಮುಸಲ್ಮಾನರಿಗಾಗಿ ಗೊತ್ತುಪಡಿಸಿದ ಒಟ್ಟು ವಿದ್ಯಾರ್ಥಿವೇತನಗಳಲ್ಲಿ ಒಂದನ್ನು ವಿದ್ಯಾರ್ಥಿನಿಯರಿಗಾಗಿ ಕಾಯ್ದಿಡಲಾಗಿದೆ.

೨. ಬೆಳಗಾವಿಯ ಕೇಂದ್ರದ ಪರೀಕ್ಷೆಯ ಭಾಷೆಯು ಮರಾಠಿ ಮತ್ತು ಕನ್ನಡ ಎಂದೂ, ಧಾರವಾಡ, ವಿಜಾಪುರ, ಕಾರವಾರ ಕೇಂದ್ರಗಳಲ್ಲಿ ಕನ್ನಡವೊಂದೇ ಪರೀಕ್ಷೆಯ ಭಾಷೆಯೆಂದೂ ಗೊತ್ತಾಗಿದೆ. ಆದರೆ ಮುಸಲ್ಮಾನ ಉಮೇದುವಾರರು ಉರ್ದುವಿನಲ್ಲಿ ಪರೀಕ್ಷೆಗೆ ಕೂಡ್ರಬಹುದು. ಮತ್ತು ಉರ್ದು ಭಾಷೆಯು ಅವರ ಪ್ರಾಂತಿಕ ಭಾಷೆಯೆಂದು ತಿಳಿಯಲಾಗಿದೆ.

೩. ಸ್ಥಾನಿಕ ಸರಕಾರಿ ಹೈಸ್ಕೂಲಿನ ಹೆಡ್‌ಮಾಸ್ತರರು ಪ್ರೆಸಿಡೆಂಟರಾಗಿರುವ ಒಂದು ಕಮಿಟಿಯ ಮುಖಾಂತರವಾಗಿ ಈ ಪರೀಕ್ಷೆಯು ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿ ನಡೆಯುವದು. ಎ. ಕೆ. ಗರ್ಲ್ಸ್ ಹೈಸ್ಕೂಲಿನ ಹೆಡ್ ಮಿಸ್ಟ್ರೆಸರು ಧಾರವಾಡ ಜಿಲ್ಲಾ-ಕೇಂದ್ರದ ಅಧ್ಯಕ್ಷರು.

೪. ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಮೇದುವಾರರು ತಮ್ಮ ಅರ್ಜಿಗಳನ್ನು ಮುದ್ರಿಸಿದ ನಮೂನೆಯಲ್ಲಿ (ಫಾರ್ಮಿನಲ್ಲಿ) ತಯಾರಿಸಿ ೧೯೪೫ನೆಯ ಇಸ್ವಿಯ ಜನವರಿ ತಿಂಗಳ ೫ನೆಯ ತಾರೀಖಿನ ಒಳಗಾಗಿ ಆಯಾ ಕೇಂದ್ರಗಳ ಪ್ರೆಸಿಡೆಂಟರಿಗೆ ಮುಟ್ಟುವಂತೆ ಕಳುಹಿಸಬೇಕು. ಈ ಅರ್ಜಿಯ ನಮೂನೆಗಳನ್ನು ಆಯಾ ಕೇಂದ್ರಗಳ ಪರೀಕ್ಷಾ ಕಮಿಟಿಯ ಅಧ್ಯಕ್ಷರಿಗೆ ಅರ್ಜಿ ಮಾಡಿಕೊಂಡು ಅವರಿಂದ ತರಿಸಿಕೊಳ್ಳಬಹುದು. ಅರ್ಜಿಯ ಸಂಗಡಲೇ ೧ ರೂ. ಫಿಯನ್ನೂ ಕಳುಹಿಸಲೇಬೇಕು. ಅರ್ಥಾತ್ ಮೇಲೆ ಹೇಳಿದ ತಾರೀಖಿನ ದಿವಸ ಅಥವಾ ಅದಕ್ಕೂ ಮೊದಲೇ ಅರ್ಜಿಯೂ ಫೀ ಹಣವೂ ಅಧ್ಯಕ್ಷರಿಗೆ ಮುಟ್ಟಲೇ ಬೇಕು. ಆ ತಾರೀಖನ್ನು ಮೀರಿ ಬಂದ ಅರ್ಜಿಯನ್ನು ಅಥವಾ ಫೀಯ ಹಣವನ್ನು ಸ್ವೀಕರಿಸಲಿಕ್ಕಿಲ್ಲ. ಹಿಂದುಳಿದ ವರ್ಗಗಳ ಉಮೇದವಾರರು ಫೀ ಕೊಡುವ ಕಾರಣವಿಲ್ಲ.

ದಕ್ಷಿಣ ಭಾಗದ
ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಕಚೇರಿ,
ಧಾರವಾಡ ೧೧ನೆಯ ನವೆಂಬರ ೧೯೪೪

(ಸಹಿ) B. G. GUNJIKAR,
ದಕ್ಷಿಣ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಪರವಾಗಿ,

ಪತ್ರಗಳ ಮುಖ್ಯಾಂಶಗಳು

ಅಕ್ಕಿವಾಟ (ಚಿಕ್ಕೋಡಿ ತಾಲೂಕು) ೨೪-೭-೪೪ರ ನೆಯ ದಿವಸ ಶ್ರೀ. ತಳವಾರ ಮಾರುತಿರಾಯರು ಶಾಲೆಯ ಹುಡುಗರಿಗೆ ೧೦ ರೂ. ಬೆಲೆಬಾಳುವ ಪಾಟಿ ಪುಸ್ತಕಗಳನ್ನು ಹಂಚಿದರು. —ಶ್ರೀ. ಆ. ಕಲ್ಲಣ್ಣವರ ಸ್ಕೂ. ಕ. ಚೇಅರಮನ್ನರು

ಬಾಗಲಕೋಟೆ ಈ ಭಾಗದ ಶಿ. ಶಿ. ಸಮ್ಮೇಲನವನ್ನು ೮-೯-೪೪ರ ನೆಯ ದಿವಸ ಮೆ. ಎ. ಇ. ದ. ಭಾ. ಧಾರವಾಡ ಅವರು ಉದ್ಘಾಟನೆ ಮಾಡಿದರು. ಪಾಠ, ಚರ್ಚೆ ಮೊದಲಾದವುಗಳೂ ಆದವು. —ಶ್ರೀ. ಹ. ಪಾ. ಕಾಥವಟಿ.

ನಾಗಾವಿ (ಗದಗ ತಾಲೂಕು) ೧೨-೯-೪೪ರ ನೆಯ ದಿವಸ ನಾಗಾರ್ಜುನ ಸ್ಕೂಲ್ ಲಾಯಬ್ರರಿ ಕಮಿಟಿ ಕೂಡಿತ್ತು. ಊರವರು ೧೭ ರೂ. ಗಳ ಸಹಾಯ ಮಾಡಿದರು. —ಶ್ರೀ. ಶಿ. ಬ. ಆಂಗಡಿ.

ಹೊಸೂರು (ಸವದತ್ತಿ ತಾಲೂಕು) ೯-೯-೪೪ರ ನೆಯ ದಿವಸ ಶಾಲಾ ಬಾಲಕರು ಕಥಾರೂಪಕ ಸೊಗಲಸೋಮೇಶ್ವರಗಳ ಪ್ರವಾಸ ಮಾಡಿದರು. ಊರ ಹಿರಿಯರು ಊಟ ಉಪಾಹಾರಗಳಿಗೆ ಸಹಾಯ ಮಾಡಿದರು. —ಶ್ರೀ. ಮು. ಮೂ. ಲಿಂಗದಳ್ಳಿ.

ಕಲಾದಗಿ (ವಿಜಾಪುರ ಜಿಲ್ಲೆ) ಇಲ್ಲಿಯ ಪಾಟಿಯ ಕಾರಖಾನೆದಾರರು ಬಾಲಿಕೆಯರ ಶಾಲೆಗಾಗಿ ಅಲಾರಂ ಗಡಿಯಾರವನ್ನೂ ಬಾಲಕರಿಗಾಗಿ ೬೦ ಪಾಟಿಗಳನ್ನೂ ಕಾಣಿಕೆಯಾಗಿ ಕೊಟ್ಟರು. —ಶ್ರೀ. ಶಿ. ಬ. ಎಮ್ಮಿ, ಮತ್ತು ಶಿ. ರು. ವಿರಕ್ತಮಠ.

ಕೋಡ ೧೦-೯-೪೪ರ ನೆಯ ದಿವಸ ಶಿ. ಶಿ. ಸಮ್ಮೇಲನವಾಯಿತು. ೨೫ ಶಾಲೆಗಳ ಶಿ. ರು. ಭಾಗವಹಿಸಿದ್ದರು. ಊರ ಹಿರಿಯರು ಮುನ್ನೂರು ಜನರ ಊಟದ ವ್ಯವಸ್ಥೆ ಮಾಡಿಸಿದ್ದರು. ಆಟ, ಪಾಠ, ಚರ್ಚೆ, ನಾಟಕ ಚೆನ್ನಾಗಿ ಆದವು. —ಶ್ರೀ. ಕೃ. ಹ. ನಾಯಿಕ.

ಗೋಕಾಕ ಹೆ. ಮಿ. ರಾದ ಶ್ರೀ. ಅಡಗಿ ಇವರು ಈ ವರ್ಷ ಹೆಂಗುಸರಿಗಾಗಿ ಮನೆಯ ವರ್ಗವನ್ನು ಆರಂಭಿಸಿರುವರು; ಚೆನ್ನಾಗಿ ಸಾಗಿದೆ. —ಶ್ರೀ. ಬಸವಣ್ಣೆವ್ವ ಗೊಬ್ಬಣ್ಣವರ

ನರೇಗಲ್ಲು ನಾಡ ಹಬ್ಬದ ಸಮಯದಲ್ಲಿ ವಿದ್ಯಾರ್ಥಿನಿಯರು, ನವಯುಗ, ಎಂಬ ನಾಟಕ ಮಾಡಿ ತೋರಿಸಲು ಊರ ಹಿರಿಯರು ಸಂತೋಷದಿಂದ ಬೆಳ್ಳಿಯ ಮೆಡಲುಗಳನ್ನೂ ೫೫ ರೂ. ಗಳನ್ನೂ ಬಹುಮಾನವಾಗಿ ಕೊಟ್ಟರು. ವಾಚನಾಲಯಕ್ಕಾಗಿ ೧೭ ರೂ. ಗಳ ವಾಗ್ದಾನ ಮಾಡಿರುವರು. —ಶ್ರೀ. ಸ್ಕೂ. ಕ. ಚೇಅರಮನ್ನರು.

ಮೂರೂರು (ಕುಮಟಾ ತಾಲೂಕು) ಶಾಲೆಯಲ್ಲಿ ವಿಜಯಾದಶಮಿಯ ದಿವಸ ಶಾರೀರಿಕ ಚಟುವಟಿಕೆಗಳನ್ನು ಕೈಕೊಳ್ಳಲಾಯಿತು. —ಶ್ರೀ. ಅಡಕೋಳಿ.

ದೊಡ್ಡಮನೆ (ಸಿದ್ದಾಪುರ ತಾಲೂಕು) ವಿದ್ಯಾರ್ಥಿಗಳ ಶಾರೀರಿಕ ಶಿಕ್ಷಣ, ನಿತ್ಯವಾಚನ, ನಾಟಕ ಮೊದಲಾದವುಗಳ ಪ್ರಗತಿ ಚೆನ್ನಾಗಿದೆ. —ಶ್ರೀ. ವೆಂಕಟರಮಣ ಹೆಗಡೆ.

ಬಂಕಾಪುರ ಭಾಗದ ಶಿ. ಶಿ. ಸಮ್ಮೇಲನವು ೧-೧೦-೧೯೪೪ರ ನೆಯ ದಿವಸ ಆಯಿತು. ಅಧಿಕಾರಿಗಳೂ ಊರ ಹಿರಿಯರೂ ಬಂದಿದ್ದರು. ಪಾಠಗಳು, ಭಾಷಣ, ಪ್ರದರ್ಶನ ಧ್ರುವಚರಿತ್ರೆಯ ಸಂಭಾಷಣೆ ಇವೆಲ್ಲವೂ ಚೆನ್ನಾಗಿ ಸಾಗಿದವು. —ಶ್ರೀ. ಗ. ಕೃ. ರಾನಡೆ.

ಕೋಡ ೮-೧೦-೪೪ರ ನೆಯ ದಿವಸ ಶಾಲೆಯ ೭೫ ನೆಯ ವರ್ಧಂತ್ಯುತ್ಸವವು ಮಾಮಲೇದಾರರ ಹಿರಿಯತನದಲ್ಲಿ ಸಾಗಿತು. —ಶ್ರೀ. ಕೃ. ಹ. ನಾಯಿಕ

ಹುಬ್ಬಳ್ಳಿ ಉರ್ದು ಶಾಲೆಗಳ ಶಿ. ಶಿ. ಸಮ್ಮೇಲನವು ೧೫-೧೦-೪೪ರ ನೆಯ ದಿವಸ ಮೆ. ಎ. ಇ. ಸೌ. ದ. ಭಾ. ಧಾರವಾಡ ಇವರ ಹಿರಿಯತನದಲ್ಲಿ ಶಾಂತರೀತಿಯಿಂದ ಸಾಗಿತು. —ಶ್ರೀ. ಎಚ್. ಆಯ್. ಮೋನೀನ.

ಗಣಿತ ಶಿಕ್ಷಕ

೪೧೨ ಪುಟಗಳು ಲ ಬೆಲೆ ೧ ರೂ. ೫ ಆಣೆ ಲ ೫-೬-೭ನೆಯ ಇ. ಗಳಿಗಾಗಿ

೨-೩ ಕ್ಲಾಸುಗಳು ಒಬ್ಬ ಮಾಸ್ತರನ ಕಡೆಗೆ ಇರುವಂಥ ಶಾಲೆಗಳಲ್ಲಿ ಗಣಿತ ಶಿಕ್ಷಕವು ನಿಜವಾಗಿಯೇ ಗಣಿತ-ಶಿಕ್ಷಕನಾಗಿ ಸಹಾಯಕವಾಗಿಲ್ಲವೇ? ೧೦ವರ್ಷ ಅನುಭವ ತಕ್ಕೊಂಡವರಿಗೆ ಇದರ ಬಗ್ಗೆ ಹೆಚ್ಚಿಗೆ ವರ್ಣಿಸುವದು ಬೇಡ. ಇಷ್ಟರಲ್ಲಿಯೇ ಎಲ್ಲರ ಪ್ರೀತಿಗೆ ಪಾತ್ರವಾಗಿ ಅನೇಕಸಾರೆ ಮುದ್ರಣ ಹೊಂದಿದೆ. ಈಗಿನ ತುಟ್ಟಾಗ್ರತೆಯ ಕಾಲದಲ್ಲಿ ಪೆಚ್ಚ ಮಾಡಿದ ಹಣದಿಂದ ಬಹಳ ಲಾಭವಾಗಬೇಡವೇ?

ಕೊರತೆ ಇಲ್ಲ ಲ ಬೆಲೆ ಕಡಿಮೆ ಲ ಪೆಚ್ಚವಿಲ್ಲದೆ ಪೂರೈಕೆ

ಪುಸ್ತಕಗಳು ಕರ್ನಾಟಕದ ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ದೊರೆಯುತ್ತವೆ. ದೊರೆಯುವದಿಲ್ಲೆಂದು ಅನಿಸಿದರೆ ನಿಮಗೆ ಬೇಕಾಗುವಷ್ಟು ಪ್ರತಿಗಳ ಮೂಲಬೆಲೆಯನ್ನು ಮನಿಯಾರ್ಡರದಿಂದ ಕಳಿಸಿ ಪಾವತಿಗಳನ್ನು ಕಾಯ್ದಿರಿಸಿರಿ. ಅವನ್ನು ತೆಗೆದುಕೊಂಡು ಯಾವ ಪೆಚ್ಚವೂ ಇಲ್ಲದೆ ಪುಸ್ತಕ ಕೊಡುವಂತೆ ನಿಮ್ಮ ಸಮೀಪದ ಪುಸ್ತಕವ್ಯಾಪಾರಿಗಳಲ್ಲಿ ಇಲ್ಲವೆ ದೊಡ್ಡ ಸಾಲೆಗಳಲ್ಲಿ ವ್ಯವಸ್ಥೆ ಮಾಡಲಾಗುವದು. ಶಕ್ಯವಾದರೆ ನಿಮ್ಮ ಊರಿಗೇ ತಂದುಕೊಡಬಹುದು. ಹೆಚ್ಚಿನ ವಿವರಕ್ಕೆ ಬರೆಯಿರಿ.

ವಿಳಾಸ :— ಬ. ಮು. ಹಿರೇಮಠ, ಮಾಸ್ತರ ವಿಜಾಪುರ.

ಹೊಸ ಪುಸ್ತಕಗಳಿಗೆ ತ್ವರೆಮಾಡಿರಿ! ಲಾಭಪಡೆಯಿರಿ!

ಹೊಸ ಪದ್ಧತಿಯ

(೧) ಹಿಂದೀ ಜಮಾಖರ್ಚು ಭಾಗ ೧

(ಮನೆಯ ಜಮಾಖರ್ಚು)

ಸರಕಾರದವರು ಈ ಪುಸ್ತಕವನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಿರುವರು. ಇದು ೫-೬ನೆಯ ಇಯತ್ತೆಯವರಿಗೂ ಹೆಣ್ಣು ಮಕ್ಕಳ ಮುಲ್ಕೀಪರೀಕ್ಷೆಗೂ ಉಪಯುಕ್ತವಿದೆ.

ಬೆಲೆ: ೮ ಆಣೆ

೨. ಆರಂಭದ ಜಮಾಖರ್ಚು : ೪ನೆಯ ಇಯತ್ತೆಯವರಿಗೆ ಉಪಯೋಗವಿದೆ. ಬೆಲೆ: ೩ ಆಣೆ

೩. ಅಂಗಸಾಧನ ಶಿಕ್ಷಕ : ಬೆಲೆ: ೪ ಆಣೆ

೪. ಗಣಿತಸಾರ ಸಂಗ್ರಹ: ಇದು ಈಗಿನ ಪರೀಕ್ಷೆಯ ಪದ್ಧಯಂತಿರುವದರಿಂದ ಸ್ಕಾಲರ ಮತ್ತು ಮುಲ್ಕೀ ಪರೀಕ್ಷೆಯವರಿಗೆ ಉಪಯುಕ್ತವಿದೆ.

ಬೆಲೆ: ೪ ಆಣೆ

ಹೊಸ ಪದ್ಧತಿಯ

ಹಿಂದೀ ಜಮಾಖರ್ಚು ಭಾಗ ೨

(ವ್ಯಾಪಾರಿ ಜಮಾಖರ್ಚು)

ಇದರಲ್ಲಿ ಹುಂಡಿ, ಚೆಕ್ಕು, ಮುನಿಯಾರ್ಡರ, ಬಡ್ಡೀ ಆಕರಣೆ ಜಮಾಖರ್ಚಿನ ಇತರ ವಹಿಗಳು, ಯಾದಿಗಳ ನಮೂನೆಗಳು, ಪ್ರಶ್ನೆಗಳು ಪ್ರಶ್ನೆಕಾಗದಗಳು ಇರುವವಲ್ಲದೆ, ಒಕ್ಕಲತನ ಒಲವಿನ ಶಾಲೆಯ ವಿದ್ಯಾರ್ಥಿಗಳ ಸಲುವಾಗಿ ಬರೆದ ಜಮಾಖರ್ಚು ಅಂದರೆ ಡೇಲಿ ಲೇಬರ ಶೀಟ, ವೀಕಲಿ ಮಸ್ಟರ ರೋಲ್, ಕಲ್ಟಿವೇಶನ್ ಶೀಟ ಮುಂತಾದವುಗಳ ಪತ್ರಿಕೆಗಳೂ ಕಬುಲಾಯತಿ, ಬಾಡಿಗೆಯ ಪತ್ರಗಳ ನಮೂನೆಗಳೂ ಇರುವದರಿಂದ ಇದು ೭ನೆಯ ಇಯತ್ತೆಯವರಿಗೂ, ಆಗ್ರಿಕಲ್ಚರಲ್ ಬಾಯಸ್ ಕ್ಲಾಸಿನವರಿಗೂ ಉಪಯುಕ್ತವಿದೆ. ಸ್ವಲ್ಪ ಪ್ರತಿಗಳಿರುವದರಿಂದ ನಮೂನೆಗಾಗಿ ಒಂದನ್ನಾದರೂ ಎಲ್ಲರೂ ತರಿಸಿಕೊಳ್ಳಿರಿ. ಬೆಲೆ: ೮ ಆಣೆ

ವಿಳಾಸ :— ರಾ. ಸಿ. ಸಜ್ಜನ, ಮಾಸ್ತರ ಜೋರಾಪುರ ಪೇಟೆ, ವಿಜಾಪುರ.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದು ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕಮಿಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ-ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ-ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು-ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕಿಯೂ ಸಮಾವೇಶವಾಗಿವೆ.)

ಕ ನ್ನ ಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹುಚ್ಚರಾವ ಭೀಮರಾವ ಉಮಡಿ, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ
೧.	ಉತ್ತಿಷ್ಠಿತ! ಜಾಗ್ರತ! ಪ್ರಾಪ್ಯವರಾನ್ನಿಬೋಧಿತ!	೧
೨.	ನಮ್ಮ ಕಾಲೇಜಿನ ಚಟುವಟಿಕೆಗಳು	೨
೩.	ಮೂಲ ಶಿಕ್ಷಣ ಕ್ರಮದ ಸಮ್ಮೇಲನಗಳು	೯
೪.	ದುಃಖವಾರ್ತೆ	೧೧
೫.	ಭೂಗೋಲ ಇತಿಹಾಸಗಳನ್ನು ಹೇಗೆ ಕಲಿಸಬೇಕು?	೧೩
೬.	ಸಾಹಿತ್ಯ ಸ್ತೋತ್ರ	೧೬
೭.	ಮೋಕ್ಷ ಸಾಧನೆಯ ನಾಲ್ಕು ಮಾರ್ಗಗಳು	೨೨
೮.	ಗಂಡುಮಕ್ಕಳ ಪ್ರಾ. ಶಾ. ಕ್ರ. ಪ. ಪರೀಕ್ಷೆ-೧೯೪೫	೨೫
೯.	ಲೇಖನಗಳ ಮುಖ್ಯಾಂಶಗಳು	೩೯
೧೦.	ಪತ್ರಗಳ ಮುಖ್ಯಾಂಶಗಳು	೪೦
೧೧.	ಪಾಂಡಿತ್ಯ ಪರೀಕ್ಷೆ (ಸಾಕ್ಷರಿಗಳಾದ ಪ್ರಬುದ್ಧರಿಗಾಗಿ)	೪೧

ಸಾರ್ವಜನಿಕ ಪಠಣ ಮತ್ತು ಬೋಧನೆಗಳು ನಮಾಸ್ಕ್ರ.

Printed by V. Y. Jathar at the Karnatak Printing Works, Dharwar and Published by H. B. Umadi, Esq. M. A., Principal Training College For Men Dharwar, at his Office. 7403-45-1575.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದು ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕಮಿಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ-ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ-ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ಸಮ್ಮಿಂದಲೇ ಪುಸ್ತಕಗಳನ್ನು ಕೊಂಡು-ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.

ಜನವರಿ-ಫೆಬ್ರುವರಿ-ಮಾರ್ಚ್ ೧೯೪೫

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹುಚ್ಚರಾವ ಭೀಮರಾವ ಉಮಡಿ, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ
೧.	ಉತ್ತಿಷ್ಠಿತ! ಜಾಗ್ರತ! ಪ್ರಾಪ್ಯವರಾನ್ನಿಬೋಧಿತ!	೧
೨.	ನಮ್ಮ ಕಾಲೇಜದ ಚಟುವಟಿಕೆಗಳು	೨
೩.	ಮೂಲ ಶಿಕ್ಷಣ ಕ್ರಮದ ಸಮ್ಮೇಲನಗಳು	೯
೪.	ದುಃಖವಾರ್ತೆ	೧೧
೫.	ಭೂಗೋಲ ಇತಿಹಾಸಗಳನ್ನು ಹೇಗೆ ಕಲಿಸಬೇಕು?	೧೩
೬.	ಸಾಹಿತ್ಯ ಸ್ತೋತ್ರ	೧೬
೭.	ಮೋಕ್ಷ ಸಾಧನೆಯ ನಾಲ್ಕು ಮಾರ್ಗಗಳು	೨೨
೮.	ಗಂಡುಮಕ್ಕಳ ಪ್ರಾ. ಶಾ. ಸ್ಕ. ಪ. ಪರೀಕ್ಷೆ-೧೯೪೫	೨೫
೯.	ಲೇಖನಗಳ ಮುಖ್ಯಾಂಶಗಳು	೨೯
೧೦.	ಪತ್ರಗಳ ಮುಖ್ಯಾಂಶಗಳು	೩೨
೧೧.	ಪಾಂಡೆಯ ಪರೀಕ್ಷೆ (ಸಾಕ್ಷರಿಗಳಾದ ಪ್ರಬುದ್ಧರಿಗಾಗಿ)	೩೪

ವಾರ್ಷಿಕ ಚಂದಾ ಪೂರ್ಣ ಎರಡು ರೂಪಾಯಿಗಳು ಮಾತ್ರ.

Printed by V. Y. Jathar at the Karnatak Printing Works, Dharwar and
Published by H. B. Umadi, Esq. M. A., Principal Training College
For Men Dharwar, at his Office. 7403-45-1375.

ಧಾರವಾಡದ ಸರಕಾರಿ ಗಂಡುಮಕ್ಕಳ ಟ್ರೇನಿಂಗ್ ಕಾಲೇಜದ ೨ನೆಯ ವರ್ಷದ ಸರ್ಟಿಫಿಕೇಟ ಪರೀಕ್ಷೆಯ ಕಾರ್ಯಕ್ರಮವು ಎಪ್ರಿಲ್—೧೯೪೫

ತಾ. ೧೬ ಸೋ. ೧೧ ರಿಂದ ೧-೩೦ ಶಿಕ್ಷಣ. ೧ ೩ ರಿಂದ ೫-೩೦ ಶಾಸ್ತ್ರೀಯ ವಿಷಯ

ತಾ. ೧೭ ಮಂ. ೧೧ ರಿಂದ ೧-೩೦ ಅಂಕಗಣಿತ ೩ ರಿಂದ ೫-೩೦ ಭಾಷಾವಿಷಯ ೧

ತಾ. ೧೮ ಬು. ೧೧ ರಿಂದ ೧-೩೦ ಭೂಗೋಲ ೩ ರಿಂದ ೫-೩೦ ಭಾಷಾವಿಷಯ ೨

ತಾ. ೧೯ ಗು. ೧೧ ರಿಂದ ೧-೩೦ ಭೂಮಿತಿ-ಜಮಾಖರ್ಚು ೩ ರಿಂದ ೫-೩೦ ಇತಿಹಾಸ

ತಾ. ೨೦ ಶುಕ್ರವಾರ ರಾಮನವಮಿಯ ನಿಮಿತ್ತ ಸೂಟಿಯು.

ತಾ. ೨೧ ಶ. ೧೧ ರಿಂದ ೧-೩೦ ಶಿಕ್ಷಣ. ೨ ೩ ರಿಂದ ೫ ಹಿಂದುಸ್ತಾನಿ.

(ಸಹಿ) H. B. Umadi
ಪ್ರಿನ್ಸಿಪಾಲರು.

ವಿ ನ ಂ ತಿ

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವದಕ್ಕಾಗಿ ಕಳುಹಿಸುವ ಲೇಖನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು. ಲೇಖನಗಳು ಮುಖ್ಯ ಮುದ್ದೆಗಳಿಗೆ ಅನುಸಾರವಾಗಿ ಸಂಕ್ಷೇಪವಾಗಿರಬೇಕು.

೨. ಈ **ತ್ರೈಮಾಸಿಕಪತ್ರಿಕೆ**ಯು ಪ್ರತಿ ಮೂರುತಿಂಗಳ ಕೊನೆಯ ವಾರದಲ್ಲಿ ಪ್ರಸಿದ್ಧವಾಗುವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ ತಿಳಿಸಬೇಕು.

೩. ಲೇಖಕರು ಹಾಗು ಪ್ರಕಾಶಕರು, ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರಿಗೆ ಉಪಯುಕ್ತವಾದ ಪುಸ್ತಕ-ನಕಾಶ-ಚಿತ್ರ-ಉಪಕರಣಗಳನ್ನು ವಿಮರ್ಶೆಗಾಗಿ ಕಳುಹಿಸಬಹುದು.

೪. ತಾವು ಪ್ರಕಟನೆಗಾಗಿ ಕಳುಹಿಸಿರುವ ಲೇಖನಗಳನ್ನು ತಿರುಗಿ ಪಡೆಯಲು ಅಪೇಕ್ಷಿಸುವವರೂ ಅದರ ಪರಿಣಾಮವನ್ನು ಕೂಡಲೆ ತಿಳಿದುಕೊಳ್ಳಲಿಚ್ಛಿಸುವವರೂ ಅದಕ್ಕಾಗಿ ತಗಲುವ **ಅಂಚೆಯ ಚೀಟಿ**ಗಳನ್ನು ತಮ್ಮ ಲೇಖನದ ಸಂಗಡ ಕಳುಹಿಸಿಕೊಡಬೇಕು.

ಜಾಹಿರಾತಿನ ದರಗಳು

ಪುಟ	೧೨ ತಿಂಗಳುಗಳಲ್ಲಿ ನಾಲ್ಕು ಸಾರಿ	೬ ತಿಂಗಳುಗಳಲ್ಲಿ ೨ ಸಾರಿ	೩ ತಿಂಗಳುಗಳಲ್ಲಿ ಒಮ್ಮೆ
೧	೧೫ ರೂ.	೭½ ರೂ.	೪ ರೂ.
½	೮½ ರೂ.	೪ ರೂ.	೨½ ರೂ.
೧/೪	೫ ರೂ.	೨½ ರೂ.	½ ರೂ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ಹುಚ್ಚರಾವ ಭೀಮರಾವ ಉಮಡಿ, ಎಂ. ಎ.

ಸಂಪುಟ ೮೩ | ಜನವರಿ-ಫೆಬ್ರುವರಿ-ಮಾರ್ಚ ೧೯೪೫ | ವರ್ಷ ೧೭ ಸಂ. ೧೦-೧೧-೧೨

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ!

ನಾ. ಪ. ನಿಡಿದಾದ ಕಾರಿರುಳು ಕಳೆದುಪೋಪಂತಿಹುದು |
ಕಡು ಕಷ್ಟನಷ್ಟಗಳು ಕೊನೆಗಾಣುವಂತಿಹುದು |
ಮಡಿದ ಶವದೇಹದಂತಿರ್ಪುದೆಚ್ಚೆತ್ತಿಹುದು ದನಿಯೊಂದು ಕೇಳಿಬಹುದು ||
ಕೊಡು ಕಿವಿಯ! ಅದುವೆ ಹಿಮಗಿರಿಯ ನಸುಗಾಳಿಯೋಲ್ |
ಮಡಿದಂತೆ ತೋರ್ಪ ದೇಹದ ಮಾಂಸ ಮೂಳೆಗಳೊ |
ಳೊಡಮೂಡಿಸುತಲಿಹುದು ಜೀವ ಸಂಚಾರಮುಂ ಓಡುತಿದೆ ಜಾಡ್ಯವೆದ್ದು ||೧||
ಕುರುಡನಷ್ಟೇ ಕಾಣನೆಮರುಳನೋಡನದ |
ಗುರು-ಸುಪ್ತ-ಶಕ್ತಿ ಬೆಳಗೀ ಮಾತೃಭೂಮಿಯಾ- |
ವರಿಸಿರುವ ಬಹುದೀರ್ಘ ನಿದ್ದೆಯಿಂದೆಬ್ಬಿಸುತ್ತಿದೆಯೆಂಬ ಗೂಢವನ್ನು ||
ತಿರುಗಿ ನಿದ್ದೆಯೊಳೊರಗಲಾರಳವಳಿನ್ನೆಂದು |
ತಿರುಗಿ ನಿಂತೆದುರಿಸುವರಾರಿಲ್ಲವಿನ್ನವಳ |
ಹೊರಗಣಾವಾವ ಶಕ್ತಿಯು ತಡೆಯದವಳನೀ ಜಾಗ್ರತಾವಸ್ಥೆಯಲ್ಲಿ ||೨||
ಮೊರೆದೆದ್ದು ನಿಂತಿರುವಳತ್ಯುಗ್ರ ಶಕ್ತ್ಯಮಿತೆ |
ಗುರುವಿವೇಕಾನಂದರೊರೆದ ತಿರುಮಂತ್ರವಿದ- |
ನರಿತೇಳಿ! ತರುಣರೇ! ಎಚ್ಚೆತ್ತು ಗುರಿಯತ್ತ ಸಾಗಿರೈ! ಬಿಟ್ಟುಬಿಡದೆ ||

* * * *

ಭೂತಕಾಲದ ಭೂತವನ್ನೇಕೆ ಚಿಂತಿಪಿರಿ ? |
ವರ್ತಮಾನದ ವರ್ತನವೆ ನಮ್ಮ ತಾರಕವು |
ಭೂತದಲ್ಲಳಿದು ಹೋದಾದೇಹವನೆ ಮರಳಿ ಪಡೆಯೆ ನಸುಗಾಗಬಹುದೇ ? ||
ವರ್ತಮಾನಕೆ ಬೆಳಕ ಕೊಡುವಮಟ್ಟಿಗೆ ನಮಗೆ |
ಭೂತದಾಧಾರಗಳು ಬೇಕಲ್ಲದವನೆ ನೆನೆ- |
ವಾತ ಕಡುಮೂರ್ಖನೈ ವರ್ತಮಾನದ ಕಾರ್ಯರಂಗಕಿಳಿದೇಳಿರಯ್ಯಾ ||

ನಮ್ಮ ಕಾಲೇಜದ ಚಟುವಟಿಕೆಗಳು

ನಮ್ಮ ಕಾಲೇಜಕ್ಕೆ ಟ್ರೇನಿಂಗ್ ಪಡೆಯಲು ಬಂದಿರುವ ಶಿಕ್ಷಕರು ಕೇವಲ ಪಾಠ ಪುಸ್ತಕ ಪರೀಕ್ಷೆ ಇಷ್ಟರಿಂದಲೇ ತೃಪ್ತರಾಗಿ ಸರ್ಟಿಫಿಕೇಟು ಪಡೆದು ಹಿಂದಿರುಗಬಾರದೆಂದೂ ಅವರಿಗೆ ದೇಶದಲ್ಲಿ ನಡೆದಿರುವ ಹಲವು ಚಟುವಟಿಕೆಗಳ ಪರಿಚಯವಾಗಿ ಅವರ ಪುಸ್ತಕೀಯ ಜ್ಞಾನಕ್ಕೆ ವ್ಯಾವಹಾರಿಕ ಸ್ವರೂಪವುಂಟಾಗುವದು ಅವಶ್ಯವೆಂದೂ ಭಾವಿಸುವದು ತೀರ ಸ್ವಾಭಾವಿಕವಾದ ಮಾತಲ್ಲವೇ? ಆ ಉದ್ದೇಶದಿಂದ ಸ್ಥಾನಿಕ ಮತ್ತು ಕಾಲಕಾಲಕ್ಕೆ ಪರ ಸ್ಥಳಗಳಿಂದ ಆಗಮಿಸಿದ ಬೇರೆ ಬೇರೆ ವಿಷಯಗಳ ತಜ್ಞರಿಂದ ಕಾಲೇಜದಲ್ಲಿ ಉಪನ್ಯಾಸ ಮಾಡಿಸುವ ಪರಿಪಾಠವನ್ನಿಟ್ಟುಕೊಂಡಿದೆ. ಕಾಲೇಜಿನ ವಿದ್ಯಾರ್ಥಿಗಳ ವಿವಾದ ಮಂಡಲದ ನೇರವಿನಿಂದ ಈ ಉಪನ್ಯಾಸಮಾಲೆಯ ವ್ಯವಸ್ಥೆಯು ನಡೆಯುವದು. ಈ ವರ್ಷ ನಡೆದ ಹಲವು ಉಪನ್ಯಾಸಗಳಲ್ಲಿ ಮುಖ್ಯವಾದ ಕೆಲವುಗಳಲ್ಲಿ ಬಂದಿರುವ ಮಹತ್ವದ ಮಾತುಗಳು ಪ್ರಾಥಮಿಕ ಶಿಕ್ಷಕರಿಗೆ ತುಂಬ ಪ್ರಯೋಜನಕಾರಿಯಾಗಬಹುದೆಂಬ ವಿಚಾರದಿಂದ ಅವನ್ನೆಲ್ಲ ಸಂಗ್ರಹಿಸಿ ಇಲ್ಲಿ ಕೊಡಲಾಗಿದೆ.

ಶಾರೀರಿಕ ಶಿಕ್ಷಣ ದಿನ— ಕಳೆದ ಡಿಶಂಬರ ತಿಂಗಳ ೧೬ನೆಯ ದಿನವನ್ನು ಮುಂಬೈ ಪ್ರಾಂತದಲ್ಲೆಲ್ಲ ಶಾರೀರಿಕ ಶಿಕ್ಷಣ ದಿನವೆಂದು ಆಚರಿಸಲಾಯಿತು. ನಮ್ಮ ಕಾಲೇಜದಲ್ಲಿಯೂ ಅಂದು ಒಂದು ಸಮಾರಂಭವಾಯಿತು. ಅದಕ್ಕೆ ಪ್ರೊ. ಜಹಗೀರದಾರರು ಹಿರಿಯರಾಗಿದ್ದರು. ಆ ಸಂದರ್ಭದಲ್ಲಿ ಅವರು ಈ ರೀತಿ ಹೇಳಿದರು:— "ಈಗಿನ ವಿದ್ಯಾರ್ಥಿಗಳ ಮೋರೆಗಳು ಎಣ್ಣೆತೀರಿದ ದೀಪದಂತೆ ಕಾಣುವವು. ಜನಸಂಖ್ಯೆ, ಸಂಪತ್ತು, ಇತಿಹಾಸ, ಸಂಸ್ಕೃತಿಗಳ ಬಗೆಗಳಲ್ಲಿ ಹಿರಿಮೆಯುಳ್ಳ ಹಿಂದುಸ್ತಾನವು ಈಗ ಅಧೋಗತಿಗೆ ಇಳಿದಷ್ಟು, ಪೃಥ್ವಿಯಲ್ಲಿಯ ಮತ್ತಾವ ದೇಶವೂ ಇಳಿದಿಲ್ಲವೆಂದು ಹೇಳುವದುಂಟು. ವಿಚಾರಮಾಡಲು ತಲೆ, ಬೇಕಾದಲ್ಲಿಗೆ ಹೋಗಲು ಕಾಲು, ಇರುತ್ತಿರಲು ಹುಳಕ್ಕಿಂತ ಹುಳವಾಗಿ ನಮ್ಮವರು ಇಲ್ಲಿಯೇ ಸಾಯುತ್ತಲಿದ್ದಾರೆ. ಇದು ಯಾರ ತಪ್ಪು? ಮನುಷ್ಯನೆಂದರೆ ಬರಿಯ ದೇಹವೊಂದೇ ಅಲ್ಲ. ಅವನಿಗೆ ಬುದ್ಧಿ, ಹೃದಯ, ಮನಸ್ಸುಗಳಿವೆ. ಮೊದಲು ಬುದ್ಧಿ ಕೆಟ್ಟಿತು, ಈಗ ಕೊನೆಯದಾಗಿ ದೇಹವೂ ಕೆಟ್ಟಿದೆ. ನಮ್ಮ ಬುದ್ಧಿಯ ಸುಧಾರಣೆಗೆ ಕೊನೆಯದಾಗಿರುವ ದೇಹದಿಂದಲೇ ಆರಂಭಿಸಬೇಕು. ನಮ್ಮ ಬಾಗಿ ನಿಲ್ಲುವಿಕೆ, ಲಟಪಟಿಸುವ ಕಾಲು, ಎಲುವು ಹೊಗಲುಗಳ ನಡುವೆ ಏನೂ ಇಲ್ಲದಿರುವಿಕೆ ಇವುಗಳನ್ನು ಉಳಿದ ದೇಶದವರು ನೋಡಿ, ಇವರೂ ಮನುಷ್ಯರೇ ಎಂದು ಸಂದೇಹಗೊಳ್ಳುವರು. 'ಉದಯವಾಗಲಿ ನಮ್ಮ ಜೆಲುವ ಕನ್ನಡನಾಡು' ಎಂದು ಕೇಳಿದೊಡನೆಯೇ, ಉದಯವಾಗಿದೆ ಹೇಡಿಗಳ ನಾಡು, ಎಂದು ಅಣಕವಾಡುವ ದುಃಖದ ಪ್ರಸಂಗವು ನಮಗೊದಗಿದೆ. ಈಗ ವ್ಯಾಯಾಮಕ್ಕೂ ರೇಶನ್ ಬೇಕಾಗಿದೆ. ವ್ಯಾಯಾಮದ ಉದ್ದೇಶವು ಬರಿಯ ಶಕ್ತಿಯೊಂದೇ ಆಗಿರದೆ, ಮನಸ್ಸಿನ ನಿಯಂತ್ರಣವೂ ಮುಖ್ಯವಾಗಿದೆ. ನೂರಾರು ವರ್ಷಗಳ ಹಿಂದೆ ನಮ್ಮ ಹಿರಿಯರು ಮಾಡಿದ ತಪ್ಪನ್ನು ತಿದ್ದಲಿಕ್ಕಾದರೂ ಕೂಡ ಇಂದು ನಾವು ವ್ಯಾಯಾಮ ಮಾಡಬೇಕು. ಸಂಸ್ಕೃತಿ ರಕ್ಷಣೆಗೆ ವ್ಯಾಯಾಮವು ಅವಶ್ಯವಾಗಿ ಬೇಕು."

ಬಾಲವೀರ ಚಳುವಳಿಯ ಮಹತ್ವವನ್ನು ಕುರಿತು ಮಹಾರಾಷ್ಟ್ರ ದೇಶದ ಶ್ರೀ. ಭಾಗವತ ಅವರು ೨೯-೭-೪೧ ಳಿಳನೆಯ ದಿವಸ ಈ ರೀತಿ ವಾತನಾಡಿದರು.—"ಈ ಚಳುವಳಿ

ಯನ್ನು ಮೊದಲು ಶ್ರೀ. ಬ್ಪಿಡನ್ ಪಾವೆಲ್ಲರು ಆರಂಭಿಸಿದರು. ಇದರ ಉಪಯುಕ್ತತೆಯನ್ನು ಕಂಡು ನಮ್ಮಲ್ಲಿಯ ಮುಂದಾಳುಗಳು ಅದನ್ನು ಸ್ವೀಕರಿಸಿ ನಮ್ಮ ಬಾಲ-ಬಾಲಿಕೆಯರಲ್ಲಿ ಹಬ್ಬಿಸಿದರು. ಆದರೆ ಕೆಲವೊಂದು ಮಾತಿಗಾಗಿ ಶ್ರೀಮಾನ್ ಪಾವೆಲ್ ಅವರ ಸಂಭಂಧ ಬಿಡಬೇಕಾಗಿ ಬಂದರೂ ಇದುವರೆಗೆ ಮಾಡಿದ ಕಾರ್ಯವನ್ನು ಒಮ್ಮೆಲೆ ಬಿಡುವದು ಹೇಗೆ? ಸ್ಕೌಟರು ಪಾಲಿಸತಕ್ಕ ನಿಯಮಗಳು ಎಲ್ಲರಿಗೂ ಉಪಯುಕ್ತವಾಗಿವೆ. ಆದುದರಿಂದ ಹಿಂದುಸ್ತಾನ ಸ್ಕೌಟ ಮಂಡಲವನ್ನು ದಿಲ್ಲಿಯಲ್ಲಿ ಸ್ಥಾಪಿಸಲಾಗಿದೆ. ಈಗ ಅದಕ್ಕೆ ಸರ್ ಸಪ್ರು ಅವರು ಚೀಫ ಕಮೀಶನರ ಆಗಿದ್ದಾರೆ. ಎಲ್ಲ ಪ್ರಾಂತಗಳಲ್ಲಿಯೂ ಅದರ ಶಾಖೆಗಳು ಆರಂಭವಾಗಿದ್ದು ಕಾರ್ಯಮಾಡುತ್ತಲಿವೆ. ಇದರಿಂದ ಜನಜೀವನದಲ್ಲಿ ಸತ್ಯತೆ, ಸಹಕಾರ, ಉತ್ಸಾಹವೃತ್ತಿ, ಸ್ವಾವಲಂಬನ, ದೇಶಾಭಿಮಾನಗಳು ಬೆಳೆದು ಸುಖಕರವಾಗುವವು. ಆದುದರಿಂದ ಪ್ರತಿಯೊಬ್ಬರು ನಿಜವಾದ ಬಾಲವೀರ ಚಳುವಳಿಯಲ್ಲಿ ಸೇರಬೇಕು."

ಆಧುನಿಕ ಕನ್ನಡ ಕಾವ್ಯಗಳು— ೩-೮-೧೯೪೪ರ ನೆಯ ದಿವಸ ಶ್ರೀಮಾನ್ ವಿ. ಕೃ. ಗೋಕಾಕ ಅವರು ಹೊಸಗನ್ನಡದ ಕಾವ್ಯಗಳ ವಿಷಯದಲ್ಲಿ ಹೀಗೆ ಮಾತನಾಡಿದರು.

"ತಮ್ಮ ಟ್ರೇ ಕಾ. ದಲ್ಲಿ, ಕೆರಿಯರ ಕಾಣಿಕೆ, ಎಂಬ ಪುಸ್ತಕವನ್ನು ಕಲಿಸಲಾಗುತ್ತಿದೆ ಎಂಬುದು ಸಂತೋಷದ ವಿಷಯ. ಹಳೆಯದೆಲ್ಲ ಹೆಚ್ಚಿನದು; ಹೊಸದೆಲ್ಲ ಕೀಳು ಹೀಗೇನೂ ಇಲ್ಲ. ಹೊಸ ಕವಿತೆಗಳಲ್ಲಿ ಈಗಿನ ನಮ್ಮ ಜೀವನಕ್ಕೆ ಬೇಕಾಗುವ ಸಾಮಗ್ರಿಯು ವಿಪುಲವಾಗಿ ಇರುವದು. ಅದನ್ನು ಆಸ್ಥೆಯಿಂದ ಓದಿ ಆನಂದವನ್ನು ಅನುಭವಿಸಬೇಕು. ಹೊಸ ತರದ ಸಾಹಿತ್ಯದ ದಿವ್ಯಾನಂದವನ್ನು ಹೊಂದಲು ಈಗ ಇಂಗ್ಲೀಷಿಗೆ ಹೋಗಬೇಕೆಂಬ ಅವಶ್ಯವಿಲ್ಲದಷ್ಟು ಕನ್ನಡ ಸಾಹಿತ್ಯವು ಬಹುವಿಧವಾಗಿ ಬೆಳೆದಿದೆ. ಹೊಸ ಕವಿತೆಗಳ ಲಕ್ಷಣಗಳನ್ನು ತಿಳಿಸಲು ಹೊಸ ಛಂದಸ್ಸು ಬೇಕಾಗಿದೆ. ಈಗಿನ ಕವಿಗಳು ಹಳೆಯ ಕವಿಗಳಂತೆ ಕನ್ನಡಕ್ಕೆ ಹೊಂದಿಕೆಯಾಗದ ವೃತ್ತಗಳಲ್ಲಿ ರಚಿಸುವದನ್ನು ಬಿಟ್ಟು ತಮ್ಮದೇ ಆದ ಒಂದು ನಿಯಮ ಮಾಡಿಕೊಂಡು ಅದರಂತೆ, ಮುಕ್ತಛಂದ, 'ಸ್ವಚ್ಛಂದ' ವಾಗಿ ಪದಪದ್ಯಗಳನ್ನು ಹಾಡುತ್ತಿದ್ದಾರೆ. ಸಾವಿರ ವರ್ಷಗಳ ಹಿಂದಿನ ಬಾಳುವೆಯ ಬಗೆಯು ಈಗ ಒಗ್ಗದು. ಹಾಗೆಯೇ ಹಳೆಯ ಶೈಲಿಯೂ ಈಗ ಬದಲಿಸಿದ. ಮುಂಚಿನವರು ಒಂದೆರಡು ದೊಡ್ಡ ಕಾವ್ಯಗಳನ್ನೋ ಪುರಾಣಗಳನ್ನೊ ಓದುತ್ತಿದ್ದರು. ಅವ್ಯರಿಂದಲೇ ಸಂಸ್ಕೃತಿಯ ಎಲ್ಲ ಜ್ಞಾನವನ್ನೂ ಪಡೆಯಬೇಕಾಗುತ್ತಿತ್ತು. ಈಗ ಹಲವು ಖಂಡ ಕಾವ್ಯಗಳಾಗಿ ಅವು ಸಂಸ್ಕೃತಿಯ ಒಂದೊಂದು ವಿಭಾಗವನ್ನು ಚೆನ್ನಾಗಿ ತಿಳಿಸುತ್ತಲಿವೆ. ಹಳೆಯ ಕವಿಗಳು ಪುರಾಣದಲ್ಲಿದ್ದುದನ್ನೇ ಪುನಃ ಪುನಃ ತಮ್ಮ ಮಾತಿನಲ್ಲಿ ಹೇಳುತ್ತಿದ್ದರು. ಈಗಿನವರು ಪುರಾಣಗಳ ಆಧಾರ ಬಿಟ್ಟು ತಮಗೆ ಅನಿಸಿದುದನ್ನೇ ಬರೆಯುತ್ತಾರೆ. ಹೂ, ಪಾತರಗಿತ್ತಿ ಇವುಗಳ ಸಂಬಂಧ ಬಂದಾಗ ಎಲ್ಲರಿಗೂ ಆನಂದವಾಗುವದಿಲ್ಲವೇ! ಅದನ್ನೇ ಶ್ರೀ. ಪುಟ್ಟಪ್ಪನವರು 'ಹೀಂಡಿಯಹೂ' ವಿನಲ್ಲಿಯೂ ಶ್ರೀ. ಬೇಂದ್ರೆಯವರು, ಪಾತರಗಿತ್ತಿಯ ಪಕ್ಕದಲ್ಲಿಯೂ ತಮ್ಮ ವ್ಯಕ್ತಿತ್ವದೊಂದಿಗೆ ನಿತ್ಯಜೀವನದ ಸುಖ, ಸಮಾಧಾನ, ನಯ-ವಿನಯ-ನಗುಗಳನ್ನು ತೋರಿಸಿದ್ದಾರೆ. ನಮ್ಮ ಅಂತಃಕರಣವೂ ದೃಷ್ಟಿಯೂ ವಿಶಾಲವೂ ಶುದ್ಧವೂ ಆಗಬೇಕೆಂಬುದೇ ಆಧುನಿಕ ಕನ್ನಡ ಕಾವ್ಯಗಳ ಮುಖ್ಯ ಉದ್ದೇಶ. ಕವಿಯ ಅನುಭವವನ್ನು ವಾಚಕರು ಅನುಭವಿಸಿ ಆನಂದಿಸಿ ಸಂಜೀವನಶಕ್ತಿಯನ್ನು ತಂದುಕೊಳ್ಳುವದು ಅವರವರ ಯೋಗ್ಯತೆಯನ್ನು ಅವಲಂಬಿಸಿದೆ." ಎಂದು ಹೇಳಿದರು. ಮತ್ತು ಕೆಲವು ಭಾವಗೀತಗಳನ್ನು ಅಂದು ತೋರಿಸಿ ತಿಳಿಸಿದರು.

ಅಧ್ಯಕ್ಷರಾದ ಶ್ರೀಮಾನ್ ಬೈಚವಾಳರಾಯರು: "ಇಂಥ ಪ್ರತಿಭಾ ಸಂಪನ್ನರಾದ ಶ್ರೀ. ಗೋಕಾಕ ಅವರ ಭಾಷಣವನ್ನು ಕೇಳುವ ಯೋಗವು ಒದಗಿದ್ದು ನಮ್ಮ ಭಾಗ್ಯವೇಸರಿ. ಇಂಥವರಿಂದ ಕನ್ನಡದ ಹೊಸ ಕವನಗಳ ಪರಿಮಳವು ಇಡುಗಲಿ! ಇಂಗ್ಲೀಷಿನ ಮೋಹವು ಕಡಿಮೆಯಾಗಿ ಕನ್ನಡದ ಹುಚ್ಚು ಎಲ್ಲರಿಗೂ ಸರಿಯಾದ ಕ್ರಮದಲ್ಲಿ ಹತ್ತಲಿ! ಆಧುನಿಕ ಕನ್ನಡ ಕವನಗಳ ವಿಷಯದಲ್ಲಿ ಇವರು ತಿಳುಹಿಸಿದ ಸಂಗತಿಗಳನ್ನು ತಾವೆಲ್ಲರೂ ತಿಳಿದುಕೊಂಡು ಕಿರಿಯರ ಕಾಣಿಕೆ, ಗರಿ, ಕೊಳಲು ಮೊದಲಾದವುಗಳನ್ನು ಓದಿರಿ" ಎಂದು ತಿಳಿಸಿದರು.

ರಾಘವಾಂಕನೂ ಹರಿಶ್ಚಂದ್ರ ಕಾವ್ಯವೂ— ಎಂಬ ವಿಷಯದಲ್ಲಿ ವಿದ್ಯಾಪ್ರೇಮಿಗಳೂ ಸಾಹಿತ್ಯ ವ್ಯಾಸಂಗಿಗಳೂ ಆದ ಶ್ರೀ. **ಶಿ. ಶಿ.** ಬಸವನಾಳ ಅವರು ೧೬-೯-೪೪ ನೆಯ ದಿವಸ ಈ ರೀತಿಯಾಗಿ ಮಾತನಾಡಿದರು-" ಕನ್ನಡದಲ್ಲಿ ರಗಳೆಯನ್ನು ಪ್ರಸಿದ್ಧಿಗೆ ತಂದ ಹರಿಹರನೂ ಅಕ್ಷರವೃತ್ತಗಳನ್ನು ಬಿಟ್ಟು **ಮಾತ್ರಾವೃತ್ತದ** ಷಟ್ಪದಿಯನ್ನು ರಚಿಸಿದ ರಾಘವಾಂಕನೂ ನಿಜವಾಗಿ ಕ್ರಾಂತಿಕಾರಕರು. ಕನ್ನಡತನವು ಇವರಲ್ಲಿ ಒಡೆದು ಕಾಣುತ್ತಿದೆ. ರಾಘವಾಂಕನ ಹರಿಶ್ಚಂದ್ರ ಕಾವ್ಯದ ಪ್ರತಿಯೊಂದು ಪದ್ಯವೂ ಮನೋಹರವಾಗಿದೆ. ಇದೇ ಕವಿಯು ವೀರೇಶ ಚರಿತೆಯನ್ನು ಳ ಮಾತ್ರೆಯ ಜ ಗಣಗಳುಳ್ಳ ಉದ್ದಂಡ ಷಟ್ಪದಿಯಲ್ಲಿ ರಚಿಸಿದ್ದಾನೆ. ಈತನು ಛಂದಸ್ಸಿನ ರೀತಿಯಲ್ಲಿಯೂ ಹೊಸಹೊಸ ಪ್ರಯೋಗಶೀಲನು. ಶಿವಕವಿಯು. ತಾನು ಬರೆದುದೆಲ್ಲ ಶಿವನಿಗೇ ಮೀಸಲವಾಗಿ ಬರೆದಿದ್ದಾನೆ. ತನ್ನ ಕಾವ್ಯಕನ್ನಿಕೆಯನ್ನು ಪಂಪಾಪತಿಗೆ ಅರ್ಪಿಸಿರುವನು. ಇದಕ್ಕೆ ವಿರುದ್ಧ ರೀತಿಯಲ್ಲಿ ಆದಿಪಂಪನೂ ರನ್ನನೂ ತಮ್ಮ ಅರಸರಿಗೆ ಅರ್ಪಿಸುವರು. ಇದರಿಂದ ರಾಘವಾಂಕನ ಉದಾತ್ತ ಧ್ಯೇಯ, ಭಕ್ತಿಯ ಆವೇಶಗಳು ಗೊತ್ತಾಗುವವು. ವಸಿಷ್ಠ ವಿಶ್ವಾಮಿತ್ರ ಹರಿಶ್ಚಂದ್ರರ ಕತೆ ಆರಿಸಿಕೊಂಡರೂ ಅವರನ್ನು ಹಂಪೆಗೆ ಕರೆತಂದು **ಕನ್ನಡಿಗರನ್ನೇ** ಮಾಡಿಬಿಟ್ಟಿದ್ದಾನೆ! ಇವನ ಶೈಲಿಯಲ್ಲಿಯೂ ಹೊಸ ದೃಷ್ಟಿಯು ಕಂಡುಬರುತ್ತಿದೆ. ಚಿಕಿತ್ಸಕ ದೃಷ್ಟಿಯಿಂದ ಕನ್ನಡವನ್ನು ಅಭ್ಯಾಸ ಮಾಡುವವರಿಗೆ ರಾಘವಾಂಕನ ಕಾವ್ಯಗಳು ತುಂಬ ಪ್ರಿಯಕರವಾಗಿವೆ."

ಕನ್ನಡದಲ್ಲಿಯೇ ವಿದ್ಯೆಯನ್ನು ಕಲಿಸುವದು—ಕನ್ನಡದಲ್ಲಿ ಈಗಿರುವ ಹಿರಿಯ ಸಾಹಿತಿಗಳಿಗೆ ಆಶೀರ್ವಾದ ಮಾಡಲು ಸಮರ್ಥರಾದ ಶ್ರೀ. **ಬಿ. ಎಸ್. ಶ್ರೀಕಂಠಯ್ಯ** ನವರು ಬಡವರ ಮನೆಗೆ ಭಾಗೀರಥಿಯು ಬಂದಂತೆ ಪ್ರಾಥಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜಕ್ಕೆ ಆಗಮಿಸಿ ಒಂದು ಉಪನ್ಯಾಸದಲ್ಲಿ ಈ ರೀತಿ ತಿಳಿಸಿದರು—" ಕನ್ನಡ ಮಕ್ಕಳಿಗೆ ಕನ್ನಡದಲ್ಲಿಯೇ ವಿದ್ಯೆಯನ್ನು ಕೊಡಬೇಕೆಂಬ ಮಾತು ಈಗ ಎಲ್ಲ ಕಡೆಗೂ ಗ್ರಾಹ್ಯವಾಗಹತ್ತಿದೆ. ವಿರೋಧಿಗಳು ಇಲ್ಲವೆಂತಲ್ಲ. ಅವರ ಸಂಖ್ಯೆ ಕಡಿಮೆ. ನಮ್ಮದು ಹಳ್ಳಿಗಳ ದೇಶ. ಅಜ್ಞಾನ ಬಡತನಗಳು ಮುಸುಕಿವೆ. ತಾಯಿನುಡಿಯಲ್ಲಿಯೇ ಅರ್ಥವನ್ನು ಗ್ರಹಿಸುವದು ಜನಗಳಿಗೆ ಕಷ್ಟವಾಗುವಾಗ ಇನ್ನೊಂದು ಭಾಷೆ ಏಕೆ ಬೇಕು? ಹೈಸ್ಕೂಲು ಕಾಲೇಜುಗಳಲ್ಲಿಯೂ ಕನ್ನಡವು ಹೆಚ್ಚಾಗುತ್ತಲಿದ್ದು ದರಿಂದ ತಿಳಿವಳಿಕೆಯು ಹರಡಹತ್ತಿದೆ. 'ಇಂಗ್ಲೀಷು ನಮಗೆ ಬೇಡವೇ ಬೇಡ' ಅನ್ನುವ ಸ್ಥಿತಿಗೆ ನಮ್ಮ ದೇಶವು ಇನ್ನೂ ಬಂದಿಲ್ಲ. ಬರಬಾರದು. ಅದು ಜಗತ್ತಿನ ಭಾಷೆ; ಮೇಲಾದ ಭಾಷೆ; ಆದರೆ ಅದರದೇ ಹಿರಿಯತನವಾಗಿರುವದು ಬೇಡ. ಆಳಾಗಿ ಬಂದು ಆರಸಾಗಿ ಆಳುವ ಪರಭಾಷೆಯ ಹಿರಿಮೆ ನಮಗೆ ಒಗ್ಗದು. ಕನ್ನಡ ಬರಹಗಾರರು ಕನ್ನಡವನ್ನು ಬಲಗೈಯಲ್ಲಿ ಬರೆಯಲಿ. ಎಡಗೈಯಲ್ಲಿ ಇಂಗ್ಲಿಷ ಪುಸ್ತಕಗಳನ್ನು ಹಿಡಿದು ಓದಲಿ. ಇಂಗ್ಲೀಷೂ ಇರಲಿ. ನಮ್ಮ ಈ ತಾಯಿನುಡಿ ಕನ್ನಡವೂ ಬೆಳೆಯಲಿ.

ಕನ್ನಡಿಗರೆಂದು ಎದೆ ತಟ್ಟಿಕೊಂಡು ಉಳಿದ ಪ್ರಾಂತಗಳ ಮುಂದಾಳುಗಳಂತೆ ಭಾರತೀಯ ಮುಂದಾಳುಗಳೆನಿಸಿಕೊಂಡು ದಿಲ್ಲಿ ಲಂಡನಗಳಲ್ಲಿ ರಾಜಕಾರಣಗಳನ್ನು ನಡಿಸುವ ಕನ್ನಡಿಗರಿದ್ದಾರೆಯೇ! ಬ್ರಿಟಿಶರ ರಾಜ್ಯ ಆರಂಭವಾಗಿ ಇಷ್ಟು ಕಾಲವಾದರೂ ಇಂಗ್ಲೀಷ ಭಾಷೆಯು ಎಲ್ಲರ ಮನೆಯನ್ನು ಸೇರಿಲ್ಲ. ಅದು ನಮ್ಮವರಿಗೆ ಜೀಗನೆ ಒಗ್ಗುವದಿಲ್ಲ. ನಮ್ಮ ಮಕ್ಕಳ ಅಭ್ಯುದಯವಾಗಬೇಕಾದರೆ ನಾವು ಕನ್ನಡ ನುಡಿಯಲ್ಲಿಯೇ ಕಲಿಸಬೇಕು. ನಮ್ಮ ನುಡಿಯಲ್ಲಿ ಆಡಿದ ಮಾತೇ ನಮ್ಮ ಜನಕ್ಕೆ ಜೀವಕಳೆಯನ್ನು ತುಂಬುತ್ತದೆ. ಮಾಯಾವಿಗಳ ಮಾತು ಕೇಳುವದರಿಂದ ಆಗುವದೇನು? ನನ್ನ ಮಾತೇ ಕೊನೆಯದಲ್ಲ. ನೀವೆಲ್ಲರೂ ವಿಚಾರ ಮಾಡಬೇಕು. ನಿಮ್ಮೆಲ್ಲರ ಪ್ರಯತ್ನವು ಅತ್ಯವಶ್ಯವಾಗಿ ಬೇಕು."

ಸಾಂಸ್ಕೃತಿಕ ಪುನರುಜ್ಜೀವನದ ವಿಷಯದಲ್ಲಿ ಶ್ರೀ. ವ್ಹಿ. ಬಿ. ನಾಯಿಕರವರು ೧೯-೧೧-೧೯೪೫ ನೆಯ ದಿವಸ ಉಪನ್ಯಾಸವಿತ್ತರು. ಅದರಲ್ಲಿಯ ಮುದ್ದಿಯ ಮಾತುಗಳು ಈ ರೀತಿಯಾಗಿವೆ:—

"ನಾವು ಜಗತ್ತಿನ ಇತಿಹಾಸವನ್ನು ನೋಡಿದರೆ ಸಂಸ್ಕೃತಿಯಲ್ಲಿ ಹಿರಿದಾದ ಭಾರತವು ಇಂದು ಪಡುತ್ತಿರುವಷ್ಟು ಕಷ್ಟನಷ್ಟಗಳನ್ನು ಇನ್ನಾವ ದೇಶವೂ ಅನುಭವಿಸಿಲ್ಲ. ನಾವು ನಮ್ಮ ಸಂಸ್ಕೃತಿಯನ್ನು ರಕ್ಷಿಸುವದಾಗಲಿ, ಪುನರುಜ್ಜೀವನಗೊಳಿಸುವದಾಗಲಿ ಏತಕ್ಕಾಗಿ? ಸುಖಮಯಜೀವನಕ್ಕಾಗಿ ಅಲ್ಲವೇ! ಇಂದಿನ ಯುದ್ಧದಲ್ಲಿ ನಮಗೆ ಕಂಡುಬರುವದೇನು? ಪ್ರಜಾ-ಸಾಮ್ರಾಜ್ಯಾಧಿಕಾರ, ಸರ್ವಾಧಿಕಾರಿತ್ವಗಳ ಘರ್ಷಣೆ; ಇನ್ನೊಂದು ಕಡೆಗೆ ರಶಿಯಾ ದೇಶದ ಸಮತಾವಾದ. ಇವುಗಳ ಹಿನ್ನೆಲೆಯನ್ನು ಭಾವಿಸಿದರೆ ಇದು ಸತ್ಯವಂತರ ಕಾಲವಲ್ಲೆಂಬುದು ತಿಳಿದುಬರುವದು. ಆದರೂ ಕೂಡ ನಿರಾಶೆಕೊಂದದೆ ವೈಯಕ್ತಿಕಜೀವನವನ್ನು ಪರಿಶುದ್ಧವಾಗಿಟ್ಟುಕೊಂಡು ಭಾರತೀಯರು ಈಗಿನ ಕಾಲಕ್ಕೆ ತಕ್ಕ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಬೇಕಾಗಿದೆ. ಆತ್ಮಶಕ್ತಿಯೇ ನಿಜವಾದ ಶಕ್ತಿ. ಇದರ ಬಲದಿಂದ ಸತ್ಯದ ತಳಹದಿಯಿಂದ ತ್ಯಾಗ-ಸ್ಫೂರ್ತಿ ಸ್ವಾವಲಂಬನಗಳಿಂದ ದೇಶಸೇವೆಯೇ ಈಶಸೇವೆಯೆಂಬ ಭಾವನೆಯಿಂದ ನಮ್ಮ ಬಾಳುಬದುಕುಗಳನ್ನು ತೇಜೋಮಯವಾಗಿ ಮಾಡಲೇಬೇಕಾಗಿದೆ. ಇಂಥ ಮಹತ್ತರವಾದ ಕಾರ್ಯವನ್ನು ಮಾಡಿಸುವ ಕಾರಣಪುರುಷನು ಜಗತ್ತಿನ ಸಂಸ್ಕೃತಿಯನ್ನು ಕೂಡ ಬೆಳಗಿಸಬಲ್ಲ ದಿವ್ಯಪುರುಷನು ಭಾರತದಲ್ಲಿ ಉದಯವಾಗಿರುವನೋ! ಆಗುತ್ತಲಿರುವನೋ!

ಶಿಕ್ಷಕರು ಸಂಸ್ಕೃತಿಯ ರಕ್ಷಣೆಯ ಮಹತ್ಕಾರ್ಯಮಾಡುವಲ್ಲಿ ಎಲ್ಲಕ್ಕೂ ಮೊದಲಿನಿಂದಲೂ ಮುಂದುವರಿದಿದ್ದಾರೆ. ಈ ಕಾಲದಲ್ಲಿ ಅವರು ಎಂಥ ತೊಡಕಿನಲ್ಲಿರುತ್ತಿದ್ದರೂ ಕೂಡ ನಿರುತ್ಸಾಹಿಗಳಾಗಬಾರದೆಂಬದು ನನ್ನ ಕೋರಿಕೆ."

ಉಪಾಧ್ಯಾಯವೃತ್ತಿಯ ವಿಷಯವಾಗಿ ಪ್ರೊ. ನಾ. ಕಸ್ತೂರಿ ಅವರು ಈ ರೀತಿಯಾಗಿ ಮಾತನಾಡಿದರು:— ಶಿಕ್ಷಕರಿಗೆ ಈಗ ಸಮಾಜದಲ್ಲಿ ಸರಿಯಾದ ಸ್ಥಾನಮಾನಗಳಿಲ್ಲ. ಓರ್ವ ಮಾಮಲೇದಾರರ ಕುದುರೆಯ ಭತ್ತೆಗಿಂತ ಶಿಕ್ಷಕರ ಸಂಬಳವು ಕಡಿಮೆಯಾಗಿದೆ. ಪ್ರಾಥಮಿಕ ಶಿಕ್ಷಕರಂತೆಯೇ ತುಸು ಹೆಚ್ಚು ಕಡಿಮೆ ಪ್ರಮಾಣದಲ್ಲಿ ಮಾಧ್ಯಮಿಕ ಉಚ್ಚತರಗತಿಯ ಶಿಕ್ಷಕರ ಗತಿ ಎಲ್ಲರೂ ಒಂದೇ ಗೋತ್ರದವರು. 'ಕಲಿಸಿದಾತಂ ವರ್ಣಮಾತ್ರಂ ಗುರು' ಅನ್ನುವ ಕಾಲವು ಉಳಿದಿಲ್ಲ "ರಾಯರು ಮದುವೆಯನ್ನು ನಡಗರದಿಂದ ಮಾಡಿದರು; ಡೆಪ್ಯುಟಿ ಕಮಿಶನರರಿಂದ ಮೊದಲುಗೊಂಡು ಸ್ಕೂಲ್‌ಮೇಸ್ಟರರವರೆಗೆ ಎಲ್ಲರೂ ಬಂದಿದ್ದರು." ಅನ್ನುವ ಈಗಿನವರಲ್ಲಿ ಶಿಕ್ಷಕರ ವಿಷಯವಾಗಿರುವ ಕನಿಷ್ಟಬುದ್ಧಿಯು ವ್ಯಕ್ತವಾಗುವದು. ಹೀಗೆ

ಜನರಿಂದ ತಕ್ಕ ಮಾನ ಸನ್ಮಾನಗಳು ದೊರೆಯದ ಈಗಿನ ಕಾಲದಲ್ಲಿ ಶಿಕ್ಷಕರು ಸುಮ್ಮನೆ ಕೂಡಲು ಬರುವಂತಿಲ್ಲ. ಅವನ್ನು ಸರಿಯಾದ ಕ್ರಮದಲ್ಲಿ ದೊರಕಿಸಬೇಕಾಗಿದೆ. ನಾವು ಕೈಕೊಂಡ ವೃತ್ತಿಯಲ್ಲಿ ನಮಗೆ ಅಭಿಮಾನವು ಬೇಕು. ಮಾಡಿಕೊಂಡ ಹೆಂಡತಿಯೊಡನೆ ಸಂಸಾರ ಮಾಡಲೇಬೇಕು. ಜೀಂದಾಗುವಂತೆ ಇರಲಿಕ್ಕೆ ಬೇಕು. ಅದರಂತೆ ಉಪಾಧ್ಯಾಯ ವೃತ್ತಿಯನ್ನು ಸಾಗಿಸುವದಲ್ಲದೆ ಅದರಲ್ಲಿ ಪ್ರಾವೀಣ್ಯವನ್ನು ಪಡೆಯಲು ಪ್ರಯತ್ನಿಸಬೇಕು. ಶಿಕ್ಷಕರ ಜೀವನವು ಬಹಿರಂಗವಾದದ್ದು. ಅವರು ಸಮಾಜದಲ್ಲಿ ಎಲ್ಲಿಯೋ ಇದ್ದು ಬದುಕುವವರಲ್ಲ. ಅವರ ವಿಷಯದಲ್ಲಿ ಮನೆಮನೆಯಲ್ಲಿಯೂ ಬಾಲಕ-ಪಾಲಕ-ಅಧಿಕಾರಿಗಳಲ್ಲಿಯೂ ನಿತ್ಯವೂ ಮಾತುನಡೆಯುತ್ತಲಿದೆ. ಆದುದರಿಂದ ಶಿಕ್ಷಕರೆಲ್ಲರೂ ಒಂದಾಗಿ ಕೆಲಸಮಾಡಿ, ತಮ್ಮ ಜೀವನವನ್ನು ಪರಿಶುದ್ಧವಾಗಿ ಇಟ್ಟುಕೊಂಡರೆ, ಗೌರವವು ತಾನಾಗಿಯೇ ಬಂದು ನೆಲೆಸುವದರಲ್ಲಿ ಸಂದೇಹವಿಲ್ಲ.

ಉಪಾಧ್ಯಾಯರ ವೃತ್ತಿ ಹಾಗು ಕರ್ತವ್ಯಗಳ ವಿಷಯದಲ್ಲಿ ಮೈಸೂರು ಸಂಸ್ಥಾನದ ಶ್ರೀ. ಸಂಪದ್ಗಿರಿರಾಯರು ಭಾಷಣಮಾಡಿದರು. ಅದರ ಮುಖ್ಯಾಂಶಗಳು ಹೀಗಿವೆ:— ಉಪಾಧ್ಯಾಯರ ವೃತ್ತಿಯು ಹೆಚ್ಚಿನದು. ನಮ್ಮ ಸಮಾಜದ, ನಮ್ಮ ಭಾರತದ, ಮುನ್ನಣೆ, ಆಗುಹೋಗುಗಳು ಉಪಾಧ್ಯಾಯರ ಕರ್ತವ್ಯವನ್ನೇ ಅವಲಂಬಿಸಿವೆ. ಹೀಗಿದ್ದರೂ ಕೂಡ ಇಂದು ಶಿಕ್ಷಕರಿಗೆ ತಕ್ಕ ಮನ್ನಣೆ ದೊರೆಯುವದಿಲ್ಲ. ಅದನ್ನು ದೊರಕಿಸಲೇಬೇಕಾಗಿದೆ. ಅದಕ್ಕಾಗಿ ಉಪಾಧ್ಯಾಯರು ತಮ್ಮ ವೈಶಿಷ್ಟ್ಯವನ್ನು ಬಿಡಕೂಡದು. ಅಮೂಲ್ಯವಾದ ಮಹಾಕಾರ್ಯವನ್ನು ಕೈಕೊಂಡಿದ್ದೇವೆಂಬ ವಿಶ್ವಾಸವು ಅವರಿಗಿರಬೇಕು. ಲವ-ಕುಶರಿಗೆ ಕಲಿಸಿದ ವಾಲ್ಮೀಕಿಯು ನಮ್ಮೆಲ್ಲರ ಮೇಲ್ಪಂಕ್ತಿಯಾಗಿದ್ದಾನೆ. ನಾವು ಸ್ವಯಂಪ್ರೇರಣೆಯಿಂದ ಕೆಲಸಮಾಡಬೇಕು. ಅನ್ಯರ ಬಲುಮೆಗಾಗಿ ಅಲ್ಲ. ನಮ್ಮ ಹೋರೆಯಲ್ಲಿ ನಮಗೆ ತೃಪ್ತಿಯಿರಬೇಕು. ಆಭಿಮಾನವಿರಬೇಕು. ಸಂಬಳ, ಕೆಲಸ, ಸ್ಥಳಗಳ ನಿರ್ಬಂಧವಿದ್ದರೂ ಶ್ರದ್ಧೆ ಆಸಕ್ತಿಗಳಿದ್ದರೆ ಬೇಗನೆ ಮುಪ್ಪು ಬಾರದು. ಯಾವದಾದರೂ ತರದಿಂದ ಮುಂದೆ ಹೋಗಬೇಕೆಂಬುವ ದುಷ್ಟ ಹವ್ಯಾಸವನ್ನು ಬಿಟ್ಟು ಸಾತ್ವಿಕವೃತ್ತಿಯನ್ನು ತಾಳಬೇಕು. ಇಂಗ್ಲಿಷಕಲಿತವರೇ ದೊಡ್ಡವರೆಂಬುವ ಭಾವನೆಯನ್ನು ಅಳಿಸಿಬಿಡಬೇಕು. ಇದರಿಂದ ನಮ್ಮ ಸಂಸ್ಕೃತಿಯ ರಕ್ಷಣೆಯಾಗಿ ಪ್ರಗತಿಯ ಮಾರ್ಗಗಳು ನಿಚ್ಚಳವಾಗಿ ಕಾಣುವವು. ಚೀನ, ಮತ್ತು ಭಾರತಗಳಲ್ಲಿ ಇನ್ನೂ ಧಾರ್ಮಿಕಭಾವನೆ ಹೆಚ್ಚಿದೆ. ರಾಷ್ಟ್ರೋದ್ಧಾರದ ಕಾರ್ಯವಿದು ಎಂದು ತಿಳಿದು ಉಪಾಧ್ಯಾಯರು ನಡೆದುದಾದರೆ ರಾಜಕಾರಣಪಟುಗಳಿಂದ ಆಗದ ಮಹತ್ಕಾರ್ಯವು ಇವರಿಂದ ಸಹಜವಾಗಿ ಆಗುವದು.

ಕರ್ನಾಟಕದಲ್ಲಿಯ ಹತ್ತಿ, ರೇಶಿಮೆ, ಉಣ್ಣೆಯ ವ್ಯವಸಾಯಗಳು— ನಾಗರಿಕತೆಯು ಬೆಳೆದಂತೆ ಬಟ್ಟೆಗಳಲ್ಲಿ ವೈವಿಧ್ಯತೆಯು ಉಂಟಾಗುವದು. ಹತ್ತಿಯು ಹಿಂದುಸ್ತಾನ, ಚೀನ, ತುರ್ಕಸ್ತಾನ, ಆಫ್ರಿಕಾ, ಅಮೇರಿಕಾಗಳಲ್ಲಿ ಬೆಳೆಯುತ್ತದೆ. ಗುಜರಾಥ, ಕರ್ನಾಟಕ, ಕೊಯಿಮತ್ತೂರ, ಕಾಶ್ಮೀರ, ಡಾಕಾಗಳ ಬಟ್ಟೆಗಳು ಪ್ರಪಂಚದಲ್ಲೆಲ್ಲ ಹೆಸರಾಗಿರುವವು. ೧೫೦ ವರ್ಷಗಳ ಹಿಂದೆ ಬಂದ ಪ್ರವಾಸಿಗಳು ನಮ್ಮ ನಾಡಿನ ಹತ್ತಿಯ ಕೈಗಾರಿಕೆಯನ್ನು ತುಂಬ ಹೊಗಳಿದ್ದಾರೆ. ಈಗ ನಮ್ಮ ನಾಡಿನ ೮ ಲಕ್ಷ ಎಕರೆ ಭೂಮಿಯಲ್ಲಿ ೬೫ ಲಕ್ಷ ಗಂಟು ಅರಳೆಯು ಸಿದ್ಧವಾಗುತ್ತದೆ. ಔರಂಗಾಬಾದ, ರಾಯಚೂರ, ಬಾಗಲಕೋಟೆ, ಇಳಕಲ್ಲ, ಸೊಲ್ಲಾಪುರ, ಶಹಾಪುರ, ದಾವಣಗೆರೆ, ಮೈಸೂರು, ಗದಗ, ಹಾವೇರಿ, ರಾಣೆಬೆನ್ನೂರ, ಹುಬ್ಬಳ್ಳಿ, ಗೋಕಾವಿ, ರಾಮದುರ್ಗಗಳಲ್ಲಿ ನೆಯ್ಗೆಯ ಕೆಲಸವು ಚೆನ್ನಾಗಿ ಸಾಗಿದೆ

ಯ ವ್ಯವಸಾಯದಲ್ಲಿ ಕರ್ನಾಟಕಕ್ಕೆ ಅಗ್ರಸ್ಥಾನವಿದೆ. ಮೈಸೂರು ಸಂಸ್ಥಾನದಲ್ಲಿ ೬೫ ಸಾವಿರ ಎಕರೆ ಸ್ಥಳದಲ್ಲಿ ಬೆಳೆದ ಕೋರಿಯು ಗಿಡಗಳ ಎಲೆಗಳಿಂದ ಹುಳಗಳನ್ನು ಸಾಕುತ್ತಲಿದ್ದಾರೆ. ಈ ವ್ಯವಸಾಯದಿಂದ ೨ ಲಕ್ಷ ಕುಟುಂಬಗಳ ಹೊಟ್ಟೆ ತುಂಬುತ್ತಲಿದೆ. ರೇಶಿಮೆಗೆ ಹತ್ತಿಗಿಂತಲೂ ಬೆಲೆ, ತಾಳಿಕೆ ಹೆಚ್ಚು. ಬೆಳಗಾವಿ, ಸೇಲಮ್, ಧರ್ಮಾವರಗಳಲ್ಲಿಯೂ ಇತ್ತೀಚೆಗೆ ಈ ಹುಳಗಳನ್ನು ಸಾಕುವ ಕೆಲಸವು ನಡೆದಿದೆ. ಹೈದ್ರಾಬಾದು, ಬೆಂಗಳೂರು, ಬಾಗಲಕೋಟೆ, ಮೊಳಕಾಲ್ಮೂರು, ತಾಡಪತ್ರಿ, ಬಳ್ಳಾರಿ, ಶಹಾಪುರಗಳಲ್ಲಿ ರೇಶಿಮೆಯ ಬಟ್ಟೆಗಳ ವ್ಯಾಪಾರವು ಹೆಚ್ಚು.

ಕರ್ನಾಟಕದಲ್ಲಿ ಮಳೆ ಕಡಿಮೆಯಾಗುವ ಭಾಗದಲ್ಲಿ ಕುರಿಗಳನ್ನು ಸಾಕುವದು ಪುರಾತನಕಾಲದಿಂದಲೂ ನಡೆದುಬಂದಿದೆ. ಆಸ್ಟ್ರೇಲಿಯಾ, ಕಾಶ್ಮೀರಗಳಂತೆ ನಮ್ಮಲ್ಲಿ ಉತ್ತಮ ಉಣ್ಣೆಯ ಕುರಿಗಳಿರದಿದ್ದರೂ ಮಧ್ಯಮತರದ ಕುರಿಗಳಿವೆ. ಕಂಬಳಿ, ನೆಲಗಂಬಳಿ ಗಳಿಗಾಗಿ, ದಾವಣಗೆರೆ, ಕೋಲಾರ, ಬಾಗಲಕೋಟೆ, ಹರಪನಹಳ್ಳಿ, ರಾಮದುರ್ಗಗಳು ಹೆಸರಾಗಿವೆ.

ಹಿಂದಿನ ಕಾಲದಲ್ಲಿ ರತಿಯಾದ ರೈತರು ಬಹಳ ಕಷ್ಟಪಡುತ್ತಲಿದ್ದರು. ಜಮೀನದಾರರ ಕೈವಾಡವು ಹೆಚ್ಚಾಗಿತ್ತು ಒಟ್ಟು ಜನರಲ್ಲಿ ೧೦೦ ಕ್ಕೆ ೧೩ ರಷ್ಟು ಜಮೀನದಾರರಿದ್ದರು. ೧೦೦ ಕ್ಕೆ ೭೦ ರಷ್ಟು ಬೆಳೆಯನ್ನು ಜಮೀನದಾರರಿಗೆ ಕೊಡಬೇಕಾಗುತ್ತಿತ್ತು. ಬಾಡಿಗೆ, ಬಡ್ಡಿ ಸಾಲದ ಕಂತು ಕೊಟ್ಟು ರೈತರಿಗೆ ಉಳಿಯುವದೇನು? ಅವರ ಊಟವೆಂದರೆ ದೊಡ್ಡದೊಂದು ಒಣಗಿದ ರೊಟ್ಟಿಯಾಗಿತ್ತು. ಹಳೆಯತರದ ಸಾಧನಗಳಿಂದ ಅವರ ಬಳಲಿಕೆಯೂ ಹೆಚ್ಚಾಗಿತ್ತು. ಅವರ ಕಣ್ಣೀರು ಕಪಾಳಿಗೆ ಹರಿದು ಬರುತ್ತಿದ್ದವು ಇದರಿಂದ ಯುಕ್ರೇನದ ೨೦ ಲಕ್ಷ ರೈತರು ಕೂಲಿಕಾರರಾಗಿ ಪಟ್ಟಣಗಳಲ್ಲಿ ಸೇರಿಕೊಂಡರು. ಈಗ ಈ ಸ್ಥಿತಿಯು ಉಳಿದಿಲ್ಲ. ಆಧುನಿಕ ಯಂತ್ರೋಪಕರಣಗಳು ಅವರಿಗೆ ದೊರಕಿವೆ. ಸೋವ್ಹಿಏಟ ಸರಕಾರವು ಸಾರ್ವಜನಿಕ ವೈಯಕ್ತಿಕ ಹೊಲಗಳನ್ನು ಮಾಡಿ ರೈತರ ಜೀವನವನ್ನು ಸುಖಮಯವಾಗಿ ಮಾಡಿದೆ. ಅವರ ದುಡಿಮೆಯು ಕಡಿಮೆಯಾಗಿದೆ. ಸಾರ್ವಜನಿಕ ಹೊಲಗಳು ಪ್ರಯೋಗಶಾಲೆಗಳಾಗಿವೆ. ಈಗ ಎಲ್ಲರಿಗೂ ಧಾನ್ಯವು ಸಾಕಾಗಿ. ಉಳಿದ ಹತ್ತಿಪ್ಪತ್ತು ಕೋಟಿ ಟನ್ ಧಾನ್ಯವನ್ನು ಸರಕಾರಕ್ಕೆ ಮಾರುವರು. ಅಲ್ಲಯ ರೈತರು ಹಾಗು ಕೂಲಿಕಾರರು ದಿನಾಲು ೬ ತಾಸುಗಳಿಗಿಂತ ಹೆಚ್ಚಿಗೆ ದುಡಿಯಬೇಕಾಗಿಲ್ಲ. ನಿರ್ದಿಷ್ಟಕ್ಕಿಂತ ಹೆಚ್ಚು ದುಡಿದರೆ ಹೆಚ್ಚು ಹಣ ದೊರೆಯುವದು. ವಿಜ್ಞಾನ, ಯಾಂತ್ರಿಕ ಸಾಧನ, ಆತ್ಮೀಯತೆ ಸರಿಯಾದ ಆಡಳಿತ, ಇವುಗಳಿಂದ ಜನರ ಜೀವನವು ಸುಖಮಯವಾಗಿ ಹುಟ್ಟುವಳಿ ಹೆಚ್ಚುತ್ತಲಿದೆ. ಮಧ್ಯಪತಿಯಾದಲ್ಲಿ ಉದ್ಯೋಗ ಕಾರಖಾನೆಗಳ ಸಾಹಸವನ್ನು ಮಾಡುತ್ತ-ಲಿದ್ದಾರೆ. ಸರಕಾರದವರು ಪೂರ್ವಭಾಗದಲ್ಲ ಕಬ್ಬು ರಬ್ಬರಗಳ ಬೆಳೆಗೆ ಉತ್ತೇಜನ ಕೊಡುತ್ತಲಿದ್ದಾರೆ. ಕೆಂಪುಸೇನೆಯು ಪ್ರಬಲವಿದ್ದು ವೈರಿಗಳನ್ನು ಪ್ರತಿಭಟಿಸುತ್ತಲಿದೆ. ರೈತರಲ್ಲಿ ಒತ್ತಾಯದ ಸಾಕ್ಷರತಾ ಪ್ರಸಾರವಾದುದರಿಂದ ನಿರಕ್ಷರಿಗಳು ಉಳಿಯುವಂತಿಲ್ಲ. ಇವರಿಗಾಗಿ ವಾಕ್ಪಟಗಳು, ಉದ್ಯೋಗ ಶಾಲೆಗಳು, ವಾಚನಾಲಯಗಳು ಇವೆ. ವಾಹನಗಳ ಅನುಕೂಲತೆಯಿದೆ. ಮನೆಮನೆಗೆ ರೇಡಿಯೋಗಳಿವೆ. ಜನರು ವಿದ್ಯುತ್ ದೀಪಗಳಿಂದ ದಿನಾಲು ದೀಪಾವಳಿಯನ್ನು ಜರುಗಿಸುತ್ತಿದ್ದಾರೆ ಅವರು.

ಕರ್ನಾಟಕದಲ್ಲಿಯ ಗಂಧದ ಎಣ್ಣೆಯ ವ್ಯವಸಾಯ.

ಗಂಧದ ಎಣ್ಣೆಗೆ ಸುವಾಸನೆ ಇರುವದು. ಆದುದರಿಂದ ಸೌಂದರ್ಯವರ್ಧಕ ವಸ್ತುಗಳಲ್ಲಿ

ಅದನ್ನು ಉಪಯೋಗಿಸುವರು. ಅದು ಕಿವಿಶೂಲೆ ಮೊದಲಾದ ಬೇನೆಗಳಿಗೆ ಮೇಲಾದ ಔಷಧಿಯಾಗಿರುವದು. ಇದರ ಗಿಡಗಳು ಯಾವಾಗಲೂ ಹಸಿರಾಗಿರುವವು. ಹೊದರುಗಳಲ್ಲಿ ಹಾವುಗಳು ಇರುವದುಂಟು. ಈ ಗಿಡಗಳ ಒಡೆತನವು ಹೆಚ್ಚಾಗಿ ಸರಕಾರಕ್ಕೆ ಸೇರಿರುತ್ತದೆ. ಗಂಧದ ಗಿಡಗಳಿಗೆ ಚಂದನವೃಕ್ಷವೆಂತಲೂ ಅನ್ನುವದುಂಟು. ಈ ಗಿಡಗಳು ಮೈಸೂರಿನ ಮಲೆನಾಡಿನಲ್ಲಿಯೂ, ಕೊಡಗು, ಮುಂಬಯಿಕರ್ನಾಟಕದ ಜಿಲ್ಲೆಗಳಲ್ಲಿಯೂ ಜೆನ್ನಾಗಿ ಬೆಳೆಯುವವು. ಮೈಸೂರಪ್ರಾಂತದಲ್ಲಿ ಎಣ್ಣೆ ತೆಗೆಯುವ ಕಾರಖಾನೆಗಳಿವೆ. ೧೯೧೬ ರಿಂದ ಇಂದಿನವರೆಗೆ. ೫೬ ಸಾವಿರಟನ್ ಕಟ್ಟಿಗೆಯಿಂದ ಈ ಎಣ್ಣೆಯನ್ನು ತೆಗೆದಿದ್ದು ೪೮ ಕೋಟಿ ರೂ.ಗಳ ಲಾಭವು ಕನ್ನಡನಾಡಿಗೆ ದೊರಕಿದೆ. ಗಂಧದ ಕಟ್ಟಿಗೆಯನ್ನು ಕೆತ್ತಿ ತೆಗೆದು ಒಳಗಿನ ತಿರುಳನ್ನು ಯಂತ್ರಗಳಿಂದ ಚೂರು ಚೂರುಮಾಡಿ ಪುಡಿಮಾಡಿ ಹಸನಾದ ನೀರಿನಲ್ಲಿ ಕುದಿಸಿ ಒತ್ತಿ ಹಿಂಡಿದಾಗ ನೀರು, ಮಿಶ್ರಿತ ಎಣ್ಣೆ ಬರುವದು. ಅದನ್ನು ಪರಿಶುದ್ಧಮಾಡಿದ ಬಳಿಕ ಸುಯಾದ ಡಬ್ಬಿಗಳಲ್ಲಿ ಸುವ್ಯವಸ್ಥಿತವಾಗಿ ತುಂಬಿ, ವ್ಯಾಪಾರಕ್ಕೆ ಕಳಿಸುವರು. ಇತ್ತೀಚೆಗೆ ಭದ್ರಾವತಿಯಲ್ಲಿಯೂ ಗಂಧದಣ್ಣೆಯ ಕಾರಖಾನೆ ಹೊರಟಿದೆ. ಗಂಧದ ಎಣ್ಣೆಯನ್ನು ಸಾಬಾಣ, ಪರಿಮಳಬಿಲ್ಲೆ ಮುಗಳನ್ನೂ ಮಾಡುವದಕ್ಕೆ ಉಪಯೋಗಿಸುವರು. ಗಂಧದ ಕಟ್ಟಿಗೆಯಲ್ಲಿ ಜಿನುಗಾದ ಕೆತ್ತಿಗೆಯ ಕೆಲಸವಾಗುವದು. ಮೂರ್ತಿಗಳು, ಹಣಿಗೆ, ಬೀಸಣಿಕೆ ಮೊದಲಾದ ವಸ್ತುಗಳು ಸಿದ್ಧವಾಗುವವು. ಸಾಣೆಕಲ್ಲಿನ ಮೇಲೆ ಅರೆದ ಗಂಧವು ದೇವರ ಪೂಜೆಗೂ ಶುಭ-ಶೋಭನ, ಲಗ್ನ-ಮುಂಜಿವೆ, ಹಬ್ಬ ಹುಣ್ಣಿವೆಗಳಿಗೆ ಸಾಮಾನ್ಯರಿಗೆಲ್ಲ ಬೇಕು. ಅತಿಥಿಗಳ ಕೊರಳಿಗೆ ಲೇಪಿಸಲು ಬೇಕು. ಅಲಂಕಾರ ಷೋಡಶೋಪಚಾರಗಳಿಗೆ ಬೇಕು. ಊದಬತ್ತಿ ಧೂಪಗಳಿಗೆ ಗಂಧದ ಪುಡಿಯು ಬೇಕು. ಹೋಮಹವನಗಳಿಗೆ ದೇವತಾಮಂದಿರಗಳಿಗೆ. ರಾಜಸಭೆಗೆ, ಸಿರಿವಂತರ ವಿಲಾಸಕ್ಕೆ ಗಂಧದ ಕಟ್ಟಿಗೆ ಬೇಕು. ಫಾರ್ಸೀಜನರು ಸದಾಕಾಲ ಪೋಷಿಸುವ ಅಗ್ನಿದೇವನಿಗೂ ಮಹಾಜನರ ಶವಸಂಸ್ಕಾರಕ್ಕೂ ಗಂಧದ ಕಟ್ಟಿಗೆಯು ಬೇಕು. ಸಿದ್ದಾಪುರ, ಹೊನ್ನಾವರ, ಮೈಸೂರುಗಳಲ್ಲಿ ಗಂಧದ ಕಟ್ಟಿಗೆಯಲ್ಲಿ ಕೆಲಸ ಮಾಡುವ ಗುಡಗಾರ ಜನರಿದ್ದಾರೆ. ಅವರ ಕೆತ್ತಿಗೆಯ ಕೆಲಸವು ಲೋಕವಿಖ್ಯಾವಿದೆ. ಗಂಧದ ವ್ಯವಸಾಯದಲ್ಲಿ ಕನ್ನಡನಾಡು ತುಂಬ ಮುಂದುವರಿದಿದೆ. ಇದು ನಮ್ಮೆಲ್ಲರಿಗೆ ಹೆಮ್ಮೆಯ ವಿಷಯ.

ಪ್ರವಾಸದಲ್ಲಿಯ ಅನುಭವಗಳು— ಸ್ವಾಮಿ ಜಗದೀಶ್ವರಾನಂದರು ಪಂಜಾಬದವರು. ಕಳೆದ ೨೦ ವರ್ಷಗಳಲ್ಲಿ ಇಡಿಯ ಹಿಂದುಸ್ತಾನವನ್ನೂ ಪೌರ್ವಾತ್ಯ ರಾಷ್ಟ್ರಗಳನ್ನೂ ಸಂಚರಿಸಿ ಬಂದಿರುವರು. ಜನರ ಧಾರ್ಮಿಕ ಸಾಮಾಜಿಕ ಜೀವನಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿದವರು ಅವರೊಂದು ಉಪನ್ಯಾಸದಲ್ಲಿ ಈ ರೀತಿಯಾಗಿ ಹೇಳಿದರು.

ಪ್ರತಿಯೊಬ್ಬನೂ ಯಥಾಶಕ್ತಿ ಪ್ರವಾಸವನ್ನು ಮಾಡಲೇಬೇಕು. ಪ್ರವಾಸ ಮಾಡದವನು ಬಾಳಲು ಅರ್ಹನಲ್ಲ. ಸಕಾಲದಲ್ಲಿ ಆದ ಪ್ರವಾಸಗಳಿಂದ ಮನಸ್ಸು ಹೃದಯಗಳು ವಿಸ್ತಾರವಾಗಿ ಜಗತ್ತಿನಲ್ಲಿ ಎಲ್ಲೆಲ್ಲಿಯೂ ದೇವರಿದ್ದಾನೆಂಬುದು ಗೊತ್ತಾಗುವದು. ನಮ್ಮ ಧರ್ಮ ಶಾಸ್ತ್ರಗಳಾದರೋ ಸಮುದ್ರ ಪ್ರವಾಸವನ್ನು ನಿಷೇಧಿಸಿದಂತಿದೆ. ಇದರಿಂದ ನಮ್ಮಲ್ಲಿಯ ಒಂದು ಕಾಲದ ಪಂಡಿತರು ಕೂಪಮಂಡೂಕದಂತಾದರು. ಇಂಥವರ ಹೇಳಿಕೆಗಳಿಂದ ಇಡಿಯ ದೇಶವೇ ಮೋಸಹೋಗಿದೆ! ಬ್ರಹ್ಮದೇಶ, ಇಂಡೋಚಾಯನಾ, ಜಾವಾ, ಚೀನ, ಜಪಾನಗಳಲ್ಲಿ ನೋಡಿದೆ. ಅವರ ಭಾಷೆ ಒಂದು, ಅಲ್ಲಿಯ ಜನರ ವೇಷವೂ ಒಂದೇ ಬಗೆಯಾಗಿದೆ. ಧರ್ಮವೂ ಒಂದು. ಮದುವೆ, ಹಬ್ಬ, ಅಂತ್ಯಸಂಸ್ಕಾರ, ಊಟದ

ರೀತಿ ಮೊದಲಾದವುಗಳೂ ಒಂದೇ ಬಗೆಯಾಗಿವೆ. ನಮ್ಮಲ್ಲಿಯಾದರೋ ಎಷ್ಟು ಭೇದ! ನಡೆ-ನುಡಿ ಉಡಿಗೆ-ತೊಡಿಗೆಗಳು ಪ್ರತಿಹತ್ತು ಮೈಲಿಗೆ ಬದಲಾಗುವವು. ಇದರಿಂದ ನಮ್ಮಲ್ಲಿ ಏಕರಾಷ್ಟ್ರೀಯತ್ವದ ಕಲ್ಪನೆಯು ಬೆಳೆಯಲೊಲ್ಲದು. ಮದ್ರಾಸಿಗಳೂ, ಮಾರವಾಡಿಗಳೂ ದೇಶದ ತುಂಬ ಹರಡಿದ್ದರೂ ಉಳಿದವರಲ್ಲಿ ಹಲವರು ಮನೆಬಿಟ್ಟು ಹೊರಗೆ ಬರುವಂತಿಲ್ಲ. ಎಲ್ಲವನ್ನೂ ಬಿಟ್ಟ ಸಂನ್ಯಾಸಿಗಳಲ್ಲಿಯಾದರೂ ಐಕ್ಯವಿದೆಯೆನ್ನಬೇಕೇ? ಪ್ರಯಾಗ, ನಾಸಿಕ, ಉಜ್ಜಯಿನಿ, ಹರಿದ್ವಾರಗಳಲ್ಲಿ ಆಗುವ ಕುಂಭ ಮೇಳಗಳಲ್ಲಿ ಇವರ ಭೇಧಗಳನ್ನು ಕಾಣಬೇಕು. ಅವರ ಆಸನ, ಮುಂಡನ, ಪಾದುಕೆಗಳಲ್ಲಿಯೂ ಭೇದವೇ ತುಂಬಿಹೋಗಿದೆ. ಬ್ರಹ್ಮದೇಶದಲ್ಲಿ ಒಮ್ಮೆ ಕಲಹವೆದ್ದಾಗ ಬ್ರಹ್ಮೀಯರೆಲ್ಲರೂ ಒಂದಾದರು. ಅಲ್ಲಿಗೆ ಹೋಗಿ ನೆಲಿಸಿ ಅಧಿಕಾರ-ಸಂಪತ್ತು ಜ್ಞಾನಗಳಲ್ಲಿ ಬಲಿಷ್ಠರಾದ ಹಿಂದುಗಳೆಲ್ಲರೂ ಒಂದು ಆಗಲಿಲ್ಲ. ಕಾಶ್ಮೀರದಲ್ಲಿ ೧೦೦ ಕ್ಕೆ ೬೫ ರಂತೆ ಮುಸಲ್ಮಾನರಿದ್ದರೂ ಹಿಂದುಗಳದೇ ಮುಂದು. ನೈಜಾಮು ರಾಜ್ಯದಲ್ಲಿ ೧೦೦ ಕ್ಕೆ ೧೫ ರಷ್ಟೇ ಮುಸಲ್ಮಾನರಿದ್ದರೂ ಅವರದೇ ಮೇಲುಗೈ. ಹೀಗೆ ಬಹುವಿಧವಾಗಿ ಕಾಣಲು ದುರ್ಬಲವಾದ ಮನೋವೃತ್ತಿಯೇ ಕಾರಣವಾಗಿದೆ. ನಮ್ಮ ಜನರು ಮೊದಲು ಮನಃಶುದ್ಧಿಯನ್ನು ಮಾಡಿಕೊಳ್ಳಬೇಕು. ಸ್ವಾವಲಂಬಿಗಳಾಗಬೇಕು.

ಮೂಲ ಶಿಕ್ಷಣಕ್ರಮದ ಸಮ್ಮೇಲನಗಳು

೧. **ಸುರತ**—ಕಳೆದ ಡಿಸೆಂಬರ ತಿಂಗಳಲ್ಲಿ ಮೂಲ ಶಿಕ್ಷಣದ ಯೋಜನೆಯ ಸಮಾಲೋಚನೆಗಾಗಿ ಸುರತದಲ್ಲಿ ಮುಂಬಯಿ ಇಲಾಖೆಯ ಶಿಕ್ಷಕರ ಮತ್ತು ಶಿಕ್ಷಣಾಧಿಕಾರಿಗಳ ಸಮ್ಮೇಲನವು ನೆರೆದಿತ್ತು. ನಮ್ಮ ದ.ಭಾಗದಿಂದಲೂ ಅದಕ್ಕೆ ಸಂಬಂಧಪಟ್ಟ ಅನೇಕ ಶಿಕ್ಷಕರೂ ಅಧಿಕಾರಿಗಳೂ ಅಲ್ಲಿಗೆ ಹೋಗಿದ್ದರು. ಈ ಸಮ್ಮೇಲನದ ಅಂಗವಾಗಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಕೈಕೆಲಸಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಈ ಪ್ರದರ್ಶನದ ಉದ್ಘಾಟನ ಸಮಯದಲ್ಲಿ ಮುಂಬಯಿ ಇಲಾಖೆಯ ಗವರ್ನರ ಸಾಹೇಬರವರ ಸಹಾಯಕ ಸಚಿವರಾದ ಮೆ|| ಟಾಂಟನ್‌ರವರು ನಮ್ಮ ದಕ್ಷಿಣಭಾಗದ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಕೆಲಸವನ್ನು ತುಂಬ ಮೇಲ್ತರಗತಿಯದೆಂದು ಪ್ರಶಂಸೆಮಾಡಿರುವರು.

೨. **ಧಾರವಾಡ**— ಕಳೆದ ಫೆಬ್ರುವರಿ ತಿಂಗಳ ೨೪-೨೫ ನೆಯ ತಾರೀಖುಗಳ ದಿನ ಧಾರವಾಡದ ಮೂಲ ಶಿಕ್ಷಣಕೇಂದ್ರದಲ್ಲಿ ಮೂಲ ಶಿಕ್ಷಣಕ್ರಮದ ಮೇಲ್ವಿಚಾರಣೆಯ ವಿಶೇಷ ಅಧಿಕಾರಿಗಳಾದ ಶ್ರೀ. ಎಲ್. ಆರ್. ದೇಸಾಯಿ ಅವರ ಅಧ್ಯಕ್ಷತೆಯಲ್ಲಿ ಧಾರವಾಡ ಜಿಲ್ಲೆಯ ಮೂಲ ಶಿಕ್ಷಣದ ಶಾಲೆಗಳ ಶಿಕ್ಷಕರ ಸಮ್ಮೇಲನವು ನೆರವೇರಿತು. ದ. ಭಾ.ದ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರೂ ಇನ್ನನೇಕ ವಿದ್ಯಾಧಿಕಾರಿಗಳೂ ಸ್ಥಾನಿಕ ಟ್ರೇನಿಂಗ್ ಸಂಸ್ಥೆಗಳ ಮುಖ್ಯಾಧಿಕಾರಿಗಳೂ ಈ ಸಮ್ಮೇಲನಕ್ಕೆ ಆಗಮಿಸಿದ್ದರು. ಇದೇ ಕಾಲಕ್ಕೆ ಶಿಕ್ಷಕರ ಮತ್ತು ವಿದ್ಯಾರ್ಥಿಗಳು ಮಾಡಿರಿಯ ಕೆಲಸಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಪ್ರಾರಂಭದಲ್ಲಿ ಈ ಭಾಗದಲ್ಲಿ ಮೂಲ ಶಿಕ್ಷಣಕ್ರಮದ ಅಭ್ಯಾಸ ಪತ್ರಿಕೆಯು ಹೇಗೆ ಕಾರ್ಯಕಾರಿಯಾಗಿರುವದೆಂಬದನ್ನು ಅಧ್ಯಕ್ಷರು ಹಿಂದುಸ್ತಾನಿಯಲ್ಲಿ ಹೃದಯಂಗಮವಾಗಿ ವಿವರಿಸಿದರು.

ಮೂಲ ಶಿಕ್ಷಣ ಕ್ರಮಕ್ಕೆ ಸಂಬಂಧಿಸಿದ ಹಲವು ಮಹತ್ವದ ಮಾತುಗಳನ್ನು ಚರ್ಚಿಸಲಾಯಿತು. ಮತ್ತು ಮೂಲ ಉದ್ಯೋಗದ ತಜ್ಞರಾದ ಶ್ರೀ. ನ್ಯಾಮತಿ ಅವರು 'ತುನಾಯಿ' ಪದ್ಧತಿಯ ಒಂದು ಪಾಠವನ್ನು ಕಲಿಸಿ ತೋರಿಸಿದರು. ಹಾಗು ಮೂಲ ಶಿಕ್ಷಣ ಕ್ರಮದ ಎರಡು ಮಾದರಿಯ ಪಾಠಗಳು ನಡೆದವು.

ಮೂಲ ಶಿಕ್ಷಣಕ್ರಮದ ಅಭ್ಯಾಸಪತ್ರಿಕೆಯನ್ನು ಪ್ರಚಾರದಲ್ಲಿ ತರುವ ಹಾಗು ಇದರಲ್ಲಿ ಆರಿಸಿಕೊಂಡಿರುವ ಮೂಲ ವ್ಯವಸಾಯಕ್ಕೂ ಇತರ ವಿಷಯಗಳಿಗೂ ಪರಸ್ಪರ ಸಂಬಂಧವನ್ನಿಟ್ಟುಕೊಂಡು ಹೇಗೆ ಪಾಠ ಸಾಗಿಸಬೇಕೆಂಬ ವಿಷಯವನ್ನು ಮೂಲ ಶಿಕ್ಷಣಕೇಂದ್ರದ ಚಾಲಕರಾದ ಶ್ರೀ. ಆರ್. ವಿ. ದೇಸಾಯಿಯವರು ತಮ್ಮ ಅನುಭವಪೂರ್ಣವಾದ ಸಮರ್ಪಕ ವಿವರಣೆಯಿಂದ ಚೆನ್ನಾಗಿ ವಿವೇಚಿಸಿದರು. ಶಿಕ್ಷಕರಲ್ಲಿ ಕೆಲವರು ಸಾಮಾನ್ಯ ಶಾಲೆಗಳ ವಿದ್ಯಾರ್ಥಿಗಳಿಗಿಂತಲೂ ಮೂಲ ಶಿಕ್ಷಣದಶಾಲೆಗಳ ವಿದ್ಯಾರ್ಥಿಗಳಲ್ಲಿ ಹೆಚ್ಚು ಆಸ್ಥೆ ಕುತೂಹಲ ವಿಚಕ್ಷಣ ಶಕ್ತಿಗಳು ಕಂಡುಬರುವವೆಂಬ ತಮ್ಮ ಅನುಭವಗಳನ್ನು ಪ್ರಕಟಿಸಿದರು.

ಹಳ್ಳಿಗಳ ಜನರ ಸಹಾಯ ಸಹಾನುಭೂತಿಗಳನ್ನು ಹೇಗೆ ದೊರಕಿಸಬೇಕೆಂಬ ವಿಷಯದಲ್ಲಿ ಧಾರವಾಡ ಜಿಲ್ಲೆಯ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾದ ಶ್ರೀ. ಜೆ. ಆರ್. ಭಂಡಿವಾಡ ಸಾಹೇಬರು ತುಂಬ ಮನೋವೇಧಕವಾಗಿ ಮಾತಾಡಿ ಹಳ್ಳಿಗಳ ಶಾಲೆಗಳ ಕಾರ್ಯವು ಶಿಕ್ಷಕರು, ಬಾಲಕರು, ಪಾಲಕರು ಎಂಬ ಸಾಧನತ್ರಯವನ್ನು ಅವಲಂಬಿಸಿರುವದರಿಂದ ಶಿಕ್ಷಕರು ಊರವರ ಸಹಕಾರವನ್ನು ಮುರೆಯಕೂಡದೆಂದು ಪ್ರತಿಪಾದಿಸಿದರು.

ಶಿಕ್ಷಕರು ಹಳ್ಳಿಯ ಹಿರಿಯರನ್ನು ಕಂಡು ಮಾತಾಡಿ ಸ್ಥಾನಿಕ ಮಳೆ ಬೆಳೆಗಳು, ಸದ್ಯದ ಪರಿಸ್ಥಿತಿ, ಅವರ ಆರ್ಥಿಕ ಸಮಸ್ಯೆ, ಮುಂತಾದ ವಿಷಯಗಳನ್ನು ಚರ್ಚಿಸುವದು, ಶಾಲೆಯಲ್ಲಿ ಆಗಾಗ ಹಳ್ಳಿಯ ಜನರಿಗೆ ವಿನೋದಕರವೆನಿಸುವ ಕಾರ್ಯಕ್ರಮಗಳನ್ನು ನಡೆಸುವದು, ಗ್ರಾಮಸುಧಾರಣೆಯ ಕಾರ್ಯದಲ್ಲಿ ಅವರಿಗೆ ನೆರವಾಗುವದು, ಎಲ್ಲ ಪ್ರಸಂಗ ವಿಶೇಷಗಳಲ್ಲಿ ಊರವರೊಡನೆ ಸಹಕರಿಸಿ ಕೆಲಸಮಾಡುವದು ಮುಂತಾದ ಉಪಾಯಗಳಿಂದ ಜನರ ಸಹಾಯ ಸಹಾನುಭೂತಿಗಳನ್ನು ಸಹಜವಾಗಿ ಪಡೆಯಬಹುದೆಂಬುದನ್ನು ಅಧ್ಯಕ್ಷರು ವಿವೇಚಿಸಿ ತಿಳಿದರು. ಬೇಸಿಕ್ ನುಪರವಾಯಿಝುರರಾದ ಶ್ರೀ. ತೇರಗಾಂವಕರರು ಈ ವಿಷಯದಲ್ಲಿ ಹಳ್ಳಿಗಳ ಜನರು ಮೊದಮೊದಲು ಹೇಗೆ ಉದಾಸೀನರಾಗಿದ್ದರೆಂಬುದನ್ನೂ ಇತ್ತೀಚೆಗೆ ಹೇಗೆ ಅವರು ಶಿಕ್ಷಕರ ಕೆಲಸದಲ್ಲಿ ನೆರವಾಗಹತ್ತಿರುವರೆಂಬುದನ್ನೂ ಪ್ಲೇಗು ಮುಂತಾದ ಸಾಂಕ್ರಾಮಿಕ ಬೇನೆಗಳು ಹೆಬ್ಬಿದ ಪ್ರಸಂಗದಲ್ಲಿ ಇಲ್ಲವೆ ಸಂತೆ ಜಾತ್ರೆ ಮುಂತಾದ ಸಾರ್ವಜನಿಕ ಕಾರ್ಯಗಳಲ್ಲಿ ಊರವರೊಡನೆ ಕೂಡಿ ಕೆಲಸಮಾಡುವದರಿಂದ ಶಿಕ್ಷಕರು ಅವರ ಪ್ರೀತ್ಯಾದರಗಳಿಗೆ ಪಾತ್ರರಾಗಿ ಊರವರು ಶಿಕ್ಷಣ ಕಾರ್ಯಕ್ಕೆ ಸಹಜವಾಗಿ ನೆರವಾಗುವರೆಂಬದನ್ನೂ ತಮ್ಮ ಪ್ರತ್ಯಕ್ಷ ಅನುಭವದ ಸಹಾಯದಿಂದ ವಿವರಿಸಿದರು. ಧಾರವಾಡ ಜಿಲ್ಹೆಯ ಡಿ. ಎ. ಇ. ರಾದ ಶ್ರೀ. ನಾಡಿಗೇರ ಸಾಹೇಬರು ಹಳ್ಳಿಯ ವಾಚನಾಲಯಗಳ ಸುಧಾರಣೆ ಮತ್ತು ಸಾಕ್ಷರತಾ ಪ್ರಸಾರ ಇವನ್ನು ಕುರಿತು ಸಮಯೋಚಿತವಾದ ನಾಲ್ಕು ಮಾತುಗಳನ್ನಾಡಿದರು.

ಕೊನೆಗೆ ಮೂಲ ಶಿಕ್ಷಣಕ್ರಮಕ್ಕೆ ಸಂಬಂಧಿಸಿದ ಕೆಲವು ವ್ಯಾವಹಾರಿಕ ಅಡಚಣೆಗಳ ನಿವಾರಣೋಪಾಯಗಳನ್ನು ಕುರಿತು ಚರ್ಚೆನಡೆಯಿತು.

ಅಧ್ಯಕ್ಷರಾದ ಶ್ರೀಮಾನ್ ಎಲ್. ಆರ್. ದೇಸಾಯಿಯವರು ತಮ್ಮ ಸಮಾರೋಪ ಭಾಷಣದಲ್ಲಿ, ಈ ಸಂದರ್ಭದಲ್ಲಿ ಪಾಠಗಳ ರಚನೆ, ಮೂಲ ಶಿಕ್ಷಣ ಕ್ರಮದಲ್ಲಿ ಹೊಸ ಹೊಸ ವಿಷಯಗಳನ್ನು ಸಮಾವೇಶಗೊಳಿಸುವದು, ಮುಂತಾದ ಮಾತುಗಳ ಬಗ್ಗೆ ಶಿಕ್ಷಕರು ತಮ್ಮ ಅನುಭವಗಳನ್ನು ಇನ್ನೂ ಹೆಚ್ಚಾಗಿ ಮುಂಡಿಸಬಹುದೆಂದು ನಿರೀಕ್ಷಿಸಿದ್ದೆವೆಂದೂ ಒಟ್ಟಿಗೆ ಈ ಸಮ್ಮೇಲನವು ಪರಸ್ಪರ ವಿಚಾರ ವಿನಿಮಯಮಾಡಲು ತುಂಬ ಅನುಕೂಲ ಮಾಡಿಕೊಟ್ಟಿತೆಂದೂ ಅಭಿಪ್ರಾಯಪಟ್ಟರು. ಮತ್ತು ಎಲ್ಲರ ಆಭಾರ ಮನ್ನಿಸಿದರು.

ದುಃಖವಾರ್ತೆ

ವೈ. ವಾ. ದೇಶಪಾಂಡೆ ಗೋವಿಂದರಾಯರು

ನಮ್ಮ ಪ್ರಾಥಮಿಕ ಶಿಕ್ಷಕವರ್ಗಕ್ಕೆ ತುಂಬ ಆದರ್ಶಪ್ರಾಯರಾಗಿದ್ದ ದೇಶಪಾಂಡೆಯವರು ಕಳೆದ ಶಿವರಾತ್ರಿಯ ದಿನ (ತಾ. ೧೦-೨-೪೫) ವೈಕುಂಠವಾಸಿಗಳಾದರೆಂದು ಬರೆಯಲು ಅತಿ ವಿಷಾದವಾಗುವದು. ಗೋವಿಂದರಾಯರು ಮೊದಲು ಎಲ್ಲರಂತೆ ಮೂರನೆಯ ವರ್ಷದ ಟ್ರೇಂಡರಾದ ಶಿಕ್ಷಕರು. ಬುದ್ಧಿಮತ್ತೆ, ಸಾಹಸ, ಕಾರ್ಯಾನುರಾಗ, ಇವುಗಳಿಂದ ಮನುಷ್ಯನು ಉತ್ಕರ್ಷವನ್ನು ಪಡೆಯುವದು ಸಾಧ್ಯವೆಂಬುವ ಮಾತಿಗೆ ಪ್ರತ್ಯಕ್ಷ ಉದಾಹರಣೆಯೆನಿಸುವಂತೆ ಕೇವಲ ತಮ್ಮ ಉದಾತ್ತಗುಣಗಳಿಂದಲೇ ಕೈಕೆಳಗಿನವರ ಮತ್ತು ಅಧಿಕಾರಿಗಳ ಪ್ರೀತಿಗೆ ಪಾತ್ರರಾಗಿ, ಟ್ರೇ. ಕಾ.ದ ಪ್ರಾ.ಸ್ಕೂಲಿನ ಮುಖ್ಯಾಧ್ಯಾಪಕರಾದರು. ಮುಂದೆ ಅಸಿ. ಡೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದರು. ಪ್ರಾ. ಶಿ. ರ ಪ್ರಗತಿಪಥದಲ್ಲಿ ಇದೇ ಕೊನೆಯ ಸೋಪಾನವಲ್ಲವೇ?

ಒಮ್ಮೆ ಕೈಕೊಂಡ ಕಾರ್ಯವನ್ನು ಏಕನಿಷ್ಠೆಯಿಂದ ನೇರವೇರಿಸುವದು, ಎಲ್ಲ ಜಾತಿಮತಗಳ ವಿದ್ಯಾರ್ಥಿಗಳನ್ನು ಸರಿಯಾಗಿ ಪ್ರೀತಿಸುವದು, ಊರವರೊಡನೆ ಪ್ರೀತಿ ವಿಶ್ವಾಸಗಳಿಂದ ನಡೆದು ಎಲ್ಲರ ಸಹಾಯ ಸಹಕಾರಗಳನ್ನು ದೊರಕಿಸುವದು. ಇವು ಶಿಕ್ಷಕರಲ್ಲಿರಬೇಕಾದ ಆವಶ್ಯಕ ಗುಣಗಳು. ದೇಶಪಾಂಡೆ ಗೋವಿಂದರಾಯರಲ್ಲಿ ಈ ಗುಣಗಳು

ಮೂರ್ತಿಮಂತವಾಗಿದ್ದವೆನ್ನಲು ಏನೂ ಪ್ರತ್ಯವಾಯವಿಲ್ಲ. ಬಂಕಾಪುರದ ಶಾಲೆಯಲ್ಲಿ ಇವರು ಮೊತ್ತಮೊದಲು ಕೆಲಸವನ್ನು ಆರಂಭಿಸಿದರು. ಅವರ ಶಾಲೆಯಲ್ಲಿ ನಡೆದಿರುವ ಮೇಲ್ತರಗತಿಯ ಶಿಕ್ಷಣ ಕ್ರಮವನ್ನು ನೋಡಿಕೊಂಡು ಹೋಗಿ ತಮ್ಮ ಶಾಲೆಯನ್ನು ಸುಧಾರಿಸಿಕೊಳ್ಳಬೇಕೆಂದು ದೂರದೂರದ ಶಿಕ್ಷಕರು ಅಲ್ಲಿಗೆ ಬರುತ್ತಿದ್ದರು. ಗೋವಿಂದ ರಾಯರನ್ನು ತಮ್ಮನ್ನು ಅನ್ನದ ದಾರಿಗೆ ಹಚ್ಚಿದ ಪುಣ್ಯಾತ್ಮರೆಂಬ ಪ್ರೀತ್ಯಭಿಮಾನಗಳಿಂದ ತಂಪು ಹೊತ್ತಿನಲ್ಲಿ ನೆನೆಯುತ್ತಿರುವ ಲಿಂಗಾಯತ ಮರಾಠಾ ಕುರುಬ ಮುಸಲ್ಮಾನ ಮುಂತಾದ ಬೇರೆ ಬೇರೆ ಜಾತಿಮತಗಳ ಅವರ ವಿದ್ಯಾರ್ಥಿಗಳು ಈಗಲೂ ಇರುವರೆಂದು ಹೇಳುವದುಂಟು. ಬಂಕಾಪುರದ ಸಂಸ್ಕೃತ ಪಾಠಶಾಲೆ, ಪುಸ್ತಕಾಲಯ ಮುಂತಾದ ಸಾರ್ವಜನಿಕ ಶಿಕ್ಷಣದ ಸಂಸ್ಥೆಗಳು ಈ ಮಹನೀಯರ ಪ್ರಯತ್ನದಿಂದಲೆ ಹುಟ್ಟಿ ಬೆಳೆದು ಬಾಳಿದುವಂತೆ. ಬಂಕಾಪುರದಲ್ಲಿ ಇವರು ಕೈಕೊಂಡ ಈ ಬಗೆಯ ಬಹುಮುಖವಾದ ಶೈಕ್ಷಣಿಕ ಕಾರ್ಯಕಲಾಪಗಳ ಪ್ರತಿಫಲವೆಂದು ಆಗಿನ ಅಧಿಕಾರಿಗಳು ಅವರನ್ನು ಪ್ರ್ಯಾಕ್ಟಿಸಿಂಗ್‌ಸ್ಕೂಲಿಗೆ ಮುಖ್ಯಾಧ್ಯಾಪಕರಾಗಿ ನಿಯಮಿಸಿದರು.

ಗೋವಿಂದರಾಯರು ಒಳ್ಳೆಯ ಕಾರ್ಯಕುಶಲರು. ಶಿಕ್ಷಕವೃತ್ತಿಯಲ್ಲಿ ಹೆಸರುವಾಸಿಯಾಗಿದ್ದಂತೆಯೇ ನುರಿತ ಬರೆಹಗಾರರೂ ಪರಿಶ್ರಮಮಾಡುವ ಪ್ರವೃತ್ತಿಯವರೂ ಆಗಿದ್ದರು. ಅವರು ಹಿಂದಣ ಕ್ರಮಿಕ ಪುಸ್ತಕಮಾಲೆಯೊಳಗಿನ ಎರಡನೆಯ ಪುಸ್ತಕವನ್ನು ಸರಕಾರದ ಪರವಾಗಿ ಬರೆದಿದ್ದರು. ಮೊನ್ನೆ ಮೊನ್ನೆ ೮೦ ವರ್ಷದ ವಾರ್ಧಕ್ಯದ ಕಾಲದಲ್ಲಿ ಬರೆದು ಪ್ರಕಟಿಸಿದ ಕಾರಡಗಿ ಮಹಾಲ ದೇಶಪಾಂಡೆಯರ ಇತಿಹಾಸವೆಂಬ ಗ್ರಂಥವು ಕರ್ನಾಟಕದಲ್ಲಿ ಸಂಶೋಧನ ಸಂಘಟನೆಗಳ ಕಾರ್ಯವನ್ನು ಕೈಕೊಳ್ಳುವ ತರುಣರಿಗೆ ಮಾರ್ಗದರ್ಶಕವಾಗಿರುವದು. ಶಾಲೆಯಲ್ಲಿ ಪ್ರತ್ಯಕ್ಷ ಕೆಲಸಮಾಡಿದ ಸ್ವಾನುಭವದಿಂದ ಬರೆದ ವಸ್ತುಪಾಠಗಳ ಶಿಕ್ಷಣಕ್ರಮವೆಂಬ ಪುಸ್ತಕವು ಆ ಕಾಲದ ಶಿಕ್ಷಕವರ್ಗಕ್ಕೆ ತುಂಬ ಪ್ರಯೋಜನಕಾರಿಯಾಗಿದ್ದಿತು.

ಗೋವಿಂದರಾಯರ ಹಿರಿಯ ಮಗ ವೈ. ವಾ. ಹನುಮಂತರಾಯರು ನಮ್ಮ ಶಿಕ್ಷಕವರ್ಗಕ್ಕೆ ಚಿರಪರಿಚಿತರು. ಇನ್ನೊಬ್ಬ ಮಗ ಶ್ರೀ. ರುಕ್ಮಾಂಗದರಾವ್ ದೇಶಪಾಂಡೆಯವರು ಮುಂಬಯಿಯಲ್ಲಿ ಇನ್‌ಕಮ್‌ಟ್ಯಾಕ್ಸ ಖಾತೆಯಲ್ಲಿ ಆಸಿ. ಕಮೀಶನರರ ಹುದ್ದೆಯಲ್ಲಿರುವರು ಇನ್ನೊಬ್ಬರು ಶ್ರೀ. ಭಗೀರಥರಾಯರು ರಾಯಚೂರಿನಲ್ಲಿ ಹೆಸರಾದ ಡಾಕ್ಟರರು. ನಾಲ್ಕನೆಯ ಮಗ ಶ್ರೀ. ಪ್ರಲ್ಹಾದರಾಯರು ಸವಣೂರಲ್ಲಿ ಒಳ್ಳೆಯ ವಕೀಲರು.

ಹೀಗೆ ಪ್ರಾಥಮಿಕ ಶಿಕ್ಷಕರಾಗಿ ಕೇವಲ ಪರಿಶ್ರಮ ಬುದ್ಧಿಮತ್ತೆಗಳ ಬಲದಿಂದ ಮೇಲಿನ ಮಟ್ಟವನ್ನು ಮುಟ್ಟಿ ತಮ್ಮ ಮಕ್ಕಳನ್ನು ಸುಶಿಕ್ಷಿತರೂ ಸುಸಂಸ್ಕೃತರೂ ಆಗುವಂತೆ ಮಾಡಿ ಸದ್ಗುಣಿಗಳೂ ದೀರ್ಘಾಯುಷಿಗಳೂ ಆಗಿ (ಮರಣಕಾಲಕ್ಕೆ ಇವರಿಗೆ ೮೪ ವರ್ಷಗಳಾಗಿದ್ದವು) ಬಾಳಿದ ಈ ಮಹನೀಯರು, ನಮ್ಮೆಲ್ಲರ ಅಭಿಮಾನಕ್ಕೆ ಕಾರಣರಾಗಿದ್ದವರು, ಇಂದು ನಮ್ಮನ್ನಗಲಿ ಹೋದರೆಂಬ ದುಃಖವಾರ್ತೆಯನ್ನು ಬರೆಯುವ ದುಃಖದ ಪ್ರಸಂಗವು ಕಾಲನ ಲೀಲೆಯಿಂದ ನಮ್ಮ ಪಾಲಿಗೆ ಬಂದಿತು. ವಿಷಾದ!

ಪರಮಾತ್ಮನು ಅವರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲಿ.

ಈ ಸಂದರ್ಭದಲ್ಲಿ ಗೋವಿಂದರಾಯರ ಚಿರಂಜೀವಿಗಳೂ ವಿದ್ಯಾರ್ಥಿಗಳೂ ಅಭಿಮಾನಿಗಳೂ ಸ್ಮಾರಕವೊಂದನ್ನು ಸ್ಥಾಪಿಸಿ ಅವರ ಹೆಸರು ಚಿರಸ್ಥಾಯಿಯಾಗುವಂತೆ ಮಾಡುವರೆಂದು ಆಶಿಸುತ್ತೇವೆ.

ಭೂಗೋಲ ಇತಿಹಾಸಗಳನ್ನು ಹೇಗೆ ಕಲಿಸಬೇಕು ?

ನಮ್ಮ ಬಾಲಕ ಬಾಲಿಕೆಯರ ಅಭ್ಯಾಸ ಪತ್ರಿಕೆಯಲ್ಲಿ ಭೂಗೋಲ ಇತಿಹಾಸಗಳು ಯಾಕೆ ಸೇರ್ಪಡೆಯಾಗಿವೆ ? ಅವುಗಳ ವ್ಯಾವಹಾರಿಕ ಉಪಯುಕ್ತತೆಯೇನು ? ಎಂದು ಕೇಳುವವರೂ ಇದ್ದಾರೆ. ಓದು ಬರೆಹ ಗಣಿತ ಇವು ಮಾನವನ ದಿನದ ಜೀವನಕ್ರಮದಲ್ಲಿ ಒಂದಿಲ್ಲೊಂದು ಬಗೆಯಿಂದ ಉಪಯೋಗವಾಗುವಂತೆ ಭೂಗೋಲ ಇತಿಹಾಸಗಳ ಅಭ್ಯಾಸವು ಯಾವ ಬಗೆಯಾಗಿ ನಮ್ಮ ಜೀವನಕ್ರಮಕ್ಕೆ ನೆರವಾಗುವದು? ವ್ಯಾವಹಾರಿಕಉಪಯುಕ್ತತೆಯನ್ನುಳಿದ ಇನ್ನಾವುದಾದರೂ ಪ್ರಯೋಜನವು ಈ ವಿಷಯಗಳ ಅಭ್ಯಾಸದಲ್ಲಿ ಅಡಕವಾಗಿರುವದೋ ? ಎಂಬುದೇ ಅವರ ಪ್ರಶ್ನೆ. ಈ ಪ್ರಶ್ನೆಗಳಿಗೆ ತಕ್ಕ ಉತ್ತರಕೊಟ್ಟು ಅಶಿಕ್ಷಿತರಾದ ಪಾಲಕರನ್ನು ಸಮಾಧಾನ ಪಡಿಸುವದು ಅಷ್ಟೇನೂ ಸುಲಭವಲ್ಲ. ವ್ಯವಹಾರೋಪಯುಕ್ತತೆಯು ಶಿಕ್ಷಣದ ಗುರಿಯೆಂಬುದೇನೋ ನಿಜ. ಆದರೆ ಎಷ್ಟೋ ವಿಷಯಗಳಲ್ಲಿ ಆ ವ್ಯವಹಾರೋಪಯುಕ್ತತೆಯು ಪ್ರತ್ಯಕ್ಷವಾಗಿ ತೋರದಿರುವ ಮಾತ್ರಕ್ಕೆ ಅವು ನಿಷ್ಪ್ರಯೋಜಕಗಳೆಂದಾಗಲಿ ಅವುಗಳ ಅಭ್ಯಾಸವು ನಮ್ಮ ಬಾಲ-ಬಾಲಿಕೆಯರ ಮೇಲೆ ಅನ್ಯಾಯವಾಗಿ ಹೇರುವ ಭಾರವೆಂದಾಗಲಿ ಯಾರೂ ಭಾವಿಸಕೂಡದು. ಮನಸ್ಸಿನ ವಿಕಾಸ ಸಂಸ್ಕಾರಗಳು ಶಿಕ್ಷಣದಿಂದಾಗುವ ಹೆಚ್ಚಿನ ಪ್ರಯೋಜನಗಳು. ವ್ಯವಹಾರೋಪಯುಕ್ತತೆಯು ಗಾಣಿಗನಿಗೆ ಎಳ್ಳುಕೊಟ್ಟು ಎಣ್ಣೆಯನ್ನು ಕೊಳ್ಳುವಂಥ ತಾತ್ಕಾಲಿಕ ಪ್ರಯೋಜನವು. ಆದರೆ ಮಾನಸಿಕ ವಿಕಾಸ ಸಂಸ್ಕಾರಗಳು ಚಿರಕಾಲಬಾಳುವಂಥವು. ಇಂತಹ ಚಿರಕಾಲ ಬಾಳುವ ಒಳ್ಳೆಯ ಸಂಸ್ಕಾರವನ್ನು ಬಾಲಕ-ಬಾಲಿಕೆಯರ ಮನಸ್ಸಿನಲ್ಲಿ ಒಡಮೂಡಿಸುವದೇ ಈ ವಿಷಯಗಳ ಅಭ್ಯಾಸದ ಪ್ರಯೋಜನವು. ಇವು ಸಾಂಸ್ಕೃತಿಕ ವಿಷಯಗಳು. ಇವನ್ನು ಸಾಂಸ್ಕೃತಿಕ ದೃಷ್ಟಿಯನ್ನಿಟ್ಟುಕೊಂಡೇ ಕಲಿಸಬೇಕು ಎಂಬದೇ ಈ ಎಲ್ಲ ವಿವರಣೆಯ ತಾತ್ಪರ್ಯವು.

ಭೂಗೋಲ— ಭೂಗೋಲ ಶಿಕ್ಷಣದಿಂದ ಮಕ್ಕಳ ಮನಸ್ಸಿನಮೇಲೆ ಒಳ್ಳೆಯ ಸಂಸ್ಕಾರವಾಗಬೇಕಾದರೆ ಈ ಕೆಳಗಿನ ಮುದ್ದೆಯ ಮಾತುಗಳನ್ನು ಶಿಕ್ಷಕರು ಯಾವಾಗಲೂ ಲಕ್ಷ್ಯದಲ್ಲಿಟ್ಟಿರಬೇಕು. ೧. ಪ್ರತ್ಯಕ್ಷದಿಂದ ಅಪ್ರತ್ಯಕ್ಷಕ್ಕೆ ಸಾಗಬೇಕು. ಮಕ್ಕಳ ಈ ವಿಷಯದ ಶಿಕ್ಷಣವು ತಾವಿರುವ ಮನೆ, ಮನೆಯ ಮುಂದಿನ ತೋಟ, ಓಣಿ, ಸಾಲೆ, ಸಾಲೆಯು ಆವರಣ, ಊರು, ಊರಸುತ್ತಣ ಹೊಲಗಳು, ಹಗಲು-ರಾತ್ರಿಗಳು, ಸೂರ್ಯ-ಚಂದ್ರರು, ಗ್ರಹ-ನಕ್ಷತ್ರಗಳು, ಮೇಳೆ, ದಿಕ್ಕುಗಳು, ಅವನ್ನು ತಿಳಿದುಕೊಳ್ಳುವ ಸಾಧನಗಳು, ಮಳೆ ಮೋಡ ಗಾಳಿ ಮುಂತಾದ ಪ್ರಕೃತಿ ವಿಶೇಷಗಳು, ಇವುಗಳ ಪ್ರತ್ಯಕ್ಷ ನಿರೀಕ್ಷಣೆಯಿಂದ ಪ್ರಾರಂಭವಾಗಬೇಕು. ಸರಿಯಾಗಿ ನಿರೀಕ್ಷಿಸುವದಕ್ಕೂ ನಿರೀಕ್ಷಿಸಿದ ಸಂಗತಿಗಳನ್ನು ವ್ಯವಸ್ಥೆಗೊಳಿಸುವದಕ್ಕೂ ಶಿಕ್ಷಕನು ನೆರವಾಗಬೇಕು; ಇಷ್ಟೇ ಶಿಕ್ಷಕನು ಮಾಡಬೇಕಾದ ಕೆಲಸ.

೨. ನಕಾಶೆಯ ವಾಚನ ರಚನೆ ಇವು ಭೂಗೋಲ ಶಿಕ್ಷಣದ ಎರಡನೆಯ ಮೆಟ್ಟಿನಲ್ಲಿ ಆರಂಭವಾಗಬೇಕು. ಇದರಿಂದ ದೊಡ್ಡದನ್ನು ಸಣ್ಣದರಲ್ಲಿ ಆಕಲನ ಮಾಡುವದಕ್ಕೂ ಸಣ್ಣದನ್ನು ವಿಸ್ತರಿಸಿ ತಿಳಿದುಕೊಳ್ಳುವದಕ್ಕೂ ರೂಢಿಯಾಗುವದು. ಸ್ಕೇಲು, ಸ್ಥಾನ (ದಿಕ್ಕು) ಚಿಹ್ನಗಳು ಇವು ಈಭಾಗದಲ್ಲಿರುವ ಮೂಲಭೂತಕಲ್ಪನೆಗಳು. ಇವು ಎಷ್ಟು ಸ್ಪಷ್ಟವಾಗಿ ಮಕ್ಕಳ ಮನಸ್ಸಿನಲ್ಲಿ ಬಿಂಬಿಸುವವೋ ಅಷ್ಟು ಸ್ಪಷ್ಟವಾದ ವಿಷಯಜ್ಞಾನಕ್ಕೆ ಸಹಾಯವಾಗುವದು.

೩. ಮಕ್ಕಳು ತಾವು ನಿರೀಕ್ಷಿಸಿದ ಸಂಗತಿಗಳನ್ನು ಮಾದರಿಗಳನ್ನು ರಚಿಸಿ ಪ್ರತಿರೂಪಿಸುವ ರೂಢಿ ಮಾಡುವದು ಮೂರನೆಯ ಮೆಟ್ಟು. ಬಾಲಕರ ಕೃತಿ ಪ್ರೀತಿ ಆಟದಲ್ಲಿ ಅಭಿರುಚಿ ಈ ಮನೋವೃತ್ತಿಗಳು ಈ ಕಾರ್ಯಕ್ಕೆ ತುಂಬ ನೆರವಾಗುವವು. ನಾಲ್ಕು ಜನರು ಕೂಡಿ ಕೆಲಸಮಾಡುವ ಮತ್ತು ಪರಸ್ಪರ ನೆರವಾಗುವ ಮನೋವೃತ್ತಿಯನ್ನು ವಿಕಾಸಗೊಳಿಸುವದಕ್ಕೂ ಸಹ ಈ ಮೆಟ್ಟಿನಲ್ಲಿ ತುಂಬ ಅವಕಾಶವಿರುವದು.

೪. ಮನುಷ್ಯನ ಜೀವನಕ್ಕೂ ಭೂಗೋಲದ ವಿಷಯಗಳಿಗೂ ಇರುವ ಸಂಬಂಧವನ್ನು ಅರಿತುಕೊಳ್ಳುವದಕ್ಕೂ ಕಾರ್ಯಕಾರಣವಿವೇಚನೆಗೂ ಈಗಲೇ ಆರಂಭವಾಗಬೇಕು. ಬಾಲಕರು ಇರುವ ಹಳ್ಳಿಯಲ್ಲಿ ಹುಟ್ಟುವ ಜೀನಸುಗಳು ಯಾವವು? ಅವರ ದಿನದ ಬಳಕೆಯಲ್ಲಿರುವ ವಸ್ತುಗಳು ಯಾವವು? ಹಳ್ಳಿಯಲ್ಲಿ ಹುಟ್ಟದಿರುವ ಹೆಚ್ಚಿನ ವಸ್ತುಗಳು ಎಲ್ಲಿಂದ ಬರುವವು? ಎಂಬ ಪ್ರಶ್ನೆಯು ಈ ಭಾಗದಲ್ಲಿ ಮೊದಲನೆಯದು. ಋತುಮಾನಕ್ಕನುಸರಿಸಿ ಹಳ್ಳಿಯ ಜನರ ಜೀವನಕ್ರಮದಲ್ಲಿ ಆಗುವ ಬದಲಾವಣೆಯ ನಿರೀಕ್ಷಣೆಯು ಎರಡನೆಯದು. ಸಂತೆ, ಜಾತ್ರೆಗಳು, ಮಾರ್ಗಗಳು, ವಾಹನಗಳು, ಮುಂತಾದವುಗಳ ಸಂಬಂಧವು ಮೂರನೆಯದು. ಹಳ್ಳಿಗಳಲ್ಲಿ ಇರುವ ಇಲ್ಲವೆ ಸಮೀಪದ ಪಟ್ಟಣಕ್ಕೆ ಹೋದಾಗ ನೋಡುವ ಬೇರೆ ಬೇರೆ ಉಡುಗೆ ತೊಡುಗೆ ನಡಾವಳಿಗಳಿರುವ ಜನರ ನಿರೀಕ್ಷಣೆಯು ನಾಲ್ಕನೆಯದು. ಹೀಗೆ ಜನಜೀವನಕ್ಕೂ ಭೂಗೋಲಕ್ಕೆ ಸಂಬಂಧಿಸಿದ ವಿಷಯಗಳಿಗೂ ಇರುವ ಸಂಬಂಧವನ್ನು ನಿರೀಕ್ಷಿಸಿ ತಿಳಿದು ಕೊಂಡಾಗ ಮನುಷ್ಯನ ಜೀವನಕ್ರಮವು ಭೂಗೋಲಕ್ಕೆ ಸಂಬಂಧಿಸಿದ ಪ್ರಾಕೃತಿಕವಿಷಯಗಳ ಮೇಲೆ ಹೆಚ್ಚಾಗಿ ಅವಲಂಬಿಸಿರುವದೆಂಬ ಮಾತು ಮಕ್ಕಳ ಮನಸ್ಸಿಗೆ ಹೊಳೆಯುವದು. ಭೂಗೋಲಶಿಕ್ಷಣದಲ್ಲಿ ಈ ಮಾತಿಗೆ ಹೆಚ್ಚು ಮಹತ್ವವಿದೆ.

೫. ಜಗತ್ತಿನ ಕಲ್ಪನೆಯನ್ನು ತಂದುಕೊಳ್ಳುವದು ಭೂಗೋಲದ ಶಿಕ್ಷಣದಲ್ಲೊಂದು ಮಹತ್ವದ ಮಾತು. ನಕಾಶೆ ಮಾಡೆಲ್ಲುಗಳ ಸ್ಪಷ್ಟ ಕಲ್ಪನೆಯಾದ ತರುವಾಯ ಗ್ಲೋಬಿನ ಸಹಾಯದಿಂದ ಇಡಿಯ ಪೃಥ್ವಿಯ ಕಲ್ಪನೆಯನ್ನು ಆಕಲನೆಮಾಡುವದಕ್ಕೆ ಮಕ್ಕಳ ಮನಸ್ಸನ್ನು ತಯಾರಿಸಬೇಕಾಗುವದು. ಇಲ್ಲಿ ಹಳ್ಳಿಯಿಂದ ತಾಲೂಕು, ತಾಲೂಕಿನಿಂದ ಜಿಲ್ಲೆ. ಪ್ರಾಂತ, ದೇಶ, ಖಂಡ, ಈ ಕ್ರಮದಿಂದ ಸಾಗಬೇಕೆಂಬ ಹಳೆಯ ಕಲ್ಪನೆ ಹೋಗಿ ಒಮ್ಮೆಲೆ ಜಗತ್ತಿಗೆ ಸಾಗುವದು ಕೆಲವರಿಗೆ ಅಕ್ರಮವೆನಿಸುವ ಸಂಭವವುಂಟು. ಆದರೆ ಇದರಲ್ಲಿಯೂ ಒಂದು ಮಾನಸ ಶಾಸ್ತ್ರದ ತತ್ತ್ವವಿದೆ. ಬಾಲಕರು ಮೊದಲು ಇಡಿಯದನ್ನು ನೋಡುವರು. ಮುಂದೆ ಅದರ ಒಂದೊಂದೇ ಭಾಗಗಳನ್ನು ನೋಡುವರು. ಭಾಗದಿಂದ ಇಡಿಯದಕ್ಕೆ ಹೋಗುವದು ಮಕ್ಕಳ ಮನಸ್ಸಿನ ಸ್ವಾಭಾವಿಕವಾದ ಒಲವಲ್ಲ. ಆದುದರಿಂದ ಭೂಗೋಲದ ಶಿಕ್ಷಣದಲ್ಲಿಯೂ ಕೂಡ ಜಗತ್ತು ಖಂಡಗಳು ಪ್ರದೇಶಗಳು ಈ ಕ್ರಮವನ್ನು ಅನುಸರಿಸಬೇಕು. ರಾಜಕೀಯ ಭೂಗೋಲದ ಮಾತು ಕೊನೆಯದು.

ಇತಿಹಾಸ— ವ್ಯವಹಾರೋಪಯುಕ್ತತೆಯ ದೃಷ್ಟಿಯಿಂದ ನೋಡಿದರೆ ಇತಿಹಾಸವು ಭೂಗೋಲಕ್ಕಿಂತ ಕಡಿಮೆ ತರಗತಿಗೆ ಇಳಿಯುವದು. ಆದರೆ ಸಾಂಸ್ಕೃತಿಕ ದೃಷ್ಟಿಯಿಂದ ಇದಕ್ಕೆ ಹೆಚ್ಚು ಮಹತ್ತ್ವವಿದೆ. ನಾವು ಇಂದಿನ ಈ ಅವಸ್ಥೆಗೆ ಹೇಗೆ ಬಂದೆವು? ಯಾವ ದಾರಿಯಿಂದ ಸಾಗಿ ಬಂದೆವು? ದಾರಿಯು ಸರಿಯಾದದ್ದೋ ತಪ್ಪಾದದ್ದೋ? ತಪ್ಪಾಗಿದ್ದರೆ ಅದು ಎಲ್ಲಿ ಹೇಗೆ ಆಯಿತು? ಎಂಬ ಕಲ್ಪನೆಗಳನ್ನು ಒಡಮೂಡಿಸುವದು ಇತಿಹಾಸದ ಧ್ಯೇಯ. ಹಿಂದಿನ ದಾರಿಯು ತಪ್ಪಾದುದೆಂದು ಕಂಡು ಬಂದರೆ ಅದನ್ನು ತಿದ್ದಿಕೊಳ್ಳುವ ಉಪಾಯಗಳನ್ನು ಕಂಡುಹಿಡಿದು ಆಚರಣೆಯಲ್ಲಿ ತರುವದು ಆ ಇತಿಹಾಸದ ಅಭ್ಯಾಸದಿಂದಾಗಬೇಕಾದ ಪರಿಣಾಮ. ಈ ದೃಷ್ಟಿಯಿಂದ ನಾವು ನಮ್ಮ ದೇಶದ ಇತಿಹಾಸವನ್ನು ಕಲಿಸಬೇಕಾಗುವದು. * ಭಾರತ ದೇಶವನ್ನು ಪ್ರೀತಿಸುವವನೇ ಭಾರತದ ಇತಿಹಾಸವನ್ನು ಬರೆಯಬಲ್ಲನು; ಭಾರತ ದೇಶವನ್ನು ಪ್ರೀತಿಸುವವನೇ ಭಾರತದ ಇತಿಹಾಸವನ್ನು ಕಲಿಸಬಲ್ಲನು. ಎಂಬ

* Only the lover of India can write the history of India.
Only the lover of India can teach the history of India.

ಒಂದೇ ಮಾತಿನಿಂದ ನಾವು ನಮ್ಮ ವಿದ್ಯಾರ್ಥಿಗಳಿಗೆ ಯಾವ ಗುರಿಯನ್ನಿಟ್ಟುಕೊಂಡು ನಮ್ಮ ದೇಶದ ಇತಿಹಾಸದ ಪಾಠಗಳನ್ನು ಆರಿಸಬೇಕು, ಆ ಪಾಠಗಳನ್ನು ಕಲಿಸಬೇಕು ಎಂಬುದನ್ನು ಊಹಿಸಬಹುದು. ಇದರಲ್ಲಿ ಮೇಲಿನ ತರಗತಿಗಳಿಗೆ ಇತಿಹಾಸವನ್ನು ಹೇಗೆ ಕಲಿಸಬೇಕೆಂಬ ವಿಚಾರವನ್ನೆಲ್ಲ ಸಂಗ್ರಹಿಸಿ ಹೇಳಿದಂತಾಯಿತು. ಇನ್ನು ಕೆಳಗಿನ ತರಗತಿಗಳಲ್ಲಿ ಇತಿಹಾಸದ ಪಾಠಗಳನ್ನು ಹೇಗೆ ಕಲಿಸಬೇಕೆಂಬದನ್ನು ನೋಡೋಣ.

ಬಾಲಕರಿಗೆ ಭೂಗೋಲವನ್ನು ಪ್ರತ್ಯಕ್ಷ ನೀರೀಕ್ಷಣೆಯ ಮೂಲಕ ಕಲಿಸಬೇಕೆಂದೂ ಪ್ರತ್ಯಕ್ಷದಿಂದ ಅಪ್ರತ್ಯಕ್ಷಕ್ಕೆ ಹೋಗಬೇಕೆಂದೂ ಮೇಲೆ ಹೇಳಿದೆ. ಆದರೆ ಇತಿಹಾಸದಲ್ಲಿ ಈ ಬಗೆಯ ಪ್ರತ್ಯಕ್ಷೀಕರಣಕ್ಕೆ ಸಾಧ್ಯವಿಲ್ಲ. ಆದರೂ ಇಲ್ಲಿ ಬಾಲಕರ ಮನಸ್ಸಿನ ಇನ್ನೊಂದು ಒಲವು ನಮಗೆ ತುಂಬ ಸಹಾಯಕಾರಿಯಾಗಿದೆ. ಚಿಕ್ಕಮಕ್ಕಳು ಕಥೆಯನ್ನು ಕುತೂಹಲದಿಂದ ಕೇಳುವರೆಂಬದು ಜನಜನಿತವಾದ ಮಾತು. ಇತಿಹಾಸ ಶಿಕ್ಷಣಕ್ಕೆ ಪ್ರಾರಂಭದಲ್ಲಿ ನಾವು ಇದನ್ನೇ ಆಧಾರವಾಗಿಟ್ಟುಕೊಳ್ಳಬೇಕು.

ಜಗತ್ತಿನ ಉತ್ಪತ್ತಿ, ಪ್ರಾಣಿಗಳು ಮನುಷ್ಯರು ಇವರ ಹುಟ್ಟುವಿಕೆ, ಮಾನವ ಕುಲದ ಬೆಳವಣಿಗೆ ವಿಕಾಸಗಳು, ಮುಂತಾದ ವಿಷಯಗಳ ಅದ್ಭುತ ರಮ್ಯ ಕಥೆಗಳನ್ನು ಚಿಕ್ಕ ಬಾಲಕರು ತುಂಬ ಕುತೂಹಲದಿಂದ ಕೇಳುವರು. ಇವು ಕೇವಲ ಕಾಲ್ಪನಿಕ ಸಂಗತಿಗಳಲ್ಲ ; ಪ್ರತ್ಯಕ್ಷ ನಡೆದು ಬಂದುವು, ಎಂಬುದನ್ನು ಮಕ್ಕಳ ಮನಸ್ಸಿನಲ್ಲಿ ಬಿಂಬಿಸುವದಕ್ಕೆ ಮಾತ್ರ ಶಿಕ್ಷಕನು ಎಂದೂ ಮರೆಯಕೂಡದು.

ಇದಕ್ಕೆ ಮುಂದಿನ ಮೆಟ್ಟಿನಲ್ಲಿ ನಾವು ನಮ್ಮ ಪುರಾಣಗಳನ್ನು ಅವಲಂಬಿಸಬೇಕು. ವೇದೋಪನಿಷತ್ತುಗಳು ರಾಮಾಯಣ ಮಹಾಭಾರತಗಳು ಮುಂತಾದ ನಮ್ಮ ರಾಷ್ಟ್ರೀಯ ಸಾಹಿತ್ಯದೊಳಗಿನ ಕಥೆಗಳನ್ನು ಆಯ್ದುಕೊಂಡು ಅವನ್ನು ಯೋಗ್ಯವಾದ ಕ್ರಮದಲ್ಲಿ ಕಲಿಸಬೇಕು. ಇಂತಹ ಐತಿಹಾಸಿಕ ಕಥೆಗಳನ್ನು ಕಲಿಸುವಾಗ ನಾವು ಕೆಲವು ಸಾಮಾನ್ಯ ನಿಯಮಗಳನ್ನು ಲಕ್ಷ್ಯದಲ್ಲಿಡಬೇಕಾಗುವದು.

(೧) ನಾವು ಕಥೆಯನ್ನು ಹೇಳುವಾಗ ಮಕ್ಕಳ ಮನಸ್ಸಿನಲ್ಲಿ ನಮ್ಮ ಶಬ್ದ ಚಿತ್ರಗಳು ಎಷ್ಟು ಸುಸ್ಪಷ್ಟವಾಗಿ ಬಿಂಬಿಸುವವೆಂಬುದನ್ನು ನೋಡುತ್ತಿರಬೇಕು.

(೨) ಕಥೆಯ ಪರಿಣಾಮವು ಅದರಲ್ಲಿ ಬಂದಿರುವ ಒಳ್ಳೆಯದನ್ನು ಆಕರ್ಷಿಸಿ ಕೆಟ್ಟದ್ದನ್ನು ದೂರಿಡುವ ಕಾರ್ಯವನ್ನು ಮಾಡಿತೋ ಇಲ್ಲವೋ ಎಂಬುದನ್ನು ನೋಡುವದಕ್ಕೆ ಮರೆಯಕೂಡದು. ಆದರೆ ಪ್ರತ್ಯಕ್ಷವಾಗಿ ನೀತಿ ಪ್ರತಿಪಾದನೆಗೆ ನಿಲ್ಲಕೂಡದು.

(೩) ತಾವು ಕೇಳಿದ ಕಥೆಯನ್ನು ಬಾಲಕರು ಎಷ್ಟರ ಮಟ್ಟಿಗೆ ತಿರುಗಿ ಸ್ವಭಾಷೆಯಲ್ಲಿ ಹೇಳುವದಕ್ಕೆ ಸಮರ್ಥರಾಗುವರೆಂಬುದನ್ನು ನೋಡುವದು ಮತ್ತೊಂದು ಮಹತ್ವದ ಮಾತು.

(೪) ಚಿಕ್ಕ ಮಕ್ಕಳ ಲೀಲ ಸಂಘಟನೆಯು ಈ ಮೆಟ್ಟಿನಲ್ಲಿ ಸಾಧಿಸಬೇಕಾದ ಒಂದು ಅತಿ ಮಹತ್ವದ ಸಂಗತಿ. ಇದೂ ಕೂಡ ಅಪ್ರತ್ಯಕ್ಷವಾಗಿಯೇ ನಡೆಯಬೇಕು.

(೫) ಮಾತೃ ಭೂಮಿಯ ಪ್ರೇಮದ ಬೀಜಾಂಕುರಗಳನ್ನು ಮಕ್ಕಳ ಮನೋಭೂಮಿಯಲ್ಲಿ ಬಿತ್ತಿ ಬೆಳೆಯಿಸುವದು ಒಳ್ಳೆಯ ಇತಿಹಾಸ ಶಿಕ್ಷಕನ ವೈಶಿಷ್ಟ್ಯವು.

ಮೇಲಿನ ಇಯತ್ತೆಗಳ ಇತಿಹಾಸವನ್ನು ಕಲಿಸುವಾಗ ಹಲವು ಐತಿಹಾಸಿಕ ಘಟನೆಗಳಿಗೂ ತಮ್ಮ ಸ್ಥಾನಿಕ ಭೂಗೋಲಕ್ಕೂ ಸಂಬಂಧವಿರುವದೆಂಬುದನ್ನು ಕಾರ್ಯಕಾರಣ ವಿವೇಚನೆಯೊಂದಿಗೆ ತಿಳಿಸಬೇಕು. ಇಂತಹ ಕಾರ್ಯಕಾರಣ ವಿವೇಚನೆಯು ಬಾಲಕರ ಬುದ್ಧಿ ವಿಕಾಸಕ್ಕೂ ಮನೋರಂಜನೆಗೂ ಸಂಸ್ಕಾರಕ್ಕೂ ಕಾರಣವಾಗುವದು.

ಸಾಹಿತ್ಯಸ್ತೋತ್ರ*

ಸತ್ಯಂ ! ಶಿವಂ ! ಸುಂದರಂ !

ಇದೀಗ ಪರಮಾತ್ಮನ ವರ್ಣನೆಯ ಸೂತ್ರ. ಸಾಹಿತ್ಯಸರಸ್ವತೀದೇವಿಯ ವರ್ಣನೆಗೂ ಇದೇ ಸೂತ್ರವು ಅನ್ವಯಿಸುವುದೆಂದು ಬಲ್ಲವರು ಹೇಳುವುದುಂಟು.

ಸತ್ಯದ ಭಿತ್ತಿಯಲ್ಲಿ ಭಾವಾಸೌಂದರ್ಯದ ಪ್ರಕ್ರಿಯೆ ರೂಪರೇಷೆಗಳಿಂದ ಚಿತ್ರಿತವಾದ ರಮಣಿಯ ರಮಣೀಯವಾದ ಪ್ರತಿರೂಪದಂತಿರುವುದು ಸಾಹಿತ್ಯ–ಕಾವ್ಯ–ಕವಿಯ ನುಡಿ–ಹಾಡು–ಪಲ್ಲವಿ– ಎಲ್ಲವೂ. ಅದು ಶಿವಸ್ವರೂಪದ ಜೀವಕಳೆದುಂಬಿರಬೇಕು. ಇದು ತಾನೆ ಮೇಲಣ 'ಸತ್ಯಂ ಶಿವಂ ಸುಂದರಂ' ಸೂತ್ರಕ್ಕೆ ವೃತ್ತಿ. ಈ ಸೂತ್ರ ಈ ವೃತ್ತಿ ಇವನ್ನೇ ಜೆನ್ನಾಗಿ ವ್ಯಾಖ್ಯಾನಮಾಡಿ ತಿಳಿದುಕೊಳ್ಳಲು ಯತ್ನಿಸೋಣ. ಅಯ್ಯೋ, ಇದೇನು ಬಂತು ಕಷ್ಟ! ಮತ್ತೆ ಆ ಸೂತ್ರ! ಆ ವೃತ್ತಿವ್ಯಾಖ್ಯಾನಗಳು! ಆ ಉಪನಿಷತ್ತು, ಆ ವೇದಾಂತ, ತರ್ಕ, ವ್ಯಾಕರಣ ಎಲ್ಲವೂ ಗಾಳಿಗುದ್ದಿ ಮೈ ನೋಯಿಸಿಕೊಂಡಹಾಗೆ! ಎಂದು ಬೇಸರಗೊಳ್ಳದಿರಿ. ಕ್ಷಮಿಸಿರಿ.

ಹಳೆಯ ಸಂಸ್ಕೃತಿಯೊಳಗೆ ಬಳೆದಿಹ |
ಹಳೆಯ ಕಾವ್ಯವನೋದಿ ತಿಳಿದಿಹ |
ಹಳಬನಂತಃಕರಣದಲ್ಲುದಯಿಸಿದ ಸರಣಿಯಿದು ||

ಸತ್ಯದ ಭಿತ್ತಿಯಲ್ಲಿ ಚಿತ್ರಿತವಾದ ಕಾವ್ಯರಮಣಿಯ ರಮಣೀಯವಾದ ಪ್ರತಿರೂಪಕ್ಕೆ ಶಿವಸ್ವರೂಪದ ಜೀವಕಳೆದುಂಬಿದಾಗ ಅದು ವಾಣೀದೇವಿಯ ಮೂರ್ತಸ್ವರೂಪವೆನಿಸುವುದು. ಆ ದೇವಿಯ ಕೈಯೊಳಗಿನ ವೀಣೆಯ ತಾನ ತಾಳಗಳೊಡನೆ ಹೊರಹೊಮ್ಮುವ ಸ್ವರಲಹರಿಯು ನಮ್ಮ ಹೃದಯಾಂತರಾಳದಲ್ಲಿ ತರಂಗತರಂಗವಾಗಿ ಆಡಿ ಪಾಡಿ ನಲಿದು ನರ್ತನವಾಡಿ ಮೆರೆಯತೊಡಗುವುದು; ನಮ್ಮ ಮೈಮರೆಸುವುದು; ಇಂದ್ರಿಯಗಳನ್ನು ಮುಗ್ಧಗೊಳಿಸುವುದು; ಆವುದೋ ಒಂದು ಅಜ್ಞಾತವಾದ ಅಗಮ್ಯವಾದ ಬೆಳಕುಬೀರಿ, ಆ ದಿವ್ಯತೇಜಸ್ಸಿನ ಆನಂದೋದಧಿಯಲ್ಲಿ ನಮ್ಮನ್ನು ತೇಲಿಸುವುದು. ಆ ಆನಂದವೇ ನಿತ್ಯಾನಂದ! ಸತ್ಯಾನಂದ! ಪರಮಾನಂದ! ಬ್ರಹ್ಮಾನಂದ! 'ಆನಂದೋ ಬ್ರಹ್ಮೇತಿವ್ಯಾಜಾನಾತ್' ಎಂದು ನಮ್ಮ ಉಪನಿಷದ್ಋಷಿಗಳು ಹಾಡಿದ ಆನಂದವೂ ಈ ಆನಂದವೂ ಒಂದೇ! ಅದೇ ನಮಗೆ ಮುಕ್ತಿ. ಹಾಗೆ ಹಾಡಿದ ಕವಿಗಳೂ ಮುಕ್ತರು. ಸತ್ತು ಬದುಕಿದವರೆಂದರೆ ಅವರೇ.

ಇಲ್ಲಿಗೆ ಒಳ್ಳೆಯ ಸಾಹಿತ್ಯದ, ಸತ್ಕಾವ್ಯದ, ಲಕ್ಷಣಗಳೆಲ್ಲವನ್ನೂ ಹೇಳಿದಂತಾಯಿತೆಂದು ಭಾವಿಸಬಹುದು. ಆನಂದವೇ ಕಾವ್ಯದ ಗುರಿ. ಆ ಆನಂದಕ್ಕೆ ಕಾವ್ಯದ ರಮಣೀಯತೆಯೇ ಮುಖ್ಯ ಕಾರಣ. ಅರ್ಥಾತ್, ಕಾವ್ಯಕ್ಕೆ ಸಚ್ಚಿದಾನಂದದಾಯಕವಾದ ರಮಣೀಯತೆಯುಂಟಾಗಬೇಕಾದರೆ ಸುಂದರವಾದ ಶರೀರವಿರಬೇಕು; ಶಿವಸ್ವರೂಪದ ಜೀವಕಳೆಯಿರಬೇಕು; ಅದು ಸತ್ಯದ ಹೊಲಬುಗಂಡಿರಬೇಕು. ಇದನ್ನೇ ಇನ್ನೊಂದು ಮಾತಿನಲ್ಲಿ ಹೀಗೆ ಹೇಳಬಹುದು: ಕಾವ್ಯವು ತ್ರಿಕಾಲಾಬಾಧಿತವಾದ ಸತ್ಯವನ್ನೋ ಆ ಸತ್ಯದ ಧ್ವನಿಯನ್ನೋ ಒಳಗೊಂಡಿರಬೇಕು; ಅದನ್ನು ಸುಂದರವಾದ ಸುಲಲಿತವಾದ ವಾಗ್ವೈಖರಿಯಿಂದ ವರ್ಣಿಸಿ

* ಹಿಂದೊಮ್ಮೆ ಸಾಹಿತ್ಯ ಸಮ್ಮೇಲನದಲ್ಲಿ ಓದಿದ ಪ್ರಬಂಧವಿದು.

ಓದಿ ಕೇಳುವವರ ಮನಸ್ಸನ್ನು ತೂಗಿ ತಣಿಸಿ ಆನಂದಗೊಳಿಸುತ್ತಿರಬೇಕು; ಈ ಸಂದರ್ಭದಲ್ಲಿ ಮಾನವಜಾತಿಯ ಕಲ್ಯಾಣವು ತಿಳಿದೋ ತಿಳಿಯದೆಯೋ ಒಡೆದುಮೂಡಿರಬೇಕು. ಆಗಲಾ ಕಾವ್ಯವು 'ಸತ್ಯಂ! ಶಿವಂ! ಸುಂದರಂ!' ಎನಿಸುವ ಸಾಹಿತ್ಯದ ಮಣಿಮಾಲೆಯಲ್ಲಿ ಸೇರಲು ತಕ್ಕುದಾದ ರತ್ನವಾಗುವುದು.

ಸತ್ಯವು ಕಾವ್ಯಮಂದಿರಕ್ಕೆ ಭದ್ರವಾದ ಅಸ್ತಿವಾರ; ಕಾವ್ಯದೇವಿಯ ಪ್ರತಿಮಾ ರಚನೆಯ ಸಾಧನಸಾಮಗ್ರಿ; ಕಾವ್ಯಸರಸ್ವತಿಯ ಪ್ರತಿರೂಪ ಲೇಖನಕ್ಕೆ ತಕ್ಕ ಭಿತ್ತಿ, ಎಂದು ಹೇಳಿದೆನಲ್ಲಪೆ? ಅದು ಹೇಗೆ? ನೋಡೋಣ. ಪ್ರಕೃತಿಯಲ್ಲಿ ಅಗಮ್ಯವಾದ ಆನಂದವನ್ನು ಒಡಮೂಡಿಸುವ ಸತ್ಯಶಕ್ತಿಯು ಅಡಕವಾಗಿದೆಯೆಂಬುದು ಎಲ್ಲರೂ ಒಪ್ಪಿದ ಮಾತು. ಆದುದರಿಂದಲೇ ಪ್ರಕೃತಿಯನ್ನು ನೋಡಿದಾಗ ಆನಂದವಾಗುವುದು. ನಮ್ಮ ಪ್ರಪಂಚದ ದಿನದ ಅನುಭವಗಳು ಇನ್ನೊಂದು ಬಗೆಯ ಸತ್ಯಗಳು. ಮಾನವಬುದ್ಧಿಗಮ್ಯವಾದ ಕಲ್ಪನಾಸೃಷ್ಟಿಯೊಳಗಿನ ಸತ್ಯಗಳು ಬೇರೊಂದು ಬಗೆಯವು. ಅತ ಏನ, ನಮ್ಮ ಮುಂದಿರುವ ಪ್ರಕೃತಿ, ನಮ್ಮ ಪ್ರಪಂಚದ ಅನುಭವ ಮತ್ತು ನಮ್ಮ ಬುದ್ಧಿಗಮ್ಯವಾದ ಕಲ್ಪನೆ, ಇವುಗಳಿಗೆ ಸಂಬಂಧಿಸಿದ ಸತ್ಯಗಳನ್ನು ಕವಿವಾಣಿಯು ವರ್ಣಿಸಿದರೆ ಅವನ್ನು ಓದಿ ಕೇಳಿದರೆ ನಮಗೆ ಆನಂದವಾಗುವದು. ಇವು ಮೂರು ಐಹಿಕ ವಿಚಾರಗಳು. ಅಂತೆಯೇ ದೇವರು ಧರ್ಮ, ನೀತಿ, ಇವು ಮೂರು ಪಾರಮಾರ್ಥಿಕ ಸತ್ಯಗಳು

ಇಲ್ಲಿ ಇನ್ನೊಂದು ಮಾತು. ಪ್ರಕೃತಿ, ಅನುಭವ, ಕಲ್ಪನೆ, ಇವನ್ನೇ ಆಗಲಿ ದೇವರು ಧರ್ಮ, ನೀತಿ, ಇವನ್ನೇ ಆಗಲಿ ನಾವು ಸಾಮಾನ್ಯರು ನೋಡುವ ದೃಷ್ಟಿಯೇ ಬೇರೆ; ಪ್ರತಿಭಾ ಶಾಲಿಗಳಾದ ಕವಿ-ಪರಮೇಷ್ಠಿಗಳು ಭಾವಿಸುವ ಬಗೆಯೇ ಬೇರೆ. ಸಾಮಾನ್ಯರಿಗೆ ಭಗವಂತನ ಭವ್ಯವಾದ ಕೃತಿಗಳಲ್ಲಿ ಎಂದರೆ ಅದ್ಭುತ ಸೃಷ್ಟಿ-ಸೌಂದರ್ಯಗಳಲ್ಲಿ ಆತನ ಮಹಿಮೆಯು ಗೋಚರವಾಗುವಂತೆಯೇ ಶಕ್ತಿ-ಶಾಲಿಗಳಾದ ಕವಿಪುಂಗವರು ತೀರ ಸಾಮಾನ್ಯವಾದೊಂದು ಮಾತಿನಲ್ಲಿಯೂ ಕೂಡ ಆತನ ಅದ್ಭುತ ಸಾಮರ್ಥ್ಯ ಜಾಣ್ಮೆಗಳನ್ನು ಕಂಡುಕೊಳ್ಳುವರು. ತಾವು ಕಂಡುದನ್ನು ಅಷ್ಟೇ ರಮ್ಯವಾಗಿ ಪರರಿಗೆ ಕಾಣಿಸುವರು. ಮಾದರಿಗಾಗಿ ಈ ಕೆಳಗಣ ಕವಿ ರವೀಂದ್ರರ ಒಂದು ಚಿಕ್ಕ ಕವಿತೆಯನ್ನು ನೋಡಿರಿ:

ಅರಳಿದೊಳ್ಮಲ್ಲಿಗೆಯಸುಮದೊಡ |
ನಿರಲು ಬಯಸಿದ ಮಳೆಯಹನಿಯೊಂ |
ದೆರಗಿ ಪೇಳಿತು ಸುಮನ! ನೀನೆನಗೀವುದಾಶ್ರಯವ! ||
ಕರೆವುದೋ ಕಣ್ಣೀರನೆಂದೆನ |
ಲರರೆ ಭೂಮಿಗೆ ಬಿದ್ದುದಾಕ್ಷಣ |
ವರಳಿದಾಮಲ್ಲಿಗೆಯ ಕುಸುಮವು ಮಳೆಯ ಹನಿಯೊಡನೆ ||

ಇದರಲ್ಲಿ ಎಂತಹ ಮನೋಹರವಾದ ವರ್ಣನೆಯಿದೆ! ಎಂತಹ ಚೇತೋಹಾರಿಯಾದ ನೀತಿಯಿದೆ! ಎಷ್ಟು ಗಾಂಭೀರ್ಯ ಗುರುತ್ವಗಳಿವೆ! ಪ್ರತಿಭಾ ಸಂಪನ್ನನಾದ ಕವೀಶ್ವರನು ಸಾಮಾನ್ಯರು ಗೆರಸೊಪ್ಪೆಯ ತಡಸಲಿನಂಥ ಅದ್ಭುತ ಪ್ರಕೃತಿ ಸೌಂದರ್ಯದಲ್ಲಿ ಕಾಣ-ಬಹುದಾದ ಈಶ್ವರೀ ಚೈತನ್ಯವನ್ನು ಒಂದು ಮಳೆಯ ಹನಿಯೊಡನೆ ಉದಿರುವ ಚಿಕ್ಕ ಮಲ್ಲಿಗೆಯ ಕುಸುಮದಲ್ಲಿಯೇ ಕಾಣಬಲ್ಲನೆಂಬುದು ಇದರಿಂದ ಸಿದ್ಧವಾಗುವುದಿಲ್ಲವೇ? ಇದು ಕವಿಗಳು ಕಾಣುವ ಪ್ರಕೃತಿ ಸತ್ಯದ ನೆಲೆ.

ಇನ್ನು ಅವರು ನೋಡುವ ಪ್ರಪಂಚದ ಅನುಭವದ ಮಾದರಿಯನ್ನು ನೋಡಿರಿ. ಕೃಷ್ಣಜ್ಯೇಷ್ಠನಾದ ಬಲರಾಮನು ಅನುಜನ ಅವತಾರಸಮಾಪ್ತಿಯ ಸವಾಚಾರವನ್ನು ಕೇಳಿದಾಗ ಆಡಿದನೆಂದು ಹೇಳುವ ಕವಿವಾಣಿಯಿದು:—

ಸರಸತಿ, ನಿನ್ನ ಭಾಗ್ಯ ಮರೆಯಾದುದೆ ಹಾ! ನಿನತೋಲೆವಾಗ್ಯವೋ– |
ಸರಿಸಿದುದೇ ಧರಿತ್ರಿ, ಸಿರಿ, ನಿನ್ನಯ ಮೈ ಸೂರೆವೋಯ್ತೆ, ಮೆಯ್– |
ಗರೆದುದೆ ವೀರಲಕ್ಷ್ಮಿ ನಿನತ್ಯೈದೆತನಂ– ಬಿದಿ ಮೇರೆದಪ್ಪಿ ನಿ– |
ಷ್ಕರುಣದೆ ನಿಮ್ಮ ಬಾಳ್ಮೊದಲನಕ್ಕಟ! ವಂಚಿಸಿಕೊಂಡು ಪೋದನೇ ?

ಇಲ್ಲಿ ತಮ್ಮನ ವಿಯೋಗದಿಂದ ಬೆಂದು ಬೆಂಡಾದ ಅಣ್ಣನ ಹೃದಯದಿಂದ ಉಕ್ಕಿದುವೆಂದು ಹೇಳುವ–ಆತನ ದುಃಖಾನುಭವವನ್ನು ನಮ್ಮ ಮುಂದಿಡುವ—ಪ್ರಪಂಚಾನುಭವವನು ವರ್ಣಿಸುವ–ಕವಿವಚನಗಳಿವು. ಈ ಕವಿವಾಣಿಯನ್ನು ಓದಿದಾಗ ಕೇಳಿದಾಗ ನಮ್ಮಲ್ಲಿ ಉಂಟಾಗುವ ಭಾವನೆಯನ್ನು ನಮ್ಮ ಅನುಭವಕ್ಕೆ ನಿಲುಕುವಂತಹ ಬಲರಾಮನ ಆಗಿನ್ನ ಮನೋಭಾವಗಳೊಡನೆ ಹೋಲಿಸಿ ನೋಡಿಕೊಂಡರೆ ಆಗ ನಮಗೆ ಕವಿಶಕ್ತಿಯ ಮಹತಿಯ ಅರಿವು ಆಗದಿರದು. ಇದೇ ಕಾವ್ಯ ಸತ್ಯ. ಸಾಹಿತ್ಯ ಸತ್ಯ.

ಸಾಹಿತ್ಯದ ಕಲ್ಪನಾಸತ್ಯದ ನಿಷಯವಾಗಿ ನಮ್ಮ ಪೂರ್ವದ ಕವಿಗಳು ಎಷ್ಟು ಧೀರೋದಾತ್ತರಾಗಿರುವರೆಂಬುದನ್ನು ತೋರಿಸುವ ಇನ್ನೊಂದು ಕವಿತೆಯನ್ನು ಇಲ್ಲಿ ಬರೆಯುವೆನು. ಶರಶಯ್ಯೆಯಲ್ಲಿ ಮಲಗಿದ ಭೀಷ್ಮಾಚಾರ್ಯರ ಭೀಷಣವೀರ್ಯದ ವರ್ಣನೆಯಿದು. ನಮ್ಮ ಆದಿಕವಿ ಸರಸತಿಯವರ-ಪುತ್ರ ಪಂಪದೇವನ ಧೀರೋದಾತ್ತ ಹೃದಯದಿಂದ ಹೊರಹೊಮ್ಮಿದ ವೀರಸಿದ್ಧಾಂತದ ಶಾಸನದ ಕಲ್ಪನೆಯಿದು !

ತಿಂತಿಣಿಯಾಗಿ ನೆಟ್ಟ ಕಣೆಯೊಳ್ ನೆಲಮುಟ್ಟದೆ ಮೆಯ್ಯೊಳತ್ತಮಿ–|
ತ್ತಂತೆರೆದಿರ್ದ ಪುಣ್ಗಳೆಸೆವಕ್ಕರದಂತಿರೆ ನೋಡಿಕಲ್ಲಿಮೆಂ |
ಬಂತಿವೊಲಿರ್ದ ನಟ್ಟವಣೆಗೋಲ್ಗಳ ಮೇಲೆಸೆದಿರ್ದ ವೀರಸಿ– |
ದ್ಧಾಂತದ ಶಾಸನಂ ಬರೆದ ಪೊತ್ತಗೆಯಂತಮರಾಪಗಾತ್ಮಜಂ |
(೧೧–೪೬)

ಕಾವ್ಯ ಸತ್ಯದ ಸೆಲೆನೆಲೆಗಳನ್ನು ಕಾಣುವುದೂ ಕಾಣಿಸುವುದೂ ಆ ಪರಮಾತ್ಮನ, ಆ ವಾಣೀದೇವಿಯ ಪ್ರಸಾದವನ್ನು ಪಡೆದ ಪ್ರಾಸಾದಿಕ ಕವಿಗಳಿಗೇ ಸಾಧ್ಯವೆಂಬುದನ್ನು ಹಿಂದಣ ಕವಿಶ್ರೇಷ್ಠರ ಮಾತೊಂದರಲ್ಲಿ ನಿರೂಪಿಸಿ ಮುಂದೆಸಾಗುವೆವು.

ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ; ವಾಮನಕ್ರಮಂ |
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ; ಹರನಂ ನರನಿಕ್ಕಿಗಂಟಲಂ |
ಮೆಟ್ಟುಗೆ ಮೆಟ್ಟದಿರ್ಕೆ; ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್ |
ಮುಟ್ಟಿದರಿಕ್ಕಿ ಮೆಟ್ಟಿದರಿದೇನಳವಗ್ಗಳಮೋ ಕವೀಂದ್ರರಾ ||

ನಾವು ಕಾವ್ಯದೇವಿಯ, ಸಾಹಿತ್ಯ ಸರಸ್ವತಿಯ, ಪ್ರತಿರೂಪವನ್ನು ಬರಿಗಣ್ಣಿನಿಂದ ಕಾಣಲಾರೆವು. ಚರ್ಮಚಕ್ಷುಸ್ಸಿಗೆ ಗೋಚರವಾಗದ ಆ ರೂಪರಾಶಿಯನ್ನು ನಾವು ಜ್ಞಾನ ಚಕ್ಷುಸ್ಸಿನಿಂದ ತಿಳಿದುಕೊಳ್ಳುವೆವು. ಪದಪ್ರಯೋಗಾದಿಗಳು ಅದಕ್ಕೆ ಸಾಧನಗಳು. ಕವಿಯು ಶಬ್ದ ಚಿತ್ರಗಳಿಂದ ಪ್ರತಿರೂಪಿಸಿದ ಕಾವ್ಯದೇವಿಯ ಚಿತ್ರವು ನಮ್ಮ ಮನೋಭಿತ್ತಿಯಲ್ಲಿ ಮತ್ತೆ ಮೂಡಬೇಕಾಗುವದು. ಎಂದರೆ ಕಾವ್ಯವನ್ನು ಓದಿದಾಗ ಇಲ್ಲವೆ ಕೇಳಿದಾಗ

ನಮ್ಮ ಮನಃಪಟದಲ್ಲಿ ಈ ಚಿತ್ರವು ಎಷ್ಟು ಸ್ಪಷ್ಟವಾಗಿ ಮೂಡುವದೋ ಅಷ್ಟು ಹೆಚ್ಚು ಆನಂದವಾಗುವದು. ಇಲ್ಲಿಯೇ ಕವಿಯ ಜಾಣ್ಮೆಯ ನೆಲೆ ಹತ್ತುವುದು.

ಸಾಹಿತ್ಯ ಸೌಂದರ್ಯ— ಕವಿಗೆ ತನ್ನ ಅನುಭವವನ್ನು, ತಾನು ಕಂಡ ಸತ್ಯವನ್ನು, ಪರರ ಹೃದಯಕ್ಕೆ ನೇರವಾಗಿ ಮುಟ್ಟಿಸುವದಕ್ಕೆ ಪದಪ್ರಯೋಗಾದಿಗಳೇ ಸಾಧನಗಳು. ಮಾನವನ ಮನಸ್ಸೆಂಬ ಮೀನದ ಬೇಟೆಗೆ ಹೊರಟ ಕವಿ ಜಾಲಗಾರನು ತನ್ನ ಜಾತಿಗೆ ಸಹಜವಾದ ವಿಶಿಷ್ಟ ಕ್ರಮದಿಂದ ತನ್ನ ಶಬ್ದಜಾಲವನ್ನು ರಚಿಸುತ್ತಿರುವನು. ಪ್ರಪಂಚದ ಬೇರೆ ಬೇರೆ ಭಾಷೆಗಳಿಗೆ ಬೇರೆ ಬೇರೆ ರೀತಿ ನೀತಿಗಳಿವೆ. ಎಂದರೆ ಇಂಗ್ಲಿಷು ಭಾಷೆಯ ಶಬ್ದಗಳೂ ಕನ್ನಡದ ನುಡಿಗಳೂ ಬೇರೆ ಬೇರೆ ಇರುವಂತೆಯೇ ಇಂಗ್ಲಿಷಿನವರ ಕಾವ್ಯರಚನಾ ಕ್ರಮವೂ ಕನ್ನಡದ ಕಾವ್ಯಗಳ ಶೈಲಿ ಸರಣಿಗಳೂ ಒಂದರಿಂದೊಂದು ಭಿನ್ನವಾಗಿರುವವೆಂದು ಹೇಳಿದಂತಾಯಿತು. ನಮ್ಮ ಪೂರ್ವದ ಕವಿಗಳು ಒಂದು ವಿಶಿಷ್ಟವಾದ ದಾರಿಯಲ್ಲಿ, ತಮ್ಮ ಲೋಕರೂಢವಾದ ಹೆದ್ದಾರಿಯಲ್ಲಿ, ಸಾಗಿರುವರು. ನಮ್ಮ ಕವಿಗಳು ಸಾಗಿದ ಆ ರೀತಿ ಆ ನಿಯಮಗಳು ನಮ್ಮ ಸಾಹಿತ್ಯಶಾಸ್ತ್ರ, ಕಾವ್ಯಧರ್ಮಗಳು, ವ್ಯಾಕರಣ–ಛಂದಸ್ಸುಗಳು, ಅಲಂಕಾರ–ಭಾಷಾಸಂಪ್ರದಾಯಗಳು, ಇವು ಕಾವ್ಯದೇವಿಯ ಪ್ರತಿರೂಪನಿರೂಪಣೆಯ ರೂಪರೇಷಾ ಕ್ರಮಗಳು ಮಾತ್ರ.

ಇರುಮರುಳೆ ಶುಷ್ಕ ವೈಯಾ | ಕರಣಿಂಗಂ ಶುಷ್ಕತಾರ್ಕಿಕಂಗಂ ಬೆಳ್ಳ-|
ಕ್ಕರಿಗಂಗಂ ವಿಷಯಮೆ ಕಾ | ವ್ಯರತ್ನಮಾಲೆ ಚತುರಕವಿ ಕದಂಬಕ ವಿಷಯಂ ||

ಆದುದರಿಂದ ಈ ರೂಪರೇಷಾವಿನ್ಯಾಸಕ್ರಮವು ಆ ದೇವಿಯ ರೂಪ ಲಾವಣ್ಯಗಳನ್ನು ಒಡಮೂಡಿಸುವ ಬೆಳಕು ಛಾಯೆಗಳಲ್ಲ; ವಿವಿಧ ಬಣ್ಣಗಳ ಹೊಳಪು ಒನಪುಗಳಲ್ಲ. ಅವನ್ನು ನಿಜವಾದ ಕಾವ್ಯಕಲಾವಿದರೆ ಬಲ್ಲರು. ಸಹೃದಯರಾದ ಪಾಠಕ ಉಪಾಸಕರೇ ತಿಳಿವರು. ಬಾಹ್ಯಸ್ವರೂಪದ ಅಲಂಕಾರ, ವ್ಯಾಕರಣ, ಛಂದಸ್ಸು, ಮನೋವೇಧಕವಾದ ಧ್ವನಿ ಮೊದಲಾದವುಗಳನ್ನು ವಿವರಿಸಲು ಒಂದು ಸ್ವತಂತ್ರವಾದ ಶಾಸ್ತ್ರ–ವಿಭಾಗವೇ ಇರುವುದರಿಂದ ಅವನ್ನು ಕುರಿತು ಇಲ್ಲಿ ಹೆಚ್ಚಾಗಿ ಹೇಳುವ ಕಾರಣವಿಲ್ಲ.

ಸಾಹಿತ್ಯದ ಜೀವಕಳೆ— ಶಿವಸ್ವರೂಪ, ಸತ್ಯದ ಭಿತ್ತಿ, ಸುಂದರವಾದ ಪ್ರತಿರೂಪ ನಿರೂಪಣೆ, ಇವಾದ ಒಳಿಕ ಉಳಿದುದು ಶಿವಸ್ವರೂಪದ ಜೀವಕಳೆ. ಕಾವ್ಯವು ಸಚ್ಚಿದಾನಂದದಾಯಕವಾಗಬೇಕಾದರೆ, ಅದನ್ನು ತಿಳಿಯುವದರಿಂದ, ಅದರ ಜ್ಞಾನದಿಂದ, ಮಾನವ ಹೃದಯವು ವಿಕಾಸಗೊಳ್ಳಬೇಕು; ಅದು ಉನ್ನತ ಸ್ಥಿತಿಗೆ ಏರಬೇಕು. ಕ್ಷಣಿಕವಾದ ಆನಂದವು ಮಳೆಗಾಲದ ಮಿಂಚಿನಂತಿರುವುದು. ಮಿಂಚು ಹೊಳೆದ ಪರಕ್ಷಣದಲ್ಲಿಯೇ ಕತ್ತಲೆಯು ಹೆಚ್ಚುವಂತೆ ಕ್ಷುದ್ರ ಕಾವ್ಯಗಳ ವಾಚನದಿಂದ ಮಾನವ ಹೃದಯಕ್ಕೆ ಹೊಳೆದ ಬೆಳಕು ಮರುಕ್ಷಣದಲ್ಲಿ ಮಾಯವಾಗಿ ಗಾಢವಾದ ತಿಮಿರಕ್ಕೆ ಕಾರಣವಾಗಬಹುದು. ಆದರೆ ಮಹಾಕಾವ್ಯದ ಗುರಿ ಬೇರೆ. ಮಹಾಕಾವ್ಯಕ್ಕೆ ಒಂದು ಉನ್ನತವಾದ ಗುರಿಯಿರುವುದು. ಮಾನವ ಹೃದಯದ ವಿಕಾಸಕ್ಕೆ ಆವಶ್ಯಕವೆನಿಸುವ ರೀತಿ-ನೀತಿಗಳನ್ನು ವೈದಿಕ ಋಷಿಗಳು 'ಇದಮಿತ್ಥಂ' ಎಂದು ನಮಗೆ ಪ್ರಭುಸಮ್ಮಿತವಾಗಿ ಆಜ್ಞಾಪಿಸಿದರು. ಪುರಾಣ ಪುರುಷರು 'ರಾಮಾದಿವದಾಚರಿತವ್ಯಂ ನತುರಾವಣಾದಿವತ್' ಎಂದು ಮಿತ್ರಸಮ್ಮಿತವಾಗಿ ಉಪದೇಶಗೈದರು. ಅಂತೆಯೇ ಕರ್ತವ್ಯಾಕರ್ತವ್ಯಗಳಲ್ಲಿ ಪ್ರವೃತ್ತಿ ನಿವೃತ್ತ್ಯುಪದೇಶಗಳನ್ನು ಸರಸವಾಗಿ ಕಾಂತಾಸಮ್ಮಿತತೆಯಿಂದ ಸೂಚಿಸುವುದರ ಮೂಲಕ ಮಾನವ ಜಾತಿಯ ಹಿತ ಸೂಚನೆಯು

ಕಾವ್ಯಗಳಿಂದಾಗಬೇಕೆಂಬುದು ನಮ್ಮವರ ಭಾವನೆ. ಪ್ರತಾಪರುದ್ರೀಯವೆಂಬ ಲಕ್ಷಣ ಗ್ರಂಥದಲ್ಲಿ —

ಯದ್ವೇದಾತ್ಪ್ರಭುಸಮ್ಮಿತಾದಧಿಗತಂ ಶಬ್ದಪ್ರಧಾನಾಚ್ಚಿರಂ |
ಯಚ್ಚಾರ್ಥಪ್ರವಣಾತ್ಪುರಾಣವಚನಾದಿಷ್ಟಂ ಸುಹೃತ್‌ಸಮ್ಮಿತಾತ್ |
ಕಾಂತಾಸಮ್ಮಿತತಯಾ ಯಯಾ ಸರಸತಾಮಾಪಾದ್ಯ ಕಾವ್ಯಶ್ರಿಯಾ |
ಕರ್ತವ್ಯೇ ಕುತುಕೀ ಬುಧೋವಿರಚಿತಸ್ತಸ್ಮೈಸ್ಪೃಹಾಂಕುರ್ಮಹೇ |

ಎಂದು ಹೇಳಿದೆ. ನಮ್ಮ ಕನ್ನಡದ ಕವಿಗಳು ಕೂಡ ಈ ಮಾತಿಗೆ ಹೊರತಿಲ್ಲ.

"ಪಾಪಮಿದು ಪುಣ್ಯಮಿದು ಹಿತ | ರೂಪಮಿದಹಿತ ಪ್ರಕಾರಮಿದು ಸುಖಮಿದುದುಃ- ||
ಖೋಪಾತ್ತಮಿದೆಂದರಿಪುವು | ಮಾಪರನು ಕವಿಪ್ರಧಾನರಾ ಕಾವ್ಯಂಗಳ್ "

ಎಂದು ನಮ್ಮ ಕವಿರಾಜ ಮಾರ್ಗದಲ್ಲಿ ಸತ್ಕಾವ್ಯದ ಲಕ್ಷಣಗಳನ್ನು ಹೇಳಿದೆ.

ಸಮಗ್ರ ಕಾವ್ಯದಲ್ಲಿ ಶಿವಸ್ವರೂಪದ ಜೀವಕಳೆಯಿರುವದು ಅವಶ್ಯಕವೆನಿಸುವಂತೆಯೇ ಅದರ ಒಂದೊಂದು ಅಂಗಾಂಗಗಳಲ್ಲಿಯೂ ಅದರ ಪ್ರತಿಚಲನೆಯಲ್ಲಿಯೂ ಪ್ರತ್ಯಕ್ಷ-ವಾಗಿಯೋ ಅಪ್ರತ್ಯಕ್ಷವಾಗಿಯೋ ಮಾನವ ಹೃದಯವನ್ನು ಚೇತರಿಸಿ ಚೋದಿಸಿ ಸುವಿಚಾರ ಮಾರ್ಗದತ್ತ ಆಕರ್ಷಿಸುವುದು ಉತ್ತಮವರ್ಗದ ಕವಿಗಳ ಗುಟ್ಟು. ಇಂತಹ ಕೆಲವು ಉದಾಹರಣೆಗಳನ್ನು ನೋಡೋಣ.

ಉರೆಕಾಯ್ಪು ಬಿಸಿಲೊಳೆಮ್ಮಂ | ಮರೆದುಂ ಕೊರಗಿಸದೆ ಪೊರೆದುದೆಂದೊಲವಿಂ ಬಂ–||
ದೆರಗುವವೋಲ್ ತೆನೆಯಿಂ ಕಾ | ಲ್ಗೆರಗುವ ಕಳಪೆಗಳವೆಲ್ಲಿಯುಂ ಸೊಗಯಿಸುಗುಂ ||

—ಅಂಡಯ್ಯ

.....ಪುತ್ರಮೋಹದಿಂ ತನ್ನ ನೋವಂ ನೋಡಬೆ—
ಸಲಹಿದೀ ಭೂದೇವಿಗಂ ನಮಿಸಿ ಭಕ್ತಿಯಿಂ.....
ನಲಿದುಬಾಗಿದುವೊ ಪೇಳೆಂಬಿನಂ .....
.....ಕೊರಳ್ವಾಗಿ ಶಾಲಿಗಳ್ ಕರಮೆಸೆದುವು— —ವಿರೂಪಾಕ್ಷಪಂಡಿತ

ಕುದ್ದಾಲನತಿಯನುರೆ ತಾಳ್ದಿಮ್ಮನಿನ್ನೆಗಂ |
ಮುದ್ದುಗೈದೀವಸುಧೆ ಬಳೆಯಿಸಿದಳೆಂದು ತುರು—
ಗಿದ್ದ ತನಿವಣ್ಗಳಿಂದೆಸೆವ ಪೆರ್ಗೊನೆಗಳಂ ಸಲೆಸಮರ್ಚಿಸಲೊಡರ್ಚಿ ||
ಎದ್ದಿರದೆ ಬಾಗಿದುವೊ ಕದಳಿಗಳ್ಕರಣಿಗೆನ
ಲಿದ್ದಪರೆ ಮುರೆದು ಪುರುಷಾರ್ಥಮಂ ಮಾಡಿದರ
ನುದ್ದಾಮಗುಣಮುಳ್ಳಜೀವಿಗಳ್..... — ಲಕ್ಷ್ಮೀಶ

ಬತ್ತದ ಪೈರು ಮಾಗಿ ಬಂದಾಗ ಬಾಗಿರುವುದೂ ಬಾಳೆಯ ಗೊನೆಯು ಭೂಮಿಯತ್ತ ಅಧೋಮುಖವಾಗಿರುವುದೂ ಸೃಷ್ಟಿಯ ಸಹಜ ವ್ಯಾಪಾರಗಳು. ಅವನ್ನು ಕಂಡು ಕೇಳದವರಿಲ್ಲ. ಅವನ್ನು ಹಾಗೆಯೇ ಹೇಳುವುದರಲ್ಲಿ ಕವಿತ್ವವೇನಿದೆ? ಅಂತೆಯೇ ಉಪಕೃತನಾದವನು ಉಪಕಾರಿಗೆ ಬಾಗಿ ನಡೆಯಬೇಕೆಂಬುದೂ ಒಂದು ನೀತಿ. ಇವನ್ನೆಲ್ಲ ಬತ್ತಲೆಯಾಗಿ ಬರೆದು ಹೇಳಿದರೆ ಕೇಳಿದವರ ಹೃದಯದಲ್ಲಿ ಆನಂದೋದ್ರೇಕವಾಗುವ ಕಾರಣವಿಲ್ಲ. ಆದರೆ ಅವೆರಡನ್ನೂ ಹೊಂದಿಸಿ ಒಂದರಿಂದೊಂದು ಬೆಳಗುವಂತೆ ಹೇಳಿದ ಮೇಲಣ ಕವಿವಾಣಿಯನ್ನು ನೋಡಿರಿ. ಇಲ್ಲಿದೆ ಕಾವ್ಯದ ಜೀವಾಳ! ಶಿವಸ್ವ ರೂಪದ ಜೀವ ಕಳೆ! ಈ ಪದ್ಯಗಳನ್ನು

ಓದಿದಾಗ ಆನಂದದಿಂದ ಅರಳಿ ವಿನಯ-ವಿನಮಿತವಾಗದಿರುವ ಮಾನವನ ಮನಸ್ಸು ಕಲ್ಲಿಗೂ ಕಠಿಣ, ಹುಲ್ಲಿಗೂ ಹಗುರ. ಆದರೆ ಮಾನವನ ಹೃದಯವು ಅಷ್ಟು ಬಿರುಸಾಗಿ ಅರಸಿಕವಾದುದಲ್ಲ.

ದೇವಭಕ್ತಿ ಧರ್ಮಭೀತಿ ನೀತಿ ಪ್ರವೃತ್ತಿ ಇವುಗಳ ಬೀಜಗಳನ್ನು ಹೃದಯದಲ್ಲಿ ಬಿತ್ತಿ ಬೆಳೆಯಿಸಿ ವಿಕಾಸಗೊಳಿಸುವ ಕಾವ್ಯಗಳನ್ನು ಕನ್ನಡ ಸಾಹಿತ್ಯದಲ್ಲಿ ನಾವು ಹುಡುಕಿ ಹೇಳಬೇಕಾಗಿಲ್ಲ. ನಮ್ಮ ಹಿಂದಣ ಸಾಹಿತ್ಯವೆಲ್ಲ ಇದಕ್ಕಾಗಿಯೇ ಮೀಸಲಾಗಿದೆಯೆಂದೂ ಅದೊಂದು ದೊಡ್ಡ ದೋಷವೆಂದೂ ಹೇಳುವವರೂ ಇದ್ದಾರೆ. ಇಂತಹ ಆಂತರಿಕ ಸದ್ಭಾವ ಗಳನ್ನು ಪ್ರಜ್ಞೋದಿಸುವ ಕಾವ್ಯಗಳು ನಮ್ಮ ದೈನಂದಿನ ಸಹಜಜೀವನದ ಸೆಲೆಯನ್ನು ಅವಲಂಬಿಸಿದರೆ ಅವು ಇನ್ನಷ್ಟು ರಮ್ಯವಾಗುವದರಲ್ಲಿ ಸಂದೇಹವಿಲ್ಲ. ನಮ್ಮ ನಾಡಿನ ಹಸುಮಕ್ಕಳ ತಾಯಂದಿರು ತಮ್ಮ ಹಸುಗೂಸಿಗೆ ಹಸುವಿನ ಹಾಲೆರೆದ ತರುವಾಯ ಅದು ಮೈಗೆ ಹತ್ತಲೆಂದು ಕಿವಿಹಿಂಡಿ ನೆತ್ತಿಯನೂದಿಹಾಡಿ ಆಡಿಸುವ ರೂಢಿ ನಮ್ಮಲ್ಲಿ ಈಗಲೂ ಇದೆಯಷ್ಟೆ? ಹಾಗೆ ಹಾಡಿದ ಈ ಕೆಳಗಣ ಪದ್ಯವನ್ನು ಓದಿರಿ. ಅದೆಷ್ಟು ರಮ್ಯವಾಗಿದೆಯೊ ಹೇಳಿರಿ.

ಕೆರೆಯುಂ ಕಟ್ಟಿಸು, ಭಾವಿಯುಂ ಸವೆಸು, ದೇವಾಗಾರಮುಂ ಮಾಡಿಸೇ-
ಳ್ಸೆರೆಯೊಳ್ಸಿಕ್ಕಿ ದನಾಥರಂ ಬಿಡಿಸು, ಮಿತ್ರರ್ಗಿಂಬುಗೆಯ್ ನಂಬಿದರ್
ರ್ಗರೆವಟ್ಟಾಗಿರು, ಶಿಷ್ಯರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾಂ-
ಎರೆದಳ್ ಪಾಲೆರೆವಂದು ತೊಟ್ಟು ಕವಿಯೊಳ್ ಲಕ್ಷ್ಮೀಧರಾಮಾತ್ಯನಾ ॥ ೧ ॥

ವಿಜಯ ನಗರದ ಪ್ರಭು ಮೊದಲನೆಯ ದೇವರಾಯನ ಮಂತ್ರಿ ಲಕ್ಷ್ಮೀಧರಾಮಾತ್ಯನ ಪೋಷಣೆಯಲ್ಲಿದ್ದ **ಮಧುರ** ಕವಿಯ ಮಧುರವಾದ ವಾಣಿಯಿದು. ಹಂಪೆಯಲ್ಲಿರುವ ಒಂದು ಶಾಸನದಲ್ಲಿ ಈಗಲೂ ನಾವು ಈ ಪದ್ಯವನ್ನು ನೋಡಬಹುದು. ನಮ್ಮ ಕನ್ನಡಿತಿ ತಾಯಂದಿರು ಮಕ್ಕಳಿಗೆ ಎರೆವ ಹಾಲಿನೊಡನೆಯೇ ನೀಡುತ್ತಿದ್ದ ನೀತಿ ಸುಧೆಯ ಮಾದರಿಯನ್ನೂ ನಮ್ಮ ಸಾಹಿತ್ಯದ ಗುರಿಯನ್ನೂ ನಮ್ಮ ಕವಿ ಕೃತಿಗಳ ಮೇಲ್ಮಟ್ಟದ ಜೀವಾಳವನ್ನೂ ಈ ಪದ್ಯದಲ್ಲಿ ನಾವು ಒಟ್ಟಾಗಿ ನೋಡಬಹುದು.

ಮಾನವ ಹೃದಯದ ವಿಕಾಸಕ್ಕೆ ಆಸ್ಪದವಿಲ್ಲದ ಇಲ್ಲವೆ ಅದಕ್ಕೆ ದುರ್ಮಾರ್ಗ ಪ್ರವರ್ತನೆ ಮಾಡುವಂಥ ಕೃತಿಗಳು ಕಾವ್ಯವೆಂಬ ಹೆಸರಿಗೆ ತಕ್ಕುವುಲ್ಲ. ಅದೊಂದು ಕವಿಯ ಕರ್ಮ, ದುಷ್ಕರ್ಮ ಮಾತ್ರ.

ಒಟ್ಟಿಗೆ, ಕಾವ್ಯವು ಸತ್ಯ-ದರ್ಶನದ ಮೂಲದಿಂದ ಉದ್ಭವವಾಗಿ ಲೋಕರೂಢಿಯ ಶಬ್ದ-ಶರೀರ, ಶಾಸ್ತ್ರ-ಮರ್ಯಾದೆಗಳಲ್ಲಿ ಬಳೆದುಬಂದು ಸುಂದರ ವ್ಯಕ್ತವಾಗಿ ಸೇವನ ಮಾತ್ರದಿಂದ ಹೃದಯ ವಿಕಸನೆಯೊಡನೆ ಮಹದಾನಂದದಾಯಕವಾದ ಇನಿವಣ್ಣಗಳನ್ನು ತಳೆದ ಪರೋಪಕಾರಿಯಾದ ಮಾವುರವಾಗಿ ಪರಿಣಮಿಸಜೇಕು. ಇಂತಹ ಕಾವ್ಯ ಸಮೂಹಗಳಿಂದ ನಮ್ಮ ಸಾಹಿತ್ಯವು 'ಸತ್ಯಂ ಶಿವಂ ಸುಂದರಂ' ಆಗುವುದರಲ್ಲಿ ಸಂದೇಹವಿಲ್ಲ. ನಶ್ವರವಾದ ಪ್ರಪಂಚದಲ್ಲಿಯೂ ಕೂಡ ಚಿರಂಜೀವಿಯಾಗಿ ಬಾಳಬಹುದಾದ ಸಾಹಿತ್ಯ ವೆಂತಹದು ಕವಿಗಳೆಂತಹರು ಅವರ ಕಾವ್ಯಗಳೆಂತಹವು ಎಂಬುದನ್ನು ಸುರಿತು ಇಲ್ಲಿ ನಾಲ್ಕು ಮಾತುಗಳನ್ನು ಹೇಳಿದಂತಾಯಿತೆಂದು ನಮ್ಮ ಭಾವನೆ. ನಮ್ಮ ಹಿಂದುಮುಂದಿನ ಸಾಹಿತ್ಯದ ವಿಷಯಕ್ಕೆ ಇಂದಿನ ಜನರ ಭಾವನೆಯೆಂತಿರುವುದೆಂಬುದನ್ನು ಮತ್ತೊಮ್ಮೆ ಪ್ರಸ್ತಾಪಿಸೋಣ.

ಮೋಕ್ಷ ಸಾಧನೆಯ ನಾಲ್ಕು ಮಾರ್ಗಗಳು. (ಯೋಗಗಳು)

ಮೋಕ್ಷ ಸಾಧನೆಯೇ ನಮ್ಮ ಮುಂದಿರುವ ಮುಖ್ಯ ಪ್ರಶ್ನೆ. ನಾವು ನಮ್ಮನ್ನು ಅರಿತು ಕೊಳ್ಳುವವರೆಗೂ ಅರ್ಥಾತ್ ನಾವು **ಆತನ** ಅಂಶವೇ ಎಂಬುದನ್ನು ಕಂಡುಕೊಳ್ಳುವ ವರೆಗೂ ನಮಗೆ ಬಿಡುಗಡೆಯಿಲ್ಲ— ಮೋಕ್ಷವಿಲ್ಲ. ಈ ತಿಳಿವಳಿಕೆಯನ್ನು ಹೊಂದುವದಕ್ಕೆ ಹಲವು ಮಾರ್ಗಗಳಿರುವವು; ಒಂದೂರಿಗೆ ಹೋಗುವದಕ್ಕೆ ಹಲವು ದಾರಿಗಳಿರುವ ಹಾಗೆ. ಆದರೆ ಊರಿಗೆ ಹೊರಟಿರುವವನು ತನ್ನ ಮುಖವನ್ನು ವಿರುದ್ಧ ದಿಕ್ಕಿಗೆ—ಗುರಿಯನ್ನು ಅರಿಯದೆ ಗುಂಡು ಹೊಡೆಯುವವನ ಹಾಗೆ—ತಿರುಗಿಸದೆ ಇದ್ದರೆ ಸಾಕು. ಒಂದು ದಾರಿಯು ಸಮೀಪವಿರಬಹುದು. ಇನ್ನೊಂದು ತುಸು ಸುತ್ತಿನದಿರಬಹುದು. ಮೂರನೆಯದು ಬಳಸಿ ಬಳಸಿ ಬರುತ್ತಿರಬಹುದು. ಅದೂ ಅವರವರ ದೃಷ್ಟಿಭೇದದಿಂದ. ಈ ಬಗೆಯ ಊರನ್ನು ಸೇರುವ—ಆತ್ಮವಸ್ತು ಪರಿಚಯದ—ಮಾರ್ಗಗಳಿಗೆ ಯೋಗಗಳೆಂದು ಹೆಸರು. ಯೋಗ ಎಂದರೆ ಕೂಡುವದು. ಊರಿಗೆ ಹೊರಟವನು ಅಲ್ಲಿಗೆ ಹೋಗಿ ಮುಟ್ಟುವದು; ಆತ್ಮಪರಿಚಯಕ್ಕೆ ಹೊರಟವನು ಅದರ ಪರಿಚಯವನ್ನು ಪಡೆಯುವದು; ಮೋಕ್ಷ ಸಾಧನೆಗೆ ಯತ್ನಿಸುವವನು ಅದನ್ನು ಪಡೆಯುವದು, ಎಂದು ಇದಕ್ಕೆ ಅರ್ಥ. ಈ ಯೋಗಗಳನ್ನು ಬಲ್ಲವರು ನಾಲ್ಕು ವಿಧವಾಗಿ ವಿಂಗಡಿಸಿದ್ದಾರೆ. ಇವುಗಳಲ್ಲಿ ಪ್ರತಿಯೊಂದೂ ಆ ಅನಾದಿ ಅನಂತ ತೇಜಸ್ಸಿನ ದರ್ಶನಪಥವೇ ಅಲ್ಲದೆ ಬೇರೊಂದಲ್ಲ. ಬೇರೆಬೇರೆ ತರಗತಿಗಳ ಜನರಿಗೆ ಅವರವರ ಸಂಸ್ಕಾರ ಸಂಚಿತ ಗುಣಕರ್ಮಗಳಿಗೆ ಅನುಗುಣವಾಗಿ ಹೇಳಿದ ಸಾಧನೆಗಳಿವು. ಈ ಸಂದರ್ಭದಲ್ಲಿ ಬಾಹ್ಯದ ನಾನು ಬೇರೆ, ನಿಜವಾದ ನಾನು ಬೇರೆ, ಎಂಬುದನ್ನು ಮರೆಯಕೂಡದು. ಬಾಹ್ಯದ ನಾನು ಸದಾಬದ್ಧನು; ನಿಜವಾದ ನಾನು ಬಂಧನರಹಿತನು; ಮತ್ತು ಸದಾಪರಿಪೂರ್ಣನು. ಆ ಬಂಧನರಹಿತನಾದ ಪರಿಪೂರ್ಣನಾದ ನನ್ನನ್ನು ಮರೆತಾಗ ಅಜ್ಞಾನಾಂಧಕಾರದಿಂದ ಆವೃತವಾದ ಬಾಹ್ಯದ ನಾನು ಮುಂದೆಬರುವದು. ಇಂತಹ ಅಜ್ಞಾನಾಂಧಕಾರವನ್ನು ಬೆಳಗಿಸುವ ಆತ್ಮವಸ್ತುವಿನ ಪರಿಚಯಮಾಡಿಕೊಡುವ ಸಾಧನವೇ ಯೋಗವು. ಅಭ್ಯಾಸ ವೈರಾಗ್ಯಗಳು ಇದಕ್ಕೆ ಮುಖ್ಯ ಸಾಧನಗಳು. ವೈರಾಗ್ಯವೆಂದರೆ ಸರ್ವಸಂಗಪರಿತ್ಯಾಗವಾಡುವದು. ಯಾಕೆಂದರೆ, 'ಸಂಗಾತ್ ಸಂಜಾಯತೇ ಕಾಮಃ ಕಾಮಾತ್....' ಇತ್ಯಾದಿಯಾಗಿ ಮನಸ್ಸಿನ ಬಯಕೆಗಳಿಗೆ ಆಧೀನನಾದವನು ಹಲವು ವಿಧದ ಬಂಧನಗಳಿಗೆ ಒಳಗಾಗುವನು. ಮತ್ತು ಯಾವುದೊಂದು ಯೋಗವನ್ನು ಅನವರತವಾಗಿ ಅವಿರತವಾಗಿ ಆಚರಣೆಯಲ್ಲಿಟ್ಟುಕೊಳ್ಳುವದೇ ಅಭ್ಯಾಸವು.

೧. **ಕರ್ಮಯೋಗ**— ಕರ್ಮವು ಮಾನವನ ಮನಸ್ಸನ್ನು ಪರಿಶುದ್ಧಗೊಳಿಸುವದು. ಮಾನವನ ಪ್ರತಿ ಕರ್ಮವೂ, ಅದು ಒಳ್ಳೆಯದೇ ಇರಲಿ, ಕೆಟ್ಟದೇಇರಲಿ, ಅದಕ್ಕೆ ತಕ್ಕ ಪರಿಣಾಮವನ್ನು ಎಂದರೆ ಒಳ್ಳೆಯ ಅಥವಾ ಕೆಟ್ಟ ಫಲವನ್ನು ಕೊಟ್ಟೇ ಕೊಡುವದು. ಕಾರಣವುಂಟಾದೊಡನೆ ಕಾರ್ಯವು ಗೋಚರವಾಗಲೇಬೇಕಾಗುವಂತೆ ಯಾವ ಶಕ್ತಿಯೂ ಈ ಫಲವನ್ನು ತಡೆಯಲಾರದು. ಆದುದರಿಂದ ಸತ್ಕರ್ಮಕ್ಕೆ ಸತ್ಫಲವೂ ದುಷ್ಕರ್ಮಕ್ಕೆ ದುಷ್ಟ ಫಲವೂ ತಪ್ಪಿದ್ದಲ್ಲ. ಮತ್ತು ಆಯಾ ಕರ್ಮಕ್ಕನುಗುಣವಾಗಿ ಆಯಾ ವ್ಯಕ್ತಿಯು ಒಳ್ಳೆಯ ಅಥವಾ ಕೆಟ್ಟ ಫಲಭೋಗಕ್ಕೆ ಸಿದ್ಧನಾಗಬೇಕಾಗುವದು. ಕರ್ಮವು ಶರೀರಕ್ಕೂ ಮನಸ್ಸಿಗೂ ಸಂಬಂಧಿಸುವದಲ್ಲದೆ ಆತ್ಮಕ್ಕಲ್ಲ. ಆದರೆ ಆ ಕರ್ಮವು ಆತ್ಮನ ಮೇಲೆ ತನ್ನ ಪರಿಣಾಮರೂಪವಾದ ಛಾಯೆಯನ್ನು ಇಲ್ಲವೆ ಬೆಳಕನ್ನು ಕೆಡಹುವದು. ಸತ್ಕರ್ಮದಿಂದ ಬೆಳಕೂ ದುಷ್ಕರ್ಮದಿಂದ ಛಾಯೆಯೂ ಬೀಳುವವು. ಮತ್ತು ಸತ್ಕರ್ಮದಿಂದ ಮನಸ್ಸಿನ ಸ್ಥೈರ್ಯ

ಶಕ್ತಿಯು ವಿಕಾಸವಾಗಿ ಅಲಿಪ್ತತೆಯ ಎಂದರೆ ವೈರಾಗ್ಯದ ದಾರಿಯಲ್ಲಿ ಮಾನವನು ಮುಂದುವರಿಯುವನು. ಮತ್ತು ದುಷ್ಕರ್ಮದ ಪ್ರವೃತ್ತಿಯು ಕುಂದಿ ಮನಸ್ಸು ಪರಿಶುದ್ಧವಾಗುವದು.

ಫಲಾಪೇಕ್ಷೆಯಿಂದ ಮಾಡಿದ ಕರ್ಮವು ಫಲಪ್ರಾಪ್ತಿಯಿಂದ ತತ್ಕಾಲಕ್ಕೆ ಆನಂದವನ್ನು ಕೊಡಬಹುದಿಷ್ಟೇ ಅಲ್ಲದೆ ಅದರಿಂದ ಚಿತ್ತದ ಅಥವಾ ಮನಸ್ಸಿನ ಶುದ್ಧೀಕರಣಕ್ಕೆ ಸಹಾಯವಾಗಲಾರದು; ಅದನ್ನು ಅಲ್ಲಗಳೆದಂತಾಗಲಾರದು. ಆದುದರಿಂದ ಎಲ್ಲ ಕರ್ಮಗಳನ್ನು ಫಲಾಪೇಕ್ಷೆಯಿಲ್ಲದೆ ಮಾಡಬೇಕು. ನಿಜವಾದ ಕರ್ಮಯೋಗಿಯು ಭೀತಿಯನ್ನಾಗಲಿ ಫಲಾಪೇಕ್ಷೆಯನ್ನಾಗಲಿ ಮನಸ್ಸಿನಲ್ಲಿ ತರದೆ ಇಹ-ಪರಲೋಕಗಳಲ್ಲಿಯೂ ಯಾವ ವಿಧದ ಫಲಾನಕ್ತಿಯನ್ನೂ ತೋರ್ಪಡಿಸದೆ ಕಾರ್ಯಮಾಡತಕ್ಕದ್ದು. ಇಂತಹ ಫಲಾಪೇಕ್ಷೆಯಿಲ್ಲದ ಕರ್ಮವು ವಿಧವಿಧದ ಬಂಧನಗಳಿಗೆ ಕಾರಣವಾದ ಸ್ವಾರ್ಥಬುದ್ಧಿಯನ್ನು ನಾಶಮಾಡುವದು. 'ನನ್ನದೇನೂ ಇಲ್ಲ; ಎಲ್ಲವೂ ನಿನ್ನದೇ' ಎಂಬುದೇ ಕರ್ಮಯೋಗಿಯ ಕರ್ಮದಗುಟ್ಟು. ಸ್ವಾರ್ಥತ್ಯಾಗವೇ ಆತನ ಜೀವನದ ಮಟ್ಟು. ಅವನಿಗೆ ಸ್ವರ್ಗಭೋಗದ ಅಥವಾ ಕೀರ್ತಿ ಮಾನ ಮಾನ್ಯತೆಗಳ ಅಪೇಕ್ಷೆಯು ಕೂಡ ಇರುವದಿಲ್ಲ. ಜ್ಞಾನಯೋಗಿಯು ಕೇವಲ ಪರ ಹಿತಪರಾಯಣತೆಯ ಕರ್ಮವೂ ಇದೇ ವರ್ಗಕ್ಕೆ ಬರುವದು. ಕೆಲವರು ಕಾಮಿನೀ ಕಾಂಚನ ಗಳಲ್ಲಿ ಆಸಕ್ತಿಯುಳ್ಳವರಾಗಿರುವರು. ಅಂಥವರಿಗೆ ಅನಾಸಕ್ತಿ-ಕರ್ಮಯೋಗವೇ ಮೋಕ್ಷದಾಯಿಯಾಗುವದು.

೨. **ಭಕ್ತಿಯೋಗ**— ಭಕ್ತಿ, ಪೂಜೆ ಅಥವಾ ಪ್ರೀತಿ ಇವೆಲ್ಲ ಒಂದೇ ಮನೋವೃತ್ತಿಯ ಭಿನ್ನರೂಪಗಳು. ಇದು ಅತಿ ಸುಲಭವೂ ಆನಂದದಾಯಕವೂ ತೀರ ಸ್ವಾಭಾವಿಕವೂ ಆದ ಮಾರ್ಗವು. ಪರಸ್ಪರ ಆಕರ್ಷಣವು ಪ್ರಕೃತಿಯ ಸಹಜ ಧರ್ಮವು. ಅದರಂತೆ ಮಾನವ ಹೃದಯಕ್ಕೆ ಪ್ರೇಮವು ಜನ್ಮಸಿದ್ಧವಾದುದು. ಪ್ರೇಮದ ಮಾರ್ಗವು ಸುಗಮವಲ್ಲದುದಾದರೂ ಯೋಗ್ಯವಸ್ತುವಿನ ಕಡೆಗೆ ಯೋಗ್ಯದಾರಿಯಿಂದ ಸಾಗಿದ ಪ್ರೇಮವು ಮನಸ್ಸಿನ ಮತ್ತು ಆತ್ಮದ ವಿಕಾಸಕ್ಕೆ ಕಾರಣವಾಗುವದು. ದೇವರೇ ಭಕ್ತಿಯ ಗುರಿಯು. ಪ್ರೇಮಕ್ಕೆ ಪದಾರ್ಥವು ಬೇಕು. ಕಾರಣವೂ ಬೇಕು. ಪ್ರೇಮಕ್ಕೆ ಕಾರಣವಾದ ಪದಾರ್ಥವು ಆ ಪ್ರೇಮಕ್ಕೆ ಪ್ರತಿಧ್ವನಿಗೊಡಬೇಕಾಗುವದು. ಆದುದರಿಂದ ಭಕ್ತನ ಪ್ರೇಮಕ್ಕೆ ಹೇತುವಾದ ದೇವನು ಮಾನವ ರೂಪಿಯಾಗಿರುವದು ಅವಶ್ಯವೆನಿಸುವದು. ಮತ್ತು ಆ ಮಾನವ ರೂಪಿಯಾದ ದೇವನು ಪ್ರೇಮಮಯನಾಗಿರಬೇಕು. ಇಂತಹ ದೇವನು ಜಗತ್ತಿನಲ್ಲಿ ಇರುವನೋ ಇಲ್ಲವೋ ಎಂಬ ಪ್ರಶ್ನೆ ಬೇರೆ. ಆದರೆ ಪ್ರೇಮಮಯವಾದ ಅಂತಃಕರಣವುಳ್ಳ ಭಕ್ತರಿಗೆ ಅವರ ಭಕ್ತಿಯು ಪ್ರತಿಫಲವಾಗಿ ಇಂತಹ ದೇವನ ಸೃಷ್ಟಿಯಾಗುವದು.

ಭಕ್ತರ ಆರಾಧನೆಗೆ ಅರ್ಹನಾದ ದೇವನ ಸ್ವರೂಪಕ್ಕೆ ಬೇರೆ ಬೇರೆ ಮೆಟ್ಟು ಮಟ್ಟಗಳುಂಟು. ಮೊದಲು ಮೊದಲು ಭಕ್ತರಿಗೆ ಲೋಕದಲ್ಲಿ ನ್ಯಾಯಾಧೀಶನಂತೆಯೋ ದುಷ್ಕರ್ಮಗಳಿಗೆ ಶಿಕ್ಷೆಯನ್ನು ವಿಧಿಸುವ ಅಧಿಕಾರಿಯಂತೆಯೋ ಇರುವ, ತಾವು ವಿಧೇಯರಾಗಿ ನಡೆಯಬೇಕಾದ ಒಂದು ದೈವೀ ಶಕ್ತಿಯ ಕಲ್ಪನೆಯುಂಟಾಗುವದು. ಬರಬರುತ್ತ ಈ ದೇವನ ಕಲ್ಪನೆಯು ವಿಕಾಸಹೊಂದಿ ಪ್ರೇಮಮಯನಾದ ಪ್ರಪಂಚ ಪಾಲಕನ ಕಲ್ಪನೆಯು ಅವರಿಗೆ ಹುಟ್ಟುವದು.

ಭಕ್ತಿಯೋಗವನ್ನು ತ್ರಿಕೋಣಕ್ಕೆ ಹೋಲಿಸುವದುಂಟು. ಆ ತ್ರಿಕೋಣದ ತಳರೇಖೆಗೆ ಹೊಂದಿದ ಎಡಗಡೆಯ ಕೋಣವು ನಿರ್ಭೀತಿಯು. ಭೀತಿಯಿದ್ದಲ್ಲಿ ಪ್ರೇಮವಿರದು. ಪ್ರೇಮವು ಭೀತಿಯನ್ನು ಹಿಂದೆ ದೂಡಿಬಿಡುವದು. ತಾಯಿಯು ಮಗುವನ್ನು ಸಂರಕ್ಷಿಸುವದಕ್ಕಾಗಿ

ಹುಲಿಯನ್ನು ಎದುರಿಸುವಳು; ಇಲ್ಲಿ ಮಗುವಿನ ಮೇಲಣ ಪ್ರೇಮವು ಹುಲಿಯ ಭೀತಿಯನ್ನು ಒದೆದು ತೂರಿಬಿಡುವದು. ನಿಷ್ಕಾಮ ಪ್ರೇಮವು ತಳರೇಖೆಗೆ ಹೊಂದಿದ ಎರಡನೆಯ ಕೋಣವು. ಕೇವಲ ಪ್ರೇಮಕ್ಕಾಗಿಯೇ ಪ್ರೇಮವೆಂಬದು ಮೂರನೆಯ ಶಿರಃಕೋಣವು. ಈ ಅವಸ್ಥೆಯಲ್ಲಿ ಭಕ್ತನು ಕೇವಲ ಪ್ರೇಮಮಯನಾಗಿ ತನ್ನ ಪ್ರೇಮದ ಗುರಿಯಾವು ದೆಂಬುದನ್ನು ಕೂಡ ಮರೆತುಬಿಡುವನು. ಪ್ರಪಂಚವನ್ನೇ ಬೆಳಗಿಸುವ ಪ್ರೇಮ ಜ್ಯೋತಿಯ ದರ್ಶನಕ್ಕೆ ಅರ್ಹನಾದ ಪ್ರೇಮಮಯ ಭಕ್ತನು ಭಕ್ತಿಯೋಗಿಯೆನಿಸುವನು.

೩. **ರಾಜಯೋಗ**— ಪ್ರಾಣಾಯಾಮ, ಚಿತ್ತೈಕಾಗ್ರ್ಯ ಮತ್ತು ಧ್ಯಾನಾಸಕ್ತಿ ಇವು ಈ ಯೋಗಕ್ಕೆ ಸಾಧನಗಳು. ರಾಜಯೋಗಿಯು ತನ್ನ ಗುರುವಿನಿಂದ ತನ್ನ ಧ್ಯಾನಕ್ಕೆ ತಕ್ಕದ್ದಾದ ಒಂದು ದೇವತೆಯ ಹೆಸರನ್ನು ಪಡೆಯುವನು. ಓಂಕಾರವು ಇವುಗಳಲ್ಲಿ ಒಂದು. ಓಂಕಾರವು ಪ್ರಕೃತಿಯ ನಿದರ್ಶಕವು. ಮತ್ತೆ ಕೆಲವರು ತಮತಮಗೆ ತಕ್ಕುವೆನಿಸುವ ದೇವರನ್ನೂ ಪ್ರಾರ್ಥನಾಮಂತ್ರಗಳನ್ನೂ ಗುರುಮುಖದಿಂದ ಪಡೆಯುವರು. ಆ ದೇವತೆಯನ್ನು ದೃಷ್ಟಿಪಥದಲ್ಲಿಟ್ಟುಕೊಂಡು ಚಿತ್ತೈಕಾಗ್ರತೆಯನ್ನು ಪಡೆಯಲು ಆಸನ ಪ್ರಾಣಾಯಾಮಗಳನ್ನೂ ದೇವತಾ ಸ್ವರೂಪ ಪ್ರೇರಕವಾದ ಮಂತ್ರದ ಜಪವನ್ನೂ ಆಚರಿಸ-ತೊಡಗುವರು. ಈ ಬಗೆಯ ತಪಸ್ಸಿನಿಂದ ತನ್ನ ಇಷ್ಟದೇವತೆಯ ಪ್ರಕಾಶದಲ್ಲಿ ಸ್ವಪ್ರಕಾಶವನ್ನು ಯೋಜಿಸಿ ಸಾಧಕನು ದೇವತಾಸ್ವರೂಪಿಯಾಗುವನು. ಇದೀಗ ರಾಜಯೋಗದ ಗುಟ್ಟು.

೪. **ಜ್ಞಾನಯೋಗ**— ಇದರಲ್ಲಿ ಮೂರು ಭಾಗಗಳಿರುವವು. 'ಆತ್ಮವೊಂದೇ ನಿತ್ಯ-ವಾದುದು; ಮಿಕ್ಕುವೆಲ್ಲಾ ಮಾಯೆಯ ಮಾಟಗಳು.' ಎಂದು ನಂಬುವದು ಮೊದಲನೆಯ ಮೆಟ್ಟು. ಈ ಮಾತನ್ನು ತರ್ಕದಿಂದ ಸಿದ್ಧ ಮಾಡಿಕೊಳ್ಳುವದು ಎರಡನೆಯ ಮೆಟ್ಟು. ನಿತ್ಯ ಸತ್ಯದ ಜ್ಞಾನವನ್ನು ಹೊಂದುವದು ಕೊನೆಯ ಅವಸ್ಥೆ. ಬ್ರಹ್ಮವೊಂದೇ ಸತ್ಯ. ಮಿಕ್ಕುವೆಲ್ಲಾ ಅಸತ್ಯ-ಅನಿತ್ಯ ಎಂಬುದನ್ನು ರೂಢಿ ಮಾಡುವದು ಮೊದಲನೆಯ ಮೆಟ್ಟಿನ ಸಾಧನೆ. ಎಲ್ಲ ವಿಧದ ಆಸಕ್ತಿಯನ್ನು ತೊರೆಯುವದು ಎರಡನೆಯ ಮೆಟ್ಟಿನಲ್ಲಿ ಮಾಡಬೇಕಾದ ಕಾರ್ಯ. ಮನೋನಿಗ್ರಹವು ಮೂರನೆಯ ತರಗತಿಯಲ್ಲಿ ಆಚರಿಸಬೇಕಾದ ನಿಗ್ರಹ ನಿಯಮವು. ಮತ್ತು ನಾನು ಮುಕ್ತನು. ಎಂಬ ದೃಢವಾದ ಭಾವನೆಯನ್ನು ಸ್ಥಿರೀಕರಿಸಿಕೊಳ್ಳುವದು ನಾಲ್ಕನೆಯ ಮತ್ತು ಕೊನೆಯ ಅವಸ್ಥೆ. ಈ ನಾಲ್ಕೂ ಅವಸ್ಥೆಗಳನ್ನು ಪಡೆದ ಜ್ಞಾನಿಯು ನಿತ್ಯಸತ್ಯವನ್ನು ಕಂಡ ಜ್ಞಾನಯೋಗಿಯಾಗುವನು. ಧ್ಯಾನಾಸಕ್ತನಾಗಿ ಈ ನಿತ್ಯಸತ್ಯ ಸ್ವರೂಪದ ಜ್ಞಾನದ ಬೆಳಕನ್ನು ತನ್ನ ಆತ್ಮನಿಗೆ ಗೋಚರವಾಗುವಂತೆ ಮಾಡುವದೇ ಈ ಯೋಗದ ರಹಸ್ಯವು. ಈ ಮಾರ್ಗವು ಉತ್ತಮವೇನೋ ಹೌದು; ಆದರೆ ಬಹು ಕಷ್ಟ ಸಾಧ್ಯವಾದುದು. ಅತ್ಯಂತ ಬುದ್ಧಿಶಾಲಿಗಳಿಗೇ ಈ ಮಾರ್ಗವು ಸುಗಮವಾಗುವದು. ಸರ್ವಸಾಮಾನ್ಯ ಜನರಲ್ಲಿ ಈ ಮಾರ್ಗದಿಂದ ಹೋಗಿ ಗುರಿಯನ್ನು ಮುಟ್ಟಿದವರು ತೀರ ವಿರಳ.

ಇದೀಗ ಸ್ವಾಮೀ ವಿವೇಕಾನಂದರು ಹೇಳಿದ ಮೋಕ್ಷ ಸಾಧನೆಯ ನಾಲ್ಕು ಮಾರ್ಗಗಳ ಸಂಕ್ಷೇಪ ಸ್ವರೂಪ. ಒಂದೊಂದನ್ನೇ ಎತ್ತಿ ಬೆಳಗಿಸುವಾಗ ಮಿಕ್ಕುಳಿದವು ಮಲಿನವಾಗಿ ಹಿಂದೆ ಉಳಿಯುವದು ಸ್ವಾಭಾವಿಕ. ಆದುದರಿಂದ ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ಕರ್ಮಯೋಗ' ಕವಿತೆಯನ್ನು ಓದಿ ಮಿಕ್ಕ ಯೋಗಗಳ ಬಗ್ಗೆ ಯಾರೂ ತಪ್ಪು ಕಲ್ಪನೆ ಮಾಡಿಕೊಳ್ಳುವ ಕಾರಣವಿಲ್ಲ. ಅದಕ್ಕಾಗಿಯೇ 'ಧಿಸೋದಾತ್ತ ಭಾವದೆ ನೋಳ್ಪುದೀ ಕೃತಿಯ' ಎಂದು ಅದರಲ್ಲಿ ಸ್ಪಷ್ಟವಾಗಿ ಹೇಳಿದೆ.

ಗಂಡುಮಕ್ಕಳ ಪ್ರಾ. ಶಾ. ಪ್ರ. ಪತ್ರ ಪರೀಕ್ಷೆ ೧೯೪೫

ಈ ವರ್ಷದ ಪ್ರಾ. ಶಾ. ಪ್ರ. ಪತ್ರ ಪರೀಕ್ಷೆಯು ಎಪ್ರಿಲ್ ತಿಂಗಳ ೯ನೆಯ ತಾರೀಖು ಸೋಮವಾರ ಮತ್ತು ಮುಂದಿನ ದಿನಗಳಲ್ಲಿ ಮುಂದೆ ಹೇಳುವ ಕೇಂದ್ರಗಳಲ್ಲಿ ನಡೆಯುವದು. ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆಯನ್ನು ಇನ್ನೊಂದು ಪುಟದಲ್ಲಿ ಪ್ರಕಟಿಸಲಾಗಿದೆ.

	ಕೇಂದ್ರ	ಕೇಂದ್ರದ ಅಧ್ಯಕ್ಷರು	
೧.	ಧಾರವಾಡ	ಸರಕಾರಿ ಗಂಡುಮಕ್ಕಳ ಟ್ರೈ.ಕಾದ ಪ್ರಿನ್ಸಿಪಾಲರು.	ಧಾರವಾಡ
೨.	ಹುಬ್ಬಳ್ಳಿ	ಆಂಗ್ಲೊ ಉರ್ದು ಹೈಸ್ಕೂಲಿನ ಹೆಡ್‌ಮಾಸ್ತರರು	ಹುಬ್ಬಳ್ಳಿ.
೩.	ಗದಗ	ದ.ಭಾ.ದ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು.	ಧಾರವಾಡ.
೪.	ಹಾವೇರಿ	ಧಾರವಾಡ ಜಿಲ್ಲೆಯ ಡೆಪ್ಯುಟಿ ಎ. ಇನ್‌ಸ್ಪೆಕ್ಟರರು.	ಧಾರವಾಡ.
೫.	ಬೆಳಗಾಂವಿ	ಸರದಾರ್ ಹೈಸ್ಕೂಲಿನ ಹೆಡ್‌ಮಾಸ್ತರರು –	ಬೆಳಗಾಂವಿ.
೬.	ಗೋಕಾಕ (ಉಪಕೇಂದ್ರ)	ಸದರ	ಸದರ
೭.	ಚಿಕ್ಕೋಡಿ	ಬೆಳಗಾಂವ ಜಿಲ್ಲೆಯ ಡೆಪ್ಯುಟಿ ಎ. ಇನ್‌ಸ್ಪೆಕ್ಟರರು–	ಬೆಳಗಾಂವಿ
೮.	ಅಥಣಿ	ಸದರ	ಸದರ
೯.	ಬೈಲಹೊಂಗಲ	ಧಾರವಾಡ ಜಿಲ್ಲೆಯ ಮೊದಲನೆಯ ಅಸಿಸ್ಟಂಟ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು–	ಧಾರವಾಡ
೧೦.	ವಿಜಾಪುರ	ಒಕ್ಕಲುತನದ ಹೈಸ್ಕೂಲಿನ ಹೆಡ್‌ಮಾಸ್ತರರು–	ವಿಜಾಪುರ
೧೧.	ಬಾಗಿಲುಕೋಟೆ	ವಿಜಾಪುರ ಜಿಲ್ಲೆಯ ಡೆ. ಎ. ಇನ್‌ಸ್ಪೆಕ್ಟರರು.	ವಿಜಾಪುರ
೧೨.	ಮುದ್ದೇಬಿಹಾಳ (ಉಪಕೇಂದ್ರ)	ಸದರ	ಸದರ
೧೩.	ಕಾರವಾರ	ಸರಕಾರಿ ಹೈಸ್ಕೂಲಿನ ಹೆಡ್‌ಮಾಸ್ತರರು–	ಕಾರವಾರ
೧೪.	ಕುಮಟಾ	ಕಾರವಾರ ಜಿಲ್ಲೆಯ ಡೆ. ಎ. ಇನ್‌ಸ್ಪೆಕ್ಟರರು–	ಕಾರವಾರ
೧೫.	ಸಿರ್ಸಿ (ಉಪಕೇಂದ್ರ)	ಸದರ	ಸದರ
೧೬.	ಕೊಲ್ಲಾಪುರ	ಕೊಲ್ಲಾಪುರ ಸಂಸ್ಥಾನದ ಶಿಕ್ಷಣಾಧಿಕಾರಿಗಳು–	ಕೊಲ್ಲಾಪುರ
೧೭.	ಗಡಇಂಗ್ಲಜ (ಉಪಕೇಂದ್ರ)	ಸದರ	ಸದರ

ಮೇಲೆ ಕಾಣಿಸಿದ ಕೇಂದ್ರಗಳಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಬೇಕಾದ ಉಮೇದುವಾರರ ವಿವರಣೆಯು ಈ ಕೆಳಗಿನಂತಿದೆ:—

೧. ಒಕ್ಕಲುತನದ ಒಲವಿನ ಅಭ್ಯಾಸಕ್ರಮವನ್ನು ಆರಿಸಿಕೊಂಡ ಎಲ್ಲ ಉಮೇದುವಾರರು ಧಾರವಾಡ, ಬೆಳಗಾಂವ, ಕಾರವಾರ ಮತ್ತು ವಿಜಾಪುರ ಈ ನಾಲ್ಕು ಜಿಲ್ಲಾ ಕೇಂದ್ರಗಳಲ್ಲಿಯೇ ಪರೀಕ್ಷೆಗೆ ಕುಳಿತುಕೊಳ್ಳಬೇಕು.

೨. ಉರ್ದು ಉಮೇದುವಾರರು ಅವರವರ ಶಾಲೆಗಳು ಯಾವ ಮುಖ್ಯ ಕೇಂದ್ರಕ್ಕೆ ಅಥವಾ ಉಪಕೇಂದ್ರಕ್ಕೆ ಸೇರುವವೋ ಆಯಾ ಕೇಂದ್ರಗಳಲ್ಲಿಯೇ ಪರೀಕ್ಷೆಗೆ ಕೂಡ್ರಬೇಕು.

ಧಾರವಾಡ ಜಿಲ್ಲೆಯ ಉರ್ದು ಉಮೇದುವಾರರಿಗಾಗಿ ಗೊತ್ತಾದ ಹುಬ್ಬಳ್ಳಿ ಕೇಂದ್ರವನ್ನು ಈ ವರ್ಷದಿಂದ (೧೯೪೫) ತೆಗೆದುಹಾಕಿದೆ.

೩. ಧಾರವಾಡ ಜಿಲ್ಲೆಯ ಎಲ್ಲ ಮರಾಠಿ ಉಮೇದುವಾರರು ಹುಬ್ಬಳ್ಳಿ ಕೇಂದ್ರದಲ್ಲಿ ಕೂಡ್ರಬೇಕು. ಬೆಳಗಾಂವ ಜಿಲ್ಲೆಯ ಮರಾಠಿ ಉಮೇದುವಾರ ಬೆಳಗಾಂವಿ ಅಥವಾ ಚಿಕ್ಕೋಡಿ ಇಲ್ಲವೆ ಅಥಣಿ ಕೇಂದ್ರದಲ್ಲಿ ಅವರವರ ಶಾಲೆಗಳು ಯಾವ ಕೇಂದ್ರಕ್ಕೆ ಸೇರುವವೋ

ಆ ಕೇಂದ್ರದಲ್ಲಿ ಕೂಡ್ರಬೇಕು. ಗೋಕಾಕ ಪರಸಗಡ ಮತ್ತು ಬೈಲಹೊಂಗಲ ತಾಲೂಕುಗಳ ಮರಾಠಿ ಉಮೇದುವಾರರು ಬೆಳಗಾಂವ ಕೇಂದ್ರದಲ್ಲಿ ಕೂಡ್ರಬೇಕು. ವಿಜಾಪುರ ಕೇಂದ್ರಕ್ಕೆ ಸೇರುವ ಮರಾಠಿ ಉಮೇದುವಾರರು ವಿಜಾಪುರ ಕೇಂದ್ರದಲ್ಲಿಯೂ ಬಾಗಿಲುಕೋಟ ಕೇಂದ್ರಕ್ಕೆ ಸೇರುವವರು ಬಾಗಿಲುಕೋಟೆಯಲ್ಲಿಯೂ ಕೂಡ್ರಬೇಕು. ಮುದ್ದೆಬಿಹಾಳ ಉಪಕೇಂದ್ರದಲ್ಲಿ ಮರಾಠಿ ಪರೀಕ್ಷೆಯು ನಡೆಯುವದಿಲ್ಲ.

ಕಾರವಾರ ಜಿಲ್ಲೆಯ ಎಲ್ಲ ಮರಾಠಿ ಉಮೇದುವಾರರು ಬೆಳಗಾಂವಿ ಅಥವಾ ಹುಬ್ಬಳ್ಳಿ ಕೇಂದ್ರದಲ್ಲಿ ಪರೀಕ್ಷೆಗೆ ಕೂಡ್ರಬೇಕು.

ಬೇರೆ ಬೇರೆ ಕೇಂದ್ರಗಳಿಗೆ ಸೇರಿಸಲ್ಪಟ್ಟ ಶಾಲೆಗಳ ವಿವರಣೆ.

೧. **ಧಾರವಾಡಕೇಂದ್ರ**— ಧಾರವಾಡ ತಾಲೂಕಿನ ಎಲ್ಲ ಶಾಲೆಗಳು ಮತ್ತು ನವಲುಗುಂದ ತಾಲೂಕಿನ ಮೊರಬ, ಶಿರಕೋಳ, ಶಿರೂರ ಮತ್ತು ತಿಲ್ಲಾಪುರ ಶಾಲೆಗಳು.

ಧಾರವಾಡ ಜಿಲ್ಲೆಯೊಳಗಿನ ಎಲ್ಲ ಒಕ್ಕಲುತನದ ಒಲವಿನ ಅಭ್ಯಾಸ ಕ್ರಮವನ್ನು ಆರಿಸಿಕೊಂಡ ಉಮೇದುವಾರರು.

ಕಾರವಾರ ಜಿಲ್ಲೆಯ ಹಳಿಯಾಳ ತಾಲೂಕಿನ ಉಮೇದುವಾರರು ಧಾರವಾಡ ಕೇಂದ್ರದಲ್ಲಿ ಕೂಡ್ರಬಹುದು.

೨. **ಹುಬ್ಬಳ್ಳಿಕೇಂದ್ರ**– ರೊಟ್ಟಿಗವಾಡ ಮತ್ತು ಕೋಳಿವಾಡ ಈ ಎರಡು ಶಾಲೆಗಳನ್ನು ಬಿಟ್ಟುಳಿದ ಹುಬ್ಬಳ್ಳಿತಾಲೂಕಿನ ಎಲ್ಲ ಶಾಲೆಗಳು. ಕಲಘಟಗಿ ತಾಲೂಕಿನ ಎಲ್ಲ ಶಾಲೆಗಳು. ನವಲಗುಂದ ತಾಲೂಕಿನ ಆರೇಕುರಹಟ್ಟಿ ಶಾಲೆ. ಶಿಗ್ಗಾಂವಿ ತಾಲೂಕಿನ ತಡಸ, ಧುಂಡಶಿ, ಮತ್ತಿಗಟ್ಟಿ, ಇಂಗಳಗಿ, ತರ್ಲಘಟ್ಟ, ಹಿರೇಹರಕುಣಿ, ಅತ್ತಿಗೇರಿ ಮತ್ತು ಕಳಸ ಶಾಲೆಗಳು.

ಕುಂದಗೋಳ ಗುಡಗೇರಿ ಸಂಸ್ಥಾನಗಳ ಎಲ್ಲ ಶಾಲೆಗಳು.

ಧಾರವಾಡ ಜಿಲ್ಲೆಯೊಳಗಿನ ಎಲ್ಲ ಮರಾಠಿ ಶಾಲೆಗಳು.

೩. **ಗದಗ ಕೇಂದ್ರ**— ಗದಗ ರೋಣತಾಲೂಕುಗಳ ಎಲ್ಲ ಶಾಲೆಗಳು. ಮತ್ತು ಅಮರಗೋಳ, ಬನಹಟ್ಟಿ, ಗುಡಿಸಾಗರ, ಹಳ್ಳಿಕೇರಿ, ಇಬ್ರಾಹಿಮಪುರ, ಕೊಣ್ಣೂರ, ನರಗುಂದ, ನವಲಗುಂದ, ಶಿರೋಳ, ಶೆಲವಡಿ, ತುಪ್ಪದಕುರಹಟ್ಟಿ ಮತ್ತು ಕಾಲವಾಡ.

ಹುಬ್ಬಳ್ಳಿ ತಾಲೂಕಿನೊಳಗಿನ ರೊಟ್ಟಿಗವಾಡ ಮತ್ತು ಕೋಳಿವಾಡ ಶಾಲೆಗಳು. (ಒಕ್ಕಲುತನದ ಕ್ಲಾಸುಗಳನ್ನು ಬಿಟ್ಟು).

೪. **ಹಾವೇರಿ ಕೇಂದ್ರ**— ಹಾವೇರಿ, ರಾಣೆಬೆನ್ನೂರ, ಕೋಡ ಮತ್ತು ಹಾನಗಲ್ ತಾಲೂಕಿನೊಳಗಿನ ಎಲ್ಲ ಶಾಲೆಗಳು ಮತ್ತು ಶಿಗ್ಗಾಂವಿ ತಾಲೂಕಿನೊಳಗಿನ ಬಂಕಾಪುರ, ಕುಂದೂರ, ಶಿಗ್ಗಾಂವ್, ತೆವರ ಮೆಳೆಹಳ್ಳಿ ಮತ್ತು ಹುಲಗೂರ ಶಾಲೆಗಳು.

೫. **ಬೆಳಗಾಂವಿ ಕೇಂದ್ರ**— ಬೆಳಗಾಂವಿ ಖಾನಾಪುರ ತಾಲೂಕುಗಳೊಳಗಿನ ಎಲ್ಲ ಶಾಲೆಗಳು ಮತ್ತು ಹುಕ್ಕೇರಿ ತಾಲೂಕಿನ ದಡ್ಡಿ, ಯಮಕನಮರಡಿ, ಉಳ್ಳೇಗಡ್ಡಿ ಖಾನಾಪುರ, ಬೆಲ್ಲದಬಾಗೇವಾಡಿ, ಕಣಗಲಿ ವಂಟಮುರಿ, ಹೆಬ್ಬಾಳ ಮತ್ತು ಪಾಚ್ಛಾಪುರ ಶಾಲೆಗಳು.

೬. **ಗೋಕಾಕ ಉಪಕೇಂದ್ರ**— ಗೋಕಾಕ ತಾಲೂಕಿನ ಎಲ್ಲ ಶಾಲೆಗಳು. (ಮರಾಠಿ ಶಾಲೆಗಳನ್ನು ಬಿಟ್ಟು) ಹುಕ್ಕೇರಿ ತಾಲೂಕಿನ ಘೋಡಗೇರಿ ಶಾಲೆ.

೭. **ಚಿಕ್ಕೋಡಿ ಕೇಂದ್ರ**— ಚಿಕ್ಕೋಡಿ ತಾಲೂಕಿನ ಎಲ್ಲ ಶಾಲೆಗಳು ಮತ್ತು ಹುಕ್ಕೇರಿ ತಾಲೂಕಿನ ಹುಕ್ಕೇರಿ, ನೇರಲಿ, ಯೆಲಿಮನೋಳಿ, ಬೆಳವಿ, ಶಿರಗಾಂವ, ಸಂಕೇಶ್ವರ ಮತ್ತು ನಿಡಸೋಸಿ ಶಾಲೆಗಳು. ಅಥಣಿ ತಾಲೂಕಿನ ಜೂಗುಳ ಶಾಲೆ.

೮. **ಅಥಣಿ ಉಪಕೇಂದ್ರ**— ಜೂಗುಳದ ಹೊರತಾಗಿ ಅಥಣಿ ತಾಲೂಕಿನ ಎಲ್ಲ ಶಾಲೆಗಳು ಮತ್ತು ಸಂಸ್ಥಾನದ ಹದ್ದಿನೊಳಗಿನ ಬನಹಟ್ಟಿ, ರಬಕವಿ, ಮತ್ತು ತೇರದಾಳ ಶಾಲೆಗಳು.

೯. **ಬೈಲಹೊಂಗಲ ಕೇಂದ್ರ**— ಬೈಲಹೊಂಗಲ ಮತ್ತು ಪರಸಗಡ ತಾಲೂಕುಗಳ ಎಲ್ಲ ಶಾಲೆಗಳು. (ಮರಾಠಿ ಶಾಲೆಗಳನ್ನು ಬಿಟ್ಟು)

೧೦. **ಬಾಗಿಲುಕೋಟೆ ಕೇಂದ್ರ**— ಬಾಗಿಲುಕೋಟೆ ಬದಾಮಿ ಮತ್ತು ಹುನಗುಂದ ತಾಲೂಕುಗಳ ಎಲ್ಲ ಶಾಲೆಗಳು (ಸಂಗಮ, ಧನ್ನೂರ ಮತ್ತು ಮುರೋಳ ಕನ್ನಡ ಗಂಡು ಮಕ್ಕಳ ಶಾಲೆಗಳು ಹೊರತಾಗಿ)

ಜಮಖಂಡಿ, ರಾಮದುರ್ಗ ಮತ್ತು ಮುಧೋಳ ಸಂಸ್ಥಾನಗಳ ಎಲ್ಲ ಶಾಲೆಗಳು (ಬನಹಟ್ಟಿ, ರಬಕವಿ, ಮತ್ತು ತೇರದಾಳ ಶಾಲೆಗಳು ಹೊರತಾಗಿ)

ಬಾಗೆವಾಡಿ ತಾಲೂಕಿನ ವಂದಾಲ, ನಿಡಗುಂದಿ, ಮುತ್ತಿಗಿ, ಕೊಲ್ಹಾರ, ಗೊಳಸಂಗಿ ಮತ್ತು ಚಿಮ್ಮಲಗಿ ಶಾಲೆಗಳು.

೧೧. **ಮುದ್ದೇಬಿಹಾಳ ಉಪಕೇಂದ್ರ**— ಮುದ್ದೇಬಿಹಾಳ ತಾಲೂಕಿನ ಎಲ್ಲ ಶಾಲೆಗಳು ಮತ್ತು ಬಾಗೆವಾಡಿ ತಾಲೂಕಿನ ಹೂವಿನ ಹಿಪ್ಪರಿಗಿ, ಸಾಲವಾಡಿಗಿ, ಮತ್ತು ವಡವಡಿಗಿ ಶಾಲೆಗಳು. ಹುನಗುಂದ ತಾಲೂಕಿನ ಸಂಗಮ, ಧನ್ನೂರ ಮತ್ತು ಮುರೋಳ ಶಾಲೆಗಳು.

೧೨. **ವಿಜಾಪುರ ಕೇಂದ್ರ**— ವಿಜಾಪುರ ಜಿಲ್ಲೆಯೊಳಗಿನ ಮೇಲೆ ಹೇಳಿದ ಶಾಲೆಗಳ ಹೊರತಾಗಿ ಉಳಿದ ಎಲ್ಲ ಶಾಲೆಗಳು. ಉರ್ದು ಶಾಲೆಗಳು ಮತ್ತು ಒಕ್ಕಲುತನದ ಒಲವಿನ ಶಾಲೆಗಳು. ಮತ್ತು ಮರಾಠಿ ಶಾಲೆಗಳು.

೧೩. **ಕಾರವಾರ ಕೇಂದ್ರ**— ಕಾರವಾರ ಮತ್ತು ಅಂಕೋಲಾ ತಾಲೂಕಿನ ಎಲ್ಲ ಶಾಲೆಗಳು.

೧೪. **ಕುಮಟಾ ಕೇಂದ್ರ**— ಕುಮಟಾ, ಹೊನ್ನಾವರ ತಾಲೂಕುಗಳ ಮತ್ತು ಭಟ್ಕಳ ಪೇಠೆಯ ಎಲ್ಲ ಶಾಲೆಗಳು.

೧೫. **ಸಿಸಿ ಉಪಕೇಂದ್ರ**— ಸಿಸಿ ಸಿದ್ದಾಪುರ ಮತ್ತು ಯಲ್ಲಾಪುರ ತಾಲೂಕುಗಳ ಮತ್ತು ಮುಂಡಗೋಡ ಪೇಠೆಯೊಳಗಿನ ಎಲ್ಲ ಶಾಲೆಗಳು.

ಹಳಿಯಾಳ ತಾಲೂಕಿನ ಶಾಲೆಗಳ ಉಮೇದುವಾರರು ಸಿಸಿ ಉಪಕೇಂದ್ರದಲ್ಲಾಗಲಿ ಧಾರವಾಡ ಕೇಂದ್ರದಲ್ಲಾಗಲಿ ಪರೀಕ್ಷೆಗೆ ಕೂಡ್ರಬಹುದು. ಒಮ್ಮೆ ಒಂದು ಕೇಂದ್ರವನ್ನು ಆರಿಸಿಕೊಂಡ ಬಳಿಕ ಅದನ್ನು ಬದಲಿಸಲಾಗದು.

ಕಾರವಾರ ಜಿಲ್ಲೆಯೊಳಗಿನ ಎಲ್ಲ ಮರಾಠಿ ಉಮೇದುವಾರರು ಹುಬ್ಬಳ್ಳಿ ಕೇಂದ್ರದಲ್ಲಾಗಲಿ ಬೆಳಗಾಂವಿ ಕೇಂದ್ರದಲ್ಲಾಗಲಿ ಪರೀಕ್ಷೆಗೆ ಕೂಡ್ರಬೇಕು.

ಸಾಂಗಲಿ ಸಂಸ್ಥಾನದ ಕುಚಿ ತಾಲೂಕಿನ ಉಮೇದುವಾರರು ಸಾತಾರಾ ಕೇಂದ್ರದಲ್ಲಿಯೂ ಗುಂಡಾಲ ತಾಲೂಕಿನ (ಔಂಧ ಸಂಸ್ಥಾನ) ಉಮೇದುವಾರರು ವಿಜಾಪುರ ಕೇಂದ್ರದಲ್ಲಿಯೂ ಪರೀಕ್ಷೆಗೆ ಕೂಡ್ರಬೇಕು.

ಗಂಡುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ ಎಪ್ರಿಲ್ ೧೯೪೫–ಕಾರ್ಯಕ್ರಮಗಳು

ತಾರೀಖು ವಾರ	ವೇಳೆ ಇಂದ	ವೇಳೆ ವರೆಗೆ	ಕನ್ನಡ ಮತ್ತು ಮರಾಠಿ	ಆಗ್ರಿಕಲ್ಚರಲ್ ಬಾಯ್ಸ್ ಕೋರ್ಸ	ಉರ್ದು
೯. ಸೋ.	೧೨	೧	ಉಮೇದುವಾರರ ಹಾಜರಿ ತೆಗೆದುಕೊಳ್ಳುವದು	ಉಮೇದುವಾರರ ಹಾಜರಿ ತೆಗೆದುಕೊಳ್ಳುವದು	ಉಮೇದುವಾರರ ಹಾಜರಿ ತೆಗೆದುಕೊಳ್ಳುವದು
	೧	೩	ನಿಬಂಧ ಅಥವಾ ರಿಪೋರ್ಟು ಪತ್ರಬರೆಹ (ಗುಣಗಳು ೧೦೦)	ನಿಬಂಧ ಅಥವಾ ರಿಪೋರ್ಟು ಪತ್ರಬರೆಹ (ಗುಣಗಳು ೧೦೦)	ನಿಬಂಧ * ಅಥವಾ ರಿಪೋರ್ಟು ಪತ್ರಬರೆಹ (ಗು. ೧೦೦)
	೪	೭	ಆರೋಗ್ಯವಿಜ್ಞಾನ ಅಥವಾ ಶಾರೀರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಏಳನೆಯ ಪುಸ್ತಕದಲ್ಲಿದ್ದಂತೆ ಶಾಸ್ತ್ರೀಯ ವಿಷಯ (ಗು. ೧೦೦)	ನೇಳೆ:- ೪ ರಿಂದ ೬ (ಅ) ಶಾಸ್ತ್ರೀಯ ವಿಷಯದ ಆರಂಭದ ಪಾಠಗಳು (ಗು. ೨೫) (ಬ) ಆರೋಗ್ಯಶಾಸ್ತ್ರ (ಗು. ೨೫)	ಆರೋಗ್ಯವಿಜ್ಞಾನ ಮತ್ತು ಶಾರೀರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಮತ್ತು ಶಾಸ್ತ್ರೀಯವಿಷಯದ ಆರಂಭದ ಪಾಠಗಳು (ಗು. ೧೦೦)
೧೦. ಮಂ.	೧೨	೩	ಅಂಕಗಣಿತ ಗುಣಗಳು ೧೦೦	ಅಂಕಗಣಿತ (ಗು ೫೦) ಮಹತ್ವಮಾಪನ (೨೫) ಜಮಾಖರ್ಚು (೨೫)	ಅಂಕಗಣಿತ (ಗು. ೧೦೦)
	೪	೭	ಇತಿಹಾಸ (ಗು. ೫೦) ಭೂಗೋಲ (ಗು. ೫೦)	ರಾಜ್ಯಕಾರ್ಯಭಾರ (೨೫) ಸಹಕಾರ (೨೫) ಭೂಗೋಲ (೫೦)	ಇತಿಹಾಸ (೫೦) ಭೂಗೋಲ (೫೦)
೧೧. ಬು.	೧೨	೩	ಭೂಮಿತಿ (ಗು. ೫೦) ಜಮಾಖರ್ಚು (ಗು. ೫೦)	ಒಕ್ಕಲುತನ (೩೫) ಪ್ರಕೃತಿ ವಿಜ್ಞಾನ (೧೦)	ಭೂಮಿತಿ (೫೦) ಜಮಾಖರ್ಚು (೫೦)
	೪	೭	ಪ್ರಾಂತಿಕ ಭಾಷೆ (ಅ) ೭೫. ಗು. (ಬ) ೨೫. ಗು.	ಪ್ರಾಂತಿಕ ಭಾಷೆ (ಅ ೭೫ + ಬ ೨೫)	ಪ್ರಾಂತಿಕಭಾಷೆ– ಕನ್ನಡ ಅಥವಾ ಮರಾಠಿ ಅಥವಾ ಉರ್ದು (ಅ ೭೫; ಬ ೨೫)
೧೨. ಗು.	೧೨	೩	....	+ ಪ್ರಾಯೋಗಿಕ ಪರೀಕ್ಷೆ (ಗು. ೫೦)	ಪ್ರಾಂತಿಕಭಾಷೆ– ಕನ್ನಡ ಅಥವಾ ಮರಾಠಿ ಅಥವಾ ಉರ್ದು (ಗು. ೫೦)
	೩	೫	....	+ ಪ್ರಾಯೋಗಿಕ ಪರೀಕ್ಷೆ (೩೫)	ಪತ್ರ ಅಥವಾ ರಿಪೋರ್ಟು ಬರೆಹ. = (ಗು. ೫೦)

ವಿ. ಸೂ. ಪರೀಕ್ಷೆಯ ಮೊದಲನೆಯ ದಿನ ಉಮೇದುವಾರರು ಪರೀಕ್ಷೆಯ ವೇಳೆಗಿಂತಲೂ ೧ ತಾಸು ಮುಂಚಿತವಾಗಿ ಪರೀಕ್ಷೆಯ ಸ್ಥಳದಲ್ಲಿ ತಪ್ಪದೆ ಹಾಜರ ಇರಲೇಬೇಕು.

* ಕನ್ನಡ-ಉರ್ದು ಅಥವಾ ಮರಾಠಿ-ಉರ್ದು ಉಮೇದುವಾರರಿಗೆ ಕನ್ನಡ ಅಥವಾ ಮರಾಠಿಯಲ್ಲಿ; ಉರ್ದು-ಕನ್ನಡ; ಉರ್ದು-ಮರಾಠಿ ಉಮೇದುವಾರರಿಗೆ ಉರ್ದುವಿನಲ್ಲಿ.

\+ ಸ್ಥಾನಿಕ ಕಮೀಟಿಯ ಪ್ರೆಸಿಡೆಂಟರು ತಮ್ಮ ಜಿಲ್ಲೆಯ ಆಗ್ರಿಕಲ್ಚರಲ್ ಓವ್ಹರಸಿಯರರ ಸಲಹೆಯಿಂದ ವೇಳೆಯನ್ನು ಗೊತ್ತುಪಡಿಸುವರು.

= ಕನ್ನಡ ಉರ್ದು ಅಥವಾ ಮರಾಠಿ ಉರ್ದು ಉಮೇದುವಾರರಿಗೆ ಉರ್ದುವಿನಲ್ಲಿ; ಉರ್ದು ಕನ್ನಡ ಅಥವಾ ಉರ್ದು ಮರಾಠಿ ಉಮೇದುವಾರರಿಗೆ ಕನ್ನಡದಲ್ಲಿ ಅಥವಾ ಮರಾಠಿಯಲ್ಲಿ.

ಲೇಖನಗಳ ಮುಖ್ಯಾಂಶಗಳು

ಮಧ್ಯಕಾಲದ ಭಾರತೀಯ ಶಿಕ್ಷಣ :– (ಶ್ರೀ. ಡ್ಯೆ. ಜಹಾಗಿರದಾರ II ಟ್ರೇ. ಕಾ. ಧಾರವಾಡ.)

ವಿದ್ಯಾಭಿವೃದ್ಧಿಯು ಪ್ರಾಚೀನ ಭಾರತದ ಒಂದು ವೈಶಿಷ್ಟ್ಯವಾಗಿದೆ. ಬ್ರಾಹ್ಮಣರು ಜೈನರು ಬೌದ್ಧರು ಮೊದಲಾದವರು ಜ್ಞಾನ ಸಂಪಾದನೆಯಲ್ಲಿಯೇ ತತ್ಪರರಾಗಿರುತ್ತಿದ್ದರು. ನಾಲಂದ ವಿದ್ಯಾಲಯಕ್ಕೆ ಚೀನ, ಜಪಾನ ತಿಬೇಟಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ಮುಸಲ್ಮಾನರ ಆಳಿಕೆಯಲ್ಲಿ ಭಾರತೀಯ ಸಂಸ್ಕೃತಿಯು ಏಳ್ಗೆಯನ್ನು ಹೊಂದಲಿಲ್ಲ. ಆ ಕಾಲದಲ್ಲಿ ಶಿಕ್ಷಣದ ಗುರಿಯು ಯಾವದೂ ಇರಲಿಲ್ಲ. ಕುರಾನ ಮತ್ತು ಮಂತ್ರಗಳನ್ನು ಪಾಠಮಾಡುವದರಲ್ಲಿಯೇ ಬಹಳ ಶಕ್ತಿಯು ವೆಚ್ಚವಾಗುತ್ತಿತ್ತು. ಗಿಝುನಿ ಮಹಮ್ಮದ, ಬಲ್ಬನ್, ಫಿರೋಜಶಹ ತಗಲಖರು ವಿದ್ಯಾಪಕ್ಷಪಾತಿಗಳಾಗಿದ್ದರು. ಅವರಿಂದ ಮುಸಲ್ಮಾನ ಸಂಸ್ಕೃತಿಯು ಬೆಳೆಯಿತು. ಮುಸಲ್ಮಾನರು ಇಲ್ಲಿಯೇ ನೆಲಿಸಿ ಬಹುಕಾಲವಾದುದರಿಂದ ಹಿಂದು ಮುಸಲ್ಮಾನರ ಸಂಪರ್ಕವು ಹೆಚ್ಚಾಗಿ ಬೆಳೆಯತೊಡಗಿತು. ಹಿಂದಿ ಉರ್ದು ಭಾಷೆಗಳ ಪ್ರಚಾರವು ಜೆನ್ನಾಗಿ ಆಯಿತು.

ನಮ್ಮ ಶಿಕ್ಷಣದಲ್ಲಿ ಕ್ರಾಂತಿ— (ಶ್ರೀ. ಸ್ವಾ. ಭೀ. ಕದರಮಂಡಲಗಿ, ದೇವೀಹೊಸೂರು)

ಇಂದು ಜಗತ್ತಿನಲ್ಲಿ ಎಲ್ಲಿ ನೋಡಿದಲ್ಲಿ ಕ್ರಾಂತಿಯು ಕಾಣುತ್ತದೆ. 'ವಿಶ್ವವೇಧವು' ಕೊನೆಯ ಅಂಕಿಗೆ ಬಂದಿದೆ. ಹಿಂದುಸ್ತಾನದ ಅಭ್ಯುದಯಕ್ಕಾಗಿ ಸರಕಾರದವರು ಹಲವು ಯೋಜನೆಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಶಿಕ್ಷಣ ಸುಧಾರಣೆಯೇ ನಾಡಿನ ಏಳ್ಗೆಯ ಪ್ರಥಮ ಸೋಪಾನವೆಂದು ತಿಳಿಯಲಾಗಿದೆ. ಈಗಿನ ನಮ್ಮ ಶಿಕ್ಷಣದಲ್ಲಿ ಬೌದ್ಧಿಕ ಬೆಳೆವಣಿಗೆಗೆ ಬಹಳ ಮಹತ್ವವನ್ನು ಕೊಡಲಾಗಿದೆ. ಹೀಗಿದ್ದರೂ ಜಗತ್ತಿನ ಜನವಸತಿಯಲ್ಲಿ ಐದರಲ್ಲೊಂದು ಪಾಲು ಜನರುಳ್ಳ ಹಿಂದುಸ್ತಾನದಲ್ಲಿ ಸಾಕ್ಷರತೆಯು ಕೂಡ ತೀರಕಡಿಮೆಯಾಗಿದೆ. ಔದ್ಯೋಗಿಕ ಶಿಕ್ಷಣಬೇಕೆಂಬುವದೇ ಈಗಿನ ಜನಾಭಿಪ್ರಾಯವು. ಮಕ್ಕಳು ಒಮ್ಮೆಲೆ ಉದ್ಯೋಗ ಮಾಡಲಾರರು. ಅವರಲ್ಲಿ ಉದ್ಯೋಗದ ಒಲವನ್ನು ಹುಟ್ಟಿಸುವದು ಶಿಕ್ಷಕರ ಕೆಲಸ. ಈಗ ವರ್ಧಾ ಶಿಕ್ಷಣ ಯೋಜನೆಯಲ್ಲಿ ಹಳ್ಳಿಗಳಲ್ಲಿ ಅವರವರ ಉದ್ಯೋಗದ ಮುಖಾಂತರ ಶಿಕ್ಷಣ ಕೊಡುವದನ್ನು ಕೈಕೊಳ್ಳಲಾಗಿದೆ. ಒಕ್ಕಲತನದ ಒಲವಿನ ಶಾಲೆಗಳೂ ಬೇರೆ ಇವೆ. ಇವೆಲ್ಲವೂ ಪ್ರಾಯೋಗಿಕ ಶಾಲೆಗಳಾಗಲಿ. ಶಿಕ್ಷಕರು ಶಾಂತವೃತ್ತಿಯಿಂದ ಕಲಿಸುತ್ತಿರಲಿ.

ಪ್ರಾಥಮಿಕ ಶಿಕ್ಷಕರ ಸಮ್ಮೇಲನಗಳು— (ಶ್ರೀ. ಆ. ಸೋ. ಸಜ್ಜನರ ಬೆಳವಣಕಿ)

ನಮ್ಮ ಮಕ್ಕಳಿಗೆ ಸರಿಯಾದ ಶಿಕ್ಷಣವು ಬೇಕು. ಶಿಕ್ಷಣವು ಸರಿಯಾಗಬೇಕಾದರೆ ಶಿಕ್ಷಕರಲ್ಲಿ ವಿಚಾರವಿನಿಮಯವಾಗಬೇಕು. ವಿಚಾರವಿನಿಮಯಕ್ಕಾಗಿ ಸಮ್ಮೇಲನಗಳು ಮಾರ್ಗದರ್ಶಿಗಳಾಗಿ ಶಿಕ್ಷಣದ ನಿಜವಾದ ತತ್ವಗಳನ್ನು ಪ್ರಸಾರಮಾಡಬೇಕಾದರೆ ಸಾಕಷ್ಟು ಚರ್ಚೆಯೂ ತಕ್ಕ ನಿರ್ಣಯವೂ ಅವಶ್ಯಕವಾಗಿವೆ. ಶೋರಿಕೆಗೆ ಮಾತ್ರ ಇಲ್ಲವೆ ಅಧಿಕಾರಿಗಳ ಕಾಟ ತಪ್ಪಿಸುವದಕ್ಕೆ ಸಮ್ಮೇಲನಗಳು ಜರುಗಿದರೆ ಏನು ಫಲ? ಇದರಿಂದ ಪ್ರಾಥಮಿಕ ಶಿಕ್ಷಣವು ಉದ್ಧಾರಿಸಲಾರದು.

ಪ್ರಾ. ಶಾ. ಪ್ರ. ಪ. ಪರೀಕ್ಷೆಯು ಉಮೇದುವಾರರಲ್ಲಿ ಪ್ರಗತಿಯಾಗಬಹುದೋ!

(ಶ್ರೀ. ಅ. ಸೋ. ಸಜ್ಜನರ, ಬೆಳವಣಕಿ)

ಇತ್ತೀಚಿನ ಹಲವುವರ್ಷಗಳ ಈ ಪರೀಕ್ಷೆಯ ಪರಿಣಾಮವನ್ನು ನೋಡಿದರೆ ವಿಷಾದವಾಗುತ್ತಲಿದೆ. ವಿದ್ಯಾಸಂಗ್ರಹದಿಂದ ಆತ್ಮೋನ್ನತಿಯಾಗಬೇಕೆಂಬ ಉಚ್ಚಧ್ಯೇಯವು ಈ ಉಮೇದುವಾರರಲ್ಲಿ ಕಡಿಮೆ. ಜೀವನವನ್ನು ಸಾಗಿಸಲು ಕೈಕೊಳ್ಳುವ ನವಕರಿಯ ಇಲ್ಲವೆ ಹೋರೆಯ ಆಶೆಯಿಂದ ಬಂದಿರುವವರೇ ಹೆಚ್ಚು. ಮೊದಲಿನಂತೆ ಈ ಪರೀಕ್ಷೆ ಪಾಸಾದವರಿಗೆ ಮುಲ್ಕೀ ಖಾತೆಯಲ್ಲಿ ನವಕರಿ ಸಿಗುವದಿಲ್ಲ. ಉಳಿದ ಖಾತೆಗಳಲ್ಲಿ ಇಂಗ್ಲೀಷ ಕಲಿತವರನ್ನೆ ತಕ್ಕೊಳ್ಳುವರು. ಶಿಕ್ಷಕವೃತ್ತಿಯಲ್ಲಿ ಸಹ ೧೦೦ಕ್ಕೆ ೬೦ಕ್ಕಿಂತ ಹೆಚ್ಚು ಗುಣ ಪಡೆದವರಿಗೆ ಕೂಡ ನವಕರಿ ಸಿಗುವದು ದುರ್ಲಭ. ಟ್ರೇಂಡರು ಸಹ ಬದಲೀ ಕೆಲಸಕ್ಕೆ ಸಿಗುತ್ತಲಿದ್ದಾರೆ. ಪಾಸಾದವರು ಗಾವಠಿ ಶಾಲೆಗಳಲ್ಲಿ ನಾಲ್ಕೆಂಟು ವರ್ಷ ದುಡಿದು ನಂತರ ಟ್ರೇನಿಂಗ ಹೊಂದಬೇಕಾದರೆ ಸಾವಿರ ರೂಪಾಯಿಗಳು ಬೇಕು. ಅನಂತರವಾದರೂ ಬೋರ್ಡುಗಳಲ್ಲಿ ನವಕರಿ ಸಿಗುವದು ಕಠಿಣ. ಸಿಕ್ಕರೂ ಸಂಬಳವು ವೆಚ್ಚಕ್ಕೆ ಸಾಲುವದಿಲ್ಲ. ಪೆನ್‌ಶನ್ನು ಇಲ್ಲ. ಪ್ರಾವ್ಹಿಡೆಂಟ ಫಂಡು ತೀರ ಕಡಿಮೆಯಾಗುತ್ತದೆ. ಹೀಗೆ ಶಿಕ್ಷಕವೃತ್ತಿಯೂ ಅವರಿಗೆ ಆಕರ್ಷಕವಾಗಿಲ್ಲ. ಇಂಗ್ಲೀಷ ಶಾಲೆಯವರು ಈ ಪರೀಕ್ಷೆ ಪಾಸಾದವರಿಗೂ ನಾಪಾಸಾದವರಿಗೂ ೧ ವರ್ಷದಲ್ಲಿ ಮೂರು ಇಯತ್ತೆಗಳನ್ನು ಕಲಿಸುತ್ತಾರೆ. ವ್ಯಾಪಾರಸ್ಥರು ತಮ್ಮಲ್ಲಿ ತೆಗೆದುಕೊಳ್ಳುವ ಉಮೇದ್ವಾರಿಕೆಯಲ್ಲಿ ಈ ಪರೀಕ್ಷೆ ಪಾಸಾದವರಲ್ಲಿಯೂ ನಾಪಾಸಾದವರಲ್ಲಿಯೂ ಭೇದವೆಣಿಸುವದಿಲ್ಲ. ಪಾಲಕರು ಕೂಡ ಪರೀಕ್ಷೆಯ ಮಹತ್ವವನ್ನು ಸಾಕಷ್ಟು ಗಮನಿಸುವದಿಲ್ಲ. ಹೀಗಾಗಿ ಉಮೇದುವಾರರಲ್ಲಿ ಸ್ಪರ್ಧೆ ಪ್ರೋತ್ಸಾಹಗಳು ಇಲ್ಲವೇ ಇಲ್ಲ. ಪುಸ್ತಕಗಳು, ಪರೀಕ್ಷೆಯ ವಿಷಯಗಳು ಪ್ರಶ್ನೆಗಳು, ಉಮೇದುವಾರರ ವಯಃ ಪರಿಸ್ಥಿತಿಗೆ ತುಂಬ ಹೊಂದಿಕೆಯಾಗುವದಿಲ್ಲ ಎಂಬ ದೂರು ಬೇರೆ. ಈರೀತಿ ಬಾಲಕ-ಪಾಲಕ ಪರೀಕ್ಷೆಗಳ ತಿಕ್ಕಾಟದಲ್ಲಿ ಶಿಕ್ಷಕರು ಸಿಕ್ಕುಬಿದ್ದು ಗಾಸಿಹೊಂದುತ್ತಲಿದ್ದಾರೆ. ಹೆಚ್ಚಿನ ಫಲಪ್ರಾಪ್ತಿಗೆ ಯಾವ ಮಾರ್ಗಗಳಿವೆ?

ನಾಗರಪಂಚಮಿ— (ಶ್ರೀ. ರಾ. ತ. ಮಂಡಪ, ಬ್ಯಾಡಗಿ) ಬಾಲಕರ ವರ್ಗದ ಸಲುವಾಗಿ.

ನಾಗರ ಪಂಚಮಿ ಬಂದಿಹುದು| ನಾಗನ ಪೂಜೆಯ ಮಾಡುವದು ||೧||
ಕೊಬ್ಬರಿ ಬಟ್ಟಲ ಮಾಡಿಸುವೆ| ಉಬ್ಬುತ ಗಿರಿಗಿರಿ ತಿರುಗಿಸುವೆ ||೨||
ತಿರುಗುವ ತಿರುಗಣಿ ಜೋಕಾಲಿ| ಮರದಲಿ ಕಟ್ಟಿದ ಜೋಕಾಲಿ ||೩||
ಮನೆಯಲಿ ಕಟ್ಟಿದ ಜೋಕಾಲಿ| ಮನದಣಿ ಜೀಕುವೆ ಜೋಕಾಲಿ ||೪||
ತುಪ್ಪವ ಹಚ್ಚಿದ ಅಳ್ಳಿಟ್ಟು| ಚಪ್ಪರಿಸುವೆನ್ನೆ ತಂಬಿಟ್ಟು ||೫||

ಚಿತ್ತೂರ ತಾಯಿ (ಶ್ರೀ. ವೆಂಕಟರಮಣ ರಾ. ತೊರ್ಕೆ, ಸಿದ್ದಾಪುರ)

ಚಿತ್ತೂರ ತಾಯಿ| ಚಿತೆಯ ಸೇರೆ ಸಿದ್ಧಳಾದಳು || ಚಿತ್ತೂರ ತಾಯಿ| ಚಿತೆಯ ಸೇರೆ ಸಿದ್ಧಳಾದಳು ||ಪಲ್ಲ||

ಚಿತೆಯ ಸೇರೆ ಸಿದ್ಧಳಾಗಿ| ಉಕ್ಕಿಬರುವ ಅಳುವ ನುಂಗಿ ಹುಚ್ಚಳಂತೆ ಕುಳಿತುಬಿಟ್ಟಳು|
ಗುಡುಗು ಮಿಂಚಿ| ದಂತೆ ಬಾಲೆ ಕಣ್ಣ ತೆರೆದಳು ||೧||

ನನ್ನನಾಡು ರನ್ನಬೀಡು| ಹೊನ್ನ ಹೊಳೆಯು ಹರಿದನಾಡು| ಚಣದಿ ಕನಸಿನಂತೆ ಅಡಗಿತೆ|
ಮುತ್ತಿನಂಥ ನನ್ನ ವಂಶ ಒಡೆದು ಹೋಯಿತೆ ||೨||

ಕಣ್ಣಿನಿಂದ ಕಿಡಿಯ ಬಿಡುತ | ಗಡನೆ ಮೇಲಕೆದ್ದು ನಿಂತು | ದುರುಳ ಖಿಲಜಿಯನ್ನುಜರೆದಳು |
ದೇವ ನೀನೆ | ಗತಿಯು ಎಂದು ಮನದಿ ನೆನೆದಳು ॥ ೩ ॥
ನೀಚ ಖಿಲಜಿ ನನ್ನ ಬಯಸಿ | ನಾನು ಸಿಗುವೆನೆಂದು ಎಳಸಿ | ನನ್ನ ನಾಡ ಗೆಲ್ಲ ಬಂದನೆ |
ನೀಚತನದಿ | ಹೆಮ್ಮೆಯಿಂದ ಹಿಡಿಯ ಬಂದನೆ ॥ ೪ ॥
ಖಿಲಜಿ ಸಿರಿಯು ಎನಿತೆ ಇರಲಿ | ನನ್ನ ಪತಿಯು ನನಗೆ ಇರಲಿ | ನನ್ನ ಕೂದಲವಗೆ ಸಿಗುವುದೆ |
ಪಾತಿವ್ರತ್ಯ | ಮಣ್ಣುಗೂಡಿ ನಾಶವಾದುದೆ ॥ ೫ ॥
ಎಂದು ಹಲುಬಿ ನಲ್ಲ ನೆಡೆಗೆ | ಬಂದು ಕಡೆಯ ಮುದ್ದ ನಿತ್ತು | ಪತಿಯ ಅಜ್ಞೆ ಪಡೆದು ನಡೆದಳು |
ಮುಂದೆ ಮುಂದೆ | ಮೂಕಳಂತೆ ಹೊರಟು ನಡೆದಳು ॥ ೬ ॥
ಕಾವಿ ಬಟ್ಟೆಯುಟ್ಟುಕೊಂಡು | ಕೇಶರಾಶಿ ಬಿಚ್ಚಿಕೊಂಡು | ತನ್ನ ಮುಕ್ತಿ ಮಾರ್ಗಹಿಡಿದಳು |
ವಾಯುವೇಗ | ದಿಂದ ಬೀಸಿಸಾಗಿ ನಡೆದಳು ॥ ೭ ॥
ಸ್ತ್ರೀಯರೆಲ್ಲರೊಂದುಗೂಡಿ | ತಮ್ಮ ದಾನ ಧರ್ಮ ಮುಗಿಸಿ | ದೇವಿಯೊಡನೆ ಎದ್ದು ನಡೆದರು |
ತಮ್ಮ ಮುಕ್ತಿ | ದಾರಿ ಹಿಡಿದು ಧುಮುಕಿ ನಡೆದರು ॥ ೮ ॥
ಅಗ್ನಿಕುಂಡ ಬಳಸಿ ಬಂದು | ದೇವ ನಮ್ಮ ರಕ್ಷಿಸೆಂದು | ಕಿಚ್ಚಿನೊಳಗೆ ಹಾರಿಬಿದ್ದರು |
ಸತಿಗೆ ದೈವ | ಪತಿಯೆ ಎಂದು ಸಾರಿ ಕರೆದರು ॥ ೯ ॥

ಬರದ-ಸಿರಿಯು — (ಶ್ರೀ. ಪ. ಏ. ಶೆಟ್ಟಿ, ಬೆಳಂದಾರ)

ಬಂತು ಬಂತು ಬರದ ಸಿರಿಯು! | ಭರದೆ ಗಾಳಿಯಂತೆ ಬೀಸಿ
ಜನದ ಒಡಲ ಕಡಿಸಿ ಸುಡಿಸಿ | ಜಗದ ತುಂಬ ತಿರುಗುತಿರುವದು.

ಎನ್ನ ಶಾಂತಿ — (ಶ್ರೀ. ಗೌಡರ ಸಿದ್ದನಗೌಡ ಕ. ಎ. ಬೋ. ಟ್ರೇ. ಕಾ. ಧಾರವಾಡ)

ಎನ್ನ ಶಾಂತಿ! ಚೆನ್ನಶಾಂತಿ | ಇನ್ನುತನಕ ನನ್ನ ಶಾಂತಿ ॥ ಪಲ್ಲ ॥
ಎಳೆಯತನದಿ ಗೆಳತಿಯಾಗಿ | ಸಲಿಗೆಯಿಂದ ಸ್ನೇಹ ಬೆಳಸಿ |
ಗೆಲವ ಕಂಡು ಜಿಗಿದುಹಾರಿ | ಒಲವ ಕಳೆಯ ಲೆಳಸು ತಿರುವಿ ॥ ೧ ॥
ಬಡವನೆಂದು ಮಿಡುಕಲಿಲ್ಲ | ಧನಿಕನೆಂದು ತಣಿಯಲಿಲ್ಲ |
ಬಾಲ್ಯದಲ್ಲಿ ದಾವ್ವದಿಲ್ಲ | ಕೂಡಿಬರಲು ಮರೆಯಲಿಲ್ಲ ॥ ೨ ॥

ಕಾಲಚಕ್ರ — (ಶ್ರೀ. ದೇ. ರಾ. ಅಣ್ಣಿಗೇರಿ, ಇಂಗ್ಲೀಷ ಸ್ಕೂಲ್ ರೋಣ)

ಕಾಲಚಕ್ರ ತಿರುಗುತಲಿದೆ! ಕಾಲಚಕ್ರ ॥ ಪಲ್ಲ ॥
ತಿರುಗಿದೆ ತಿರುಗುತಲಿದೆ ಕಾಲವೆಂಬ ಚಕ್ರ |
ಸರಿದಿವೆ ಸರಿಯುತಲಿವೆ ಸುಖದ ದಿನ ವಿಚಿತ್ರ!

ಕೆಳಗೆ ಬರೆದ ಬರೆಹಗಳು ತಲುಪಿವೆ.

೧ ನಮ್ಮ ಕನ್ನಡನಾಡಿದು — (ಪದ್ಯ) ಶ್ರೀ. ನಾ. ಶಂ. ಹೆಗಡೆ, ಮಾಳಕೋಡ
೨ ಪ್ರಾರ್ಥನಾ ಪದ್ಯ — ಶ್ರೀ. ಬಿ. ಎಮ್. ಕಿತ್ತೂರ, ಹುಲ್ಲೂರು
೩ ಸಿರಿಗನ್ನಡದ ಸೊಂಪು — ಶ್ರೀ. ಗು. ಫ. ತುಪ್ಪದ, ಕದರಮಂಡಲಗಿ
೪ ಪ್ರಾಚೀನ ಅರ್ವಾಚೀನ ಯುದ್ಧಗಳು — ಗು. ಗ. ಸಾವಂತ

— ಸಂ.

ಪತ್ರಗಳ ಮುಖ್ಯಾಂಶಗಳು

ಹಿರಿಯೂ ಬಾಗೇವಾಡಿ:— (ಬೆಳಗಾವಿ ಜಿಲ್ಲೆ) ಶಾಲೆಯಲ್ಲಿ ಕಳೆದ ಡಿಶಂಬರ ತಿಂಗಳಲ್ಲಿ ಡಿ. ಎಸ್. ಬಿ. ಮೆಂಬರರಾದ ಶ್ರೀ. ಎಸ್. ಎಸ್. ಪಾಟೀಲ ಅವರ ಹಿರಿಯತನದಲ್ಲಿ ಶಾರೀರಿಕ ಶಿಕ್ಷಣದಿನವನ್ನು ಆಚರಿಸಲಾಯಿತು. ಅಧ್ಯಕ್ಷರು ತಮ್ಮ ಸ್ವಂತ ಖರ್ಚಿನಿಂದ ತರಿಸಿದ ೭ ಬೆಳ್ಳಿಯ ಪದಕಗಳನ್ನು ಬಾಲಕರಿಗೆ ಬಹುಮಾನವಾಗಿ ಕೊಟ್ಟರು.

—ಶ್ರೀ. ಸ. ಡಿ. ದುರ್ಗಣ್ಣವರ ಅ. ಮಾ.

ರಟ್ಟೀಹಳ್ಳಿ:— ಶಾಲೆಯ ಬಾಲಕರು ಜನವರಿಯಲ್ಲಿ ಜರುಗಿದ ಹಿರಿಯಕೆರೂರ ತಾಲೂಕ ಪಂದ್ಯಾಟದಲ್ಲಿ ಸಾಂಘಿಕ ಹಾಗು ವೈಯಕ್ತಿಕ ಮೆಚ್ಚುಗೆಗಳನ್ನು ಪಡೆದರು.

—ಶ್ರೀ. ಬಿ. ವಿ. ಇಂಗಳಗೊಂದಿ ಹೆ. ಮಾ.

ಲಕ್ಕುಂಡಿ:— ಶಾಲೆಯಲ್ಲಿ ಕಳೆದ ಡಿಶಂಬರ ತಿಂಗಳಲ್ಲಿ ಶಿ. ಶಿ. ಸಮ್ಮೇಲನವಾಯಿತು. ಊರ ಹಿರಿಯರು ಕೂಡಿದ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ೨ ದಿವಸ ಅನ್ನದಾನವಾಡಿದರು. ಅನೇಕ ಅಧಿಕಾರಿಗಳು ಆಗಮಿಸಿದ್ದರು. ಪಾಠ ಚರ್ಚೆಗಳು ನಡೆದವು. ಶಿಕ್ಷಣೋಪಯುಕ್ತ ಉಪಕರಣಗಳು ಚೆನ್ನಾಗಿದ್ದವು. —ಶ್ರೀ. ಜಿ. ಎಚ್. ಹೊಸೂರ ತಾಲೂಕ ಮಾಸ್ತರ

ಕಟಿಗೇರಿ:— (ವಿಜಾಪುರ ಜಿಲ್ಲೆ) ಶಾಲೆಯಲ್ಲಿ ಕಳೆದ ಜನವರಿ ತಿಂಗಳಲ್ಲಿ ಶಿ. ಶಿ. ಸಮ್ಮೇಲನವಾಯಿತು. ಗಣಿಯ ಆ. ಡಿ. ಅವರಾದ ಶ್ರೀ. ಠಾಕೂರ ಅವರು ಹಿರಿಯರಾಗಿದ್ದರು. ಪಾಠ ಚರ್ಚೆಗಳು ಸರಿಯಾಗಿ ಆದವು. ಶಿಸ್ತು, ಪ್ರೌಢಶಿಕ್ಷಣ, ಪಳ್ಳಿಗಳ ವಾಚನಾಲಯ ಟೆಕ್ನಿಕಲ್ ಶಿಕ್ಷಣಗಳ ಉಪಯುಕ್ತತೆಗಳನ್ನು ಹಿರಿಯರು ಚೆನ್ನಾಗಿ ತಿಳಿಸಿದರು. ಶ್ರೀ. ಜಿ. ಸಿ. ಕಮತಗಿ ಅವರು ತಯಾರಿಸಿದ ಮಾಡೆಲ್ಲುಗಳು ಚಿತ್ತಾಕರ್ಷಕವಾಗಿದ್ದವು.

—ಶ್ರೀ. ಆರ್. ಎನ್. ಕುಲಕರ್ಣಿ ಹೆ. ಮಾ.

ರೋಣ:— ತಾಲೂಕ ಪ್ರಾಥಮಿಕ ಶಾಲೆಗಳ ಪಂದ್ಯಾಟವು ಜನವರಿ ತಿಂಗಳಲ್ಲಿ ಡಿ. ಎ. ಇ. ಅವರಾದ ಶ್ರೀ. ನಾಡಗೀರರಾಯರ ಹಿರಿಯತನದಲ್ಲಿ ಯಶಸ್ವಿಯಾಗಿ ಕೊನೆಗಂಡಿತು. ೩೫ ಶಾಲೆಗಳ ಶಿಕ್ಷಕರು-ಶಿಕ್ಷಕಿಯರೂ, ಬಾಲ-ಬಾಲಿಕೆಯರೂ, ಅಧಿಕಾರಿಗಳೂ, ಇಂಗ್ಲಿಷ ಶಾಲೆಯ ಶಿಕ್ಷಕರೂ ಮಿಲಿತರಾಗಿದ್ದರು. ಪೋಸ್ಟ ಅಧಿಕಾರಿಗಳೂ ಬಂದಿದ್ದರು. ಬೆಳ್ಳಿಯಗದೆ, ಬಟ್ಟಲುಮೂರ್ತಿ, ಪದಕಗಳು ಇವನ್ನು ಮೆಚ್ಚುಗೆಯಾಗಿ ಬಾಲ-ಬಾಲಿಕೆಯರಿಗೆ ಕೊಡಲಾಯಿತು. ಏಕಾಂಕ ನಾಟಕವು ಸೊಗಸಾಗಿ ಸಾಗಿತು. ಪರಊರಿನವರಿಗಾಗಿ ಊಟದ ಅನುಕೂಲತೆಯನ್ನು ಮಾಡಿತ್ತು. —ಸ್ಥಳಿಕ ಅಧ್ಯಕ್ಷ ಪಂದ್ಯಾಟ ಕಮೀಟಿ ರೋಣ

ಕೋಟಲುಮಚಗಿ:— ಶಾಲೆಯಲ್ಲಿ ಜನವರಿ ತಿಂಗಳಲ್ಲಿ ಶ್ರೀಮಾನ್ ಜೆ. ಆರ್. ಭಂಡಿವಾಡರಾಯರ ಹಿರಿಯತನದಲ್ಲಿ ಶಿ. ಶಿ. ಸಮ್ಮೇಲನವಾಯಿತು. ಅತಿಥಿಗಳ ಭೋಜನ ವ್ಯವಸ್ಥೆಯನ್ನು ಊರ ಹಿರಿಯರು ಮಾಡಿದ್ದರು. ಪಾಠಗಳು, ಶೈಕ್ಷಣಿಕ ಅನುಭವಗಳ ವಿವರಣೆಗಳು ಚೆನ್ನಾಗಿ ಸಾಗಿದವು. —ಶ್ರೀ. ಲ. ವಿ. ಘಾಟಕ ಕಾರ್ಯದರ್ಶಿಗಳು

ಕೊಡಚವಾಡ:— (ಖಾನಾಪುರ ತಾಲೂಕು) ಶಾಲೆಯಲ್ಲಿ ಶ್ರೀ. ಆರ್. ಕೆ. ಮೆಣಶಿ ಅವರ ಅಧ್ಯಕ್ಷತೆಯಲ್ಲಿ ಜನವರಿ ತಿಂಗಳಲ್ಲಿ ಶಿ. ಶಿ. ಸಮ್ಮೇಲನವಾಯಿತು. ಸಭೆಗೆ ಮುಂಚಿತ

ಶಾಲೆಗಳ ಶಿಕ್ಷಕರೂ, ಸಮಿತಿ ಶಾಲೆಗಳ ಸುಪರವಾಯಿಝರರೂ, ನಿವೃತ್ತ ಶಿಕ್ಷಕರೂ ಆಗಮಿಸಿದ್ದರು. ನಿಬಂಧವಾಚನ ಮಾದರಿಯ ಪಾಠಗಳು ಸರಿಯಾಗಿ ಸಾಗಿದವು.

—ಶ್ರೀ. ಲ. ಮ. ಪಾಟೀಲ, ಆ. ಮಾ.

ಯಾಳನಾರ:— (ವಿಜಾಪುರ ಜಿಲ್ಲೆ) ಶಾಲೆಯ ಹೆ. ಮಾ. ಶ್ರೀ. ಸಾ. ಮ. ಚಳ್ಳಗಿ ಅವರು ನಿವೃತ್ತರಾದರು. ಇವರು ವಿಜಾಪುರ ಜಿಲ್ಲೆಯಲ್ಲಿ ಕೀರ್ತಿವೆತ್ತ ಶಿಕ್ಷಕರು. ಇವರ ಶಿಷ್ಯರು ಹಾಗು ಮಿತ್ರರು ಕೂಡಿ ವಿಜಾಪುರದ ವಕೀಲರಾದ ಶ್ರೀ. ಗು. ಸಿ. ಸಜ್ಜನ, ಅವರ ಹಿರಿಯತನದಲ್ಲಿ ೫-೨-೪೫ನೆಯ ದಿನ ಸತ್ಕಾರ ಸಮಾರಂಭವನ್ನು ನೆರವೇರಿಸಿದರು. ಇದೇ ಸಮಯದಲ್ಲಿ ಹೆಣ್ಣುಮಕ್ಕಳ ಶಾಲೆಗಾಗಿ ೧೬೦ ರೂ. ಗಳನ್ನು ಕೂಡಿಸಲಾಯಿತು.

—ಶ್ರೀ. ಮ. ಮ. ಕುಂಬಾರ, ಆ. ಹೆಡ್ ಮಾಸ್ತರ

ಜಾಲೀಹಾಳ:— (ವಿಜಾಪುರ ಜಿಲ್ಲೆ) ಶಾಲೆಯಲ್ಲಿ ಈ ಭಾಗದ ಶಿ. ಶಿ. ಸಮ್ಮೇಲನವು ಮೆ| ಠಾಕೂರ ಸಾಹೇಬರ ಹಿರಿಯತನದಲ್ಲಿ ೨೩-೧-೪೫ನೆಯ ದಿವಸ ಆರಂಭವಾಯಿತು. ೩೫ ಶಿಕ್ಷಕರು, ೪೦೦ ವಿದ್ಯಾರ್ಥಿಗಳು, ಅನೇಕ ಶಿಕ್ಷಣಾಭಿಮಾನಿಗಳು ಇವರಿಂದ ಸಭಾಸ್ಥಳವು ಕಿಕ್ಕಿರಿದುಹೋಗಿತ್ತು. ಶಾರೀರಿಕ ಚಟುವಟಿಕೆ, ಪಾಠ, ಭಾಷಣೆಗಳಾದ ನಂತರ ಅಧ್ಯಕ್ಷರು ಶಿಕ್ಷಕರ ಕುಂದುಕೊರತೆಗಳು, ಟೆಕ್ನಿಕಲ್ ಶಿಕ್ಷಣ ಮೊದಲಾದವುಗಳ ಬಗ್ಗೆ ಸುಶ್ರಾವ್ಯ ಭಾಷಣಮಾಡಿದರು. ಶ್ರೀಮಂತ ಶಿವನಗೌಡರು ಪರಊರಿಂದ ಬಂದವರಿಗೆ ಪುಕ್ಕಟೆ ಊಟದ ವ್ಯವಸ್ಥೆಯನ್ನು ಮಾಡಿದ್ದರು. —ಜಾಲಿಹಾಳ ಸಮ್ಮೇಲನದ ಕಾರ್ಯದರ್ಶಿಗಳು

ಬಾಗಿಲುಕೋಟೆ:— ಹೆಣ್ಣುಮಕ್ಕಳ ೩ನೆಯ ನಂಬರಿನ ಶಾಲೆಯಲ್ಲಿ ೧೪-೨-೪೫ನೆಯ ದಿವಸ ಅ. ಎ. ಇ. ಅವರಾದ ಶ್ರೀಮತಿ ಥಿಟೆ ಸರಸ್ವತಿಬಾಯಿಯವರ ಹಿರಿಯತನದಲ್ಲಿ ಪಾಲಕರ ದಿನಾಚರಣೆ, ಹಾಗು ವಾಚನಾಲಯದ ಹುಟ್ಟುಹಬ್ಬದ ಸಮಾರಂಭಗಳಾದವು. ಕೈಕೆಲಸಗಳ ಪ್ರದರ್ಶನವೂ ನಡೆಯಿತು. ವಿದ್ಯಾರ್ಥಿಗಳ ಚಟುವಟಿಕೆಗಳಿಗೆ ಆನಂದಬಟ್ಟು ೫ ರೂ. ಇನಾಮು ಹಂಚುವದಕ್ಕಾಗಿ ಕೊಟ್ಟರು. ಪಾಲಕರಿಗೂ ಶಿಕ್ಷಕಿಯರಿಗೂ ಇರುವ ಸಂಬಂಧವನ್ನು ಒಳ್ಳೆಯ ಮಾರ್ಮಿಕವಾಗಿ ತಿಳಿಸಿದರು. ಅ. ಡಿ. ಇ. ಅವರಾದ ಮೆ| ಶಿಗ್ಲಿ ಅವರು ವಾಚನಾಲಯಕ್ಕಾಗಿ ೪ ರೂ. ಕೊಟ್ಟರು. —ಶ್ರೀ. ಬ. ಮ. ವಸ್ತ್ರದ, ಹೆಡ್‌ಮಿಸ್ಟ್ರೇಸರು.

ಪಾಂಡೆಯ ಪರೀಕ್ಷೆ

(ಸಾಕ್ಷರಿಗಳಾದ ಪ್ರಬುದ್ಧರಿಗಾಗಿ)

ಶಂಕರ ಪಾಂಡ್ಯನು ನವಿಲೂರಿನ ನೇಕಾರ. ಅವನು ಒಳ್ಳೇ ರಸಿಕ; ಚುರುಕು ಬುದ್ಧಿಯವ; ತುಸು ಪಾಚಾಲನೂ ಹೌದು. ಹಿಂದು ಮುಂದು ನೋಡಿ ನಿಜವೇನೆಂಬುದನ್ನು ಕಂಡುಕೊಳ್ಳುವ ಹಿಡಿತವನ್ನು ಕಂಡುಹಿಡಿದವ. ನಮ್ಮ ಹಳ್ಳಿಗಳಲ್ಲಿ ಈಗಲೂ ಇಂತಹ ಧೋರಣೆಯುಳ್ಳ ಜನರು ಇರುವದುಂಟು. ಪಾಠ, ಪುಸ್ತಕ, ಪರೀಕ್ಷೆ, ಪದವಿ, ಪಂದ್ಯಾಟಗಳ ಪಕಾರ ಪಂಚಾಂಗಗಳ ಪರಿಚಯವಿಲ್ಲದಿದ್ದರೂ ಒಳ್ಳೆಯ ಜಾಣರೆನಿಸಿ-

ಕೊಂಡು ಸುಖವಾಗಿ ಬಾಳುವೆಮಾಡುವ ಇಂಥವರನ್ನು ಊರಿಗೆ ಊರೇ ಮನ್ನಿಸುತ್ತದೆ. ಶಂಕರ ಪಾಂಡೆಯು ಈ ಗುಂಪಿಗೆ ಸೇರಿದವನು.

ಶಂಕರ ಪಾಂಡೆಯು ಅದೇನೋ ಒಂದು ಕೆಲಸದ ಸಲುವಾಗಿ ನೆರೆ-ಊರಿಗೆ ಹೋಗಿದ್ದನು. ಅಲ್ಲಿಯ ಹಿರಿಯರನೇಕರು ಆತನನ್ನು ಗೇಲಿ ಮಾಡಬೇಕೆಂದೋ ಪರೀಕ್ಷಿಸಬೇಕೆಂದೋ ಒಂದು ಸಣ್ಣ ಯುಕ್ತಿಯನ್ನು ಹೂಡಿದರು. ಅವರು ಪಾಂಡೆಯನ್ನು ತಮ್ಮೂರಿನ ದೇಸಾಯರ ಮನೆಗೆ ಕರೆದೊಯ್ದು ಮನ್ನಿಸಿ, ಉಣಿಸಿ, ತಿನಿಸಿ ಮಧ್ಯಾನ್ಹದ ಮೇಲೆ ಅವರ ನಡುಮನೆಯಲ್ಲಿ ಒಯ್ದು ಕೂಡ್ರಿಸಿದರು. ಮತ್ತು "ಪಾಂಡೆಯವರೇ, ನಮ್ಮ ದೇಸಾಯಿಯರು ಈ ಹೊತ್ತಿನಿಂದ ನಿಮ್ಮನ್ನು ತಮ್ಮ ದೇಸಗತಿಯ ಮೇಲ್ವಿಚಾರಣೆಗೆ ನಿಯುಮಿಸಿಕೊಳ್ಳಬೇಕೆಂದು ಗೊತ್ತಾಗಿದೆ. ದೇಸಗತಿಯ ವ್ಯವಹಾರದಲ್ಲಿ ನಾನಾಬಗೆಯ ತಂಟೆ ತಕರಾರುಗಳು ಬರುವದುಂಟು. ಅವನ್ನೆಲ್ಲ ಹಿತವಾಗಿಯೂ ಮಿತವಾಗಿಯೂ ಪರಿಹರಿಸಬೇಕಾಗುವದು. ತಮ್ಮ ದೇಸಗತಿಯ ಮೇಲ್ವಿಚಾರಕರು ಇಂತಹ ಜಾಣ್ಮೆಯುಳ್ಳವರೆಂದು ದೇಸಾಯಿಯರಿಗೆ ಮನಗಾಣಿಸಿಕೊಡುವ ಭಾರ ನಿಮ್ಮದು; ನಿಮ್ಮನ್ನು ಆ ಕೆಲಸದಲ್ಲಿ ನಿಲ್ಲಿಸುವ ಭಾರ ನಮ್ಮದು." ಎಂದು ಮುಂತಾಗಿ 'ಹೊರಗೆ ನಗೆ; ಒಳಗೆ ಹೊಗೆ' ಎಂಬಂತೆ ಮಾತನಾಡಿದರು.

ಪಾಂಡೆಯು "ಆಗಲಿ, ನಾನು ಎಮ್. ಏ ಅಲ್ಲ; ಎಲ್. ಟಿ. ಅಲ್ಲ; ಆದರೆ ಎಮ್. ಏ ಆದವರೂ ಕೂಡ ಯಮ್ಮೆ ಎಂದು ಬರೆದು ಓದುವದನ್ನು ನೋಡಿದವ. ನಿಮ್ಮ ಪರೀಕ್ಷೆಯಲ್ಲಿ ಪಾಸಾದರೆ ದೇಸಗತಿ, ನಾಪಾಸಾದರೆ ದೈವಗತಿ. ಯಾವದಕ್ಕೂ ನಾನು ಸಿದ್ಧನೇ" ಎಂದನು.

ಹೀಗೆ ಮಾತು ನಡೆದಿರುವಾಗಲೇ ತಲೆಬಾಗಿಲಿನಿಂದ ಇಬ್ಬರು ಒಳಗೆ ಬಂದರು. ವಯಸ್ಸು ತುಸು ಹೆಚ್ಚು ಕಡಿಮೆ ಇಬ್ಬರದೂ ಅಷ್ಟೇ. ಎಂದರೆ ಅರುವತ್ತಕ್ಕೆ ಮಿಕ್ಕಿರಬೇಕು. ಕುಳಿತವರು "ಸರಿ, ಏನಯ್ಯಾ, ನಿಮ್ಮ ಹೇಳಿಕೆ? ನಾವು ನೋಡುತ್ತಿದ್ದುದು ಎದುರಿಗೇ ಬಂದು ಬಿಟ್ಟಿತು" ಎಂದರು.

ಒಬ್ಬನು:— 'ನಾವಿಬ್ಬರೂ ಬಾಲ್ಯ ಸ್ನೇಹಿತರು; ಅಣ್ಣತಮ್ಮಂದಿರಂತೆ ಇದ್ದವರು. ಹಣವೆಂದರೆ ಹೆಣ ಕೂಡ ಬಾಯಿ ತೆರೆಯುವದಂತೆ. ಹಣಕ್ಕಾಗಿ ನಾವಿಬ್ಬರೂ ಹೊಡೆದಾಡಿ ಹೆಣವಾಗುವ ಹೊತ್ತು ಬಂದಿದೆ. ಮೂರು ವರುಷಗಳ ಹಿಂದೆ ಈತನು ನನ್ನಿಂದ ಹನ್ನೆರಡು ಹೊನ್ನುಗಳನ್ನು ತೆಗೆದು ಕೊಂಡನು. ಈಗ ಕೊಡು ಎಂದರೆ ಇಲ್ಲವೆನ್ನುತ್ತಾನೆ' ಎಂದನು.

ಇನ್ನೊಬ್ಬನು:— 'ಕೈಯೊಳಗಿನ ಊರುಗೋಲನ್ನು ಊರಿ ನಿಂತು ಅದೇಕಯ್ಯಾ, ಇವನಿಗೆ ತಾನು ಕೊಟ್ಟದ್ದಷ್ಟೇ ನೆನಪು. ಕೊಂಡದ್ದೆಲ್ಲಾ ಮರೆತು ಹೋಗುವದು. ತನಗೆ ಬರಬೇಕಾದ ಮೂರು ಕಾಸಿಗೆ ನೂರು ನೆನಪಿನ ಮಾತು ಹೇಳುತ್ತಾನೆ. ಕೊಡಬೇಕಾದ ಪ್ರಸಂಗದಲ್ಲಿಲ್ಲ ' ವಯಸ್ಸಿನ ಸಿಕ್ಕಿಡಲೇ ಬುದ್ಧಿಯೂ ಹೋಗಿ ಬಿಟ್ಟಿದೆ. ನನಗೆ ಯಾವುದೂ ನೆನಪಿಲ್ಲ' ಎನ್ನುತ್ತಾನೆ. ನಾನು ಇವನ ಹೊನ್ನು ಎಂದೋ ಕೊಟ್ಟುಬಿಟ್ಟಿದ್ದೇನೆ.' ಎಂದನು.

'ನಮ್ಮ ದೇಸಗತಿಯ ಮೇಲ್ವಿಚಾರಕರು ಇದರ ನಿರ್ಣಯ ಹೇಳಬೇಕು' ನೆರೆದವರು ಪಾಂಡೆಯನ್ನು ನೋಡಿ ಮುಗುಳ್ನಗೆ ನಕ್ಕು ನುಡಿದರು.

ಪಾಂಡೆ:— ಏನಯ್ಯಾ, ಈ ನಿಮ್ಮ ಕೊಡುಕೊಳ್ಳುವ ವ್ಯವಹಾರಕ್ಕೆ ಸಾಕ್ಷಿಯಾರು?

ಇಬ್ಬರೂ:— ಯಾರೂ ಇಲ್ಲ. ನಾವಿಬ್ಬರೂ ಜೀವದ ಗೆಳೆಯರು. ಇಂತಹ ಸಾವಿರ ವ್ಯವಹಾರ ಮಾಡಿದ್ದೇವೆ. ಇದೊಂದೇ ಮಾತಿನಲ್ಲಿ ನಮ್ಮೊಳಗೆ ಕಲಹ ಬಂದಿದೆ. ದೈವಗತಿ!

ಪಾಂಡೆ:— ದೈವಗತಿ? ದೇವರನ್ನು ಸ್ಮರಿಸಿ ಆಣೆ ಮಾಡುವಿರಾ?

ಮೊದಲನೆಯವ:-ದಣಿಯರು ಹೇಳಬೇಕು; ನನಗೆ ಹೆಚ್ಚು ವಯಸ್ಸೋ, ಇವನಿಗೆ ಹೆಚ್ಚೋ ಎಂಬುದನ್ನು. ಕೈಯಲ್ಲಿ ಕೋಲಿಲ್ಲದೆ ನಡೆಯಲಾರದ ಇವನ ನೆನಪು ಹೆಚ್ಚಿನದು ಹೇಗಾದೀತು? ಇವನೇ ಆಣೆಮಾಡಿ ಹೇಳಲಿ.

ಪಾಂಡೆ:— ಏನಯ್ಯಾ, ತಿರುಗಿ ಕೊಟ್ಟದ್ದು ನಿಜವೇ? ಚೆನ್ನಾಗಿ ನೆನಪಿದೆಯೇ? ಆಣೆ ಮಾಡುವೆಯಾ?

ಎರಡನೆಯವ:— ದಣಿಯರ ಅಪ್ಪಣೆಯಾದರೆ ಆಣೆ ಮಾಡಬೇಕು. ಕೊಡುವದನ್ನು ಕೊಟ್ಟು ಮತ್ತೆ ಕೊಡು ಎಂದರೆ ಎಲ್ಲಿಂದ ಕೊಡಲಿ?

ಪಾಂಡೆ:—ಈ ದೇಸಾಯರ ನ್ಯಾಯದಂಡವನ್ನು ಮುಟ್ಟಿ ಆಣೆ ಮಾಡು.

ಎರಡನೆಯವ:— ಎದ್ದು ನಿಂತು 'ಅಣ್ಣಾ; ಇದನ್ನು ತುಸು ಹಿಡಿದಿರು;' ಎಂದು ತನ್ನ ಊರುಗೋಲನ್ನು ಮೊದಲನೆಯವನ ಕೈಯಲ್ಲಿ ಕೊಟ್ಟು ಮುಂದೆ ಬಂದು ನಾನು 'ನಮ್ಮೀ ದೇಸಗತಿಯ ಕುಲದೇವತೆಯ ಆಣೆ ಯಾಗಿಯೂ ಇವನ ಹೊನ್ನನ್ನು ತಿರುಗಿ ಕೊಟ್ಟಿದ್ದೇನೆ.' ಎಂದು ಆಣೆಮಾಡಿ ತಿರುಗಿ ಹೋಗಿ ತನ್ನ ಕೋಲನ್ನು ಪಡೆದು ನಿಂತುಕೊಂಡನು.

ವಾದಿಯ ಮೋರೆ ಒಣಗಿದಂತಾಯಿತು. ಹನ್ನೆರಡು ಹೊನ್ನುಗಳು ಹೋದುವಲ್ಲಾ, ಎನ್ನುವ ಚಿಂತೆ ಮುಖದಲ್ಲಿ ಮೂಡಿತು. ನ್ಯಾಯಾಧೀಶನಾಗಿದ್ದ ಪಾಂಡೆಯು ತುಸು ದಿಗಿಲು ಬಿದ್ದು, ಮುಂದೇನು ಗತಿ? ಎಂದನು.

ವಾದಿಯು 'ಮುಂದೇನು ಗತಿ! ಬಂದ ಹಾದಿಗೆ ಸುಂಕವಿಲ್ಲ. ದೊರೆಯ ಚಿತ್ತಕ್ಕೆ ಕವಲಿಲ್ಲ. ಅತ್ತ ಹೊನ್ನೂ ಹೋಯಿತು; ಇತ್ತ ಸ್ನೇಹವೂ ಹೋಯಿತು.' ಎಂದು ನಿಟ್ಟುಸಿರಿಟ್ಟನು. ಅಲ್ಲಿ ಕುಳಿತ ಜನರು ನೀವಿನ್ನು ಹೋಗಬಹುದು ಎನ್ನಲು ಅವರಿಬ್ಬರೂ ಹೊರಟು ಹೋದರು. ನ್ಯಾಯಾಸನದಲ್ಲಿದ್ದ ಪಾಂಡೆಯು ನೊಸಲು ಹಿಸುಕಿ ತಲೆಯ ಮೇಲೆ ಕೈಯಾಡಿಸಿ ಮುಂದೇನು ಗತಿ ಎಂದನು. ದೇಸಾಯಿಯರ ಅನುಯಾಯಿಗಳು ಕುಲು ಕುಲು ನಗುತ್ತ ತಮತಮಗೆ ತಿಳಿದಂತೆ ಗೇಲಿಮಾಡಿದರು.

ತಟ್ಟನೆ ಪಾಂಡೆಯು:—'ಕರೆ, ಅವರನ್ನು!' ಎಂದು ತನ್ನ ಬಳಿಯಲ್ಲಿದ್ದ ಓಲೆಕಾರನಿಗೆ ಅಪ್ಪಣೆ ಮಾಡಿದನು. ಇಬ್ಬರೂ ತಿರುಗಿ ಬಂದರು.

ನ್ಯಾಯಾಧೀಶ:— ತಾರಣ್ಣಾ, ನಿನ್ನ ಊರುಗೋಲನ್ನು, ಎಂದು ಕೈ ನೀಡಿ ಎರಡನೆಯವನ ಊರುಗೋಲನ್ನು ತಕ್ಕೊಂಡು ಮೊದಲನೆಯವನಿಗೆ ಕೊಟ್ಟು ಈಗಲಾದರೂ ನಿನ್ನ ಹೊನ್ನು ನಿನಗೆ ಮುಟ್ಟಿತೇ? ಸಮಾಧಾನವಾಯಿತೇ? ಮನೆಗೆ ಹೋಗಿ ಸುಖವಾಗಿರು." ಎಂದನು.

ಮೊದಲನೆಯವ:— ಮಿಕಿಮಿಕಿ ನೋಡುತ್ತ 'ಈ ಊರುಗೋಲಿಗೆ ಹನ್ನೆರಡು ಹೊನ್ನಿನ ಬೆಲೆಯೇ?' ಎಂದನು.

ನ್ಯಾಯಾಧೀಶನು 'ತಾ ಇಲ್ಲಿ ಆ ಕೋಲು' ಎಂದು ಆ ಕೋಲನ್ನು ತಕ್ಕೊಂಡು ನಡುವೆಯೇ ಮುರಿದನು. ಹನ್ನೆರಡು ಹೊನ್ನು ಪಳಪಳ ಉದುರಿದವು. ಎಲ್ಲರೂ ಬೆಪ್ಪಾದರು. ಪಾಂಡೆಯ ಸ್ವಾಭಾವಿಕವಾದ ಜಾಣತನಕ್ಕೆ ತಲೆದೂಗಿದರು. ಬಂಡಿ ಬಂಡಿ ಪುಸ್ತಕಗಳನ್ನೋದಿ ಹೋಳಿಗೆಯೊಳಗೆ ಹೂರಣವೆಲ್ಲಿಂದ ಬಂದಿತೆಂದು ಕೇಳುವ ಪಂಡಿತರಿಗಿಂತಲೂ ಇಂತಹ ಮೇಲ್ಬುದ್ಧಿಯುಳ್ಳವರೇ ಮೇಲಲ್ಲವೇ? ಎರಡನೆಯವನು ತನ್ನ ಊರುಗೋಲನ್ನು ಮೊದಲನೆಯವನ ಕೈಗೆ ಕೊಡುವಾಗಲೂ ಅದನ್ನು ತಿರುಗಿ ಪಡೆಯುವಾಗಲೂ ತೋರಿಸಿದ ಮುಖಭಾವಗಳನ್ನು ನಿರೀಕ್ಷಿಸಿದ ಪಾಂಡೆಯು ನಿಜಾಂಶವನ್ನು ಕಂಡುಕೊಂಡನು. ದೇಸಾಯಿಯರ ಅನುಯಾಯಿಗಳ ಮೋರೆ ಕಪ್ಪಿಟ್ಟಿತು.

ಗಣಿತ ಶಿಕ್ಷಕ

★

೪೧೨ ಪುಟಗಳು ∽ ಬೆಲೆ ೧ ರೂ. ೫ ಆಣೆ ∽ ೫-೬-೭ನೆಯ ಇ. ಗಳಿಗಾಗಿ

೨-೩ ಕ್ಲಾಸುಗಳು ಒಬ್ಬ ಮಾಸ್ತರನ ಕಡೆಗೆ ಇರುವಂಥ ಪಾಲೆಗಳಲ್ಲಿ ಗಣಿತ ಶಿಕ್ಷಕವು ನಿಜವಾಗಿಯೇ **ಗಣಿತ-ಶಿಕ್ಷಕ**ನಾಗಿ ಸಹಾಯಕನಾಗಿಲ್ಲವೇ? ೧೦ವರ್ಷ ಅನುಭವ ತಕ್ಕೊಂಡವರಿಗೆ ಇದರ ಬಗ್ಗೆ ಹೆಚ್ಚಿಗೆ **ವರ್ಣಿಸು**ವದು ಬೇಡ. ಇಷ್ಟರಲ್ಲಿಯೇ ಎಲ್ಲರ ಪ್ರೀತಿಗೆ ಪಾತ್ರವಾಗಿ ಅನೇಕಸಾರೆ ಮುದ್ರಣ ಹೊಂದಿವೆ. ಈಗಿನ ತುಟಾಸ್ತ್ರತೆಯ ಕಾಲದಲ್ಲಿ ಪೆಚ್ಚು ಮಾಡಿದ ಹಣದಿಂದ ಬಹಳ ಲಾಭವಾಗಬೇಡವೇ?

ಕೊರತೆ ಇಲ್ಲ ∽ ಬೆಲೆ ಕಡಿಮೆ ∽ ಪೆಚ್ಚುವಿಲ್ಲದೆ ಪೂರೈಕೆ

ಪುಸ್ತಕಗಳು ಕರ್ನಾಟಕದ ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ದೊರೆಯುತ್ತವೆ. ದೊರೆಯುವದಿಲ್ಲೆಂದು ಅನಿಸಿದರೆ ನಮಗೆ ಬೇಕಾಗುವಷ್ಟು ಪ್ರತಿಗಳ ಮೂಲಬೆಲೆಯನ್ನು ಮುನಿಯಾರ್ಡರಿಂದ ಕಳಿಸಿ ಪಾವತಿಗಳನ್ನು ಕಾಯ್ದಿಡಿರಿ. ಅವನ್ನು ತೆಗೆದುಕೊಂಡು ಯಾವ ಪೆಚ್ಚೂ ಇಲ್ಲದೆ ಪುಸ್ತಕ ಕೊಡುವಂತೆ ನಿಮ್ಮ ಸಮೀಪದ ಪುಸ್ತಕವ್ಯಾಪಾರಿಗಳಲ್ಲಿ ಇಲ್ಲವೆ ದೊಡ್ಡ ಸಾಲೆಗಳಲ್ಲಿ ವ್ಯವಸ್ಥೆ ಮಾಡಲಾಗುವದು. ಶಕ್ಯವಾದರೆ ನಿಮ್ಮ ಊರಿಗೇ ತಂದುಕೊಡಬಹುದು. ಹೆಚ್ಚಿನ ವಿವರಕ್ಕೆ ಬರೆಯಿರಿ.

ವಿಳಾಸ :— ಬ. ದು. ಹಿರೇಮಠ, ಮಾಸ್ತರ ವಿಜಾಪುರ.

ಹೊಸ ಪುಸ್ತಕಗಳಿಗೆ ಕ್ಲೀರೆವೂಡಿರಿ! ಲಾಭಪಡೆಯಿರಿ!

ಹೊಸ ಪದ್ಧತಿಯ

(೧) ಹಿಂದೀ ಜವಾಖರ್ಚು ಭಾಗ ೧

(ಮನೆಯ ಜವಾಖರ್ಚು)

ಸಕಾರದವರು ಈ ಪುಸ್ತಕವನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಿರುವರು. ಇದು ೫-೬ನೆಯ ಇಯತ್ತೆಯವರಿಗೂ ಹೆಣ್ಣು ಮಕ್ಕಳ ಮುಲ್ಕೀಪರೀಕ್ಷೆಗೂ ಉಪಯುಕ್ತವಿದೆ.

ಬೆಲೆ: ೮ ಆಣೆ

೨. ಆರಂಭದ ಜವಾಖರ್ಚು: ೪ನೆಯ ಇಯತ್ತೆಯವರಿಗೆ ಉಪಯೋಗವಿದೆ. ಬೆಲೆ: ೩ ಆಣೆ

೩. ಅಂಗನಾಧನ **ಶಿಕ್ಷಕ**: ಬೆಲೆ: ೪ ಆಣೆ

೪. ಗಣಿತಸಾರ ಸಂಗ್ರಹ: ಇದು ಈಗಿನ ಪರೀಕ್ಷೆಯ ಪದ್ಧಯಂತಿರುವದರಿಂದ ಸ್ಕಾಲರ ಮತ್ತು ಮುಲ್ಕೀ ಪರೀಕ್ಷೆಯವರಿಗೆ ಉಪಯುಕ್ತವಿದೆ.

ಬೆಲೆ: ೪ ಆಣೆ

ಹೊಸ ಪದ್ಧತಿಯ

ಹಿಂದೀ ಜವಾಖರ್ಚು ಭಾಗ ೨

(ವ್ಯಾಪಾರಿ ಜವಾಖರ್ಚು)

ಇದರಲ್ಲಿ ಹುಂಡಿ, ಚೆಕ್ಕು, ಮುನಿಯಾರ್ಡರ, ಬಡ್ಡೀ ಆಕಡೆ ಜವಾಖರ್ಚಿನ ಇತರ ವಹಿಗಳು, ಯಾದಿಗಳ ನಮೂನೆಗಳು, ಪ್ರಶ್ನೆಗಳು ಪ್ರಶ್ನೆಕಾಗದಗಳು ಇರುವವಲ್ಲದೆ, ಒಕ್ಕಲತನ ಒಳವಿನ ಶಾಲೆಯ ವಿದ್ಯಾರ್ಥಿಗಳ ಸಲುವಾಗಿ ಬರೆದ ಜವಾಖರ್ಚು ಆಂದರೆ ಡೇಲಿ ಲೇಬರ ಶೀಟು, ವೀಕಲಿ ಮಸ್ಟರ ರೋಲ್, ಕಲ್ಟಿವೇಶನ್ ಶೀಟು ಮುಂತಾದವುಗಳ ಪತ್ರಿಕೆಗಳೂ ಕಬುಲಾಯತಿ, ಬಾಡಿಗೆಯ ಪತ್ರಗಳ ನಮೂನೆಗಳೂ ಇರುವದರಿಂದ ಇದು ೬ನೆಯ ಇಯತ್ತೆಯವರಿಗೂ, ಅಗ್ರಿಕಲ್ಚರಲ್ ಬಾಯಸ್ ಕ್ಲಾಸಿನವರಿಗೂ ಉಪಯುಕ್ತವಿದೆ. ಸ್ವಲ್ಪ ಪ್ರತಿಗಳಿರುವದರಿಂದ ನಮೂನೆಗಾಗಿ ಒಂದನ್ನಾದರೂ ಎಲ್ಲರೂ ತರಿಸಿಕೊಳ್ಳಿರಿ. ಬೆಲೆ: ೮ ಆಣೆ

ವಿಳಾಸ :— ರಾ. ಸಿ. ಸಜ್ಜನ, ಮಾಸ್ತರ ಜೋರಾಪುರ ಪೇಟೆ, ವಿಜಾಪುರ.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ನಿಶ್ಚಯಗೊಂಡಿದ್ದು ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮತ್ತೆ ಯಾ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಇದಕ್ಕಿಂತ ಕಮಿಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತ್ಯೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ-ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ-ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು-ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೩೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.